A.—Sri H. M. CHANNABASAPPA (Minister for Industries).—

(a) In October 1954.

(b) No.

(c) The project on investigation is found to be not feasible.

ಶ್ರೀ ಸಿ. ಟಿ. ಹನುಮಂತಯ್ಯ.—ಮಧುಗಿರಿ ತಾಲ್ಲೂಕಿನಲ್ಲಿರುವ ಜಯಮಂಗಲಿ ಕೆರೆಯಿಂದ ಇಟಕದಿಬ್ಬನಹಳ್ಳಿ ಹೋಬಳಿ ಕೆರೆಗೆ ಒಂದು ನಾಲೆಯನ್ನು ಏರ್ಪಡಿಸಿಕೊಡಬೇಕೆಂದು ಹೇಳಿ ಹಿಂದಿನಿಂದಲೂ ಕೇಳುತ್ತಾ ಇದ್ದರೂ ಸಹ ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡದೆ ಸುಮ್ಮನೆ ಅಲ್ಲಿ ಲೆವಲ್ ಪರ್ಮಿಟ್ ಮಾಡುವುದಿಲ್ಲ ಎಂದು ಹೇಳುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಈಗ ಈ ಕೆರೆಗೆ ಫೀಡರ್ ಚಾನಲ್ ಕೊಡುವುದರಿಂದ ಎಷ್ಟೋ ಗ್ರಾಮಗಳವರಿಗೆ ಉಪಯೋಗವಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಫೀಡರ್ ಚಾನಲ್ ಮಾಡುವುದೇ ಸೂಕ್ತವಲ್ಲ ಎಂದು ಹೇಳಿ ಸರ್ಕಾರದವರಿಗೆ ವರದಿ ಬಂದಿರುವುದರಿಂದ, ಅದನ್ನು ಉತ್ತರದಲ್ಲಿ ತಿಳಿಸಿದ್ದೇವೆ. ತಾವು ಹೇಳುವ ಅಭಿಪ್ರಾಯದಮೇಲೆ ಪುನರ್ವಿಮರ್ಶೆ ಮಾಡಿ ನೋಡಬೇಕಾಗುತ್ತದೆ.

QUESTIONS FOR ANSWERS ON THE DAY

(But not taken up).

B. T. C. (Nationalisation).

Q.—226. Sri R. ANANTARAMAN (Chamarajpet).—

Will the Government be pleased to state :—

(a) whether they are contemplating the nationalisation of B.T.C. ;

(b) if so, the action taken ?

A.—Sri H. SIDDAVEERAPPA (Minister for Home).—

(a) Yes.

(b) Details are being worked out.

Irrigation in Yelandur Taluk (Improvement).

Q.—355. Sri M. RAJASEKHARA MURTHY (Yelandur).—

Will the Government be pleased to state :—

(a) whether the Government prepared a consolidated estimate for the improvement of irrigation in Yelandur Taluk ;

(b) when this estimate was prepared ;

(c) what steps have been taken to repair the tanks as proposed in the said consolidated estimate ?

A.—Sri H. M. CHANNABASAPPA (Minister for Industries).—

(a) Yes.

(b) In 1953.

(c) A part of the programme has been taken up and is being completed.

Bus Transport (Nationalisation).

Q.—461. Sri H. C. LINGA REDDY (Malur).—

Will the Government be pleased to state :—

(a) the progress made by them in the matter of nationalisation of Bus Transport ;

(b) the capital invested ;

(c) the percentage of profit earned since the inception of the Department?

A.—Sri H. SIDDAVEERAPPA (Minister for Home).—

(a) The following routes have been nationalised so far :—

1. Bangalore-Kolar Gold Fields.
2. Bangalore-Devanahalli.
3. Bangalore-Dodballapur.
4. Bangalore-Tumkur.
5. Bangalore-Gundlupet.
6. Bangalore-Bellur.
7. Mysore City Services.

(SRI H. SIDDAVEERAPPA.)

(b) Rs. 54.23 lakhs as at the end of 1954-55.

(c) 1948-49	...	29·70 per cent
1949-50	...	16·30 ,,
1950-51	...	0·90 ,,
1951-52	...	1·01 ,,
1952-53	...	1·ↄ9 ,,
1953-54	...	36·70 ,,
1954-55	...	39·45 ,,

Government Buses Halting in Gundlupet.

Q.—532. Sri H. K. SIVARUDRAPPA (Gundlupet-Heggadadevankote).—

Will the Government be pleased to state :—

(a) whether the people had not represented to the Minister for Home during his tour in Gundlupet Taluk that the Government buses which are now halting at Gundlupet be made to halt at Hangala and another also at Bomblapura ;

(b) whether orders are passed in this behalf ; if not the stage at which the matter is ?

A.—Sri H. SIDDAVEERAPPA (Minister for Home).—

(a) Yes.

(b) One of the buses will halt at Hangala.

Sri A. G. RAMACHANDRA RAO.—Sir, I may be permitted to give answer regarding the proposed routes to be nationalised.

1. Tumkur-Harihar
2. Bangalore-Kunigal *via* Magadi
3. Bellur-Srirangapatna
4. Devanahalli-Bagepalli
5. Dodballapur-Hindupur
6. Kolar-Nangli

Business of the House.

Mr. SPEAKER.—As Hon'ble Members are aware, the voting of Demands will terminate today and the Appropriation Bill will be taken up tomorrow. From the 31st instant until the 4th April inclusive, we will have discussion on the States Reorganization Bill. On the 5th instant, a special motion regarding the Cultural Development Movement (Samskriti Prachar) of which notice has been given by 58 members will be taken up.

So far as the States Reorganization Bill is concerned, the following procedure is proposed to be adopted as in the case of the Andhra State Bill and taking note of the Constitution (Fifth Amendment) Act which makes certain changes in the proviso to article 3 of the Constitution. The first motion will be that the States Reorganization Bill, referred by the President under article 3, be taken into consideration. The annexure to the Bill containing proposals for amendment of the Constitution can also be discussed at this stage. There will be a general discussion on the Bill on this motion. After this motion is adopted, the Bill will be considered clause by clause. Only such clauses as would affect Mysore directly or indirectly will be considered at this stage. Amendments could be moved to such clauses. I request the Hon'ble Members to give notice of amendments well in time so that they may be printed and made available to members who may require time to study them. Only the amendments will be put to vote. Finally, a motion will be moved to the effect that this House approves of the Bill. If any amendments are carried such approval will be, of course, of the Bill as amended.

*ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ತಾವು ಈಗಾಗಲೇ ತಿಳಿಸಿರುವ ಪ್ರಕಾರ ಏಪ್ರಿಲ್ 5ನೇ ತಾರೀಖು ಆದಮೇಲೆ ಸಭೆ ಮುಕ್ತಾಯವಾಗುತ್ತದೆಯೇ ಇಲ್ಲವೇ ಎಂಬುದನ್ನು ತಿಳಿಸುವುದು ಸೂಕ್ತ. ಏಕೆಂದರೆ, ನಾವು ಊರಿನಲ್ಲಿದ್ದಾಗ ನಮಗೆ ಬಂದಿದ್ದ ಕಾರ್ಯಕ್ರಮದ ಪಟ್ಟಿ ಪ್ರಕಾರ ಮೂರು ದಿನ ಎರಡನೆ ಪಂಚವಾರ್ಷಿಕ ಯೋಜನೆಯಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿತ್ತು ; . ಈಚೆಗೆ ಬದಲಾವಣೆಯಾಗಿರತಕ್ಕ ಪಟ್ಟಿಯಲ್ಲಿ ಆ ಸುದ್ದಿಯೇ ಇಲ್ಲ, ಅದು ಕೈಬಿಟ್ಟುಹೋಗಿದೆ. ಅದನ್ನು ತೆಗೆದುಕೊಳ್ಳುತ್ತಾರೆಯೇ? ಇಲ್ಲವೇ? ಬಡ್ಜೆಟ್ ಸೆಷನ್ ಮುಗಿಯಿತು ಎಂದು ಮನೆಗೆ ಹೋಗುವುದು ಯಾವಾಗ? ಎಂಬುದನ್ನು ತಿಳಿಸಿದರೆ ನಮ್ಮ ವ್ಯವಹಾರಗಳನ್ನು ಸರಿಪಡಿಸಿಕೊಂಡು, ಕಾರ್ಯಕ್ರಮಗಳನ್ನು ಗೊತ್ತುಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಇನ್ನೊಂದು ವಿಚಾರ. ಎಸ್ಸಾರ್ಸಿ ಬಿಲ್ಲಿನ ಮೇಲೆ ತಿದ್ದುಪಡಿ ಸೂಚನೆ ಮಾಡುವುದು ಯಾವರೀತಿ ಎಂದು ಹೇಳಿದಿರಿ. ಈ ಬಿಲ್ ಸಂಬಂಧವಾಗಿ ಒಂದು ವಿಶೇಷ ನಿರ್ಣಯವನ್ನು ಕಳುಹಿಸುವುದಕ್ಕೆ ಅವಕಾಶವಿದೆಯೇ?

ಅದಕ್ಕೇನಾದರೂ ಕಾರ್ಯಕ್ರಮ ಅಥವಾ ಪ್ರೊಸೀಜರ್‌ಅನ್ನು ತಾವು ನಿರ್ಧರಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಅಪ್ಪಣೆ ಕೊಡಿಸಿದರೆ ಒಳ್ಳೆಯದು. ಏಕೆಂದರೆ, ತಿದ್ದುಪಡಿ ಕಳುಹಿಸುವುದಕ್ಕೆ ಕೆಲವು ಕಡೆ ಸಾಧ್ಯವಾಗಬಹುದು, ಕೆಲವು ಸಂದರ್ಭಗಳಲ್ಲಿ ಸಾಧ್ಯವಾಗದೇಯಿರ ಬಹುದು. ತತ್ವವನ್ನೊಳಗೊಂಡಂಥ ಮತ್ತು ಕೆಲವು ಮಾರ್ಪಾಡುಗಳನ್ನು ಸೂಚಿಸತಕ್ಕ ಸ್ಪೆಷಲ್ ರೆಸಲ್ಯೂಷನ್ ಕಳಿಸುವುದಕ್ಕೆ ನನ್ನ ಅಭಿಪ್ರಾಯದಲ್ಲಿ ಅವಕಾಶವಿದೆ ಎಂದು ಕಾಣುತ್ತದೆ. ಅದಕ್ಕೇನಾದರೂ ಅನುಕೂಲವನ್ನು ಕಲ್ಪಿಸುತ್ತೀರಾ ಎಂಬುದನ್ನು ವಿವರವಾಗಿ ಹೇಳಿದರೆ ನಮಗೆ ಅನುಕೂಲವಾಗುತ್ತದೆ.

*Sri Mulka GOVINDA REDDY (Chitaldrug).—You were pleased to say that we can move amendments to those clauses which would directly or indirectly affect the State of Mysore. But I don't think that we could be prevented in that way. We can discuss this Bill which concerns the whole of India and we can move amendments concerning any part of India. If you mean to apply your directions that amendments to such clauses that are going to affect Mysore may be moved, then it is a debatable point. Members may move amendments in respect of certain areas that would come in. We will certainly stick to your directions. But I would urge that we are entitled to move amendments concerning any part of India when we are discussing this Bill.

Mr. SPEAKER.—I have already said that, so far as the first point raised by my Hon'ble friend Sri Veeranna Gowda is concerned, as stated by him, according to the programme the Assembly will close on the 5th since there is no other business for discussion in this House.

MEMBERS.—What about the Second Five-Year Plan ?

Mr. SPEAKER.—I have fixed this programme in consultation with the Leader of the House. The other point raised by Sri Veeranna Gowda whether any special resolution can be moved with respect to the S.R. Bill, I may state that since the Bill is before the House, any amendment which conveys the same meaning can be moved at the stage when amendments are taken up. Therefore there is no necessity to move a special resolution so far as this legislation is concerned.

With regard to the point raised by Sri Mulka Govinda Reddy, of course, I will consider it when we take up amendments. Amendments may be sent and at the time of moving the amendments, I shall consider whether a particular the amendment is admissible or not.

*Sri T. MARIAPPA (Mysore City North).—May I add one more word to what has already been said on this question ? The Government should make it very clear whether they intend placing the Second Five-Year Plan before this House. And if my recollection is all right, I remember, Sir, they had already included the Second Five Year Plan in the Agenda which was discussed at Mysore. And what is more, at Mysore, they had placed it before the House and even the discussion had begun. Sri B. Rachiah had begun the discussion. I think the Government ought to give a very clear reply that they would take it up again. They cannot shirk the responsibility when they had already initiated the discussion. If it is in their mind that no useful purpose would be served by discussing the Second Five-Year Plan, that is a different matter altogether, for, the outline placed before the country is only a draft reply and they certainly invite all criticisms with regard to the draft outline, and then it will be finalised. Therefore it would be much better if the Government allots one or two days for the discussion of the Second Five-Year Plan.

*Sri M. LINGANNA (Nanjangud).—There is some doubt with regard to the Zonal Councils indicated in the S.R. Bill. Can we move amendments in respect of those councils, Sir ?

Mr. SPEAKER.—I will consider your amendments while the amendments are being moved. You can send in your amendment.

Sri M. LINGANNA.—And also there is one more point, Sir. So far as the Report of the Special Committee on the Rules of Procedure is concerned, I remember that a discussion on that report took place at Mysore. I think this is a proper time when probably we can finish off that particular aspect of the question, or else, with the enlarged Assembly, the House may

(SRI M. LINGANNA)

not be able to regulate its rules. Since the members are few at present, we can give more powers to the Speaker. From that point of view, I submit that one day may kindly be allotted for the discussion of the Special Committee Report. I remember that the Report was discussed at Mysore. It is better that the Report is placed once again before the House and final verdict so far as that matter is concerned.

Sri K. S. VASAN (Kolar Gold Fields).—At the commencement of the Session, the Rajpramukh in his Address has mentioned that the Kolar Gold Fields Nationalisation Bill also would be placed before this House during this session. Now that it is said this session would conclude on the 5th April, are we to take it that the Bill is not ready or the Bill is not going to be placed before this House in this session? I want to bring to the notice of this House and of the Government that great disservice is being done in this respect. The Government have taken a decision to nationalise the gold mines and have also officially communicated the decision to the Mining Companies. It is being said fort he past one year that every step is being taken to nationalise the Industry. It was said that the Bill was going to be placed before this House, but now it is not going to be placed before this House as the programme now stands. The Mining Company are not developing the mines, resulting in crippling the mines just with a view to compel the Government to drop the idea of nationalisation of the mines or, even after nationalisation, to leave crippled mines. If the Government is really serious about nationalisation, it must immediately place this Bill before this House in this session itself and take all suitable actions in that respect.

*ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಾಮಿ, ಈಗೇನೂ ನಾವು ಇಲ್ಲಿಯೇ ಅನೇಕದಿವಸ ಕುಳಿತುಕೊಂಡು ಸಭೆಯನ್ನು ಮುಂದುವರಿಸಿಕೊಂಡು ಮಾತನಾಡಬೇಕೆಂದಿಲ್ಲ. ಈಗಾಗಲೇ ನಮಗೆ ಬೇಜಾರಾಗಿದೆ, ಆದರೆ ಸರ್ಕಾರದವರು ಒಂದು ಕಾರ್ಯಕ್ರಮವನ್ನು ಸಭೆಯ ಮುಂದಿಟ್ಟು ಅದನ್ನು ಕೈ ಬಿಡುವುದು ಸರಿಯೇ? ಇವರು ಮಾಡುವ ರೀತಿಯನ್ನು ನೋಡಿದರೆ, ಇವರು ಸದಸ್ಯರನ್ನು ಗಣನೆಗೆ ತೆಗೆದುಕೊಳ್ಳುತ್ತಾರೆಯೇ ಇಲ್ಲವೇ ಎಂದು ಅನುಮಾನವಾಗುತ್ತದೆ. ಇದೊಂದೇ ವಿಷಯದಲ್ಲಿ ಹೀಗಾಗಿಲ್ಲ. ಆಡಿಟ್ ಮತ್ತು ಅಕೌಂಟ್ಸ್ ವರದಿಯನ್ನು ಈ ಸಭೆಯ ಮುಂದಿಡುವ ಪದ್ಧತಿಯಿತ್ತು. ಯೂನಿವರ್ಸಿಟಿ ಬಿಲ್ಲನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದರು. ಎಲ್ಲವನ್ನೂ ಅಜೆಂಡಾದಲ್ಲಿ ಮಾತ್ರ ಸೇರಿಸುತ್ತಾರೆ. ಅವುಗಳ ಗತಿಯೇನಾಗುತ್ತದೋ ಗೊತ್ತಾಗುವುದಿಲ್ಲ. ಎಷ್ಟೋ ಮಸೂದೆಗಳನ್ನು ಸಭೆಯ ಮುಂದೆ ಮಂಡಿಸುತ್ತಾರೆ. ಅವು ಅಲ್ಲಿಗೇ ನಿಂತು ಹೋಗುತ್ತವೆ. ಸರ್ಕಾರದವರ ಇಂಥ ವಿಷಯಗಳಲ್ಲಿ ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸುವುದು ಸೂಕ್ತವೆಂದು ನಾನು ಹೇಳುತ್ತೇನೆ. ಇವರು ಅನುಸರಿಸುತ್ತಿರುವ ನೀತಿಯಿಂದ ಈಗಾಗಲೇ ಪಂಚವಾರ್ಷಿಕ ಯೋಜನೆ ಬಿಟ್ಟುಹೋಯಿತು. ಸರ್ಕಾರದವರ ಅಭಿಪ್ರಾಯವೇನಾದರೂ ಈ ಯೋಜನೆ, ಶ್ರೀ ಮರಿಯಪ್ಪನವರು ಹೇಳಿದಹಾಗೆ, ಕೇವಲ Draft ಆಗಿರುವುದರಿಂದ ಅದರ ಮೇಲೆ ಈ ಸಭೆಯ ಟೀಕೆ ಅನವಶ್ಯಕವೆಂದೇ? ಅಕೌಂಟ್ಸ್ ಮತ್ತು ಆಡಿಟ್ ಕಮಿಟಿಯ ವರದಿಯನ್ನು ಇಡದಿರುವುದು ಎಂದರೆ ಉಗ್ರವಾದ ಟೀಕೆಗಳು ಬರುತ್ತವೆಂದು ಭಯವೇ? ಇದೇರೀತಿ ರೂಲ್ಸ್ ಕಮಿಟಿಯ ವರದಿಯೂ ನಿಂತುಹೋಗಿದೆ. ಹೀಗೆ ಇಟ್ಟೆವು ಎಂದು ಹೇಳಲಿಕ್ಕೆ ಒಮ್ಮೆ ಸಭೆಯ ಮುಂದಿಡುವುದು ಮತ್ತೆ ಹಿಂತೆಗೆದುಕೊಳ್ಳುವುದು ಸರಿಯಲ್ಲ. ಈ ಬಗೆಯ ವರ್ತನೆಯಿಂದ ಸರ್ಕಾರ ಈ ಸಭೆಯನ್ನೇ ಗಣನೆಗೆ ತೆಗೆದುಕೊಳ್ಳುವಂತೆ ಕಾಣುವುದಿಲ್ಲ. ಆದ್ದರಿಂದ ಈಗಲೂ ಸಭಾನಾಯಕರು ಆಲೋಚನೆ ಮಾಡಿ ಸೂಕ್ತ ಕಾರ್ಯಕ್ರಮವನ್ನು ಅಳವಡಿಸಿ ನಾನು ಹೇಳಿದ ಮೂರು ನಾಲ್ಕು ವಿಷಯಗಳು ಏನಾದವೆಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಅಮೇಲೆ, ಎರಡನೆಯ ಪಂಚವಾರ್ಷಿಕ ಯೋಜನೆಯ ವಿಷಯವಾಗಿ ಒಂದು ಮಾತು ಹೇಳಬಯಸುತ್ತೇನೆ. ನಾಳೆ ಏಪ್ರಿಲ್ ಒಂದನೆಯ ತಾರೀಖಿನಿಂದ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವ ಕಾಲ ಷುರುವಾಗುತ್ತದೆ. ನಮ್ಮಲ್ಲಿ ಹಣವಿಲ್ಲ. ಆದರೂ ಇರತಕ್ಕ ಹಣದಲ್ಲಿ ಯಾವ ಕೆಲಸವನ್ನು ಮುಂಚೆ ಮಾಡಬೇಕು ಯಾವುದನ್ನು ಆಮೇಲೆ ಮಾಡಬೇಕು ಎಂಬುದನ್ನು ನಿರ್ಧರಿಸಿಕೊಳ್ಳಬೇಕಾದದ್ದು ಮುಖ್ಯ. ಆದ್ದರಿಂದ ಈ ಯೋಜನೆ ಅದು ಇನ್ನೂ ಕರಡುಯೋಜನೆಯಾದರೂ, ಇದನ್ನು ಯಾವರೀತಿ ಯಾವ ಆಯಕಟ್ಟಿನಲ್ಲಿ ಕೆಲಸ ಮಾಡಬೇಕೆಂಬುದನ್ನು ತಿಳಿದುಕೊಳ್ಳದೆ ಇಷ್ಟಕ್ಕೇ ಕೈಬಿಡುವುದು ಸರಿಯಲ್ಲ. ಆದ್ದರಿಂದ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಚರ್ಚೆ ಮಾಡುವುದೂ, ವಿಷಯಗಳನ್ನು ಎಲ್ಲರೂ ತಿಳಿದುಕೊಳ್ಳುವುದೂ ಬಹಳ ಅವಶ್ಯಕವೆಂದು ನಾನು ಭಾವಿಸುತ್ತೇನೆ. ಸರ್ಕಾರದವರು ಈ ದೃಷ್ಟಿಯಿಂದ ನನ್ನ ಸಲಹೆಯನ್ನು ಪರಿಶೀಲಿಸುತ್ತಾರೆಂದು ನಂಬಿದ್ದೇನೆ.

1 P.M.

* ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಈ ಅಧಿವೇಶನದಲ್ಲಿ ಮುಂಚೆ ಸೂಚಿಸಿದ್ದ ಕಾರ್ಯಕ್ರಮದಂತೆ ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಚರ್ಚೆ ಎಂದು ಹಾಕಿತ್ತು. ಆ ಸಮಯದಲ್ಲಿ ಬಹುಶಃ ಸಭಾನಾಯಕರೂ ತಾವೂ ಇಬ್ಬರೂ ಸೇರಿ ಅದನ್ನು ಚರ್ಚೆಮಾಡಬೇಕೆಂದು ಗೊತ್ತು ಮಾಡಿದ್ದಿರಿ. ಅಲ್ಲಿಗೆ ಸಭಾನಾಯಕರು ತಮಗೆ ಕೊಡಬೇಕಾದ ಸಲಹೆ ಕೊಟ್ಟಿದ್ದು ಆಯಿತು. ಅಮೇಲೆ ಪುನಃ ಬದಲಾವಣೆಯಾಗಬೇಕಾದರೆ, ಸಭಾನಾಯಕರು ತಮ್ಮ ಅನುಕೂಲ

ಕ್ಕಾಗಿ ಯಾವುದಾದರೂ ಹೇಳಬಹುದು. ಆದರೆ ಸಭಾಧ್ಯಕ್ಷರಾದ ತಾವು ಅದಕ್ಕೆ ಸುಲಭವಾಗಿ ಸಮ್ಮತಿ ಕೊಡುವುದಕ್ಕಾಗುವುದಿಲ್ಲ. ಒಂದು ಸಾರಿ ಗೊತ್ತಾದ ಮೇಲೆ, ಕಾಲ ದೊರೆಯದಿದ್ದರೆ, ಆವಿಷಯವನ್ನು ಮುಂದೆಹಾಕಬೇಕೇ ವಿನಾ ಪಟ್ಟಿಯಿಂದಲೇ ತೆಗೆದುಹಾಕುವುದಕ್ಕೆ ಸಭಾನಾಯಕರು ಏನೇ ಹೇಳಲಿ, ಸಭಾಧ್ಯಕ್ಷರು ಒಪ್ಪಬಾರದು. ಆರೀತಿ ಸಭಾಧ್ಯಕ್ಷರು ಒಪ್ಪಿದರೆ ಸದಸ್ಯರ ಹಕ್ಕುಬಾಧ್ಯತೆಯನ್ನು ಕಾಪಾಡುವುದಕ್ಕೆ ಲೋಪ ಮಾಡಿದ ಹಾಗಾಗುತ್ತದೆ. ಅದ್ದರಿಂದ ಅಧ್ಯಕ್ಷರು ಅದಕ್ಕೆ ಒಪ್ಪಿಗೆಕೊಡಬಾರದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲು).—ಮೊದಲು ನೋಟೀಸ್ ಬಂದಾಗ Calendar ಬಂತು. Calendar ಬಂದಾಗ ಇದುವರೆಗೂ ಮಾನ್ಯ ಸದಸ್ಯರು ತಿಳಿಸಿದ ಹಾಗೆ ದ್ವಿತೀಯ ಪಾಂಚವಾರ್ಷಿಕ ಯೋಜನೆಯು ಚರ್ಚೆಯಾಗುತ್ತದೆ ಎಂದು ತಿಳಿಸಿದ್ದರು. ಹಿಂದಿನ ಮತ್ತು ಮುಂದಿನ ಪುಸ್ತಕಗಳನ್ನು ತೆಗೆದುಕೊಂಡು ನಾವು ಇಲ್ಲಿಗೆ ಬಂದೆವು. ಇಲ್ಲಿಗೆ ಬಂದ ಮೇಲೆ ಬೇರೆ ಪುಸ್ತಕಗಳನ್ನು ಕೈಗೆ ಕೊಟ್ಟರು. ಅದನ್ನು ಓದುವುದಕ್ಕೆ ಪ್ರಯತ್ನ ಮಾಡಿದರೆ, ಓದಬೇಕೇ ಬಿಡಬೇಕೇ ಎಂದು ಹೇಳುವುದು ಕಷ್ಟವಾಗಿದೆ. ನಮ್ಮನ್ನು ಚುನಾಯಿಸಿ ಕಳುಹಿಸಿದಂಥವರು, "ದ್ವಿತೀಯ ಪಾಂಚವಾರ್ಷಿಕ ಯೋಜನೆಯನ್ನು ಯಾವತ್ತು ಚರ್ಚೆಗೆ ತೆಗೆದುಕೊಳ್ಳುತ್ತಾರೆ, ಆ ಚರ್ಚೆ ಪ್ರಾರಂಭವಾಯಿತೇ, ನಮಗೆ ಅದರಿಂದ ಏನೇನು ಪ್ರಯೋಜನವಾಗುತ್ತದೆ, ನಮ್ಮ ಸ್ಥಿತಿಗತಿಗಳು ಏನಾಗುತ್ತವೆ" ಎಂಬುದಾಗಿ ಕೇಳುತ್ತಾರೆ. ಅಲ್ಲದೆ ಅಸೆಂಬ್ಲಿ ಎಷ್ಟು ದಿವಸಕ್ಕೆ ಮುಗಿಯುತ್ತದೆ, ಊರು ಸೇರುತ್ತೀರೋ ಇಲ್ಲವೋ ಎಂದು ಉತ್ತರ ಕೇಳುತ್ತಾರೆ. ತಾವು calendarನ್ನು ಮೊದಲು fix ಮಾಡಿರುತ್ತೀರಿ. ಮತ್ತೆ ಬದಲಾವಣೆ ಮಾಡಿ ಈ ವಿಷಯವನ್ನು ತೆಗೆದುಹಾಕಿದ್ದೀರಿ. ಈ ಅಧಿವೇಶನದಲ್ಲಿ ಮುಖ್ಯವಾದಂಥ ವಿಷಯ, ಬಡ್ಜೆಟ್ ಮತ್ತು ದ್ವಿತೀಯ ಪಾಂಚವಾರ್ಷಿಕ ಯೋಜನೆಯೇ ಹೊರತು ಬೇರೆ ಯಾವುದೂ ಇಲ್ಲ. ನಾವು ತಿಳಿದುಕೊಂಡಿರುವವುಟ್ಟಿಗೆ ಬಡ್ಜೆಟ್ ಎಷ್ಟು ಮುಖ್ಯವಾದುದೋ ಅಷ್ಟೇ ಮುಖ್ಯವಾದುದು ದ್ವಿತೀಯ ಪಾಂಚವಾರ್ಷಿಕ ಯೋಜನೆ. ಹೀಗಿರುವಾಗ ಈ ವಿಷಯ ಬಾರದೇ ಇರುವುದನ್ನು ನೋಡಿದರೆ ಇದು ತುಂಬ ಶೋಚನೀಯವಾಗಿದೆ. ಇದು ಅದನ್ನು ತಾವು ಪರ್ಯಾಲೋಚನೆ ಮಾಡಬೇಕೆಂದು ತಿಳಿಸುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಅಷ್ಟೇ ಮುಖ್ಯವಾದುದು ಇನ್ನೊಂದು ಇದೆ. The Mysore Tenancy (Second Amendment) Bill, ಬಹಳ ಪ್ರಾಮುಖ್ಯವಾದುದು. ಅದು ಆಗಲೇ ಒಂದು ಸಾರಿ ಬಂತು. ಚರ್ಚೆಯಾಗಿ ಅದು ಇನ್ನೂ ಪೆಂಡಿಂಗ್‌ನಲ್ಲಿದೆ. ಅದಕ್ಕೆ priorityಕೊಟ್ಟು ತೆಗೆದುಕೊಳ್ಳುವುದು ಸೂಕ್ತ ಎಂದು ಹೇಳುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಈಗ ಈ ಸಭೆ 5ನೇ ತಾರೀಖು ಮುಗಿಯುತ್ತದೆಂದು ನಾನು ಕೇಳಿದೆ. ಹಾಗೆ ಮುಗಿಯುವುದರಿಂದ ಈ ಸಭೆಯ ಕಾರ್ಯಕಲಾಪಗಳು ಪೂರ್ತಿಯಾಗುವುದಿಲ್ಲ. ಕಾರಣವೇನೆಂದರೆ, ದ್ವಿತೀಯ ಪಾಂಚವಾರ್ಷಿಕ ಯೋಜನೆಯು ಪೂರ್ತಿಯಾಗಿ ಅವರು ಅದನ್ನು ಸಿದ್ಧಪಡಿಸಿದ್ದಾರೆ. ಕೇಂದ್ರದಲ್ಲಿ ಈ ರೀತಿ ತೀರ್ಮಾನ ಮಾಡಿದ್ದಾರೆಂದು ಕಳೆದ ಮೈಸೂರು ಅಧಿವೇಶನದಲ್ಲಿ ಇದರ ಚರ್ಚೆಯನ್ನು ಪ್ರಾರಂಭಮಾಡಿ, ಮಾನ್ಯ ಸದಸ್ಯರಾದ, ಶ್ರೀ ರಾಚಯ್ಯನವರು ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅವರು ಮುಗಿಸಿದ್ದಾರೋ, ಇಲ್ಲವೋ ಗೊತ್ತಿಲ್ಲ. ಅನಂತರದಲ್ಲಿ ಆ ಚರ್ಚೆಯನ್ನು ಮುಂದುವರಿಸದೆ ಅಲ್ಲಿಗೇ ನಿಂತು ಹೋಗಿತ್ತು. ಇನ್ನು ಶ್ರೀ ತಿಮ್ಮಪ್ಪಗೌಡರು ಹೇಳಿದಹಾಗೆ Tenancy Amendment ಮಸೂದೆ ಬರಬೇಕಾಗಿದೆ. ಅದಕ್ಕೆ ಸೂಕ್ತ ತಿದ್ದುಪಡಿ ಮಾಡಬೇಕಾಗಿತ್ತು. ಮೈಸೂರು ಸರ್ಕಾರದವರು ತಿದ್ದುಪಡಿ ಮಾಡಿ ಕಾರ್ಯಗತ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ನಂಬಿದ್ದೇನೆ. ಮೈಸೂರು ಯೂನಿವರ್ಸಿಟಿ ಮಸೂದೆ ಮುಂದೆ ಹೋಗುವ ಸಂಭವವಿದೆ. ಅದೂ ಸಹ ಮೈಸೂರು ಅಧಿವೇಶನದಲ್ಲಿ ಚರ್ಚೆಗೆ ಬರಬೇಕಾಗಿತ್ತು. ಯೂನಿವರ್ಸಿಟಿ ಗ್ರಾಂಟು ಕಮಿಷನ್ ಕೊಡತಕ್ಕ ಹಣವನ್ನು ನಾವು ಯಾವರೀತಿಯೂ ಉಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತಾ ಇಲ್ಲ. ಆದ್ದರಿಂದ ಹೆಚ್ಚು ಕೆಲಸಗಳು ಹಾಗೆಯೇ ಉಳಿದಿರುವುದರಿಂದ ಆ ಕೆಲಸಗಳನ್ನು ಪೂರೈಸಿ ಸಭೆಯನ್ನು ಮುಕ್ತಾಯ ಮಾಡುವುದು ಒಳ್ಳೆಯದು. ಈ ಸಭೆಯ ಮುಖಂಡರು ಹಾಜರಿದ್ದು, ಎಷ್ಟು ದಿವಸಗಳು ಆದರೂ ಕೆಲಸಗಳನ್ನು ಜಾಗ್ರತೆ ಮುಗಿಸುವುದು ಸೂಕ್ತ ಎಂದು ಕಾಣುತ್ತದೆ. ಇಬ್ಬರು ಮಾನ್ಯ ಮಂತ್ರಿಗಳು ಆರೋಗ್ಯವಿಲ್ಲದೆ ಇಲ್ಲಿಗೆ ಬರುವುದಕ್ಕೆ ಆಗುವುದಿಲ್ಲ. ರೆವಿನ್ಯೂ ಮಂತ್ರಿಗಳೂ ಕೂಡ ಬಹಳ ಕಡಿಮೆ ಸಲ ಸಭೆಯಲ್ಲಿದ್ದು ನಮ್ಮ ಸಭೆ ಉತ್ಸಾಹದಾಯಕವಾಗಿ ನಡೆಯುವುದಕ್ಕೆ ಸಾಧ್ಯವಾಗಿಲ್ಲ. ಬೇರೆ ಮಂತ್ರಿಗಳು ಉತ್ತರ ಕೊಟ್ಟಿರುವುದರಿಂದ ಪೂರ್ತಿ ವಿಷಯ ಗೊತ್ತಾಗುವುದಿಲ್ಲ. ಈ ರೀತಿ ಇರುವುದರಿಂದ, ಈ ಸಭೆಗೆ ಸಾಕಷ್ಟು ಮಹತ್ವ ಕೊಡಬೇಕು. ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಈ ಸಭೆ ನಡೆಯುತ್ತಿರುವಾಗ ಸರ್ಕಾರ ಮತ್ತು ಇಲಾಖೆಯ ಮೊಕ್ತೇಸರರು ಈ ಸೆಮಿನಾರ್‌ಗಳನ್ನು ಏರ್ಪಡಿಸಿ ನಮಗೆ ಊಟಕ್ಕೆ ಬರಬೇಕು ಎಂದು ಆಹ್ವಾನವನ್ನು ಮಾಡುವುದು, ಅಲ್ಲಿ ಮಂತ್ರಿಗಳೂ ಮತ್ತು ಇತರರೂ ಭಾಷಣ ಮಾಡುವುದು ಅಷ್ಟು ಶೋಭಿಸುವುದಿಲ್ಲ ಎಂದು ನನಗನ್ನಿಸಿತು. ಖಾಸಗೀ ಮಹನೀಯರು ಮದುವೆ ಮುಂಜಿ ಮಾಡಿ ಆಹ್ವಾನ ಕೊಟ್ಟರೆ, ಅಷ್ಟು ಕಷ್ಟವಿರುವುದಿಲ್ಲ. ಪ್ರತಿಯೊಂದು ಚರ್ಚೆಯನ್ನೂ ತಿಳಿದುಕೊಂಡು ಆ ಚರ್ಚೆಯಲ್ಲಿ ಸದಸ್ಯರು ಏನಾದರೂ ಸಲಹೆಕೊಟ್ಟರೆ, ತಕ್ಷಣ ಅದನ್ನು ಕಾರ್ಯಗತ ಮಾಡುವುದಕ್ಕೆ ಯಾರು ಸರ್ಕಾರಿ ನೌಕರರು ಇಲ್ಲಿ ಇರಬೇಕೋ ಅಂತಹ ಮುಖ್ಯ ಮುಖ್ಯ ಅಧಿಕಾರಿಗಳು ಸೆಮಿನಾರ್‌ಗಳನ್ನು ಮಾಡಿಕೊಂಡು, ಬೇರೆಕಡೆಗೆ ಮಂತ್ರಿಗಳು ಬರಬೇಕು inaugurate ಮಾಡಬೇಕು, ಭಾಷಣ ಮಾಡಬೇಕು ಅಲ್ಲಿ ಭಾಗವಹಿಸಬೇಕು ಎಂದು ಹೇಳುವುದು ಚೆನ್ನಾಗಿ ಕಾಣುವುದಿಲ್ಲ. ಈ ವರ್ಷ ಎರಡು ಮೂರು ಅಂತಹ ಸಂದರ್ಭಗಳು ನಡೆದಿವೆ. ಈ ರೀತಿ ಮಾಡುವುದರಿಂದ ಈ ಸಭೆಯ ಚರ್ಚೆಗಳು ಅಷ್ಟು ಮಹತ್ವವನ್ನು ಪಡೆಯದೆ ಹೋಗುತ್ತವೆ. ಮತ್ತು ಸಭೆಯ ಕಾರ್ಯಕಲಾಪಗಳು ಏನೋ ದೇಶದಲ್ಲಿ ಸಾಮಾನ್ಯವಾಗಿ ನಡೆಯತಕ್ಕ ಕಾರ್ಯಕಲಾಪ ಎಂಬ ಭಾವನೆ ಬರುವುದಕ್ಕೆ ಅದು ಅವಕಾಶ ಕೊಡುತ್ತದೆ. ಇದನ್ನು ಪರಿಶೀಲನೆ ಮಾಡಿ ತಾವು ಸರಕಾರದ ಕಡೆಗೆ ಈ ವಿಷಯದಲ್ಲಿ ಸರಿಯಾದ ಸೂಚನೆಯನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

*ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರ).--ಸ್ವಾಮಿ, ಈಗ ಅನೇಕ ಮಾನ್ಯ ಸದಸ್ಯರು ದ್ವಿತೀಯ ಪಾಂಚವಾರ್ಷಿಕ ಯೋಜನೆ ಮತ್ತು ದೇಶಕ್ಕೆ ಸಂಬಂಧಪಟ್ಟ ಇತರ ವಿಷಯಗಳ ಮೇಲೆ ಚರ್ಚೆ ನಡೆಯಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಅದೇ ರೀತಿ, ಮೈಸೂರು

(ಶ್ರೀ ವಿ. ಆರ್. ನಾಯ್ಡು)

ಸರ್ಕಾರದ ಕೆಳದರ್ಜೆ ನೌಕರರ ಸಂಬಳ ಸಾರಿಗೆಗಳ ವಿಷಯದ ಮೇಲೆ ಚರ್ಚೆ ನಡೆಯಬೇಕೆಂದು ಅಪೇಕ್ಷಿಸುತ್ತೇನೆ. ಸಂಬಳ ಸಾರಿಗೆ ಸಮಿತಿಯ ವರದಿಯಲ್ಲಿರುವ ಸಲಹೆಗಳನ್ನು ಕಾರ್ಯಗತ ಮಾಡುವುದನ್ನು ಸರ್ಕಾರದವರು ಮುಂದೆ ಹಾಕಿದರು. ಇದರಿಂದ ನೌಕರರ ಕಷ್ಟ ಹೇಳತೀರದಾಗಿದೆ. ಆದಕಾರಣ ಈ ವಿಷಯವನ್ನು ತಮ್ಮ ಆಜ್ಞೆಯ ಪ್ರಕಾರ ಮತ್ತೆ ತೆಗೆದುಕೊಂಡು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕವಕಾಶ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಸರ್ಕಾರಕ್ಕೆ ಕಷ್ಟವಿದೆ ಎಂಬುದು ನನಗೆ ಗೊತ್ತು ; ಸಚಿವರು ಆಗಲೇ ನನ್ನ ಮುಖ ನೋಡುತ್ತಿದ್ದಾರೆ. ಅವರಿಗೂ ಕೆಲಸ ಕಾರ್ಯಗಳು ಬಹಳ ಹೆಚ್ಚಾಗಿವೆ. ಇಬ್ಬರು ಮಂತ್ರಿಗಳು ಆಸ್ಪತ್ರೆಯಲ್ಲಿದ್ದಾರೆ. ನಾನು ಹೇಳುವುದೇನೆಂದರೆ, ಅವರಿಗೆ ಕೆಲಸಕಾರ್ಯಗಳು ಹೆಚ್ಚಾಗಿವೆ ಎಂದರೆ, ನಮ್ಮಂಥವರಿದ್ದೇವೆ, ' ನೀವು ನೋಡಿಕೊಳ್ಳಿ ' ಎಂದು ಹೇಳಿದರೆ ನಾವು ನೋಡಿಕೊಳ್ಳುತ್ತೇವೆ. ಮಂತ್ರಿಗಳೇಕೆ ಹೀಗೆ ಮಾಡಬಾರದು ? (ನಗು !) ನಮ್ಮ ದೇಶದ ಕೆಳದರ್ಜೆ ನೌಕರರು ಬಹಳ ಕಷ್ಟದಲ್ಲಿದ್ದಾರೆ. ಆದುದರಿಂದ ಅವರ ಸಂಬಳ ಸಾರಿಗೆಗಳನ್ನು ಉತ್ತಮಪಡಿಸುವ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

*Sri A. G. RAMACHANDRA RAO (Minister for Law and Education).—Regarding discussion on the Second Five-Year Plan, Draft Rules of the Rules Committee, Public Accounts Committee, Audit Report—I may submit that I will discuss with the Leader and try to give an early programme. Regarding the University Bill, the House knows that it is before the Select Committee. The Committee met thrice in spite of the heavy Budget sittings going on here and they have met with considerable inconvenience. They are trying to progress with the Bill and finalise as early as possible.

Mr. SPEAKER.—Is it possible to place it before this House now ?

Sri A. G. RAMACHANDRA RAO.—We are trying. Rather it is very difficult. That is all that I can say. Similarly, regarding the Tenancy Amendment Bill, the House knows that it is long over due, and we are at it. One important aspect was brought to the notice of the House regarding the holding of seminars while the Legislature is in session. I do not think there is anything wrong in holding seminars. At any rate. . . .

Mr. SPEAKER.—Technically there may be nothing wrong. But the attention of the Officers and the Government should not be diverted from the business of this House when it is in session.

Sri A. G. RAMACHANDRA RAO.—I will submit this, Sir. Even the Educational seminar that is going on was taken after the cut motions here were discussed and not before. All that time, the Head of the Department was here.

ಶ್ರೀ ಎಸ್. ಗೋಪಾಲಗೌಡ.—ಹಾಗಿದ್ದರೆ ವಿದ್ಯಾಭ್ಯಾಸಕ್ಕೆ ಸಂಬಧಪಟ್ಟ ಖೋತಾ ಸೂಚನೆಗಳಾದ ಮೇಲೆ ಆ ಸೆಮಿನಾರ್ ಆಯಿತೆಂದು ಹೇಳುತ್ತೀರಾ ?

Sri A. G. RAMACHANDRA RAO.—When his department's is being discussed here, he is sure to be here and he was here. Similarly other departmental heads were here. We are trying our best to give all priority to the work of the Legislature. Other work will be taken up as secondary work, not inconveniencing the work of this House. I believe that practice is very healthy. So, I will discuss with the Leader of the House, with the Hon'ble Speaker, and also with the Leader of the Opposition.

Sri Mulka GOVINDA REDDY.—Objection was taken not for holding seminars in Bangalore during the hours when the Assembly is not in session. But the objection taken was—during the session of the Assembly, the Chief Minister and other Ministers, invite members of the Assembly and take them away from Bangalore to Nandi and feed them sumptuously. They do not attend and also prevent members from attending. That was the greatest objection. We do not take objection for conducting the seminars in the Town Hall or any other place in Bangalore during the hours when the Legislature is not in sesssion.

Sri A. G. RAMACHANDRA RAO.—This may be taken as relief for the hard work that the members put in.

Sri K. PUTTASWAMY.—You know, Sir, that the University bodies are already in an extended period. Normally, the University bodies are constituted for three years. Government have power to extend them by one more year and that they have done, up to June. On 1st July 1956, the University bodies will have to be reconstituted. I want to know whether

the Government intends reconstituting. . . .

Mr. SPEAKER.—May I know from the Hon'ble Member how this arises ?

Sri K. PUTTASWAMY.—Now that the Minister submitted that the University Bill is not likely to be placed before us in the present session. . . .

Sri A. G. RAMACHANDRA RAO.—I did not say so.

Sri K. PUTTASWAMY.—Naturally the Government will have to reconstitute the bodies either under the old Act or have another session of the House either in the month of April or in May for passing the University Bill. I want to know what Government intend doing in this matter.

Sri A. G. RAMACHANDRA RAO.—Government is very anxious to finalise the Bill during this session alone. That is why I said that the Select Committee met thrice during the heavy Budget agenda. If, in any case, it is not possible, then an early session will be called and the matter will be considered.

Sri K. S. VASAN.—The Hon'ble Minister has not said anything about the Kolar Gold Fields Nationalisation Bill. Is it going to be placed in this session ?

Sri A. G. RAMACHANDRA RAO.—I submit that the draft Bill is ready and we are in correspondence with the Government of India. We are pursuing it very seriously.

Sri K. S. VASAN.—Where is the necessity for consulting the Government of India for placing this Bill before the House, when the draft Bill is ready ?

Sri A. G. RAMACHANDRA RAO.—It comes under the concurrent jurisdiction and the approval and assent of the President is necessary.

BUDGET FOR 1956-57—DEMANDS FOR GRANTS.

Mr. SPEAKER.—Now Demands will be taken up. Demands Nos. 26 and 1 will be taken up together. Demands Nos. 38 an^d 42 can be taken up together, I have allotted time in this way. Demands 26 and 41 : One and a half hours Demands 38 and 42 : two hours. Today we have to close exactly at 5 P. M.

Sri V. M. MASCARENHAS (St. John's Hill).—More time must be given for Industries Demand, Sir.

Sri T. MARIAPPA (Mysore City—North).—Industries Demand should have more time.

Mr. SPEAKER.—I have no objection to change the time limit or distribute time. But you have got to close exactly at 5 o'clock. Today is the last day. So Demands Nos. 26 and 41 will be taken up till 3 and Demands 38 and 42 will be taken up after 3·30 and we close at 5.

Sri Mulka GOVINDA REDDY (Chitaldrug).—Before the discussion begins. I would like to know whether the Chair has fixed any time limit for Ministers. At what time can the Minister reply on demands Nos. 43 and 41 and at what time the Minister in charge for Electricity will reply on the other two Demands. If you fix the time required for the Ministers concerned, you may allot time for the members.

Mr. SPEAKER.—Time will be half an hour for the Government to reply on every two Demands at a time. So they require one hour as they have to meet many of the points raised.

Sri Mulka GOVINDA REDDY.—So, till 2-30 discusion can go on the first two Demands ?

Mr. SPEAKER.—Yes. I will move Demand No. 26, but Demand No. 41 can also be discussed.

DEMAND No. 26.—INDUSTRIES AND SUPPLIES INCLUDING SERICULTURE.

43. INDUSTRIES AND SUPPLIES.

Mr. SPEAKER.—Motion moved :

"That a sum not exceeding Rs. 8,26,80,300 be granted to the Government to defray the charges which will come in course of payment during the year ending 31st day of March 1957, in respect of 'Industries and Supplies'."

Sri. V. M. MASCARENHAS (St. John's Hill).—As there will be very many speakers, please restrict each speaker to a maximum of five minutes, Sir.

Mr. SPEAKER.—Yes.

*ಶ್ರೀ ಎಸ್. ಶ್ರೀನಿವಾಸ ಐಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಕೈಗಾರಿಕೆ ಉದ್ಯಮದ ಮೇಲೆ ಸರ್ಕಾರದವರು 9 ಕೋಟಿ 61 ಲಕ್ಷ ರೂಪಾಯಿಗಳ ಬಂಡವಾಳ ಹಾಕಿದ್ದಾರೆ. ಆ ಬಂಡವಾಳವನ್ನು ಸಾರ್ವಜನಿಕರಿಂದ ಸಾಲಪಡೆದು ಹಾಕಿದ್ದಾರೆ. ಕೈಗಾರಿಕೆ ಉದ್ಯಮಗಳನ್ನು ಖಾಸಗೀ ಮನುಷ್ಯರು ಯಾವ ರೀತಿ ನಡೆಸುತ್ತಾರೋ ಆ ರೀತಿ ಸರ್ಕಾರದವರು ನಡೆಸುವುದಕ್ಕೆ ಸಿದ್ಧರಾಗಿಲ್ಲ. ಅನೇಕ ಕೈಗಾರಿಕೆ ಸಂಸ್ಥೆಗಳಲ್ಲಿ ಪದಾರ್ಥಗಳನ್ನು ತಯಾರು ಮಾಡಿ ಅವು ಬಿಕರಿಯಾಗದೆ ಸ್ಟಾಕ್‌ನಿಂತಿದೆ. ಉದಾಹರಣೆಗೆ ಹೇಳುವುದಾದರೆ ಭದ್ರಾವತಿ ಕಬ್ಬಿಣ ಕಾರ್ಖಾನೆಯಲ್ಲಿ ಒಂದು ಕೋಟಿ ರೂಪಾಯಿ ಬೆಲೆ ಬಾಳುವ ಸರಕು ಸ್ಟಾಕು ಇದೆ. ಹಾಗೆಯೇ ಅನೇಕ ಕೈಗಾರಿಕೆ ಉದ್ಯಮಗಳಲ್ಲಿ ಬಹಳವಾಗಿ ಸ್ಟಾಕುಗಳನ್ನಿಟ್ಟಿದ್ದಾರೆ. ಯಾಕೆ ಇಟ್ಟಿದ್ದಾರೆ ಅಂದರೆ ಒಂದು ಬಡ್ಜೆಟ್ ಇಲ್ಲ. ಏನು ತಯಾರು ಮಾಡಬೇಕು, ಈ ವರ್ಷ ಎಷ್ಟು ವ್ಯಾಪಾರ ಮಾಡಬಹುದು ಎನ್ನತಕ್ಕದ್ದಕ್ಕೆ ಒಂದು ಮುಂದಾಲೋಚನೆ ಇಲ್ಲದೆ ಮನಸ್ಸಿಗೆ ಬಂದಂತೆ ಕೆಲಸಕಾರ್ಯಗಳನ್ನು ನಡೆಸುತ್ತಿದ್ದಾರೆಂದು ನನ್ನ ಭಾವನೆ.

ದೇಶದಲ್ಲಿ ಸರ್ಕಾರದವರು ನಡೆಸುತ್ತಿರತಕ್ಕ ಕೈಗಾರಿಕೆ ಸಂಸ್ಥೆಗಳಲ್ಲಿ ಹೆಚ್ಚು ಮುತುವರ್ಜಿ ಬಂದು, ಒಂದು initiative ಬರಬೇಕಾದರೆ, ಯಾವ ರೀತಿ ಆ ಕೈಗಾರಿಕೆಗಳನ್ನು ಉತ್ತಮಪಡಿಸಬೇಕೆಂದು ಯೋಚನೆ ಮಾಡುತ್ತೇವೆ, ಮತ್ತು ಅವುಗಳ ಆಡಳಿತವನ್ನು ಉತ್ತಮಪಡಿಸುವ ಯೋಚನೆ ಮಾಡುತ್ತೇವೆಂದು ಹಿಂದೆ ರಾಜಪ್ರಮುಖರು ಸಹ ಅವರ ಭಾಷಣದಲ್ಲಿ ಹೇಳಿದ್ದಾರೆ. ಒಟ್ಟಿನಲ್ಲಿ ನಾನು ಹೇಳುವುದೇನೆಂದರೆ, ಇವು ಸಾರ್ವಜನಿಕರಿಂದ ಸಾಲ ಪಡೆದು ತಂದಿರತಕ್ಕ ಹಣವನ್ನು ಹಾಕಿ ನಡೆಸುತ್ತಿರತಕ್ಕ ಉದ್ಯಮಗಳು. ಇವುಗಳಲ್ಲಿ ಸಾರ್ವಜನಿಕರಿಗೆ ಕೊಡಬೇಕಾದ ಬಡ್ಡಿಯನ್ನು ಕೊಟ್ಟು ಅದರ ಮೇಲೆ ಲಾಭ ಬರಬೇಕು ಎನ್ನುವ ದೃಷ್ಟಿಯಿಂದ ಕೆಲಸ ಕಾರ್ಯಗಳನ್ನು ನಡೆಸಬೇಕು ಎನ್ನುವ ತತ್ವದಿಂದ ಹೇಳುತ್ತಿದ್ದೇನೆ. ಸರ್ಕಾರದವರು ಈ ದೃಷ್ಟಿಯಿಂದ ಕೈಗಾರಿಕೆ ಉದ್ಯಮಗಳನ್ನು ನಡೆಸುತ್ತಿಲ್ಲವೆಂದು ನನ್ನ ಭಾವನೆ.

ಎರಡನೆಯದು, Government Electric Factory ವಿಷಯ. ಈ ಫ್ಯಾಕ್ಟರಿಯಲ್ಲಿ ಪ್ಲಾಸ್ಟಿಕ್ ವಿಭಾಗವನ್ನು ಬೇರೆ ಮಾಡಿದರು. ಇದನ್ನು ಒಂದು ಖಾಸಗಿ ಸಂಸ್ಥೆಗೆ ವಹಿಸಿದರು. ಆ ಸಂಸ್ಥೆಯವರು ಯಂತ್ರೋಪಕರಣಗಳನ್ನು ತರಿಸುವುದಕ್ಕೆ ಮತ್ತು working capital ಗೋಸ್ಕರ ಸರ್ಕಾರದಿಂದ ಹಣವನ್ನು ತೆಗೆದುಕೊಂಡಿದ್ದಾರೆ. ಈ ಹಣವನ್ನು ಅವರ ಸ್ವಂತ ಹೆಸರಿನಲ್ಲಿಟ್ಟು ಕೊಂಡಿದ್ದಾರೆ. ಅಕೌಂಟೆಂಟ್ ಜನರಲ್ ಅವರು ಅವರ ವರದಿಯಲ್ಲಿ ಹೇಳಿರುವುದನ್ನು ನಾನು ಓದುತ್ತೇನೆ.

P. No. 13: "The Company has drawn a sum of Rs. 33.98 lakhs, in lump, from Government, for the acquisition of Capital Assets and for meeting the working expenses of the two undertakings referred to above and has been depositing the drawings in a private bank, pending actual expenditure."

ಇದು ಬಹಳ ತಪ್ಪು.

"Even the amounts drawn for working expenses have been charged to Capital instead of to current revenue."

ಇದೂ ಬಹಳ ತಪ್ಪು.

"The realisations on account of sale proceeds are not remitted in—to the Treasury but are utilised for expenditure on the undertakings" Government undertaking ಎಂದು ಒಪ್ಪಿಕೊಂಡು, ಪ್ರಾರಂಭಮಾಡಿ ದುಡ್ಡು ತೆಗೆದು ಕೊಂಡು, ಪದಾರ್ಥಗಳು ವ್ಯಾಪಾರವಾದರೆ ಸರ್ಕಾರದ ಖಜಾನೆಗೆ ಇರಸಾಲು ಮಾಡುತ್ತಿಲ್ಲ.

"Accounts are not rendered monthly to the Audit office for the amounts received and payments made."

ಎಂದು ಅಕೌಂಟೆಂಟ್ ಜನರಲ್‌ರವರು ಯಾವ ಯಾವ ಲೋಪದೋಷಗಳಿವೆ ಎಂಬುದನ್ನೆಲ್ಲ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆನ್ನುವುದನ್ನು ಸಹ ನಾವು ಎದುರು ನೋಡುತ್ತಿದ್ದೇವೆಂದು ಬರೆದಿದ್ದಾರೆ. ಆ ರೀತಿ ಇದುವರೆಗೂ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದೆ ಇದ್ದರೆ ಸರ್ಕಾರದವರು ಕೂಡಲೆ ಇದಕ್ಕೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಪೋರ್ಸ್‌ಲೈನ್ ಫ್ಯಾಕ್ಟರಿಯಲ್ಲಿ N. G. K. ಸ್ಕೀಂ ಜಾರಿಗೆ ತಂದರು. ಅದಕ್ಕೆ ಜಪಾನ್ ದೇಶದಿಂದ ತಜ್ಞರನ್ನು (experts) ಕರೆಸಿದರು. ಜಪಾನ್ ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ಇಂಡಿಯಾ ಸರ್ಕಾರದ ಮುಖಾಂತರ ಒಂದು ಒಪ್ಪಂದವಾಗಿ N. G. K. Scheme ಎಂದು high tension insulators ತಯಾರಿಸುವುದಕ್ಕೆ ಒಂದು ಯೋಜನೆಯನ್ನು ಮಾಡಿದ್ದಾರೆ. ಆ ತಜ್ಞರು ಎಷ್ಟು ದಿವಸಗಳಿಂದ ಇದ್ದಾರೆಂದರೆ ಎರಡು ಮೂರು ವರ್ಷಗಳಿಂದ ಇದ್ದಾರೆಂದು ಕಾಣುತ್ತದೆ. ಮೊದಲಿನ ಅಂದಾಜು ಪ್ರಕಾರ 64 ಲಕ್ಷ ರೂಪಾಯಿಗಳು ಅದಕ್ಕೆ ಖರ್ಚಾಗಬೇಕಾಗಿತ್ತು. ಆದರೆ ಈಗ ರಿವೈಸ್ ಆಗಿರುವ ಅಂದಾಜಿನ ಪ್ರಕಾರ 83 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಇನ್ನೂ ಆ ಕೆಲಸ ಮುಗಿದಿಲ್ಲ. ಫೆಬ್ರುವರಿ ತಿಂಗಳಿನಿಂದ ತಯಾರು ಮಾಡಲು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದರು. ಇದುವರೆಗೆ ಎಷ್ಟು ತಯಾರಾಗಿದೆ ಎಂದು ಗೊತ್ತಿಲ್ಲ. ಒಂದು ವರ್ಷಕ್ಕೆ ಮೂರು ಸಾವಿರ ಟನ್ high tension insulators ತಯಾರಾಗಬೇಕು. ಇವು Sharavathi Hydro-electric Scheme ಮತ್ತು ಮೈಸೂರು ಸಂಸ್ಥಾನದಲ್ಲಿರತಕ್ಕ ಇತರ ವಿದ್ಯುಚ್ಛಕ್ತಿ ಯೋಜನೆಗಳಿಗೆ ಬೇಕಾಗುತ್ತದೆ. ಅದಕ್ಕೋಸ್ಕರ ಈ ಯೋಜನೆಯನ್ನು ಮಾಡಿದ್ದೇವೆಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಜಪಾನ್ ದೇಶದಿಂದ ತಜ್ಞರು ಬಂದು ಇಲ್ಲ

ರುವುದಕ್ಕೆ ತಕ್ಕಷ್ಟು ಪ್ರಯೋಜನ ನಮಗೆ ಆಗಿದೆಯೇ ? ಹಾಗಿಲ್ಲದೆ ಇದ್ದರೆ ಯಾತಕ್ಕೆ ಅವರಿಂದಾಗುವ ಪ್ರಯೋಜನವನ್ನು ಪಡೆಯಲು ನಿಧಾನಮಾಡುತ್ತಿದ್ದೀರಿ ? ಸರ್ಕಾರದ ಮೇಲ್ವಿಚಾರಣೆ ಸರಿಯಾಗಿದೆಯೇ ಎಂದು ನೋಡಬೇಕು. ಇದು ಬಹಳ ಅಗತ್ಯ.

ಮೂರನೆಯದು, ಸಿಮೆಂಟ್ ಮಾರಾಟಕ್ಕೆ ಲೈಸೆನ್ಸ್ ಕೊಟ್ಟಿದ್ದಾರೆ. ಸಿಮೆಂಟ್ ನಮ್ಮಲ್ಲಿಯೇ ತಯಾರಾದರೂ ಕೂಡ ಅನೇಕ ಬಡವರಿಗೆ ಪರ್ಮಿಟ್ ಸಿಕ್ಕುತ್ತಿಲ್ಲ. ನ್ಯಾಯವಾದ ಬೆಲೆಗೆ ಸಿಮೆಂಟ್ ಕೊಡುತ್ತಿಲ್ಲವೆಂದು ಎಲ್ಲೆಲ್ಲೂ ಪುಕಾರುಗಳಿವೆ. ಸರ್ಕಾರದ ಧಾರಣೆಗೆ ಕೊಡುವುದಕ್ಕೆ ಬದಲಾಗಿ ಹೆಚ್ಚು ಧಾರಣೆಗೆ ಕೊಟ್ಟರೆ ಜನರಿಗೆ ಬಹಳ ತೊಂದರೆ ಯಾಗುತ್ತದೆ. ಈ ವಿಷಯದಲ್ಲಿ ಸರ್ಕಾರದವರು ದಯವಿಟ್ಟು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಸರ್ಕಾರದವರು ಸಾರ್ವಜನಿಕರಿಂದ ಸಾಲವಾಗಿ ತಂದ ಹಣದಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಬೆಳ್ಳಾರ ಚಿನ್ನದಗಣಿಯಲ್ಲಿ ಕಳೆದು ಬಿಟ್ಟರು. ಒಂದು ಉದ್ಯಮವನ್ನು ತೆಗೆದುಕೊಂಡರೆ ಮೊದಲು ಅದರ ಬಗ್ಗೆ ಪರೀಕ್ಷೆ ಮಾಡಬೇಡವೆ? ಹತ್ತು ಲಕ್ಷ ರೂಪಾಯಿಗಳನ್ನು ಕಳೆದಮೇಲೆ ತಜ್ಞರನ್ನು (experts) ಕರೆಸಿ ಪರೀಕ್ಷೆ ಮಾಡಿಸುತ್ತಿದ್ದಾರೆ. ಹತ್ತು ಲಕ್ಷ ರೂಪಾಯಿಗಳನ್ನು ಯಾರ ದುಡ್ಡೆಂದು ಯಾರನ್ನೂ ಕೇಳದೆ ಒಂದು ಉದ್ಯಮಕ್ಕೆ ಹಾಕಿ ಅದನ್ನು ಪ್ರಾರಂಭಮಾಡಿ, ನಾಲ್ಕು ವರ್ಷಗಳ ಕಾಲ ನಡೆಸಿ ಅನಂತರ ಅಲ್ಲಿ ಚಿನ್ನವಿಲ್ಲ, ಎಷ್ಟೇ ಪ್ರಯತ್ನಪಟ್ಟರೂ ಸಹ ಅಲ್ಲಿ ಚಿನ್ನ ಸಿಕ್ಕುವುದಿಲ್ಲವಾದುದರಿಂದ ಕೆಲಸ ಕಾರ್ಯಗಳನ್ನು ನಿಲ್ಲಿಸಿ ಬಿಡುತ್ತೇವೆಂದರೆ ಹೇಗೆ ? ಈ ಉದ್ಯಮವನ್ನು ಪ್ರಾರಂಭಮಾಡುವುದಕ್ಕೆ ಮೊದಲೇ ಸರಿಯಾಗಿ ವಿಮರ್ಶೆಮಾಡಬೇಕಾಗಿತ್ತು. ಹಾಗಿಲ್ಲದೆ ಈ ರೀತಿ ಏಕಾಏಕಿ ಒಂದು ಉದ್ಯಮಕ್ಕೆ ಕೈಹಾಕಿ, ಸಾರ್ವಜನಿಕರ ದುಡ್ಡನ್ನು, ಹತ್ತು ಲಕ್ಷ ರೂಪಾಯಿಗಳನ್ನು ಕಳೆದುಬಿಟ್ಟಿರಲ್ಲ, ಇದು ಎಂಥ ಅನ್ಯಾಯ ! ಈ ರೀತಿ ಮಾಡಬಾರದು.

ನಮ್ಮ ದೇಶದಲ್ಲಿ ಗಂಧಕವಿಲ್ಲ. ನಮಗೆ ಬೇಕಾದ ಗಂಧಕವೆಲ್ಲ ಹೊರಗಡೆಯಿಂದ ಬರಬೇಕು. ಚಿತ್ರದುರ್ಗ ಜಿಲ್ಲೆಯಲ್ಲಿ ಇಂಳಗದಾಳ್‌ಬಳಿ ಗಂಧಕದ ಅದುರು ಸಿಕ್ಕುತ್ತದೆಂದು ಗೊತ್ತಾಗಿದೆ. ಇದನ್ನು ಭೂಮಿಯಿಂದ ತೆಗೆದು ಯಾವರೀತಿ ಉಪಯೋಗ ಮಾಡಿಕೊಳ್ಳಬೇಕು ಎನ್ನುವುದಕ್ಕೆ ತಕ್ಷಣ ಒಂದು ಯೋಜನೆಯನ್ನು ತಯಾರು ಮಾಡಿದರೆ ನಮಗೆ ಅನುಕೂಲವಿದೆ ಎಂದು Mineral Development Committeeಯವರು ಸಲಹೆಮಾಡಿದ್ದರು. ಅದು ಎಷ್ಟರಮಟ್ಟಿಗೆ ಜಾರಿಗೆ ಬಂದಿದೆ ಎಂಬುದು ಗೊತ್ತಾಗಿಲ್ಲ. ಒಂದು ವರ್ಷದಿಂದೀಚೆಗೆ Mineral Development Committeeಯವರ ಸಲಹೆಗಳನ್ನು ಯಾವರೀತಿ ಜಾರಿಗೆ ತಂದಿದ್ದಾರೆನ್ನುವುದನ್ನು ಸಹ ಸರ್ಕಾರದವರು ತಿಳಿಯಪಡಿಸಬೇಕು. ಇಂಥದೆಲ್ಲ ಬಹಳ ಅಗತ್ಯ.

ಸರ್ಕಾರದವರು ನಡೆಸುತ್ತಿರತಕ್ಕ ಯಾವ ಕೈಗಾರಿಕೆಯನ್ನೇ ತೆಗೆದುಕೊಂಡರೂ, ಸಾರ್ವಜನಿಕರು ಯಾವ ರೀತಿ ತಮ್ಮ ಕೈಗಾರಿಕೆಗಳನ್ನು ಯಾವರೀತಿ ಲಾಭದಾಯಕವಾಗಿ ನಡೆಸುತ್ತಾರೆಯೋ ಆ ರೀತಿ ಸರ್ಕಾರದವರು ನಡೆಸುವುದಕ್ಕೆ ಪ್ರಯತ್ನಮಾಡುವುದಿಲ್ಲ. ಆ ರೀತಿ ಲಾಭದಾಯಕವಾಗುವಂತೆ ಮಾಡುವುದಕ್ಕೆ ಏನಾದರೂ ಏರ್ಪಾಡು ಮಾಡಬೇಕು. ಅಂಥ ಏರ್ಪಾಡುಮಾಡದೆ ಹೋದರೆ ನಾವು ಏನು ಜವಾಬ್ದಾರಿಯನ್ನು ಹೊತ್ತುಕೊಂಡಿದ್ದೇವೆಯೋ ಆ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುವುದಿಲ್ಲ. ಆದುದರಿಂದ ಸರ್ಕಾರಿ ಕೈಗಾರಿಕೆಗಳೂ ಲಾಭದಾಯಕವಾಗುವಂತೆ ಮಾಡುವುದು ಬಹಳ ಮುಖ್ಯ.

1-30 P.M.

ಇನ್ನೊಂದು, ಮೈಸೂರಿನ ಡೈಕ್ರೊಮೇಟ್ ಫ್ಯಾಕ್ಟರಿಯನ್ನು ಈಗಾಗಲೆ ಮುಚ್ಚಿದ್ದಾರೆ. ಇದರಿಂದ ಲಕ್ಷಾಂತರ ರೂಪಾಯಿನ ನಷ್ಟ. ಈ ರೀತಿ ನಷ್ಟವಾಗಬೇಕಾದರೆ ಕಾರಣವಿರಬೇಕು. ಇಂಡಿಯಾದಲ್ಲಿ ಹನ್ನೊಂದು ಡೈಕ್ರೊಮೇಟ್ ಫ್ಯಾಕ್ಟರಿಗಳಿವೆ. ಅದನ್ನೆಲ್ಲಾ ಮುಚ್ಚಿದ್ದಾರೆಯೆ ? ಇಲ್ಲ. ಮೈಸೂರು ಸರ್ಕಾರದ ಡೈಕ್ರೊಮೇಟ್ ಫ್ಯಾಕ್ಟರಿಯನ್ನು ಮಾತ್ರ ಮುಚ್ಚಿದ್ದಾರೆ. ಈಗ ಮಿನಿಮಮ್ ಸ್ಟ್ಯಾಫ್ ಇಟ್ಟು ನಡೆಸುತ್ತಿದ್ದೇವೆ ಅಥವಾ ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್ ಫ್ಯಾಕ್ಟರಿಯವರಿಗೆ ವಹಿಸಿದ್ದೇವೆ ಎಂದು ಹೇಳುತ್ತಾರೆ. ಇದನ್ನು ನೋಡಿದರೆ ಇವರಿಗೆ ಕೈಗಾರಿಕೆ ಉದ್ಯಮದ ಅನುಭವವಿಲ್ಲವೆಂದು ಕಾಣುತ್ತದೆ. ಸಂಪೂರ್ಣವಾಗಿ ಅನುಭವ ಪಡೆದು ನಡೆಸಬೇಕು. ಸಾರ್ವಜನಿಕ ಹಣದಲ್ಲಿ ಈ ರೀತಿ ಜೂಜು ಆಡಬಾರದು ಎಂಬುದನ್ನು ಈ ಸಂದರ್ಭದಲ್ಲಿ ಗಮನಕ್ಕೆ ತರುತ್ತೇನೆ.

ಮತ್ತೊಂದು ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ. ಇದರಲ್ಲಿ ತಯಾರುಮಾಡಿರುವ ಮಾಲನ್ನು ಮಾರುವುದಕ್ಕಾಗುವುದಿಲ್ಲ. ಏಕೆಂದರೆ ಟಾಟಾ ಕಂಪೆನಿಯವರು ತಯಾರು ಮಾಡಿರುವ ಇಂಪ್ಲಿಮೆಂಟ್ಸ್ ಬಹಳ ಚೆನ್ನಾಗಿವೆ. ಟಾಟಾ ಕಂಪೆನಿಯ ಪದಾರ್ಥಗಳೊಂದಿಗೆ ನಮ್ಮ ಮೈಸೂರಿನಲ್ಲಿ ತಯಾರಾಗತಕ್ಕವು ನಿಲ್ಲಲಾರದೆ ಬಹಳ ಕಷ್ಟವಾಗಿದೆ. ಇದಕ್ಕೆ ಕಾರಣವೇನು ? ನಾವೂ ಸಹ ಇತರ ಕಂಪೆನಿಗಳವರು ಹೇಗೆ ತಯಾರಿಸುತ್ತಾರೆಂಬುದನ್ನು ತಿಳಿದುಕೊಂಡು ಹೆಚ್ಚಾಗಿ ಸಂಶೋಧನೆ ನಡೆಸಿ ಲಾಭದಾಯಕವಾಗಿ ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯು ಕೆಲಸಮಾಡುವಂತೆ ಮಾಡಬೇಕೇ ವಿನಾ ಸರ್ಕಾರಿ ಹಣದಿಂದ ಸಾಮಾನುಗಳನ್ನು ತಯಾರಿಸಿ ದಾಸ್ತಾನಿಡಬಾರದು. ಈ ಫ್ಯಾಕ್ಟರಿ ಲಾಭದಾಯಕವಾಗಿ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ ಈ ಸಲಹೆ ನೀಡುತ್ತಿದ್ದೇನೆ.

*ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಸ್ವಾಮಿ, ಸಭೆಯ ಮುಂದಿರುವ ಡಿಮ್ಯಾಂಡ್ ಮನವಿಯನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅರಸೀಕೆರೆ ತಾಲ್ಲೂಕು ಬಾಗೇಶಪುರದಬಳಿ ಬಿಳಿಯ ಮಣ್ಣು ಸಿಕ್ಕಿ ಅದರಿಂದ ಪಿಂಗಾಣಿ ಸಾಮಾನನ್ನು ತಯಾರಿಸುತ್ತಿದ್ದಾರೆ. ಆ ಮಣ್ಣು ಹೊರಕ್ಕೆ ಹೋಗುತ್ತಿದೆ. ಅಲ್ಲಿ ಬರೀ ಮಣ್ಣನ್ನು ಶುದ್ಧಿಮಾಡಿ ಹೊರಕ್ಕೆ ಕಳಿಸುತ್ತಿದ್ದಾರೆ. ಅರಸೀಕೆರೆ ತಾಲ್ಲೂಕು ಕೈಗಾರಿಕೆಯಲ್ಲಿ ಬಹಳ ಹಿಂದುಳಿದಿದೆ. ಅಲ್ಲಿ ಯಾವ ಕೈಗಾರಿಕೆಯೂ ಇಲ್ಲದೆ ಅಲ್ಲಿರುವ ಬಡಜನರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಅಲ್ಲಿಂದ ಮಣ್ಣನ್ನು ಹೊರಕ್ಕೆ ಕಳುಹಿಸುವುದಕ್ಕೆ ಬದಲಾಗಿ ಅದೇ ಜಾಗದಲ್ಲಿ ಒಂದು ಕಾರ್ಖಾನೆ ಸ್ಥಾಪಿಸಿ ಪಿಂಗಾಣಿ ಸಾಮಾನನ್ನು ತಯಾರಿಸಿದರೆ ಸರ್ಕಾರಕ್ಕೆ ಈಗ ಅಲ್ಲಿನ ಬಿಳಿಯ ಮಣ್ಣನ್ನು ಹೊರಕ್ಕೆ ಕಳಿಸುವುದರಿಂದ ಎಷ್ಟು ಆದಾಯ ಬರುತ್ತಿದೆಯೋ ಅದಕ್ಕಿಂತ ಹೆಚ್ಚು ಆದಾಯ ಬರುತ್ತದೆ. ಕೂಡಲೇ ಅಲ್ಲಿ ಒಂದು ಕಾರ್ಖಾನೆ ಸ್ಥಾಪನೆಮಾಡಿ ಮಣ್ಣಿನ ಪಾತ್ರೆಗಳನ್ನು ಅಲ್ಲಿ ತಯಾರು ಮಾಡಬೇಕು, ಮತ್ತು ಅಲ್ಲಿ ಶುದ್ಧವಾದ ಬಳಪದಕಲ್ಲು ಸಹ ಸಿಕ್ಕುತ್ತದೆ, ಅದರಿಂದ ಪಾತ್ರೆಗಳನ್ನು ತಯಾರಿಸಿ ವರಮಾನವನ್ನು ಕೂಡ ಹೆಚ್ಚಿಸಬಹುದು. ಮಾನ್ಯ ಸಚಿವರು ಆ ಕಡೆ ಪ್ರವಾಸಮಾಡಿದಾಗ ಇದನ್ನು ಪರಿಶೀಲನೆ ಮಾಡಿದ್ದಾರೆ. ಸರ್ಕಾರದವರು ಈ ಎರಡು ಕೈಗಾರಿಕೆಗ

(ಶ್ರೀ ಬಿ. ಚಿಕ್ಕಣ್ಣ).

ಳನ್ನೂ ಅಲ್ಲಿ ಸ್ಥಾಪನೆಮಾಡಿ ಕೆಲಸ ಚೆನ್ನಾಗಿ ನಡೆಯುವಂತೆ ಏರ್ಪಾಡುಮಾಡಿ ಅಲ್ಲಿನ ಜನರಿಗೆ ಹೊಟ್ಟೆಗೆ ಅನ್ನ ಸಿಕ್ಕುವಹಾಗೆ ಮಾಡುತ್ತಾರೆಂದು ನಂಬುತ್ತೇನೆ.

ಇದಕ್ಕೆ ಸಂಬಂಧಪಟ್ಟಹಾಗೆ ಅರಸೀಕೆರೆಯಲ್ಲಿ ನಾರಿನ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಮಾನ್ಯ ಸಚಿವರು ಅಲ್ಲಿಗೆ ಬಂದಾಗ ಮನವಿಮಾಡಿದ್ದಾರೆ. ಅಲ್ಲಿ ಒಂದು ಸಲಕ್ಕೆ 8-10 ಲಕ್ಷ ಕಾಯಿ ಸುಲಿದು ಮಾರಾಟಕ್ಕೆ ತರುತ್ತಾರೆ. ಇಷ್ಟು ನಾರೂ ಕೂಡ ಅನ್ಯಾಯವಾಗುತ್ತಿದೆ. ಅಲ್ಲಿ ನಾರಿನ ಕೈಗಾರಿಕೆಯನ್ನು ಸ್ಥಾಪಿಸಿ ಒಂದು ಕಾರ್ಖಾನೆ ಏರ್ಪಡಿಸಿದರೆ ದೇಶಕ್ಕೆ ಉಪಯುಕ್ತವಾದ ಹಗ್ಗವನ್ನು ತಯಾರಿಸಬಹುದು. ಇದರ ಉಪಯೋಗ ನಮ್ಮ ದೇಶಕ್ಕೆ ಎಷ್ಟರಮಟ್ಟಿಗಿದೆಯೆಂಬುದನ್ನು ಹೆಚ್ಚಾಗಿ ಹೇಳಬೇಕಾಗಿಲ್ಲ. ಮೈಸೂರು ದೇಶದಲ್ಲಿ ಶೇಕಡ 80 ಮಂದಿ ವ್ಯವಸಾಯಗಾರರಿರುವುದರಿಂದ ಹಗ್ಗಗಳ ಆವಶ್ಯಕತೆ ಬಹಳವಾಗಿದೆ. ಈಗ ಒಂದು ಮಾರು ಇರುವ ಒಳ್ಳೆಯ ಹಗ್ಗಕ್ಕೆ 3-4 ಆಣೆಗಳ ಬೆಲೆಯಿದೆ. ಹೊರದೇಶದಿಂದ, ತಿರುವಾಂಕೂರು—ಕೊಚಿನ್ನಿಂದ ಅಲ್ಲಿ ಹಗ್ಗ ತಯಾರಾಗಿ ಇಲ್ಲಿಗೆ ಬಂದು ಮಾರಾಟವಾಗುತ್ತಿದೆ. ನಮ್ಮಲ್ಲಿ ಸಿಕ್ಕುವ ನಾರು ಅನ್ಯಾಯವಾಗುತ್ತಿದೆ. ಆದ್ದರಿಂದ ಈಗಲಾದರೂ ಅಲ್ಲಿ ನಾರಿನ ಕೈಗಾರಿಕೆಗೆ ತಕ್ಕ ಏರ್ಪಾಡು ಮಾಡಬೇಕೆಂದು ಮನವಿ ಮಾಡುತ್ತೇನೆ.

ಇದಕ್ಕೆ ಸಂಬಂಧಪಟ್ಟಹಾಗೆ ಅರಸೀಕೆರೆ ತಾಲ್ಲೂಕಿನಲ್ಲಿ ಬಹಳ ಪ್ರಸಿದ್ಧವಾದ ಹತ್ತಿಯಿದೆ. ಈಜಿಪ್ಷಿಯನ್ ಹತ್ತಿಬಿಟ್ಟರೆ ಅರಸೀಕೆರೆಯಲ್ಲಿ ಸಿಕ್ಕುವ ಹತ್ತಿ ಎರಡನೆಯ ದರ್ಜೆಯದು. ಅದನ್ನು ಎಂ.ಎ. V ಹತ್ತಿ ಎಂದು ಕರೆಯುತ್ತಾರೆ. ಅರಸೀಕೆರೆಯಲ್ಲಿ ಹತ್ತಿ ಕಾರ್ಖಾನೆ ಸ್ಥಾಪಿಸಿದರೆ ಜನರಿಗೆ ಅನುಕೂಲವಾಗುತ್ತದೆ; ರೈತರಿಗೆ ಒಳ್ಳೆಯ ಬೆಲೆ ಸಿಕ್ಕುವುದಲ್ಲದೆ ಜನತೆಗೂ ನೆರವುಸಿಕ್ಕಿ ಅನುಕೂಲವಾಗುತ್ತದೆ. ಸರ್ಕಾರದವರು ಅದಷ್ಟು ಜಾಗ್ರತೆ ಇದಕ್ಕೆ ಏರ್ಪಾಡುಮಾಡಬೇಕೆಂದು ಆ ತಾಲ್ಲೂಕಿನ ಜನರೆಲ್ಲರೂ ಹತ್ತಾರುವರ್ಷಗಳಿಂದ ಸರ್ಕಾರದಲ್ಲಿ ಮನವಿ ಮಾಡಿದ್ದಾರೆ. ಆದರೆ ಸರ್ಕಾರದವರು ಇದಕ್ಕೆ ಗಮನ ಕೊಟ್ಟಹಾಗೆ ಕಾಣಲಿಲ್ಲ. ಈಗಲಾದರೂ ಕೂಡ ನಾನು ತಿಳಿಸಿದಂಥ 3-4 ಸಂದರ್ಭಗಳಲ್ಲೂ ಕೂಡ ಜಾಗ್ರತೆ ತಕ್ಕ ಏರ್ಪಾಡು ಮಾಡಿ ಕೈಗಾರಿಕೆಗಳನ್ನು ಏರ್ಪಡಿಸುವುದನ್ನು ಕಾರ್ಯರೂಪಕ್ಕೆ ತಂದು ಅನುಕೂಲಪಡಿಸಬೇಕೆಂದು ಮನವಿ ಮಾಡುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಡಿಮ್ಯಾಂಡ್ ನಂಬರು 26 ಮತ್ತು 41ರ ಬಗ್ಗೆ ಸರ್ಕಾರದವರ ಹಣದ ಬೇಡಿಕೆಯನ್ನು ಅನುಮೋದಿಸುವುದಕ್ಕೆ ಮೊದಲು ಒಂದೆರಡು ವಿಷಯಗಳನ್ನು ಪ್ರಸ್ತಾಪಿಸಲು ಬಯಸುತ್ತೇನೆ. ಇಡೀ ನಮ್ಮ ಸಂಸ್ಥಾನದ ಆಯವ್ಯಯದ ಅಂದಾಜನ್ನು ನೋಡಿದರೆ ಈ ಕೈಗಾರಿಕೆಗಳ ಬಗ್ಗೆ ನಾವು ಖರ್ಚು ಮಾಡುತ್ತಿರುವ ಹಣ ಬಹಳ ಹೆಚ್ಚಿನದೆಂದು ಮನವರಿಕೆಯಾಗುತ್ತದೆ. ಹಾಗಿದ್ದರೂ ಕೂಡ ಈ ಕೈಗಾರಿಕೆಗಳಿಂದ ಎಷ್ಟು ಆದಾಯ ಸರ್ಕಾರಕ್ಕೆ ಬರಬೇಕೋ ಅಷ್ಟು ಬಾರದಿರುವುದರಿಂದ ನಿಜವಾಗಿಯೂ ಈ ಕೈಗಾರಿಕೆಗಳಲ್ಲಿ ಮತ್ತು ಇವುಗಳನ್ನು ನಡೆಸುವುದರಲ್ಲಿ ಏನೋ ಒಂದು ಲೋಪವಿದೆಯೆಂಬುದು ಸ್ವಯಂವಿದಿತವಾಗಿದೆ. ಸರ್ಕಾರದವರು ಹೊಸಹೊಸ ಉದ್ಯಮ, ಕೈಗಾರಿಕೆಗಳನ್ನು ಪ್ರಾರಂಭಿಸುವುದನ್ನು ಬಿಟ್ಟು ಇರತಕ್ಕ ಕೈಗಾರಿಕೆಗಳಲ್ಲಿ ಏನೇನು ಲೋಪಗಳಿವೆಯೆಂಬುದನ್ನು ವಿಮರ್ಶೆ ಮಾಡಿ ಅವನ್ನು ಸರಿಪಡಿಸಿ ಕೈಗಾರಿಕೆಗಳು ಲಾಭದಾಯಕವಾಗಿ ನಡೆಯುವಂತೆ ಮಾಡುವುದಕ್ಕೆ ಕಡ್ಡಾಯವಾಗಿ ಗಮನ ಕೊಡಬೇಕು. ಎರಡನೆಯದಾಗಿ ಸರ್ಕಾರದವರು ಅನೇಕ ಖಾಸಗಿ ಉದ್ಯಮಗಳಲ್ಲಿ ಬಂಡವಾಳವನ್ನು ಷೇರು ರೂಪದಲ್ಲಿ ಹಾಕಿದ್ದಾರೆ. ಅವುಗಳು ಲಾಭದಾಯಕವಾಗಿ ನಡೆಯಬೇಕಾದರೆ ಅಲ್ಲಿನ ಆಡಳಿತದಲ್ಲಿ ಲೋಪದೋಷಗಳಿರಬಾರದು. ಸರ್ಕಾರದವರು ಷೇರು ಹಾಕಿರುವ ಉದ್ಯಮಗಳನ್ನು ಸರ್ಕಾರದವರೇ ನೇರವಾಗಿ ತೆಗೆದುಕೊಂಡು ನಡೆಸುವುದಕ್ಕೆ ಏರ್ಪಾಡು ಮಾಡಬೇಕು.

ಚನ್ನಪಟ್ಟಣದಲ್ಲಿ ಒಂದು ಸ್ಪನ್‌ಸಿಲ್ಕ್ ಕಾರ್ಖಾನೆಯಿದೆ. ಅಲ್ಲಿ ಕೂಡ ಸರ್ಕಾರದ ಷೇರು ಬಂಡವಾಳವಿದೆ. ಸರ್ಕಾರದವರು ಅಲ್ಲಿಗೆ ಸುಮಾರು ನಾಲ್ಕು ಜನ ಡೈರೆಕ್ಟರುಗಳನ್ನು ನಾಮಕರಣ ಮಾಡುತ್ತಾರೆ. ಇಡೀ ಭಾರತದೇಶದಲ್ಲಿ ಗೃಹ ಕೈಗಾರಿಕೆಗಳಲ್ಲಿ ಪ್ರಗತಿಯುತವಾದುದು ರೇಷ್ಮೆ ಕೈಗಾರಿಕೆಯೆಂದು ಭಾವಿಸಿದ್ದೇವೆ. ಇಡೀ ಭಾರತದಲ್ಲಿರುವ ಸ್ಪನ್‌ಸಿಲ್ಕ್ ಫ್ಯಾಕ್ಟರಿ ಇದೊಂದೇ. ಹಾಗಿದ್ದರೂ ಚನ್ನಪಟ್ಟಣದಲ್ಲಿರುವ ಫ್ಯಾಕ್ಟರಿ ಚೆನ್ನಾಗಿ ಕೆಲಸಮಾಡುತ್ತಿಲ್ಲವೆಂದು ಅನೇಕ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಸರ್ಕಾರದವರು ಈ ಫ್ಯಾಕ್ಟರಿಯವರಿಗೆ 15 ಅಥವಾ 16 ಲಕ್ಷ ರೂಪಾಯಿಗಳ ಸಾಲ ಕೊಟ್ಟಿದ್ದಾರೆ. ಮತ್ತೆ ಸಾಲಕ್ಕೆ ಕೋರಿಕೆ ಬಂದಿದೆ. ಸರ್ಕಾರದವರು ಇದರಲ್ಲಿ ಷೇರು ರೂಪವಾಗಿ ಬಂಡವಾಳವಿಟ್ಟಿದ್ದರೂ ಸರ್ಕಾರದಿಂದ ನಾಮಕರಣ ಮಾಡಲ್ಪಟ್ಟ ನಾಲ್ಕು ಜನ ಡೈರೆಕ್ಟರುಗಳಿದ್ದರೂ ಈ ಫ್ಯಾಕ್ಟರಿಯಲ್ಲಿರುವ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನಮಾಡುತ್ತಿಲ್ಲ. ಇದಕ್ಕೆ ಕೂಡಲೆ ಗಮನಕೊಟ್ಟು ಆಡಳಿತ ಸೂತ್ರವನ್ನು ಸರ್ಕಾರ ವಹಿಸಿಕೊಂಡು ಈ ಫ್ಯಾಕ್ಟರಿಯನ್ನು ನಡೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಹಣ್ಣುಗಳು ಕೆಡದಂತೆ ಶೇಖರಿಸಿಡಲು ಒಂದು ಕೈಗಾರಿಕೆಯನ್ನು ಸ್ಥಾಪಿಸಬೇಕೆಂದು ಹಿಂದೆ ಅನೇಕ ಸಲ ಚರ್ಚೆಯಾಗಿದೆ, ಅನೇಕ ಸಂದರ್ಭಗಳಲ್ಲಿ ಸಲಹೆ ಮಾಡಿದೆ. ಅದರಂತೆ ಮೈಸೂರು ಪಟ್ಟಣದ ಬಳಿ ಒಂದು ಕೈಗಾರಿಕೆ ಸ್ಥಾಪನೆ ಮಾಡಲು ಸರ್ಕಾರದವರು ಮನಸ್ಸು ಮಾಡಿದ್ದಾರೆಂದು ತಿಳಿದುಬಂದಿದೆ. ಆದರೆ ಬೆಂಗಳೂರಿನ ಸುತ್ತುಮುತ್ತಲೂ ಬೆಳೆಯುವಷ್ಟು ಹಣ್ಣುಗಳು ಮೈಸೂರಿನ ಕಡೆ ಇಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ಅಂಶ. ಹಾಗಿರುವಾಗ ಯಾವ ಸೌಲಭ್ಯವಿದೆಯೆಂದು ಇದಕ್ಕೆ ಮೈಸೂರನ್ನು ಆರಿಸಿದರೋ ಗೊತ್ತಿಲ್ಲ. ಈ ರೀತಿ ಮೈಸೂರಿನಲ್ಲಿ ಮಾಡಬೇಕೆಂದು ಯೋಚಿಸುತ್ತಿದ್ದರೆ ಅದನ್ನು ಬಿಡಬೇಕು. ಈ ಒಂದು ಉದ್ಯಮ ಯಶಸ್ವಿಯಾಗಿಯೂ ಲಾಭದಾಯಕವಾಗಿಯೂ ನಡೆಯಲು ಬೆಂಗಳೂರಿನಲ್ಲಿ ಹೆಚ್ಚು ಸೌಲಭ್ಯವಿದೆ. ಇಲ್ಲಿ ಮಾಡಿದರೆ ಹೆಚ್ಚು ಟ್ರಾನ್ಸ್‌ಪೋರ್ಟೇಷನ್ ಛಾರ್ಜಸ್ ಬೀಳುವುದಿಲ್ಲ, ಖರ್ಚು ಕಡಮೆ. ಹಣ್ಣು ಹೆಚ್ಚಾಗಿ ಬೆಳೆಯದಿರುವ ಕಡೆ ಸ್ಥಾಪಿಸಿದರೆ ಹಣ್ಣುಗಳನ್ನು ದೂರದಿಂದ ಅಲ್ಲಿಗೆ ಸಾಗಿಸುವ ಖರ್ಚು ವಗೈರೆ ಹೆಚ್ಚುತ್ತದೆ. ಆದ್ದರಿಂದ ಬೆಂಗಳೂರೇ ಹಣ್ಣನ್ನು ಕೆಡದಂತೆ ಶೇಖರಿಸಲೂ ಮತ್ತು ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೂ ಯೋಗ್ಯವಾಗಿದೆ ಮತ್ತು ಇದರ ಸುತ್ತುಮುತ್ತ ಹೆಚ್ಚಿನ ಹಣ್ಣು ಬೆಳೆಯುವ ಪ್ರದೇಶವಿದೆ. ಇದನ್ನು ಗಮನಿಸಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*Sri M. RAJASEKHARA MURTHY (Yelandur).—The silk industry is a

cottage industry which is providing subsidiary occupation to the extent of nearly 2 lakhs of families in our State. Even if the Government spend crores of rupees on any other cottage industry, it is not possible to provide employment to the people who are now living in the rural parts to such a large extent. Such an industry has now received a rude shock, particularly after the war. Taking the situation of the troubles that have come up before this industry, the Government have decided to spend to the extent of Rs. 6 crores in the Socond Five-Year Plan. Even the State Government are providing a good sum in their budget. But unfortunately, the amount that is made available both by the Centre as well as the State Government is not being spent in that particular year. The Central Silk Board has now provided to the extent of Rs. 23 lakhs. Till now the amount that is spent so far by the State Government is only Rs. 3·5 lakhs. Even in the State budget, if you look into it, you will find that in the year 1950-51 the total amount provided is Rs. 4 lakhs and the amount spent is Rs. 69,487. 51-52: The amount provided is Rs. 4,21,500 and the amount spent is Rs. 58,240. 1952-53: The amount provided in the budget is Rs. 2,81,000 and the amount spent is Rs. 10,717. 1953-54: The amount provided in the budget is Rs. 3,29,400 and the amount spent is Rs. 88,522. 1954-55: The amount provided is Rs. 3,94,300 and the amount spent is Rs. 2,47,270. 1955-56: The amount provided is Rs. 22,95,400 and the amount that is spent is Rs. 5,67,500. That particular department is not spending the amount that is made available in the Budget. I know the Director of Sericulture is posted with all the problems connected with the silk industry and he has done wonderful service. In spite of that, the schemes have not been executed because there is no adequate staff in the department. Nobody is to be blamed for that. I have tabled cut-motions in this connection even during the previous session that a special officer of the grade of Assistant Director should be appointed only for the purpose of executing the schemes. Even the Central Silk Board has come forward and said that they are going to finance to the extent of 50 per cent that the State Government is going to incur on this account. With all that, the Government have not been able to appoint an officer so far. I expect that the Government will take prompt action in this matter.

The second thing I would like to touch upon is the nationalisation of the Mysore Silk Filature. The Mysore Silk Filature was started about 15 years back with 7 branches and formerly it was providing employment to the extent of nearly 2,000 labourers. Now after the war—of course during the period of war it was able to make some profit—after the war it received a rude shock and some of the branches of the Silk Filature have been closed down for want of finance. The Government have already given a loan of Rs. 11 lakhs and the interest that accrued on this account amounts to about Rs. 2 lakhs. Unless financial help is forthcoming from the State Government or the Government themselves take over this industry and run it under their own management, control and ownership, it is not possible to run this industry on a rational basis. Therefore, in the interests of the sericulturists and also in the interests of the labourers, the Government should take immediate action. This question was raised in 1953. From 1953 till now for the last three years the Government are singing the same song and saying that the file is under consideration. The file is hit like a football from one office to another without securing any goal. The Government seem to have been decided to be undecided, definite to be indefinite. . . .

Mr. SPEAKER.—The Hon'ble Member must close.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ—ಈಗಾಗಲೇ ನಮ್ಮ ಮಾನ್ಯ ಮಿತ್ರರಾದ ಶ್ರೀ ರಾಜಶೇಖರಮೂರ್ತಿಯವರು ರೇಷ್ಮೆ ಕೈಗಾರಿಕೆಯ ಬಗ್ಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿರುತ್ತಾರೆ. ಆದರೆ ನಾನೂ ಮತ್ತು ಈ ಸಾನ್ಯ ಸಭೆಯ ಅನೇಕ ಸದಸ್ಯರೂ ಈ ವಿಚಾರವಾಗಿ ಹಿಂದೆ ಎಷ್ಟೋ ಸಾರ್ತಿ ಅನೇಕ ವಿಚಾರಗಳನ್ನು ಹೇಳಿದ್ದೇವೆ. ಆದಾಗ್ಯೂ ಈ ರೇಷ್ಮೆ ಕೈಗಾರಿಕೆಗೆ ಸರ್ಕಾರದವರು ಯಾವ ಒಂದು ವಿಧವಾದ ಸ್ಫೂರ್ತಿಯನ್ನೂ ಕೊಟ್ಟ ಹಾಗೆ ಕಾಣುವುದಿಲ್ಲ. 1949ರಲ್ಲೇ ಈ ರೇಷ್ಮೆ ತಯಾ

(ಶ್ರೀ ಜಿ. ಪಾಪಣ್ಣ.)

ರಿಕೆಯ ವಿಚಾರದಲ್ಲಿ ಒಂದು ಬೋರ್ಡು ಪ್ರಾರಂಭವಾಯಿತು. ಆಗಿನಿಂದಲೂ ವಿಶೇಷವಾಗಿ ಕೇಂದ್ರ ಸರ್ಕಾರದವರು ಈ ಕೈಗಾರಿಕೆಗೆ ಗ್ರಾಂಟನ್ನು ಕೊಡುತ್ತಿದ್ದಾರೆ. ಈ ಕೈಗಾರಿಕೆಗೆ ಈ ವರ್ಷ ಒದಗಿಸಲಾಗಿದ್ದ 23 ಲಕ್ಷ ರೂಪಾಯಿಗಳ ನಿಧಿಯಲ್ಲಿ ಕೇವಲ ಮೂರು ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿ ಉಳಿದ ಮೊಬಲಗೆಲ್ಲಾ ಲ್ಯಾಪ್ಸಾಗಿ ಹೋಯಿತು. ಇದೊಂದು ದೊಡ್ಡ ಗೃಹಕೈಗಾರಿಕೆ, ಹಾಗೂ ಗ್ರಾಮಕೈಗಾರಿಕೆಯಾಗಿದೆ. ಈ ಉದ್ಯಮಕ್ಕೆ ಆಲ್ ಇಂಡಿಯಾ ಸಿಲ್ಕ್ ಬೋರ್ಡಿನವರು ಯಥೇಷ್ಟವಾಗಿ ಹಣವನ್ನು ಕೊಡುತ್ತಿದ್ದಾರೆ. ಹಾಗೆ ಅವರು ಕೊಡತಕ್ಕಂಥ ಮೊಬಲಗನ್ನು ನಮ್ಮ ಸಂಸ್ಥಾನ ಸರಿಯಾಗಿ ಖರ್ಚು ಮಾಡುತ್ತಿಲ್ಲ. ಇಲ್ಲಿಯವರೆಗೆ ಯಾವ ಯಾವ ಬೋರ್ಡಿನವರು ನಮಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆ, ಆ ಪೈಕಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಲಾಯಿತು ಎಂಬತಕ್ಕ ವಿಚಾರಗಳನ್ನೆಲ್ಲಾ ಈಗ ಸರ್ಕಾರದವರು ತಿಳಿಸಬೇಕಾದದ್ದು ಅವರ ಮುಖ್ಯ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ಕೈಗಾರಿಕೆಯ ವಿಚಾರದಲ್ಲಿ ಕೇಂದ್ರ ಸರ್ಕಾರದ ನೀತಿಯೇ ಒಂದು ರೀತಿಯಾಗಿದೆ, ನಮ್ಮ ಸರ್ಕಾರದ ನೀತಿಯೇ ಮತ್ತೊಂದು ರೀತಿಯಾಗಿದೆ. ಇದನ್ನು ನೋಡಿದರೆ "ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತು" ಎನ್ನುವ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿರುವಂತೆ ಭಾಸವಾಗುತ್ತಿದೆ. ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೊಂದು ಸಹಕಾರ ಕೊಡತಕ್ಕ ರೀತಿಯಲ್ಲಿ ವರ್ತಿಸುತ್ತಿಲ್ಲ. ಈ ರೀತಿ ಆಗಬಾರದು, ಎಂಬ ಬಗ್ಗೆ ಅನೇಕ ಮಾನ್ಯ ಸದಸ್ಯರು ಇದೇ ಸಭೆಯಲ್ಲಿ ಒತ್ತಿ ಹೇಳಿರುತ್ತಾರೆ. ಅಷ್ಟು ಹೇಳಿದ್ದಾಗ್ಯೂ ಈ ದಿವಸ ಆ ವಿಚಾರಗಳು ಯಾವ ಮಟ್ಟದಲ್ಲಿ ನಡೆಯುತ್ತಿವೆ ಎನ್ನುವುದಾಗಲಿ ಅಥವಾ ಈ ಉದ್ಯಮ ಯಾವ ಪರಿಸ್ಥಿತಿಯಲ್ಲಿ ಮುಂದುವರಿಯುತ್ತಿದೆ ಎನ್ನುವುದೊಂದೂ ನಮಗೆ ಅರ್ಥವಾಗುತ್ತಿಲ್ಲ. ಹೀಗಾಗಿ ನಮಗೆ ಚನ್ನಪಟ್ಟಣ ಸಿಲ್ಕ್ ಫಿಲೇಚರ್ ವಿಚಾರದಲ್ಲಿ ಒಂದೂ ತಿಳಿಯದಂತಾಗಿವೆ. ಆದರೆ ಶ್ರೀ ಎ. ವಿ. ನರಸಿಂಹರೆಡ್ಡಿಯವರು ಹೇಳಿದ ಹಾಗೆ, ಚನ್ನಪಟ್ಟಣ ಸ್ಪನ್ ಸಿಲ್ಕ್ ವಿಚಾರದಲ್ಲಿ ಹೇಳಬೇಕೆಂದರೆ ಇದೊಂದು ನಮ್ಮ ದೇಶಕ್ಕೆ ಬಹಳ ಮುಖ್ಯವಾದಂಥ ಕೈಗಾರಿಕೆ ಕಾರ್ಖಾನೆ. ನಮ್ಮ ಇಡೀ ಇಂಡಿಯಾದೇಶಕ್ಕೇ ಇಂಥ ಕಾರ್ಖಾನೆ ಇರತಕ್ಕದ್ದು ಇದೊಂದೇ ಒಂದು. ಇಂಥ ಕಾರ್ಖಾನೆಯನ್ನು ಈ ದಿವಸ ಯಾರೋ ಖಾಸಗಿ ಜನಗಳಿಗೆ ಬಾಡಿಗ್ಗೆ ಕೊಟ್ಟಿದ್ದಾರೆ. ಹಾಗೆ ಕೊಟ್ಟಿರುವುದರ ಜೊತೆಗೆ ದುಡ್ಡನ್ನು ಬೇರೆ ಸಾಲ ಕೊಟ್ಟಿದ್ದಾರೆ. ಆದರೆ ಈ ದಿವಸ ಈ ವಿಷಯ ಏನಾಗಿದೆ, ಯಾವ ಪರಿಸ್ಥಿತಿಯಲ್ಲಿದೆ ಎನ್ನುವುದನ್ನು ತಿಳಿಸುವುದಕ್ಕೆ ಇವರಿಗೆ ಶಕ್ತಿ ಇಲ್ಲ. ಇನ್ನು ಇದೇ ರೀತಿಯಾಗಿ ಅನೇಕ ಕೈಗಾರಿಕೆ ಕಾರ್ಖಾನೆಗಳವರಿಗೆ ವಿಶೇಷ ದುಡ್ಡನ್ನು ಸಾಲವಾಗಿ ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಯಾವ ಉದ್ದೇಶದಿಂದ ಹಾಗೆ ಸಾಲ ಕೊಟ್ಟಿದ್ದಾರೋ ಆ ಉದ್ದೇಶವನ್ನು ಈ ದಿವಸ ಖಂಡಿತವಾಗಿಯೂ ಅವರು ನೆರವೇರಿಸುತ್ತಿಲ್ಲ. ದೇವನಹಳ್ಳಿಯಲ್ಲಿ ಕರ್ನಾಟಕ ಫಿಲೇಚರ್ ಸಿಲ್ಕ್ ಎಂದು ಒಂದು ಕಂಪೆನಿಯಿದೆ. ಆ ಕಂಪೆನಿಗೆ 40 ಸಾವಿರ ರೂಪಾಯಿಗಳ ಸಾಲ ಕೊಟ್ಟಿದ್ದಾರೆ. ಹಾಗೆ ಸಾಲ ಕೊಟ್ಟಿರತಕ್ಕದ್ದರ ಉದ್ದೇಶ ಅಲ್ಲಿ ಒತ್ತಾಯ ಪೂರ್ವಕವಾಗಿ ಉತ್ತಮ ರೇಷ್ಮೆ ಗೂಡುಗಳನ್ನು ತಯಾರು ಮಾಡಬೇಕೆಂಬುದೇ ಆಗಿದೆ ಎಂದು ಹೇಳಿದರು. ಆದ್ದರಿಂದ ಇನ್ನಾದರೂ ನಮ್ಮ ಸರ್ಕಾರದವರು ಈ ಆಲಸ್ಯಮನೋಭಾವನೆಯನ್ನು ಬಿಟ್ಟು ಈ ಕೈಗಾರಿಕೆಯು ನಮ್ಮ ದೇಶದಲ್ಲಿ ಮುಂದುವರಿಯುವಂತೆ ಮಾಡಲು ಮನಸ್ಸು ಮಾಡುತ್ತಾರೆಂದು ನಂಬಿಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಸ್ವಾಮಿ, ನಮ್ಮ ದೇಶದಲ್ಲಿ ಈ ಹೊಸ ಕೈಗಾರಿಕೆಗಳು ಸ್ಥಾಪನೆಯಾಗಬೇಕಾದುದು ಎಷ್ಟು ಮುಖ್ಯವಾದದ್ದೋ, ಅವುಗಳು ಮುಂದುವರಿಯುವುದೂ ಮತ್ತು ಸ್ಥಾಪಿಸಿದಂಥ ಕೈಗಾರಿಕೆಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಅವುಗಳಿಂದ ಹೆಚ್ಚು ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲೂ ಮತ್ತು ಅವುಗಳಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರತಕ್ಕ ರೀತಿಯಲ್ಲೂ ನಡೆಸಿಕೊಂಡು ಬರಬೇಕೆಂಬುದೂ ಸಹ ಅಷ್ಟೇ ಮುಖ್ಯವಾದದ್ದು. ಈ ದಿವಸ ನಮ್ಮ ಮಂಡ್ಯದಲ್ಲಿ ಒಂದು ಸಕ್ಕರೆ ಕಾರ್ಖಾನೆಯಿದೆ. ಅದರ ಬಗ್ಗೆ ಎರಡು ಮಾತುಗಳನ್ನಾಡುವುದಕ್ಕೂ ಮತ್ತು ಸರ್ಕಾರದವರ ಗಮನಕ್ಕೆ ಕೆಲವು ವಿಚಾರಗಳನ್ನು ತರುವುದಕ್ಕೂ ನಾನೀಗ ನಿಂತಿದ್ದೇನೆ. ಈ ದಿವಸ ಆ ಸಕ್ಕರೆ ಕಾರ್ಖಾನೆಗೆ ದಿವಸಕ್ಕೆ 1,500 ಟನ್ ಕಬ್ಬನ್ನು ಅರೆಯುವಂಥ ಶಕ್ತಿ ಇದೆ. ಆದರೆ ಈ ದಿವಸ ಅಲ್ಲಿರತಕ್ಕಂಥ ಇಂಜಿನಿಯರಿಂಗ್ ಇಲಾಖೆಯವರು ಎಷ್ಟರಮಟ್ಟಿಗೆ ಆ ಕಬ್ಬು ಬೆಳೆಯತಕ್ಕ ಪ್ರದೇಶಗಳಲ್ಲಿ ಈ ಕಬ್ಬಿನ ಬೆಳೆಗೆ ನೀರನ್ನು ಒದಗಿಸುತ್ತಿದ್ದಾರೆಂದರೆ ಆ ಕಾರ್ಖಾನೆಗೆ ಒಂದು ದಿವಸಕ್ಕೆ ಎಷ್ಟು ಪ್ರಮಾಣದ ಕಬ್ಬನ್ನು ಅರೆಯಲು ಶಕ್ತಿ ಇದೆಯೋ ಅಷ್ಟು ಕಬ್ಬನ್ನಾದರೂ ಬೆಳೆಯುವುದಕ್ಕೆ ಅವರು ಅವಕಾಶ ಮಾಡಿಕೊಟ್ಟಿಲ್ಲ.

ಇಷ್ಟು ಮಾತ್ರವೇ ಅಲ್ಲ. ಈಗ ಇರತಕ್ಕ ಶಕ್ತಿಯಿಂದ ಒಂದು ವರ್ಷ ಒಂಬತ್ತು ತಿಂಗಳು ಕೂಡ ಅರೆಯದೇ ಇರುವುದು ಅಂಕಿಅಂಶಗಳಿಂದ ಗೊತ್ತಾಗುತ್ತಾ ಇದೆ. ನೆಟ್ಟ ಒಂದು ವರ್ಷ ಎಂಟು ತಿಂಗಳಿನಲ್ಲಿ ಅರೆದರೆ ಎಷ್ಟು ಸಕ್ಕರೆ ಬರುತ್ತಾ ಇತ್ತೋ ಒಂದ ವರ್ಷ ಒಂಬತ್ತು ತಿಂಗಳಿನಲ್ಲಿ ಅರೆದರೆ ಅದರ ಅರ್ಧಭಾಗ ಬರುತ್ತಾ ಇದೆ ಎಂತಲೂ ಅಂಕಿಅಂಶದಿಂದ ಗೊತ್ತಾಗುತ್ತಾ ಇದೆ. ಅರ್ಧಕ್ಕೆ ಇಳಿದಾಗ ಅದರಿಂದ ರೈತರಿಗೂ ವಿಶೇಷವಾದ ನಷ್ಟ ಮತ್ತು ಸರ್ಕಾರಕ್ಕೂ ವಿಶೇಷವಾಗಿ ನಷ್ಟವಾಗುವುದನ್ನು ಒತ್ತಿ ಹೇಳಬೇಕಾದ ಅಗತ್ಯವಿಲ್ಲ.

ಇಷ್ಟು ಮಾತ್ರವೇ ಅಲ್ಲ. ಒಂದು ವರ್ಷ ಒಂಬತ್ತು ತಿಂಗಳವರೆಗೂ ಜಮೀನಿನಲ್ಲಿ ನೀರು ಹಾಕಿದರೆ ಆ ಜಮೀನಿನ ಸಾರ ಕೂಡ ಹೋಗಿ ಕ್ರಮೇಣ ಚೌಳು ಉತ್ಪನ್ನವಾಗಿ ಭೂಮಿಯಲ್ಲಿ ಬೆಳೆ ಕಮ್ಮಿಯಾಗುವುದು ಕಂಡುಬರುತ್ತಾ ಇದೆ. ಕೇಂದ್ರ ಆಹಾರ ಸಚಿವರಾದ ಅಜಿತ್‌ಪ್ರಸಾದ್ ಜೈನ್‌ಅವರು ಮಂಡ್ಯಕ್ಕೆ ದಯಮಾಡಿಸಿದ್ದಾಗ ಇದರ ಶಕ್ತಿಯನ್ನು ದಿನ ಒಂದಕ್ಕೆ ನಾಲ್ಕು ಸಾವಿರ ಟನ್‌ವರೆಗೂ ಹೆಚ್ಚಿಸಿದರೆ ಇದರಿಂದ ರೈತರಿಗೂ ಹೆಚ್ಚು ಅನುಕೂಲವಾಗುತ್ತದೆ ಮತ್ತು ಕಾರ್ಖಾನೆಯವರಿಗೂ ಹೆಚ್ಚು ಆದಾಯ ಬರುತ್ತದೆ ಎಂದಾಗ ಒಟ್ಟು ಖರ್ಚು ಎಷ್ಟಾಗುತ್ತದೆಯೋ ಅದರಲ್ಲಿ ಅರ್ಧ ಭಾಗವನ್ನು ಇಂಡಿಯಾ ಸರ್ಕಾರದವರು ಕೊಡುತ್ತೇವೆ ಇನ್ನರ್ಧ ಭಾಗವನ್ನು ಸಂಸ್ಥಾನ ಸರ್ಕಾರದವರು ವಹಿಸಿಕೊಂಡರೆ ಆಗಬಹುದು ಎಂದು ಹೇಳಿದರು. ನಮ್ಮ ಸರ್ಕಾರದವರು ದಯವಿಟ್ಟು ಈ ಶಕ್ತಿಯನ್ನು ನಾಲ್ಕು ಸಾವಿರ ಟನ್ನಿಗೆ ಹೆಚ್ಚಿಸಿ ಒಂದು ವರ್ಷ ಎರಡು ತಿಂಗಳೊಳಗೇ ನೆಟ್ಟ ಕಬ್ಬನ್ನು ಅರೆಯುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನೂ ಒಂದೇ ಒಂದು ವಿಷಯ. ಒಂದು ವರ್ಷ ಒಂಬತ್ತು ತಿಂಗಳು ನೀರು ಹರಿಯುವುದರಿಂದ ತಮಗೆ ಗೊತ್ತಿರುವ ಹಾಗೆ ಕನ್ನಂಬಾಡಿಯಲ್ಲಿ ಅನೇಕ ಸ್ಕಾರಿ

ನೀರು ಒಣಗಿಹೋಗಿದೆ. ಒಂದು ವರ್ಷ ಕನ್ನಂಬಾಡಿಯಲ್ಲಿ ಸಂಪೂರ್ಣವಾಗಿ ನೀರು ಒಣಗಿ ಕೋಟ್ಯನು ಕೋಟಿ ರೂಪಾಯಿ ಆದಾಯ ಬರುತ್ತಾ ಇದ್ದುದು ಕಮ್ಮಿ ಆಗಿದೆ. ಆದ್ದರಿಂದ ಈ ಶಕ್ತಿಯನ್ನು ಹೆಚ್ಚಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥಿಸುತ್ತೇನೆ.

(*A number of Members rose*)

Mr. SPEAKER.—Hon'ble Members who have not spoken at all must be given chance.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು-ಉತ್ತರ).—ಸ್ವಾಮಿ, ಬಹಳ ಹೆಚ್ಚು ಹಣ ಖರ್ಚಾಗತಕ್ಕ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕ ಮಾನ್ಯ ಮಂತ್ರಿಗಳೂ ಮತ್ತು ಮೈಸೂರು ಸರ್ಕಾರದವರೂ ಈ ಮೊಬಲಗು ಸದ್ವಿನಿಯೋಗವಾಗುವಂತೆ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಪದೇಪದೇ ಮಾನ್ಯಸದಸ್ಯರನೇಕರು ಹೇಳುತ್ತಾ ಇದ್ದೇವೆ. ಎಸ್ಟಿಮೇಟ್ ಕಮಿಟಿಯವರು ಈ ವಿಚಾರದಲ್ಲಿ ಏನು ವರದಿ ಕೊಟ್ಟಿದ್ದಾರೆ, ಯಾವರೀತಿ ಕಾರ್ಯಗತವಾಯಿತು ಎಂಬುದು ಸ್ವಲ್ಪ ಅನುಮಾನದ ಪ್ರಶ್ನೆಯಾಗಿದೆ. ಈಗ ಇರತಕ್ಕ ಎಸ್ಟಿಮೇಟ್ ಕಮಿಟಿಯವರ ವರದಿ ಇದುವರೆಗೂ ಬಂದಿಲ್ಲ. ಬಂದಿದ್ದರೆ ಇನ್ನೂ ಸ್ವಲ್ಪ ಸಹಾಯಕವಾಗುತ್ತಾ ಇತ್ತೋ ಏನೋ. ಏಕೆಂದರೆ ಸರ್ಕಾರದವರು ಎಸ್ಟಿಮೇಟ್ ಕಮಿಟಿಯನ್ನು ಮಾಡಿದಮೇಲೆ ಅವರು ಲೋಪದೋಷ ಏನು ಹೇಳುತ್ತಾರೋ ಅದನ್ನು ಆಗಾಗ್ಯೆ ಸರಿಪಡಿಸಿಕೊಂಡು ಹೋದರೆ ಇಲಾಖೆಯಲ್ಲಿರತಕ್ಕ ಲೋಪದೋಷಗಳು ಪರಿಹಾರವಾಗುವುದಕ್ಕೆ ಸಹಾಯಕವಾಗುತ್ತದೆ ಎಂದು ಹೇಳುತ್ತೇನೆ.

ಈಗ ಬೆಂಗಳೂರಿನ ಸುತ್ತಮುತ್ತಲೂ ಕೈಗಾರಿಕೆಗಳನ್ನು ಕೇಂದ್ರೀಕರಿಸುತ್ತಾ ಇದ್ದಾರೆ. ಒಂದು ದೊಡ್ಡ ಲೋಪ ಏನಾಗುತ್ತಿದೆ ಎಂದರೆ ಫ್ಯಾಕ್ಟರಿಗಳನ್ನು ಪ್ರಾರಂಭ ಮಾಡುವಾಗ ಅವರಿಗೆ ಎಷ್ಟು ಎಕರೆ ಜಮೀನು ಖಚಿತವಾಗಿ ಬೇಕು ಎನ್ನುವ ಲೆಕ್ಕ ಇಲ್ಲದೆ 50-100 ಎಕರೆ ಬೇಕಾಗಿದ್ದರೆ 300-400 ಎಕರೆ ಒಂದೇ ಸಾರಿಗೆ ತೆಗೆದುಕೊಳ್ಳುತ್ತಾರೆ. ಈ ರೀತಿ ತೆಗೆದುಕೊಂಡರೆ ಅಲ್ಲಿರತಕ್ಕ ರೈತನ ಸ್ಥಿತಿ ಏನಾಗಬೇಕು? ಅವರಿಗೆ ಬೇರೆ ರೀತಿಯಲ್ಲಿ ಪರಿಹಾರವನ್ನೇನೋ ಕೊಡುತ್ತಾರೆ. ಆದರೆ ಈ ರೀತಿ ಅವನ ಜಮೀನನ್ನೆಲ್ಲಾ ಕಿತ್ತುಕೊಂಡು ಆ ಗ್ರಾಮವನ್ನೇ ಬಿಟ್ಟು ಯಾವುದೋ ಒಂದು ರೀತಿಯಲ್ಲಿ ಅವನು ತನ್ನ ಜೀವನ ಕ್ರಮವನ್ನೇ ಬದಲಾಯಿಸಿಕೊಳ್ಳುವಂತೆ ಮಾಡತಕ್ಕ ಸರ್ಕಾರದ ನೀತಿ ಸರಿಯಾದ ನೀತಿಯಲ್ಲ. ಆ ರೀತಿ ಮಾಡಬಾರದು ಎಂದು ಹೇಳುತ್ತೇನೆ. ಕೈಗಾರಿಕೆಗಳನ್ನು ಪ್ರಾರಂಭ ಮಾಡುವಾಗ ಆ ಗ್ರಾಮದಲ್ಲಿರತಕ್ಕ ರೈತನಿಗೆ ಪರಿಹಾರ ಕೊಡುವುದು ಒಂದೇ ಅಲ್ಲದೆ, ಬೇರೆ ರೀತಿಯ ಜಮೀನಿನ ಅನುಕೂಲ ಮಾಡದೆ ಈ ರೀತಿ ಇಂಡಿಯಾ ಸರ್ಕಾರದವರು ಭಾರಿ ಕೈಗಾರಿಕೆಗಳನ್ನು ಬೆಂಗಳೂರಿನ ಸುತ್ತಮುತ್ತಲೂ ಕಾನ್ಸೆಂಟ್ರೇಟ್ ಮಾಡುವುದು ಒಳ್ಳೆಯದಲ್ಲ ಎಂದು ಹೇಳುತ್ತೇನೆ.

ಹಣ್ಣುಗಳನ್ನು ಪ್ರಿಸರ್ವ್ ಮಾಡುವ ವಿಷಯದಲ್ಲಿ ಅನೇಕರು ಹೇಳಿದ್ದಾರೆ. ಪ್ರಪಂಚದಲ್ಲಿ ಯಾವ ಹಣ್ಣು ಬೆಳೆಯುವುದಕ್ಕೆ ಅವಕಾಶವಿಲ್ಲವೋ ಅಂಥ ಹಣ್ಣು ಬೆಂಗಳೂರು ಸುತ್ತಮುತ್ತಲಿನ 30-35 ಮೈಲಿ ಫಾಸಲೆಯಲ್ಲಿ ಬೆಳೆಯುವುದಕ್ಕೆ ಅನುಕೂಲವಿದೆ ಎಂದು ತಜ್ಞರು ಹೇಳಿದ್ದಾರೆ. ಅದು ಈಗ ಕಾರ್ಯಗತವಾಗಿ ನಡೆಯುತ್ತಾ ಇದೆ. ನಮ್ಮ ಮೈಸೂರು ಸರ್ಕಾರದವರು ಇದಕ್ಕೆಷ್ಟು ಆಫೀಸರನ್ನು ಪರದೇಶಕ್ಕೆ ಕಳುಹಿಸಿದ್ದರು ಎಂದು ಕೇಳುತ್ತೇವೆ. ಅವರು ಎಲ್ಲಿದ್ದಾರೆ ಏನು ಕಾರ್ಯಕ್ರಮ ಕೈಗೊಳ್ಳುತ್ತಾಯಿದ್ದಾರೆ ಎಂಬುದು ಅರ್ಥವಾಗಿಲ್ಲ. ರೈತರು ಸಹಸ್ರಾರು ರೂಪಾಯಿಗಳನ್ನು ಖರ್ಚುಮಾಡಿ ಹಣ್ಣುಗಳನ್ನು ಬೆಳೆಯುತ್ತಾರೆ. ಆ ರೀತಿ ಬೆಳೆದ ಹಣ್ಣುಗಳಿಗೆ ಸರಿಯಾದ ರಕ್ಷಣೆ ಸಿಕ್ಕುವಂತೆ ಸಹಾಯಮಾಡಿ ಕೊಡುವುದು ಸರ್ಕಾರದವರ ಕರ್ತವ್ಯವಾಗಿದೆ.

ಮೈಸೂರಿನಲ್ಲಿ ರೇಷ್ಮೆ ನೇಯುವ ಕಾರ್ಖಾನೆ ಇದೆ. ಅಲ್ಲಿ ಯಾವ ಸಮಯದಲ್ಲಿ ನೋಡಿದರೂ ಸಹ ಒಂದೇ ರೇಟು ಇರುತ್ತದೆ. ಈ ರೀತಿ ಏಕೆ ಮಾಡುತ್ತಾರೋ ಗೊತ್ತಿಲ್ಲ. ಅಲ್ಲಿರುವವರು business line ಅಲ್ಲಿ ಕೆಲಸ ಮಾಡುತ್ತಿಲ್ಲ ಎಂಬುದು ಖಚಿತವಾಗಿ ಗೊತ್ತಾಗುತ್ತದೆ. ಅವರಿಗೆ ಸಂಬಳ ಕೊಡುತ್ತಾಯಿದ್ದೀರಿ, ಅವರು ಯಾವುದೋ ಒಂದು ರೀತಿಯಲ್ಲಿ ತಮಗೆ ಅನುಕೂಲವಾದಂತೆ ಕೆಲಸ ಮಾಡುತ್ತಾ ಇದ್ದಾರೆ. ಇದರಿಂದ ಸರ್ಕಾರದವರಿಗೆ ಬಹಳ ನಷ್ಟವಾಗುತ್ತಿದೆ. ಪ್ರೈವೇಟ್ ಲಿಮಿಟೆಡ್ ಕನ್ಸರ್ನ್‌ಗಳಲ್ಲಿ ಎಲ್ಲಿ ನೋಡಿದರೂ ಆದಾಯ ಬರುತ್ತಾ ಇದೆ. ಆದ್ದರಿಂದ ಇದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ಹತ್ತು ಕೋಟಿ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡುತ್ತಾ ಇರುವಾಗ ಪ್ರತಿಯೊಬ್ಬ ಸದಸ್ಯರಿಗೂ ಯಾವಯಾವ ಕಾರ್ಖಾನೆ, ಯಾವಯಾವ ಇಲಾಖೆಯಲ್ಲಿ ಏನೇನು ನಡೆಯುತ್ತಿದೆ ಎಂಬುದು ತಿಳಿದಿರಬೇಕು. ಮತ್ತು ಪ್ರತಿಯೊಬ್ಬ ಸದಸ್ಯರೂ ಈ ವಿಷಯದಲ್ಲಿ ಕೊಡತಕ್ಕ ಸಲಹೆಗಳನ್ನು ಪರಿಶೀಲನೆ ಮಾಡಿ, ಯಾವ ಲೋಪವೂ ಆಗದಹಾಗೆ ನೋಡಿಕೊಳ್ಳಬೇಕಾದದ್ದು ಸರ್ಕಾರದ ಜವಾಬ್ದಾರಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ರೇಷ್ಮೆ ಕೈಗಾರಿಕೆ ವಿಷಯದಲ್ಲಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ರೇಷ್ಮೆ ಕೈಗಾರಿಕೆಯನ್ನು ಯಾರುಯಾರು ಅವಲಂಬಿಸಿದ್ದಾರೋ ಅಂಥ ಸುಮಾರು ಎರಡು ಲಕ್ಷ ಸಂಸಾರಗಳು, ನಮ್ಮ ಸಂಸ್ಥಾನದಲ್ಲಿ ಇವೆ. ಈ ಬೆಲೆಯ ಏರುಪೇರುಗಳಿಂದ ಅವರ ಒಂದು ಆರ್ಥಿಕ ದುಃಸ್ಥಿತಿ ಹೇಳತೀರದು. ಇದನ್ನು ಸುಮಾರು 4½ ವರ್ಷಗಳಿಂದ ಈ ಮಾನ್ಯ ಸಭೆಯಲ್ಲಿ ಆಯಾಯ ಪ್ರಾಂತದಿಂದ ಬರತಕ್ಕ ಪ್ರತಿಯೊಬ್ಬ ಸದಸ್ಯರೂ ಸಭೆಯ ಗಮನಕ್ಕೂ ಸಂಬಂಧಪಟ್ಟ ಅಧಿಕಾರಿಗಳ ಮತ್ತು ಮಂತ್ರಿಗಳ ಗಮನಕ್ಕೂ ತಂದರೂ ಸಹ ಈ ಏರುಪೇರನ್ನು ನಿಲ್ಲಿಸತಕ್ಕ ಒಂದು ಶಕ್ತಿ, ಸಾಮರ್ಥ್ಯ ಸರ್ಕಾರಕ್ಕೆ ಬರಲಿಲ್ಲವಲ್ಲ ಎಂದು ಹೇಳಿ ವಿಷಾದ ಪಡಬೇಕಾಗಿದೆ. ನಿಮ್ಮಲ್ಲಿದ್ದ ಶಕ್ತಿಯನ್ನು ವಿನಿಯೋಗಿಸಿಕೊಂಡಿದ್ದೇ ಆದರೆ ನಿಜವಾಗಿಯೂ ಸಂಬಂಧಪಟ್ಟ ಇಲಾಖೆಯವರು ಬಹಳ ಸುಲಭವಾದ ಯೋಜನೆಗಳನ್ನು ಮಾಡಬಹುದಾಗಿತ್ತು. ಈ ಏರುಪೇರು ಏಕೆ ಆಗುತ್ತಾ ಇದೆ ಎಂದರೆ Supply and Demandನ ಸೂತ್ರ ಒಂದು ಹತೋಟಿ ಇಲ್ಲದೇ ಇರುವುದರಿಂದ ಆಗುತ್ತಾಇದೆ; ಇದನ್ನು ಆರ್ಥಿಕ ತಜ್ಞರಿಂದ ತಿಳಿಯಬೇಕಾದದ್ದು ಅನಾವಶ್ಯಕ. ನಮ್ಮ ಸ್ಥಳೀಯ ರೇಷ್ಮೆ ಉತ್ಪನ್ನವಾಗತಕ್ಕದ್ದು ಎಷ್ಟು ಮತ್ತು ಸ್ಥಳೀಯ ರೇಷ್ಮೆಗೆ ಸ್ಥಳದಲ್ಲಿ ಡಿಮ್ಯಾಂಡ್ ಎಷ್ಟಿದೆ ಎನ್ನುವುದನ್ನು ತಿಳಿದುಕೊಂಡಿದ್ದರೆ ಬೆಲೆ ನಿಗದಿ ಮಾಡಬಹುದಾಗಿತ್ತು ಎಂದು ನಾನು ಹೇಳಬಲ್ಲೆ. ಈಗಾಗಲೇ ನಮ್ಮಲ್ಲಿ ಸರ್ಕಾರ ಒಂದು ನೀತಿಯನ್ನು

(ಶ್ರೀ ಯು. ಎಂ. ಮಾದಪ್ಪ.)

ಅನುಸರಿಸಿದೆ. ಇಂಪೋರ್ಟ್ ಪಾಲಿಸಿಯಿಂದ ಸರ್ಕಾರಕ್ಕೆ 7½ ಲಕ್ಷ ರೂಪಾಯಿ ಸಂಪಾದನೆಯಾಗಿದೆ ಎಂದು ಹೇಳುವ ಸ್ಥಿತಿ ಇಲ್ಲ. ಜೊತೆಗೆ ಆರ್ಟಿಫಿಷಿಯಲ್ ಸಿಲ್ಕ್ ವ್ಯಾಪಾರವನ್ನೂ ಕೈಕೊಂಡ ಫಲತಾಂಶವಾಗಿ ನಮ್ಮ ರೇಷ್ಮೆ ಬೆಲೆ ಇಳಿದು ಹೋಯಿತು ಎಂದು ಹೇಳುತ್ತೇನೆ. ಹ್ಯಾಂಡ್‌ಲೂಂ, ಪವರ್‌ಲೂಂಗಳಿಗೆ ಸಾಕಾದಷ್ಟು ಕಚ್ಚರೇಷ್ಮೆ ಸಿಕ್ಕದೇ ಇರುವುದು ನಿಜ. 1951ರಲ್ಲಿ ಮೈಸೂರು ಸ್ಟೇಟ್ ಸೆಮಿನಾರ್ ಆದಾಗ,

> "Power-looms use filature silk and the quantity of filature raw silk is inadequate to meet the full requirements of the power looms in the State. Hence import of raw silk is necessary."

ಎಂದು ಹೇಳಿದ್ದಾರೆ. ಹಾಗಿದ್ದಮೇಲೆ, ಸಿಲ್ಕ್ ಫಿಲೇಚರಿನ ಉತ್ಪನ್ನವನ್ನು ಹೆಚ್ಚಿಸದೇ ಇದ್ದುದು ಸರ್ಕಾರದ ತಪ್ಪು.

2 P.M.

ಆದ್ದರಿಂದ Artificial Silk (ಕೃತಕ ರೇಷ್ಮೆ) ಹಿಂದೆ ಎಷ್ಟು ಹೆಚ್ಚಿಗೆ ಬರುತ್ತಿತ್ತೋ, ಅದೇ ಪ್ರಮಾಣದಲ್ಲಲ್ಲದಿದ್ದರೂ, ಈಗಲೂ ಹೆಚ್ಚಿಗೆಯೇ ಬರುತ್ತಿದೆಯೆಂದು ಹೇಳಬಲ್ಲೆ. ಅದಕ್ಕೆ ಬದಲು ಕೈಮಗ್ಗಕ್ಕೆ ಮತ್ತು ಪವರ್‌ಲೂಂಗೆ ಫಿಲೇಚರ್ ರೇಷ್ಮೆಯನ್ನೇ ಉಪಯೋಗಿಸುವುದಕ್ಕೆ ಅವಕಾಶವಿದೆ, ಉಪಯೋಗಿಸಬಹುದು ಎಂದು ಸೆಮಿನಾರ್‌ನಲ್ಲಿ ಕೂಡ ಹೇಳಿದ್ದಾರೆ. ಆದ್ದರಿಂದ ಮೈಸೂರು ಸಂಸ್ಥಾನದಲ್ಲಿ ಉತ್ಪತ್ತಿಯಾಗುವ ಸಿಲ್ಕನ್ನು ಪವರ್‌ಲೂಂಗಳಿಗೆ ಹಂಚುವ ಹತೋಟಿಯನ್ನು ಸರ್ಕಾರದವರು ಇಟ್ಟುಕೊಳ್ಳಬೇಕು. ಇದನ್ನು ಮಾಡಿ ಕೃತಕ ರೇಷ್ಮೆಯನ್ನು ತೆಗೆದುಕೊಳ್ಳುವ ರೀತಿಯಲ್ಲಿ ಫಿಲೇಚರ್ ರೇಷ್ಮೆಯನ್ನು ಕೊಂಡು ಮಾಡಬಹುದು. ಹೊರದೇಶದ ರೇಷ್ಮೆಯನ್ನು ವ್ಯಾಪಾರ ಮಾಡುವಂತೆ ನಮ್ಮ ದೇಶದ ರೇಷ್ಮೆಯನ್ನು ವ್ಯಾಪಾರ ಮಾಡಿದರೆ ನಮ್ಮ ದೇಶದ ರೇಷ್ಮೆಗೆ protection ಕೊಟ್ಟಂತಾಗುತ್ತದೆ. ಈಗಾಗಲೇ ಸರ್ಕಾರದವರು ಮೂರು emporiumಗಳನ್ನು ತೆಗೆಯುವುದಕ್ಕೆ ಅವಕಾಶ ಕಲ್ಪಿಸಿದ್ದಾರೆ. ಆ ಎಂಪೋರಿಯಂನಲ್ಲಿ ಸಿಲ್ಕ್ ವ್ಯಾಪಾರವನ್ನೂ ಕೈಕೊಳ್ಳುವುದಕ್ಕೆ ಅವಕಾಶವಿದೆಯೆಂದು ನಾನು ಹೇಳುತ್ತೇನೆ. ಆಮೇಲೆ ಉತ್ಪತ್ತಿಯಮೇಲೆ ಹೆಚ್ಚಿಗೆ ಕಂಟ್ರೋಲ್ ಇಟ್ಟುಕೊಳ್ಳತಕ್ಕ ಸಂಬಂಧವಾಗಿ ಖಾಸಗಿ ಮನುಷ್ಯರು ಸಿಲ್ಕ್ ಫಿಲೇಚರ್ ಜಾಯಿಂಟ್ ಸ್ಟಾಕ್ ಕಂಪೆನಿಯೊಂದನ್ನು ಮಾಡಿಕೊಂಡು ತಯಾರು ಮಾಡುತ್ತಿದ್ದಾರೆ. ಸರ್ಕಾರದವರು ಅದರಲ್ಲಿ ಷೇರು ತೆಗೆದುಕೊಳ್ಳುವುದರಿಂದಲೋ ಅಥವಾ ಬೇರೆ ರೀತಿಯಲ್ಲೋ encouragement ಕೊಡುವ ಪದ್ಧತಿಯಿತ್ತು. ಇದರಿಂದ production ಉತ್ತಮವಾಗುತ್ತಿತ್ತು. ಆದರೆ ಇತ್ತೀಚೆಗೆ ಟಿ-ನರಸೀಪುರದ ಫಿಲೇಚರ್ ಕಂಪೆನಿಯ ರೀತಿನೀತಿಗಳನ್ನು ನೋಡಿದರೆ ಬಹಳ ವಿಷಾದಕರವಾಗಿದೆ. ನಮ್ಮ ಡೈರೆಕ್ಟರುಗಳೇ ಬೇಕಾದಷ್ಟು ಜನರಿದ್ದರೂ, ಸರ್ಕಾರದವರು ಬೇಕಾದಷ್ಟು ಷೇರುಗಳನ್ನು ಕೊಂಡಿದ್ದರೂ ಆ ಕಂಪೆನಿಯ ಸ್ಥಿತಿಗತಿಗಳು ಆಶಾದಾಯಕವಾಗಿಲ್ಲ. ಸರ್ಕಾರದವರು ಪೂರ್ತಿ ಈ ಷೇರುಗಳನ್ನೆಲ್ಲಾ ಕೊಂಡುಕೊಳ್ಳಬೇಕು ಅಥವಾ liquidate ಮಾಡಬೇಕು. ಅಂತೂ voluntary liquidation ಮಾಡಬೇಕೇ ಅಥವಾ compulsory liquidation ಮಾಡಬೇಕೇ ಎಂದು ಒಂದು ತೀರ್ಮಾನ ತೆಗೆದುಕೊಳ್ಳುವುದು ಸರ್ಕಾರದವರ ಮುಖ್ಯ ಕರ್ತವ್ಯವೆಂದು ಹೇಳುತ್ತೇನೆ.

ಈ ಸಂಬಂಧದಲ್ಲಿ ರೈತರಿಗೆ ಆಗಬೇಕಾದ ಒಂದೆರಡು ವಿಷಯಗಳನ್ನು ಹೇಳದೆ ಇದ್ದರೆ ತೀರದು. ಕೆಲವರು ಹೇಳುತ್ತಾರೆ ಪರದೇಶದ ರೇಷ್ಮೆ ಬಹಳ ಉನ್ನತ ಮಟ್ಟದಲ್ಲದೆ, ಕೈಮಗ್ಗದವರು ಅದನ್ನೇ ಆಶಿಸುತ್ತಾರೆ ಎಂದು. ಒಂದುವೇಳೆ ಅವರು ಹೇಳುವುದು ನಿಜವಾಗಿದ್ದರೆ ಅದು ಯಾರ ತಪ್ಪು? ನಮ್ಮ ದೇಶದ ರೇಷ್ಮೆಯನ್ನು ಆ ಮಟ್ಟಕ್ಕೆ ತರದೆ ಇದ್ದರೆ ನಮ್ಮ ದೇಶದ ರೇಷ್ಮೆಗೆ ಪುರಸ್ಕಾರ ದೊರಕಿಸಿಕೊಡದೆ ಇದ್ದರೆ ನಮ್ಮ ರೇಷ್ಮೆಗೆ ಸ್ಥಾನಮಾನ ಸಿಕ್ಕುತ್ತದೆಯೇ? ಆದ್ದರಿಂದ well subsidy ಕೊಟ್ಟು irrigated leavesನ್ನು ತಯಾರುಮಾಡಿ ನಮ್ಮ ರೇಷ್ಮೆಯನ್ನು ಉತ್ತಮಪಡಿಸುವುದಕ್ಕೆ ಏರ್ಪಾಡು ಮಾಡಬೇಕಾದ್ದು ಸರ್ಕಾರದವರ ಕರ್ತವ್ಯ. ಸುಧಾರಿತ ರೀತಿಯ ಚರಕದ ಬೇಸಿನ್‌ಗಳನ್ನು ಇನ್‌ಸ್ಟಾಲ್ ಮಾಡುವುದಕ್ಕೆ ಸಾಲದ ರೂಪದಲ್ಲಿಯೋ ಗ್ರ್ಯಾಂಟ್‌ರೂಪದಲ್ಲಿಯೋ ಹಣವನ್ನು ಕೊಟ್ಟು ಸಹಾಯಮಾಡುವುದು ಅವಶ್ಯಕ. ಮಾರ್ಕೆಟಿಂಗ್ ಅನುಕೂಲತೆಗಳನ್ನು ಮಾಡಿಕೊಡುವುದೂ ಕೂಡ ಹಾಗೆಯೇ ಅವಶ್ಯಕ. ಆದ್ದರಿಂದ ಕಕೂನ್‌ಗಳನ್ನು ಮಾರಾಟ ಮಾಡುವುದಕ್ಕೂ ದಾರವನ್ನು ಮಾರಾಟ ಮಾಡುವುದಕ್ಕೂ ಏರ್ಪಾಡುಗಳನ್ನೂ ಏಕಕಾಲದಲ್ಲಿ ಸ್ಥಾಪನೆ ಮಾಡಬೇಕಾದ್ದು ಅವಶ್ಯಕ. ಇದಕ್ಕಾಗಿ ತಮ್ಮ ಭಾಗದ್ದಾಗಿ ಹತ್ತು ಲಕ್ಷ ರೂಪಾಯಿಗಳನ್ನು ಕೇಂದ್ರಸರ್ಕಾರದವರು ಕೊಡುವುದಕ್ಕೆ ಸಿದ್ಧವಾಗಿದ್ದರೂ ನಮ್ಮ ಭಾಗದ್ದಾದ ಇನ್ನು ಹತ್ತುಲಕ್ಷ ರೂಪಾಯಿಗಳನ್ನು ಒದಗಿಸಿಕೊಳ್ಳುವ ಯೋಚನೆ ನಮ್ಮ ಸರ್ಕಾರದವರಿಗೆ ಬರಲಿಲ್ಲ ಎಂದು ನಾನು ವಿಷಾದಪಡುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಸರ್ಕಾರದ ಯಂತ್ರ ಏನೇ ಬದಲಾವಣೆಯಾದರೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡ ಹರಿಜನರ ಪರಿಸ್ಥಿತಿ ಉತ್ತಮಗೊಳ್ಳಲಿಲ್ಲವಲ್ಲಾ ಎನ್ನಲಿಕ್ಕೆ ಒಂದು ಉದಾಹರಣೆಯನ್ನು ಸರ್ಕಾರದವರ ಗಮನಕ್ಕೆ ನಾನು ತರಬಯಸುತ್ತೇನೆ.

ಗ್ರಾಮಾಂತರಗಳಲ್ಲಿ ಬಹುಭಾಗ ಹರಿಜನರು ತಂಗಡಿಚಕ್ಕೆ ಕೈಗಾರಿಕೆಯನ್ನು ಮಾಡಿ ಜೀವಿಸುತ್ತಿದ್ದಾರೆ. ವರ್ಷೇ ವರ್ಷೇ ಲಕ್ಷಾಂತರ ರೂಪಾಯಿಗಳ ವ್ಯವಹಾರ ತಂಗಡಿಚಕ್ಕೆಯಲ್ಲಿ ನಡೆಯುತ್ತಿರುತ್ತದೆ. ಇತರ ಜನರಿಗೆ ಅರ್ಥವಾಗದೆ ಇರುವ ಈ ಕೈಗಾರಿಕೆ ನಮ್ಮ ಜನರಿಗೆ ಬಹಳ ಚೆನ್ನಾಗಿ ರೂಢಿಯಲ್ಲಿ ಬಂದಿದೆ. ಇಷ್ಟಾದರೂ, ತಂಗಡಿಚಕ್ಕೆಯಲ್ಲಿ ನೇರವಾಗಿ ವ್ಯವಹಾರ ನಡೆಸುವವರು ಹರಿಜನರಲ್ಲ. ಬೇರೆಯವರು ವ್ಯವಹಾರ ನಡೆಸುತ್ತಾ ನಮ್ಮ ಜನರಿಗೆ ಕಡಿಮೆ ಕೂಲಿ ಕೊಟ್ಟು ತಾವು ಹೆಚ್ಚು ಹಣವನ್ನು ಸಂಪಾದನೆ ಮಾಡುತ್ತಿದ್ದಾರೆ. ಈ ವಿಷಯನ್ನು ಪದೇ ಪದೇ ಸರ್ಕಾರದ ಗಮನಕ್ಕೆ ತಂದರೂ ಕೂಡ ಅವರು ಗಮನಕ್ಕೆ ತೆಗೆದುಕೊಳ್ಳದಿರುವುದನ್ನು ಕಂಡು ನಮಗೆ ಮತ್ತೂ ವಿಷಾದವಾಗುತ್ತದೆ. ಏಕೆಂದರೆ ಮೈಸೂರು ದೇಶದಲ್ಲಿಗುವ ಮೂಲೆಗೆ ಬಿದ್ದಿರತಕ್ಕ ಅನೇಕ ಕೈಗಾರಿಕೆಗಳನ್ನು ಸರ್ಕಾರದವರು ಮುಂದುವರಿಸಿ ಪ್ರೋತ್ಸಾಹಿಸುತ್ತಿದ್ದಾರೆ. ಇಷ್ಟಾದರೂ, ಅದರಲ್ಲೂ ಬಡಜನರನ್ನು ಉತ್ತಮ ಮಟ್ಟಕ್ಕೆ ತರಬೇಕೆಂದು ಆಸೆಯುಳ್ಳವರಾಗಿದ್ದರೂ, ಇದುವರೆಗೂ ಬಡಜನರ ಕೈಯಲ್ಲಿರತಕ್ಕ ಈ

ಕೈಗಾರಿಕೆಯನ್ನು ಅಭಿವೃದ್ಧಿಮಾಡುವುದಕ್ಕೆ ಇನ್ನೂ ಮನಸ್ಸು ಮಾಡಿಲ್ಲ. ಇದೊಂದು ಉತ್ತಮವಾದ ಕೈಗಾರಿಕೆ. ಅನೇಕ ಹರಿಜನ ಸಂಸಾರಗಳು ಇದರಿಂದ ಜೀವನ ಮಾಡುತ್ತಿವೆ. ಇಂಥದ್ದನ್ನು ಹರಾಜು ಮಾಡಿಸಿ ಯಾರೋ ಒಬ್ಬರಿಬ್ಬರಿಗೆ ಕೊಟ್ಟರೆ ಹರಿಜನರಿಗೆ ಬಹಳ ಅನ್ಯಾಯವಾಗುತ್ತದೆ. ಅದಕ್ಕೆ ಬದಲು ಇದನ್ನೇ ಹರಿಜನರಿಗೆ ವಹಿಸಿ ಒಬ್ಬೊಬ್ಬರಿಗೆ 10 ರೂಪಾಯಿನಂತೆ ಟ್ಯಾಕ್ಸ್ ಹಾಕಿದರೂ ಎರಡು ಲಕ್ಷ ರೂಪಾಯಿಗಳ ಉತ್ಪತ್ತಿ ಬರುತ್ತದೆ. ಅನೇಕ ಹರಿಜನ ಸಂಸಾರಗಳ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ. ಪದೇ ಪದೇ ಈ ಸಭೆಯ ಮುಂದೆ ಅರಿಕೆ ಮಾಡಿಕೊಂಡರೂ ಸರ್ಕಾರದವರು ನಮ್ಮ ಆಸೆಯನ್ನು ನೆರವೇರಿಸುತ್ತಿಲ್ಲ. ಈ ವಿಚಾರದಲ್ಲಿ ಇಡೀ ಸಭೆಯೇ ನಮ್ಮ ಬೇಡಿಕೆಗೆ ಬೆಂಬಲ ಕೊಡುತ್ತದೆಂದು ನಾನು ನಂಬಿದ್ದೇನೆ.

ಇದರಂತೆ ಚರ್ಮದ ಕೈಗಾರಿಕೆಯೂ ಕೂಡ ಹರಿಜನರ ದೃಷ್ಟಿಯಿಂದ ಅತಿ ಮುಖ್ಯವಾದ ಒಂದು ಕೈಗಾರಿಕೆ. ಚರ್ಮವನ್ನು ಹದಗೊಳಿಸುವುದಕ್ಕಾಗಿ ದೊಡ್ಡ ದೊಡ್ಡ ಟ್ಯಾನರಿಗಳು ಅನೇಕಕಡೆ ಸ್ಥಾಪಿತವಾಗಿವೆ. ಗ್ರಾಮಾಂತರಗಳಲ್ಲಿರತಕ್ಕ ಈ ಕೈಗಾರಿಕೆಯನ್ನು ಉತ್ತಮಪಡಿಸುವುದರ ಕಡೆಗೆ ನಮ್ಮ ಸರ್ಕಾರದವರು ಗಮನಕೊಟ್ಟು ಹೊರಗಡೆಯಿಂದ ಬರುತ್ತಿರತಕ್ಕ ಲಕ್ಷಾಂತರ ರೂಪಾಯಿಗಳ ಬೂಟು, ಚಪ್ಪಲಿಗಳನ್ನು ತರಿಸುವುದನ್ನು ನಿಲ್ಲಿಸಬಹುದು. ಹರಿಜನರೇ ಬಹುಮಟ್ಟಿಗೆ ಈ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದರೂ ತಾವು ಕಂಟ್ರಾಕ್ಟುಗಳನ್ನು ಕೊಡುವುದು ಬ್ರಾಹ್ಮಣರಿಗೆ ಅಥವಾ ಮುಸಲ್ಮಾನರಿಗೆ ; ನೇರವಾಗಿ ಎಂದೂ ಹರಿಜನರಿಗೆ ಕೊಡುವುದಿಲ್ಲ. ಅವರ ಕೈಯಲ್ಲಾದರೂ ಅವರಿಗೆ ಕೊಡುವ ಅನುಕೂಲ ಕಲ್ಪಿಸಿ ಕೊಡುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕೆ ಇಲಾಖೆಯ ಮಂತ್ರಿಗಳು).—ಅವರಿಗೆ ಯಾವರೀತಿ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೀರಿ ?

ಶ್ರೀ ಟಿ. ಹನುಮಯ್ಯ.—ಬೆಂಗಳೂರು ಸಿಟಿಯಲ್ಲಿ ಅವರಿಗಾಗಿ ಒಂದು ಫ್ಯಾಕ್ಟರಿಯನ್ನು ಏರ್ಪಡಿಸಿದರೆ ಲಕ್ಷಾಂತರ ರೂಪಾಯಿ ದುಡ್ಡು ಸಿಕ್ಕುತ್ತದೆ. ನಮ್ಮ ಜನರಿಗೂ ಹೆಚ್ಚಿಗೆ ಹಣ ಸಿಕ್ಕುವಂತಾಗುತ್ತದೆ. ಇದನ್ನು ಸರ್ಕಾರದವರು ಆಲೋಚನೆಮಾಡಿ ತಕ್ಕ ರೀತಿಯಲ್ಲಿ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

Sri V. M. MASCARENHAS (St. John's Hill).—While speaking on starting of industries during the last few years, the Hon'ble Members will be surprised to see that during the First Yive-Year Plan the Mysore State did not launch one single industry in the State. Not that they had no schemes on hand ; but I see now that some of these schemes have taken such a long time to mature and to pass the so called red-tapism in the Secretariat. Perhaps in the year 1956 some of them may see the light of the day. I hope in the future, things will not go on like this. In this age of progress, we cannot lose time, because every day lost is so much money lost.

Some of my friends have asked for either nationalisation or taking over firms like the Mysore Spun Silk Mills and the Silk Filatures. It is unwise that the Government of Mysore have given them large loans. Let us stop at that. Let not good money go after bad. If these companies are unable to stand on their own legs and return the money that the Government has given them, those companies can be liquidated and the Government can consider how best they could come into the picture and what best they could do in the interests of the State.

One more word. My friend Sri Narasimha Reddy and Sri Byre Gowda spoke of the fruit canning industry in the State and pointed out that Bangalore and its neighbourhood is the best area for starting the industry because Bangalore is not only the largest fruit growing centre in the State but it is very conveniently situated as mangoes come from Srinivasapur and other parts of Kolar and also from Channapatna and oranges come from Hassan. So Bangalore is not only best placed for producing fruits but also for canning and most important than all, it affords the best market. In view of this, my personal view is that taking of the fruit canning industry to any other part of the State would not be in the best interests of the industry itself, I do not know if the Hon'ble Minister has got some specific views on this subject. But I would earnestly appeal to him once again to enquire into the real needs of the particular industry. It is not a big industry. I must admit it is only a cottage industry. I do not see the need why the Government should even think of having a Joint Stock Company for the purpose. It can entirely be hundred per cent Government owned. It does not need much money and if it is run on proper lines, it can certainly be a profitable venture.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳು ಸಾಮಾನ್ಯವಾಗಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೇಂದ್ರೀಕೃತವಾಗಿವೆಯೇ ಹೊರತು, ಗ್ರಾಮಾಂತರ ಪ್ರದೇಶದಲ್ಲಿ ಯಾವ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೂ ಒಂದು ನೀತಿಯನ್ನೂ ಕೂಡ ನಾವು ಹಾಕಿಕೊಂಡಿಲ್ಲ. ಮುಖ್ಯವಾಗಿ ನಾವು ಈ ರೀತಿ ಪಟ್ಟಣ

(ಶ್ರೀ ಡಿ. ಎಂ. ಗೋವಿಂದರಾಜು.)

ಗಳಲ್ಲಿ ಕೈಗಾರಿಕೆಗಳನ್ನು ಕೇಂದ್ರೀಕೃತವಾಗಿ ಮಾಡುತ್ತಾ ಹೋದರೆ, ಗ್ರಾಮಾಂತರದ ಜನರು ಪಟ್ಟಣಗಳಲ್ಲಿ ವಿಪರೀತವಾಗಿ ಬಂದು ಸೇರುವುದಕ್ಕೆ ಅವಕಾಶವಾಗುತ್ತದೆ. ಅವರ ಆರ್ಥಿಕ ಸ್ಥಿತಿ, ಅನುಕೂಲಪಡಿಸಬೇಕಾದರೆ, ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕಾದುದು ಬಹಳ ಮುಖ್ಯವಾದುದು. ಇನ್ನು ಮುಂದೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಾಗ ನಮ್ಮ ಸರ್ಕಾರದವರು ಆದಷ್ಟು ಗ್ರಾಮಾಂತರ ಪ್ರದೇಶದಲ್ಲಿ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ತನ್ಮೂಲಕ ಗ್ರಾಮಾಂತರ ಪ್ರದೇಶದ ಜನಗಳಿಗೆ ಅನುಕೂಲವನ್ನು ಕಲ್ಪಿಸುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ನೆಲಮಂಗಲ ತಾಲ್ಲೂಕಿನಲ್ಲಿ ನಾಲ್ಕು—ಐದು ವರ್ಷಗಳಿಂದ ಯಾವುದಾದರೂ ಒಂದು ಕೈಗಾರಿಕೆಯನ್ನು ಸ್ಥಾಪನೆಮಾಡಿ ಎಂದು ಕೇಳುತ್ತಿದ್ದೇವೆ. ಅಲ್ಲಿ ಹೆಂಚಿನ ಕೈಗಾರಿಕೆ ಮಾಡುವುದಕ್ಕೆ ಜೇಡಿ ಮಣ್ಣು ಸಿಕ್ಕುತ್ತದೆ. ಪಿಂಗಾಣಿ ಕೈಗಾರಿಕೆ ಸ್ಥಾಪನೆ ಮಾಡು ಮಾಡುವುದಕ್ಕೆ ಸುದ್ದೆ ಮಣ್ಣು ಮತ್ತು ಅದಕ್ಕೆ ಬೇಕಾದ ಕಚ್ಚಾ ಮಾಲುಗಳು ನಮ್ಮ ತಾಲ್ಲೂಕಿನಲ್ಲಿ ಸಿಕ್ಕುವುದರಿಂದ, ಯಾವುದಾದರೂ ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಎಂದು ಅನೇಕ ಸಾರಿ ಕೇಳಿ ಕೊಂಡಿದ್ದೇನೆ. ಕಚ್ಚಾ ಮಾಲುಗಳು ಸಿಕ್ಕುವುದರಿಂದ ಹೆಂಚಿನ ಕಾರ್ಖಾನೆಯನ್ನಾಗಲಿ, ಪಿಂಗಾಣಿ ಕಾರ್ಖಾನೆಯನ್ನಾಗಲಿ, ಸ್ಥಾಪನೆಮಾಡಿ, ಅಲ್ಲಿನ ಜನಗಳಿಗೆ ಒಂದು ಕೈಗಾರಿಕೆಯಿಂದ ಕೂಲಿ ಸಿಕ್ಕುವುದಕ್ಕೆ ಅನುಕೂಲ ಮಾಡಿ ಎಂದು ಬಹಳ ದಿವಸಗಳಿಂದಲೂ ಕೇಳುತ್ತಿದ್ದೇನೆ. ಅದರಂತೆಯೇ ಸರ್ಕಾರದವರು ಯೋಚನೆ ಮಾಡಿ ನಮ್ಮ ನೆಲಮಂಗಲದ ತಾಲ್ಲೂಕಿಗೆ ಕಡೆಯಪಕ್ಷ ಹೆಂಚಿನ ಅಥವಾ ಪಿಂಗಾಣಿ ಕಾರ್ಖಾನೆಯನ್ನು ಕೊಟ್ಟು ಅಲ್ಲಿನ ಜನಗಳ ಸಂಪಾದನಾಶಕ್ತಿ ಹೆಚ್ಚುವಂತೆ ಮಾಡಬೇಕು ಎಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಮತ್ತು ಅಜೂಬಾಜು ಜಾಗದಲ್ಲಿ ರೇಷ್ಮೆ ಚೆನ್ನಾಗಿ ಬೆಳೆಯುತ್ತದೆ. ಇಲ್ಲಿಯ ರೇಷ್ಮೆ ಬಹಳ ಉತ್ತಮವಾಗಿದೆ: ಬಿತ್ತನೆಗೆ ಉಪಯೋಗವಾಗುತ್ತದೆ. ಅಂತಹ ರೇಷ್ಮೆ ಬೆಳೆಯುವ ಸ್ಥಳಗಳಲ್ಲಿ ಒಂದು ರೇಷ್ಮೆ ಗೂಡಿನ ಕೇಂದ್ರವನ್ನು ಸ್ಥಾಪನೆ ಮಾಡಿ ಎಂದು ಅನೇಕಸಾರಿ ಕೇಳಿದ್ದೇವೆ. ಅದೇ ರೀತಿ ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದರೂ ಕೂಡ ಇದುವರೆಗೂ ಸ್ಥಾಪನೆ ಮಾಡಿಲ್ಲ. ಈಗಲಾದರೂ ಸರ್ಕಾರದವರು ಗಮನವಿಟ್ಟು ತ್ಯಾಮಗೊಂಡ್ಲುವಿನಲ್ಲಿ ರೇಷ್ಮೆ ಗೂಡಿನ ಕೇಂದ್ರವನ್ನು ಸ್ಥಾಪನೆ ಮಾಡಿದರೆ, ಆ ಕೇಂದ್ರದಲ್ಲಿ ರೇಷ್ಮೆ ಆಗುವ ಗೂಡನ್ನು ನಮ್ಮ ಮೈಸೂರು ದೇಶದ ಎಲ್ಲಾ ಕಡೆಗೂ ಬಿತ್ತನೆಗೆ ಒದಗಿಸಲು ಅನುಕೂಲವಾಗುತ್ತದೆ. ಅಂತಹ ಕಡೆ ರೇಷ್ಮೆ ಗೂಡಿನ ಕೇಂದ್ರವನ್ನು ಸ್ಥಾಪನೆ ಮಾಡುವುದು ಒಳ್ಳೆಯದು ಎಂಬುದಾಗಿ ನಾನು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಿಗೆರೆ—ಅನುಸೂಚಿತ ಜಾತಿಗಳು).—ಇಪ್ಪತ್ತಾರು ಮತ್ತು ನಲವತ್ತೊಂದನೇ ಡಿಮ್ಯಾಂಡಿನ ಮನವಿಗಳನ್ನು ಸ್ವಾಗತಿಸುತ್ತೇನೆ.

ಈಗ ನಮ್ಮ ಸರ್ಕಾರ ಸುಮಾರು ಹತ್ತು ಕೋಟಿಗೆ ಮೇಲ್ಪಟ್ಟು ಕೈಗಾರಿಕೆಗೆ ಹಣ ಖರ್ಚುಮಾಡಲು ಯೋಚಿಸಿದೆ. ಈಗ ನಾವು ಆ ಹಣಕ್ಕೆ ಮಂಜೂರಾತಿ ಕೊಡಬೇಕಾಗಿದೆ. ಬಡ್ಜೆಟ್ ಸೆಷನ್ನಲ್ಲಿ ನಮ್ಮ ಪ್ರಾಂತ್ಯಕ್ಕೆ ಏನಾದರೂ ಮಂಜೂರು ಮಾಡುತ್ತಾರೆಯೇ? ನಮ್ಮ ಡಿಸ್ಟ್ರಿಕ್ಟಿಗೆ, ನಮ್ಮ ತಾಲ್ಲೂಕಿಗೆ ಏನು ಕೊಡುತ್ತಾರೆ? ಇಷ್ಟು ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಾ ಇರುವಾಗ ನಮ್ಮ ಚಿಕ್ಕಮಗಳೂರು ತಾಲ್ಲೂಕಿಗೆ ಎಷ್ಟು ಹಣ ಖರ್ಚುಮಾಡುತ್ತಾರೆ! ಎಂದು ಜನರು ಕೇಳುತ್ತಾರೆ. ಈಗ ದೇಶದ ವರಮಾನ ನೋಡಿದರೆ, ಕೈಗಾರಿಕೆಗಳಿಂದ ಸುಮಾರು ಇಪ್ಪತ್ತೈದು ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಬರುತ್ತದೆ. ಖರ್ಚುಮಾಡುವುದನ್ನು ನೋಡಿದರೆ ಹತ್ತು ಕೋಟಿಗೆ ಮೇಲ್ಪಟ್ಟು ಆಗುತ್ತದೆ. ಇಷ್ಟು ಭಾರಿ ಹಣವನ್ನು ಖಾಸಗೀಯವರು ಖರ್ಚು ಮಾಡಿದರೆ, ಇಷ್ಟು ಹಣ ಉತ್ಪತ್ತಿ ಬಂದರೆ, ಸುಮ್ಮನೆ ಇರುತ್ತಾರೆಯೇ? ಎಷ್ಟು ಹಣ ಖರ್ಚು ಮಾಡುತ್ತಾರೋ, ಎಷ್ಟು ನಿರೀಕ್ಷಿಸುತ್ತಾರೋ ಅದರ ಅರ್ಧದಷ್ಟಾದರೂ ಉತ್ಪತ್ತಿ ಬರಬಾರದೇ? ಅದಕ್ಕೆ ಕಾರಣವೇನು? ದೇಶದಲ್ಲಿ ಕೈಗಾರಿಕೆಯೆಲ್ಲಾ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅಥವಾ ಯಾರ ಪ್ರಭಾವ ಜಾಸ್ತಿ ಇರುತ್ತದೋ ಅಂತಹ ಪ್ರಭಾವಕ್ಕೆ ಒಳಪಟ್ಟು, ಅಂತಹ ಸ್ಥಳಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ ಎಂದು ಜನರು ಹೇಳುತ್ತಾರೆ; ಆದರೆ ಕಚ್ಚಾ ಮಾಲುಗಳು ಎಲ್ಲಿ ಜಾಸ್ತಿಯಾಗಿ ಸಿಕ್ಕುತ್ತವೆ, ಯಾವ ಕೈಗಾರಿಕೆಯನ್ನು ಯಾವ ಸ್ಥಳದಲ್ಲಿ ಸ್ಥಾಪನೆಮಾಡಿದರೆ ಹೆಚ್ಚು ಪ್ರಯೋಜನವಾಗುತ್ತದೆ, ಲಾಭ ಬರುತ್ತದೆ, ಜನಗಳಿಗೆ ಅನುಕೂಲವಾಗುತ್ತದೆ, ದೇಶಾಭಿವೃದ್ಧಿಯಾಗುತ್ತದೆ ಎನ್ನುವ ತತ್ವದೃಷ್ಟಿಯಿಂದ ಸ್ಥಾಪನೆ ಮಾಡಿದ್ದಾರೆಯೇ? ಉತ್ಪತ್ತಿ ಎಷ್ಟು ನಿರೀಕ್ಷಣೆ ಮಾಡುತ್ತೇವೋ ಅಷ್ಟು ಬಾರದೇ ಇರುವುದಕ್ಕೆ ಕಾರಣವೇನು ಎಂಬುದನ್ನು ಕಂಡುಹಿಡಿಯಬೇಕು. ಈಗಾಗಲೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನೂ ಕೂಡ ಹಿಂದಿನ ಅನೇಕ ಅಧಿವೇಶನದಲ್ಲಿ ಚಿಕ್ಕಮಗಳೂರಿನಲ್ಲಿ ನೀರಿದೆ, ಬೊಂಬು ಇದೆ, ಬೇಕಾದಷ್ಟು ಬಿದಿರು ಬೆಳೆಯುತ್ತದೆ, ಬಾಳೆಹೊನ್ನೂರಿನಲ್ಲಿ ಕಾಗದದ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕು ಎಂದು ಸಲಹೆ ಮಾಡಿದ್ದೇನೆ. ಶಿವಮೊಗ್ಗಾದಲ್ಲಿರುವ ಕಾಗದದ ಕಾರ್ಖಾನೆಗೆ ನಮ್ಮ ಚಿಕ್ಕಮಗಳೂರಿನಿಂದ ಬೊಂಬು ಹೋಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಿಂದ ಕೆಮ್ಮಣ್ಣುಗುಂಡಿಯಿಂದ ಕಬ್ಬಿಣದ ಕಾರ್ಖಾನೆಗೆ ಕಬ್ಬಿಣದ ಅದುರು ಹೋಗುತ್ತದೆ! ಚಿಕ್ಕಮಗಳೂರಿನಲ್ಲಿ ದೈವಿಕ ಸಂಪತ್ತು ಇದೆ. ಇಷ್ಟಾದರೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗಾರಿಕೆಯನ್ನು ಏತಕ್ಕೆ ಸ್ಥಾಪಿಸಲಿಲ್ಲವೋ ನಾನು ಬೇರೆ ಕಾಣೆ. ಅದು ಚಿಕ್ಕಮಗಳೂರಿನ ದುರದೃಷ್ಟವೋ ಏನೋ. ಚಿಕ್ಕಮಗಳೂರಿನ ಕಿತ್ತಲೆಹಣ್ಣಿನ ಮಾರ್ಕೆಟ್ ಇಂಡಿಯಾ ದೇಶಕ್ಕೆ ಎರಡನೆಯದು. ಒಂದನೆಯದು ನಾಗಪುರ. ಮಲೆನಾಡಿನಲ್ಲಿ ಹೆಚ್ಚು ಹಣ್ಣು ಬೆಳೆಯುವುದು ಗೊತ್ತಿದೆ. ಚಿಕ್ಕಮಗಳೂರಿನಲ್ಲಿ ಅನಾನೋಸ್, ಕಿತ್ತಲೆಹಣ್ಣು, ಮಾವಿನಹಣ್ಣು ವಗೈರೆ ಹಣ್ಣುಗಳನ್ನು ಬೆಳೆಯುತ್ತಾರೆ. ಆದ್ದರಿಂದ ಫ್ರೂಟ್ ಕ್ಯಾನಿಂಗ್ ಅಂಡ್ ಪ್ರಿಸರ್ವೇಷನ್ ಫ್ಯಾಕ್ಟರಿಯನ್ನು ಮೂಡಿಗೆರೆಯಲ್ಲಿ ಸ್ಥಾಪನೆ ಮಾಡಬೇಕು ಎಂದು ಅನೇಕ ರೈತರ ಸಮ್ಮೇಳನದಲ್ಲಿ ತೀರ್ಮಾನಮಾಡಿ, ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಿದ್ದಾರೆ. ಮಾನ್ಯ ಕೇಂದ್ರ ಮಂತ್ರಿ ಶ್ರೀ ದೇಶ್‌ಮುಖ್ ಅವರು ಚಿಕ್ಕಮಗಳೂರಿಗೆ ಬಂದಾಗ, ಚಿಕ್ಕಮಗಳೂರು ಮುನಿಸಿಪಾಲಿಟಿಯವರೂ, ಮೂಡಿಗೆರೆ ಮುನಿಸಿಪಾಲಿಟಿಯವರೂ ಒಂದು ಬಿನ್ನವತ್ತಳೆಯನ್ನು ಕೊಟ್ಟು ಫ್ರೂಟ್ ಕ್ಯಾನಿಂಗ್ ಮತ್ತು ಪ್ರಿಸರ್ವೇಷನ್ ಫ್ಯಾಕ್ಟರಿಯನ್ನು ಅಲ್ಲಿ ಸ್ಥಾಪನೆ ಮಾಡಬೇ

ಕೆಂದು ಹೇಳಿದರು. ಅಲ್ಲದೆ ಸಿಮೆಂಟ್ ಕಾರ್ಖಾನೆಯನ್ನು ಬೀರೂರಿನಲ್ಲಿ ಮಾಡಬೇಕು, ಅಲ್ಲಿ ಕಚ್ಚಾ ಮಾಲು ಸಿಕ್ಕುತ್ತದೆ, ಹೀಗೆ ಅಲ್ಲಿ ಎಲ್ಲ ಸೌಕರ್ಯಗಳೂ ಇವೆ ಎಂದು ಹೇಳಿದರು. ಚಿಕ್ಕಮಗಳೂರು ಜಿಲ್ಲೆಗೆ—ಯಾವ ಒಂದು ಕಾರ್ಖಾನೆ ಮಾಡಬೇಕೆಂದು ಕೇಳಿದರೂಕೂಡ ಸರ್ಕಾರ ಉದಾಸೀನ ಮಾಡುತ್ತಾ ಬಂದಿದೆ. ಈಗ ಮಾನ್ಯ ಶ್ರೀ ಟಿ. ಹನುಮಯ್ಯನವರು ಕೋಟಿಗಟ್ಟಲೆ ಚರ್ಮದ ಸಾಮಾನುಗಳನ್ನು ಪರದೇಶದಿಂದ ಬರಮಾಡಿಕೊಳ್ಳುತ್ತಾರೆ ಎಂದು ಹೇಳಿದರು. ಮಲೆನಾಡಾದ ಚಿಕ್ಕಮಗಳೂರಿನಲ್ಲಿ ಚರ್ಮ ಹದ ಮಾಡುವ ಮತ್ತು ಚರ್ಮದ ಸಾಮಾನುಗಳನ್ನು ತಯಾರು ಮಾಡುವ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆ ಮಲೆನಾಡು ಅಭಿವೃದ್ಧಿಯಾಗುತ್ತದೆ. ದೇಶಾಭಿವೃದ್ಧಿಯಾಗುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೈಗಾರಿಕೆ ಹೆಚ್ಚಾಗಿ ಸ್ಥಾಪನೆ ಮಾಡಬಾರದು. ಇಂತಹ ಕೈಗಾರಿಕೆಗಳನ್ನು ಮಲೆನಾಡಿನಲ್ಲಿ ಹೆಚ್ಚು ಹೆಚ್ಚು ಸ್ಥಾಪನೆ ಮಾಡಬೇಕು. ಚಿಕ್ಕಮಗಳೂರಿನಲ್ಲಿ ಆಕ್ಯುಪೇಷನಲ್ ಇನ್ಸ್ಟಿಟ್ಯೂಟ್ ಒಂದನ್ನು ಸ್ಥಾಪನೆ ಮಾಡಬೇಕು.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ಸರ್ಕಾರದವರು ಸ್ಥಾಪನೆ ಮಾಡಿದ ಕೆಲವು ಕೈಗಾರಿಕೆಗಳಿವೆ. ಆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ ಕಾಲದಲ್ಲಿ ಹಾಕಿದ ಕೆಲವು ಹಿಂದಿನ ಕಾಲದ ಯಂತ್ರಗಳನ್ನೇ ಇಂದಿಗೂ ಇಟ್ಟುಕೊಂಡು ಕೆಲಸಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಉದಾಹರಣೆಗೆ ಟ್ಯಾನಿಂಗ್ ಫ್ಯಾಕ್ಟರಿ, ಪೋರ್ಸಲೇನ್ ಫ್ಯಾಕ್ಟರಿ ಕಾರ್ಖಾನೆಗಳನ್ನು ತೆಗೆದುಕೊಂಡರೆ, ಅವುಗಳು ಪ್ರಾರಂಭವಾದಾಗ ಯಾವ ಯಂತ್ರೋಪಕರಣಗಳನ್ನು ತಂದುಹಾಕಿದ್ದಾರೋ ಅವೇ ಯಂತ್ರಗಳನ್ನೇ ಇಂದಿಗೂ ಉಪಯೋಗಿಸುತ್ತಿದ್ದಾರೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೊಸ ಯಂತ್ರಗಳನ್ನು ತರುತ್ತಾರೆಂದು ಭಾವಿಸಿದ್ದೆವು. ಆದರೆ ಹಾಗೆ ಮಾಡಲಿಲ್ಲ. ಯಾವುದನ್ನೂ ಬದಲಾಯಿಸದೆ ಹಾಗೆಯೇ ನಡೆಸಿಕೊಂಡು ಹೋಗುತ್ತಿದ್ದಾರೆ. ಗಂಧದ ಎಣ್ಣೆ ಕಾರ್ಖಾನೆ ಮೈಸೂರಿನಲ್ಲೊಂದಿದೆ, ಶಿವಮೊಗ್ಗದಲ್ಲೊಂದಿದೆ. ಮೈಸೂರಿನ ಕಾರ್ಖಾನೆಯೇನೋ ಚೆನ್ನಾಗಿದೆ. ಶಿವಮೊಗ್ಗದಲ್ಲಿ ಏಕೆ ಕಾರ್ಖಾನೆಯನ್ನು ಸ್ಥಾಪನೆ ಮಾಡಿದರೆಂದರೆ, ಅಲ್ಲಿ ಗಂಧದಮರ ಹೆಚ್ಚು ಸಿಕ್ಕುತ್ತದೆ, ಅಲ್ಲಿಂದ ಬೇರೆಕಡೆ ಸಾಗಿಸುವುದರ ಖರ್ಚು ಕಡಿಮೆಯಾಗಲಿ ಎಂದು ಮಾಡಿದರು ಪೂರ್ತಿ ಅಗತ್ಯವಾದ ಯಂತ್ರಗಳನ್ನು ಹಾಕಿ ಸ್ಥಾಪನೆ ಮಾಡಲಿಲ್ಲ. ಮೈಸೂರಿನಲ್ಲೇ ಸರಿಯಾದ ಆಧುನಿಕ ಯಂತ್ರಗಳನ್ನಿಟ್ಟು ಕಾರ್ಖಾನೆಯನ್ನು ನಡೆಸಬೇಕು. ಇಲ್ಲದಿದ್ದರೆ ಶಿವಮೊಗ್ಗಕ್ಕೆ ಸಾಗಿಸಬೇಕು. ಹಾಗೆ ಮಾಡದೆ ಕಾರ್ಖಾನೆಯನ್ನು ಪ್ರಾರಂಭಮಾಡಿದಾಗ ಯಾವ ಯಂತ್ರಗಳನ್ನು ಹಾಕಿದರೋ ಅವನ್ನೇ ಇಟ್ಟುಕೊಂಡು ಈಗಲೂ ಕೆಲಸ ಮಾಡುತ್ತಿದ್ದಾರೆ. ಚೆನ್ನಾಗಿ ಕೆಲಸ ಮಾಡುವ ಆಧುನಿಕ ಯಂತ್ರಗಳನ್ನು ತಂದು ಶಿವಮೊಗ್ಗ ಅಥವಾ ಮೈಸೂರು ಯಾವುದಾದರೂ ಒಂದು ಕಡೆ ಸರಿಯಾಗಿ ನಡೆಸಬೇಕು. ಈಗಿರತಕ್ಕ ಯಂತ್ರೋಪಕರಣಗಳನ್ನೇ ಇಟ್ಟು ನಡೆಸಬೇಕೆಂದರೆ, ಮೈಸೂರಿನಲ್ಲೇ ಮಾಡಬೇಕೆಂದು ಕಾಣುತ್ತದೆ. ಹೊಸ ಯಂತ್ರಗಳನ್ನು ತಂದರೆ, ಗಂಧದಮರ ಹೆಚ್ಚು ಸಿಕ್ಕುವುದರಿಂದ ಶಿವಮೊಗ್ಗದಲ್ಲೇ ಮಾಡುವುದು ಒಳ್ಳೆಯದೆಂದು ಕಾಣುತ್ತದೆ. ಅಂತೂ ಯಾವುದಾದರೂ ಒಂದು ಕಡೆಯಲ್ಲಿ ಸರಿಯಾದ ರೀತಿಯಲ್ಲಿ ಮಾಡುವುದೊಳ್ಳೆಯದು.

ನಮ್ಮ ದೇಶದಲ್ಲಿ ಇನ್ನೊಂದು ಸಿಮೆಂಟ್ ಕಾರ್ಖಾನೆಯನ್ನು ತೆರೆಯುವುದಕ್ಕವಕಾಶವಿದೆ. ಇಂಡಿಯಾ ಸರ್ಕಾರದವರೂ ಹೀಗೆ ತೆರೆಯಬಹುದೆಂದು ಸೂಚನೆ ಕೊಟ್ಟಿದ್ದಾರೆ. ಇದುವರೆಗೆ ನಡೆದಿರುವ ಸರ್ವೆ ಪರಿಶೀಲನೆಯಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಸಿಮೆಂಟ್ ಕಾರ್ಖಾನೆಗೆ ಬೇಕಾದ ಎಲ್ಲ ಅನುಕೂಲಗಳೂ ಇವೆ, ಆದರೆ ನೀರಿನ ಕೊರತೆಯಿದೆ ಎಂಬ ಅಭಿಪ್ರಾಯ ಬಂದಿರುವಂತೆ ಕಾಣುತ್ತದೆ. ಅಲ್ಲಿ ನೀರು ಸರಬರಾಜು ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಹಾಗೆ ಮಾಡಿಕೊಂಡು ಮಾಡಬಹುದು. ಚಿಕ್ಕನಾಯಕನಹಳ್ಳಿಯಲ್ಲಿರುವ ಅನುಕೂಲ ಸಿಮೆಂಟ್ ಕಾರ್ಖಾನೆಯನ್ನು ತೆರೆಯುವುದಕ್ಕೆ ಇನ್ನೆಲ್ಲೂ ಇಲ್ಲ. ಆದುದರಿಂದ ಸರ್ಕಾರದವರು ಅಲ್ಲಿ ತೆರೆಯಲು ಏರ್ಪಾಡು ಮಾಡಬೇಕು.

ಕುಣಿಗಲು ಪ್ರದೇಶದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಬಹುದಿವಸಗಳಿಂದ ಜನರು ಒತ್ತಾಯಮಾಡುತ್ತಿದ್ದಾರೆ. ಆದರೆ ಕಬ್ಬಿನ ವ್ಯವಸಾಯ ಮಾಡಲು ಯಾವಾಗಲೂ ಸಾಕಾದಷ್ಟು ನೀರು ಸಿಕ್ಕುವುದಿಲ್ಲವೆಂದು ಅಭಿಪ್ರಾಯ ಬಂತು. ಅಲ್ಲಿ ಜಲಾಶಯ ಮತ್ತು ದೊಡ್ಡ ದೊಡ್ಡ ಕೆರೆಗಳಿದ್ದು ಯಾವಾಗಲೂ ನೀರಿನ ಹೆಚ್ಚು ಸೌಲಭ್ಯಕ್ಕೆ ಅವಕಾಶವಿದೆ. ಅಲ್ಲದೆ ಇಪ್ಪತ್ತು-ಇಪ್ಪತ್ತೈದು ಸಾವಿರ ಎಕರೆ ಜಮೀನು ಒಂದೇ ಪ್ರದೇಶದಲ್ಲಿರುವುದರಿಂದ, ಇದಕ್ಕೆ ಅಗತ್ಯವಾದ ಯಾವ ಏರ್ಪಾಡನ್ನು ಬೇಕಾದರೂ ಮಾಡಿಕೊಳ್ಳಬಹುದು. ಸರ್ವೆ ನಡೆಸಿ, ಕುಣಿಗಲು ಪ್ರದೇಶದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಏರ್ಪಾಡು ಮಾಡಬೇಕು. ಸಣ್ಣ ಪುಟ್ಟ ಅಡಚಣೆಗಳಿವೆಯೆಂದು ಅಧಿಕಾರಿಗಳೂ ಇಲಾಖೆಯವರೂ ಹೇಳಿದರೂ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಈ ಎರಡನ್ನೂ ತೆಗೆದುಕೊಂಡು ಕೊನೆಯ ತೀರ್ಮಾನಕ್ಕೆ ಬರಬೇಕೆಂದು ಸಲಹೆ ಮಾಡುತ್ತೇನೆ.

ಗ್ರಾಮ ಕೈಗಾರಿಕೆ ಯೋಜನೆಯನ್ನು ನೋಡಿದರೆ, ಈ ಇಲಾಖೆಯಿಂದ ಅನುಕೂಲವಾಗಬಹುದೆಂಬ ಏನೋ ಒಂದು ದೊಡ್ಡ ಆಶೆ ಕಾಣುತ್ತದೆ. ನಮ್ಮ ಹಳ್ಳಿಗಳಲ್ಲಿ ಕೈಗಾರಿಕೆ ಅಭಿವೃದ್ಧಿಗೆ ಹೆಚ್ಚು ಅನುಕೂಲಗಳು ಇವೆಯೆಂದು ಕಾಣುತ್ತದೆ. ಆದರೆ ಈ ಇಲಾಖೆಯ ಸಿಬ್ಬಂದಿಯ ಕೆಲಸ ಕಾರ್ಯಗಳನ್ನು ನೋಡಿದರೆ, ಇವರ ಕೆಲಸ ಬರಿಯ ಸಾಲವನ್ನು ಕೊಡುವುದಷ್ಟೇ ಎಂದು ಕಾಣುತ್ತದೆ. ಸಾಲ ಕೊಡುವುದಕ್ಕೆ ಇಷ್ಟೊಂದು ಸಿಬ್ಬಂದಿ ಇಟ್ಟುಕೊಂಡರೆ, ಇದರಿಂದ ಪ್ರಯೋಜನವಾಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕು. ಇಷ್ಟರಿಂದಲೇ ಗ್ರಾಮ ಕೈಗಾರಿಕೆಯು ಅಭಿವೃದ್ಧಿಯಾಗುತ್ತದೆಯೆಂದರೆ, ಇದು ಸಾಧ್ಯವಿಲ್ಲ. ಸಾಲ ಕೊಡುವುದಕ್ಕೆ ಸಿವಿಲಿಯನ್ ಅಧಿಕಾರಿಗಳನ್ನು ಹಾಕಿದ್ದಾರೆ. ಇದಕ್ಕೆ ಬದಲು, ಕೈಗಾರಿಕಾತಜ್ಞರನ್ನು ಹಾಕಿ, ಯಾರಿಗೆ ಸಾಲ ಕೊಟ್ಟಿದ್ದೇವೆ, ಏನು ಕೈಗಾರಿಕೆ ಮಾಡುತ್ತಾರೆ, ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆಯೆ ಎಂಬುದನ್ನು ಪರಿಶೀಲನೆಮಾಡಬೇಕು. ಹೀಗೆ ಕೈಗಾರಿಕಾತಜ್ಞರನ್ನು ಹಾಕದೆ ಬರಿಯ ಸಾಲ ಕೊಡುವುದಕ್ಕೆ ಸಿವಿಲಿಯನ್ ಅಧಿಕಾರಿಗಳನ್ನು ಹಾಕುತ್ತಿರುವುದು ಸರಿಯಲ್ಲ ಹಿತ್ತಾಳೆ ಕೈಗಾರಿಕೆಯಿದೆ, ಖಾದಿ ಕೈಗಾರಿಕೆ ಇದೆ. ಇಂಥ ಗೃಹಕೈಗಾರಿಕೆಗಳು ಬಹಳ ವರ್ಷಗಳಿಂದ ಬೆಳೆದು ಬಂದಿವೆ. ಆದರೆ ಇತ್ತೀಚೆಗೆ ಈ ಕೆಲವು ಕೈಗಾರಿಕೆಗಳು ನಶಿಸಿಹೋಗಿವೆ. ಇವುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಬರಿಯ ಸಾಲ ಕೊಡುವುದೇ ಮುಖ್ಯವಲ್ಲ. ಈ ಕೈಗಾರಿಕೆಗಳನ್ನು ನಡೆಸುವವರಿಗೆ ಸರಿ

(ಶ್ರೀ ಟಿ. ಎಚ್. ಮೂಡಲಗಿರಿಗೌಡ)

ಯಾದ ಸಲಹೆಗಳನ್ನು ಕೊಡಲು ಕೈಗಾರಿಕಾ ತಜ್ಞರನ್ನು ಹಾಕಬೇಕು ಎಂದು ಸಲಹೆಮಾಡುತ್ತೇನೆ.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಮಿಸಲೇನಿಯಸ್ ಬೇಡಿಕೆಗಳ ಸಂಬಂಧದ ಚರ್ಚೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೆ; ಆದರೆ ಅವಕಾಶವಾಗಲಿಲ್ಲ. ಈ ಸಂದರ್ಭದಲ್ಲಿ ಸಭೆಯ ಮುಂದಿರುವುದೂ ಕೈಗಾರಿಕೆಗಳ ಸುಲಲಿತ ಆಡಳಿತಕ್ಕೆ ಸಂಬಂಧಪಟ್ಟ ವಿಷಯವೇ ಆಗಿರುವುದರಿಂದ ಆ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿಚ್ಛಿಸುತ್ತೇನೆ. ಮುಖ್ಯ ಮಂತ್ರಿಗಳು ಆಯ ವ್ಯಯದ ಅಂದಾಜನ್ನು ಮಂಡಿಸುವ ಸಮಯದಲ್ಲಿ ಒಂದು ಘೋಷಣೆಯನ್ನು ಮಾಡಿದರು. ಅದೇನೆಂದರೆ, ಕೈಗಾರಿಕೆಗಳ ಆಡಳಿತದಲ್ಲಿ ಕಾರ್ಮಿಕರು ಭಾಗವಹಿಸುವ ಅವಕಾಶವನ್ನು ಕಲ್ಪಿಸುತ್ತೇವೆಂದು ಹೇಳಿದರು. ಇದು ಘೋಷಣೆ ಮಾಡುವಷ್ಟು ಕಾರ್ಯಗತ ಮಾಡುವುದು ಸುಲಭ ಕಾರ್ಯವಲ್ಲ. ಕಾರ್ಮಿಕರ ಕಾನೂನು ಲೋಕ ಸಭೆಯಿಂದ ತಿದ್ದುಪಡಿಯಾಗಬೇಕು. ಇದಾದ ಹೊರತು ಸಂಸ್ಥಾನಗಳಲ್ಲಿ ಈ ಉದ್ದೇಶವನ್ನು ಜಾರಿಗೆ ತರುವುದು ಕಷ್ಟ. ಆದರೂ ಸರ್ಕಾರದವರು ತಮ್ಮ ಆಡಳಿತಕ್ಕೊಳಪಟ್ಟ ಕೈಗಾರಿಕೆಗಳಲ್ಲಿ ಈ ಪ್ರಯೋಗವನ್ನು ಮೊದಲುಮಾಡಬಹುದೆಂದು ಸೂಚಿಸುತ್ತೇನೆ. ಸಾಮಾನ್ಯವಾಗಿ ಪ್ರಜಾಪ್ರಭುತ್ವ ಪದ್ಧತಿ, ಸಮತಾವಾದಿ ಸಮಾಜದ ತತ್ವಗಳ ಕಲ್ಪನಗಳನ್ನು ನಾವು ಅಂಗೀಕರಿಸುವುದಕ್ಕೆ ಮುಂಚೆ, ಬಂಡವಾಳ ಮತ್ತು ಯಂತ್ರೋಪಕರಣಗಳೇ ಯಾವ ಒಂದು ಕಾರ್ಖಾನೆಯ ಅಭಿವೃದ್ಧಿಗೆ ಕಾರಣವಾಗಿರುವ ಮುಖ್ಯ ಘಟಕಗಳು ಎಂಬ ಭಾವನೆಯಿತ್ತು. ಆದರೆ ಈ ಕಾರ್ಖಾನೆಗಳ ಕೆಲಸದಲ್ಲಿ ನಿರತರಾಗಿ ಬೆವರು ಸುರಿಸಿ ಕೆಲಸ ಮಾಡುವ ಕೆಲಸಗಾರರೂ ಪ್ರಾಮುಖ್ಯವಾದ ಅಂಗ, ಅವರು ಚೆನ್ನಾಗಿ ಕೆಲಸ ಮಾಡಬೇಕು, ತೃಪ್ತಿಯಿಂದಿರಬೇಕು, ಹೀಗಾಗಬೇಕಾದರೆ ಅವರಿಗೆ ಕೆಲವು ಹಕ್ಕುಗಳನ್ನು ಕೊಡಬೇಕು ಮತ್ತು ಕರ್ತವ್ಯ ಜ್ಞಾನವನ್ನು ಅವರಲ್ಲಿ ಮೂಡಿಸಬೇಕು. ಹೀಗಾದರೆ, ಪರಸ್ಪರ ಎಲ್ಲ ವರ್ಗಗಳೂ ಅಭಿವೃದ್ಧಿಯಾಗುವುದಕ್ಕೂ ಸರ್ವ ಸಂಪತ್ತನ್ನೂ ಹೆಚ್ಚಿಸುವುದಕ್ಕೂ ಸಾಧ್ಯ. ಈ ಅಭಿಪ್ರಾಯ ಬಂದ ಮೇಲೆ ಈ ಪ್ರಯೋಗಗಳನ್ನು ಮಾಡುವುದಕ್ಕೆ ಪ್ರಾರಂಭವಾಯಿತು. ತಾತಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಈ ಪ್ರಯೋಗ ಪ್ರಾರಂಭವಾಗಿದೆ. ಹಾಗೂ ಕೇಂದ್ರ ಕಾರ್ಮಿಕ ಸಚಿವ ಶಾಖೆಯಲ್ಲಿ ಈ ಪ್ರಯೋಗವನ್ನು ದೇಶಾದ್ಯಂತ ಜಾರಿಗೆ ತರಬೇಕೆಂದಿರುವುದನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಇದು ಅತ್ಯಂತ ಒಳ್ಳೆಯ ಪ್ರಯೋಗ. ಇದು ಯಶಸ್ವಿಯಾಗಬೇಕಾದರೆ, ಸರ್ಕಾರದವರು ಪ್ರತಿ ಹೆಜ್ಜೆಗೂ ಸಂಬಂಧಪಟ್ಟ ಕಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳ ಸಲಹೆ ಸಹಕಾರಗಳನ್ನು ತೆಗೆದುಕೊಂಡು

2-30 P.M.

ಮಾಡಬೇಕಾಗಿದೆ. ಕಾರ್ಖಾನೆಗಳಲ್ಲಿರತಕ್ಕ ಕಾರ್ಮಿಕ ಸಂಘಗಳ ಅಧ್ಯಕ್ಷರನ್ನು ಕಾರ್ಯದರ್ಶಿಗಳನ್ನು ಆಡಳಿತದಲ್ಲಿ ಭಾಗವಹಿಸಲು ಸೀದಾ ನೇಮಕ ಮಾಡುವುದಕ್ಕಿಂತ ಆ ಸಂಘಗಳ ಸಲಹೆಯನ್ನು ತಾವು ಕೇಳಬೇಕು. ನಿಮ್ಮ ಪರವಾಗಿ, ನಿಮ್ಮ ಪ್ರತಿನಿಧಿಯಾಗಿ ಈ ಆಡಳಿತ ಮಂಡಳಿಯಲ್ಲಿ ಭಾಗವಹಿಸಲು ಯಾರನ್ನು ಸೂಚಿಸುತ್ತೀರಿ ಎಂದು ಆಯಾ ಸಂಘಗಳನ್ನು ಕೇಳಿ ಅವರ ಸಲಹೆಯಂತೆ ತಾವು ನಡೆಯಬೇಕು. ಹೀಗೆ ಸರ್ಕಾರದವರು ಕಾರ್ಮಿಕರ ಸಂಘಗಳ ಸಲಹೆಗಳನ್ನು ಪಡೆದು ಆಡಳಿತ ವರ್ಗದಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಕೊಟ್ಟರೆ ಕಾರ್ಮಿಕರಿಗೆ ಆಡಳಿತದಲ್ಲಿ ಕೂಡ ಎಷ್ಟು ಕಷ್ಟಗಳಿವೆ, ಆಡಳಿತ ವರ್ಗದಲ್ಲಿ ಎಷ್ಟೊಂದು ಅಡ್ಡಿ ಆತಂಕಗಳಿರುತ್ತವೆ ಎನ್ನುವುದರ ಪರಿಚಯ ಉಂಟಾಗಿ ಪರಸ್ಪರ ವಿಚಾರ ವಿನಿಮಯಕ್ಕೆ ಅವಕಾಶವಾಗಿ ಒಬ್ಬರು ಮತ್ತೊಬ್ಬರನ್ನು ಚೆನ್ನಾಗಿ ಅರಿಯುತ್ತಾರೆ. ಇಬ್ಬರ ಧ್ಯೇಯವೂ ಒಂದೇ ಎಂದು ತಿಳಿಯುತ್ತಾರೆ. ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವುದು ಮತ್ತು ನ್ಯಾಯವಾದ ರೀತಿಯಲ್ಲಿ ಅನುಕೂಲತೆಗಳನ್ನು ಹೆಚ್ಚಿಗೆ ಕಲ್ಪಿಸಿಕೊಳ್ಳುವುದು ಎಂಬುದನ್ನು ಪರಸ್ಪರ ತಿಳಿದುಕೊಂಡು ಗಾಡಿಯ ಎರಡು ಚಕ್ರ ದೋಪಾದಿಯಲ್ಲಿ ಕೆಲಸ ಮಾಡಿಕೊಂಡು ಹೋಗಬೇಕು ಎನ್ನುವ ಭಾವನೆಯನ್ನು ರೂಪಿಸಿ ಕೊಳ್ಳುವುದಕ್ಕೆ ಬಹಳ ಸಹಾಯವಾಗಿ ಪರಿಣಮಿಸೀತು. ಈ ಸಮಯದಲ್ಲಿ ಒಂದು ವಿಷಯವನ್ನು ಹೇಳುತ್ತೇನೆ. ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಮಿಕರು ಬಹಳ ರಾಷ್ಟ್ರ ಪ್ರೇಮದಿಂದ ಕೆಲಸಮಾಡುತ್ತಿದ್ದಾರೆ. ಸಂಸ್ಥಾನದಲ್ಲಿ ಎಲ್ಲಿಯೂ ಇಲ್ಲದೆ ಇರತಕ್ಕಂಥ ಒಂದು ಒಪ್ಪಂದವನ್ನು ಮೂರು ವರ್ಷಗಳಿಗೆ ಮಾಡಿದರು. ಇನ್ನು ಎರಡ ಮೂರು ತಿಂಗಳಲ್ಲಿ ಆ ಒಪ್ಪಂದದ ಅವಧಿ ಮುಗಿಯುತ್ತದೆ. ಒಪ್ಪಂದದ ಅವಧಿಯಲ್ಲಿ ಅವರು ಯಾವ ಹೊಸ ಬೇಡಿಕೆಗಳನ್ನೂ ಮುಂದೊಡ್ಡದೆ ಬಹಳ ಚೆನ್ನಾಗಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಬಂದು, ಹೆಚ್ಚಿನ ಉತ್ಪತ್ತಿಯನ್ನು ಕೂಡ ತೋರಿಸಿ ಕಾರ್ಖಾನೆಗೆ ಲಾಭವನ್ನು ಕೂಡ ಗಳಿಸಿ ಕೊಟ್ಟಿದ್ದಾರೆ. ಇಷ್ಟಾದರೂ ಇವರ ಕನಿಷ್ಠ ವೇತನ ದಿನ ಒಂದಕ್ಕೆ ಹತ್ತು ಆಣೆಗಳು ಮಾತ್ರ ಇತರ ಕಾರ್ಖಾನೆಗಳಲ್ಲಿ ಕನಿಷ್ಠ ವೇತನವನ್ನು ಹದಿನಾಲ್ಕಾಣೆ, ಒಂದು ರೂಪಾಯಿ ಈ ರೀತಿಯಾಗಿ ಏರಿಸಿದ್ದಾರೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಕೊಡತಕ್ಕ ವೇತನ ಬಹಳ ಕಡಿಮೆ; ಇದನ್ನು ಹೆಚ್ಚಿಸಬೇಕು ಎಂಬ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಆಮೇಲೆ ಬೇಡಿಕೆಯನ್ನು ಇಡುತ್ತಾರೆ. ಆಮೇಲೂ ಸರ್ಕಾರದವರು ಇವರ ಬೇಡಿಕೆಗಳನ್ನು ಈಡೇರಿಸದೆ ಹೋದರೆ ಕಾನೂನು ಪ್ರಕಾರವಿರತಕ್ಕ ಕೆಲಸಗಳನ್ನು ಮಾಡುವುದಕ್ಕೆ ಹೋಗಬಹುದು. ಕಾರ್ಮಿಕರು ಅಲ್ಲಿಯವರೆಗೂ ಹೋಗುವುದಕ್ಕೆ ಅವಕಾಶ ಕೊಡದೆ, ಈ ಸಮಸ್ಯೆಯನ್ನು ಪರಿಹರಿಸಲು ಒಂದು Wage Board ರಚನೆ ಮಾಡಬೇಕು ಅಥವಾ ಸರ್ಕಾರದವರೇ ನೇರವಾಗಿ ಸಂಧಾನ ನಡೆಸಿ ಕನಿಷ್ಠ ವೇತನವನ್ನು ದೇಶ, ಕಾಲ, ವಿದ್ಯ ಮಾನಗಳಿಗನುಗುಣವಾಗಿ ಎಷ್ಟು ಹೆಚ್ಚಿಸಬಹುದೋ ಅಷ್ಟನ್ನು ಹೆಚ್ಚಿಸುವುದಕ್ಕೆ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥಿಸುತ್ತೇನೆ.

ಕೈಗಾರಿಕಾ ಸಚಿವರು ಭದ್ರಾವತಿ ಮತ್ತು ತರೀಕೆರೆ ತಾಲ್ಲೂಕುಗಳಲ್ಲಿರತಕ್ಕ ರೈತರ ಬೇಡಿಕೆಗಳನ್ನು ಅಂಗೀಕರಿಸಿ ಒಂದು ಸಕ್ಕರೆ ಕಾರ್ಖಾನೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಿ ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಸೇರಿಸಿರುವುದಕ್ಕಾಗಿ ಆ ಪ್ರದೇಶದ ಜನರ ಪರವಾಗಿ ಕೃತಜ್ಞತೆಗಳನ್ನು ಸೂಚಿಸದಿರಲಾರೆ. ಆದರೆ ಇಷ್ಟು ಮಾತ್ರ ಮಾಡಿದ್ದು ಸಾಲದು. ಇದನ್ನು ಕೂಡಲೇ ಪ್ರಾರಂಭ ಮಾಡಬೇಕು. ಹಾಗಿಲ್ಲದೆ ನಿಧಾನ ಮಾಡಿದಷ್ಟೂ ನಮಗೆ ಕೈಗೆ ಬಂದದ್ದು ಬಾಯಿಗೆ ಬಾರದೆ ಹೋದೀತು. ಕೇಂದ್ರ ಸರ್ಕಾರದವರ ಮೇಲೆ ಎಷ್ಟೋ ಪ್ರಭಾವಗಳು ಬೀಳುತ್ತಿವೆ, ಒತ್ತಾಯಗಳು ಬೀಳುತ್ತಿವೆ ಎಂದು ಕೇಳಿದ್ದೇನೆ. ಇದರಲ್ಲಿ ಎಷ್ಟು ನಿಜಾಂಶವಿದೆಯೋ ನನಗೆ ಗೊತ್ತಿಲ್ಲ. ದೇಶದಲ್ಲಿ ಸಕ್ಕರೆ ಉತ್ಪತ್ತಿ ಜಾಸ್ತಿ

ಯಾಗುತ್ತಿರುವುದರಿಂದ ಹೊಸದಾಗಿ ಲೈಸೆನ್ಸ್ ಕೊಡ ಕೂಡದು ಎಂಬ ಒತ್ತಾಯ ಸಹ ನಡೆಯುತ್ತಿದೆ ಎಂದು ತಿಳಿದು ಬಂದಿದೆ. ಆಂಧ್ರ ಸರ್ಕಾರದವರು ಸುಮಾರು 14 ಲೈಸೆನ್ಸ್ ಅರ್ಜಿಗಳನ್ನು ಹಾಕಿದ್ದಾರೆಂದು ಕೇಳಿದ್ದೇನೆ. ಆದುದರಿಂದ ಸರ್ಕಾರದವರು ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಕೈಗೊಂಡು ಆದಷ್ಟು ಬೇಗ ಈ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿ ಭದ್ರಾವತಿ ಮತ್ತು ತರೀಕೆರೆ ತಾಲ್ಲೂಕಿನ ಜನರಿಗೆ ಇದರ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

*ಶ್ರೀ ಕೆ. ಪ್ರಭಾಕರ್ (ನೆಲಮಂಗಲ-ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ಕೈಗಾರಿಕೆಗಳ ಅಭಿವೃದ್ಧಿ ವಿಚಾರದಲ್ಲಿ ಯಾವ ನೀತಿಯನ್ನನುಸರಿಸುತ್ತಿದ್ದಾರೆಂದು ಈಗಾಗಲೇ ಹಲವು ಮಹನೀಯರು ಹೇಳಿದ್ದಾರೆ. ಈಗ ಕೈಗಾರಿಕೆಯ ವಿಚಾರದಲ್ಲಿ ಮೂರು ನಾಲ್ಕು ವಿಷಯಗಳಿಗೆ ಸರ್ಕಾರದವರು ಗಮನ ಕೊಟ್ಟರೆ ಹೆಚ್ಚಿನ ಉಪಕಾರ ದೇಶಕ್ಕೆ ಆಗಬಹುದು ಎಂಬ ಇಚ್ಛೆಯಿಂದ ಕೆಲವಾರು ವಿಚಾರಗಳನ್ನು ತಿಳಿಸುತ್ತೇನೆ. ನಮ್ಮ ದೇಶದಲ್ಲಿ ಕೈಗಾರಿಕೆಗಳು ಈಗ ಎಲ್ಲೆಲ್ಲಿ ಸ್ಥಾಪನೆಯಾಗಬೇಕು ಎಂಬ ಬಗ್ಗೆ ಜಿಲ್ಲಾವಾರು ತಾಲ್ಲೂಕುವಾರು ಪಟ್ಟಿಯನ್ನು ತಯಾರಿಸಿ, ಇವುಗಳನ್ನು ಪ್ರಾರಂಭಮಾಡಲು ಎಲ್ಲೆಲ್ಲಿ ಅನುಕೂಲಗಳಿವೆ, ಎಲ್ಲೆಲ್ಲಿ ಕಚ್ಚಾ ಪದಾರ್ಥಗಳು ದೊರೆಯುತ್ತವೆ, ಇವುಗಳನ್ನೆಲ್ಲ ಪರಿಶೀಲನೆ ಮಾಡಿ, ಎಲ್ಲೆಲ್ಲಿ ಯಾವಯಾವ ಕಚ್ಚಾ ಮಾಲು ದೊರೆಯುತ್ತದೆಯೋ ಅಲ್ಲಿ ಅದಕ್ಕೆ ಸಂಬಂಧಪಟ್ಟ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಹೀಗೆ ಮಾಡುವುದಕ್ಕೆ ಮುಂಚೆ ತಜ್ಞರ ಸಲಹೆಗಳನ್ನು ಪಡೆದು ಯಾವ ಯಾವ ಕೈಗಾರಿಕೆಗಳನ್ನು ಎಲ್ಲೆಲ್ಲಿ ಪ್ರಾರಂಭ ಮಾಡಿದರೆ ಚೆನ್ನಾಗಿ ನಡೆಯುತ್ತವೆ ಎಂದು ಪರಿಶೀಲನೆ ಮಾಡಿ ಎಷ್ಟು ಬೇಗ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದರೆ ಅಷ್ಟು ಒಳ್ಳೆಯದೆಂದು ಹೇಳುತ್ತೇನೆ.

ವಿಕೇಂದ್ರೀಕರಣ ನೀತಿಯ ವಿಚಾರದಲ್ಲಿ ಮಹಾತ್ಮ ಗಾಂಧಿಯವರ ಹೆಸರನ್ನು ಉಪಯೋಗಿಸಿ ಕೊಂಡು, ಅನೇಕರು ಅನೇಕ ವಿಧವಾಗಿ ಹೇಳಿಕೊಂಡು ಬಂದಿದ್ದಾರೆ. ಸರ್ಕಾರದವರೂ ಸಹ ಇದನ್ನೇ ಹೇಳಿದ್ದಾರೆ. ಬೆಂಗಳೂರಿನಲ್ಲಿ ಯಾವುದಾದರೂ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಜಪಾನಿನಿಂದ ಒಬ್ಬರು ಬಂದರೆ ಅವರಿಗೆ ಕೊಡಲು ಸ್ಥಳವಿದೆ, ವಿದ್ಯುಚ್ಛಕ್ತಿ ಇದೆ ಎಂದು ಎಲ್ಲ ಸಹಾಯವನ್ನೂ ಕೊಡುತ್ತೀರಿ. ಪೋರ್ಸ್‌ಲೇನ್ ಫ್ಯಾಕ್ಟರಿಗೆ ಒಬ್ಬ ಎಕ್ಸ್‌ಪರ್ಟ್ ಬರುತ್ತಾರೆಂದರೆ ಅವರಿಗೆ ಸಹಾಯವನ್ನು ಕೊಡುತ್ತೀರಿ. ಸುದ್ದೆಮಣ್ಣು ದೊರೆಯುವ ಕಡೆ ಒಂದು ಕಾರ್ಖಾನೆ ಸ್ಥಾಪನೆ ಮಾಡಬೇಕೆಂದರೆ ಅದಕ್ಕೆ ಜವಾಬ್ದಾರಿಯನ್ನು ತೆಗೆದುಕೊಂಡು ಮಾಡುವುದಿಲ್ಲ. ಬೆಂಗಳೂರು ಪಟ್ಟಣ ಆಕರ್ಷಣೀಯವಾಗಿದೆ. ಅಲ್ಲದೆ ಎಲ್ಲ ಜನರೂ ಬರುತ್ತಾರೆ. ಬೆಂಗಳೂರು ನಗರದ ಸುತ್ತಮುತ್ತಲೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರಲ್ಲಿ ಆಸಕ್ತಿ ತೋರಿಸುತ್ತ ಬಂದಿದ್ದಾರೆಯೇ ಹೊರತು ಬೆಂಗಳೂರನ್ನು ಬಿಟ್ಟು ಇತರ ಕಡೆಗಳಲ್ಲಿ ಸ್ಥಾಪಿಸುವ ಮನಸ್ಸು ಇದ್ದಂತೆ ನನಗೆ ತೋರಲಿಲ್ಲ. ಕೈಗಾರಿಕೆಗಳು ಒಂದೆಡೆಯಲ್ಲಿಯೇ ಕೇಂದ್ರೀಕೃತವಾಗದೆ ವಿಕೇಂದ್ರೀಕೃತವಾಗಬೇಕೆಂಬುದು ನನ್ನ ಅಭಿಪ್ರಾಯ. ನಮ್ಮ ನೆಲಮಂಗಲ ತಾಲ್ಲೂಕಿನ ಹೊನ್ನಸಂದ್ರ ಗ್ರಾಮದ ಬಳಿ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಲು ಮದರಾಸಿನ ಒಬ್ಬರನ್ನು ಹಿಡಿದು persuade ಮಾಡಿದೆ. ಅವರು ತಮಗೆ ಬೇಕಾದಷ್ಟು ಜಮೀನನ್ನು ಅಕ್ವೈರ್ ಮಾಡಿಸಿಕೊಟ್ಟಲ್ಲಿ ಕೈಗಾರಿಕೆಯನ್ನು ಪ್ರಾರಂಭ ಮಾಡುವುದಾಗಿ ತಿಳಿಸಿ ಇಲ್ಲಿಗೆ ಬಂದರು. ಸರ್ಕಾರದವರು ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾದರೆ ವರ್ಷಾನುಗಟ್ಟಲೆ ಹಿಡಿಯಿತು. ಅಷ್ಟು ಹೊತ್ತಿಗೆ ಮಾರ್ಕೆಟ್ ರೇಟ್‌ನಲ್ಲಿ ಹೆಚ್ಚು ಕಡಮೆಯಾಗಿತ್ತು. ಅವರು ಕೈಗಾರಿಕೆಯನ್ನೇ ಸ್ಥಾಪನೆ ಮಾಡದೆ ಇರಬೇಕಾದ ಪರಿಸ್ಥಿತಿ ಬಂತು. ಡೀಸೆಂಟ್ರಲೈಸೇಷನ್ ಆಫ್ ಇಂಡಸ್ಟ್ರೀಸ್ ಎಂಬ ನೀತಿಯನ್ನು ಸರ್ಕಾರದವರು ಒಪ್ಪಿಕೊಂಡ ಮೇಲೆ ಇತರ ಕಡೆಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆ, ಜಮೀನು ಅಕ್ವೈರ್ ಮಾಡಿಕೊಡಿ, ಇತರ ಸಹಾಯಗಳನ್ನು ಕೊಡಿ, ಎಂದು ಕೇಳಿದಾಗ ಈ ರೀತಿ ಕಾಗದ ಪತ್ರಗಳನ್ನು ನಿಧಾನ ಮಾಡಿದರೆ ಸರ್ಕಾರದವರು ಎಷ್ಟು ಮಾತ್ರ ಇವರಿಗೆ ಉತ್ತೇಜನ ಕೊಟ್ಟಂತಾಗುತ್ತದೆ? ಇನ್ನು ಮುಂದಾದರೂ ಈ ರೀತಿ ಮಾಡದೆ, ಇತರ ಹೊಸ ಕೈಗಾರಿಕೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವಾಗ ಹಳ್ಳಿಗಳಲ್ಲಿ ಮಾಡಬೇಕೇ ಹೊರತು ಈಗಿನಂತೆ ಒಂದೇ ಕಡೆ ಕೇಂದ್ರೀಕೃತ ಮಾಡಬಾರದೆಂದು ಹೇಳುತ್ತೇನೆ.

ಅರಣ್ಯ ಇಲಾಖೆಯ ಸಂಬಂಧದಲ್ಲಿ ಮಾತನಾಡುವಾಗ ಅರಣ್ಯರೋದನವಾಗಿದೆ ಎಂದು ಕೆಲವು ಸದಸ್ಯರು ಹೇಳಿದ್ದು ಖಾದಿ ಕೈಗಾರಿಕೆ ವಿಚಾರದಲ್ಲಿ ಸ್ವಲ್ಪ ಹಾಗೆಯೇ ಆಗಿದೆ ಎಂದು ಹೇಳಬಹುದು. ಖಾದಿ ವಿಷಯವನ್ನು ಇವೊತ್ತಿನ ದಿವಸ ನೋಡಿದರೆ, ಡೆಕ್ಕನ್ ಖಾದಿ, ಹೈದರಾಬಾದ್ ಖಾದಿ, ಟಾಂಜೂರ್ ಖಾದಿ, ತಮಿಳ್ನಾಡು ಖಾದಿ ಹೀಗೆ ಎಷ್ಟೋ ಪ್ರದೇಶಗಳಲ್ಲಿ ತಯಾರಾಗುವ ಖಾದಿಗೆ ಮೈಸೂರಿನಲ್ಲಿ ಬೇಕಾದಷ್ಟು ಮಾರ್ಕೆಟ್ ಇದೆ. ಆದರೆ ನಮ್ಮಲ್ಲಿ ತಯಾರಾಗುತ್ತಿರುವ ಖಾದಿ ಸರಿಯಾಗಿ ಮಾರಾಟವಾಗುತ್ತಿಲ್ಲ. ಅವರು ಬೆಂಗಳೂರಿನಲ್ಲಿ ಹೇಗೋ ಮಾಡಿ ಅಂಗಡಿಯನ್ನು ತೆಗೆದುಕೊಳ್ಳುತ್ತಾರೆ. ಸರ್ಕಾರದವರಲ್ಲಿ ಅನುಮತಿ ಪಡೆದು ಸಹಕಾರ ಸಂಘಗಳ ಮೂಲಕ ಮುಂದುವರಿಯುತ್ತಾರೆ. ಈ ಜನವಿಟ್ಟಿರುವ ಅಂಗಡಿಗಳಲ್ಲಿ ಆಯಾ ಪ್ರಾಂತದ ಖಾದಿ ವಿಶೇಷವಾಗಿ ಮಾರಾಟವಾಗುತ್ತಿರುವಾಗ ನಮ್ಮ ಬಡವಾಳ ಖಾದಿ ವಿಷಯದಲ್ಲಿಯೂ ಹಾಗೇಕೆ ಆಗಿಲ್ಲವೆಂದು ಕೇಳುತ್ತಲೇ ಇದ್ದೇವೆ. ಖಾದಿ ಬಟ್ಟೆಯನ್ನು ಉಪಯೋಗಿಸುವ ಜನ ಮೈಸೂರಿನಲ್ಲಿದ್ದಾರೆ. ಆದರೆ ಅವರು ಖಾದಿಯನ್ನು ಕೊಂಡುಕೊಳ್ಳಬೇಕೆಂದರೆ ಮೈಸೂರು ಖಾದಿ ಡಿಪೋಗಳಿಲ್ಲ; ಖಾದಿ ಕೇಂದ್ರಗಳಿಲ್ಲ. ಈ ಕೈಗಾರಿಕೆಯನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ನಮ್ಮ ದೇಶದ ಖಾದಿಯನ್ನು ಮಾರಾಟ ಮಾಡಲು ಒಂದು ಅಂಗಡಿಯನ್ನು ತೆರೆದಿಲ್ಲ. ಒಂದು ಅಂಗಡಿಯನ್ನು ತೆರೆಯಬೇಕಾದರೆ ಶಿಬ್ಬಂದಿ ಖರ್ಚು ಜಾಸ್ತಿ, ನಮಗೆ ಗಿಟ್ಟುವುದಿಲ್ಲವೆಂದು ಹೇಳುತ್ತಾರೆ. ಹಾಗಾದರೆ ಹೊರಗಿನ ಪ್ರಾಂತಗಳವರಿಗೆ ಗಿಟ್ಟುವುದೇನು, ನಮಗೆ ಗಿಟ್ಟದೆ ಇರುವುದೇನು ? ಆದಕಾರಣ ಈ ವಿಷಯವನ್ನು ಸ್ವಲ್ಪ ತೀವ್ರವಾಗಿ ಆಗಿ ತೆಗೆದುಕೊಂಡು ಮೈಸೂರು ದೇಶದಲ್ಲಿ ತಯಾರಾಗುವ ಖಾದಿಗೂ ಉತ್ತೇಜನ ದೊರೆಯುವಂತಾಗಬೇಕೆಂದು ಹೇಳುತ್ತೇನೆ.

ಕೈಗಾರಿಕಾ ಸಹಕಾರ ಸಂಸ್ಥೆಗಳಿಗೆ ಸಹಾಯ ಮಾಡುವುದಕ್ಕೆ ಬೀರಪ್ಪನವರ ಇಲಾಖೆಯಲ್ಲಿ ಇಂಡಿಯಾ ಸರ್ಕಾರದವರ ದುಡ್ಡಿದೆ ಎಂದು ತಿಳಿದು ಬಾಯಲ್ಲಿ ನೀರೂರಿತು. ಆದರೆ ಅಲ್ಲಿಯೂ ರೆಡ್‌ಟೇಪಿಸಂ ಕಡಿಮೆಯಾಗಿಲ್ಲ. ವಿವಿಧೋದ್ದೇಶ ಸಹಕಾರ ಸಂಘಗಳಿದ್ದರೂ

(ಶ್ರೀ ಕೆ. ಪ್ರಭಾಕರ್).

ಕೂಡ ಅದರ ಮೂಲಕ ಹೆಚ್ಚು ಉಪಕಾರವಾಗಿಲ್ಲ. ಸಂಪೂರ್ಣವಾದ ನಂಬಿಕೆಯನ್ನಿಟ್ಟು ಇವನ್ನೂ ಅಭಿವೃದ್ಧಿಮಾಡಿಲ್ಲ. ಕೈಗಾರಿಕಾ ಸೊಸೈಟಿಗಳನ್ನು ಮಾಡುವಾಗ ಅವನ್ನು ವಿಶ್ವೇಶ್ವರಯ್ಯ ಸ್ಕೀಂ ಪ್ರಕಾರ ಮಾಡಿದರೂ ಅಲ್ಲಿ ಒಂದು ರೀತಿಯ ಅಪಾಯವಿದೆ ಎಂದು ನಾನು ಭಾವಿಸುತ್ತೇನೆ. ಐವತ್ತು ಹಳ್ಳಿಗಳನ್ನು ಒಂದು ಕೇಂದ್ರವಾಗಿ ತೆಗೆದುಕೊಂಡು ಅಲ್ಲಿ ಒಂದು ಕೈಗಾರಿಕಾ ಸ್ಕೀಂ ಹಾಕುತ್ತಾರೆ. ಒಂದೇ ಗುಂಪಿನ ಸೊಸೈಟಿಗಳಿಗೆ ಬೆಂಬಲ ಕೊಡುತ್ತಾರೆ. ಅದಕ್ಕೆ ಬದಲು ಒಂದು ಕೈಗಾರಿಕೆಗೆ ಸಂಬಂಧಪಟ್ಟ ಹಾಗೆ ಒಂದು ಸೊಸೈಟಿ ಒಂದು ಪ್ರದೇಶದಲ್ಲಿ ಸ್ಥಾಪನೆ ಮಾಡುವವರೆಗೂ ಅದು ಅಭಿವೃದ್ಧಿಯಾಗುವುದಕ್ಕೆ ಇದರಲ್ಲಿ ತೊಂದರೆಗಳಿವೆ. ಒಂದು ನೇಗೇಕಾರರ ಕೈಗಾರಿಕೆಗಾಗಿ ಇರುವ ಸೊಸೈಟಿ ಎಲ್ಲಿಯೂ ಕೂಡ ಮಾಡಿಲ್ಲ. ಅದನ್ನು ಮೈಸೂರಿನಲ್ಲಿ ಮೊದಲು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಕೈಗಾರಿಕೆ ನಡೆಸಲು ಹಣ ಕೊಡುತ್ತಿದ್ದೇವೆ, ಆದರೆ ಒದಗಿಸಿದ ಹಣ ಖರ್ಚು ಮಾಡದಿದ್ದರೆ ನಾವೇನು ಮಾಡೋಣ ಎಂದು ಹೇಳುತ್ತಿದ್ದಾರೆ. ಹಣವನ್ನೇನೋ ಒದಗಿಸುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ತಯಾರಾಗುವ ವಸ್ತುಗಳು ಇಂಟರ್‌ನ್ಯಾಷನಲ್ ಮಾರ್ಕೆಟ್ಟಿನಲ್ಲಿ ಖರ್ಚಾಗುವುದಿಲ್ಲ, ಮಾಡಿ ಏನು ಮಾಡಬೇಕೋ ಗೊತ್ತಿಲ್ಲ ಎಂದು ನಮ್ಮ ಜನರು ಹೇಳುತ್ತಿದ್ದಾರೆ. ಇದು ಬ್ರೇಕ್‌ಡೌನ್ ಪಾಲಿಸಿ. ಇದಕ್ಕೆ ಸಲಹೆ ಮಾಡುವುದು ವೇರ್ ಹೌಸ್ ಸಿಸ್ಟಂ ಜಾರಿಗೆ ತಂದು ನಮ್ಮ ದೇಶದಲ್ಲಿ ತಯಾರಾಗುವ ಪದಾರ್ಥಗಳಿಗೆ ರೆಗ್ಯುಲರ್ ಮಾರ್ಕೆಟ್ ಇರುವಂತೆ ವ್ಯವಸ್ಥೆ ಮಾಡಬೇಕು. ಹಾಗೆ ಮಾಡುವವರೆಗೂ ನಮ್ಮ ಕೈಗಾರಿಕೆಗಳು ಪರಿಣಾಮಕಾರಿಯಾಗಿ ಮುಂದುವರಿಯುವುದಿಲ್ಲ. ಈ ಬಗ್ಗೆ ಕೂಡ ಗಮನಕೊಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

*ಶ್ರೀ ಎಚ್. ಎಂ. ಚನ್ನಬಸಪ್ಪ.—ಕೈಗಾರಿಕಾ ನೀತಿಯೇನಿದೆಯೆಂಬುದನ್ನು ಆಗಾಗ್ಗೆ ಜನಗಳಿಗೆ ನಾನಾ ರೀತಿಯಲ್ಲಿ ಸರ್ಕಾರದವರು ತಿಳಿಸುತ್ತಾ ಬಂದಿದ್ದಾರೆ. ಶ್ರೀ ಮ್ಯಾಸ್ಕರನ್‌ಹ್ಯಾಸ್ ಅವರು ಹೇಳಿದ ಹಾಗೆ 20-25 ವರ್ಷಗಳಿಂದ ಸರ್ಕಾರದವರು ನೇರವಾಗಿ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದರು. ಅದರ ಜೊತೆಗೆ ಸಾರ್ವಜನಿಕರಿಗೂ ಸಹಾಯ ಮಾಡಿದರು. ಇಂಥ ಕೆಲವು ಮಾರ್ಗಗಳನ್ನು ಅನುಸರಿಸಿದ್ದರ ಪರಿಣಾಮವಾಗಿ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕಾ ಕಾರ್ಖಾನೆಗಳು ಇತರ ಸಂಸ್ಥಾನಗಳಿಗಿಂತ ಉತ್ತಮ ರೀತಿಯಲ್ಲಿ ನಡೆಯುತ್ತಿರುವುದು ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆ. ಈ ಕಾರ್ಖಾನೆಗಳು ಸಮರ್ಪಕವಾಗಿ ನಡೆಯಬೇಕು, ನಮ್ಮ ಬಂಡವಾಳಕ್ಕೆ ತಕ್ಕ ಉತ್ಪತ್ತಿ ಬರಬೇಕು ಮತ್ತು ಬಹಳ ದಕ್ಷತೆಯಿಂದ, ಆಧುನಿಕ ರೀತಿಯಲ್ಲಿ ಕೈಗಾರಿಕೆಗಳು ನಡೆಯಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಯಾವಯಾವ ಕೈಗಾರಿಕೆ ಯಾವ ಯಾವ ಕಾರಣದಿಂದ ಕುಗ್ಗಿಹೋಗಿದೆಯೆಂಬುದನ್ನು ಪರಿಶೀಲನೆ ಮಾಡಿ ಅದಕ್ಕೆ ತಕ್ಕ ವ್ಯವಸ್ಥೆಮಾಡಿ ಮುಂದುವರಿಸಿಕೊಂಡು ಹೋಗಬೇಕಾದ್ದು ನಮ್ಮ ಕರ್ತವ್ಯವಾಗಿದೆ.

ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಮಾತನಾಡುತ್ತಾ ಪೋರ್ಸಿಲೈನ್ ಫ್ಯಾಕ್ಟರಿಯ ಕೆಲಸ ನಿಧಾನವಾಗಿರುವುದನ್ನು ಹೇಳಿದರು; ಅದು ನಿಜ. ಹೋದ ಡಿಸೆಂಬರ್ ತಿಂಗಳಲ್ಲಿ ಅದು ಉತ್ಪತ್ತಿಮಾಡಲು ಪ್ರಾರಂಭಿಸಿತು. 63 ಲಕ್ಷ ಇದ್ದಕಡೆ ಈಗ 84 ಲಕ್ಷ ಅಂದಾಜಾಗಿದೆ. ಇದಕ್ಕೆ ಕಾರಣವೇನು ಎಂದು ಇನ್ನೊಂದು ಪ್ರಶ್ನೆ ಹಾಕಿದ್ದಾರೆ. ಪೋರ್ಸಿಲೈನ್ ಫ್ಯಾಕ್ಟರಿ ಕಟ್ಟಡ ಕೆಲವು ಕಾರಣಗಳಿಂದ ನಿಧಾನವಾಗಿದೆ. ಇದಕ್ಕೆ ಮುಖ್ಯವಾಗಿ ಅಗತ್ಯವಾದ ಕಬ್ಬಿಣ ಮುಂತಾದ ಸಾಮಾನು ಕಾಲಕ್ಕೆ ಸರಿಯಾಗಿ ಸರಬರಾಯಾಗದೆ ಕೆಲವು ತಿಂಗಳು ನಿಧಾನ ಮಾಡಬೇಕಾಗಿ ಬಂತು. ಈಗ ಈ ಕೆಲಸ ಬಹಳ ವೇಗವಾಗಿ ನಡೆಯುತ್ತಿದೆಯೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ಸಂತೋಷಪಡುತ್ತೇನೆ. ಈಗ ದಿವಸಕ್ಕೆ ಇಷ್ಟು ಪ್ರೋಗ್ರೆಸ್ ಆಗಬೇಕೆಂದು ನಿರ್ಧಾರ ಮಾಡಿದೆಯೋ ಅದರಂತೆ ಕೆಲಸವಾಗುತ್ತಿದೆ. ಈಗಾಗಲೆ ಹಲವು ಹೊಸ ಮೆಷೀನ್ ಹಾಕಿ ಪ್ರೊಡಕ್ಷನ್ ಷುರುವಾಗಿದೆ. ಇನ್ನು ಸುಮಾರು ಒಂದೆರಡು ತಿಂಗಳಲ್ಲೇ ಕಟ್ಟಡದ ಕೆಲಸವನ್ನು ಸಂಪೂರ್ಣವಾಗಿ ಪೂರೈಸಬೇಕೆಂದಿದೆ. ನಾನು 26ನೆಯ ತಾರೀಖಿನ ದಿವಸ ತಮ್ಮೆಲ್ಲರನ್ನೂ ಅಲ್ಲಿಗೆ ಕರೆದುಕೊಂಡು ಹೋಗಬೇಕೆಂದು ಪ್ರೋಗ್ರಾಂ ಹಾಕಿದ್ದೆ. ಆದರೆ ಡಿಮ್ಯಾಂಡುಗಳ ಮೇಲಿನ ಚರ್ಚೆ ನಡೆಯುತ್ತಿದ್ದುದರಿಂದ ತಮಗೆ ಅವಕಾಶವಿಲ್ಲದೆ ನಿಧಾನವಾಯಿತು. ಅಂತೂ ಈ ಕಾರ್ಖಾನೆಯ ಕೆಲಸ ಬೇಗ ಪೂರೈಸಬೇಕು, ಇದರಿಂದ ಸರಿಯಾದ ಉತ್ಪತ್ತಿ ಬರುವ ಹಾಗೆ ಮಾಡಬೇಕು ಎಂದಿದ್ದೇವೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಲು ಆಶೆಪಡುತ್ತೇನೆ. 63 ಲಕ್ಷ ರೂಪಾಯಿ ಇದ್ದುದು 84 ಲಕ್ಷ ರೂಪಾಯಿಗಳಿಗೆ ಏರಿತು ಎಂದು ಪ್ರಶ್ನೆ ಮಾಡಿದರು. ಏರಿರುವುದು ನಿಜ. 60 ಲಕ್ಷ ರೂಪಾಯಿಗಳ ಅಂದಾಜನ್ನು ತಯಾರಿಸಿದಾಗ ಭಾರತದಲ್ಲಿ ಕೊಂಡುಕೊಳ್ಳುವ ಮೆಷೀನರಿಯನ್ನು ಅದರಲ್ಲಿ ಸೇರಿಸಿರಲಿಲ್ಲ. ಎನ್. ಜಿ. ಕೆ. ಕಂಪೆನಿಯೊಡನೆ ಒಪ್ಪಂದ ಮಾಡಿಕೊಳ್ಳುವಾಗ ಅಂದಾಜಿನಲ್ಲಿ ಅವರಿಂದ ಸರಬರಾಯಾಗುವ ಮೆಷೀನರಿಯನ್ನು ಮಾತ್ರ ಸೇರಿಸಿತ್ತು. ಆಮೇಲೆ ಭಾರತದಲ್ಲಿ ಕೊಂಡುಕೊಳ್ಳುವ ಪ್ರಮೇಯ ಬಂತು. ಆದಕಾರಣ 84 ಲಕ್ಷ ರೂಪಾಯಿಗಳಿಗೇರಿದೆಯೇ ವಿನಾ ಮತ್ತೆ ಬೇರೆ ಇಲ್ಲ. ಮತ್ತು N.G.K. ಇಂಜನಿಯರುಗಳು ಬಹಳ ದಿವಸಗಳಿಂದ ಕೆಲಸ ಮಾಡುತ್ತಿದ್ದಾರೆಂದು ಹೇಳಿದರು; ಅದು ಸರಿಯಲ್ಲ. ಯಾವ ದಿವಸದಿಂದ ಅವರು ಕೆಲಸ ಮಾಡಬೇಕೆಂದು ವಿಧಾಯಕವಾಗಿದೆಯೋ ಆ ದಿವಸದಿಂದ ಮಾತ್ರ, ಅವರು ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಎಷ್ಟು ಖರ್ಚಾಗಬೇಕಾಗಿತ್ತೋ ಅಷ್ಟು ಮಾತ್ರ ಖರ್ಚಾಗಿದೆ.

ಪ್ಲಾಸ್ಟಿಕ್ ಸೆಕ್ಷನ್ ವಿಷಯವನ್ನು ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಪ್ರಸ್ತಾಪ ಮಾಡಿದರು. ಈ ವಿಷಯದಲ್ಲಿ ಒಂದು ಪ್ರೈವೇಟ್ ಕಂಪನಿಗೆ, ರೆಂಕೋ ಕಂಪೆನಿಗೆ ಜವಾಬ್ದಾರಿ ವಹಿಸಿದೆ. ಈ ಬಗ್ಗೆ ಆಡಿಟರ್ ಜನರಲ್ ಅವರ ಅಬ್ಜೆಕ್ಷನ್ ಇದೆಯೆಂದು ಹೇಳಿದರು. ರೆಂಕೋ ಕಂಪೆನಿಯಲ್ಲಿ ಸರ್ಕಾರ ಬಹುಭಾಗದ ಹಣ ಹಾಕಿದೆ. ಇದರ ಮೇಲೆ ಹತೋಟಿ ಕೂಡ ಬಹುಮಟ್ಟಿಗಿದೆ. ಈ ವಿಷಯದಲ್ಲಿ ಒಂದು ಆಖೈರು ತೀರ್ಮಾನ ತೆಗೆದುಕೊಳ್ಳಬೇಕೆಂಬುದು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ. ತಕ್ಷಣ ಆಖೈರು ತೀರ್ಮಾನಕ್ಕೆ ಬರುತ್ತೇವೆ.

ಸಿಮೆಂಟ್ ಮತ್ತು ಸಲ್ಫೈಡ್ ಓರ್ಸ್ ವಿಷಯವನ್ನು ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಪ್ರಸ್ತಾಪ ಮಾಡಿದರು. ಇಂಗಳದಾಳಿನಲ್ಲಿ ಈ ಓರ್ ಬೇಕಾದಷ್ಟಿದೆ, ಸಲ್ಫರ್ ಉತ್ಪನ್ನ ಮಾಡಿ ಸಲ್ಫ್ಯೂರಿಕ್ ಆಸಿಡ್ ತಯಾರು ಮಾಡುವುದಕ್ಕೆ ಏರ್ಪಾಡು ಮಾಡಬೇಕು ಎಂಬ ಆಶೆ ಸರ್ಕಾರಕ್ಕಿದೆ ಎಂದು ಹಿಂದೆ ಜಿಯಲಾಜಿಕಲ್ ಇಲಾಖೆ ಡಿಮ್ಯಾಂಡ್ ಬಂದಾಗ ಹೇಳಿದೆ. ಈಗ ಕಾರ್ಯಕ್ರಮ

ನಡೆಯುತ್ತಿವೆ, ಸಲ್ಫೈಡ್ ಓರ್‌ನ ಪ್ರಾಸ್ಪೆಕ್ಟಿಂಗ್ ವರ್ಕ್ ಬಹು ವೇಗವಾಗಿ ಆಗುತ್ತಿದೆ. ಸದಸ್ಯರು ಬಂದರೆ ತೋರಿಸಬಹುದು; ತೋರಿಸಿದರೆ ಚೆನ್ನಾಗಿ ಗೊತ್ತಾಗುತ್ತದೆ. ಆದಷ್ಟು ಬೇಗ ಪ್ರಾಸ್ಪೆಕ್ಟಿಂಗ್ ವರ್ಕ್ ಮುಗಿಸಿ ಭೂಗರ್ಭದಲ್ಲಿರುವ ಗಂಧಕದ ಅದುರನ್ನು ಸದ್ವಿನಿಯೋಗ ಮಾಡಬೇಕೆಂಬ ಬಗ್ಗೆ ಸರ್ಕಾರಕ್ಕೆ ತೀವ್ರಾಸಕ್ತಿಯಿದೆ. ಇದಕ್ಕೆ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸಾಕಷ್ಟು ಹಣ ಒದಗಿಸಿದ್ದೇವೆ.

ಇಂಪ್ಲಿಮೆಂಟ್ಸ್ ಫ್ಯಾಕ್ಟರಿ, ಡೈಕ್ರೋಮೇಟ್ ಫ್ಯಾಕ್ಟರಿ, ಬೆಳ್ಳಾರದ ಚಿನ್ನದಗಣಿ - ಇವುಗಳ ವಿಷಯದಲ್ಲಿ ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಟೀಕೆ ಮಾಡಿದರು. ಬೆಳ್ಳಾರದ ಚಿನ್ನದ ಗಣಿಯಲ್ಲಿ ಬಹುಶಃ ಸಾಕಷ್ಟು ಚಿನ್ನ ಸಿಕ್ಕಬಹುದೆಂಬ ಆಶೆಯಿತ್ತು. ಈಗ ಪರಿಸ್ಥಿತಿ ಬದಲಾವಣೆಯಾಗಿದೆ. ಭೂಗರ್ಭದಲ್ಲಿ ನೋಡಿ ಪ್ರಾಸ್ಪೆಕ್ಟ್ ಮಾಡುವುದಕ್ಕೆ ಖರ್ಚು ಕಡಮೆಯಾಗುವುದಿಲ್ಲ, ಎಷ್ಟು ಅನುಕೂಲವಾಗಬಹುದೆಂಬುದನ್ನು ತಿಳಿಯಲು ಹಣ ಹೇರಳವಾಗಿ ಖರ್ಚು ಮಾಡಬೇಕಾಯಿತು. ಎಲ್ಲಿ ಏನಿದೆಯೆಂಬುದನ್ನು ತಿಳಿಯಲು ಆಧುನಿಕ ಯಂತ್ರಗಳಿಂದ ಶೋಧನೆ ಮಾಡಲು ಹಣ ವಿನಿಯೋಗಿಸಿದೆವೇ ವಿನಾ ಮತ್ತೆ ಬೇರೆ ಉದ್ದೇಶವಿಲ್ಲ. ಈ ಬಗ್ಗೆ ಹತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವುದು ನಿಜ. ಅಲ್ಲಿ ಚಿನ್ನ ಸಿಕ್ಕಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ ಎಂಬ ಆಶೆಯಿಂದ ಈ ಕೆಲಸ ಕೈಕೊಂಡೆವು. ತಮಾಷೆಗಾಗಲಿ ಅಥವಾ ಹುಡುಗಾಟಕ್ಕಾಗಲಿ ಈ ಕೆಲಸ ಮಾಡಲಿಲ್ಲವೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಈಚೆಗೆ ಬೆಳ್ಳಾರದ ಚಿನ್ನದ ಗಣಿಯಲ್ಲಿ ಏಕನಾಮಿಕ್ಕಾಗಿ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಪರಿಣತರಿಂದ ಅಭಿಪ್ರಾಯ ಬಂದಿರುವುದರಿಂದ ಮತ್ತು ಚಿನ್ನ ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕುವುದಿಲ್ಲವೆಂದು ತಿಳಿದುಬಂದಿರುವುದರಿಂದ ಈ ಕೆಲಸವನ್ನು ನಿಲ್ಲಿಸಬೇಕಾಯಿತು.

ಇನ್ನು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಮತ್ತು ಡೈಕ್ರೋಮೇಟ್ ಫ್ಯಾಕ್ಟರಿ ವಿಚಾರ ತೆಗೆದುಕೊಳ್ಳೋಣ. ಇಂಪ್ಲಿಮೆಂಟ್ ಫ್ಯಾಕ್ಟರಿಯಲ್ಲಿ ಯುದ್ಧ ನಡೆಯುತ್ತಿದ್ದಾಗ ಹೇರಳವಾಗಿ ಕೆಲಸ ನಡೆಯಿತು, ಬೇಕಾದಷ್ಟು ಸಾಮಾನುಗಳು ತಯಾರಾದುವು, ಈ ವಿಷಯ ಗೊತ್ತಿರಬಹುದು. ಆಗ ಒಳ್ಳೆಯ ಆದಾಯ ಬಂತು, ಉತ್ಪತ್ತಿಯ ಖರ್ಚೂ ಹೆಚ್ಚಾಯಿತು. ಯುದ್ಧ ನಿಂತ ಮೇಲೆ ಅಲ್ಲಿ ತಯಾರಾದ ಇಂಪ್ಲಿಮೆಂಟ್ ಮಾರಾಟ ಮಾಡುವುದು ಕಷ್ಟವಾಯಿತು. ಈಗ ಈ ಕಾರ್ಖಾನೆ ಲಾಭದಾಯಕವಾಗಿ ಕೆಲಸ ಮಾಡುತ್ತಿದೆ. ಅಲ್ಲಿ ಹಿಂದಿದ್ದ ಪರಿಣತರನ್ನು ಕರೆಸಿ ಅವರ ಸೇವೆಯನ್ನು ಉಪಯೋಗಿಸಿಕೊಂಡು ಕಾರ್ಖಾನೆ ಕೆಲಸ ಚೆನ್ನಾಗಿ ನಡೆಯುವ ಹಾಗೆ ವ್ಯವಸ್ಥೆ ಮಾಡಬೇಕೆಂಬ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆ. ಡೈಕ್ರೋಮೇಟ್ ಫ್ಯಾಕ್ಟರಿಯಲ್ಲಿ ಅನೇಕ ವರ್ಷಗಳಿಂದ ನಷ್ಟವಾಗುತ್ತಿರುವುದರಿಂದ ನಾನಾ ಕಾರಣದಿಂದ ಅದನ್ನು ಮುಂದುವರಿಸುವುದು ಸರಿಯಲ್ಲವೆಂದು ನಿಲ್ಲಿಸಿದ್ದು ತಪ್ಪಲ್ಲವೆಂದು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆ. ಮತ್ತೆ ಈ ಸಿಲ್ಕ್ ಇಂಡಸ್ಟ್ರೀ ವಿಚಾರವಾಗಿ ಬಹಳ ಜನ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ಮೈಸೂರು ಸಿಲ್ಕ್ ಫಿಲೇಚರ್ ಇಂಡಸ್ಟ್ರೀ ವಿಚಾರದಲ್ಲಿ ಅಲ್ಲಿಯ ಜನರಿಗೆ ತುಂಬ ತೊಂದರೆಯಾಗಿದೆ ಎನ್ನತಕ್ಕ ವಿಚಾರ ಸರ್ಕಾರದವರ ಗಮನಕ್ಕೂ ಬಂದಿದೆ. ಆದರೆ ಟಿ. ನರಸೀಪುರದ ರೇಷ್ಮೆ ಕೈಗಾರಿಕೆಯ ವಿಚಾರದಲ್ಲಿ ಏನಾದರೂ ಮಾಡಿ ಅದಕ್ಕೆ ಉತ್ತೇಜನ ಕೊಟ್ಟು ಅದರಿಂದ ದೇಶಕ್ಕೆ ಒಂದು ಅನುಕೂಲವಾಗುವ ಹಾಗೆ ಮಾಡಬೇಕೆಂದು ತಿಳಿಸಿದ್ದೆವು. ಆದರೆ ಈ ವಿಚಾರದಲ್ಲಿ ಸರ್ಕಾರದವರು ಏನು ಕಾರ್ಯಕ್ರಮ ಕೈಗೊಂಡಿರುತ್ತಾರೆಂಬ ಅಂಶವು ಮಾನ್ಯ ಸದಸ್ಯರಾರಿಗೂ ಗೊತ್ತಿಲ್ಲವೆಂಬುದಾಗಿ ಹೇಳಿದ್ದಾರೆ. ಆದುದರಿಂದ ನಾನು ಮೊದಲನೆಯದಾಗಿ ಈ ವಿಚಾರದಲ್ಲಿ ಕೆಲವು ಅಂಶಗಳನ್ನು ಮಾನ್ಯ ಸದಸ್ಯರುಗಳ ಅವಗಾಹನೆಗೆ ತರಲು ಆಶಿಸುತ್ತೇನೆ—ಟಿ. ನರಸೀಪುರದಲ್ಲಿರತಕ್ಕ "ಮೈಸೂರು ಸಿಲ್ಕ್ ಫಿಲೇಚರ್" ಕಂಪೆನಿಗೆ 17,13,290 ರೂಪಾಯಿಗಳ ಸಾಲವಿದೆ. ಬಹುಶಃ ಈ ಕಂಪೆನಿಯ ಬಂಡವಾಳವೂ ಕೂಡ ಹೆಚ್ಚು ಕಡಮೆ ಅಷ್ಟೇ ಇರಬಹುದು. ಅಂತೂ ಈ ಸ್ಥಿತಿಗೆ ಬಂದಿದೆ ಆ ಕಂಪೆನಿ. ಇದಕ್ಕೆ ನಾನಾ ಕಾರಣಗಳಿವೆ. ನಾವು ಎಲ್ಲ ಅಂಶಗಳನ್ನೂ ಪರಿಶೀಲನೆ ಮಾಡಿದ್ದೇವೆ. ಆದರೆ ಈ ಕೈಗಾರಿಕೆಯು ಸಮರ್ಪಕವಾದ ರೀತಿಯಲ್ಲಿ ಮುಂದುವರಿಯುತ್ತಿಲ್ಲ ಎನ್ನುವ ವಿಚಾರದಲ್ಲಿ ಮಾನ್ಯ ಸದಸ್ಯರಾದ ತಮಗೆಲ್ಲರಿಗೂ ಮನಸ್ಸಿಗೆ ಎಷ್ಟು ಬಾಧೆಯಾಗುತ್ತಿದೆಯೋ ಸರ್ಕಾರದವರಿಗೂ ಆ ವಿಚಾರದಲ್ಲಿ ಅಷ್ಟೇ ಬಾಧೆಯಾಗುತ್ತಿದೆ. ಈ ಕಂಪೆನಿಯಲ್ಲಿ 45 ಸಾವಿರ ರೂಪಾಯಿಗಳು ಷೇರ್ ರೂಪದಲ್ಲಿ ಖಾಸಗೀ ಜನರ ಬಂಡವಾಳವಿರುತ್ತದೆ. ಆದರೆ ಈ ದಿವಸ ಈ ಕಂಪೆನಿಯಿಂದ ಬರತಕ್ಕಂಥ ವರಮಾನದ ಬಗ್ಗೆ ಅನುಮಾನವಿರುವಾಗ ಈಗ ಹಾಕಿರತಕ್ಕ ಭಾರಿ ಮೊಬಲಗಿನ ಮೇಲೆ ಪುನಃ ಮತ್ತಷ್ಟು ಹಣವನ್ನು ಹಾಕತಕ್ಕದ್ದು ಯುಕ್ತವೇ ಮತ್ತು ಇಂಥ ಕೈಗಾರಿಕೆಗಳನ್ನು ಸರ್ಕಾರದವರು ಕೈಗೊಳ್ಳುವುದು ಸೂಕ್ತವೇ ಎಂಬುದನ್ನು ಬಹಳ ತೀವ್ರವಾಗಿ ನಾವೆಲ್ಲರೂ ಪರಿಶೀಲನೆ ಮಾಡಬೇಕಾಗಿದೆ. ಆದರೆ ಇದೇ ಸಂದರ್ಭದಲ್ಲಿ ಇದು ಲಕ್ಷಾಂತರ ಜನರು ಜೀವನ ನಡೆಸಿಕೊಳ್ಳುವಂಥ ಒಂದು ಕೈಗಾರಿಕೆಯಾಗಿರುವುದರಿಂದ ಇದನ್ನು ಉತ್ತಮಪಡಿಸಬೇಕು ಎನ್ನತಕ್ಕದ್ದು ಇನ್ನೊಂದು ಪ್ರಶ್ನೆ ಬೇರೆ ಇದೆ. ಆದರೆ ಈ ಕಾರ್ಖಾನೆಯನ್ನು ಎರಡು-ಮೂರು ರೀತಿಗಳಲ್ಲಿ ಉತ್ತಮಪಡಿಸಲು ಅವಕಾಶವಿದೆಯೆಂದು ಕಾಣುತ್ತಿದೆ, ಈ ಕಂಪೆನಿಯ ಷೇರುದಾರರುಗಳೇ ವಾಲಂಟಿಯರ್ ಆಗಿ ಮುಂದೆ ಬಂದು ಅದನ್ನು ಲಿಕ್ವಿಡೇಟ್ ಆಗುವಂತೆ ಮಾಡತಕ್ಕದ್ದು ಒಂದು ದಾರಿ. ಇಲ್ಲವೇ ನಾವೇ ಈ ಕಾರ್ಖಾನೆಯನ್ನು ತೆಗೆದುಕೊಳ್ಳಬೇಕು. ಇನ್ನು ಮೂರನೆಯದಾಗಿ ಆ ಕಂಪೆನಿಯ ಷೇರುಗಳನ್ನು ಈಗಿನ ಮಾರ್ಕೆಟ್ ಬೆಲೆಗೆ ಇಳಿಸಿ ಒಂದು ಲಿಮಿಟೆಡ್ ಕಂಪೆನಿಯನ್ನಾಗಿ ಮಾಡುವುದು. ಆದರೆ ಈ ಎಲ್ಲ ವಿಚಾರಗಳಲ್ಲೂ ಸರ್ಕಾರಕ್ಕೆ ಬಹಳ ಕಷ್ಟವಿದೆ. ಆದಾಗ್ಯೂ ಸರ್ಕಾರದವರು ಈ ವಿಚಾರವಾಗಿ ಬಹಳ ತೀವ್ರಾಸಕ್ತಿಯಿಂದ ಆಲೋಚನೆ ಮಾಡುತ್ತಿದ್ದೇವೆ. ಆದರೆ ಈ ದಿವಸ ಈ ಕಂಪೆನಿಯನ್ನು ಸರ್ಕಾರದವರೇ ತೆಗೆದುಕೊಂಡು ಇದನ್ನು ಸಮರ್ಪಕವಾದ ರೀತಿಯಲ್ಲಿ ನಡೆಸಿಕೊಂಡು ಬರಲು ಸಾಧ್ಯವಿದೆಯೋ ಎನ್ನುವುದನ್ನು ಆಲೋಚನೆ ಮಾಡುತ್ತಿದ್ದೇವೆ, ಈ ರೀತಿ ಇದರಲ್ಲಿರತಕ್ಕ ನಾನಾ ರೀತಿಯ ಸಾಧಕ ಬಾಧಕಗಳೇನೆಂಬುದನ್ನು ಪರಿಶೀಲಿಸಿ ನೋಡಬೇಕಾಗಿದೆ. ಈ ದಿವಸ ಆ ಕಂಪೆನಿಯವರು ಬಂಡವಾಳವಿಲ್ಲದೆ ಬಹಳ ತೊಂದರೆಪಡುತ್ತಿದ್ದಾರೆ. ಆದರೆ ನಾವು ಈಗಾಗಲೇ ಬೇಕಾದಷ್ಟು ಹಣವನ್ನು ಅದಕ್ಕೆ ಕೊಟ್ಟಿದ್ದೇವೆ. ಈಗಲೂ ಕೂಡ ನಾವು ಇನ್ನೂ ಅಷ್ಟು ದುಡ್ಡನ್ನು ಕೊಟ್ಟೆವೆಂದೇ ಇಟ್ಟುಕೊಳ್ಳೋಣ. ಆಗಲೂ ಕೂಡ ಒಂದು ವೇಳೆ ಈ ಕಾರ್ಯ ಅವರಿಂದ ಸಾಧ್ಯವಾಗಲಿಲ್ಲ ಎಂದು ಕಂಡುಬಂದರೆ, ಇನ್ನು ಉಳಿದಿರತಕ್ಕದ್ದು ಅದನ್ನು ಸರ್ಕಾರವೇ ಕೈಗೊಳ್ಳಬೇಕು. ಹಾಗೆ ಸರ್ಕಾರದವರು ಕೈಗೊಂಡರೆ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಇನ್ನೂ ಅದನ್ನು ಉತ್ತಮಪಡಿಸುವುದಕ್ಕೆ ಸಾಧ್ಯವಾಗುತ್ತದೆಯೇ. . . .

ಶ್ರೀ ಬಿ. ರಾಚಯ್ಯ (ಎಳಂದೂರು-ಅನುಸೂಚಿತ ಜಾತಿಗಳು).—ಆ ಕನಕಪುರ ಫ್ಯಾಕ್ಟರಿಯಲ್ಲಿ ತಯಾರಾಗುತ್ತಿರುವ ಸಿಲ್ಕು ನೂಲನ್ನು ಅಲ್ಲಿಗೆ ರವಾನೆ ಮಾಡಿ ಅವರು ಅಲ್ಲಿ ಸಾಮಾನುಗಳನ್ನು ತಯಾರಿಸುವಂತೆ ಏಕೆ ಮಾಡಬಾರದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ಈ ಸಿಲ್ಕ್ ಫ್ಯಾಕ್ಟರಿಗಳಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಸಾಕಷ್ಟು ಗಿರಾಕಿಗಳಿಲ್ಲ. ಮಾರ್ಕೆಟ್ಟಿನಲ್ಲಿ ನಮ್ಮ ರೇಷ್ಮೆಯ ಮಾರಾಟಕ್ಕೆ ಬಹಳ ಕಷ್ಟ ಬಂದಿದೆ. ಈ ದಿವಸ ನಮ್ಮ ಮಾರ್ಕೆಟ್ಟಿಗೆ ನಾನಾ ಕಡೆಯಿಂದ ಮಾಲು ಬರುತ್ತಿದೆ. ಯುದ್ಧ ಕಾಲದಲ್ಲಿ ವಿಶೇಷವಾಗಿ ತಯಾರಿಸಲ್ಪಟ್ಟಂಥ ಸಾಮಾನುಗಳು ಈ ದಿವಸ ವಿಶೇಷವಾಗಿ ಸ್ಟಾಕ್ ನಿಂತುಹೋಗಿವೆ. ಈ ದಿವಸ ಆ ಸಾಮಾನುಗಳ ಮಾರಾಟಕ್ಕೆ ಒಂದು ಸರಿಯಾದ ವ್ಯವಸ್ಥೆ ಮಾಡಿದರೆ ಸಾಕಾಗಿದೆ. ಆದುದರಿಂದ ಈಗ ನಾವು ಈ ನಾನಾ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಕೆಲಸ ಮಾಡಬೇಕಾಗಿದೆ. ಈ ರೇಷ್ಮೆ ಕೈಗಾರಿಕೆಯನ್ನು ಇನ್ನೂ ಉತ್ತಮ ಪಡಿಸಬೇಕೆಂಬ ಆಸೆ ಸರ್ಕಾರಕ್ಕಿದೆ.

Sri L. SIDDAPPA (Channagiri).—He is repeating the same thing for the past five years.

Sri H. M. CHANNABASAPPA.—I am stating that the Government are not the only party concerned here. After all, we owned only one-tenth of the shares. Supposing we want to purchase all the shares at the market rate, is every shareholder prepared to sell his share at the market rate to-day? That is a point in which hundreds and hundreds of people are concerned.

Sri L. SIDDAPPA.—You force them to liquidate.

Sri H. M. CHANNABASAPPA.—That is a matter in which the shareholders also have got to play their part.

Sri S. SRINIVASA IYENGAR.—Will the Minister consider another alternative also, that is, to finance the Factory to see that the Factory has full production and can compete with the market and pay back their loan.

Sri H. M. CHANNABASAPPA.—Heavy amounts have got to be invested. We have already invested Rs. 17-18 lakhs. I have heard many an Hon'ble Member say on the floor of this House that the Government must be very careful in sinking State funds in losing concerns, in concerns of doubtful return. Therefore, that is a point for serious consideration, whether to invest funds in addition to the heavy amounts already invested, in concerns of doubtful return. (*Interuption*). If Government do not do it, who else. That is also a point for consideration. They have got to apply to the Corporation and the Corporation will look into the assets and liabilities; they have got to consider various aspects.

Sri S. SRINIVASA IYENGAR.—By providing produce loan you can make any factory work. At the same time Government should stand as a surety.

Sri T. MARIAPPA.—Much headway is made in foreign countries on account of scientific advancement. The whole thing has to be re-built and modernised and foreign trained technical personnel should be employed.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು).—ಸ್ವಾಮಿ, ಪಾವಗಡ ತಾಲ್ಲೂಕಿನಲ್ಲಿ 26 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಚರ್ಮ ಹದಮಾಡುವ ಕಾರ್ಖಾನೆಯನ್ನು ಸ್ಥಾಪಿಸುತ್ತೇವೆಂದು ಸರ್ಕಾರದವರು ಹೇಳಿದ್ದರು. ಆದರೆ ಹಾಗೆ ಅದನ್ನು ಈವರೆಗೂ ಮಾಡದೆ ಇರಲು ಕಾರಣ ವೇನು?

Sri H. M. CHANNABASAPPA.—I should like to assure the House that the Government will come to a decision on this matter very early.

Sri T. MARIAPPA.—We are only anxious that the wheel should be rehabilitated. It can never be abandoned because it is a vital industry. Therefore, they must come to quick decision. The Government must rehabilitate, modernise and place it on a safe footing.

ಶ್ರೀ ಕೆ. ಪುಟ್ಟಸ್ವಾಮಿ.—ಈ ರೀತಿಯಾಗಿ ಉತ್ತರ ಕೊಡುವುದನ್ನು ತಾವು ನಿಲ್ಲಿಸುವುದು ಯಾವಾಗ?

Sri H. M. CHANNABASAPPA.—With the minimum possible delay, we will finalise it.

ಇನ್ನು ಅನಂತರ ಈ ಸ್ಪನ್ ಸಿಲ್ಕ್ ವಿಚಾರ ಬೇರೆ ಪ್ರಸ್ತಾಪಮಾಡಿದ್ದಾರೆ. ಇದು ಆ ಚರಕಾ ಸಿಲ್ಕ್ ಇಂಡಸ್ಟ್ರೀಸಿಗೆ ಬಹಳ ಆಧಾರವಾದದ್ದು. ಇದಕ್ಕೂ ಬಹಳ ತೊಂದರೆಯಿದೆ. ಇದನ್ನು ಯಾವ ರೀತಿ ಬಗೆಹರಿಸಬೇಕು ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ. ಈ ಕೈಗಾರಿಕೆಯನ್ನು ಸರ್ಕಾರದವರೇ ತೆಗೆದುಕೊಂಡು ಇದಕ್ಕೆ ಇನ್ನೂ ಉತ್ತಮ ರೀತಿಯ ಮೆಷಿನರಿಗಳನ್ನು ತರಿಸಿ ಇದನ್ನು ಉತ್ತಮಪಡಿಸಬೇಕೆಂಬುದು ಒಂದು ಯೋಚನೆ. ಎರಡನೆಯದಾಗಿ ಕೊಯಮತ್ತೂರಿನ ಕೈಗಾರಿಕೆಯವರನ್ನ ಜೊತೆಗೆ ಪಾಲುದಾರರನ್ನಾಗಿ ತೆಗೆದುಕೊಂಡು ಐದುವರ್ಷಗಳ ಒಂದು ಒಪ್ಪಂದ ಮಾಡಿಕೊಂಡು ಆ ಒಪ್ಪಂದದ ಪ್ರಕಾರ ಅವರೊಂದಿಗೆ ಹೊಂದಾವಣಿಕೆಯಿಂದ ಇದನ್ನು ರೀಹ್ಯಾಬಿಲಿಟೇಷ್

ಮಾಡಬೇಕಾಗುತ್ತದೆ. ಇನ್ನು ಈಗಾಗಲೆ ಇದು ಮಾಡಿಕೊಂಡಿರತಕ್ಕಂಥ ಸಾಲ-ಸೋಲಗಳನ್ನು ತೀರಿಸಬೇಕು ಎನ್ನುವ ಅಂಶವನ್ನೂ ಕೂಡ ನಾವೀಗ ಆಲೋಚನೆ ಮಾಡಬೇಕಾಗಿದೆ.

3 P.M.

ಇನ್ನೂ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಇವೆಲ್ಲವನ್ನೂ ಬೋರ್ಡ್ ಆಫ್ ಡೈರೆಕ್ಟರ್ಸ್ ಯೋಚನೆ ಮಾಡುತ್ತಾ ಇದ್ದಾರೆ. ಈ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವನ್ನೂ ಕೂಡ ಕೇಳಿದ್ದಾರೆ. ತಕ್ಷಣದಲ್ಲೇ ಒಂದಲ್ಲ ಒಂದು ರೀತಿಯಲ್ಲಿ ವ್ಯವಸ್ಥೆಯಾಗುತ್ತದೆ ಎಂಬ ನಂಬಿಕೆ ಇದೆ. Fruit canning industry ವಿಚಾರವಾಗಿ ಮಾತನಾಡುತ್ತಾ ಈ ದೊಡ್ಡ ದೊಡ್ಡ ಕೈಗಾರಿಕೆಗಳನ್ನೆಲ್ಲಾ ಬೆಂಗಳೂರಿನ ಸುತ್ತಮುತ್ತ ಕೇಂದ್ರೀಕರಿಸುತ್ತಾ ಇದ್ದೀರಿ ಎಂದು ಮಾನ್ಯ ಸದಸ್ಯರನೇಕರು ಹೇಳಿದರು. ಕೈಗಾರಿಕೆಗಳನ್ನೆಲ್ಲಾ ಬೆಂಗಳೂರಿನಲ್ಲೇ ಹಾಕಬಾರದು, ವಿಕೇಂದ್ರೀಕರಣ ಮಾಡಬೇಕು ಎಂಬುದು ಒಂದು ಬಹಳ ಒಳ್ಳೆಯ ನೀತಿ, ಅದು ಒಂದು accepted policy ಎಂದು ನಾನು ತಿಳಿದುಕೊಂಡಿದ್ದೇನೆ. ಈ fruit canning industry ಯನ್ನು ಎಲ್ಲಿ ಹಾಕಬೇಕೆಂಬ ವಿಷಯ ಪರ್ಯಾಲೋಚನೆಗೆ ಬಂದು ಬೆಂಗಳೂರಿನಲ್ಲಿ ಹಾಕಬೇಕೇ, ಮೈಸೂರಿನಲ್ಲಿ ಹಾಕಬೇಕೇ ಕೋಲಾರದಲ್ಲಿ ಹಾಕಬೇಕೇ ಚಿಕ್ಕಮಗಳೂರಿನಲ್ಲಿ ಹಾಕಬೇಕೇ ಎಂದು ಯೋಚನೆಮಾಡಿ, ಮೈಸೂರಿನಲ್ಲಿ ಹಾಕಬೇಕೆಂದು ಮಾಡಿದ್ದೇವೆ. ಮತ್ತು ಕೋಲಾರ, ಬೆಂಗಳೂರು, ಹಾಸನ ಮತ್ತು ಚಿಕ್ಕಮಗಳೂರು ಈ ನಾಲ್ಕು ಸ್ಥಳದಲ್ಲಿ ಹತ್ತು ಲಕ್ಷ ರೂಪಾಯಿಗಳ ಬಂಡವಾಳದಲ್ಲಿ fruit preserving centres ಮಾಡಬೇಕೆಂದು ಅದಕ್ಕೂ ಕೂಡ ವ್ಯವಸ್ಥೆ ಮಾಡಿದೆ. ಈ ನಾಲ್ಕು ಸ್ಥಳಗಳಲ್ಲೂ ಕೂಡ ಅಲ್ಲಿ ಬೆಳೆಯುತಕ್ಕ ಹಣ್ಣುಗಳನ್ನು ಉಪಯೋಗಿಸಿಕೊಂಡು ಫ್ರೂಟ್‌ಕ್ಯಾನ್ ಮಾಡುವುದಕ್ಕೆ ಅನುಕೂಲವಾಗುತ್ತದೆ.

Sri U. M. MADAPPA.—Please say whether the import of artificial silk depends upon local production.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆರ್ಟಿಫಿಷಿಯಲ್ ಸಿಲ್ಕ್ ಇಂಪೋರ್ಟ್ ಮಾಡಿಕೊಳ್ಳುವುದು ಬಿಡುವುದು ನೇರವಾಗಿ ಇಂಡಿಯಾ ಸರ್ಕಾರಕ್ಕೆ ಸಂಬಂಧಪಟ್ಟದ್ದು. ಸಾಧ್ಯವಾದಮಟ್ಟಿಗೂ ಪ್ರಯತ್ನಮಾಡಿ ನಮ್ಮ ದೇಶಕ್ಕೆ ಧಕ್ಕೆ ಬಾರದಂತೆ ಸರ್ಕಾರದ ನೀತಿಯನ್ನು ಹಾಕಬೇಕೆಂದು ಪದೇ ಪದೇ ಕೇಂದ್ರ ಸರ್ಕಾರದವರಿಗೆ ಒತ್ತಾಯ ಪಡಿಸುತ್ತಾ ಇದ್ದೇವೆ. The State Government has always something to do with the Central Government and they will do their best, they will do their part with the best of intentions. ಇದಕ್ಕೇ ಒಬ್ಬ ಸ್ಪೆಷಲ್ ಆಫೀಷರನ್ನು ನೇಮಕ ಮಾಡಬೇಕು, ಅವರು ಈ ಕೆಲಸ ಕಾರ್ಯಗಳನ್ನೆಲ್ಲಾ ನೋಡಿಕೊಳ್ಳುತ್ತಾರೆ ಎಂಬ ಅಂಶವನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರು. ಈ ಮಾನ್ಯ ಸಭೆಗೆ ಒಂದು ಅಂಶವನ್ನು ತಿಳಿಸಬೇಕೆಂದು ಆಶಿಸುತ್ತೇನೆ. ಈಗ ಒಬ್ಬ ಸ್ಪೆಷಲ್ ಆಫೀಸರು ನೇಮಕ ಆಗಬೇಕೆಂದರೆ, ಅವರಿಗೆ ಬೇಕಾದ ಸಿಬ್ಬಂದಿ ಆಗಬೇಕು, ಪ್ಲ್ಯಾನ್ ಆಗಬೇಕು. ಇದಕ್ಕೆಲ್ಲಾ ಖರ್ಚು ಒಂದಕ್ಕೆ ನಾಲ್ಕರಷ್ಟು ಆಗುತ್ತದೆ. ಇದಕ್ಕೆಲ್ಲಾ ಹಣವನ್ನು ಒದಗಿಸಿ ಮಂಜೂರಾತಿ ಕೊಡಬೇಕೆಂದು ಇಂಡಿಯಾ ಸರ್ಕಾರದವರನ್ನು ಕೇಳಿದ್ದೇವೆ. ತಕ್ಷಣದಲ್ಲೇ ಆಗುತ್ತದೆ ಎಂಬ ನಂಬಿಕೆ ಇದೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಈ fruit canning industryಗೆ ಮೈಸೂರು suitable place ಅಲ್ಲ ಎಂಬುದಾಗಿ technical opinion ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೆಂಗಳೂರಿನಲ್ಲಿ ಎಷ್ಟು ಸೌಕರ್ಯವಿದೆಯೋ, ಮೈಸೂರಿನಲ್ಲೂ ಅಷ್ಟೇ ಸೌಕರ್ಯ ಇದೆ. ಬಾಗೇಶಪುರದಲ್ಲಿರತಕ್ಕ ಮಣ್ಣನ್ನು ಉಪಯೋಗಿಸಿಕೊಂಡು ಅಲ್ಲಿ ಒಂದು ಪಿಂಗಾಣಿ ಕೈಗಾರಿಕೆಯನ್ನು ಹಾಕಬೇಕೆಂದು ಹೇಳಿದರು. ಅಲ್ಲಿ ಸ್ವಲ್ಪ ತೊಂದರೆ ಇದೆ. ಅಲ್ಲಿ ಸಿಕ್ಕತಕ್ಕ ಬಳಪದ ಕಲ್ಲಿನಿಂದ ಸಣ್ಣಪುಟ್ಟ ಪದಾರ್ಥಗಳನ್ನು ಮಾಡುವ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಯೋಚನೆ ಮಾಡಿದೆ. ಅದಕ್ಕೆ ಬೇಕಾಗತಕ್ಕ ವಿದ್ಯುಚ್ಛಕ್ತಿ ಅಲ್ಲಿಗೆ ಹೋದ ಕೂಡಲೇ ಆ ವ್ಯವಸ್ಥೆ ಮಾಡುತ್ತೇವೆ.

ಮಂಡ್ಯದ ಸಕ್ಕರೆ ಕಾರ್ಖಾನೆಯ ವಿಷಯವಾಗಿ ಮಾತನಾಡುತ್ತಾ ಕಬ್ಬನ್ನು ಹಿಂಡತಕ್ಕ ಯಂತ್ರೋಪಕರಣದ ಶಕ್ತಿಯನ್ನು (capacity) ಹೆಚ್ಚು ಮಾಡಬೇಕೆಂದು ಹೇಳಿದರು. ಈಗಾಗಲೇ ಪಾಂಡವಪುರದಲ್ಲಿ ಹೊಸ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ವ್ಯವಸ್ಥೆ ಆಗಿದೆ. ನೀರಿನ ಅನುಕೂಲ ಜಾಸ್ತಿಯಾಗಿ ಹೆಚ್ಚಿಗೆ ಕಬ್ಬಿನ ಬೆಳೆ ಆದಾಗ, ಅದನ್ನು ಮುಂದೆ ಯೋಚನೆ ಮಾಡಬಹುದು.

ಶ್ರೀ ಹನುಮಯ್ಯನವರು ಚರ್ಮ ಹದ ಮಾಡುವ ಕೈಗಾರಿಕೆಯ ವಿಷಯದಲ್ಲಿ ಪ್ರಸ್ತಾಪ ಮಾಡಿದರು. ಈ ಬಗ್ಗೆ ಕೇಂದ್ರ ಸರ್ಕಾರದವರು ಬಹಳ ಆಸಕ್ತಿಯುಳ್ಳವರಾಗಿದ್ದಾರೆ. ಈ ಕೈಗಾರಿಕೆ ಸಹಕಾರ ತತ್ವದ ಮೇಲೆ ನಡೆಯಬೇಕು, ಆ ರೀತಿ ನಡೆಯುವುದಾದರೆ ಕೇಂದ್ರ ಸರ್ಕಾರದವರು ಶೇಕಡ 75ರಷ್ಟು ಬಂಡವಾಳದ ಹಣವನ್ನು ಕೊಡುತ್ತಾರೆ. ವೈಯಕ್ತಿಕವಾಗಿ ಯಾರಿಗೂ ಕೊಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕು ಮತ್ತು ಅಭಿವೃದ್ಧಿ ಪಡಿಸಬೇಕು ಎಂದು ಹೇಳಿ ಆಸಕ್ತಿ ಇರುವವರೆಲ್ಲರೂ ಕೂಡ ಆಯಾ ಸ್ಥಳದಲ್ಲಿ ಕೂಡಲೇ ಕೋ-ಆಪರೇಟಿವ್ ಸೊಸೈಟಿ ಮಾಡಿಕೊಂಡು ತನ್ಮೂಲಕ ಸರ್ಕಾರದ ಸಹಾಯವನ್ನು ಅಪೇಕ್ಷೆ ಮಾಡಿದರೆ ಜಾಗ್ರತೆಯಾಗಿ ಸಹಾಯವನ್ನು ಒದಗಿಸಲಿಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ತಿಳಿಸಲಿಕ್ಕೆ ಆಶಿಸುತ್ತೇನೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಗ್ಗೆ ಬೇಕಾದಷ್ಟು ಹಣ ಒದಗಿಸಿದ್ದಾರೆ. ಯಾವ ತೊಂದರೆಯೂ ಆಗುವುದಿಲ್ಲ.

ಶ್ರೀ ಮೂಡಲಗಿರಿಗೌಡರು ಸ್ಯಾಂಡಲ್‌ವುಡ್ ಫ್ಯಾಕ್ಟರಿಯ ವಿಷಯದಲ್ಲಿ ಶಿವಮೊಗ್ಗದಲ್ಲಿ ಒಂದು, ಮೈಸೂರಿನಲ್ಲಿ ಇನ್ನೊಂದು ಇರುವುದೇಕೆ ಎಂದು ಕೇಳಿದರು. ಇವೆರಡನ್ನೂ ಒಂದು ಮಾಡುವುದು ಸೂಕ್ತವಲ್ಲವೇ ಎಂದು ಅವರು ಸೂಚಿಸಿದರು. ಇವೆರಡೂ ಬಹಳ ಕಾಲದಿಂದಲೂ ಇವೆ. ಶಿವಮೊಗ್ಗದಲ್ಲಿ ಹೇರಳವಾಗಿ ಮರವಿರುವುದರಿಂದ ಅಲ್ಲೊಂದು ಫ್ಯಾಕ್ಟರಿಯನ್ನು ಸ್ಥಾಪನೆಮಾಡಿದೆ. ಅಲ್ಲಿ ಎಣ್ಣೆಯನ್ನು ಒಂದು ಮಟ್ಟದಲ್ಲಿ ತಯಾರು ಮಾಡುತ್ತಾರೆ. ಈ crude oilನ್ನು ಶುದ್ಧಗೊಳಿಸುವುದು ಮೈಸೂರಿನಲ್ಲಿ. ಈ ಕಾರ್ಯಕ್ಕಾಗಿ ಶಿವಮೊಗ್ಗದಿಂದ ಮೈಸೂರಿಗೇ ಮರವನ್ನು ಸಾಗಿಸಬೇಕೆಂದರೆ ಬಹಳ ಕಷ್ಟವಾಗುತ್ತದೆ. ಹಾಗಿಲ್ಲದೆ, ಎರಡು ಕಡೆಯೂ ಕಾರ್ಖಾನೆಯನ್ನು ಹಾಕಬೇಕೆಂದರೆ ಅದೂ ಬಹಳ ಖರ್ಚಿಗೇ ಕಾರಣವಾಗುತ್ತದೆ.

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಈ ಕಾರಣದಿಂದ ಈಗಿರುವ ಏರ್ಪಾಡು ಸಮರ್ಪಕವಾಗಿದೆಯೆಂದು ನಾನು ಹೇಳುತ್ತೇನೆ.

ಸಿಮೆಂಟ್ ಕಾರ್ಖಾನೆಯ ವಿಚಾರದಲ್ಲಿ ಒಂದು ಕಮಿಟಿಯನ್ನು ಮಾಡಿದೆ. ಚಿಕ್ಕನಾಯಕನಹಳ್ಳಿಯಲ್ಲಿಯೋ ಅಥವಾ ಹೊಸದುರ್ಗದಲ್ಲಿಯೋ ಏರ್ಪಡಿಸಬೇಕೆಂದು ಕಮಿಟಿಯವರು ಯೋಚನೆ ಮಾಡುತ್ತಿದ್ದಾರೆ. ಕಮಿಟಿಯವರು ಒಂದು ತೀರ್ಮಾನಕ್ಕೆ ಬಂದಂತಿದೆ. ಇಂದೋ ನಾಳೆಯೋ ರಿಪೋರ್ಟ್ ಬರುತ್ತದೆ. ಆ ವರದಿ ಬಂದ ಕೂಡಲೆ ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ದೇಶದಲ್ಲಿ ಸಿಮೆಂಟಿನ ಅಭಾವ ಹೆಚ್ಚಾಗಿದೆ. ಒಂದಲ್ಲದಿದ್ದರೆ ಎರಡು ಮಾಡಿದರೂ, ಸಿಮೆಂಟಿನ ಅವಶ್ಯಕತೆ ಹೆಚ್ಚಾಗಿರುವುದರಿಂದ, ಅವಕಾಶವಿದೆ. ಸದ್ಯಕ್ಕೆ ಒಂದು ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಕಾರ್ಯ ಕ್ರಮವನ್ನು ಕೈಕೊಳ್ಳುತ್ತೇವೆ.

ಶ್ರೀಮಾನ್ ಮಾಧವಾಚಾರ್‌ಅವರು ಮ್ಯಾನೇಜ್‌ಮೆಂಟ್ ಜೊತೆಗೆ ಲೇಬರ್ ಪಾರ್ಟಿಸಿಪೇಷನ್ ಇರಬೇಕೆಂಬ ವಿಷಯವನ್ನು ಬಹಳ ಸ್ವಾರಸ್ಯವಾಗಿ ಪ್ರಸ್ತಾಪ ಮಾಡಿದ್ದಾರೆ. ಲೇಬರ್ ಪಾರ್ಟಿಸಿಪೇಷನ್ ತತ್ವವನ್ನು ಮುಖ್ಯ ಮಂತ್ರಿಗಳೇ ತಮ್ಮ ಬಡ್ಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಸಾಧ್ಯವಾದಷ್ಟು ಬೇಗ ಬಹುಶಃ ಒಂದೆರಡು ತಿಂಗಳಲ್ಲಿ ಒಂದು ಕಾನ್ಫರೆನ್ಸ್ ಕರೆದು ಯಾವ ರೀತಿ ಕಾರ್ಯರೂಪಕ್ಕೆ ತರಬೇಕೆಂಬ ವಿಷಯದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಅವರು ತೃಪ್ತರಾಗಬಹುದು. ಆದರೆ ಇದರ ವಿಚಾರದಲ್ಲಿ ಜಾಗರೂಕತೆಯಿಂದ ಹೋಗಬೇಕು. ಇಂಗ್ಲೆಂಡಿನಲ್ಲಿ, ಅಮೆರಿಕಾದಲ್ಲಿ, ರಷ್ಯಾದಲ್ಲಿರತಕ್ಕ ಪರಿಸ್ಥಿತಿ ಇಂಡಿಯಾದಲ್ಲಿಲ್ಲ. ಆದ್ದರಿಂದ ಅಲ್ಲಿನ ಪ್ಲಾನ್‌ಗಳನ್ನೂ, ಯೋಜನೆಗಳನ್ನೂ ಮೈಸೂರಿಗೆ ಅನ್ವಯಿಸಬೇಕಾದರೆ ಅವುಗಳನ್ನು ಇಲ್ಲಿನ ಪರಿಸ್ಥಿತಿಗೆ ತಕ್ಕಂತೆ ಅಳವಡಿಸಿಕೊಳ್ಳಬೇಕು. ಇಲ್ಲಿನ ವಾತಾವರಣಕ್ಕೆ ಅನುಕೂಲವಾಗಿರಬೇಕು ಇಂಥ ಕಾಲದಲ್ಲಿ ಶ್ರೀಮಾನ್ ಮಾಧವಾಚಾರ್‌ಅವರು ಉತ್ತಮ ಸಲಹೆಗಳನ್ನು ಕೊಟ್ಟು ಸರಿಯಾದ ರೀತಿಯ ಏರ್ಪಾಡುಗಳನ್ನು ಮಾಡುವುದಕ್ಕೆ ಸಹಾಯ ಮಾಡುತ್ತಾರೆಂದು ನಂಬಿದ್ದೇನೆ.

ಕನಿಷ್ಠ ವೇತನದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಕನಿಷ್ಠ ವೇತನವನ್ನು ಪ್ರಸ್ತಾಪ ಮಾಡುವಾಗ ಬರೀ ಕಾರ್ಖಾನೆಯ ಕೆಲಸಗಾರರ ದೃಷ್ಟಿಯಿದ್ದರೆ ಸಾಲದು. ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುವ ನೌಕರರ ದೃಷ್ಟಿಯಿಂದ ಸಮಗ್ರವಾದ ರೀತಿಯಲ್ಲಿ ಆಲೋಚನೆ ಮಾಡಬೇಕಾಗಿರುತ್ತದೆ. ಆದರೆ, ಮನೆಗಳ ವಿಚಾರ ಹೇಳುತ್ತಾ, ಸರ್ಕಾರದವರು ಮಾಡದೆ ಇದ್ದರೆ ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಕಾನೂನೆಂಬುದು ಎಲ್ಲರನ್ನೂ ಬಂಧಿಸುತ್ತದೆ. ನಾವು ಒಂದು ನೀತಿಯನ್ನು ಅನುಸರಿಸಿ ಕೆಲಸ ಮಾಡುತ್ತಿದ್ದೇವೆ. ಸರ್ಕಾರದವರು ಏನೇನು ಕೆಲಸ ಮಾಡಬೇಕೆಂಬ ವಿಷಯದಲ್ಲಿ ಎಲ್ಲರ ಹಿತದೃಷ್ಟಿಯೂ ಸೇರಿದೆ. ಆದ್ದರಿಂದ ಸರ್ಕಾರದವರಿಗೆ ಜನರ ಸಹಕಾರವೂ ಅವಶ್ಯಕ. ಆದ್ದರಿಂದ ಈ ವಿಷಯದಲ್ಲಿ ಮಾನ್ಯ ಸದಸ್ಯರೂ ತಮ್ಮ ಸಹಕಾರವನ್ನು ನೀಡಲು ಸಿದ್ಧವಾಗಿರುವರೆಂದು ನಂಬಿದ್ದೇನೆ.

ಕುಣಿಗಲ್ ಸಕ್ಕರೆಯ ಕಾರ್ಖಾನೆಯ ವಿಷಯ ಪ್ರಸ್ತಾಪಕ್ಕೆ ಬಂತು. ಕುಣಿಗಲ್‌ನಲ್ಲಿ ಮಾಡಬೇಕಾದರೆ ಪವರ್ ಅನುಕೂಲಬೇಕು, ಅದು Rail head ಆಗಿರಬೇಕು. ಇವೆರಡರ ಜೊತೆಗೆ ಮುಖ್ಯವಾಗಿ ಸಾಕಷ್ಟು ಜಮೀನಿದ್ದು 12 ತಿಂಗಳೂ ನೀರಿನ ಒದಗಾಣಿಕೆಯಿರಬೇಕು. ಸುಮಾರು 15,000 ಎಕರೆಗಳಾದರೂ ಇರಬೇಕಾಗುತ್ತದೆ. ಇಂಥ ಅನುಕೂಲಗಳು ಕುಣಿಗಲ್‌ನಲ್ಲಿ ದೊರಕಿದ ಪಕ್ಷದಲ್ಲಿ ಖಂಡಿತವಾಗಿ ಅಲ್ಲೊಂದು ಸಕ್ಕರೆಯ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ಸಾಧ್ಯ. ಇದನ್ನೆಲ್ಲಾ ಪರಿಶೀಲನೆ ಮಾಡಲಾಗಿ ಕುಣಿಗಲ್‌ನಲ್ಲಿ ಒಂದು economic unit ಆದ 800—900 ಟನ್ ಅರೆಯುವ ಕಾರ್ಖಾನೆಯನ್ನು ಹಾಕುವುದಕ್ಕೆ ಅನುಕೂಲತೆಗಳು ಇಲ್ಲವೆಂದು ತೀರ್ಮಾನಿಸಲಾಯಿತು. ಒಂದು ವೇಳೆ Irrigation Project ಗಳು ಉತ್ತಮಗೊಂಡು ಮುಂದೆ ತಕ್ಕ ಅನುಕೂಲತೆಗಳು ದೊರೆತರೆ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದನ್ನು ಯೋಚನೆ ಮಾಡೋಣ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೈ ಪವರ್ ಡೈರೆಕ್ಟರೇಟ್ ಮಾಡುತ್ತೇವೆಂದು ಹೇಳಿದರು. ನಾನದನ್ನು ಪ್ರಸ್ತಾಪ ಮಾಡಿದೆ. ಅದರ ವಿಚಾರ ಏನೂ ಹೇಳಲಿಲ್ಲವಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವೇಳೆ, ಒಂದು ವಿಷಯವನ್ನು ಎಲ್ಲರೂ ನನ್ನ ಗಮನಕ್ಕೆ ತಂದರು. ನಮ್ಮ ಕೈಗಾರಿಕೆಗಳಲ್ಲಿ technical men ಇಲ್ಲವೆಂದು ಹೇಳಿದರು. ಇದು ನಿಜ. ನಮ್ಮ ದೇಶದಲ್ಲಿ ಕೈಗಾರಿಕೆಗಳು ಬೆಳೆಯಬೇಕಾದರೆ ಸರಿಯಾದ ಜನರನ್ನು ತರಪೇತು ಮಾಡುವುದು ಅತ್ಯಾವಶ್ಯಕ. ಈ ಬಗ್ಗೆ ಸರ್ಕಾರದವರು ಯೋಚನೆಮಾಡಿ ನಮ್ಮಲ್ಲಿ ಸರಿಯಾದ Industrial Advisers ಇಲ್ಲದಿದ್ದರೆ ಯಾವ ಕೈಗಾರಿಕೆಯನ್ನು ಸ್ಥಾಪಿಸುವುದೂ ಕಷ್ಟವಾಗುತ್ತದೆ. ಹೊಸ ಹೊಸ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕಾದರೆ ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಹೇಗೆ ತಿಳಿದುಕೊಳ್ಳಬೇಕು, ಸಲಕರಣೆಗಳನ್ನು ಎಲ್ಲಿಂದ ತರಿಸಬೇಕು ಎಂಬ ಬಗ್ಗೆ ಸಲಹೆ ಕೊಡುವ Industrial Adviser ಒಬ್ಬರು ಇಲ್ಲದಿದ್ದರೆ ನಾವು ಕೈಗಾರಿಕೆಗಳನ್ನು ಸ್ಥಾಪಿಸುವುದು ಕಷ್ಟವೆಂಬುದನ್ನು ಮನಗಂಡಿದ್ದೇವೆ. ಜೊತೆಗೆ trained men ಇರಬೇಕು. ಹಿಂದೆ ಈ ವಿಷಯಕ್ಕೆ ಸಾಕಷ್ಟು ಗಮನವನ್ನು ಕೊಟ್ಟಿಲ್ಲ. ಆದ್ದರಿಂದ ಕೈಗಾರಿಕೆಯ ಮೂಲಕ ನಮ್ಮ ದೇಶವನ್ನು ಅಭಿವೃದ್ಧಿ ಮಾಡಬೇಕಾದರೆ ಇದಕ್ಕಾಗಿ ಎಷ್ಟು ಹಣವನ್ನು ಖರ್ಚುಮಾಡಿದರೂ ಸಾಲದು. Technical know-how ಗೆ ಎಷ್ಟೋವೇಳೆ ಲಕ್ಷಾಂತರ ರೂಪಾಯಿಗಳನ್ನು ಪರದೇಶಗಳಿಗೆ ಕೊಡಬೇಕಾದ ಪರಿಸ್ಥಿತಿಯಿದೆ. ಇದನ್ನು ಮನಗಂಡು ಜಪಾನ್, ಇಂಗ್ಲೆಂಡ್, ಅಮೆರಿಕಾ ಮುಂತಾದ ದೇಶಗಳಿಗೆ ಹೋಗಿ ಅಲ್ಲಿನ ಕಾರ್ಖಾನೆಗಳಲ್ಲಿ ನಮ್ಮ ಯುವಕರು ತರಪೇತು ಹೊಂದಿ ಬರುವ ವಿಷಯಕ್ಕೆ ನಮ್ಮ ಸರ್ಕಾರದವರು ಹೆಚ್ಚು ಗಮನ ಕೊಡುವವರಾಗಿದ್ದಾರೆಂದು ಮಾನ್ಯ ಸದಸ್ಯರಿಗೆ ನಾನು ತಿಳಿಸಲಪೇಕ್ಷಿಸುತ್ತೇನೆ.

ಕೆಲವು ಕಾರ್ಖಾನೆಗಳು ನಷ್ಟದಲ್ಲಿ ಕೆಲಸ ಮಾಡುತ್ತಿವೆಯೆಂದು ಮಾನ್ಯ ಸದಸ್ಯರು ಹೇಳಿದರು. ಅಂಥವು ಒಂದೂ ಇಲ್ಲ. ಒಂದೆರಡು ಕಾರ್ಖಾನೆಗಳನ್ನು ಬಿಟ್ಟರೆ ಉಳಿದ ಎಲ್ಲಾ ಕಾರ್ಖಾನೆಗಳೂ ಲಾಭದಾಯಕವಾಗಿವೆ. ಪೋರ್ಸಿಲೈನ್ ಕಾರ್ಖಾನೆಯನ್ನು ಷುರು ಮಾಡಿದಲಾಗಾಯಿತಿನಿಂದಲೂ ಹೆಚ್ಚು ಲಾಭವನ್ನು ಕೊಡುತ್ತಿದೆಯೆಂದು ಹೇಳಬಹುದು. ಸ್ಪನ್ ಸಿಲ್ಕ್ ಕಾರ್ಖಾನೆ, ಎಲೆಕ್ಟ್ರಿಕ್ ಕಾರ್ಖಾನೆ ಮುಂತಾ

ದುವೂ ವಿಶೇಷ ಲಾಭ ಕೊಡುವಂತಹವು. ಖಾದಿ ಕೈಗಾರಿಕೆಗೆ ಈಗ ಹೆಚ್ಚಿನ ಉತ್ತೇಜನ ಕೊಡುತ್ತಿದ್ದೇವೆ. ಅಂಕಿ ಅಂಶಗಳನ್ನು ಕೊಟ್ಟು ತೋರಿಸಬಲ್ಲೆ. ಖಾದಿ ಎಷ್ಟು ಉತ್ಪನ್ನವಾಗುತ್ತಿದೆಯೆಂದು ಹೇಳಿದರೆ ಬಹುಶಃ ತಮಗೆ ಈ ಅಂಶ ಮನದಟ್ಟಾಗಬಹುದು. ಹಿಂದೆ ಒಂದು ಲಕ್ಷದ ಇಪ್ಪತ್ತು ಸಾವಿರ ಗಜ ತಯಾರಾಗುತ್ತಿದ್ದುದು ಈಗ 1954-55 ರಲ್ಲಿ ಮೂರು ಲಕ್ಷದ 68 ಸಾವಿರದ 900 ಗಜದಷ್ಟು ತಯಾರಾಗಿದೆ. ಬಜೆಟ್ಟಿನಲ್ಲಿಯೂ ಈ ಬಗ್ಗೆ ವಿಶೇಷವಾಗಿ ಹಣವನ್ನೊದಗಿಸಿದ್ದೇವೆ. ಅಂಬರ ಚರಕದ ಬಗ್ಗೆ Experimentation ನ್ನನ್ನು ನಡೆಸಲು ಅನೇಕಲ್ಲಿನಲ್ಲಿ ವ್ಯವಸ್ಥೆ ಮಾಡಿದ್ದೇವೆ. ಅದರಿಂದ ಪ್ರಯೋಜನವಾಗುತ್ತದೆಂದು ಗೊತ್ತಾದರೆ, ದೇಶಾದ್ಯಂತ introduce ಮಾಡಬೇಕೆಂದು ಮಾಡಿದ್ದೇವೆ. ಈ ಬಗ್ಗೆ ಈಗಾಗಲೆ ಕೃಷ್ಣರಾಜಪುರದಲ್ಲಿ ಒಂದು ಕಾರ್ಖಾನೆಯನ್ನು ಏರ್ಪಾಡು ಮಾಡಿ ಸಾವಿರಾರು ಅಂಬರ್ ಚರಕಗಳನ್ನು ತಯಾರು ಮಾಡುವುದಕ್ಕೆ ಇಂಡಿಯಾ ಸರ್ಕಾರದವರು ಏರ್ಪಾಡು ಮಾಡಿಕೊಂಡಿದ್ದಾರೆ. ಭಾರತ ಸರ್ಕಾರದವರು 200 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಸಿದ್ಧವಾಗಿದ್ದಾರೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ.

ಆಮೇಲೆ ಕೈಮಗ್ಗದ ಕೈಗಾರಿಕೆಗೆ ಈಗ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಡುತ್ತಿದೆ. ಆದರೂ, ಮಾಡತಕ್ಕ ಕೆಲಸವೆಲ್ಲವನ್ನೂ ಮಾಡಿದಂತಾಗಿಲ್ಲ, ಇನ್ನೂ ಮಾಡಬೇಕಾದ್ದಿದೆ. ಸಾಕಷ್ಟು ಕೆಲಸ ಮಾಡಿದ ಪಕ್ಷದಲ್ಲಿ ಅತ್ಯಲ್ಪ ಕಾಲದಲ್ಲಿ ಈ ಸಣ್ಣ ಕೈಗಾರಿಕೆಯನ್ನು ಉತ್ತಮಪಡಿಸುವುದಕ್ಕೆ ಅವಕಾಶವಾಗುತ್ತದೆ.

ರೂರಲ್ ಇಂಡಸ್ಟ್ರೀಸ್ ವಿಷಯದಲ್ಲಿ ಸಾಲ ಕೊಡುವುದನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಬಹಳ ಹೆಚ್ಚು ಹಣವನ್ನು ಸಿಬ್ಬಂದಿಗಾಗಿ ಖರ್ಚು ಮಾಡುತ್ತಿದ್ದಾರೆಂದು ಹೇಳಿದರು. ನಮ್ಮಲ್ಲಿ trained men ಇಲ್ಲದಿರುವಾಗ ಪ್ರಾರಂಭದಲ್ಲಿ ಕಲೆತುಕೊಂಡು ಪ್ರಾರಂಭ ಮಾಡಬೇಕಾಗುತ್ತದೆ. . . .

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ನಾವು ಭಾಷಣ ಮಾಡುವಾಗ ಕಾಲಾವಕಾಶ ಇಲ್ಲವೆಂದು ಆಕ್ಷೇಪಿಸಿದಿರಿ. ಅವರು ಮಾತ್ರ ಮೂರು ಮೂರು ಘಂಟೆ ಭಾಷಣ ಮಾಡುವುದಕ್ಕೆ ಅವಕಾಶ ಕೊಡುತ್ತೀರಲ್ಲಾ! ಇದು ಸರಿಯೇ?

Sri H. M. CHANNABASAPPA.—These are all points raised by the Hon'ble Members and the Government have a duty to answer them.

ಶ್ರೀ ಎಸ್. ಗೋಪಾಲಗೌಡ.—ಭಾಷಣ ಪ್ರಾರಂಭ ಮಾಡಿ ಈಗಾಗಲೇ ಒಂದು ಗಂಟೆಯಾಯಿತು.

Sri H. M. CHANNABASAPPA.—I am sorry. There is the Chair to do that. The Government has a duty cast on it to reply to the points raised by the Hon'ble Members. One Hon'ble Member definitely raised the point that we are putting non-technical men in all industries. That is a moot point. ಆದುದರಿಂದ Technical personnel ಇಲ್ಲದೇ ಇರುವುದರಿಂದ Technical personnelನ್ನು ಒದಗಿಸುವವರೆಗೆ ನಾವು non-technical personnelನ್ನು ಹಾಕಿ ಕೆಲಸ ಮಾಡುವುದು ಅನಿವಾರ್ಯವಾಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ technical personnelನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆ. ಇಷ್ಟು ಹೇಳಿ, ಈ ಡಿಮ್ಯಾಂಡಿಗೆ ತಮ್ಮ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—The question is:

"That a sum not exceeding Rs. 8,26,80,300 be granted to the Government to defray the charges which will come in course of payment during the year ending 31st day of March 1957, in respect of 'Industries and Supplies'."

The motion was adopted.

DEMAND No. 41—INDUSTRIAL DEVELOPMENT.

72. CAPITAL OUTLAY ON INDUSTRIAL DEVELOPMENT.

Mr. SPEAKER.—The question is:

"That a sum not exceeding Rs. 2,16,73,000 be granted to the Government to defray the charges which will come in course of payment during the year ending 31st day of March 1957, in respect of 'Capital Outlay on Industrial Development'."

The motion was adopted.

Mr. SPEAKER.—Now the House will rise for lunch and meet at 3-50 P.M.

The House adjourned for Lunch at Twenty Minutes past Three of the Clock and reassembled at Fifty Minutes past Three of the Clock.

[MR. SPEAKER in the Chair.]

Mr. SPEAKER.—Before taking up the discussion on demands, I want to announce that there will be a morning session tomorrow from 8-30 A.M. to 12-30 P.M.

DEMAND No. 38—WORKING EXPENSES—ELECTRICITY SCHEMES.

XLI. RECEIPTS FROM ELECTRICITY SCHEMES—WORKING EXPENSES.

Mr. SPEAKER.—Motion moved :

"That a sum not exceeding Rs. 1,84,45,000 be granted to the Government to defray the charges which will come in course of payment during the year ending 31st day of March 1957, in respect of 'Receipts from Electricity Schemes—Working Expenses'."

Discussion may also take place on Demand No. 42.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ ತಾಲ್ಲೂಕು—ಅನುಸೂಚಿತ ಜಾತಿಗಳು).—ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಬಹಳ ಜನಗಳು ಪಂಪು ಸೆಟ್ಟುಗಳನ್ನು ಹಾಕಿಕೊಂಡಿದ್ದಾರೆ. ಆರು ವರ್ಷಗಳಿಂದಲೂ ಪಂಪು ಸೆಟ್ಟುಗಳನ್ನು ಇನ್ನೂ ಹೆಚ್ಚಾಗಿ ಹಾಕಿಕೊಳ್ಳಲು ಸಂಬಂಧಪಟ್ಟ ಇಲಾಖೆಗೆ ಅರ್ಜಿಕೊಟ್ಟು ಕೊಟ್ಟು ಜನರು ಓಡಾಡಿ ಅವರು ವೆಚ್ಚ ಮಾಡಿದ ಹಣ ಪಂಪುಸೆಟ್ಟಿಗಿಂತಲೂ ಹೆಚ್ಚಾಗಿದೆ. ಇನ್ನೂ ವಿದ್ಯುಚ್ಛಕ್ತಿಯನ್ನು ಕೊಡಲಿಲ್ಲ. ಎರಡು ವರ್ಷಗಳಿಂದ ಹೀಗೆಯೇ ಆಗಿದೆ. ಬೆಳೆ ಒಣಗಿ ಹೋಗುತ್ತಿದೆ. ಬಾವಿಯಲ್ಲಿ ನೀರು ಇದ್ದರೂ, ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸಪ್ಲೈ ಮಾಡದೆ ಜನಗಳು ಬಹಳ ತೊಂದರೆ ಪಡುತ್ತಿದ್ದಾರೆ. ಇಲಾಖೆಯವರು ಈ ತೊಂದರೆಗಳನ್ನು ನಿವಾರಿಸುವುದಕ್ಕೋಸ್ಕರ ಪ್ರಯತ್ನ ಮಾಡಬೇಕು. ಆರ್ಡರ್ ಕೊಟ್ಟಿದ್ದೇವೆ, ತಾಮ್ರದ ತಂತಿ ಬಂದಿಲ್ಲ, ಕಂಬಗಳು ಬರಬೇಕು ಎಂದು ಹೇಳುತ್ತಿದ್ದಾರೆ. ಯಾವಯಾವ ಕಂಪೆನಿಗಳಿಗೆ ಆರ್ಡರ್ ಕೊಟ್ಟಿದ್ದಾರೆ, ಎಷ್ಟು ತಿಂಗಳುಗಳಲ್ಲಿ ಬರಬಹುದು ಎಂಬುದನ್ನು ಲೆಖ್ಖ ಮಾಡಿದ್ದಾರೆಯೇ ಮತ್ತು ಆ ರೀತಿ ಕಂಬಗಳನ್ನು ತರಿಸಿಕೊಂಡಿದ್ದಾರೆಯೇ ಗೊತ್ತಿಲ್ಲ. ಹಾಗೆ ತಂದಿದ್ದರೆ ಮೆಚ್ಚಿಗೆಯಾಗುವ ಹಾಗೆ ಮಂತ್ರಿಗಳು ಹೇಳುತ್ತಿದ್ದರು. ನಮಗೆ ಆಗಬೇಕಾದುದು ಕೆಲಸ. ಆರು ವರ್ಷಗಳಿಂದ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಇದನ್ನು ಕೇಳುತ್ತಲೇ ಇದ್ದಾರೆ. ಅವಕ್ಕೋಸ್ಕರ ಮಂತ್ರಿಗಳು ವೈಯಕ್ತಿಕವಾಗಿ ಆಸಕ್ತಿವಹಿಸಿ ಜಾಗ್ರತೆ ತಾಮ್ರದ ತಂತಿಗಳನ್ನೂ, ಕಂಬಗಳನ್ನೂ, ಮೆಷಿನರಿಗಳನ್ನೂ ತರಿಸಿ, ಎಲ್ಲೆಲ್ಲಿ ಹಾಕಬೇಕೋ ಅಲ್ಲಲ್ಲಿ ಉಪಯೋಗಿಸಿ ಪವರ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರಾಜಾಜಿ ನಗರದಲ್ಲಿ ಬೇಕಾದಷ್ಟು ಕಾರ್ಖಾನೆಗಳು ಸ್ಥಾಪಿಸಲ್ಪಡುತ್ತಿವೆ. ಅದಕ್ಕೋಸ್ಕರ ವಿದ್ಯುಚ್ಛಕ್ತಿ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಜೋಗ್‌ನಿಂದ ಬೆಂಗಳೂರಿಗೆ ಎರಡನೇ ಮೆಯಿನ್ ಲೈನನ್ನು ಎಳೆಯಬೇಕು. ಅದು war effort ಆಗಿ ಭಾವಿಸಿ ಸಾವಿರಾರು ಜನ ಕೂಲಿಗಾರರನ್ನು ನೇಮಿಸಿಕೊಂಡು ಮೂರು-ನಾಲ್ಕು ತಿಂಗಳಲ್ಲಿ ಆ ಕೆಲಸವನ್ನು ಮುಗಿಸಬೇಕೆಂದು ಒತ್ತಾಯಪಡಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಎಲೆಕ್ಟ್ರಿಕಲ್ ಇಲಾಖೆಗೆ ಸಂಬಂಧಪಟ್ಟಂತೆ ಮುಖ್ಯವಾದ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್ ಬಹಳ ಪಕ್ಷಪಾತ ಮಾಡುತ್ತಿದೆ. ಈಗ ಬಂದಿರತಕ್ಕ ಮಂತ್ರಿಗಳು ಬಹಳ ಚೆನ್ನಾಗಿ ಕೆಲಸ ಮಾಡಿದರೂ ಕೂಡ ನಮ್ಮ ಮೇಲೆ ಬಹಳ ಉದಾಸೀನವಾದಹಾಗೆ ಕಾಣುತ್ತದೆ. ಎಲೆಕ್ಟ್ರಿಸಿಟಿ ವಿಚಾರದಲ್ಲಿ ನಾನು ಒಂದು ಪ್ರಶ್ನೆ ಕೊಟ್ಟಿದ್ದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ 300 ಗ್ರಾಮಗಳ ಪೈಕಿ 11 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಿದ್ದಾರೆ. ಸುಮಾರು 20-25 ಗ್ರಾಮಗಳಿಗೆ ಹಾಗೆಯೇ ಸರ್ವೆ ಮಾಡಿಸಿ ಇಲಾಖೆಯಲ್ಲೆಲ್ಲಾ statement ಮಾಡಿಸಿದ್ದೇ. ಆದರೂ ಕೂಡ, ಸರ್ಕಾರದವರು ಹೆಚ್ಚು ನಿಗಾ ತೆಗೆದುಕೊಳ್ಳಲಿಲ್ಲ. ಬಾಕಿ applications ಏನಾಯಿತು? ಆರು ತಿಂಗಳುಗಳ ಹಿಂದೆ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಸರ್ವೆ ಮಾಡಿದ applications ಇವತ್ತು ಸರ್ಕಾರಕ್ಕೆ ಬಾರದೇ ಇರುವುದಕ್ಕೆ ಕಾರಣವೇನು? ಕೆಲವು ಗ್ರಾಮಗಳಲ್ಲಿ ಒಂದು ತಿಂಗಳು, ಮೂರು-ನಾಲ್ಕು ತಿಂಗಳುಗಳಲ್ಲೇ ಕೊಟ್ಟಿರುತ್ತಾರೆ. ಚನ್ನಗಿರಿ ತಾಲ್ಲೂಕಿನ ತಾವರೇಕೆರೆ ಗ್ರಾಮ ಮಲೆನಾಡು ಗ್ರಾಮ. ಅದನ್ನು ಸರ್ವೆ ಮಾಡಿಸಬೇಕು. ಸಾಮಾನ್ಯವಾಗಿ ಶಿವಮೊಗ್ಗಾ ಜಿಲ್ಲೆಯೊಳಗೆ ಎಷ್ಟು ಮಳೆಯಾಗುತ್ತದೋ ಅದೇ ರೀತಿ ಹೆಚ್ಚು ಮಳೆ ಚೆನ್ನಗಿರಿಯಲ್ಲಿ ಆಗುತ್ತದೆ. ಬಯಲುಸೀಮೆ ಶೇಕಡ $7\frac{1}{2}$ ಎಂದು ತೀರ್ಮಾನ ಮಾಡಿದ್ದಾರೆ. ಮಳೆ ಚೆನ್ನಾಗಿ ಬಂದರೂ ಕೂಡ ಬಯಲುಸೀಮೆಯೆಂದು ಸರಕಾರದವರು ತಿಳಿದುಕೊಂಡಿದ್ದಾರೆ. ಮುಖ್ಯ ಮಂತ್ರಿಗಳು ಅದನ್ನು ಪುನರ್ವಿಮಾರ್ಶೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅಧಿಕಾರ ವರ್ಗದವರೂಕೂಡ ಅದನ್ನು ಒಪ್ಪಿಕೊಂಡಿದ್ದಾರೆ. ಅನೇಕ ಗ್ರಾಮಗಳಲ್ಲಿ ಶೇಕಡ 5 ರಿಂದ ಶೇಕಡ $7\frac{1}{2}$ ವರೆಗೆ ಅಂದಾಜು ಮಾಡಿದ್ದಾರೆ. ಕಡಿಮೆ ಮಾಡಿ ಎಂದು ಹೇಳುವುದಿಲ್ಲ. ನಮ್ಮ ತಾಲ್ಲೂಕಿನ ಸುಮಾರು 300 ಗ್ರಾಮಗಳ ಪೈಕಿ 30 ಗ್ರಾಮಗಳಲ್ಲಿ ಸುಮಾರು ಎರಡು-ಮೂರು ಸಾವಿರ ಜನರಿದ್ದಾರೆ. ಐದು ಮೈಲಿ ಸುತ್ತಳತೆಗಳಿರುವ ಗ್ರಾಮಗಳನ್ನೂ ಕೂಡ ಹೇಳಿದ್ದೇನೆ. ಕಡೂರು ತಾಲ್ಲೂಕಿನ ಆಸಂದಿ, ಹಿರಿಯೂರು, ಕುಂಕನಾಡು, ಮರವಂಜಿ, ಸಿಂಗಟಿಕೆರೆ, ದೇವನೂರು, ನಿಡಘಟ್ಟ, ಕೂಲಿಕೆರೆ ಮತ್ತು ಪಿಲ್ಲೇನಹಳ್ಳಿ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದನ್ನು ಜಾಗ್ರತೆ ಮಂಜೂರು ಮಾಡಬೇಕು. ಆದರೆ ಈಗ ಎರಡು-ಮೂರು ಗ್ರಾಮಗಳಿಗೆ ಮಾತ್ರ ಸರ್ವೆ ಮಾಡಿದ್ದಾರೆ. ಇದು

4 P.M.

ಹೇಗಾಗುತ್ತಿದೆಯೋ ಗೊತ್ತಿಲ್ಲ. ಸರ್ಕಾರದವರೇ ಏನಾದರೂ ಈ ರೀತಿ ವಾಪಸು ಕಳುಹಿಸಿ ಎಂದು ಹೇಳಿದರೋ ಅಥವಾ ಅವರೇ ಉದಾಸೀನಮಾಡಿದರೋ ಗೊತ್ತಿಲ್ಲ. ಈಗಲಾದರೂ ನಮ್ಮ ತಾಲ್ಲೂಕಿನ ಗ್ರಾಮಗಳವರು ಕೇಳಿದರೆ, ಎರಡು ಮೈಲಿ, ಒಂದು ಮೈಲಿ, ಅರ್ಧ ಮೈಲಿ ದೂರದಲ್ಲಿರುವ ಹಳ್ಳಿಗಳಿಗೆ ಕೊಡಲು ಅಂದಾಜುಮಾಡಿ ಕಳುಹಿಸಿದರೆ, ಅದನ್ನು ವಾಪಸುಮಾಡಬಾರದು. ಒಂದು ಸಂದರ್ಭದಲ್ಲಿ ಮೂರುಸಾರಿ ವಾಪಸು ಕಳುಹಿಸಿದರು. ಅಲ್ಲಿರತಕ್ಕ ಅಧಿಕಾರಿಗಳು ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಹೀಗಾಗಲು ಅವಕಾಶ ಕೊಡಬಾರದು. ಆಗುವುದಿಲ್ಲವೆಂದು ಮೊದಲೇ ಹೇಳಬಹುದು. ಈ ಸಭೆಗೆ ನಾನು ಸದಸ್ಯನಾದ ಮೇಲೆ ನಾಲ್ಕು ವರ್ಷಗಳಲ್ಲಿ

ಮೂರು ನಾಲ್ಕು ಗ್ರಾಮಗಳಿಗೆ ಮಾತ್ರ ಕೊಟ್ಟಿದ್ದಾರೆ. ಹೀಗೆ ನಿಧಾನವಾಗಬಾರದು. ಸಂಬಂಧಪಟ್ಟ ಅಧಿಕಾರಿಗಳು ಒಂದು ತಿಂಗಳಲ್ಲಿ ಅಂದಾಜು ಮಾಡಬೇಕು. ಹೀಗೆ ಜಾಗ್ರತೆ ಅಂದಾಜುಮಾಡಿ ತ್ವರಿತವಾಗಿ ಕೆಲಸ ಮಾಡಬೇಕೆಂದು ಪ್ರಾರ್ಥನೆ.

*ಶ್ರೀ ಬಿ. ಚಿಕ್ಕಣ್ಣ (ಜಾವಗಲ್).—ಸ್ವಾಮಿ, ನಮ್ಮ ಅರಸೀಕೆರೆ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ದೀಪವನ್ನು ನೋಡದೇಯಿರುವ ಜನ ನೂರಕ್ಕೆ ತೊಂಬತ್ತರಷ್ಟಿದ್ದಾರೆ. ವಿದ್ಯುಚ್ಛಕ್ತಿ ದೀಪವನ್ನು ನೋಡಿ ಆಶ್ಚರ್ಯ ಪಡುವವರು ಈಗಲೂ ಇದ್ದಾರೆ. ಭಾನುವಾರ ಅರಸೀಕೆರೆಗೆ ಬಂದಾಗ ವಿದ್ಯುಚ್ಛಕ್ತಿ ದೀಪಗಳನ್ನು ನೋಡಿ ಆಶ್ಚರ್ಯ ಪಡುತ್ತಾರೆ. ಈ ತಾಲ್ಲೂಕಿನಲ್ಲಿ ನಾಲ್ಕು ಗ್ರಾಮಗಳು ವಿನಾ ಇನ್ನಾವ ಗ್ರಾಮಕ್ಕೂ ವಿದ್ಯುಚ್ಛಕ್ತಿಯನ್ನು ಕೊಟ್ಟಿಲ್ಲ. ನಮ್ಮ ಜಾವಗಲ್ ಹೋಬಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಮನವಿಯನ್ನು ನಾನೇ ತೆಗೆದುಕೊಂಡು ಹೋಗಿ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಕೊಟ್ಟಿದ್ದೇನೆ. ಈಗಾಗಲೇ ಆರು ತಿಂಗಳಾಯಿತು. ಅದೇನಾಯಿತೋ ಗೊತ್ತಿಲ್ಲ. ನಮ್ಮ ಕಡೆ ವಿದ್ಯುಚ್ಛಕ್ತಿಯನ್ನುಪಯೋಗಿಸಿ ಜಮೀನಿನ ವ್ಯವಸಾಯಮಾಡಿ ಭತ್ತ, ರಾಗಿ ಮೊದಲಾದ ಆಹಾರ ಧಾನ್ಯಗಳನ್ನು ಬೆಳೆಯುವ ಒಂದು ಬಾವಿಯನ್ನೂ ನೋಡಿಲ್ಲ. ನಮ್ಮ ಅರಸೀಕೆರೆ ತಾಲ್ಲೂಕಿಗೆ ಈ ಇಲಾಖೆಯಿಂದ ಆಗಿರುವಷ್ಟು ಅನ್ಯಾಯ ಇನ್ಯಾವುದಕ್ಕೂ ಆಗಿಲ್ಲ. ಈಗಲಾದರೂ ಯಾವ ಯಾವ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಸರ್ವೆ ಆಗಿದೆಯೋ ಆ ಗ್ರಾಮಗಳಿಗೆ ಕೂಡಲೇ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದು ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಇತ್ತೀಚೆಗೆ ವಿದ್ಯುಚ್ಛಕ್ತಿಯನ್ನು ವ್ಯವಸಾಯಕ್ಕೂ, ದೀಪಗಳಿಗೂ, ಕೈಗಾರಿಕೆಗಳಿಗೂ ಒದಗಿಸಬೇಕೆಂದು ಸಂಸ್ಥಾನಾ ಮಳೆ ಬೇಡಿಕೆಗಳು ಬಹಳವಾಗಿ ಬರುತ್ತಿವೆ. ಜೊತೆಗೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚು ಕೈಗಾರಿಕಾಭಿವೃದ್ಧಿಯನ್ನು ಮಾಡಬೇಕೆಂದಿರುವಾಗ ವಿದ್ಯುಚ್ಛಕ್ತಿಯನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿ ಮಾಡಬೇಕೆಂಬುದರ ಆವಶ್ಯಕತೆ ಸಂಪೂರ್ಣವಾಗಿದೆ. ಸರ್ಕಾರದವರು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೊನ್ನೇಮರಡು ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಈಗಾಗಲೇ ಕಾರ್ಯಕ್ರಮ ಕೈಗೊಂಡಿದ್ದಾರೆ. ಈ ಮಾನ್ಯ ಸಭೆಯಲ್ಲಿ ಒಂದು ಪ್ರಶ್ನೆಗೆ ಸರ್ಕಾರದಿಂದ ಬಂದ ಉತ್ತರದ ಪ್ರಕಾರ ಈ ಯೋಜನೆಯ ಮೊದಲನೆಯ ಹಂತದ ಕಾರ್ಯ ಮುಗಿಯಬೇಕಾದರೆ ಐದು ವರ್ಷಗಳಾದರೂ ಬೇಕಾಗುತ್ತದೆಂದು ಹೇಳಿದ್ದಾರೆ. ಈಗ ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿ ಬೇಕೆಂಬ ಬೇಡಿಕೆಗಳು ಹೆಚ್ಚುತ್ತಿವೆ. ಇದಕ್ಕನುಸರಿಸಿ ಸರ್ಕಾರದವರು ಕೊಡುವುದಕ್ಕೆ ಇನ್ನು ಮೇಲೆ ಸಾಧ್ಯವಾಗುವುದಿಲ್ಲವೆಂದು ಕಂಡು ಬರುತ್ತದೆ. ಈಗಾಗಲೇ ಸರ್ಕಾರದವರು ಕೆಲವು ಬಾಬುಗಳಿಗೆ ವಿನಾ ಬಾಕಿ ಬಾಬುಗಳಿಗೆ ವಿದ್ಯುಚ್ಛಕ್ತಿಗಾಗಿ ಬರುವ ಬೇಡಿಕೆಗಳನ್ನೆಲ್ಲಾ ಪೂರೈಸುವುದಕ್ಕೆ ಸಾಧ್ಯವಿಲ್ಲ, ವಿದ್ಯುಚ್ಛಕ್ತಿಯ ಪ್ರಮಾಣ ಸಾಕಷ್ಟಿಲ್ಲವೆಂದು ಉತ್ತರ ಕೂಡ ಕೊಡುತ್ತಿದ್ದಾರೆ. ಇದೆಲ್ಲವನ್ನೂ ನಾವು ಯೋಚನೆ ಮಾಡುವುದಾದರೆ, ತಕ್ಷಣದಲ್ಲಿ, ಬೇಗ ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಹೆಚ್ಚುಮಾಡುವುದಕ್ಕೆ ಯಾವುದಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಸೂಕ್ತವಾಗಿದೆ. ಈಗಾಗಲೇ ಶಿಂಷಾ ಯೋಜನೆಯ ವಿಚಾರವಾಗಿ ಚರ್ಚೆ ಬಂದು, ಇಂಡಿಯಾ ಸರ್ಕಾರದವರು ಇದಕ್ಕೆ ಹಣವನ್ನೊದಗಿಸಿದ್ದರೆಂತಲೂ ನಮ್ಮ ಸರ್ಕಾರದವರು ಅದನ್ನು ಬೇರೆ ಬಾಬುಗಳಿಗೆ ಖರ್ಚು ಮಾಡಿದರೆಂತಲೂ ಕೇಳಿದ್ದೇವೆ. ಎರಡನೆಯ ಯೋಜನೆಯಲ್ಲಿ ಶಿಂಷಾ ಯೋಜನೆಯನ್ನು ಅಭಿವೃದ್ಧಿಮಾಡತಕ್ಕ ಕ್ರಮ ಕಂಡು ಬರುತ್ತದೆ. ಶಿಂಷಾ ಯೋಜನೆಯನ್ನು ತೆಗೆದುಕೊಂಡರೂ ಸುಮಾರು 15-20 ತಿಂಗಳೊಳಗೆ ತಾತ್ಕಾಲಿಕವಾಗಿ ಯಾದರೂ ನಮ್ಮ ದೇಶಕ್ಕೆ ಬೇಕಾದಷ್ಟು ವಿದ್ಯುಚ್ಛಕ್ತಿಯನ್ನೊದಗಿಸುವುದಕ್ಕೆ ಸಾಧ್ಯವಾಗುತ್ತದೆಂದು ಕಂಡು ಬರುವುದರಿಂದ ಸರ್ಕಾರದವರು ಶಿಂಷಾ ಯೋಜನೆಯನ್ನು ಕೈಗೊಂಡು ಇದನ್ನು ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನಮಾಡಬೇಕು. ಇದನ್ನು alternative project ಎಂದು ತೆಗೆದುಕೊಳ್ಳುತ್ತಿಲ್ಲ. 'ಶಿವ' ದಲ್ಲಿರುವ ಜನರೇಟರುಗಳು ಇನ್ನೂ ಹತ್ತು ವರ್ಷದವರೆಗೆ ಉಪಯೋಗಕ್ಕೆ ಬರುತ್ತವೆ ಎಂದು ಒಂದು ಪ್ರಶ್ನೆಗೆ ಉತ್ತರವಾಗಿ ಮಂತ್ರಿಗಳು ಹೇಳಿದರು. ಇದನ್ನು alternative project ಆಗಿ ತೆಗೆದುಕೊಳ್ಳುವುದಕ್ಕೆ ಬದಲಾಗಿ ದೇಶಕ್ಕೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯನ್ನೊದಗಿಸಲು ಏರ್ಪಾಡು ಮಾಡಬೇಕು. ಗ್ರಾಮಾಂತರದಿಂದ ವಿದ್ಯುಚ್ಛಕ್ತಿಗಾಗಿ ಅನೇಕ ಬೇಡಿಕೆಗಳು ಬರುತ್ತಿವೆ. Our people are becoming electricity minded. ವ್ಯವಸಾಯದ ಪಂಪುಗಳನ್ನು ಹಾಕಿಕೊಂಡು ಕೆಲಸಮಾಡುವುದಕ್ಕೆ ಗ್ರಾಮಾಂತರಗಳಿಂದ ಹೆಚ್ಚು ಬೇಡಿಕೆಗಳು ಬರುತ್ತಿರುವುದರಿಂದ ಸರ್ಕಾರದವರು ತೀವ್ರವಾಗಿ ಪರಿಶೀಲನೆಮಾಡಿ ಶಿಂಷಾ ಯೋಜನೆಯನ್ನು ಹೊನ್ನೇಮರಡು ಆಗುತ್ತಿದ್ದರೂ ಕೂಡ, ತಕ್ಷಣ ತೆಗೆದುಕೊಂಡು ತಾತ್ಕಾಲಿಕವಾಗಿ ಬೇಕಾದ ವಿದ್ಯುಚ್ಛಕ್ತಿಯ ಸರಬರಾಜನ್ನು ಈ ಮೂಲಕ ಮಾಡಬೇಕೆಂದು ಸಲಹೆ ಮಾಡುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಮೊದಲನೆಯದಾಗಿ ವಿದ್ಯುಚ್ಛಕ್ತಿಯ ದರದ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಒಂದು ಒಂದೂವರೆ ವರ್ಷದ ಹಿಂದೆ ಒಂದು ರೀತಿ ದರವನ್ನು ಗೊತ್ತು ಮಾಡಿದರು. ಆಹಾರ ಬೆಳೆಗಳಿಗೆ ಉಪಯೋಗಿಸುವ ವಿದ್ಯುಚ್ಛಕ್ತಿಗೇ ಒಂದು ದರ, ಇತರ ಬೆಳೆಗಳಿಗೆ ಉಪಯೋಗಿಸುವುದಕ್ಕೇ ಒಂದು ದರ ಗೊತ್ತು ಮಾಡಿದರು. ಇದರಿಂದ ಕೆಲವು ತೊಡಕುಗಳುಂಟಾಗಿವೆ. ದರದಲ್ಲಿ ಈ ರೀತಿ ವ್ಯತ್ಯಾಸವಿರಬಾರದು. ವ್ಯವಸಾಯಕ್ಕೆ ಕೊಡುವ ವಿದ್ಯುಚ್ಛಕ್ತಿಗೆ ಒಂದೇ ದರ, ಎಂದರೆ ಯೂನಿಟ್ಟಿಗೆ ಆರು ಕಾಸು ಅಥವಾ ಒಂಭತ್ತು ಕಾಸಿರಬೇಕು.

ಎರಡನೆಯದಾಗಿ, 25 ಸೈಕಲ್ಸ್ ಇದ್ದುದನ್ನು ಬೆಂಗಳೂರಿನಲ್ಲಿ 50 ಸೈಕಲ್ಸ್ ಆಗಿ ಪರಿವರ್ತನೆ ಮಾಡಿದ್ದಾರೆ. ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರದಲ್ಲಿ ಇನ್ನೂ ಪರಿವರ್ತನೆ ಮಾಡಿಲ್ಲ. ಅಲ್ಲಿಯೂ ಜಾಗ್ರತೆ ಮಾಡುತ್ತಾರೆಂದು ತಿಳಿದು ಕೆಲವರು ಆತುರದಲ್ಲಿ 50 ಸೈಕಲ್ಸ್ ಮೋಟಾರುಗಳನ್ನು ಹಾಕಿಸಿಬಿಟ್ಟರು. 50 ಸೈಕಲ್ಸ್‌ಗೆ ವಿದ್ಯುಚ್ಛಕ್ತಿ ಬದಲಾವಣೆಯಾಗದೇ ಇರುವುದರಿಂದ ಅವರೆಲ್ಲರೂ ತೊಂದರೆ ಪಡುತ್ತಿದ್ದಾರೆ. ಅಲ್ಲಿ ಬೇಗ ಪರಿವರ್ತನೆ ಮಾಡದಿದ್ದರೆ ರೈತರಿಗೆ ಬಹಳ ತೊಂದರೆಯಾಗುತ್ತದೆ. ವಿದ್ಯುಚ್ಛಕ್ತಿಯನ್ನು ಕೊಡುವುದರಲ್ಲಿಯೂ ಬಹಳ ನಿಧಾನವಾಗುತ್ತಿದೆ. ಮೂರು ವರ್ಷಗಳಿಗೆ ಮುಂಚೆಯೇ ಹೊನ್ನೇಮರಡು ಯೋಜನೆಯನ್ನು ತೆಗೆದುಕೊಂಡಿದ್ದರೆ ಅನುಕೂಲವಾಗುತ್ತಿತ್ತು. ಈ ಮಾನ್ಯ ಸಭೆಯಲ್ಲಿ ಈ ಪ್ರಶ್ನೆ ಬರುತ್ತಲೇ ಇತ್ತು ; ಆದರೂ ಸರ್ಕಾರ ಅದನ್ನು ತೆಗೆದುಕೊಳ್ಳಲಿಲ್ಲ. ದೇಶದಲ್ಲಿ

(ಶ್ರೀ ಕೆ. ವಿ. ಬೈರೇಗೌಡ).

ವಿದ್ಯುಚ್ಛಕ್ತಿಯ ಆವಶ್ಯಕತೆ ಹೆಚ್ಚಾಗುತ್ತದೆಂಬುದು ಗೊತ್ತಾಗಿತ್ತು. ಬೇಕೆಂದು ಕೇಳುವ ಜನರಿಗೆ ಕೊಡದೇ ಯಿದ್ದರೆ ಅನ್ಯಾಯವಾಗುತ್ತದೆ. ಪ್ರತಿ ಹಳ್ಳಿಯಲ್ಲಿಯೂ ವಿದ್ಯುಚ್ಛಕ್ತಿಯನ್ನು ಕೊಡುವ ಬಗ್ಗೆ ನಿಧಾನವಾಗುತ್ತಿದೆ. ಎಲ್ಲೆಲ್ಲಿ ಕೇಳಿದ್ದಾರೋ ಅಲ್ಲಿಗೆ ಬೇಗ ಕೊಟ್ಟು ಅನುಕೂಲ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಈ ಇಲಾಖೆಯಲ್ಲಿ ಕೆಲಸ ಮಾಡುವ ನೌಕರರಿಗೆ ಇಂಜಿನಿಯರಿಂಗ್ ಇಲಾಖೆಯಲ್ಲಿ ಏನು ವ್ಯವಸ್ಥೆ ಇಟ್ಟಿದ್ದಾರೋ ಅದೇ ವ್ಯವಸ್ಥೆಯನ್ನಿಟ್ಟು ಸಂಬಳ ಸಾರಿಗೆ ಕೊಡಬೇಕು. ಆ ರೀತಿ ಇಡದೇ ಹೋದರೆ ಇವರ ಮನಸ್ಸಿಗೆ ಬೇಸರವಾಗಿ ಕೆಲಸಕಾರ್ಯಗಳು ಸರಿಯಾಗಿ ನಡೆಯುವುದಿಲ್ಲ. ಅದು ಬಹಳ ಗ್ಲೇರಿಂಗ್ ಆಗಿ ಎದ್ದು ಕಾಣುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿರುವ ಇಂಜಿನಿಯರುಗಳಿಗೆ ಗ್ರೇಡುಗಳನ್ನು ಕೊಟ್ಟು ವಿದ್ಯುಚ್ಛಕ್ತಿ ಇಲಾಖೆಯಲ್ಲಿರುವ ಇಂಜಿನಿಯರುಗಳಿಗೆ ಕೊಡದೆ ಇರುವುದರಿಂದ ಅವರುಗಳಿಗೆ ಉತ್ಸಾಹ ಕಮ್ಮಿಯಾಗುತ್ತದೆ. ಜವಾಬ್ದಾರಿಯಿಂದ, ದಕ್ಷತೆಯಿಂದ ಕೆಲಸ ಮಾಡಬೇಕಾದ್ದರಿಂದ ಈ ರೀತಿ disparity ಇಟ್ಟಿರುವುದು ಸರಿಯಿಲ್ಲವೆಂದು ಕಾಣುತ್ತದೆ. ಇದು Commercial department ಆಗಿರುವುದರಿಂದ commercial lines ಮೇಲೆ ಕೆಲಸ ಮತ್ತು ಸಂಬಳದ ಸ್ಕೇಲುಗಳನ್ನು ಕೊಡುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಡಿಮ್ಯಾಂಡ್ ನಂಬರು 38 ಮತ್ತು 42, ಈ ಮನವಿಗಳ ಸಂಬಂಧದಲ್ಲಿ ಒಂದೆರಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಈಚೆಗೆ ಸರ್ಕಾರದವರು ವಿದ್ಯುಚ್ಛಕ್ತಿ ನೌಕರರ ಬೇಡಿಕೆಗಳ ಸಂಬಂಧದಲ್ಲಿ ರಚನೆಯಾಗಿದ್ದ ಸಮಿತಿಯವರ ಶಿಫಾರಸ್ಸುಗಳಲ್ಲಿ ಕೆಲವನ್ನು ಜಾರಿಗೆ ಕೊಟ್ಟಿರುವುದಾಗಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಆ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಕ್ಲೆರಿಕಲ್ ಅಂದರೆ ಗುಮಾಸ್ತರು ಯಾರಿದ್ದಾರೋ ಅವರಿಗೆ ಇದರಲ್ಲಿ ಸಂಬಂಧಪಟ್ಟ ಒಂದು ಬೇಡಿಕೆ ಅನ್ವಯಿಸದಿರುವ ರೀತಿಯಲ್ಲಿ ಅಧಿಕಾರಿಗಳು ಅದನ್ನು interpret ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಈ ಇಲಾಖೆಯನ್ನು 'essential department' ಎಂದು ತೀರ್ಮಾನ ಮಾಡಿದರು. ಅದರಲ್ಲಿ ಕೆಲವು ಕೆಲಸಗಾರರನ್ನು maintenance ಮತ್ತು executive ಇವರನ್ನು ಮಾತ್ರ essential ಎಂದು ಕರೆದು ಅದಕ್ಕೆ ಸಂಬಂಧಪಟ್ಟ ಗುಮಾಸ್ತ (clerical staff) ರನ್ನು ಬೇರ್ಪಡಿಸತಕ್ಕದ್ದು ಅಷ್ಟು ಒಳ್ಳೆಯ ನೀತಿಯಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇನ್ನೊಂದು ವಿಷಯವನ್ನು ಮಾನ್ಯ ಮಂತ್ರಿಗಳಾದ ಚನ್ನಬಸಪ್ಪನವರು ಮೊನ್ನೆ ತಾನೆ ಅಪ್ಪಣೆ ಕೊಡಿಸಿದರು. ಏನೆಂದರೆ ಕೆಲಸ ಮಾಡದೆ ಇದ್ದವರಿಗೆ ಭತ್ಯಕೊಡುವುದಕ್ಕಾಗುವುದಿಲ್ಲ, ಮುಷ್ಕರ ಮಾಡಿದ ಕಾಲದ 19 ದಿವಸಗಳ ಕೂಲಿಯನ್ನು ಕೊಡುವುದಿಲ್ಲವೆಂದು ಹೇಳಿದರು. ಬಹುಶಃ ಅವರಿಗೆ ಕಾನೂನು, ಕಾಯಿದೆ ಇಲ್ಲವೇ ಇಲ್ಲವೆಂದು ತಿಳಿದುಕೊಂಡಿದ್ದಾರೋ ಏನೋ. ಮುಷ್ಕರ ಮಾಡುವುದಕ್ಕೆ ನ್ಯಾಯಬದ್ಧ (legal) ವಾಗಿ ನೋಟೀಸ್ ಕೊಟ್ಟು ಮಾಡಿದ್ದಾರೆ. ಇದು ಕಾರ್ಮಿಕರಿಗಿರತಕ್ಕ ಒಂದು ಹಕ್ಕು. ಅದರ ಪ್ರಕಾರ ಹಿಂದೆಲ್ಲ ಎಷ್ಟೋ ಮುಷ್ಕರಗಳನ್ನು ಮಾಡಿರತಕ್ಕ ಕಾರ್ಮಿಕರಿಗೆ ಮುಷ್ಕರ ಕಾಲದ ಭತ್ಯವನ್ನು ಕೊಟ್ಟಿದ್ದಾರೆ. ರೈಲ್ವೇ ಕಾರ್ಮಿಕರಿಗೆ ಕೊಟ್ಟಿದ್ದಾರೆ. ವಿದ್ಯುಚ್ಛಕ್ತಿ ಕಾರ್ಖಾನೆ ಕಾರ್ಮಿಕರು ಸುಮಾರು ನಾಲ್ಕು ತಿಂಗಳ ಕಾಲ ಮುಷ್ಕರ ಮಾಡಿದಾಗ ಕೊಟ್ಟಿದ್ದಾರೆ. ಸಾಮಾನ್ಯವಾಗಿ ನೋಡುವುದಾದರೆ ಕೈಗಾರಿಕಾ ಕಾನೂನು ಪ್ರಕಾರ ನ್ಯಾಯಬದ್ಧ (legal) ವಾಗಿ ಮುಷ್ಕರ ಮಾಡುತ್ತೇವೆಂದು ನೋಟೀಸ್ ಕೊಟ್ಟು ಮುಷ್ಕರ ನಡೆಸಿದಾಗ ಆ ಕಾಲದ ಭತ್ಯವನ್ನು ಅವರು ತೆಗೆದುಕೊಂಡೇ ತೆಗೆದುಕೊಳ್ಳುತ್ತಾರೆ. ಅದು ಕಾರ್ಮಿಕರ ಆಜನ್ಮಸಿದ್ಧವಾದ ಹಕ್ಕು. ಕಾನೂನು ಪ್ರಕಾರ ಮುಷ್ಕರ ಕಾಲದ ಭತ್ಯವನ್ನು ಕೊಡಲೇಬೇಕು. ಆದುದರಿಂದ ಮಾನ್ಯ ಮಂತ್ರಿಗಳು ಯಾವ ಆಧಾರದ ಮೇಲೆ ಹೀಗೆ ಹೇಳಿದರೋ ಗೊತ್ತಿಲ್ಲ. ಕೋರ್ಟಿಗೆ ಬೇಕಾದರೆ ಹೋಗಿ ಎಂದು ಸಂಬಂಧಪಟ್ಟ ಅಧಿಕಾರಿಗಳು ಹೇಳುವುದರಲ್ಲಿ ಅರ್ಥವಿಲ್ಲ. ಕೋರ್ಟಿಗೆ ಹೋಗತಕ್ಕದ್ದನ್ನು ಸಂಬಂಧಪಟ್ಟ ನ ಕರಸಂಘದವರು ಪರ್ಯಾಲೋಚನೆ ಮಾಡುತ್ತಿದ್ದಾರೆ. ಆ ಇಲಾಖೆಯ ಅಧಿಕಾರಿಗಳು ಮುಷ್ಕರ ಹೂಡಿದ್ದ ನೌಕರರ ವಿಚಾರದಲ್ಲಿ ಯಾವ ಮನೋಭಾವವನ್ನು ಹೊಂದಿದ್ದಾರೆಂಬುದು ನನ್ನ ಗಮನಕ್ಕೆ ಬಂದಿದೆ. ಮುಷ್ಕರ ನಡೆದು ಎಷ್ಟೋ ಕಾಲವಾಗಿದ್ದರೂ ಕೂಡ ಆ ಕಾಲದಲ್ಲಿ ನಡೆದಂಥ ವಿಷಯದ ಬಗ್ಗೆ ಈಗಲೂ ಕೂಡ ಕಾರ್ಮಿಕರನ್ನು ಕುರಿತು ನೀವು ಮುಷ್ಕರ ಕಾಲದಲ್ಲಿ ಬೇರೆಯವರನ್ನು ನಂಬಿದ್ದಿರಿ, ಈಗ ನಮ್ಮ ಹತ್ತಿರ ಬರುತ್ತೀರಿ ಎಂದು ಅವರನ್ನು ಒಂದು ರೀತಿಯಲ್ಲಿ ಮೂದಲಿಸಿ ಮಾತನಾಡುತ್ತಾರೆ. ಯಾವಾಗಲೂ ಅವರನ್ನು ಚುಚ್ಚಿ ಮಾತನಾಡುವಂತೆ ಮಾತನಾಡಿಕೊಳ್ಳುವುದು, ಅವರ ಬಗ್ಗೆ ಒಂದು ರೀತಿಯ ವೈಮನಸ್ಯವನ್ನು ಇಟ್ಟುಕೊಂಡೇ ಮುಂದುವರಿಯುವದು, ಇವೆಲ್ಲ ಬಹಳ ಖಂಡನೀಯ ಮತ್ತು ವಿಷಾದನೀಯವಾದ ವಿಷಯ. ಇದು ಒಂದು ವರ್ಗದ ಹೋರಾಟ. ಕಾರ್ಮಿಕರು ತಮ್ಮೆಲ್ಲರ ಉತ್ತಮಕ್ಕಾಗಿ ಹೋರಾಟ ಮಾಡಿದರೇ ಹೊರತು ಒಬ್ಬನಿಗಾಗಿ, ಒಬ್ಬನ ಸ್ವಾರ್ಥಕ್ಕಾಗಿ ಯಾರೂ ಸಹ ಮುಷ್ಕರವನ್ನು ಮಾಡಲಿಲ್ಲವೆಂಬುದನ್ನು ಅಧಿಕಾರಿಗಳು ತಿಳಿಯಬೇಕು. ಅಲ್ಲದೆ ಅಧಿಕಾರಿಗಳು ಈ ರೀತಿ ವರ್ತಿಸಿದ್ದಾದರೆ, ಅದು ಸಂಪೂರ್ಣವಾಗಿ ಈ ಇಲಾಖೆಯ ದಕ್ಷತೆಯನ್ನು ಕಡಿಮೆ ಮಾಡಿದಂತಾಗುತ್ತದೆ. ಈಗ ಮುಷ್ಕರ ಮುಗಿದು ಹೋಗಿದೆ. ಇಲಾಖೆಯಲ್ಲಿ ನಿರ್ಮಲವಾಗಿರತಕ್ಕ, ಸೌಹಾರ್ದ ವಾತಾವರಣವನ್ನು ಕಲ್ಪಿಸುವುದಕ್ಕೆ ಅಧಿಕಾರಿಗಳು ಹೆಚ್ಚು ಪ್ರಯತ್ನ ಮಾಡಬೇಕು. ಆದರೆ ಅಧಿಕಾರಿಗಳು ಈ ವಿಷಯವನ್ನು ತಮ್ಮ ಗಮನಕ್ಕೆ ತೆಗೆದುಕೊಂಡಂತೆ ಕಾಣಲಿಲ್ಲ. ಈಗಲಾದರೂ ಕೂಡ ಅಧಿಕಾರಿಗಳು ತಮ್ಮ ಮನೋಭಾವವನ್ನು ಬದಲಾಯಿಸಿ, ನೌಕರರನ್ನು ಕೆರಳಿಸತಕ್ಕ, ಅವರಿಗೆ ಆತ್ಮಘಾತವಾಗತಕ್ಕ ರೀತಿಯಲ್ಲಿ ಮಾತನಾಡುವುದನ್ನು ಬಿಡಲು ತೊಡಗಿದರೆ ಸಂಸ್ಥಾನಕ್ಕೆ ಕ್ಷೇಮವೆಂದು ಭಾವಿಸುತ್ತೇನೆ.

ಶರಾವತಿ ವ್ಯಾಲಿ ಪ್ರಾಜೆಕ್ಟ್ ವಿಷಯವಾಗಿ ಒಂದು ಮಾತು ಹೇಳುತ್ತೇನೆ. ಈಗ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಅಭಾವವಿದೆ. ಶರಾವತಿವ್ಯಾಲಿಯಲ್ಲಿ ಮತ್ತು ಭದ್ರಪ್ರಾಜೆಕ್ಟ್‌ನಲ್ಲಿ ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡದೆ ಹೋದರೆ ಈಗಿರತಕ್ಕ ಡಿಮ್ಯಾಂಡನ್ನು ನಾವು ಪೂರೈಸುವುದಕ್ಕಾಗುವುದಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಸಂದರ್ಭದಲ್ಲಿ ನಾನು ಒಂದಂಶವನ್ನು ಸರ್ಕಾರದ ಮುಂದೆ ಇಡಬೇಕೆಂದಿದ್ದೇನೆ ಕಾಂಪೆನ್ಸೇಷನ್ ವಿಚಾರದಲ್ಲಿ, ಮುಳುಗಡೆಯಾದ ಪ್ರದೇಶದವರಿಗೆ ಯಾವ ರೀತಿ ಪರಿಹಾರ ಕೊಡಬೇಕೆನ್ನುವುದಕ್ಕೆ ಶ್ರೀಮಾನ್ ಚನ್ನ

ಬಸಪ್ಪನವರು ಒಂದು ಅಭಿಪ್ರಾಯಪಟ್ಟರು. ಅದೇನೆಂದರೆ ಜಮೀನು ಮುಳುಗಡೆಯಾಗದೆ ಇರುವವರಿಗೆ ಯಾವ ಪರಿಹಾರವನ್ನೂ ಕೊಡುವುದಿಲ್ಲವೆಂದು. ಸಾಮಾನ್ಯವಾಗಿ ಆ ಭಾವನೆ, ಆ ರೀತಿಯ ಅಭಿಪ್ರಾಯ ಪಡಬಹುದು. ಆದರೆ ಒಂದು ಪ್ರದೇಶದಲ್ಲಿ ವಾಸಮಾಡತಕ್ಕ ಜನರ ಸುತ್ತಲೂ ನೀರನ್ನು ಬಿಟ್ಟರೆ, ಸಾಮಾನ್ಯವಾಗಿ ಅದು criminal action ಆಗುತ್ತದೆ. ಇದನ್ನು ದೇಶದ ಹಿತದೃಷ್ಟಿಯಿಂದ ಮಾಡುತ್ತೇವೆಂದು ಹೇಳಬಹುದು. ಆದರೆ ಆ ಪ್ರದೇಶಗಳಲ್ಲಿರತಕ್ಕವರನ್ನು ಅಲ್ಲಿಂದ ಹೊರಗೆ ಕರೆತಂದು ಅವರಿಗೆ ಒಂದು ರೀತಿಯ ಪುನರ್ವ್ಯವಸ್ಥೆಯನ್ನು ಕಲ್ಪಿಸಬೇಕು. ಇಡೀ ಊರನ್ನೇ ಹೊರಗೆ ತರಬೇಕು. ಹಿಂದೆ ಹಿರೇಭಾಸ್ಕರ ಜಲಾಶಯವನ್ನು ಕಟ್ಟಿದ್ದಾದಮೇಲೆ ಅಲ್ಲಿ ಕೆಲವು ಜನರು ವಾಸಿಸುತ್ತಿದ್ದ ಕಡೆ ದ್ವೀಪದೋಪಾದಿಯಲ್ಲಿರುವ ಸ್ಥಳವಾಗಿ, ಅವರಿಗೆ ವಾಹನ ಸೌಕರ್ಯವಿಲ್ಲದೆ, ರಸ್ತೆಗಳಿಲ್ಲದೆ ಅನೇಕ ರೀತಿ ಕಷ್ಟಕ್ಕೊಳಗಾಗಿದ್ದಾರೆ. ಇಂಥವರನ್ನು ಯಾರು ವಿಚಾರಿಸಬೇಕು? ದೇಶದ ಹಿತದೃಷ್ಟಿಯಿಂದ ಜಲಾಶಯಗಳನ್ನು ನಿರ್ಮಿಸಿದರೂ ಕೆಲವು ಜನರಿಗೆ ಈ ರೀತಿಯಾದ ತೊಂದರೆಗಳೊದಗುವಂತೆ ಮಾಡುವುದು ಒಳ್ಳೆಯ ನೀತಿಯಾಗುವುದಿಲ್ಲ. ಆದುದರಿಂದ ಈ ಪ್ರದೇಶದಲ್ಲಿರುವವರಿಗೆಲ್ಲರಿಗೂ ಕೂಡ ಪುನರ್ವ್ಯವಸ್ಥೆಯನ್ನು ಕಲ್ಪಿಸಿಕೊಡುವುದು ಬಹಳ ಅಗತ್ಯವಾದ ಕೆಲಸ. ಶರಾವತಿ ವ್ಯಾಲಿ ಪ್ರಾಜೆಕ್ಟ್ ಕೆಲಸ stage by stage ನಡೆಯುತ್ತದೆಂದು ಹೇಳುತ್ತಾರೆ. ಮೊದಲನೆ ಸ್ಟೇಜ್‌ನಲ್ಲಿ ಹಿರೇಭಾಸ್ಕರ ಅಣೆಕಟ್ಟಿನ ವರೆಗೂ ನೀರು ನಿಲ್ಲುತ್ತದೆ. ಅನಂತರ ಹೆಚ್ಚು ಪ್ರದೇಶ ಮುಳುಗಡೆಗೆ ಬರುತ್ತದೆ. ಈ ರೀತಿ ಕ್ರಮಕ್ರಮವಾಗಿ ಕೆಲಸ ನಡೆಯುತ್ತದೆ. ಹೀಗೆ ಅವರು ಹತ್ತು ವರ್ಷಗಳವರೆಗೂ ಕಾಯಬೇಕು. ಮುಳುಗಡೆಯಾಗುವ ಪ್ರದೇಶ ಯಾವುದು ಎಂದು ಸರ್ವೆ ಮಾಡಿ ಗೊತ್ತುಮಾಡುತ್ತಾರೆ. ಆದುದರಿಂದ ಮುಳುಗಡೆ ಪ್ರದೇಶದಲ್ಲಿರುವವರಿಗೆ ಯಾರಾರಿಗೆ ಎಷ್ಟೆಷ್ಟು ಪರಿಹಾರ ಕೊಡಬೇಕೆಂದು ನೋಡಿ ಅವರಿಗೆಲ್ಲ ಈಗಲೇ ಪರಿಹಾರವನ್ನು ಕೊಟ್ಟು, ಅವರುಗಳು ಬೇರೆ ಕಡೆ ನೆಲಸುವುದಕ್ಕೆ ಪುನರ್ವ್ಯವಸ್ಥೆ ಕಾರ್ಯ ಕ್ರಮಗಳನ್ನು ಸರ್ಕಾರದವರು ಕೈಗೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಸ್ವಾಮಿ, ಚನ್ನಗಿರಿ ತಾಲ್ಲೂಕು ಲಿಂಗದಹಳ್ಳಿ ಎಲೆಕ್ಟ್ರಿಕ್ ಆಫೀಸಿನಲ್ಲಿರುವ ಸಿಬ್ಬಂದಿಗೆ ವಾಸಕ್ಕೆ ಕಟ್ಟಡಗಳಿಲ್ಲದೆ ಬಹಳ ತೊಂದರೆಯಾಗಿದೆ. ಸುಮಾರು ಏಳೆಂಟು ವರ್ಷಗಳಿಂದ ಟೆಂಡರುಗಳನ್ನು ಕರೆಯುವುದು, ಅವುಗಳನ್ನು ತಿರಸ್ಕರಿಸುವುದು (reject ಮಾಡುವುದು) ಈ ರೀತಿಯಾಗಿದೆ. ಈ ವಿಷಯವನ್ನು ಹಿಂದಿನ ಅಸೆಂಬ್ಲಿಯಲ್ಲಿ 1951 ನೆ ಇಸವಿ ಜನವರಿ 30 ನೇ ತಾರೀಖು ಪ್ರಸ್ತಾಪ ಮಾಡಿದಾಗ ಆಗಿನ ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳಾಗಿದ್ದ ಶ್ರೀಮಾನ್ ಕೆ. ಟಿ. ಭಾಷ್ಯಂಅವರು, ಕೂಡಲೇ ಕಾಗದಪತ್ರಗಳನ್ನು ತರಿಸಿಕೊಂಡು, fresh tenders call for ಮಾಡಿ ಕಟ್ಟಡಗಳನ್ನು ಕಟ್ಟಿಸಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರು. ಅಲ್ಲಿಂದೀಚೆಗೆ ಆರು ವರ್ಷಗಳಾದರೂ ಕೂಡ ಇನ್ನೂ ಏನೂ ಆಗಿಲ್ಲ.

ಇಲ್ಲಿ ಎರಡು ಮೂರು ರೀತಿಯ ಸಿಬ್ಬಂದಿ ಇದೆ. main line maintenance staff, stepdown station staff, ತಾಲ್ಲೂಕಿಗೆಲ್ಲ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಕೆಲವು ಸಿಬ್ಬಂದಿ, ಹೀಗೆ ಎರಡು ಮೂರು ಬಗೆಯ ಸಿಬ್ಬಂದಿ ಇದೆ. ಅವರಿಗೆ ವಾಸಕ್ಕೆ ಮನೆಗಳಿಲ್ಲ, quarters ಇಲ್ಲ. ಇದು ಚಿಕ್ಕಹಳ್ಳಿ. ಈಗ ನಾಲ್ಕೈದು ವರ್ಷಗಳಿಂದ ಷೆಡ್ಡುಗಳಲ್ಲಿ ವಾಸಮಾಡುತ್ತಿದ್ದಾರೆ. ಹಳ್ಳಿಯಲ್ಲಿರುವ ಮನೆಯ ಮುಂಭಾಗದ ಪಡಸಾಲೆಗಳಲ್ಲಿ ವಾಸಮಾಡುತ್ತಿದ್ದಾರೆ. ಈ ಜನರು ಇಷ್ಟು ತೊಂದರೆಯನ್ನು ಅನುಭವಿಸುತ್ತಿದ್ದರೂ ಕೂಡ ನಾಲ್ಕು ವರ್ಷಗಳ ಹಿಂದೆಯೇ ಮಂಜೂರಾಗಿದ್ದರೂ ಕೂಡ ಇನ್ನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಎಕ್ಸಿಕ್ಯೂಟಿವ್ ಇಂಜನಿಯರು ಟೆಂಡರುಗಳನ್ನು ಕಳುಹಿಸಿಕೊಟ್ಟಿದ್ದರೂ ಸಹ ಸರ್ಕಾರದವರು ಷೆಡ್ಯೂಲ್ ರೇಟಿಗಿಂತ ಬಹಳ ಜಾಸ್ತಿಯಾಗಿ ಟೆಂಡರುಗಳು ಬಂದಿವೆ ಎಂಬ ಕಾರಣದ ಮೇಲೆ ಅವುಗಳನ್ನು reject ಮಾಡಿದ್ದಾರೆ. ಯಾವಾಗ ಮೂರು ನಾಲ್ಕು ಸಲ ಇದೇ ರೀತಿ ಬರುತ್ತದೆಯೋ ಆಗ ಆ ಸ್ಥಳದಲ್ಲಿ ಕಂಡೀಷನ್ಸ್ ಕಷ್ಟವಾಗಿವೆ ಎಂದು ತಿಳಿದುಕೊಂಡು ಸರ್ಕಾರದವರು ಮಂಜೂರ್ಮಾಡಬೇಕು. ಒಂದು ವೇಳೆ ಹಾಗೆ ಮಾಡುವುದಕ್ಕಾಗದೆ ಹೋದರೆ ಇಲಾಖೆಯಿಂದಲೇ ಅಮಾನಿಯಾಗಿ ಕೆಲಸ ಮಾಡಿ ವಸತಿಗೃಹಗಳನ್ನು ಒದಗಿಸಿಕೊಡಬೇಕೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

*Sri S. SRINIVASA IYENGAR (T.-Narasipur).—Sir, the Government appointed a committee under the Chairmanship of Prof. Thacker to revise the tariff rates of the electric department. Till today the Government have not placed before us what their suggestions are. If the Government had only placed the revised tariff rates before us, it would have been better for us to give suggestions or fight for the reduction of the revised rates. I hope the Hon'ble Minister will tell us what the Government propose to do.

Secondly, Government have invested nearly 28 crores on Hydro-Electrical Projects. This investment is out of the loans raised from the public. The return is estimated to be 10·8 lakhs. I have taken into consideration the payment of interest, the working expenses and all other things. The net income to the Exchequer of the State would not be more than about 10·8 lakhs. Sir, for a capital outlay of nearly 28 crores this income is far less and the working expense is high. Government should do well in reorganising the department in such a manner as to have a greater percentage of return.

Sir, in many of the taluk headquarters, I notice the voltage drop in street lights. Such drops are so extensive that it will not be possible to read in the evenings in some taluk headquarters. Government should set right the defect in this behalf.

(SRI S. SRINIVASA IYENGAR.)

Lastly, for the domestic lighting, we are charged at the rate of four annas a unit. I believe that it does not cost the Government more than one anna per unit for generating. I have been pressing this issue for these four years. We would certainly welcome a little reduction in the charge of domestic lighting. I suggest that it may be two annas per unit.

Sir, regarding rural electrification, I wish to make a remark. In taluks where there are a number of villages, electricity is provided only for a very small number and the claim of that taluk for further electrification is ignored. I suggest that while sanctioning rural electrification, taluks where the least percentage of villages are provided with electricity may be given preference and electrification of other villages in that taluk may be taken up so that the villagers of other villages of the taluk may also have the benefit of electricity.

Sri P. R. RAMAIYA (Basavanagudi).—Sir, the minimum rate in the case of small industries has been raised causing great hardship to them. Till now the practice was to charge for the number of units consumed. Now, a minimum has been fixed; this is very high and it works a great hardship to the small industries which consume power. The schedule works a great hardship to even those who use motors of one H.P., 5 H.P. and 10 H.P. Again, there are many points in the schedule which are not quite clear to those who are using power. I want the Government to consider the hardship experienced by the small industries due to this change and remedy it suitably.

(Several members rose.)

Mr. SPEAKER.—Sri Mulka Govinda Reddy may speak.

Sri Mulka GOVINDA REDDY (Chitaldrug).—If the time that would be allowed to me is only three minutes, I do not propose to speak.

*ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಶ್ರೀ ಶ್ರೀನಿವಾಸಯ್ಯಂಗಾರ್ ಅವರು ತಮ್ಮ ಭಾಷಣದ ಕಡೆಯಲ್ಲಿ ಅಪ್ಪಣೆಕೊಡಿಸಿದ ಹಾಗೆ ದುರದೃಷ್ಟಕ್ಕೆ ಪಾತ್ರರಾಗಿರುವ ತಾಲ್ಲೂಕಿನವರ ಪೈಕಿ ನಾನು ಒಬ್ಬ. ಕುಣಿಗಲು ತಾಲ್ಲೂಕಿನಲ್ಲಿ ತೀರಾ ಕಡಮೆ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಯಾಗಿದೆ; 314 ಗ್ರಾಮಗಳಿರುವ ತಾಲ್ಲೂಕಿನಲ್ಲಿ ಮೂರು ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿ ಸರಬರಾಯಾಗಿದೆ. ಐದುಸಾವಿರ ಪ್ರಜಾಸಂಖ್ಯೆಯಿರುವ ಹೋಬಳಿ ಹೆಡ್‌ಕ್ವಾರ್ಟರುಗಳಿಗೆ ಕೂಡ ಪವರ್ ಕೊಟ್ಟಿಲ್ಲ. ಇನ್ನೂ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯಕ್ಕೆ ಪಂಪನ್ನು ಹಾಕಿಸಲು ಕೆಲವು ಕಡೆ ಕೇಳುತ್ತಿದ್ದಾರೆ. ಅಂಥ ಕಡೆಗೆ ಎಸ್ಟಿಮೇಟ್ ಆಗಿರುವುದು ಮಂಜೂರು ಆಗಿದೆಯೋ ಇಲ್ಲವೋ, ಈಸಲವಾದರೂ ಅಲ್ಲಿಗೆ ಪವರ್ ಸರಬರಾಯಿ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ; ಶರಾವತಿ ವ್ಯಾಲಿಯಿಂದ ಪವರ್ ಸರಬರಾಯಾಗುವವರೆಗೆ ಸಿಕ್ಕುತ್ತದೆಯೋ ಇಲ್ಲವೋ ಅನುಮಾನವಾಗಿದೆ. ಮೊನ್ನೆ ತಾನೆ ವಿದ್ಯುಚ್ಛಕ್ತಿ ಇಲಾಖಾ ಮಂತ್ರಿಗಳು ಪ್ರವಾಸ ಬಂದಾಗಲೂ ಮನವಿ ಮಾಡಿದೆವು. ಈಗಲಾದರೂ ಶ್ರೀ ಶ್ರೀನಿವಾಸಯ್ಯಂಗಾರ್‌ಅವರು ಹೇಳಿದ ಹಾಗೆ ಯಾವಯಾವ ತಾಲ್ಲೂಕುಗಳಲ್ಲಿ ಕಡಮೆ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಯಾಗಿದೆಯೋ ಅವುಗಳಿಗೂ, ಅಂಥ ಕುಣಿಗಲು ತಾಲ್ಲೂಕಿಗೂ ಜಾಗ್ರತೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅಧ್ಯಕ್ಷರೇ, 38 ಮತ್ತು 42ನೆಯ ಡಿಮ್ಯಾಂಡ್ ಮನವಿಗಳನ್ನು ಸ್ವಾಗತಿಸುತ್ತೇನೆ. ವಿದ್ಯುಚ್ಛಕ್ತಿ ಇಲಾಖಾ ಅಧಿಕಾರಿಗಳು ಮತ್ತು ಮಂತ್ರಿಗಳು ಈಚೆಗೆ ಇಂಡಿಯಾ ಸರ್ಕಾರದಿಂದ ಗ್ರಾಂಟು ಬಂದಮೇಲೆ ದೇಶಕ್ಕೆ ಹೆಚ್ಚಿನ ಅನುಕೂಲ ಮಾಡುತ್ತಿದ್ದಾರೆ. ಮಾಗಡಿ ತಾಲ್ಲೂಕು ಬಹಳ ಬೆಟ್ಟಗುಡ್ಡಗಳಿಂದ ಕೂಡಿರುವ ಪ್ರದೇಶ, ಬೆಂಗಳೂರಿಗೆ ಸುಮಾರು 40 ಮೈಲಿಗಳ ದೂರದಲ್ಲಿದೆ, ಅದರಲ್ಲಿ 400 ಹಳ್ಳಿಗಳಿವೆ. ಶ್ರೀ ಹುಚ್ಚಮಾಸ್ತಿಗೌಡರು ಹೇಳಿದ ಹಾಗೆ, ಮಾಗಡಿ ತಾಲ್ಲೂಕಿನಲ್ಲಿ ಎರಡು ಮೂರು ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನೊದಗಿಸಿದ್ದಾರೆ. ಸರ್ಕಾರದವರು ನಿಯಮಿತವಾದ ಮತ್ತು ನಿರ್ದಿಷ್ಟವಾದ ರೀತಿಯಲ್ಲಿ ಕ್ರಮಬದ್ಧವಾಗಿ ಕೆಲಸಕಾರ್ಯಗಳನ್ನು ಮಾಡಿ ದೇಶದ ಜನರೆಲ್ಲರಿಗೂ ಸರಿಸಮಾನವಾಗಿ ವಿದ್ಯುಚ್ಛಕ್ತಿಯನ್ನೊದಗಿಸಲು ಏರ್ಪಾಡು ಮಾಡಿಲ್ಲವೆಂದು ಪದೇ ಪದೇ ಹೇಳುತ್ತಿದ್ದಾರೆ. ಈಗ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಎಂದು ಹೇಳುವಾಗಲೂ ಒಂದು ತಾಲ್ಲೂಕಿಗೆ ಹೆಚ್ಚು ಅನುಕೂಲ ಮಾಡಿ ಇನ್ನೊಂದು ತಾಲ್ಲೂಕನ್ನು ಕೈಬಿಡುತ್ತಿದ್ದಾರೆ. ಮಾಗಡಿ ತಾಲ್ಲೂಕಿನಲ್ಲಿ ಸುಮಾರು 166 ಪಂಪುಗಳಿಗೆ ಹಣ ಕಟ್ಟಿದ್ದಾರೆ. ಅವುಗಳ ಪೈಕಿ ಸುಮಾರು 112 ಪಂಪುಗಳಿಗೆ ಸರ್ಕಾರದವರು ಮಂಜೂರಾತಿಯನ್ನಿತ್ತಿದ್ದಾರೆ. ಇದರ ಕಾರ್ಯಕ್ರಮವನ್ನು ಮುಂದುವರಿಸಲು ಒಂದು ಆಜ್ಞೆ ಮಾಡಿದ್ದರು. ಶೇಕಡ 80 ಭಾಗ ಕೆಲಸ ನಡೆದಿರುವ ಕಡೆಗೆ ಅವಕಾಶ ಕಲ್ಪಿಸಿಕೊಡಬೇಕು, ಬಾಕಿಯಾದವನ್ನು ನಿಲ್ಲಿಸಬೇಕು ಎಂದು ಮಾಡಿದ್ದರು. ಆದರೆ ಮನೆಗೆ ಹೊಸ ಸೊಸೆ ಬಂದ ಕೂಡಲೆ ಮನೆ ಯಜಮಾನಿ ಓಡಿಹೋದ ಹಾಗೆ ಈ ಹೊಸ ಆಜ್ಞೆಯ ಪರಿಣಾಮವಾಗಿದೆ; ಹಾಗಾಗಬಾರದು. ದೇಶದ ಜನರೆಲ್ಲರಿಗೆ ಇದರ ಲಾಭ ದೊರೆಯಬೇಕು. ಮಾಗಡಿತಾಲ್ಲೂಕು ಬಹಳ ಹೀನಸ್ಥಿತಿಯಲ್ಲಿರುವ ತಾಲ್ಲೂಕೆಂದು ಸರ್ಕಾರದವರು ಹಿಂದೆಯೇ ಮನಗಂಡಿದ್ದಾರೆ. ಆದ್ದರಿಂದ ದೇಶಕ್ಕೆ ಬೆನ್ನುಮೂಳೆಯಂತಿರುವ ಬರೀ ರೈತರೇ ವಾಸಮಾಡುವ ಮಾಗಡಿತಾಲ್ಲೂಕಿನ ಬೇಡಿಕೆಯನ್ನು ಜಾಗ್ರತೆ ಕಾರ್ಯಗತ ಮಾಡಬೇಕು. ಒಂದುಸಾವಿರ ಪ್ರಜಾಸಂಖ್ಯೆಯಿರುವ ಎಲ್ಲ ಗ್ರಾಮಗಳೂ ವಿದ್ಯುಚ್ಛಕ್ತಿ ದೀಪದ ಸೌಲಭ್ಯವನ್ನೊದಗಿಸಿ ಮಾಗಡಿ ತಾಲ್ಲೂಕಿನ ಜನರ ಜೀವನಕ್ಕೆ ಅನುಕೂಲ ಕಲ್ಪಿಸಿಕೊಡಬೇಕೆಂಬುದನ್ನು ಈ ಸಂದರ್ಭದಲ್ಲಿ ವಿನಯ

ದಿಂದ ಸರ್ಕಾರದ ಗಮನಕ್ಕೆ ತರುತ್ತೇನೆ. ಇದನ್ನು ಗಮನಿಸಿ ಈ ಬೇಡಿಕೆಯನ್ನು ಕಾರ್ಯಗತಮಾಡಬೇಕು. ಶಾಸನ ಸಭೆಗೆ ಬರುವ ನಾವು, ದೇಶದ ಬೆನ್ನುಮೂಳೆಯೆಂದು ಹೇಳುವ ಪ್ರಜೆಗಳ ಪರವಾಗಿ ಈ ಸಭೆಗೆ ಬರುವ ನಾವು, ಸುಮ್ಮನೆ ಇಲ್ಲಿಗೆ ಬಂದು ನಮ್ಮ ಪ್ರಜೆಗೆ ಯಾವ ಅನುಕೂಲತೆಯನ್ನೂ ಒದಗಿಸದೆ ಭತ್ಯ ವಗ್ಯೈರೆ ತೆಗೆದುಕೊಂಡು ಹೋದರೆ ಯಾರೂ ನಮ್ಮನ್ನು ಗ್ರಾಮಗಳಿಗೆ ಸೇರಿಸುವಹಾಗಿಲ್ಲ. ಆದ್ದರಿಂದ ದಯಮಾಡಿ ನಾವು ಈ ಸಭೆಯ ಮೂಲಕ ಸೂಚಿಸುವುದನ್ನು ಗಮನಿಸಿ ಕೂಡಲೆ ಅದನ್ನು ಕಾರ್ಯಗತ ಮಾಡಬೇಕು ಎಂದು ಪ್ರಾರ್ಥಿಸಿ ಸಭಾಧ್ಯಕ್ಷರು ದಯಮಾಡಿ ನಾನು ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

4-30 P.M.

*Sri H. C. LINGA REDDY (Malur).—In supporting these two Demands on Electricity, I would like to say a few words. I think it is very necessary that a survey is made with regard to the needs for irrigation purposes, for industrial purposes and for electricity in the whole of our State. During the past 5 or 7 or 8 years after the attainment of independence, though we have given power for irrigation and for rural electrification, I think if reasonable requirements of the villages have got to be met, we have got to go a very long way. I think we are almost at the point of exhaustion with regard to the supply of electricity and we have been supplying power to the Andhra and also Bombay people probably according to agreements. Now we have reached a stage when it is very necessary to see how much power is necessary for rural electrification, for industrial purposes and for irrigation purposes and if we see now, I think we have not met the major demads from the people at all. From Malur taluk I have written again and again for the supply of electricity for irrigation purposes and also for rural electrification for a number of villages and I am sorry to say that not a single new pump has been given and not a single village has been electrified during the last four years. For example, Hulimangala, Hoskote, Alambadi and Sampangi. I have been insisting upon the Government to supply electricity to these villages. Though electric lines are taken very near, for some reason or other these villages have not been given electricity till now. With regard to the difficulties of the ryots specially in the scarcity areas I must bring to the notice of the Government the demand that has been made upon the Government every year and also during the question hour that the minimum per Horse Power now fixed for irrigation purposes, that is, 1,000 should be raised to 1,500 per Horse Power and though they have said that they would sympathetically consider this representation of ours, they have not been in a position to do so. I request the Government to consider this aspect of the matter very sympathetically, because, unless it is raised to 1,500, the ryots are not in a position to get electricity.

Again, in Kolar District, the voltage has been dropping and the pumps or the radios or even the electric lights in various towns are not working properly and there is voltage drop. We have been requesting the Government to convert the 25 cycles into 50 cycles system all these years and I am afraid Government has not made much headway in the matter. I request the Government to convert 25 cycles to 50 cycles very early so that there may not be any voltage drop.

ಶ್ರೀ ಎಸ್. ಪರಮೇಶ್ವರಪ್ಪ (ಸಿರಗುಪ್ಪ).—ಸ್ವಾಮಿ, ನಮ್ಮ ಬಳ್ಳಾರಿ ಜಿಲ್ಲೆಗೆ ಈ ದಿವಸ ಹಿಂದೆ ಏನು ಮೈಸೂರು ಸರ್ಕಾರ ಮದ್ರಾಸ್ ಸರ್ಕಾರದೊಡನೆ ಒಂದು ಒಪ್ಪಂದವನ್ನು ವಿದ್ಯುಚ್ಛಕ್ತಿ ಸರಬರಾಯಿನ ಬಗ್ಗೆ ಮಾಡಿಕೊಂಡಿತ್ತೋ, ಆ ಒಪ್ಪಂದದಪ್ರಕಾರ ನಾಲ್ಕನೆ ಒಂದು ಭಾಗದ ಪವರನ್ನೂ ಸಹ ಈಗ ಸರಬರಾಯಿ ಮಾಡುತ್ತಿಲ್ಲ. ಆದರೆ ಎಲ್ಲೋ ಕೆಲವು ಗ್ರಾಮಗಳಿಗೆ ಮಾತ್ರ ಕೊಟ್ಟಿದ್ದಾರೆ. ಹಿಂದೆ ನಮ್ಮ ಸಿರಗುಪ್ಪೆಗೆ ವಿದ್ಯುಚ್ಛಕ್ತಿಯನ್ನು ಕೊಡುವಂತೆ ಮಂಜೂರಾಯಿತು ಎಂಬುದಾಗಿ ಮಾನ್ಯ ಮಂತ್ರಿಗಳಾದ ಡಾ|| ನಾಗನಗೌಡರು ಹಿಂದೆ ವಿದ್ಯಾದಾನ—ಭೂದಾನ ಕಾರ್ಯದ ಸಂಬಂಧದಲ್ಲಿ ಅಲ್ಲಿಗೆ ಬಂದಿದ್ದಾಗ್ಗೆ ತಿಳಿಸಿದ್ದರು. ಆದರೆ ಈಗ ಅಲ್ಲಿ ಅರ್ಥ ಲೈನು ಹಾಕಿದ್ದಾರೆ. ಇನ್ನರ್ಥ ಲೈನು ಹಾಗೆ ಉಳಿದಿದೆ. ಕಂಬ, ತಂತಿ ವಗ್ಯೈರೆಗಳನ್ನೆಲ್ಲಾ ಸಿದ್ದಮ್ಮನಹಳ್ಳಿವರೆಗೆ ಮಾತ್ರ ಹಾಕಿ ಮುಂದಕ್ಕೆ ಕೈ ಬಿಟ್ಟಿದ್ದಾರೆ. ಇದೇ ವಿಚಾರದಲ್ಲಿ ನಾವು ಹಿಂದೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರನ್ನೂ ಕೂಡ ಒಂದಾವರ್ತಿ ಭೇಟಿ ಮಾಡಲು ಹೋಗಿದ್ದೆವು. ಆದರೆ ಈ ದಿವಸದವರೆಗೂ ಅಲ್ಲಿಗೆ ಈ ವಿದ್ಯುಚ್ಛಕ್ತಿಯನ್ನಿನ್ನೂ ಒದಗಿಸಿಲ್ಲ. ಆದಷ್ಟು ಬೇಗ ಅಲ್ಲಿಯ ಕೆಲಸಗಳನ್ನು ಮುಗಿಸಿ, ಆ ಗ್ರಾಮಕ್ಕೆ ಜಾಗ್ರತೆಯಾಗಿ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಟಿ. ಎಣ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ನಾನು 1939ರಲ್ಲಿ ಮೈಸೂರು ಸಿಟಿಯಲ್ಲಿ ಸತ್ಯಾಗ್ರಹ ಮಾಡಲು ಹೋಗಿದ್ದೆನು. ಆ ದಿವಸ ನಾನು ಅಲ್ಲಿ ಭಾಷಣಮಾಡುತ್ತಾ ಇಂಥ ದೊಡ್ಡ ದೊಡ್ಡ ನಗರಗಳಿಗೂ ಅರಮನೆಗಳಿಗೂ ಮತ್ತು ಚಾಮುಂಡಿ ಬೆಟ್ಟಕ್ಕೆ ಇತ್ಯಾದಿಗಳಿಗೆಲ್ಲಾ ವಿದ್ಯುಚ್ಛಕ್ತಿ ಸರಬರಾಯಿ ಮಾಡಲು ವಿದ್ಯುಚ್ಛಕ್ತಿಯಿದೆ. ಆದರೆ ಹಳ್ಳಿ ಜನರಿಗೆ ವಿದ್ಯುಚ್ಛಕ್ತಿ ಕೊಡಿ ಎಂದು ಕೇಳಿದರೆ ಪವರ್ ಉತ್ಪತ್ತಿ ಕಡಮೆ ಇದೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ—ಇದೆಂಥ ನೀತಿ ಎಂಬುದಾಗಿ ಆ ದಿವಸ ಭಾಷಣ ಮಾಡುತ್ತಾ ಹೇಳಿದ್ದೆನು. ಆದರೆ ಆಗಿದ್ದ ಸರ್ಕಾರ ಈಗಿಲ್ಲ. ಆದಾಗ್ಯೂ ಆ ಸರ್ಕಾರ ಇದ್ದಾಗ ಯಾವ ರೀತಿ ಕೇಳುತ್ತಿದ್ದೆವೋ ಅದೇ ರೀತಿಯಾಗಿ ಆ ದಿವಸದಿಂದ ಈ ದಿನದವರೆಗೂ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಿ ಎಂದು ನಾವು ಕೇಳುತ್ತಲೇ ಇದ್ದೇವೆ. ಆದರೆ ಇನ್ನೂ ಹಳ್ಳಿಗಳಿಗೆ ಎಲೆಕ್ಟ್ರಿಸಿಟಿ ಎನ್ನುವುದು ಬರಲಿಲ್ಲ. ಇದನ್ನು ನೋಡಿದರೆ ನಾವು ಏನು ವಿದ್ಯುಚ್ಛಕ್ತಿಯ ಅನುಕೂಲತೆಯನ್ನು ಅನುಭವಿಸುತ್ತೇವೆ ಎಂದು ಒಂದು ಆಸೆಯನ್ನಿಟ್ಟುಕೊಂಡಿದ್ದೆವೋ ಅದು ದಿನದಿನಕ್ಕೂ ದೂರ ಹೋಗುತ್ತಿದೆ. ಬೆಂಗಳೂರು—ಮೈಸೂರು ಪಟ್ಟಣಗಳಲ್ಲಿ ಕೇಳಿದರೆ ಅವರಿಗೆ ತಕ್ಷಣ ಪವರನ್ನು ಕೊಡುತ್ತಾರೆ. ನಾವೇನಾದರೂ ಕೇಳಿದರೆ ಇಲ್ಲದ ನಿರ್ಬಂಧಗಳನ್ನು ಹಾಕುತ್ತಿದ್ದಾರೆ. ಸರಿಯಾದ ರಿಟರ್ನ್ ಬರುವುದಿಲ್ಲ—ಅದಕ್ಕಾಗಿ ನಿಮಗೆ ಪವರ್ ಸಪ್ಲೈ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಪಟ್ಟಣಗಳಲ್ಲಿ ಈ ಕೆಲಸ ಚುರುಕಾಗಿ ನಡೆಯುತ್ತಿರುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿಲ್ಲ. ಹಿಂದಿನ ರಾಗವನ್ನೇ ಇವರೂ ಹೇಳುತ್ತಿದ್ದಾರೆ. ಹಳ್ಳಿಗಳ ಲೈಟಿಗಾಗಲಿ ಅಥವಾ ಇರಿಗೇಷಣ್ ಪಂಪ್ ಸೆಟ್ಟುಗಳಿಗಾಗಲಿ ಸರ್ಕಾರ ಯಾವ ಒಂದು ಪ್ರಿಯಾರ್ಟಿಯನ್ನೂ ಕೊಡುತ್ತಿಲ್ಲ. ಆದರೆ ಈ ದಿವಸ ಇದಕ್ಕೆಲ್ಲಾ ಕಾರಣ ಈ ಪ್ರಿಯಾರ್ಟಿಯನ್ನು ಬಳ್ಳಾರಿ ಜಿಲ್ಲೆಗೆ ಕೊಡಲಾಯಿತು ಎಂದು ಹೇಳುತ್ತಿದ್ದಾರೆ. ಆದರೆ ಆ ಪ್ರದೇಶ ಮುಂದುವರಿಯಲ್ಲಿ ಎಂಬ ಕುತೂಹಲದಲ್ಲಿ ಈ ಹಳ್ಳಿಗಳನ್ನು ಮರೆಯಬಾರದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸು ತ್ತೇನೆ.

*ಶ್ರೀ ಪಿ. ಮುನಿಯಪ್ಪ (ಹಿರಿಯೂರ್).—ಸ್ವಾಮಿ, ಸರ್ಕಾರದವರು ಈ ದಿವಸ ವಿದ್ಯುಚ್ಛಕ್ತಿಯನ್ನು ನೀರಾವರಿ ಕಾಮಗಾರಿಗಳಿಗೂ, ಬಾವಿಗಳಿಗೂ ವ್ಯವಸಾಯದ ಉದ್ದೇಶಕ್ಕಾಗಿ ಕೊಡುತ್ತಿದ್ದಾರೆ. ಆದರೆ ಈ ದಿವಸ ಈ ಪವರನ್ನು ಕಬ್ಬಿನ ಗಾಣಗಳಿಗೆ ಕಬ್ಬನ್ನು ಅಲೆಯಾಡತಕ್ಕ ಸಂಬಂಧದಲ್ಲಿ ಕೇಳಿದರೆ ಅದಕ್ಕೆ ಪವರ್ ಸಪ್ಲೈ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಈ ಸಂಬಂಧವಾಗಿ ಸರ್ಕಾರದವರೇನಾದರೂ ಹೇಳಿಕೆ ಹೊರಡಿಸಿದ್ದಾರೋ ಏನೋ ಒಂದೂ ತಿಳಿಯದು. ಆದ ಪ್ರಯುಕ್ತ ಈಗಲಾದರೂ ಸರ್ಕಾರದವರು ಕಬ್ಬನ್ನು ಕ್ರಷ್‌ಮಾಡುವುದಕ್ಕೆ 5-10 H.P. ವಿದ್ಯುಚ್ಛಕ್ತಿಯನ್ನಾದರೂ ಒದಗಿಸಬೇಕೆಂದು ನಾನು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಮಂತ್ರಿಗಳು).—ಸ್ವಾಮಿ, ಅನೇಕ ಮಾನ್ಯ ಸದಸ್ಯರು ಈಗ ಪವರ್ ಷಾರ್ಟೇಜ್ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ನಮ್ಮ ಸಂಸ್ಥಾನದಲ್ಲಿ ಸ್ಥಾಪಿಸಿರತಕ್ಕ ವಿದ್ಯುತ್ ಕೇಂದ್ರಗಳಲ್ಲಿ 1,79,220 K.W. ಪವರನ್ನು ಉತ್ಪತ್ತಿಮಾಡತಕ್ಕ ಕೆಪ್ಯಾಸಿಟಿಯಿದೆ. ಆದರೆ ಈಗ ಈ ಪವರ್ ಉತ್ಪತ್ತಿ ಎಲ್ಲಿಯವರೆಗೆ ಹೋಗಿದೆ ಎಂದರೆ 1ಲಕ್ಷ 52 ಸಾವಿರದ 300 K.W. ಶಕ್ತಿಯನ್ನು ನಾವೀಗ ಟ್ಯಾಪ್ ಮಾಡುತ್ತಿದ್ದೇವೆ. ಇದು ಈಗೀಗ ಬರಬರುತ್ತ ಪೊಟೆಣ್ಷಿಯಲ್ ಪೀಕ್‌ನ ಹತ್ತಿರಹತ್ತಿರಕ್ಕೆ ಬರುತ್ತಿದೆ. ಈಗ 1 ಲಕ್ಷ 73 ಸಾವಿರದ 500 K.W. ಹತ್ತತ್ತಿರಕ್ಕೆ ಬಂದಿದೆ.

ಆದರೆ ಈ ವಿದ್ಯುಚ್ಛಕ್ತಿಯನ್ನು ಕೈಗಾರಿಕಾ ಉದ್ದೇಶಗಳಿಗೆ ಒದಗಿಸುವುದೊಂದು ವಿಚಾರ. ಲಿಫ್ಟ್ ಇರಿಗೇಷನ್ನಿಗೆ ಪವರ್ ಸರಬರಾಯಿ ಮಾಡತಕ್ಕದ್ದು ಎರಡನೆಯ ವಿಚಾರ. ಇನ್ನು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಹೆಚ್ಚಿಗೆ ಒದಗಿಸಬೇಕೆಂಬ ಅಭಿಪ್ರಾಯವನ್ನು ಅನೇಕರು ವ್ಯಕ್ತಪಡಿಸಿದ್ದಾರೆ. ಈಗ್ಗೆ ಕೆಲವು ದಿವಸಗಳ ಹಿಂದೆ ಗ್ರಾಮಾಂತರ ಪ್ರದೇಶಗಳಿಗೆ ಪವರ್ ಕೊಡತಕ್ಕದ್ದನ್ನು ಸ್ವಲ್ಪಮಟ್ಟಿಗೆ ನಿಧಾನಮಾಡಬೇಕೆಂದು ಎಲೆಕ್ಟ್ರಿಕಲ್ ಚೀಫ್ ಇಂಜಿನಿಯರ್ ಅವರಿಗೆ ತಿಳಿಸಿ—ಈ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಅದರ ಪರಿಣಾಮವಾಗಿ ಕೆಲವು ದಿವಸ ಅಲ್ಲಿನ ಜನಗಳೆಲ್ಲರೂ ಕೂಡ ವಿದ್ಯುಚ್ಛಕ್ತಿ ಕೊಡುತ್ತಾ ಇಲ್ಲ ಎಂದು ಹಾಹಾಕಾರ ಮಾಡಿದರು. ಅದನ್ನೆಲ್ಲಾ ಪುನರಾಲೋಚನೆಮಾಡಿ ಈಗ ಸದ್ಯದಲ್ಲೇ ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯನ್ನು ವ್ಯವಸಾಯಕ್ಕಾಗಿ ಕೊಡಬೇಕೆಂದು ತೀರ್ಮಾನ ಮಾಡಿ, ಅದರ ಮೇಲೆ ಸೂಚನೆಯನ್ನು ಸಹ ಕೊಡಲಾಗಿದೆ. ಆದ್ದರಿಂದ ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಅದರಲ್ಲೂ ವ್ಯವಸಾಯಕ್ಕೆ ಕೊಡುವುದಕ್ಕೆ ಯಾವ ಅಭ್ಯಂತರವೂ ಇಲ್ಲ, ಯಾವ ಅಡ್ಡಿ ಆತಂಕವೂ ಇಲ್ಲ.

ಶಿಂಷಾ ಪ್ರಾಜೆಕ್ಟನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ಶರಾವತಿ ವ್ಯಾಲಿ ಪ್ರಾಜೆಕ್ಟ್ ಮಂಜೂರು ಮಾಡಿರುವುದೇ ಆಗಿದೆ ಶಿಂಷಾ ಪ್ರಾಜೆಕ್ಟಿಗೆ ಭಾರತ ಸರ್ಕಾರದವರು ಅನುಮತಿ ಕೊಡಲಿಲ್ಲ. ತಮಗೆಲ್ಲರಿಗೂ ಗೊತ್ತಿರುವಂತೆ ಇದಕ್ಕೆ ಹೇರಳವಾಗಿ ಹಣ ಬೇಕು. ಅದಕ್ಕೆ ಅವರ ಅನುಮತಿಯನ್ನು ಪಡೆದೇ ಕೆಲಸ ಮಾಡಬೇಕು. ಈಗ ತಕ್ಷಣದಲ್ಲೇ ಕೆಲವಾರು ತಿಂಗಳಿನಲ್ಲಿ ತುಂಗಭದ್ರ ಪ್ರಾಜೆಕ್ಟಿನಿಂದ ವಿದ್ಯುಚ್ಛಕ್ತಿ ಬರುತ್ತದೆ. ಅದರ ಜೊತೆಗೆ ಭದ್ರಾಪ್ರಾಜೆಕ್ಟಿನಿಂದ ವಿದ್ಯುಚ್ಛಕ್ತಿಯನ್ನು ಉತ್ಪನ್ನ ಮಾಡಲಿಕ್ಕೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ. ಇದಕ್ಕೂ ಮಿಗಿಲಾಗಿ ಹಳ್ಳಿಗಾಡುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೂ ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೂ ಏನಾದರೂ ತೊಂದರೆ ಆದೀತು ಎಂದು ಹೇಳಿ ನುಗು ಜಲಾಶಯದಿಂದ ಸುಮಾರು 200 ಕ್ಯೂಸೆಕ್ಸ್ ನೀರನ್ನು ಶಿವನ ಸಮುದ್ರಕ್ಕೆ ಬಿಟ್ಟು ತನ್ಮೂಲಕ ಅಲ್ಲಿನ ಉತ್ಪನ್ನವನ್ನು ಹೆಚ್ಚುಮಾಡಿಕೊಳ್ಳಬೇಕೆಂಬ ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ವಿದ್ಯುಚ್ಛಕ್ತಿ ಪರಿಸ್ಥಿತಿ ಬಹಳ ಉತ್ಕಟವಾಗುವ ಸಂದರ್ಭದಲ್ಲಿ 200 ಕ್ಯೂಸೆಕ್ಸ್ ನೀರಿನಿಂದ 7-8 ಸಾವಿರ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಬಹುದು. ಆದ್ದರಿಂದ ಗ್ರಾಮಾಂತರಗಳಿಗೆ ಮತ್ತು ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ಕಮ್ಮಿಯಾಗುತ್ತದೆಯಲ್ಲಾ ಎಂದು ಹೇಳಿ ಗ್ರಾಮಾಂತರ ಜನ ಮತ್ತು ವ್ಯವಸಾಯಗಾರರು ಯಾವ ವಿಧವಾದ ಶಂಕೆಯನ್ನಾಗಲೀ ಇಟ್ಟುಕೊಳ್ಳಬೇಕಾದದ್ದು ಅನಾವಶ್ಯಕ. ಮತ್ತು ಸಣ್ಣ ಪುಟ್ಟ ಕೈಗಾರಿಕೆಗಳಿಗೆ ತೊಂದರೆಯಾಗುತ್ತದೆ ಎಂದು ಕೆಲವರು ಹೇಳಿದರು. ಕೈಗಾರಿಕೆಗಳು ಎಲ್ಲಕ್ಕೂ ಕೊಡುವುದಕ್ಕೆ ಸಾಧ್ಯವಿಲ್ಲದಿದ್ದರೂ ಗ್ರಾಮಾಂತರಗಳಲ್ಲಿ ಕಾಟೇಜ್ ಇಂಡಸ್ಟ್ರೀಸ್‌ಗೆ ಅಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಪ್ರೈಯಾ

ರೇಟ ಬೇಸಿಸ್ ಮೇಲೆ ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಒಂದು ವೇಳೆ ಇನ್ನೂ ಹೆಚ್ಚಿನ ವಿದ್ಯುಚ್ಛಕ್ತಿ ಬೇಕಾಗುವ ಪಕ್ಷದಲ್ಲಿ ಹೆಚ್ಚು ಲೋಡ್ ಇರತಕ್ಕ ಪ್ರದೇಶಗಳಿಗೆ ಸ್ಟ್ಯಾಂಡ್‌ಬೈ ಜನರೇಟರ್ಸ್ 2-3 ಘಂಟೆಗಳ ಕಾಲ ಉಪಯೋಗ ಮಾಡಿದ ಪಕ್ಷದಲ್ಲಿ 18 ಸಾವಿರ ಕಿಲೋವಾಟ್‌ಗಳವರೆಗೂ ಉಪಯೋಗಿಸಿಕೊಳ್ಳಬಹುದು ಎಂದು ಹೇಳಿ ಚೀಫ್ ಎಲೆಕ್ಟ್ರಿಕಲ್ ಇಂಜಿನಿಯರಾಗಿದ್ದ ಹಯಾತ್ ಅವರು ಒಂದು ಯೋಜನೆಯನ್ನು ಕೊಟ್ಟಿದ್ದಾರೆ. ಅದರ ಸಾಧಕ ಬಾಧಕಗಳನ್ನು ಯೋಚನೆ ಮಾಡಿದ್ದರಲ್ಲಿ ಏನೂ ತೊಂದರೆಯಿಲ್ಲ ಎಂದು ತಿಳಿದುಬಂದಿದೆ. ಅಂದ ಮೇಲೆ ತಾವು ಯೋಚನೆ ಮಾಡುತ್ತಾ ಇದ್ದಷ್ಟು ಅಭಾವ, ಆ ಪ್ರಮಾಣದಲ್ಲಿ, ಅಷ್ಟು ಉಗ್ರರೀತಿಯಲ್ಲಿ ಇಲ್ಲ ಎಂದು ಹೇಳಬೇಕಾಗಿದೆ. As a matter of abundant caution the department has got to be a little careful. ನಾನು ತಮ್ಮನ್ನು confidenceಗೆ ತೆಗೆದುಕೊಂಡು ಇರತಕ್ಕ ವಿಷಯವನ್ನು ತಮಗೆ ತಿಳಿಸಿದ್ದೇನೆ. ಆದ್ದರಿಂದ ವಿದ್ಯುಚ್ಛಕ್ತಿ ಕೊಡತಕ್ಕ ವಿಷಯದಲ್ಲಿ ಕಡಮೆ ಆಯಿತಲ್ಲಾ ಎಂದು ವ್ಯಥೆ ಪಡಬೇಕಾಗಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಫರ್ಟಿಲೈಸರ್ ಪ್ರಾಜೆಕ್ಟಿಗೆ ವಿದ್ಯುಚ್ಛಕ್ತಿ ಸಾಕಾಗುತ್ತಿಲ್ಲ ಎಂದು ಹೇಳಿದ್ದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ದೊಡ್ಡ ಕೈಗಾರಿಕೆಗಳ ವಿಷಯ ಬಂದಾಗ ಅದನ್ನು ಯೋಚನೆ ಮಾಡಬೇಕಾಗುತ್ತದೆಯೇ ಹೊರತು ಈ ಸಣ್ಣಪುಟ್ಟ ಗ್ರಾಮಗಳಿಗೆ ಕೊಡುವುದಕ್ಕೆ ತೊಂದರೆ ಆಗುವುದಿಲ್ಲ ಮತ್ತು ಫರ್ಟಿಲೈಸರ್ ಕಾರ್ಖಾನೆಯನ್ನು ಹಾಕಬೇಕೆಂದು ಯೋಚನೆ ಮಾಡಿದಾಗ ಆಗಿನ ಪರಿಸ್ಥಿತಿ ಏನಿತ್ತು ಎಂಬುದು ಈಗ ಗೊತ್ತಿಲ್ಲ. ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿ ಸಲೀಸಾಗಿ ಮಂಜೂರಾಗುತ್ತಿಲ್ಲ, ಹಣವನ್ನು ಕೊಟ್ಟಿದ್ದೇವೆ, ಮಂಜೂರು ಮಾಡಿದ್ದರೂಕೂಡ ಕೆಲಸ ಆಗುತ್ತಿಲ್ಲ ಎಂಬ ದೂರುಗಳು ಏನಿವೆಯೋ ಅವನ್ನು ಎಲ್ಲ ಮಾನ್ಯಸದಸ್ಯರೂ ತಿಳಿಸಿದ್ದೀರಿ. ಸಾಧಾರಣವಾಗಿ ನಾನು ಗ್ರಾಮಾಂತರಗಳಿಗೆ ಹೋದಾಗ ಆ ಜನಗಳಿಗೆ ಹೇಳಿದ್ದೇನೆ. ಅನೇಕ ಸಂದರ್ಭಗಳಲ್ಲಿ ಯಾವರೀತಿ ಮುಂದುವರಿಯಬೇಕು ಎಂಬುದು ಗೊತ್ತಿಲ್ಲದೆ ಅರ್ಧಪಾಲು ಜನ ಗ್ರಾಮಗಳಲ್ಲಿ ತೊಂದರೆ ಪಡುತ್ತಾ ಇದ್ದಾರೆ. ಯಾವ ಕ್ರಮವನ್ನು ಅನುಸರಿಸಬೇಕೋ ಆ ಕ್ರಮವನ್ನು ಅನುಸರಿಸದೇ ತೊಂದರೆ ಆಗುತ್ತಾ ಇದೆ. ಈರೀತಿ ಆದರೆ ಇನ್ನು 10 ವರ್ಷ ಆದರೂ ಕೂಡ ಅಂಥವರಿಗೆ ವಿದ್ಯುಚ್ಛಕ್ತಿ ಸಿಕ್ಕುವುದಿಲ್ಲ. ಅದಕ್ಕೆ ಕ್ರಮ ಯಾವುದಿದೆಯೋ ಅದನ್ನು ಅನುಸರಿಸಬೇಕು.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಯಾವ ಕ್ರಮ ಅನುಸರಿಸಬೇಕು ಎಂದು ಹೇಳುತ್ತೀರೋ ಆ ಕ್ರಮವನ್ನು ಅನುಸರಿಸಿದರೂ ಕೂಡ ಕೆಲವರಿಗೆ ಕೊಡುವುದಿಲ್ಲ. ಇನ್ನು ಕೆಲವರಿಗೆ ಕ್ರಮ ಅನುಸರಿಸದೇ ಇದ್ದರೂಕೂಡ ಕೊಡುತ್ತೀರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ಷಮಿಸಬೇಕು. ತಾವು ಒಂದು ನಿದರ್ಶನ ಕೊಟ್ಟ ಪಕ್ಷದಲ್ಲಿ ನಾನು ಹೇಳಿದ್ದು ತಪ್ಪು ಎಂದು ಒಪ್ಪಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಕ್ರಮವನ್ನನುಸರಿಸದರೆ ಒಂದು ಕೇಸನ್ನು ಕೂಡ ನಾವು ಮಂಜೂರು ಮಾಡುವುದಿಲ್ಲ, ಮಂಜೂರು ಮಾಡಿಯೂ ಇಲ್ಲ ಎಂದು ಹೇಳುತ್ತೇನೆ. ಕೆಲವು ಪ್ರದೇಶಗಳಲ್ಲಿ ಲೈನ್ ಎಳೆಯಬೇಕಾಗಿದ್ದರೆ ಕೆಲವು ತೊಂದರೆಗಳಿವೆ. ಅಲ್ಲಿರತಕ್ಕ ರೈತರು ಯಾರಿದ್ದಾರೋ ಅವರು ಅದನ್ನು ಸದುಪಯೋಗಪಡಿಸಿಕೊಂಡಲ್ಲಿ ಪರವಾಗಿಲ್ಲ. ಹಾಗಲ್ಲದೆ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಲೈನ್ ಎಳೆದರೆ ಯಾವನೋ ಒಬ್ಬ ರೈತ 5 ಎಚ್. ಪಿ. ಪಂಪ್‌ಗೋಸ್ಕರ ವಿದ್ಯುಚ್ಛಕ್ತಿ ತೆಗೆದುಕೊಂಡರೆ ಅದರಿಂದ ಪ್ರಯೋಜನವಿಲ್ಲ. ಆದ್ದರಿಂದ ಶೇಕಡ 80ರಷ್ಟು ಜನಗಳಾದರೂ ಪವರ್ ತೆಗೆದುಕೊಂಡಲ್ಲಿ ಮುಂದುವರಿಯುವುದಕ್ಕೆ ಸುಲಭವಾಗುತ್ತದೆ. ಅದೇರೀತಿ ಗ್ರಾಮಾಂತರಗಳಿಗೂ ಕೂಡ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಬಗ್ಗೆ ಅಲ್ಲಿನ ಜನರು ಕ್ರಮವರಿತು ಕೆಲಸಮಾಡಿದರೆ ಯಾವ ತೊಂದರೆಯೂ ಆಗುವುದಿಲ್ಲ. ಇಲ್ಲದೇ ಇದ್ದರೆ ಯಾವುದೇ ಒಂದು ಸಣ್ಣ ಕಾರಣಕ್ಕಾಗಲಿ ಮಂಜೂರಾಗದೇ ನಿಂತುಹೋಗಬಹುದು. ಆದ್ದರಿಂದ ತಮ್ಮಲ್ಲಿ ಅರಿಕೆ ಮಾಡುವುದೇನೆಂದರೆ, ತಾವು ಕ್ರಮ ಅನುಸರಿಸಿಯೂ ನಿಧಾನ ಮಾಡಿದರೆ ಆಗ ನಮ್ಮಿಂದ ಲೋಪ ಆಗಿದೆ ಎಂದು ಒಪ್ಪಿಕೊಳ್ಳಬಹುದು. ಕೋಲಾರ, ತುಮಕೂರು ಜಿಲ್ಲೆಗಳವರಿಗೆ—ನೀರಿನ ಅಭಾವ ಇರತಕ್ಕ ಜಿಲ್ಲೆಗಳು—ವಿಶೇಷ ಸಹಾನುಭೂತಿಯಿಂದ ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುವ ಸಂಪ್ರದಾಯವನ್ನು ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿದ್ದೇವೆ. ಕೋಲಾರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳು ನೀರಿನ ಅಭಾವದಿಂದ ಇರತಕ್ಕ ಜಿಲ್ಲೆಗಳು. ಇಲ್ಲಿಗೆ ವಿಶೇಷ ಆಸಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಕೊಡುವ ವಿಚಾರದಲ್ಲಿ ಸರ್ಕಾರದವರಿಗೆ ಸಂಪೂರ್ಣ ಸಹಾನುಭೂತಿ ಇದೆ.

ಇನ್ನು ದರದ ವಿಷಯವಾಗಿ ಮಾತನಾಡುತ್ತ ಶ್ರೀ ಶ್ರೀನಿವಾಸ ಅಯ್ಯಂಗಾರ್ಯರು ನಾಲ್ಕು ಆಣೆ ಇರುವುದನ್ನು ಎರಡಾಣೆಗೆ ಇಳಿಸಿ ಎಂದು ಹೇಳಿದರು. ಒಂದು ಆಣೆ ಕಮ್ಮಿ ಮಾಡಿದರೂ ಸಹ ಸುಮಾರು 56 ಲಕ್ಷ ರೂಪಾಯಿಗಳ ವರಮಾನ ಕಡಮೆಯಾಗುತ್ತದೆ. ದರದ ಮಟ್ಟಿಗೆ ಹೇಳುವುದಾದರೆ, ಮೈಸೂರು ಸಂಸ್ಥಾನದಲ್ಲಿ ಮನೆಗಳಿಗೆ ಒದಗಿಸುತ್ತಿರತಕ್ಕ ದರ ಎಲ್ಲಾ ಸಂಸ್ಥಾನಗಳಲ್ಲಿರುವುದಕ್ಕಿಂತಲೂ ಬಹಳ ಕಡಮೆ ದರ. ಆಂಧ್ರದಲ್ಲಿ ಐದು ಆಣೆಯಿದೆ. ಹಾಲಿ ನಮ್ಮ ಇಲಾಖೆ ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲವೆಂಬುದು ತಮಗೇ ಗೊತ್ತಿದೆ. ಒಟ್ಟಿನಲ್ಲಿ ಬಡ್ಡಿ ವಜಾ ಹಾಕಿದರೆ ಕೇವಲ 8-10 ಲಕ್ಷ ರೂಪಾಯಿಗಳ ಉತ್ಪತ್ತಿಯಿದೆ. ಈ ಸಂದರ್ಭದಲ್ಲಿ ಇನ್ನೂ ಉತ್ಪತ್ತಿಯನ್ನು ಕಡಮೆ ಮಾಡಿದರೆ ಕೆಲಸ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ತಮಗೇ ಯೋಚನೆ ಮಾಡುವುದಕ್ಕೆ ಬಿಡುತ್ತೇನೆ.

ಒಬ್ಬ ಸದಸ್ಯರು.—ಲಾಭ ಕಡಮೆ ತೆಗೆದುಕೊಳ್ಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—No profit, no loss basis ಮೇಲೆಯೇ ಈಗ ಕೆಲಸ ಮಾಡುತ್ತಿರುವುದು. ಈಚೆಗೆ ಟ್ಯಾರಿಫ್‌ನ್ನು ಈಗ ಬದಲಾವಣೆ ಮಾಡುತ್ತಿದ್ದೇವೆ. ಬರುವ ತಿಂಗಳಿನಿಂದ ಅದು ಜಾರಿಗೆ ಬರುತ್ತದೆ. ಸರ್ಕಾರಿ ಗೆಜೆಟ್ಟಿನಲ್ಲಿ ಅದು ಫಾಯಿಷ್ ಆಗಿದೆ. ಅದರಲ್ಲೇನೂ ಹೆಚ್ಚಿನ ವಿಷಯವಿಲ್ಲ ಇರುವ ದರಗಳನ್ನೇ Rationalise ಮಾಡಿದ್ದೇವೆ ಅಷ್ಟೆ. ಮುಂಚೆ ಒಂದೊಂದು ಕೈಗಾರಿಕೆಗೆ ಒಂದೊಂದು ದರವಿತ್ತು. ಯಾವ ಯಾವಾಗ ಯಾವಯಾವರೀತಿ ಅನುಕೂಲವಿತ್ತೋ ಅದರಂತೆ ನಾನಾ ಕಾರ್ಖಾನೆಗಳಿಗೆ ಕೊಡಲಾಗಿತ್ತು. ಈರೀತಿ ಬೇರೆಬೇರೆ ದರಗಳಲ್ಲಿ ಒದಗಿಸುವುದು ಸರಿಯಲ್ಲವೆಂದು ಭಾವಿಸಿ ಒಂದು Rational basis ಮೇಲೆ ಈಗ ವಿಧಿಸಿದ್ದೇವೆ. ಅಲ್ಲದೆ ಹೆಚ್ಚುಹೆಚ್ಚು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿದಂತೆ ಕಮ್ಮಿಕಮ್ಮಿ ದರವಿರಬೇಕೆಂದು ಥ್ಯಾಕರೆ ಕಮಿಟಿಯವರು ಮಾಡಿದ ಒಂದು ಶಿಫಾರಸಿ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಗನುಗುಣವಾಗಿ ಇದನ್ನು ಮಾಡಲಾಗಿದೆ. ಇದರಿಂದಾಗಿ ಒಟ್ಟಿನಲ್ಲಿ 10-20 ಲಕ್ಷ ರೂಪಾಯಿಗಳು ಹೆಚ್ಚಿಗೆ ಉತ್ಪತ್ತಿ ಬರಬಹುದೆಂದು ನಿರೀಕ್ಷಿಸಲಾಗಿದೆ. ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ಅವರು 70-80 ಲಕ್ಷ ರೂಪಾಯಿಗಳು ಬರುತ್ತವೆಂದು ಹೇಳಿದರು. ಹಾಗೆ ಬರುವುದಾದರೆ ಸಂತೋಷ.

ಒಬ್ಬ ಸದಸ್ಯರು.—ಆ ಸರ್ಕಾರಿ ಹುಕುಂ ಎಲ್ಲಿದೆ? ಆ ರಿಪೋರ್ಟನ್ನೂ ಸದಸ್ಯರಿಗೆ ಒದಗಿಸಿದ್ದರೆ ಚೆನ್ನಾಗಿತ್ತು.

ಶ್ರೀ ಎಚ್. ಎಂ. ಚನ್ನಬಸಪ್ಪ.—Drop in voltage ವಿಷಯವನ್ನು ಹೇಳಿದರು. ಈ ಬಗ್ಗೆ ವಿದ್ಯುಚ್ಛಕ್ತಿ ಇಲಾಖಾಧಿಕಾರಿಗಳಿಗೆ ಸೂಕ್ತ ಕಾರ್ಯಕ್ರಮ ಕೈಕೊಳ್ಳುವುದಕ್ಕೆ ತಿಳಿವಳಿಕೆ ಕೊಡುತ್ತೇನೆ. ಆಮೇಲೆ, frequency conversion ಕೆಲಸವೂ ಕೂಡ ಭರದಿಂದ ಸಾಗುತ್ತಿದೆ. ಆದರೆ ಕೆಲವು ವೇಳೆ ಸಾಮಾನುಗಳಿಲ್ಲದೆ ತೊಂದರೆಯಾಗಿದೆ. ಈಗ ನಮಗೆ Electric poleಗಳ ಅಭಾವವುಂಟಾಗಿದೆ. ಕಬ್ಬಿಣದ ಕಂಬಗಳನ್ನು ಹಾಕಿದರೆ ಎಸ್ಟಿಮೇಟ್ ಜಾಸ್ತಿಯಾಗುತ್ತದೆ. ಈ ಕಾರಣದಿಂದ ನಾವು ಸ್ವಲ್ಪ ನಿಧಾನ ಮಾಡುತ್ತಿದ್ದೇವೆ. ಹೀಗಾಗಿ ವಿದ್ಯುಚ್ಛಕ್ತಿಯ ಸರಬರಾಜು ಕಡಮೆಯಾಗಿದೆ. ನಮ್ಮ ಅರಣ್ಯ ಇಲಾಖೆಯಿಂದ ಏಳೆಂಟು ಸಾವಿರಕ್ಕಿಂತ ಹೆಚ್ಚಿಗೆ ಮರಗಳು ಸಿಕ್ಕುವುದೇ ಕಷ್ಟ. ಇದರ ಮೇಲೆ ಮೊನ್ನೆತಾನೆ ಡಾ|| ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿಸಿ ತಿಂಗಳೊಂದಕ್ಕೆ 30,000 polesನ್ನಾದರೂ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಒಂದು ಸೂಚನೆ ಕೊಟ್ಟಿದ್ದೇವೆ. ನಮ್ಮಲ್ಲಿ ವಿದ್ಯುಚ್ಛಕ್ತಿಯಿದೆ; ಹೇರಳವಾಗಿ ದುಡ್ಡಿದೆ. ಅದನ್ನು ಉಪಯೋಗಿಸಿದರೆ ವರಮಾನ ಬರುವುದಾಗಿದೆ. ಆದ್ದರಿಂದಲೇ Irrigation ಬಗ್ಗೆ ಈ ಸಲ 40 ಲಕ್ಷ ರೂಪಾಯಿಗಳನ್ನೂ ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವುದಕ್ಕಾಗಿ 31 ಲಕ್ಷ ರೂಪಾಯಿಗಳನ್ನೂ ಒದಗಿಸಿದ್ದೇವೆ. ನಮ್ಮ ಆಸೆ, ಈ ಒಟ್ಟು 71 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂಬುದೇ ಆಗಿದೆ. ಆದರೆ ನಾನೀಗ ಹೇಳಿದಂತೆ wire ಮತ್ತು polesಗಳ ಅಭಾವದಿಂದ ಕೆಲಸ ನಿಧಾನವಾಗಿದೆ. Wireಗಳ ಬಗ್ಗೆ ಅಲ್ಯೂಮಿನಿಯಂ ವೈರ್‌ಗಳನ್ನು ಹಾಕಿದರೆ ಇನ್ನೂ ಕಮ್ಮಿ ದರದಲ್ಲಿ ಆಗಬಹುದೆಂದು ಆರ್ಡರ್ ಕೊಟ್ಟಿದ್ದೇವೆ. ಅದು ಬಂದ ಮೇಲೆ ಯಾರುಯಾರು ಕೇಳುತ್ತಾರೋ ಅವರಿಗೆಲ್ಲಾ ಒದಗಿಸುತ್ತೇವೆ.

ಆಮೇಲೆ ನೀರಾವರೀ ಪಂಪುಗಳ ವಿಷಯದಲ್ಲಿ ಒಂದು ಹಾರ್ಸ್ ಪವರ್‌ಗೆ 1,000 ದಂತೆ ಗೊತ್ತು ಮಾಡಿರುವುದು ಬಹಳ ಕಡಮೆಯೆಂದು ಹೇಳಿದರು. ಆದರೆ, ಇದನ್ನು ಗೊತ್ತು ಮಾಡಿರುವುದು ನಾವಲ್ಲ; ಭಾರತ ಸರ್ಕಾರದವರು. ಏಕೆಂದರೆ, ಈಗ ಹಣ ಕೊಡುತ್ತಿರುವವರು ಭಾರತ ಸರ್ಕಾರದವರು. ಈಗ 1,000 ರೂಪಾಯಿಗಳನ್ನಿಟ್ಟರೂ ಹಣ ಬರುತ್ತಿಲ್ಲ. ಅಂಥದರಲ್ಲಿ 1,500 ರೂಪಾಯಿಗಳಿಗೆ ಹೆಚ್ಚಿಸಿದರೆ ಬಹಳ ನಷ್ಟವಾಗುತ್ತದೆ. ಆಮೇಲೆ ಶೇಕಡ 80 ಇರುವುದನ್ನು ಶೇಕಡ 70ಕ್ಕೆ ಇಳಿಸುವುದಕ್ಕೆ ಆರ್ಡರ್ ಮಾಡಿದ್ದೇವೆ. ನಾಳೆಯೇ ಆರ್ಡರ್ ಸಾದರಾಗುತ್ತದೆ.

ಆಮೇಲೆ Sugar Industryಯ ವಿಚಾರದಲ್ಲಿ, ಅದೊಂದು cottage industryಯಂತೆ ನಡೆಯುತ್ತಿದೆಯೋ, ಎಲ್ಲಿವೆ, ಯಾವ ಗ್ರಾಮದಲ್ಲಿ ನಡೆಯುತ್ತಿದೆಯೆಂಬುದನ್ನು ನೋಡಿಕೊಂಡು ಅದಕ್ಕೆ ಯಾವ ರೀತಿ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂಬುದನ್ನು ಯೋಚನೆ ಮಾಡುತ್ತೇವೆ.

Mr. SPEAKER.—The question is:

"That a sum not exceeding Rs. 1,84,45,000 be granted to the Government to defray the charges which will come in course of payment during the year ending 31st day of March 1957, in respect of 'Receipts from Electricity Schemes—Working Expenses'."

The motion was adopted.

DEMAND NO. 42—ELECTRICITY SCHEMES.

81A. CAPITAL OUTLAY ON ELECTRICITY SCHEMES.

Mr. SPEAKER.—The question is:

"That a sum not exceeding Rs. 12,54,10,000 be granted to the Government to defray the charges which will come in course of payment during the year ending 31st day of March 1957, in respect of 'Capital Outlay on Electricity Schemes'."

The motion was adopted.

Mr. SPEAKER.—Now the House will rise and meet at 8-30 A.M. tomorrow.

The House adjourned at Five of the Clock to meet again at Thirty Minutes past Eight of the Clock on Friday the 30th March 1956.

WD 2896—GPB -550—21-7-56.

MYSORE LEGISLATIVE ASSEMBLY

TWENTY-FIFTH DAY.

Friday, 30th March 1956.

The House met in the Assembly Hall, Atara Kacheri, Bangalore, at Thirty Minutes past Eight of the Clock.

MR. SPEAKER [SRI H. S. RUDRAPPA, B.SC., LL.B.] in the Chair.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವಿದ್ಯುಚ್ಛಕ್ತಿ ಇಲ್ಲದೆ ಬಹಳ ಕತ್ತಲಾಗಿದೆ ಮತ್ತು ಸದಸ್ಯರು ಮಾತನಾಡುವ ವಿಷಯಗಳು ಕೇಳಿಸುವುದಿಲ್ಲವಾದ್ದರಿಂದ ಸಭೆಯನ್ನು ಸ್ವಲ್ಪ ಹೊತ್ತಿನ ನಂತರ ಪ್ರಾರಂಭಿಸಬಹುದು.

ಅಧ್ಯಕ್ಷರು.—ವಿದ್ಯುಚ್ಛಕ್ತಿ ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಅದು ನಮ್ಮ ನಿಲುಕಿನಲ್ಲಿಲ್ಲ. ಆದ್ದರಿಂದ ನಾವು ಇರುವುದರಲ್ಲಿಯೇ ಸರಿಹೊಂದಿಸಿಕೊಂಡು ಹೋಗಬೇಕು.

QUESTIONS AND ANSWERS

Water Supply from Channahalli Anicut to Villages in Nagamangala Taluk.

Q.—219. Sri K. SINGARI GOWDA (Nagamangala).—

Will the Government be pleased to state :—

(*a*) whether the villagers of Chettanahalli, Kedagabalu and Naganahalli in Nagamangala Taluk are urging for the supply of water for irrigation from Channahalli Anecut, Marconahalli Division, by opening a right bank channel ;

(*b*) the action taken on the representation ?

A.—Sri H. M. CHANNABASAPPA (Minister for Industries).—

(*a*) Yes.

(*b*) It is proposed to extend the channel to the extent possible from Doddaupla ane across the Shimsha river. An estimate for the same is being got up.

ಶ್ರೀ ಕೆ. ಸಿಂಗಾರಿಗೌಡ.—ಹಿಂದೆ, ಬಲಗಡೆ ನಾಲೆಯಿಂದ ಈ ಪ್ರದೇಶಗಳಿಗೆ ನೀರನ್ನೊದಗಿಸಬೇಕೆಂದು ಉದ್ದೇಶಪಟ್ಟಿರಲಿಲ್ಲವೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮ ಮುಂದಿರತಕ್ಕ ಅಂಕಿ ಅಂಶಗಳಿಂದ ಆ ವಿಚಾರ ಹೊರಪಟ್ಟಿಲ್ಲ.

ಶ್ರೀ ಕೆ. ಸಿಂಗಾರಿಗೌಡ.—ಈಗ ಅಲ್ಲಿ ನೀರು ಹೆಚ್ಚಾಗಿ ತುಂಬಿ ಹರಿದುಹೋಗುತ್ತಿದೆ. ಈ ನೀರನ್ನು 300 ಎಕರೆಗಳಿಗೆ ಕೊಡುವುದಕ್ಕೆ ಸಾಧ್ಯವೆಂದು ಅಸಿಸ್ಟೆಂಟ್ ಇಂಜಿನಿಯರು ವರದಿ ಮಾಡಿರುವುದು ಸರ್ಕಾರದ ಮುಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಿದೆ. ಚನ್ನಹಳ್ಳಿ ಅಣೆಯಿಂದ ನಾಲಾ ತೆಗೆದು ಚಟ್ಟನಹಳ್ಳಿ ಅಚ್ಚುಕಟ್ಟಿಗೆ ನೀರು ಕೊಡುವುದಕ್ಕೆ ಆ ಪ್ರದೇಶದ ಅನೇಕ ರೈತರು ತಕರಾರು ಮಾಡಿದ್ದಾರೆ.

ಶ್ರೀ ಕೆ. ಸಿಂಗಾರಿಗೌಡ.—ತಕರಾರು ಮಾಡುತ್ತಿರುವ ರೈತರ ಪ್ರದೇಶದಲ್ಲಿ ಪೂರ್ತಿಯಾಗಿ ನೀರನ್ನು ಕೊಡಲಾಗಿದೆಯಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನೀರಾವರಿ ಪ್ರದೇಶವಾಗಿದೆ. ಅಲ್ಲಿಂದ ನಾಲಾ ತೆಗೆದು ನೀರು ಕೊಟ್ಟ ಪಕ್ಷದಲ್ಲಿ ಆ ಪ್ರದೇಶದಲ್ಲಿ ನೀರಿಲ್ಲದೆ ತೊಂದರೆಯಾಗುತ್ತದೆ ಎಂಬುದಾಗಿ ತಕರಾರು ಮಾಡಿದ್ದಾರೆ.

ಶ್ರೀ ಕೆ. ಸಿಂಗಾರಿಗೌಡ.—ಈಗ ಆ ರೀತಿಯಾಗಿ ಯಾವ ತೊಂದರೆಯೂ ಆಗುವುದಿಲ್ಲವಾದ್ದರಿಂದ ನೀರು ಕೊಡಬಹುದೆಂದು ಸಬ್ ಡಿವಿಜನ್ ಅಧಿಕಾರಿಗಳು ಸರ್ಕಾರಕ್ಕೆ ರಿಪೋರ್ಟ್ ಕಳುಹಿಸಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲ. ಆ ರೀತಿ ಕಳುಹಿಸಿಲ್ಲ. ಅರಕೆರೆವರೆಗೆ 4½ ಮೈಲಿ ನಾಲಾ ಇದೆ. ಅದನ್ನು ಒಂದು ಮೈಲಿ ಬಡಾವಣೆ ಮಾಡಿ ನೀರು ಕೊಡಬೇಕೆಂದು ಮಾಡಿದ್ದೇವೆ. ಅದನ್ನು ಪುನಃ ಚಟ್ಟನಹಳ್ಳಿಯ ವರೆಗೆ ಮುಂದುವರಿಸಿ ನೀರು ಕೊಡುವುದಕ್ಕೆ ಸಾಧ್ಯವೇ ಎಂಬ ವಿಷಯವನ್ನು ಪರಿಶೀಲನೆ ಮಾಡಬೇಕು.

ಶ್ರೀ ಕೆ. ಸಿಂಗಾರಿಗೌಡ.—ತಾವು ಸ್ಥಳಕ್ಕೆ ಭೇಟಿ ಕೊಟ್ಟು ಅಜಮಾಯಿಷಿ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಚನ್ನಹಳ್ಳಿ ಅಣೆಯನ್ನೂ ನೋಡಿಕೊಂಡು ಬಂದಿದ್ದೇನೆ.

ಶ್ರೀ ಕೆ. ಸಿಂಗಾರಿಗೌಡ.—ತಕ್ಷಣ ವರದಿ ಕಳುಹಿಸಬೇಕೆಂದು ಅಲ್ಲಿಯ ಸಬ್ ಡಿವಿಜನ್ ಅಧಿಕಾರಿಗಳಿಗೆ ತಿಳುವಳಿಕೆ ಕೊಟ್ಟಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ದಿವಸ ಈ ಪ್ರಶ್ನೆ ನನ್ನ ಮುಂದಿರಲಿಲ್ಲ. ಚನ್ನಹಳ್ಳಿ ಅಣೆಯಿಂದ ನೀರು ಕೊಡಲು ಸಾಧ್ಯವೇ ಎಂಬ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

* Indicates that the remarks or speeches have not been revised by the Member concerned.

ಶ್ರೀ ಕೆ. ಸಿಂಗಾರಿಗೌಡ.—ಸ್ಥಳೀಯ ಅಧಿಕಾರಿಗಳು ಪಾರ್ಟಿ ವೈಷಮ್ಯಗಳ ಮೇಲೆ, ಪಕ್ಷಪಾತ ನೀತಿಯನ್ನನು ಸರಿಸುತ್ತಿದ್ದಾರೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಾರ್ಟಿ ವೈಷಮ್ಯಗಳ ಮೇರೆ ನಡೆಯುತ್ತಿದ್ದರೆ ಅದನ್ನು ಪರಿಶೀಲನೆ ಮಾಡಿ ಅಂಥವರನ್ನು ಶಿಕ್ಷೆ ಮಾಡಲಾಗುತ್ತದೆ.

ಶ್ರೀ ಕೆ. ಸಿಂಗಾರಿಗೌಡ.—ಹಿಂದೆ ಸಬ್ ಡಿವಿಜನ್ ಅಧಿಕಾರಿಗಳು ವರದಿಯನ್ನು ಕಳುಹಿಸಿದ್ದ ತಾರೀಖು ಮುಂತಾದ ವಿವರಗಳನ್ನು ಕೊಟ್ಟರೆ ಅದನ್ನು ತರಿಸಿಕೊಂಡು ಪರಿಶೀಲನೆ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮ ಆಫೀಸಿನಲ್ಲಿರಬಹುದು. ಫೈಲ್ ತರಿಸಿಕೊಂಡು ಅದನ್ನು ಪರಿಶೀಲನೆ ಮಾಡ ತೆ ೕನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಎಡಗಡೆಯನಾಲಾ ರೈತರು ಅಡ್ಡಿ ಮಾಡಿದ್ದಾರೆಂದು ಈಗತಾನೇ ಮಂತ್ರಿಗಳು ಅಪ್ಪಣೆ ಕೊಡಿ ದರು. ಆದರೆ ಇದರಲ್ಲಿ ನೀರಿನ ತೊಂದರೆಯಾಗುತ್ತದೆನ್ನುವುದಲ್ಲ. ಕಂಟ್ರೋಲ್ ಮಡುಬಾಯಿಗಳಿಲ್ಲದೆ ಇರುವುದರಿಂದ, ಅಂದರೆ 10 ಎಕರೆ ಅಚ್ಚುಕಟ್ಟಿಗೆ 50-100 ಎಕರೆ ಅಚ್ಚುಕಟ್ಟಿಗೆ ಬೇಕಾಗುವಷ್ಟು ದೊಡ್ಡ ದೊಡ್ಡ ಮಡುಬಾಯಿಗಳನ್ನಿಟ್ಟಿರುವುದರಿಂದ, ನಾಲೆಗಳಲ್ಲಿ ಹೂಳು (silt) ತೆಗೆಸದೆ ಇರುವುದರಿಂದ ಈ ರೀತಿಯಾಗಿದೆ ಎಂದು ಮೊನ್ನೆತಾನೆ ಮಾನ್ಯ ಮಂತ್ರಿಗಳು ಅಲ್ಲಿಗೆ ದಯಮಾಡಿಸಿದ್ದಾಗ ಜನಗಳು ಮನವಿಮಾಡಿಕೊಂಡಿದ್ದಾರಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿಯಾಗಿ ಜನಗಳು ಅರ್ಜಿ ಕೊಟ್ಟರು. ನಾನೂ ಕೂಡ ಹೋಗಿ ನೋಡಿದೆ. ನಾಲೆಗಳಲ್ಲಿ ಹೂಳು (silt) ಕ್ರಮವಾಗಿ ತೆಗೆದಿರಲಿಲ್ಲ. ಮತ್ತೆ ದೊಡ್ಡ ದೊಡ್ಡ ಮಡುಬಾಯಿಗಳನ್ನಿಡಲಾಗಿದೆ. ತನ್ಮೂಲಕ ಹೆಚ್ಚು ನೀರು ಪೋಲಾಗುತ್ತದೆಂದು ನನ್ನ ಗಮನಕ್ಕೆ ಬಂತು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನೀರು ಮಳೆಗಾಲದಲ್ಲಿ ಸಾಕಾದಷ್ಟು ಒದಗುತ್ತದೆಂಬುದು ಇಂಜಿನಿಯರ್ ಅವರ ರಿಪೋರ್ಟ್ ಮುಖಾಂತರ ಸರ್ಕಾರಕ್ಕೆ ಗೊತ್ತಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಿಲ್ಟ್ ತೆಗೆಸಿ ನಾಲೆಗಳನ್ನು ದುರಸ್ತುಮಾಡಿಸಿ, ಮಡುಬಾಯಿಗಳನ್ನು ಕೂಡ ಕಡಿಮೆ ಮಾಡಿದರೆ ಆಗ ನೀರು ಹೆಚ್ಚಾಗಿ ಬರುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದೊಡ್ಡ ಉಪ್ಪಳ ಅಣೆಗಿಂತ ಚನ್ನಹಳ್ಳಿ ಅಣೆಯಲ್ಲಿ ಬಹಳ ಹೆಚ್ಚಾಗಿ seepage water ಬರುತ್ತದೆಂದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚಟ್ಟಹಳ್ಳಿ ಅಣೆಗಿಂತ ಮೇಲ್ಭಾಗದಲ್ಲಿರುವ ದೊಡ್ಡ ಉಪ್ಪಳದಿಂದ ಬಹುಶಃ ನಾಲೆಯನ್ನು ತೆಗೆದುಕೊಂಡರೆ ಅನುಕೂಲವಾಗುತ್ತದೆ ಮತ್ತು ಇನ್ನೂ ಹೆಚ್ಚಾಗಿ ಬಡಾವಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಪ್ರಶ್ನೆ ಅದಲ್ಲ. ಇವೆರಡರಲ್ಲಿಯೂ ಕೂಡ ದೊಡ್ಡ ಉಪ್ಪಳ ಅಣೆ ಮೇಲ್ಭಾಗದಲ್ಲಿದೆ. ಚನ್ನಹಳ್ಳಿ ಅಣೆ ಕೆಳಭಾಗದಲ್ಲಿದೆ. ವ್ಯವಸಾಯ ಮಳೆಗಾಲದಲ್ಲಿ ನಡೆಯುತ್ತದೆ. ಕೆಳಭಾಗದಲ್ಲಿರತಕ್ಕ ಚನ್ನಹಳ್ಳಿ ಅಣೆಯಿಂದ ಹೆಚ್ಚಿಗೆ ಬರುವ seepage water ಒದಗಿಸಿದರೆ ಏನೂ ತೊಂದರೆಯಾಗುವುದಿಲ್ಲವಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ದೊಡ್ಡ ಉಪ್ಪಳ ಮೇಲ್ಭಾಗದಲ್ಲಿರುವಾಗ ಅಲ್ಲಿಂದ ಎಷ್ಟು ನೀರು ಬಿಡಲಾಗುತ್ತದೆಯೋ ಅಷ್ಟು ನೀರು ಮಾತ್ರ ಚಟ್ಟಹಳ್ಳಿ ಅಣೆಗೆ ಬರಬೇಕು. ಹೀಗಿರುವಾಗ seepage water ಎಲ್ಲಿಂದ ಬರುತ್ತದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಂಜಿನಿಯರುಗಳಾಗಿದ್ದರೆ ಈ ವಿಷಯ ಬಹಳ ಸುಲಭದಲ್ಲಿ ಅರ್ಥವಾಗುತ್ತಿತ್ತು. ಮಂತ್ರಿಗಳು non-technical man ಆಗಿರುವುದರಿಂದ ಸ್ವಲ್ಪ ಕಷ್ಟ. ಎರಡು ಅಣೆಗಳಿಗೂ ಮಾರ್ಕೋನಹಳ್ಳಿ ಅಚ್ಚುಕಟ್ಟಿನ ಸೀಪೇಜ್ ಬರುತ್ತದೆ. ಮೇಲ್ಭಾಗದ ಅಣೆಗೆ ಕಡಿಮೆ ಅಚ್ಚುಕಟ್ಟಿರುವುದರಿಂದ ಕಡಿಮೆ ಸೀಪೇಜ್ ಬರುತ್ತದೆ. ಎರಡನೆಯದಕ್ಕೆ ಮಧ್ಯೆ ಇರತಕ್ಕ ಅಚ್ಚುಕಟ್ಟಿನ ಸೀಪೇಜ್ ಮತ್ತು ದೊಡ್ಡ ಉಪ್ಪಳದಿಂದ 400 ಎಕರೆಗೆ ಬರತಕ್ಕ ನೀರು ಎಲ್ಲ ಸೇರಿ ಚಟ್ಟಹಳ್ಳಿ ಅಣೆಗೆ ಹೆಚ್ಚಿಗೆ collect ಆಗುತ್ತದೆ. ಅಲ್ಲಿಂದ ಕಾಲುವೆ ತೆಗೆಯುವುದು ಸೂಕ್ತವಲ್ಲವೇ. ಎಂದು ಕೇಳುತ್ತಿದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ದೊಡ್ಡ ಉಪ್ಪಳದಿಂದ ಎಷ್ಟು ಅಚ್ಚುಕಟ್ಟಿನ ಸೀಪೇಜ್ ಬರುತ್ತದೆ ಮತ್ತು ಚಟ್ಟಹಳ್ಳಿ ಅಣೆಯಿಂದ ಎಷ್ಟು ಸೀಪೇಜ್ ಬರುತ್ತದೆ ಎಂದು ಪರಿಶೀಲನೆ ಮಾಡಿ ಹೇಳಬೇಕು.

Anecut near Bagur Village, across Gundlu River.

Q.—404. Sri M. LINGANNA (Nanjangud).—

Will the Government be pleased to state :—

(*a*) whether an estimate was prepared for a small anceut near Bagur Village, Kowlande Hobli, Nanjangud Taluk, across Gundlu river ;

(*b*) how many years back the estimate was prepared and what is the total cost ;

(*c*) whether the villagers of Bagur and Koodlapura agreed to dig the canal if the project is undertaken ;

(*d*) why the work is not yet taken up ?

A.—Sri H. M. CHANNABASAPPA (Minister for Industries).—

(*a*) No.

(*b*), (*c*) and (*d*) Do not arise.

Sri M. LINGANNA.—Is it not a fact that to a question regarding the same subject put a year before last, a negative answer was given ?

*Sri H. M. CHANNABASAPPA.—I am not aware.

Sri M. LINGANNA.—Will you enquire into the matter ?

Sri H. M. CHANNABASAPPA.—Certainly.

ಶ್ರೀ ಯು. ಎಂ. ಮಾದಪ್ಪ.—ಕಮರಹಳ್ಳಿ ಮರಳ ವಾಡಿ ಅಣೆಕಟ್ಟಿನಿಂದ ಎಷ್ಟು ಪ್ರದೇಶ ಮುಳುಗಡೆ ಯಾಗುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಆ ಪ್ರಶ್ನೆ ನಮ್ಮ ಮುಂದಿಲ್ಲ.

Chamakalahalli Tank near Nangli (Repairs).

Q.—370. Sri G. NARAYANA GOWDA (Mulbagal-Srinivasapur).—

Will the Government be pleased to state :—

(*a*) when the tank of Chamakalahalli near Nangli in Mulbagal Taluk was breached ;

(*b*) whether there were any representations from the villagers of Chamakalahalli for restoring the same ;

(*c*) the steps taken in this behalf ?

A.—Sri H. M. CHANNABASAPPA (Minister for Industries).—

(*a*) There is no tank by that name.

(*b*) and (*c*) Do not arise.

ಶ್ರೀ ಜಿ. ನಾರಾಯಣ ಗೌಡ.—ಚಮಕಲಹಳ್ಳಿ ಕೆರೆ ಒಡೆದುಹೋಗಿರುವುದು ನಿಜವೆ?

*Sri H. M. CHANNABASAPPA.—There is a tank called Kengalakunte and that has breached.

ಶ್ರೀ ಜಿ. ನಾರಾಯಣ ಗೌಡ.—ಯಾವಾಗ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲವು ದಿವಸಗಳ ಹಿಂದೆ.

ಶ್ರೀ ಜಿ. ನಾರಾಯಣ ಗೌಡ.—ಅದನ್ನು ಜೀರ್ಣೋದ್ಧಾರ ಮಾಡಬೇಕೆಂದೇನಾದರೂ ಅರ್ಜಿ ಗಳು ಬಂದಿದ್ದವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—1908ನೆಯ ಇಸ ವಿಯಲ್ಲಿ ಎಲ್ಲವನ್ನೂ ಪರಿಶೀಲನೆ ಮಾಡಿ ಕೆಲವು ಅಬ್ಯಾಂಡನ್ಡ್ ಟ್ಯಾಂಕ್‌ಗಳ ಒಂದು ಪಟ್ಟಿಮಾಡಿತ್ತು. ಅದರಲ್ಲಿ ಕೆಂಗಲಕುಂಟೆ ಕೆರೆಯೂ ಸೇರಿದೆ.

ಶ್ರೀ ಜಿ. ನಾರಾಯಣ ಗೌಡ.—ಆ ಪ್ರಾಂತದಲ್ಲಿ ಬೇರೆ ಯಾವುದಾದರೂ ಕೆರೆಗಳಿವೆಯೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಚಲ ಕೆರೆ, ಮಾಗಡಿ ಕುಂಟೆ ಕೆರೆ, ಕಲ್ಲೂರಿ ಕೆರೆ ಎಂದು ಮೂರು ಕೆರೆಗಳಿವೆ.

ಶ್ರೀ ಜಿ. ನಾರಾಯಣ ಗೌಡ.—ಈ ಮೂರು ಕೆರೆ ಗಳ ಅಚ್ಚುಕಟ್ಟಿನಲ್ಲಿ ಈಗ ಬೆಳೆಯಾಗುತ್ತಿದೆಯೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜ್ಞಾಪಕವಿಲ್ಲ. ಕೆಂಗಲಕುಂಟೆ ಕೆರೆಯ ತಪಶೀಲು ಬೇಕಾದರೆ ಹೇಳ ಬಹುದು.

ಶ್ರೀ ಜಿ. ನಾರಾಯಣ ಗೌಡ.—ನನಗೆ ಚಮಕಲ ಹಳ್ಳಿಗೆ ಸೇರಿದ ಮೂರು ಕೆರೆಗಳ ವಿಚಾರ ಮಾತ್ರ ಬೇಕು.

Sri H. M. CHANNABASAPPA.—I want notice for that.

ಶ್ರೀ ಜಿ. ನಾರಾಯಣ ಗೌಡ.—ಇದು ಪಾಲಾರ್ ಸೀರೀಸಿಗೆ ಸೇರಿದೆಯೇ?

Sri H. M. CHANNABASAPPA.—Notice.

ಶ್ರೀ ಜಿ. ನಾರಾಯಣ ಗೌಡ.—ಈ ಮೂರು ಕೆರೆ ಗಳೂ ಜೀರ್ಣೋದ್ಧಾರವಾಗದೆ ರೈತರಿಗೆ ತೊಂದರೆ ಯಾಗಿದೆಯಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ತಪಶೀಲನ್ನು ಬೇಕಾದರೆ ಆಮೇಲೆ ಹೇಳುತ್ತೇನೆ; ಈಗ ಅದು ನನ್ನಲ್ಲಿಲ್ಲ.

Major tanks in Hosadurga Taluk.

Q.—472. Sri G. BASAPPA (Hosadurga).—

Will the Government be pleased to state :—

(*a*) the number of major tanks in Hosadurga Taluk ;

(*b*) the number of major tanks restored during the First Five-Year Plan and the amount spent ;

(*c* the number of major tanks proposed to be restored during the Second Five-Year Plan ?

A.—Sri H. M. CHANNABASAPPA (Minister for Industries).—

(*a*) 19.

(*b*) No major tank was restored during this period.

(*c*) The restoration of five tanks is proposed to be taken up subject to allotment of funds.

ಶ್ರೀ ಜಿ. ಬಸಪ್ಪ.—ಹತ್ತೊಂಬತ್ತು ಕೆರೆಗಳ ಪೈಕಿ ಈ ಐದು ವರ್ಷದ ಅವಧಿಯಲ್ಲಿ ಎಷ್ಟು ಕೆರೆಗಳು ಒಡೆದಿವೆ?

*Sri H. M. CHANNABASAPPA.—I have no information.

ಶ್ರೀ ಜಿ. ಬಸಪ್ಪ.—ಬಲ್ಲಾಳಸಮುದ್ರ ಕೆರೆ ಒಡೆದು ಹೋಗಿರುವುದು ಇನ್ನೂ ರಿಪೇರಿಯಾಗಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Sri H. M. CHANNABASAPPA.—The information is that there are 19 major tanks in that Taluk of which 14 are restored and are functioning; 5 tanks are proposed for restoration.

ಶ್ರೀ ಜಿ. ಬಸಪ್ಪ.—ಈ ಐದು ವರ್ಷಗಳಲ್ಲಿ ಒಂದು ಕೆರೆ ಕೂಡ ಜೀರ್ಣೋದ್ಧಾರವಾಗಿಲ್ಲ. ಹದಿನಾಲ್ಕು ಆಗಿದೆಯೆಂದು ಹೇಳುತ್ತೀರಿ. ಯಾವುದು ಸರಿ? ಮೇಜರ್ ಕೆರೆ ಯಾವುದನ್ನೂ ಜೀರ್ಣೋದ್ಧಾರ ಮಾಡಿಲ್ಲವೆಂದು (*b*) ಪ್ರಶ್ನೆಗೆ ಉತ್ತರ ಸಹ ಕೊಟ್ಟಿದೆ.

Sri H. M. CHANNABASAPPA.—The number of major tanks is 19; no major tank was restored during this period. ಮೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಯಾವುದನ್ನೂ ಜೀರ್ಣೋದ್ಧಾರ ಮಾಡಿಲ್ಲವೆಂದು ಹೇಳಿದೆ ಅಷ್ಟೆ.

ಶ್ರೀ ಜಿ. ಬಸಪ್ಪ.—ಈ ಐದು ವರ್ಷಗಳಲ್ಲಿ ಒಡೆದು ಹೋಗಿರುವುದನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಕಾರ್ಯಕ್ರಮ ಹಾಕಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಕೆರೆಯ ವಿಷಯ ಈಗ ನಮ್ಮ ಮುಂದಿಲ್ಲ.

ಶ್ರೀ ಜಿ. ಬಸಪ್ಪ.—ಮುಂದಿನ ಐದು ವರ್ಷಗಳಲ್ಲಿ ಜೀರ್ಣೋದ್ಧಾರ ಮಾಡಬೇಕೆಂದಿರುವ ಐದು ಕೆರೆಗಳು ಯಾವುವು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಗ್ಗಲಕುಂಟೆ ಕೆರೆ, ಹೆಗ್ಗೆರೆ, ಹಿರೇಕೆರೆ, ರಂಗಹನುಮನಕಟ್ಟೆ, ಕುಪ್ಪನಕೆರೆ.

Minor Tanks in Chicknayakanahalli Taluk (Restoration).

Q.—640. Sri C. H. LINGADEVARU (Chiknayakanahalli).—

Will the Government be pleased to state:—

(*a*) the minor tanks in Chiknayakanahalli Taluk which are to be restored; the number of tanks for which estimates are prepared and the amount of the estimate;

(*b*) the tanks restored from the year 1952?

A.—Sri H. M. CHANNABASAPPA (Minister for Industries).—

(*a*) *Vide* Statement appended below.

(*b*) Nil.

Names of Minor Tanks to be restored in Chickanaikanahalli Taluk.

Sl. No.	*Name*	*Remarks*
1	Bydrahalli tank	Estimates are not yet prepared. (Nos. 1–26)
2	Katurkere Arasanakere	
3	Sadarahalli Arlikatte	
4	Garasagara tank	
5	Thimmalapura Sivaramabhattanakere	
6	Nandihalli tank	
7	Balegule Melekere	
8	Gandanahalli tank	
9	Hesarahalli tank	
10	Balenahalli Kumbarakatte	
11	Kodalagar Doddajjikere	
12	Manchasandra tank	
13	Madapura tank	
14	Upparahalli tank	
15	Mathighatta tank	
16	Nirugal Urumundanakere	
17	Handanakere Sivasandra	
18	Handanakere Nagathi tank	
19	Ramaghatta Nayakanakatte	
20	Handanakere Ramaghattakere	
21	Handanakere Halekere...	
22	Hadpkatte Lingappanakatte	
23	Thimmalapura Narinkere	
24	Gowdagere Venkatiahnakere	
25	Halemadu Harnahallikere	
26	Metihalli Oorumundinakere	
27	Soralamavu Doddakere	Rs. 51,000
28	Gopalapura tank	Rs. 48,000

ಶ್ರೀ ಸಿ. ಎಚ್. ಲಿಂಗದೇವರು.—ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿರುವ ಮೈನರ್ ಕೆರೆಗಳ ಸಂಖ್ಯೆ ಯೆಷ್ಟು?

*ಶ್ರೀ ಎಚ್. ಎಂ. ಚನ್ನಬಸಪ್ಪ.—84.

ಶ್ರೀ ಸಿ. ಎಚ್. ಲಿಂಗದೇವರು.—ಜೀರ್ಣೋದ್ಧಾರ ಮಾಡಬೇಕಾಗಿರುವ 28 ಕೆರೆಗಳ ಪಟ್ಟಿಯು ಕೊನೆಯಲ್ಲಿ 27 ಮತ್ತು 28ನೆಯ ಐಟಂನಲ್ಲಿರುವ ಸೋರಲಮಾವು

ದೊಡ್ಡಕೆರೆ ಮತ್ತು ಗೋಪಾಲಪುರ ಕೆರೆಗಳ ಕೆಲಸ ಪೂರೈಸಿದೆಯೋ?

Sri H. M. CHANNABASAPPA.—At this juncture I would like to pass on an information. A similar question had been tabled by Sri Lingadevaru and I had given an answer with regard to Soralamavu Doddakere. The work of the closing of the breach is complete.

ಶ್ರೀ ಸಿ. ಎಚ್. ಲಿಂಗದೇವರು.—ಸೋರಲಮಾವು ದೊಡ್ಡಕೆರೆ ಪೂರ್ಣವಾಗಿ ಜೀರ್ಣೋದ್ಧಾರವಾಗಿದೆಯೋ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬ್ರೀಚ್ ಮುಚ್ಚಿದೆ, ಇನ್ನೂ ಪೂರ್ಣವಾಗಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—1952ರಿಂದ ಒಂದು ಕೆರೆ ಕೂಡ ಜೀರ್ಣೋದ್ಧಾರವಾಗಿಲ್ಲದಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗಾದರೆ ಕೆರೆಗಳು ಸರಿಯಾದ ಸ್ಥಿತಿಯಲ್ಲಿದ್ದುವೆಂದು ಕಾಣುತ್ತದೆ.

ಶ್ರೀ ಸಿ. ಎಚ್. ಲಿಂಗದೇವರು.—ಬ್ರೀಚ್ ಆಗಿದ್ದರೆ ಮಾತ್ರ ರೆಸ್ಟೋರ್ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ಯಪಾಸಿಟಿ, ಅಚ್ಚುಕಟ್ಟು ಹೆಚ್ಚು ಮಾಡುವುದು, ಕೋಡಿ, ಏರಿ ಎತ್ತರಿಸುವುದು ಇತ್ಯಾದಿ ಅನೇಕ ಕೆಲಸಗಳು ಜೀರ್ಣೋದ್ಧಾರ ಎಂಬುದರಲ್ಲಿ ಸೇರಿರುತ್ತವೆ. ಇವುಗಳಲ್ಲಿ ಯಾವುದಾದರೂ ಆವಶ್ಯಕವಾಗಿದ್ದರೆ ರೆಸ್ಟೋರ್ ಮಾಡಲು ಆರ್ಡರು ಮಾಡಬಹುದು.

ಶ್ರೀ ಸಿ. ಎಚ್. ಲಿಂಗದೇವರು.—ಆವಲಗೆರೆ, ಕಾಮಲಾಪುರ, ಮಾದೇಹಳ್ಳಿ ಈ ಮೂರು ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕೆಂದು ಮೂರು ವರ್ಷಗಳಿಂದ ಕೇಳುತ್ತಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜ್ಞಾಪಕವಿಲ್ಲ. ಹಾಗೆ ಕೇಳಿದ್ದರೆ ಮಾಡೋಣ.

ಶ್ರೀ ಸಿ. ಎಚ್. ಲಿಂಗದೇವರು.—ಈ ಮೂರು ಕೆರೆಗಳ ಜೀರ್ಣೋದ್ಧಾರದ ವಿಚಾರ ಬಹಳ ದಿವಸಗಳಿಂದ ಇಂಜನಿಯರಿಂಗ್ ಆಫೀಸಿನಲ್ಲಿ ಪೆಂಡಿಂಗ್‌ನಲ್ಲಿದೆ. ಪರಿಶೀಲಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪರಿಶೀಲಿಸಿ ಅಂದಾಜಾಗದಿದ್ದರೆ ಮಾಡಿಸಿ ಆದಷ್ಟು ಬೇಗ ಮಾಡಲು ಪ್ರಯತ್ನಪಡುತ್ತೇವೆ.

Theppotsava in Tumkur.

Q.—490. Sri T. N. MUDALAGIRI GOWDA (Kunigal).—

Will the Government be pleased to state :—

(*a*) whether Theppotsava (ತೆಪ್ಪೋತ್ಸವ) was arranged in view of the overflow of water (kodi) in Tumkur tank three months ago ;

(*b*) whether a Committee was not set up in respect of the arrangements connected with the Theppotsava (ತೆಪ್ಪೋತ್ಸವ);

(*c*) who are the members and the Chairman of the Committee ;

(*d*) the amount collected ;

(*e*) whether the Chief Minister Sri K. Hanumanthaiya had participated in the Theppotsava function ?

A.—Sri A. G. RAMACHANDRA RAO (Minister for Law and Education).—

(*a*) Yes.

Sri A. G. RAMACHANDRA RAO (Minister for Law and Education).—Sir, I beg to lay on the Table copies of Notifications Nos. T. 9501—R.T. 192—54—8, dated 16th March 1956, T. 9514/R.T. 192—54—9, dated 16th March 1956 and T. 9527/R.T. 116—55—12, dated 16th March 1956 issued under the Mysore Motor Vehicles Taxation and Tolls Act, 1951 as required by sub section (2) of Section 8 of the Act.

Business of this House.

Sri J. MOHAMED IMAM (Jagalur).—The Leader of the House is here. So, before proceeding further, I would like to know further programme for this session. I understand there was some discussion about the future programme and no definite conclusion was arrived at.

Mr. SPEAKER.—Some representation was made yesterday. I will finally announce the programme.

Sri Mulka GOVINDA REDDY (Chitaldrug).—It should not be construed as a representation. It is a demand.

Mr. SPEAKER.—Members should not construe things like that. There are rules of procedure. Yesterday representations were made. I will attend to them.

Sri J. MOHAMED IMAM.—Yesterday, the Leader of the House was not present and perhaps he is not aware of the trend of discussion.

Mr. SPEAKER.—Yes, I will attend to it.

MYSORE APPROPRIATION (No. 2) BILL, 1956.

Introduction.

Sri K. HANUMANTHAIYA (Chief Minister).—Sir, I beg to introduce the Mysore Appropriation (No. 2) Bill, 1956 which has been published in the *Mysore Gazette* Extraordinary, dated

(SRI K. HANUMANTHAIYA.)

29th March 1956 under Rule 48 of the Rules of Procedure and Conduct of Business in the Mysore Legislative Assembly.

Motion to consider.

SRI K. HANUMANTHAIYA.—Sir, I move:

"That the Mysore Appropriation (No. 2) Bill, 1956 be taken into consideration."

ಸ್ವಾಮಿ, ಈ ದಿವಸ ನಾನು ಭಾಷಣವನ್ನು ಏನೂ ಮಾಡುತ್ತಾ ಇಲ್ಲ. ಎರಡು ವಿಷಯಗಳನ್ನು ಮಾತ್ರ ಪ್ರಸ್ತಾಪಿಸಿ ಮಾನ್ಯಸದಸ್ಯರ ಚರ್ಚೆಗೆ ಅವಕಾಶ ಕೊಡಬೇಕೆಂಬುದೇ ನನ್ನ ಉದ್ದೇಶ. Kolar Gold Field Nationalisation ವಿಚಾರ ಅನೇಕ ಮಾನ್ಯಸದಸ್ಯರ ಮನಸ್ಸಿನಲ್ಲಿದೆ. ಈಗ ಸಭೆಯೂ ಸಹ ಸರ್ವಾನುಮತದಿಂದ ಅದನ್ನು ರಾಷ್ಟ್ರೀಕರಣ ಮಾಡಬೇಕು ಎನ್ನತಕ್ಕ ಒಪ್ಪಿಗೆಯನ್ನು ಇತ್ತಿದೆ. ಈ ವಿಚಾರದಲ್ಲಿ ಬಹಳವಾಗಿ ಕಾಗದ ಪತ್ರಗಳು ಇಂಡಿಯಾ ಸರ್ಕಾರಕ್ಕೂ ನಮಗೂ ನಡೆದಿವೆ. ಅವು ಸರ್ಕಾರಕ್ಕೂ ಸರ್ಕಾರಕ್ಕೂ ನಡೆಯತಕ್ಕ ಪತ್ರಗಳಾಗಿರುವುದರಿಂದ ಈ ಎರಡು ಸರ್ಕಾರಗಳೂ ಒಪ್ಪದೆ ಪತ್ರ ವ್ಯವಹಾರವನ್ನು ಪ್ರಕಟಿಸುವುದಕ್ಕೆ ಸಾಧ್ಯವಿಲ್ಲ. ಇಷ್ಟು ಮಾತ್ರ ಹೇಳಬಲ್ಲೆ. ಮೈಸೂರು ಸರ್ಕಾರದವರು ಈ ವಿಷಯದಲ್ಲಿ ತೀವ್ರಾಸಕ್ತಿಯನ್ನು ವಹಿಸುವುದಕ್ಕೆ ಮನುಷ್ಯನಿಗೆ ಎಷ್ಟು ಸಾಧ್ಯವೋ ಅಷ್ಟನ್ನೂ ವಹಿಸಿದ್ದಾರೆ. ಕೊನೆಯದಾಗಿ Minister for Natural Resources ಆದ ಮೌಲಾನಾ ಅಬುಲ್ ಕಲಾಂ ಆಜಾದ್‌ಅವರಿಂದ "ಈ ಸಭೆಯ ಮುಂದೆ ಇಡಬೇಕೆಂದು ಕಳುಹಿಸಿರತಕ್ಕ ಮಸೂದೆಯನ್ನು Central Cabinet ನಲ್ಲಿಟ್ಟು ಯೋಚನೆ ಮಾಡಬೇಕು. Central Cabinet ಮುಂದೆ ಇರತಕ್ಕ ನಾನಾ ವಿಷಯಗಳು ಪರಿಶೀಲನೆಯಾಗಿ ಈsubject ಇನ್ನೂ reach ಆಗಿಲ್ಲ. ಆದ್ದರಿಂದ ನಾವು ತಿಳಿಸುವವರೆಗೆ ಅದನ್ನು ಸಭೆಯಲ್ಲಿ ಮಂಡಿಸಬೇಡಿ" ಎಂದು ನನಗೆ ಕಾಗದ ಬಂದಿದೆ. ಆದ್ದರಿಂದ ಅದನ್ನು ಇನ್ನೂ ಮಂಡಿಸುವುದಕ್ಕೆ ಆಗಲಿಲ್ಲ. ಅನಂತರ ನಾವು ಪ್ರೈಮ್ ಮಿನಿಸ್ಟರ್‌ಅವರಿಗೂ, Home Minister ಅವರಿಗೂ ಮತ್ತು Minister for Natural Resources ಅವರಿಗೂ ಕೂಡ ಪುನಃ ಕಾಗದ ಬರೆದಿದ್ದೇವೆ. ಈ ಅಧಿವೇಶನದಲ್ಲಿಯೇ ಈ ಸಭೆಯಲ್ಲಿ ಅದನ್ನು ಮಂಡಿಸಬೇಕು ಎಂದು ಪುನಃ ಕಾಗದ ಬರೆದಮೇಲೆ ಅವರು "ನೀವೇ ದೆಹಲಿಗೆ ಬರಬೇಕು. ಅದನ್ನು ಕೊನೆಯದಾಗಿ ಚರ್ಚೆ ಮಾಡೋಣ" ಎಂದು ತಿಳಿಸಿದರು. ಹಾಗೆ ತಿಳಿಸಿದ ಮೇಲೆ ತಾರೀಖನ್ನು ಗೊತ್ತುಮಾಡಬೇಕಾಗಿತ್ತು. ಅವರು ಮೊನ್ನೆದಿವಸ ಎರಡನೇ ತಾರೀಖು ದೆಹಲಿಗೆ ಬನ್ನಿ ಎಂದು ತಂತಿ ಕಳುಹಿಸಿದರು.

9-30 A.M.

'ಎರಡನೆಯ ತಾರೀಖು ಎಸ್. ಆರ್. ಬಿಲ್ಲಿನ ಚರ್ಚೆಯಿರುವುದರಿಂದ ಬರುವುದಕ್ಕೆ ಸಾಧ್ಯವಿಲ್ಲ, ವಿಧಾನಸಭೆಯ ಈ ಅಧಿವೇಶನ ಮುಗಿದ ತಕ್ಷಣ ಬರುವುದಕ್ಕೆ ಸಿದ್ಧನಾಗಿದ್ದೇನೆ, ಇನ್ನೊಂದು ತಾರೀಖನ್ನು ಗೊತ್ತುಮಾಡಿ' ಎಂದು ತಂತಿ ಕಳುಹಿಸಿದೆ. ಈ ರೀತಿ ಪತ್ರವ್ಯವಹಾರ ನಡೆದಿದೆ. ಯಾವ ಮಾನ್ಯ ಸದಸ್ಯರೂ ಈ ವಿಷಯದಲ್ಲಿ ಸರ್ಕಾರದವರು ಆಲಸ್ಯದಿಂದಿದ್ದಾರೆಂದು ತಿಳಿದುಕೊಳ್ಳಬಾರದು. ಆ ರೀತಿ ತಿಳಿದುಕೊಂಡರೆ, ವಿಷಯವನ್ನು ತಿಳಿದುಕೊಂಡೂ ಈ ರೀತಿ ಆಪಾದನೆ ಮಾಡಿದರೆ, ನನಗೆ ರಕ್ಷಣೆ ಇದೆ. ಅದೇನೆಂದರೆ, ಏನೋ ಒಂದು ಆವೇಶದಿಂದ, ಒಂದು ಆಕ್ರೋಶದಿಂದ ಹೀಗೆ ಮಾಡುತ್ತಿದ್ದಾರೆ, ಇದರಲ್ಲಿ ಯಾವ ಸತ್ಯವೂ ಇಲ್ಲ ಎನ್ನುವುದು ಅವರಿಗೂ ಗೊತ್ತಿದೆ, ನನಗೂ ಗೊತ್ತಿದೆ. ಕೊನೆಯ ತೀರ್ಮಾನವನ್ನು ತೆಗೆದುಕೊಳ್ಳುವಾಗ, ಇದು ಪಕ್ಷಾತೀತವಾದ ಪ್ರಶ್ನೆಯಾಗಿ ಪರಿಗಣಿಸಲ್ಪಟ್ಟಿರುವುದರಿಂದ ಈ ಸಭೆಯ ವಿರೋಧಪಕ್ಷದ ನಾಯಕರನ್ನೂ ಮತ್ತು ಇತರ ಕೆಲವು ಮಂದಿ ಸದಸ್ಯರನ್ನೂ ಕರೆಸಿ ಈ ವಿಚಾರದಲ್ಲಿ ಸಮಾಲೋಚನೆ ಮಾಡಿ, ಅಭಿಪ್ರಾಯ ಸಂಗ್ರಹಣೆ ಮಾಡಿದ ಮೇಲೆ ಆ ಅಭಿಪ್ರಾಯ ಯಾವ ರೀತಿ ಇರುತ್ತದೆಯೋ ಅದನ್ನು ಕೇಂದ್ರಸರ್ಕಾರದ ಮುಂದೆ ನಾನು ಇಡತಕ್ಕವನಾಗಿದ್ದೇನೆ. ಒಂದುವೇಳೆ ಅವಶ್ಯಕವಾದರೆ, ಇಂಡಿಯಾ ಸರ್ಕಾರದವರು ಒಪ್ಪಿದರೆ, ಕೆಲವರನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗುವುದಕ್ಕೂ ಕೂಡ ನನಗೆ ಮನಸ್ಸಿದೆ.

ವಿಶ್ವವಿದ್ಯಾನಿಲಯದ ಮಸೂದೆಯ ವಿಚಾರದ ಪ್ರಸ್ತಾಪ ಬಂದಿದೆ. ಈ ಸಭೆಯ ಸದಸ್ಯರೇ ಸೆಲೆಕ್ಟ್ ಕಮಿಟಿಯ ಸದಸ್ಯರಾಗಿದ್ದಾರೆ. ಈಗಾಗಲೇ ಮೂರು ಮೀಟಿಂಗುಗಳನ್ನು ಮಾಡಿದ್ದಾರೆ. ಎವಿಡೆನ್ಸ್ ಕೊಡುವವರನ್ನೂ ಕರೆಯಿಸಿ ಅವರ ಅಭಿಪ್ರಾಯವನ್ನೂ ತಿಳಿದುಕೊಂಡಿದ್ದಾರೆ. ಇನ್ನೂ ಒಂದೆರಡು ಮೀಟಿಂಗ್ ಮಾಡಬೇಕಾಗುತ್ತದೆ. ಒಂದೆರಡು ಮೀಟಿಂಗ್ ಆಗಿ ಅದರ ವರದಿ ಬರುವುದಕ್ಕೆ, ಈ ಸಭೆ ಇನ್ನು ಎರಡು ಮೂರು ಅಥವಾ ನಾಲ್ಕೈದು ದಿವಸಗಳಲ್ಲಿ ಮುಗಿಯುವುದರಿಂದ, ಸಾಧ್ಯವಾಗುವುದಿಲ್ಲವೆಂದು ಕಾಣುತ್ತದೆ. ಆದುದರಿಂದ ನಾನು ಹೀಗೆ ಮನಸ್ಸು ಮಾಡಿಕೊಂಡಿದ್ದೇನೆ. ಈ ವಿಶ್ವವಿದ್ಯಾನಿಲಯದ ಮಸೂದೆ ಮತ್ತು ಇತರ ಒಂದರೆಡು ಮಸೂದೆಗಳನ್ನು ಈ ಸಭೆ ಚರ್ಚಿಸಿ ಒಪ್ಪಿಗೆ ಕೊಡುವುದಕ್ಕೆ ಮತ್ತೊಂದು ಅಧಿವೇಶನವನ್ನು ಕರೆಯಬೇಕಾಗುತ್ತದೆ. ಇದು ಅವಶ್ಯಕವಾಗುತ್ತದೆ. ವಿಧಾನಸೌಧದ ಕಟ್ಟಡವನ್ನು ಪ್ರಾರಂಭ ಮಾಡುವಾಗ ಮಾನ್ಯಸದಸ್ಯರೆಲ್ಲರೂ ಇರಬೇಕೆಂಬುದು ನನ್ನ ಪ್ರಾರ್ಥನೆಯಾಗಿದೆ. ಆ ಸಮಯದಲ್ಲಿ ಹದಿದ್ಯೈದು ದಿನಗಳು ಪುನಃ ಇನ್ನೊಂದು ಅಧಿವೇಶನವನ್ನು ಇಟ್ಟುಕೊಳ್ಳಬಹುದೆಂದು ನನ್ನ ಸೂಚನೆ.

ಅಪ್ರೋಪ್ರಿಯೇಷನ್ ಮಸೂದೆಯ ವಿಚಾರವಾಗಿ ನಾನು ಈಗ ಭಾಷಣ ಮಾಡತಕ್ಕವನಾಗಿಲ್ಲ. ಬಡ್ಜೆಟ್ ಭಾಷಣದಲ್ಲಿ ಎಷ್ಟು ವಿವರಣಾಯುತವಾಗಿ ಭಾಷಣ ಮಾಡಬೇಕೋ ಅಷ್ಟು ವಿವರಣಾಯುತವಾಗಿ ಭಾಷಣ ಮಾಡಿದ್ದೇನೆ. ಆ ಭಾಷಣವನ್ನು ಶ್ರದ್ಧೆಯಿಂದ ಕೇಳಿದವರು ಬಹುಶಃ ಅನೇಕ ಟೀಕೆಗಳನ್ನು ಮಾಡುವುದಕ್ಕೆ ಅವಕಾಶವಿರಲಿಲ್ಲ. ರೇಷ್ಮೆ ವ್ಯವಸಾಯದ ವಿಷಯದಲ್ಲಿ ಎಲ್ಲವನ್ನೂ ಒಂದೂವರೆ ಪ್ಯಾರಾದಲ್ಲಿ ವಿವರಿಸಿ ಹೇಳಿದ್ದೇನೆ.

ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಅದರಲ್ಲಿ ನಮಗೆ ಬೇಕಾದುದಿಲ್ಲ.

ಶ್ರೀ ಕೆ. ಹನುಮಂತಯ್ಯ.—ನಿಮಗೆ ಯಾವುದು ಬೇಕೋ ಗೊತ್ತಿಲ್ಲ!

ಆದುದರಿಂದ ಎಲ್ಲ ವಿಷಯಗಳನ್ನೂ ಪ್ರಸ್ತಾಪ ಮಾಡಿದ್ದೇನೆ. ಡಿಮ್ಯಾಂಡುಗಳನ್ನು ಪಾಸ್ ಮಾಡುವಾಗಲೂ ಖೋತಾ ಸೂಚನೆಗಳ ಮೂಲಕ, ಸಾಮಾನ್ಯಚರ್ಚೆಯ ಮೂಲಕ ಮಾನ್ಯಸದಸ್ಯರು

ಅನೇಕ ಟೀಕೆಗಳನ್ನು ಮಾಡಿದ್ದಾರೆ ; ಅವಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಪುನಃ ನಾನು ಭಾಷಣ ಮಾಡಿದರೆ, ಹೇಳಿದ ವಿಷಯವನ್ನೇ ಹೇಳಬೇಕಾಗುತ್ತದೆ. ಈಗ ವಿರೋಧಪಕ್ಷದ ನಾಯಕರೂ ಇತರರೂ ಅಪ್ರೋಪ್ರಿಯೇಷನ್ ಮಸೂದೆಯ ಮೇಲೆ ಮಾತನಾಡುವವರಾಗಿದ್ದಾರೆ. ಅವರು ಮಾತನಾಡತಕ್ಕ ವಿಷಯಗಳಲ್ಲಿ ಉತ್ತರ ಕೊಡುವುದಕ್ಕೆ ಯಾವ ಯಾವ ಅಂಶಗಳಿರುತ್ತವೆಯೋ ಪರಿಶೀಲನೆ ಮಾಡಿ ಕೊನೆಯಲ್ಲಿ ಉತ್ತರ ಕೊಡುತ್ತೇವೆಂದು ಬಿನ್ನಪ. ಅಪ್ರೋಪ್ರಿಯೇಷನ್ ಮಸೂದೆಯ ಮೇಲೆ ಎಲ್ಲ ವಿಚಾರಗಳಲ್ಲಿಯೂ ಮಾತನಾಡತಕ್ಕ ಹಕ್ಕು ಈ ಸಭೆಗಿದೆ. ಆ ರೀತಿ ಮಾತನಾಡಿ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಕಾಲಾವಕಾಶ ಸಿಕ್ಕದೇಯಿದ್ದರೆ ಟೀಕೆಗಳು ವ್ಯರ್ಥವಾಗುತ್ತವೆ, ಎಂದರೆ, ಅವುಗಳಿಗೆ ಉತ್ತರ ಕೊಡಲು ಅವಕಾಶ ಸಿಕ್ಕುವುದಿಲ್ಲ. ಇದರಿಂದ ಸಭೆಗೆ ಗೌರವ ಕೊಟ್ಟಂತಾಗುವುದಿಲ್ಲ. ಆದುದರಿಂದ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಎಷ್ಟು ಕಾಲವನ್ನು ಕೊಡಬೇಕೋ ಅಷ್ಟನ್ನು ಕೊಡುವುದು ತಮ್ಮ ಮೇಲೆ ಬಿದ್ದಿರುವ ಜವಾಬ್ದಾರಿ ; ಈ ರೀತಿ ಮಾಡುತ್ತೀರೆಂದು ನಾನು ನಂಬಿದ್ದೇನೆ.

Sri K. PUTTASWAMY (Srirangapatna).—On a point of clarification, Sir. The life of the University bodies would be over by June end. Is it the intention of the Government to call for a session earlier, or, are the Government going to reconstitute the University bodies on the old Act ?

Sri K. HANUMANTHAIYA.—I will state that in my reply.

Mr. SPEAKER.—Motion moved :

"That the Mysore Appropriation (No. 2) Bill, 1956, be taken into consideration."

Before the Hon'ble Members begin to debate, I want to fix the time. At one o' clock I have to guillotine all the clauses. Therefore, I have allowed one hour for the Government to reply and the remaining hours can be utilised for discussion. In view of the time available at our disposal, the Hon'ble Leader of the House may take 15 minutes and other Hon'ble Members five to eight minutes each.

*Sri J. MOHAMED IMAM (Jagalur).—Fifteen minutes is insufficient, Sir. ಸ್ವಾಮಿ, ಸಭಾನಾಯಕರು ಹೇಳಿದಹಾಗೆ ಕೋಲಾರ ಚಿನ್ನದ ಗಣಿಗಳ ರಾಷ್ಟ್ರೀಕರಣ ನಾವು ಪರೀಕ್ಷಿಸಿದ ಹಾಗೆ ಜಾಗ್ರತೆ ಆಗದೇಯಿರುವುದು ಬಹಳ ವಿಷಾದಕರ. ನಾವು ಇದನ್ನು ಶಿಫಾರಸು ಮಾಡಿದಾಗ, ಸಾಧ್ಯವಾದಷ್ಟು ಬೇಗ ಅದು ಸರ್ಕಾರಕ್ಕೆ ಬರುತ್ತದೆ, ಅದನ್ನು ತೆಗೆದುಕೊಳ್ಳುತ್ತಾರೆಂದು ಭಾವಿಸಿದ್ದೆವು. ಬಹುಶಃ ಕೇಂದ್ರಸರ್ಕಾರದವರು ನಮ್ಮ ಆಶಯವನ್ನು ತಿಳಿದುಕೊಂಡಿಲ್ಲ. ಒಂದು ಸಂಸ್ಥೆಯನ್ನು ಅಥವಾ ಒಂದು ಉದ್ಯಮವನ್ನು ರಾಷ್ಟ್ರೀಕರಣ ಮಾಡಬೇಕೆಂದರೆ, ಅದನ್ನು ಸಾಧ್ಯವಾದಷ್ಟು ಶೀಘ್ರವಾಗಿ ಮಾಡಬೇಕು. ಉದಾಹರಣೆಗೆ ವಿಮೆಯ ಉದ್ಯಮವನ್ನು ರಾಷ್ಟ್ರೀಕರಣ ಮಾಡಿದರು. ಒಬ್ಬರಿಗೂ ಅದರ ಸುಳಿವೇ ಇರಲಿಲ್ಲ, ತಕ್ಷಣ ಜಾರಿಗೆ ತಂದರು. ಇದೇ ರೀತಿ ಇಷ್ಟು ದೊಡ್ಡ ಉದ್ಯಮವನ್ನು ರಾಷ್ಟ್ರೀಕರಣ ಮಾಡಬೇಕಾದರೆ ಸಾಧ್ಯವಾದಷ್ಟು ಸಾರ್ವಜನಿಕರಿಗೆ ಗೊತ್ತಿಲ್ಲದಂತೆ ತಕ್ಷಣ ಮಾಡಬೇಕಾಗಿತ್ತು. ನಾವೆಲ್ಲರೂ ಮೈಸೂರು ಸರ್ಕಾರದವರೂ ಒಮ್ಮತದಿಂದ ಒಂದು ಅಭಿಪ್ರಾಯಕ್ಕೆ ಬಂದಮೇಲೆ ತಕ್ಷಣ ಮಾಡಬಹುದಾಗಿತ್ತು. ಆದರೂ ಎಂಟು ಹತ್ತು ತಿಂಗಳಿಂದ ಉದಾಸೀನ ಮಾಡಿರುವುದನ್ನು ನೋಡಿದರೆ ವಿಷಾದವಾಗುತ್ತದೆ. ಬಹುಶಃ ಗಣಿಗಳ ಪ್ರತಿನಿಧಿಗಳು ಕೇಂದ್ರಸರ್ಕಾರದಲ್ಲಿ ಹೋಗಿ ಅಪಪ್ರಚಾರ ಮಾಡಿ ಇದಕ್ಕೆ ಅಡ್ಡಿ ಹಾಕುತ್ತಾರೋ ಏನೋ ಎಂಬ ಅನುಮಾನ ಬರುತ್ತಿದೆ. ಇದನ್ನು ಕೇಂದ್ರಸರ್ಕಾರಕ್ಕೆ ತಿಳಿಸಿ ಸಾಧ್ಯವಾದಷ್ಟು ಜಾಗ್ರತೆ ಇದನ್ನು ಕಾರ್ಯಗತ ಮಾಡಬೇಕೆಂಬುದೇ ನನ್ನ ಸಲಹೆ. ಎರಡನೆಯದಾಗಿ, ನಮಗೊಂದು ರೀತಿಯ ವರದಿ ಬರುತ್ತಿದೆ. ರಾಷ್ಟ್ರೀಕರಣ ಮಾಡಬೇಕೆಂಬುದು ತಿಳಿದಮೇಲೆ ಆ ಗಣಿ ಕಂಪೆನಿಯವರು ಉದಾಸೀನರಾಗಿದ್ದಾರೆ. ಇದರಿಂದ ಅಭಿವೃದ್ಧಿ ಮಾಡುವುದು ಕಡಮೆಯಾಗಿದೆ, rock burst ಜಾಸ್ತಿಯಾಗುತ್ತಿವೆ. ಇದರ ಫಲವಾಗಿ ಕೋಟ್ಯಂತರ ರೂಪಾಯಿ ಮೈಸೂರು ಸರ್ಕಾರಕ್ಕೆ ನಷ್ಟವಾಗುತ್ತಿದೆ. ಇದನ್ನೆಲ್ಲಾ ಪರಿಶೀಲಿಸಿ ಜಾಗ್ರತೆ ಮಾಡುವರೆಂದು ಭಾವಿಸಿದ್ದೇನೆ.

Going to the Appropriation Bill, it is my duty to oppose the same and I do it in all solemn sincerity. We are asked to vote about 68 crores and certainly we cannot vote that amount. Because the finances of the State have reached such a low ebb and have reached such a desparate condition and the mismanagement of the finances is so great that we cannot entrust the management of this colossal amount to them.

Sir, the damage done to the Mysore finances is irretrieable. I do not think that that damage could be repaired. But still the Government have not realised the gravity of the situation and the position of the people of the State has become very vulnerable and they are exposed to the dangers of fresh taxation. Sir, the Opposition has been consistently opposing the financial policy of the Government for the last 8 or 10 years. We did that with all solemnity only with a view to improve the administration. Many a time, my Hon'ble friends on the Treasury Bench charged us with motives and said that we had opposed for the sake of opposition. We did so with the best of intentions.

(SRI J. MOHAMED IMAM.)

This year, we see that our stand has been completely vindicated; all our apprehensions, our findings and all our misgivings have unfortunately become true. The Opposition can take legitimate credit for forecasting things and they must congratulate themselves, because it is not merely the members of the Opposition, but many Hon'ble Members of the Treasury Benches on the other side have also joined us in condemning the financial policy of the Government.

Sri H. K. VEERANNA GOWDH (Maddur).—Because the Opposition has failed in its duty, others had to do that duty in the interest of the State.

Sri J. MOHAMED IMAM.—Sir, I am glad that they have done it. I am sure that they have done so with a conscientious desire to promote the interests of the State and as gentleman with conscience they will also vote with the Opposition when the voting comes, and they will prove themselves to be true to their conscience.

Sri H. K. VEERANNA GOWDH.—We are not in need of any advice from those who have failed in their duty.

Sri J. MOHAMED IMAM.—I am not advising anybody, Sir. I only said that if they are sure that what Government is doing is wrong, they must have the boldness to vote against the Government. We as human beings have a conscience to be satisfied and if they honestly feel one way and vote the other way, they will be untrue to the country and to their conscience. I am therefore hoping that they will vote with us. Not only that, Sir, I will even go one step further and say that if they feel that the Government has been mismanaging and that it is not doing the right thing, the best policy for them would be to cross the floor and join the Opposition.

Mr. SPEAKER.—What is the use of expounding theories at this moment? We will come to facts and figures.

Sri J. MOHAMED IMAM.—Sir, the Chief Minister wants us to vote 68 crores out of the Consolidated Fund. It is a huge amount. What is the position of the Consolidated Fund? As given in the Financial Memorandum, there are only 25 crores in the Consolidated Fund and the revenue comes to 25 crores. The Chief Minister wants to raise 5 crores from the public debt. The Chief Minister wants us to vote for an expenditure of 68 crores. When the Consolidated Fund amounts to only 25 crores, I do not know where he is going to get the remaining amount. The excess of expenditure over the Consolidated Fund is 42 crores. Perhaps he relies on loans from the Centre. He wants to borrow five crores. The Centre may give him 5 crores; even then there will be a deficit of 15 crores. I therefore request the Finance Minister to place before us the actual position. He says all the items of expenditure will be utilised. That is really a very anomalous position and he must furnish us with a proper explanation. According to this statement, I find that the deficit is much more than what is stated in the Budget. According to the provisions in the Budget, even after taking Central Assistance into credit, we are likely to have a deficit of nearly 10 crores. I very naturally expect a proper explanation from the Chief Minister side by side with this so that we can judge the situation.

Further, Sir, it looks as if the entire Government is run on borrowed funds and on public debt. I once stated Sir, that the Mysore Government has become a pensioner of the Central Government and that it is practically living on doles from the Centre. That statement has been amply substantiated this year and the Government cannot function this year, unless they borrow five crores from the public and unless the Central Government comes to our assistance. Sir, look at our public debt position and the effect it will have on the finances of our State. This year *i.e.*, 1956-57, our public debt comes to 62 crores and added to that, we have a liability of unfunded debt. All that will come to about 70 crores. I would like to know what is the policy of the Government regarding the public debt. Are we to go on borrowing indefinitely irrespective of the effect it will have

upon our finances or is there any limit? Sir, in the year 1950-51, we were subscribing only 18 lakhs towards the sinking fund and interest we were paying to the tune of 77 lakhs. Well, Sir, during the year, the amount allotted towards sinking fund and interest is Rs. 3,89,000, What would be the permanent liability of the State? Every year, we have to set apart more than three crores of rupees towards sinking fund and interest. And in case the Second Five-Year Plan has to be gone through, the Government will not be able to meet the cost except by further borrowing. The Government themselves have admitted that they can set apart about one crore of rupees towards the implementation of that Plan and the remaining amount should naturally come through borrowed funds and through Central Assistance. Granting that the Central Assistance comes to the extent of 50 per cent, Government should borrow the remaining portion of the amount required and that will further increase the liability and the public debt position of the State. The Public Debt which is today about 60 crores will at the end of the second plan period stand at about 120 crores and what will be its effect on the financial position of the State can very well be imagined. Even now we have had to provide three crores towards interest and sinking fund; at the end of the five-year period, probably the State will have to set apart not less than six crores towards this item. This will be a liability not only upon ourselves, but we will have to pass on this liability to posterity also. There must be a limit for borrowing; otherwise, if there is no restriction, if we entirely depend on borrowed funds, I am sure, the financial position in the future would be depleted and crippled and a time will come when the entire administration will come to a standstill and the Government will not have enough money even to pay to their officers. Sir, we have cautioned Government many a time to improve the financial position, to save wastage and to minimise the expenditure. But, they do not pay any heed. On the other hand, every year the expenditure has been mounting up and there is great deal of loss on the revenue side.

To give an example, Sir, for the Agricultural Department, about ten years ago, we were spending about 7 to 8 lakhs. Now, it has gone up to 70 lakhs! Sir, I am sure it is not only my personal opinion but the opinion of many members of this House—though they do not reveal it openly—that this department is not doing any useful work in proportion to the amount spent on it. Money is being spent on many ideological schemes like agricultural propaganda, agricultural education and demonstration; consequently, there has been great wastage of money in this department. Even when the Demands were being discussed, I pointed out that Government had asked for Rs. 14,60,000 to meet the value of shortages and losses on account of distribution of seeds. It was suggested at that time that this shortage was due to subventions and grants. I looked into the matter and it is nothing but the loss incurred due to shortages because provision has been made for giving subvention both for seeds and manure. Provision to the extent of 3 to 4 lakhs is being made every year for subsidy on seeds. For instance, in the year 1951-52 one lakh has been given; similarly provision has been made for giving subsidy to paddy seeds and paddy. So also, provision is made every year to give subsidy for manure; in the year 1951-52, a sum of 8 lakhs has been allotted for the preparation and distribution of manure. In 1952-53 it was 12 lakhs. Therefore the amount of Rs. 14,60,000 asked for is nothing but the actual loss due to shortages. What is more, this is not the first time that such an item is coming before us. In 1953-54, though no provision was made in the budget, the Government sought the vote of this House and wrote off five lakhs of rupees. Perhaps this was the accumulated loss as value of shortages and losses. Now, again after two years, they want this House to vote for another Rs. 14,60,000 to write off the shortages and losses. Sir, how was this caused? Nearly a sum of 20 lakhs has been incurred on shortages. We

(SRI J. MOHAMED IMAM.)
requested the Agricultural Minister to give us a list of various losses; he did not do it. I suggest, Sir, that a small committee of this House be appointed to go into and scrutinise the entire transaction and appraise the House as to how this loss was caused, whether it was due to bandicoots. The Government must hold an enquiry and appraise this House about the actual position.

Then, Sir, about the tractors. A sum of nearly 50 to 60 lakhs was invested on tractors and there was a workshop also. We had very high hopes about the scheme. But, the present position is, all these tractors are not only sick, but several of them have died and have been sent for cremation to Bhadravati. (*Laughter*). When they are no longer of any use, I do not understand why provision should be made to meet the running expenses. Sir, every year a sum of 8 to 10 lakhs is being provided towards the running expenditure of the tractors and even this year a provision of six lakhs has been made. When all the the tractors are not working at all, to make provision every year is really ununderstandable. I can quote crores of instances where economy could be effected and where greater vigilance on the part of the Government is called for.

Another point is, Government should not for technical reasons incur revenue losses. Even 15 or 20 lakhs is a pretty big sum and it should not be lost. Sir, I have already referred to the Race Club affair in my Budget speech. The difference between the Government and the Race Club in the matter of granting licence to conduct races at Bangalore, could easily be solved. Whatever may be the outlook of the Government in this matter, they should not lose an income of 15 lakhs. I do not exactly know what the trouble is. Some say it is a question of 'izzath'; some say it is a question of 'personal rivalry'. Sir, many of us here are prepared to offer our good services. Let us bring some understanding between the Government and the Race Club. Even if it means that Government should yield on one or two points, it is worth yielding because we cannot forego an income of nearly 15 lakhs of rupees.

Sir, I should warn the Government that our financial position has reached a critical stage. To-day the Government may feel happy; they may think that they would get assistance from the Central Government and borrowed funds. But if we scrutinise our own financial position, I must state that it is really critical. Time has come when drastic action has got to be taken in several respects to minimise the expenditure. I may suggest, Sir, that some of the superfluous departments may be abolished. For instance, the Anti-Corruption Department must be abolished immediately.

SRI K. HANUMANTHAIYA.—Sir, I am very glad to see that there was necessity for the Anti-Corruption Department during the regime of my Hon'ble friend Sri Imam and there is no necessity for it now. (*Laughter*).

SRI J. MOHAMED IMAM.—Sir, the Chief Minister remembers well that the Anti-Corruption Committee was appointed under the Chairmanship of Sir Albion Banerji in 1946 and that came in very handy when our friends became Ministers. The first Anti-Corruption officer was Sri Henjarappa. The Department was constituted in good faith to put down corruption in the services. But the department has not done anything in this direction; on the other hand, corruption has increased. The greatest danger in having this department is, it looks as though this Anti-Corruption Department is entirely responsible for putting down corruption and it is not the responsibility of the Heads of Departments. Sir, before this Anti-corruption Department came into being, the Heads of Departments were to look into the affairs of their Departments in the matter of putting down corruption. But, now every superior officer, whose duty it is to keep a vigilant watch on his subordinates, thinks that it is the duty of the Anti-Corruption Department and not his. That is why corruption has increased in every department and it is mounting up. Therefore, Sir, I

would suggest for the immediate abolition of this Anti-Corruption Department. Similarly, the Samskriti Prachara Department about which a resolution has been tabled.

Mr. SPEAKER.—That will be coming up and you can speak on that at that stage.

Sri J. MOHAMED IMAM.—Very well, Sir. I was stating that all the recently started departments and superfluous posts should be abolished forthwith. Sir, recently there was an interpellation in this House and it was pointed out that nearly 150 probationers were going to be taken. When we feel that the administration is already overburdened, is it desirable to appoint hundreds and hundreds of probationers ? Sir, this is a thing which is unheard of in any administration. It looks as if Government is there only to burden the administration with extra staff. Let the Ministers not think that as long as they are there, they have got the right to spend money as they like.

10 A.M.

They are sincere people. They have got the good of the country at heart. Let them think and let them visualise what the future will be after ten years and let not the posterity or the progeny turn against you or blame you for all the ills caused.

Mr. SPEAKER.—The House will now rise for lunch and meet at 10-30.

The House adjourned for Lunch at Three Minutes past Ten of the Clock and reassembled at Thirty-Two Minutes past Ten of the Clock.

[MR. SPEAKER in the Chair]

*Sri Mulka GOVINDA REDDY (Chitaldrug).—Sir, I oppose the Mysore Appropriation (No. 2) Bill, 1956 for Rs. 68,19,65,136. After the Congress Government came into office in Mysore, there has been a reckless, extravagant, lavish squandering of public moneys so much so they have heaped burdens of taxation on the poorer sections of people who have not been able to bear them and the people have lost all confidence in the Congress Government.

ಶ್ರೀ ಕೆ. ಹನುಮಂತಯ್ಯ.—ಯಾರು ಹೇಳಿದ್ದು ?

Sri Mulka GOVINDA REDDY.—During the general discussion on the Budget and during the debate on Demands, members belonging to the Opposition and members belonging to the ruling party have made bitter criticisms of the policies of the Government. The Finance Minister while placing this Bill before us for our consideration, has not responded, let alone being responsible, to the aspirations of the people. It clearly shows that our criticisms and our charges that the Government is not administering the country in the way in which it should, have not had any effect on the Finance Minister. It looks as though there is no democracy at all. Whatever democracy is there, it is only a formal affair.

For the last so many years, the Government have been constituting elected District Boards, but they have not been able to formulate a definite, consistent policy. The way in which they have been going about with regard to Local Self-Government Institutions, clearly shows that they do not want to trust the people with power, that they are afraid of the people and that they want to dictate from the Secretariat as to what the people should do and what should be done for the people. It is really unfortunate that in an age of democracy and where decentralisation of power is absolutely necessary for making the democracy effective and purposeful, the Government are following a policy which is not in the best interests of the people.

The Finance Minister has, in his budget speech, stated that there are some difficulties in implementing the recommendations of the Pay Structure Committee. It is all accepted from facts that the scales of pay of the N.G.Os. in Mysore are the lowest. He has pleaded some lame excuses. One is, the people are not prepared for taxation. . . . (*Sri K. HANUMANTHAIYA—That is not a lame excuse*) and the other is that the Government

(SRI MULKA GOVINDA REDDY.)

of India have sent a directive that the State Government should not implement the recommendations of the Pay Structure Committee or that they should not revise the scales of pay of the N.G.Os. so as to affect the interests of those that are coming into the greater Mysore State. There seems to be no logic or reason behind it. The directive does not apply to the State of Mysore where the scales of pay are the lowest; it applies to a State where the scales are highest and if they were to further enhance the scales of pay, by such a revision they are going to affect the interests of those that are coming into the State. But by enhancing the scales of pay in Mysore the interests of those that are coming in are not affected. On the other hand, we will be doing a bare social justice by enhancing the scales of pay of Mysore officials to the level of those that are prevailing in other parts that are coming into Mysore State. The recommendations of the Pay Structure Committee are conservative and modest and if the present Government is not capable of implementing those recommendations, I am quite sure that they are going to give a go-bye to the cause of the already suffering N.G.Os. in the State. This is the unkindest cut of all their policies.

Regarding the University, almost all the Universities in India are now getting the grants from the University Grants Commission. The scales of pay of University teaching staff in Mysore are again the lowest. When other Universities are making use of the available grants that are given by the University Grants Commission it is unfortunate that the Government of Mysore is still halting and hesitating to make use of those grants to alleviate the already suffering University staff in Mysore. When the other Karnataka University is already getting those grants from the University Grants Commission, Mysore University will be left in the lurch if before the first of October 1956 some attempt is not made to get those grants from the University Grants Commission.

Government are thinking of changing the academic year in the University also. They have already changed the academic year in the Department of Education. Where they do not want to implement certain things, they bring in the plea that the States are going to be reorganised and we shall think of these things after the State is reorganised, but whenever they want to implement certain decisions of their own, these things will not come in.

Though the academic year in other parts that are coming to greater Mysore State is different from that here, the Government want and do not hesitate to bring in their own idiosyncracies into the education field.

MR. SPEAKER.—Hon'ble Member has exceeded the time limit.

SRI MULKA GOVINDA REDDY.—During the last October session Government had included in the agenda that the questionnaire that was sent by the Official Language Commission may be discussed by this Assembly, and the House should give its verdict; unfortunately they did not care to consult this Assembly. It is an insult I should say that they themselves, of their own accord, without consulting this Assembly, placed their views regarding the official language before the Commission. Hindi should not be imposed on the unwilling people in the southern part of India and English for some time to come should be recognised as one of the national languages.

SRI J. MOHAMED IMAM.—Hear, hear!

SRI MULKA GOVINDA REDDY.—Regarding the Second Five-Year Plan. . . .

MR. SPEAKER.—The Hon'ble Member has already exceeded his time.

SRI MULKA GOVINDA REDDY.—I have not spoken on the Budget, on the Rajpramukh's Address and it will not be out of place if I do speak on the Appropriation Bill for some time. Many works that have been undertaken by the Public Works Department have been executed with such speed and quickness that money is wasted on these projects, and the benefit is not derived. We have made complaints after complaints that all is not well with the Public Works

Department. We made a complaint that the Thuppadahalli and Sangenahalli Tanks were breached and that the Engineering Department should be held responsible for it. It is more than two years and the Government have not given effect to the recommendations of the committee that was appointed by the Government. If the Government does not take serious notice of such defects and malpractices that have been practised by some . . . .

Sri K. HANUMANTHAIYA.—Sir, I may say for the information of the House that we have investigated and we have obtained recommendations from the department. Those recommendations according to the Constitution and the rules, have to be sent to the Public Service Commission; accordingly they have been sent to the Public Service Commission. As soon as their opinion is received, we are going to take action on the recommendations as well as on the opinion furnished to the Government by the Public Service Commission. So we are not at fault, as is alleged.

Sri Mulka GOVINDA REDDY.—At any rate the delay has given rise in the minds of the persons that are employed in the Public Works Department an idea that the Government may not take serious notice of the affair.

Sri K. HANUMANTHAIYA.—No, no. The delay is nobody's fault. The Constitution prescribed a certain procedure and the rules prescribe a certain procedure and all those formalities have to be gone through. Otherwise, you will yourself say: you do not give chance to your own officers to say what they have to say before punishing them. That is a well-known principle and the Hon'ble Member will concede that. Therefore we have to give the officers a chance to say what they have got to say and after obtaining explanation we have to come to a decision. There are three bodies to be consulted in the matter.

Sri Mulka GOVINDA REDDY.—Not that I was saying that Government should bye-pass all these processes. They should be given opportunity. I agree with you. You should follow all the processes needed under the Constitution. But the inordinate delay that has been caused gives room to a suspicion that the Government is not serious about these things.

Sri K. HANUMANTHAIYA.—That is 'law's delay' as they say.

Sri Mulka GOVINDA REDDY.—In the Medical Department though large sums of money have been spent, they have not taken care to see that the epidemic of that fell disease Tuberculosis . . . .

Mr. SPEAKER.—Hon'ble Member will kindly close.

Sri Mulka GOVINDA REDDY.—The bed strength in some of the sanatoria is so small that many patients have to be lying on the floor. It is unfortunate that the Government has not thought of increasing the bed strength in these hospitals.

Sri T. CHANNIAH (Minister for Local Self-Government and Public Health).—Two more sanatoria are going to be built.

Mr. SPEAKER.—The Hon'ble Minister may reply later on.

Sri Mulka GOVINDA REDDY.—Meanwhile they can easily increase the bed strength of the sanatorium.

Regarding rural credit, there is already about Rs. 38 crores of rural indebtedness. The way in which the Government is trying to solve this problem of rural indebtedness does not appear to give any hope. It is quite certain that if the method that they want to adopt to liquidate rural indebtedness is to be followed it will take nearly a century or more to liquidate it. Unless the raiyats are freed from this burden, it is impossible to increase production, it is impossible to make the raiyat worthy of being called a man. I would therefore urge that the Government should take a very drastic remedy and declare a moratorium.

Regarding labour participation in the industries I wholeheartedly welcome the principle enunciated by the Finance Minister. When they have placed the socialistic society as the ideal which they want to reach, it is absolutely necessary that labour should have equal partnership in the management of the affairs of the industrial concerns.

(SRI MULKA GOVINDA REDDY.)

And it is also necessary that in the Government industries they are starting and are having, labour should have proper representation in the management of the affairs of the industrial concerns. I wholeheartedly welcome that suggestion. But that principle should not remain merely on paper. It should be given effect to. And I do not see any reason why it should not be given effect to immediately. There is no reason to consult the third party, if the Government and the Labour come to some understanding with regard to. . . .

Sri K. HANUMANTHAIYA.—Then, you say it is imposed.

Sri Mulka GOVINDA REDDY.—Corruption is rampant. Many a member made the allegations that there is corruption in this department or that department. Some of the Ministers do not take it that there is corruption in some of those departments. They challenge the members who made the allegation. It is quite possible to give some instances where corruption is rampant. But it is the onerous duty of the Government to investigate into and put an end to corruption. If the Government does not want to put an end to corruption, then there is no use of the existence of the Government itself. I therefore urge the Government that instead of asking the members to give out the names that are involved in this corrupt practice, they themselves should investigate and put an end to corrupt practices.

I therefore oppose this Appropriation Bill as the Government have lost all confidence and it will be unworthy of this House if we entrust such sums, to the extent of 60 crores, to this Government which has failed to cater to the needs of the growing population.

*ಶ್ರೀ ಜಿ. ಬಸಪ್ಪ (ಹೊಸದುರ್ಗ).—ಸ್ವಾಮಿ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿರುವ ಈ ಅಪ್ರೋಪ್ರಿಯೇಷನ್ ಮಸೂದೆಗೆ ನನ್ನ ಪೂರ್ಣ ಬೆಂಬಲವನ್ನು ಕೊಡುತ್ತಾ ಒಂದೆರಡು ವಿಷಯಗಳನ್ನು ಮಾತ್ರ ಪ್ರಸ್ತಾಪಿಸಲು ಬಯಸುತ್ತೇನೆ. ಮಾನ್ಯ ಸಚಿವರು ಎರಡನೇ ಪಂಚವಾರ್ಷಿಕ ಯೋಜನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಜನಗಳ ಆಶೋತ್ತರಗಳನ್ನು ಈಡೇರಿಸತಕ್ಕ ಒಂದು ಸದ್ ಭಾವನೆಯಿಂದ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಹಣಬೇಕೆಂದು ಹೇಳಿ ಈ ಸಭೆಯನ್ನು ಕೇಳಿಕೊಂಡಿದ್ದಾರೆ. ಇದು ಸ್ತೋತ್ರಾರ್ಹವಾದ ವಿಷಯ. ಆದರೆ ಈ ಸಭೆ ಅಂಗೀಕಾರ ಕೊಡತಕ್ಕಂಥ ಇಷ್ಟು ಅಪಾರವಾದ ಹಣವನ್ನು ಯಾವ ರೀತಿ ಜನಗಳ ಆಶೋತ್ತರಗಳನ್ನು ಈಡೇರಿಸುವ ಬಗ್ಗೆ ಖರ್ಚು ಮಾಡುತ್ತಾರೆ ಎಂಬುದನ್ನು ಸ್ವಲ್ಪ ಗಮನಿಸಬೇಕಾಗಿದೆ. ಈ ಪಬ್ಲಿಕ್‌ವರ್ಕ್ಸ್ ಇಲಾಖೆ ಇದೆಯಲ್ಲ ಇದು ಹೆಚ್ಚಿನ ಹಣ ಖರ್ಚುಮಾಡತಕ್ಕ ಇಲಾಖೆ. ಈಗ ನಾವು ಮಂಜೂರಾತಿ ಕೊಡತಕ್ಕ ಸಂಪೂರ್ಣವಾದ ಹಣವನ್ನು stipulated timeನಲ್ಲಿ ಖರ್ಚು ಮಾಡುವುದಿಲ್ಲ ಎಂತಲೂ, ನಾನಾ ಇಲಾಖೆಗಳಲ್ಲಿ ಬಹಳ ಹಣ ಲ್ಯಾಪ್ಸ್ ಆಗುತ್ತಾ ಇದೆ ಎಂತಲೂ ಅನೇಕ ಸದಸ್ಯರು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಎಸ್ಟಿಮೇಟ್ ಕಮಿಟಿಯವರು ಹಿಂದೆ ಒಂದು ವರದಿಯನ್ನು ಒಪ್ಪಿಸಿದ್ದರು. ಈ ಇಲಾಖೆಯನ್ನು ಪುನರ್‌ವ್ಯವಸ್ಥೆ ಮಾಡಬೇಕು, ಕೆಲವು ಕಡೆ ಸರಿಯಾಗಿ ನಡೆಯುತ್ತಿದೆ, ಕೆಲವು ಕಡೆ ಸರಿಯಾಗಿ ನಡೆಯುತ್ತಿಲ್ಲ, ಎಲ್ಲಿ ಸಿಬ್ಬಂದಿ ಅವಶ್ಯಕವಾಗಿ ಎಷ್ಟಿರಬೇಕೋ ಅಷ್ಟಿರುವುದಿಲ್ಲ, ಇನ್ನೊಂದು ಕಡೆ ಹೆಚ್ಚಿಗೆ ಸಿಬ್ಬಂದಿ ಇರುತ್ತದೆಂದು ಹೇಳಿ ಅವರು ವರದಿ ಮಾಡಿದ್ದರು. ಅದನ್ನು ತಾವು ಗಮನಿಸಿಲ್ಲ. ಎರಡನೆಯದಾಗಿ ಪ್ರೊಹಿಬಿಷನ್ನನ್ನು ಯಶಸ್ವಿಯಾಗಿ ಜಾರಿಗೆ ತರಬೇಕಾದದ್ದು ಪೋಲೀಸ್ ಇಲಾಖೆಯ ಮೇಲೆ ಬಿದ್ದಿರತಕ್ಕ ಜವಾಬ್ದಾರಿ. ಹೀಗಿರುವಾಗ ಕಾನೂನನ್ನು ಜಾರಿಗೆ ಕೊಡತಕ್ಕ ಜನರೇ ಅನೇಕ ಕಡೆ ಕುಡಿತದ ಅಭ್ಯಾಸಕ್ಕೆ ಬದ್ಧವರಾಗಿ ಪಾನನಿರೋಧ ಯಶಸ್ವಿಯಾಗಿಲ್ಲ. ಆದ್ದರಿಂದ ಈ ಇಲಾಖೆಯಲ್ಲಿ ಯಾರುಯಾರು ಕುಡಿಯುತ್ತಾರೋ ಅವರನ್ನು ಪಟ್ಟಿಮಾಡಿ ಅವರನ್ನು ಪ್ರೊಹಿಬಿಟೆಡ್ ಏರಿಯಾದಿಂದ ಹೊರಗೆ ವರ್ಗ ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಪೇ ಸ್ಟ್ರಕ್ಚರ್ ಕಮಿಟಿಯವರ ಶಿಫಾರಸುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಾಂತ್ಯಗಳ ಪುನರ್‌ವಿಂಗಡನೆ ಆಗುವವರಿಗೆ ಅವುಗಳನ್ನು ಜಾರಿಗೆ ಕೊಡುವುದು ಕಷ್ಟವೆಂದು ಹೇಳಿದ್ದಾರೆ. ಒಂದು ದೃಷ್ಟಿಯಲ್ಲಿ ಅವರು ಹೇಳಿದ್ದನ್ನು ಒಪ್ಪುವುದಾದರೂ, ಈ ನೀತಿಯಿಂದ ಅಕ್ಟೋಬರ್ ಆದಮೇಲೆ, ಸ್ಟೇಟ್ಸ್ ರಿ-ಆರ್ಗನೈಸೇಷನ್ ಆದನಂತರ ನಮ್ಮ ಸಂಸ್ಥಾನದ ಅನೇಕ ಜನ ನೌಕರರಿಗೆ ಸೀನಿಯಾರಿಟಿ ಪ್ರಮೋಷನ್ ವಿಚಾರಗಳಲ್ಲಿ ತೊಂದರೆಯಾಗಬಹುದು. ಏಕೆಂದರೆ, ಸಂಬಳ ಸ್ಕಾರಿಗೆಗಳು ಒಂದೊಂದು ಸ್ಥಳದಲ್ಲಿ ಒಂದೊಂದು ರೀತಿಯಲ್ಲಿರುವುದರಿಂದ ನಮ್ಮ ಸಂಸ್ಥಾನದ ನೌಕರರಿಗೆ ತೊಂದರೆಯಾಗುವುದೆಂಬ ಸಂಶಯ ನೌಕರರಲ್ಲಿ ಮೂಡಿದೆ. ಅವರಿಗೆ ತೊಂದರೆಯಾಗದ ರೀತಿಯಲ್ಲಿ ನಮ್ಮ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತಾರೆಂಬ ಭರವಸೆ ನಮಗಿದೆ.

ಮತ್ತೆ ನಮ್ಮ ಅನೇಕ ನಾನ್‌ಗೆಜೆಟೆಡ್ ನೌಕರರು ಈ ರಿಪೋರ್ಟಿನಮೇಲೆ ತಮ್ಮ ಸಂಬಳ ಸ್ಕಾರಿಗೆಗಳು ಜಾಸ್ತಿಯಾಗುತ್ತವೆಂದು ಬಹಳ ಭರವಸೆಯಿಟ್ಟುಕೊಂಡಿದ್ದರು. ಮುಖ್ಯಮಂತ್ರಿಗಳ ಭಾಷಣದ ಮೇಲೆ ಅವರಿಗೆ ನಿರಾಶೆಯುಂಟಾಗಿದೆ. ಆದ್ದರಿಂದ ಅವರುಗಳಿಗೆ ಇಂಟೆರಿಮ್ ಪರಿಹಾರವಾಗಿ ಒಂದು ತಿಂಗಳ ಸಂಬಳವನ್ನಾದರೂ ಅಡ್ವಾನ್ಸಾಗಿ ಕೊಟ್ಟು ಅದನ್ನು, ಕಂತುಗಳಲ್ಲಿ ಅಕ್ಕಿಯನ್ನು ಕೊಟ್ಟು ವಸೂಲು ಮಾಡಿಕೊಂಡಂತೆ, ಹೊಸ ಸಂಸ್ಥಾನ ಬರುವ ವೇಳೆಗೆ ವಸೂಲುಮಾಡುವ ವ್ಯವಸ್ಥೆಮಾಡಿದರೆ ತಮಗೆ financial commitment ಏನೂ ಇರುವುದಿಲ್ಲ, ಅವರುಗಳೂ ತಮ್ಮ ಸಾಲಸೋಲಗಳನ್ನು ಈ ಕಷ್ಟ ಕಾಲದಲ್ಲಿ

ಮಾಡಿಕೊಂಡಿರುವುದನ್ನು ತೀರಿಸುವುದಕ್ಕೆ ಅವಕಾಶವಾಗುತ್ತದೆಂದು ಹೇಳಿ ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ನಮ್ಮ ಮುಂದಿನ ಆಯವ್ಯಯಪಟ್ಟಿಯ ವಿಚಾರದಲ್ಲಿ ಯಾವಯಾವ ಇಲಾಖೆಯಿಂದ ಎಷ್ಟೆಷ್ಟು ಹಣ ಬರುತ್ತದೆ ಎಷ್ಟೆಷ್ಟು ಹಣವನ್ನು ಯಾವಯಾವ ಭಾಗಕ್ಕೆ ಖರ್ಚುಮಾಡಬೇಕೆಂದು ಹೇಳಿ ಎಲ್ಲವನ್ನೂ ಸದಸ್ಯರು ಚರ್ಚಿಸಿದ್ದಾರೆ, ಹಾಗೂ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾನಾದರೋ ಈದಿನ ಸರ್ಕಾರದವರು ಇಷ್ಟು ವೊಬಲಗನ್ನು ಉಪಯೋಗಿಸಲು ಈ ಸಭೆಯ ಅನುಮತಿಯನ್ನು ಕೇಳುತ್ತಿರುವಾಗ ಕೇವಲ ಒಂದು ಮಾತನ್ನು ಹೇಳಬಯಸುತ್ತೇನೆ. ಇದು ನನ್ನ ಮಾತಲ್ಲ. ಎಲ್ಲರಿಗೂ ಮಾನ್ಯರಾಗಿ, ಸರ್ವಪೂಜ್ಯರೆಂದೆನಿಸಿಕೊಂಡಿದ್ದ ಮಹಾತ್ಮಾ ಗಾಂಧಿಯವರು ಹೇಳಿದ ಮಾತು. ಅಂಥ ಹಿತನುಡಿಗಳನ್ನು ನಾವು ಪದೇಪದೇ ಜ್ಞಾಪಕಕ್ಕೆ ತಂದುಕೊಂಡರೆ ಲೋಪವಾಗಲಾರದೆಂದು ಹೇಳಲಿಚ್ಛಿಸುತ್ತೇನೆ.

ಆಗಿನ ಸಂದರ್ಭದಲ್ಲಿ ಡೆಕನ್ ಸ್ಟೇಟ್ಸ್ ಎಂದು ರಚನೆ ಮಾಡುವ ಪ್ರಶ್ನೆಯಿತ್ತು. ಈ ಪ್ರಾಂತ್ಯಗಳು ಬೊಂಬಾಯಿ ಪ್ರಾಂತ್ಯದಲ್ಲಿ ಲೀನವಾಗುವುದಕ್ಕೆ ಮುಂಚೆ ಡೆಕನ್ ಸ್ಟೇಟ್ಸ್ ಯೂನಿಯನ್ ಎಂಬದನ್ನು ಮಾಡಬೇಕೆಂದು ಯೋಚನೆ ಮಾಡಿತ್ತು. ಆದರೆ ಇದನ್ನು ಆ ಸಂಸ್ಥಾನಗಳ ಪ್ರಜೆಗಳು ವಿರೋಧಿಸಿ ಅವುಗಳು ಬೊಂಬಾಯ ಪ್ರಾಂತ್ಯಕ್ಕೆ ಲೀನವಾಗಬೇಕೆಂದು ಚಳವಳಿ ಹೂಡಿ, ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರಿಗೂ ಮಹಾತ್ಮಾ ಗಾಂಧಿಯವರಿಗೂ ಮನವಿ ಮಾಡಿಕೊಳ್ಳುವುದಕ್ಕೆ ಒಂದು ಡೆಲಿಗೇಷನ್ ಏರ್ಪಾಡು ಮಾಡಿದ್ದರು. ಅದಕ್ಕೆ ನನ್ನನ್ನೇ ನಾಯಕನನಾಗಿ ಆರಿಸಿದ್ದರು. ಅದರಂತೆ ನಾನು ಬಾಪೂಜಿಯನ್ನು ಕಂಡು ಆ ವಿಚಾರ ಬಿನ್ನವಿಸಿಕೊಂಡ ಮೇಲೆ ಹೊರಡುವಾಗ ಮೈಸೂರು ಜನತೆಗೆ ತಾವು ಒಂದು ಸಂದೇಶ ಕೊಡಬೇಕೆಂದು ಪ್ರಾರ್ಥಿಸಿಕೊಂಡೆ. ಇದು ಅವರು ಕೊಲೆಯಾಗುವುದಕ್ಕೆ 20-22 ದಿನಗಳ ಹಿಂದಿನ ಮಾತು. ಆಗ ಅವರು ತಿಳಿಸಿದರು : ಈ ರೀತಿ ; "ಕಾಂಗ್ರೆಸ್ಸಿಗೆ ಅಧಿಕಾರ ಬಂದಿದೆ ; ಕೋಟ್ಯಂತರ ರೂಪಾಯಿಗಳ ಆಡಳಿತವನ್ನು ನಿರ್ವಹಣೆ ಮಾಡತಕ್ಕ ಅವಕಾಶ ನಿಮಗಿದೆ. ಇಂಥ ಸಂದರ್ಭದಲ್ಲಿ, ಸಾರ್ವಜನಿಕ ಹಣದ ಒಂದೊಂದು ಕಾಸನ್ನೂ ಒಂದೊಂದು ರೂಪಾಯಿಯೆಂದು ಭಾವಿಸಿ ನೀವು ಸದ್ವಿನಿಯೋಗ ಪಡಿಸಿದರೇನೇ ನೀವು ನಿಮ್ಮ ಕರ್ತವ್ಯವನ್ನು ನೆರವೇರಿಸಿದಂತಾಗುತ್ತದೆ ಇದೇ ಮೈಸೂರಿಗೆ ನನ್ನ ಸಂದೇಶ" ಎಂದು ಹೇಳಿದರು. ಆ ವಾಕ್ಯಗಳನ್ನೇ ನಾನು ಇಂದು ಸರ್ಕಾರದವರ ಗಮನಕ್ಕೆ ತರುತ್ತೇನೆ. ನಾವೀಗ ಅನೇಕ ಸಲಹೆಗಳನ್ನು ಕೊಟ್ಟು ಇಷ್ಟು ಹಣವನ್ನು ನಿಮ್ಮ ಕೈಯಲ್ಲಿ ಕೊಟ್ಟಿದ್ದೇವೆ. ಆದರೆ, ಅದನ್ನು ಉಪಯೋಗಿಸುವಾಗ ಮಹಾತ್ಮಾ ಗಾಂಧಿಯವರು ಕೊಟ್ಟ ಸಂದೇಶದ ಕಡೆಗೆ ಗಮನ ಕೊಡಿ. ಈ ಹಣದ ಒಂದೊಂದು ಕಾಸನ್ನೂ ಒಂದೊಂದು ರೂಪಾಯಿಯೆಂದು ಭಾವಿಸಿ ಸದಸ್ಯರು ನಿಮಗೆ ಅಧಿಕಾರ ಕೊಟ್ಟಿದ್ದಾರೆ. ನಿಮಗೆ ಬೇಕಾದರೆ ಮನಸ್ಸಿಗೆ ಬಂದಂತೆ ಸ್ವಜನರಿಗೆ ಅನುಕೂಲವನ್ನೂ ಪಕ್ಷಪಾತವನ್ನೂ ತೋರಿಸಬಹುದು. ಸಭೆ ತಮಗೆ ಅಧಿಕಾರ ಕೊಟ್ಟಮೇಲೆ ನಾಳೆ ತಾವು ದಬಾವಣೆಯಿಂದ ಮಾತನಾಡಬಹುದು ಎಂಬ ಮನೋಭಾವನೆಯನ್ನು ಬಿಟ್ಟು ನಿಸ್ವಾರ್ಥತೆಯಿಂದ, ದೇಶದ ಹಿತದೃಷ್ಟಿಯಿಂದ ಈ ಹಣವೆಲ್ಲವನ್ನೂ ಒಳ್ಳೆಯ ಕಾರ್ಯಕ್ಕೇ ಸದ್ವಿನಿಯೋಗ ಮಾಡಬೇಕೆಂಬ ದೃಷ್ಟಿಯಿಂದ ಕೆಲಸ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಈ ಮಾತುಗಳನ್ನು ಹೇಳುವುದರಲ್ಲಿ ಯಾವ ದುರುದ್ದೇಶವಾಗಲಿ, ಸರ್ಕಾರದವರನ್ನು ಅನಾವಶ್ಯಕವಾಗಿ ಟೀಕೆ ಮಾಡಬೇಕೆಂಬ ಉದ್ದೇಶವಾಗಲಿ ನನಗಿಲ್ಲ.

ಇದನ್ನು ಹೇಳಿ, ಇನ್ನು ನಮ್ಮ ಎದುರುಪಕ್ಷದ ನಾಯಕರು ಹೇಳಿದ ಒಂದು ಮಾತನ್ನು ನಾನು ಪ್ರಸ್ತಾಪಿಸಲಿಚ್ಛಿಸುತ್ತೇನೆ. ನಮ್ಮ ಎದುರು ಪಕ್ಷದ ನಾಯಕರು ನಾನು ಹೇಳುವ ಮಾತುಗಳನ್ನು ಕೇಳಿ ಬೆನ್ನು ಚಪ್ಪರಿಸುತ್ತಿರುವಂತೆ ಕಾಣುತ್ತದೆ, ತಾವೊಬ್ಬರೇ ಸರ್ಕಾರವನ್ನು ಟೀಕೆ ಮಾಡುತ್ತಿಲ್ಲ ಅವರ ಪಕ್ಷದವರೂ ಟೀಕೆ ಮಾಡುತ್ತಾರೆ ಎಂದು. ಅವರು ಬೆನ್ನು ಚಪ್ಪರಿಸಿಕೊಳ್ಳುವುದಲ್ಲ, ಎದುರು ಪಕ್ಷದ ನಾಯಕರು ಸರಿಯಾಗಿ ಹೋರಾಟ ಮಾಡುವುದಾದರೇನೇ ಅವರು ಅಂಥ ನಾಯಕರಾಗುವುದು. ಅವರು ತಮ್ಮ ಕರ್ತವ್ಯದಲ್ಲಿ ಪರಾಙ್ಮುಖರಾದರೆ, ಅವರು ಮಾಡುವ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಅವರು ತಿಳಿದುಕೊಳ್ಳಬೇಕು ನಮ್ಮ ಕರ್ತವ್ಯವೇನು ಎಂಬುದನ್ನು. ಸರ್ಕಾರವೆಂದರೆ ಮಂತ್ರಿಗಳಲ್ಲ. ನಾವು ಸರ್ಕಾರ ಆಡಳಿತ ನಡೆಸುವುದಕ್ಕೆ ಇರತಕ್ಕ ನಮ್ಮ ಪ್ರತಿನಿಧಿಗಳು ಮಂತ್ರಿಗಳು. ಅವರಲ್ಲಿರುವ ಲೋಪದೋಷಗಳನ್ನು ತೋರಿಸುವುದು, ಆಡಳಿತ ಜವಾಬ್ದಾರಿ ಹೊತ್ತಿರತಕ್ಕ ನಮ್ಮ ಕರ್ತವ್ಯ. ಇದನ್ನು ಬಹಿರಂಗವಾಗಿ ನಾನು ಹೇಳುತ್ತೇನೆ. ಸರ್ಕಾರವನ್ನು ನಡೆಸತಕ್ಕ ಪಕ್ಷದ ನಿಸ್ವಾರ್ಥತೆಯನ್ನು, ನಿಸ್ಪೃಹತೆಯನ್ನು ಇದು ತೋರಿಸುತ್ತದೆ. ಹಾಗಿಲ್ಲದೆ ನಮ್ಮ ಸರ್ಕಾರ ಏನು ಮಾಡಿದರೂ ಕಣ್ಣುಮುಚ್ಚಿಕೊಳ್ಳಬೇಕು ಕೊಳ್ಳೆ ಹೊಡೆದರೂ ಸುಮ್ಮನಿರಬೇಕೆಂಬುದು ಸರಿಯಲ್ಲ. ನಿಸ್ವಾರ್ಥತೆಯಿಂದ ಇಂಥ ತಪ್ಪುದಾರಿ ಹಿಡಿದಿದ್ದೀರೆಂದು ಹೇಳುವುದರಲ್ಲಿ ದ್ವೇಷವೇನೂ ಹೊರತು, ಸರ್ಕಾರ ನಾವೇ ಆಗಿರಬೇಕು; ನಾವು ಯಾರಿಗೂ ವಿರೋಧವಾಗಿ ವೋಟ್ ಕೊಡಕೂಡದು ಎಂದು ಅವರು ಹೇಳುವ ಬುದ್ಧಿವಾದ ನಮಗೆ ಅನ್ವಯಿಸುವುದಿಲ್ಲ.

ನಾನು ಆಯವ್ಯಯ ಭಾಷಣ ಮಾಡುತ್ತಾ ಕೆಲವು ಮಾತುಗಳನ್ನು ಹೇಳಿದ್ದಕ್ಕೆ ಸಭಾನಾಯಕರು ಅಪಾರ್ಥ ಮಾಡಿಕೊಂಡರು ಅವರು ಹೇಳಿದರು, ಕಾಂಗ್ರೆಸ್ಸು ಕೆಡಬೇಕಾದರೆ ಕಾಂಗ್ರೆಸ್ಸಿನಿಂದಲೇ ಎಂದು ಹೇಳಿದರು. ಇದಕ್ಕೆ ನಾನು ಹೇಳುವುದಿಷ್ಟೆ. ಕಾಂಗ್ರೆಸ್ ಎಂಬುದು ಯಾವ ಒಬ್ಬ ವ್ಯಕ್ತಿಯಿಂದಲೂ ನಿಂತಿರುವ ಸಂಸ್ಥೆಯಲ್ಲ. ನನ್ನಂಥ ನೂರಾರು ಜನ ವೀರಣ್ಣ ಗೌಡರು ಹತ್ತಾರು ಜನ ಹನುಮಂತಯ್ಯನವರು ಇನ್ನೂ ಹೆಚ್ಚಿಗೆ ಸುಭಾಷ್ ಮತ್ತು ಕೃಪಾಲನಿಯಂಥವರನ್ನೊಳಗೊಂಡ ಮಹಾಸಂಸ್ಥೆಯಿದು. Congress has survived many more great men and very great men of integrity, ability and faith. ಆದ್ದರಿಂದ ನಾನೂ ಹನುಮಂತಯ್ಯನವರೂ ಜಗಳ ಮಾಡಿಕೊಂಡು ಹೋದಮಾತ್ರದಿಂದಲೇ ಕಾಂಗ್ರೆಸ್ಸು ಬಿದ್ದು ಹೋಗುವುದಿಲ್ಲವೆಂದು ನನ್ನ ಭಾವನೆ.

11 A.M.

ಈ ದೃಷ್ಟಿಯಿಂದ ಕಾಂಗ್ರೆಸ್ ಬತ್ತಿಹೋಗುವುದಿಲ್ಲ ಎಂದು ನನ್ನ ಭಾವನೆ. ಆದುದರಿಂದ ನಾವು ಏನಾದರೂ ಟೀಕೆ ಟಿಪ್ಪಣಿಗಳನ್ನು ಮಾಡಿದರೆ, ಕಾಂಗ್ರೆಸ್ಸಿನವರು ಕಾಂಗ್ರೆಸ್ಸಿಗೆ ದ್ರೋಹ ಮಾಡುತ್ತಾರೆ ಎಂದು ಭಾವಿಸಕೂಡದು. ಅವು ಸದುದ್ದೇಶದಿಂದ ಮಾಡಿದ ಟೀಕೆಗಳು. ನನ್ನಂಥವರ ವಿರೋಧ

(ಶ್ರೀ ಎಚ್. ಕೆ. ವೀರಣ್ಣಗೌಡ.)

ಕಟ್ಟಿಕೊಂಡುದರಿಂದಲೇ ತಾವು ಉನ್ನತ ಪದವಿಗೆ ಬಂದುದಾಗಿಯೂ ಇಲ್ಲದಿದ್ದರೆ ಬರುತ್ತಾ ಇರಲಿಲ್ಲ ಎಂದೂ ಸಭಾನಾಯಕರು ಹೇಳಿದರು. ನನಗೆ ಆಗ ಅಯ್ಯೋ, ಪ್ರಾಣಿ ಎನ್ನಿಸಿತು. ಈ ಊರಿನಲ್ಲಿ ಒಬ್ಬರು ಛತ್ರ ಕಟ್ಟಿದ್ದಾರೆ. ಅವರು ಸಾಯುವಾಗ ನಾನು ಬೇರೆಯವರಂತೆ ಬಾಳಿದ್ದರೆ ಛತ್ರ ಕಟ್ಟುವುದಕ್ಕೆ ನನ್ನ ಹತ್ತಿರ ಹಣ ಇರುತ್ತಿರಲಿಲ್ಲ ಎಂದು ಸಮಾಧಾನಪಟ್ಟುಕೊಂಡರಂತೆ. ಕೀರ್ತಿ ಸಂಪಾದನೆ ಮಾಡಬೇಕೆಂಬ ಆಶೋತ್ತರ ಮಾನವ ಸ್ವಭಾವಜನ್ಯವಾದುದು. ಆದರೆ ಕೀರ್ತಿ ಸಂಪಾದನೆ ಮಾಡತಕ್ಕ ಮಾರ್ಗ ಪವಿತ್ರವಾಗಿರಬೇಕು. ರಾಮಾಯಣವನ್ನು ಜನರು ಬೇಕಾದಷ್ಟು ಹೊಗಳುತ್ತಾರೆ. ರಾಮಾಯಣವನ್ನು ಓದಿ ಹೊಗಳುವಾಗ ರಾವಣನನ್ನು ಎಂದಿಗೂ ಮರೆಯುವುದಕ್ಕಾಗುವುದಿಲ್ಲ. ಮಹಾಭಾರತದಲ್ಲಿ ಪಾಂಡವರ ಚರಿತ್ರೆಯನ್ನು ಓದುವಾಗ ಕೌರವರನ್ನು ಮರೆಯುವುದಕ್ಕಾಗುವುದಿಲ್ಲ. ಗಾಂಧೀ ಚರಿತ್ರೆಯನ್ನು ಓದುವಾಗ ಗೋಡ್ಸೆಯ ಹೆಸರು ಮನಸ್ಸಿನಲ್ಲಿ ಇದ್ದೇ ಇರುತ್ತದೆ. ಆದ್ದರಿಂದ ಕೀರ್ತಿ, ಅಧಿಕಾರ, ಹಣ, ಸಂಪಾದನೆ ಮಾಡತಕ್ಕದ್ದು—ಇವು ಮೂರು ಸ್ವಭಾವಜನ್ಯವಾಗಿ ಮೆಚ್ಚತಕ್ಕ ಆಶೋತ್ತರವಾದರೂ, ಈ ಮೂರರ ಪೈಕಿ ಯಾವುದನ್ನು ಸಂಪಾದನೆ ಮಾಡಬೇಕಾದರೂ ಅನುಸರಿಸತಕ್ಕ ಮಾರ್ಗ ನಿರ್ಮಲವಾದುದೂ, ಪವಿತ್ರವಾದುದೂ, ಮತ್ತು ಲೋಕ ಮೆಚ್ಚುವಂಥದೂ ಆಗಿರಬೇಕು. ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ ತಾಲ್ಲೂಕು—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಸಭೆಯ ಮುಂದೆ ಸರ್ಕಾರದವರು ಮಂಡಿಸಿರತಕ್ಕ ಅಪ್ರೋಪ್ರಿಯೇಷನ್ ಬಿಲ್ಲನ್ನು ಅನುಮೋದಿಸುತ್ತಾ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ವಿರೋಧಪಕ್ಷದ ನಾಯಕರ ಬಗ್ಗೆ ಈಗಾಗಲೇ ಸಾಕಷ್ಟು ಹೇಳಿದ್ದಾರೆ. ನಾನು ಒಂದು ಮಾತು ಹೇಳಬಹುದಾದರೆ ಅವರು ಮೈಸೂರು ದೇಶದ ಹಣದ ವ್ಯವಸ್ಥೆ ಏನಿದೆ ಅದಕ್ಕೆ ಬಹುಶಃ ಧಕ್ಕೆ ತಗಲಬಹುದೋ ಏನೋ ಎಂಬ ಭಯದಿಂದ ಕೂಡಿರುವರಾಗಿ ಮಾತನಾಡಿದಂತೆ ನನಗೆ ಕಾಣುತ್ತದೆ. ಈ ಹಣಕಾಸಿನ ವಿಚಾರ ಯೋಚನೆ ಮಾಡುವಾಗ ಹಿಂದೂ ದೇಶ ಒಂದು ಎನ್ನುವ ಭಾವನೆ ನಮ್ಮ ವಿರೋಧ ಪಕ್ಷದ ನಾಯಕರಲ್ಲಿ ಇನ್ನೂ ಬಂದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು, ಅವರ ಶೈಲಿಯಲ್ಲಿ ಬಡವರ ಮೇಲೆ ಈ ಸರ್ಕಾರ ಕಂದಾಯ ಹಾಕಿರುವುದರಿಂದ ಬೇಕಾದಷ್ಟು ಬಡವರಿಗೆ ತೊಂದರೆಯಾಗಿದೆ ಎಂದು ಹೇಳಿದರು. ನನಗೆ ಇನ್ನೂ ಚೆನ್ನಾಗಿ ಗೊತ್ತಿರುವ ಹಾಗೆ ಈ ವರ್ಷ ಈ ಆಯವ್ಯಯದ ಭಾಷಣದ ವರದಿಯನ್ನು ಓದಿದರೆ ಅದರಲ್ಲಿ ಈ ವರ್ಷ ಯಾವ ಕಂದಾಯವನ್ನೂ ಹಾಕಿಲ್ಲ ಎಂದು ಹೇಳಿರತಕ್ಕದ್ದನ್ನು ಮಾನ್ಯ ಸದಸ್ಯರು ಮರೆತಿರಬೇಕು ಎಂದು ಕಾಣುತ್ತದೆ. ಆದ್ದರಿಂದ ಈ ಎರಡು ವಿಚಾರಗಳನ್ನು ಬಿಟ್ಟರೆ ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು ಯಾವುದು ಹೇಳಬೇಕಾಗಿತ್ತೋ, ಅವರ ಪಕ್ಷದ ನೀತಿಯಾವುದನ್ನು ಪ್ರತಿಪಾದಿಸಬೇಕಾಗಿತ್ತೋ ಅದನ್ನು ಮರೆತು, ಕೇವಲ ಟೀಕೆಮಾಡುವುದಕ್ಕೆ ಅವರು ಒಂದು ವಿಚಾರವನ್ನು ಇಟ್ಟುಕೊಂಡು ಭಾಷಣ ಮಾಡಿದ್ದಾರೆ. ಸರ್ಕಾರ ನಂಬಿಕೆ ಕಳೆದುಕೊಂಡಿದೆ ಎಂದು ಅವರು ಅವರ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಈಗಾಗಲೇ ಮಾನ್ಯ ಶ್ರೀ ವೀರಣ್ಣಗೌಡರು ಅವರ ಅಭಿಪ್ರಾಯಕ್ಕೆ ಸಾಕಷ್ಟು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ನಾನು ಅವರ ವಿಚಾರವಾಗಿ ಹೆಚ್ಚಿಗೆ ಹೇಳಬೇಕಾಗಿಲ್ಲ. ಒಂದು ವಿಚಾರ. ವಿಶ್ವವಿದ್ಯಾನಿಲಯದಲ್ಲಿ ಮೂರು-ನಾಲ್ಕು ಜನ ನಿಮ್ನ ವರ್ಗದವರು ಕಾಲೇಜು ಲೆಕ್ಚರರ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಒಬ್ಬರೇ ಒಬ್ಬರು ಹೆಂಗಸರು. ಫಿಲಾಸಫಿ ಡಿಪಾರ್ಟ್‌ಮೆಂಟಿನಲ್ಲಿ ಐದು ವರ್ಷಗಳಿಂದ ಅವರು ಉಪಾಧ್ಯಾಯಿನಿಯರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಎಂ. ಎ. ಫಸ್ಟ್‌ಕ್ಲಾಸ್, ಫಸ್ಟ್ ರ್ಯಾಂಕ್ ತೆಗೆದುಕೊಂಡಿದ್ದಾರೆ. ಅಂಥವರನ್ನು ಅಸಿಸ್ಟೆಂಟ್ ಪ್ರೊಫೆಸರನ್ನಾಗಿ ಮಾಡಿ ಎಂದು ಎಷ್ಟೋ ಸಾರಿ ಕೇಳಿಕೊಳ್ಳುತ್ತಿದ್ದೇನೆ. ಅವರೂ ಸಹ ಅರ್ಜಿ ಮುಖಾಂತರ ಕೇಳಿಕೊಳ್ಳುತ್ತಿದ್ದಾರೆ. ಮುಖ್ಯ ಮಂತ್ರಿಗಳೂ, ವಿದ್ಯಾಮಂತ್ರಿಗಳೂ, ಈ ವಿಚಾರದಲ್ಲಿ ಬಹಳ ಸಹಾನುಭೂತಿಯನ್ನುಳ್ಳವರಾಗಿದ್ದರೂ ಸಹ ಏನಾಗಿದೆಯೆಂಬುದು ನನಗೆ ಗೊತ್ತಾಗುತ್ತಾ ಇಲ್ಲ. ವಿಶ್ವವಿದ್ಯಾನಿಲಯದ ಅಧಿಕಾರಿಗಳು ಮತ್ತು ಕೌನ್ಸಿಲ್ ಸಭೆ ಏತಕ್ಕೆ ಈ ಒಂದು ಪ್ರಶ್ನೆಯನ್ನು ಮರೆತಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ಸಾರಿ 14 ಜನರನ್ನು ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನಾಗಿ ತೆಗೆದುಕೊಂಡಿದ್ದಾರೆ. ಅಲ್ಲಿರುವ ಒಬ್ಬ ಉಪಾಧ್ಯಾಯಿನಿ ಶ್ರೀಮತಿ ಪಾರ್ವತಮ್ಮನವರನ್ನು ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆ ಖಾಲಿ ಇದ್ದರೂ ಸಹ ನೇಮಕ ಮಾಡದೇ ಇರುವುದು ಬಹಳ ವ್ಯಸನವನ್ನುಂಟು ಮಾಡತಕ್ಕದ್ದಾಗಿದೆ. ಅದಕ್ಕೋಸ್ಕರ ಸರ್ಕಾರದವರು ಈ ವಿಚಾರವನ್ನು ಆದಷ್ಟು ಬೇಗ ಯೋಚನೆಗೆ ತೆಗೆದುಕೊಂಡು ಅವರನ್ನು ಅಸಿಸ್ಟೆಂಟ್ ಪ್ರೊಫೆಸರನ್ನಾಗಿ ನೇಮಕ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ.

ಇನ್ನೊಂದು ವಿಚಾರ. ಈ ಪಾಂಚವಾರ್ಷಿಕ ಯೋಜನೆಯ ಬಗ್ಗೆ ಹೆಚ್ಚಿನ ಹಣ ವ್ಯಯ ಮಾಡುತ್ತಿದ್ದಾರೆ. ಈ ರೀತಿ ಸರ್ಕಾರದವರು ಹಣವನ್ನು ವ್ಯಯಮಾಡುವಾಗ ಮತ್ತು ರೈತರಿಗೆ ಅನೇಕ ವಿಧಗಳಲ್ಲಿ ಸಾಲಗಳನ್ನು ಕೊಡುವಾಗ, ಬಡವರಿಗೆ, ಸಾಲಗಳು ಗೊತ್ತಾದ ರೀತಿಯಲ್ಲಿ ಸಿಕ್ಕುವುದು ಬಹಳ ಕಷ್ಟವಾಗಿದೆ. ಏಕೆಂದರೆ ನಮ್ಮ ಸಮಾಜದಲ್ಲಿ 100ಕ್ಕೆ ಸುಮಾರು 60ಕ್ಕೂ ಮೇಲ್ಪಟ್ಟು ಬಡವರೇ ಇದ್ದಾರೆ, ಸಾಲಗಳನ್ನು ಯಾವ ಸಹಕಾರ ಸಂಘಗಳ ಮುಖಾಂತರವೇ ಕೊಡಲಿ, ಆ ಸಂಘಗಳು ಸಾಲವನ್ನು ಕೊಡುವಾಗ, ಸಾಲವನ್ನು ತೆಗೆದುಕೊಳ್ಳತಕ್ಕ ವ್ಯಕ್ತಿಗಳು ಸೆಕ್ಯೂರಿಟಿ ಕೊಡಬೇಕು, ಜಾಮೀನು ಕೊಡಬೇಕು. ಜಾಮೀನು ಕೊಡಬೇಕಾದರೆ ಅವರು ತೆಗೆದುಕೊಳ್ಳುವ ಸಾಲದ ಮೊಬಲಗಿಗೆ ಎರಡರಷ್ಟು ಇರಬೇಕು. ಬಡವರಿಗೆ ಸಾಕಾದಷ್ಟು ಅನುಕೂಲಗಳು ಸಿಕ್ಕುವ ಹಾಗೆ ಮಾಡಬೇಕು. ಯಾವ ಯೋಜನೆ ಬಂದರೂ ಅದರಲ್ಲಿ ಬಡವರಿಗೆ ಅಗತ್ಯವಾಗಿ ಯಾರು ಹಣದ ತೊಂದರೆಯಿಂದ ನರಳುತ್ತಿದ್ದಾರೋ, ಅಂಥವರಿಗೆ ಸಹಾಯ ಮಾಡುವ ಒಂದು ಯೋಜನೆಯನ್ನು ಕೈಗೊಳ್ಳಬೇಕಾದುದು ಬಹಳ ಅಗತ್ಯ. ಸಾಲವನ್ನು ಕೊಡುವಾಗ ಆತನು ಜಾಮೀನು ಕೊಡಲು ಸಾಕಷ್ಟು ಅವನ ಹತ್ತಿರ ಆಸ್ತಿ ಇಲ್ಲದೇ ಹೋದ ಪಕ್ಷದಲ್ಲಿ ಅವನಿಗೆ ಸಾಲ ಸಿಕ್ಕುವುದಿಲ್ಲ. ಸಾಲ ಸಿಕ್ಕತಕ್ಕದ್ದು ಯಾರು ಆಸ್ತಿಯನ್ನು ಸೆಕ್ಯೂರಿಟಿಯಾಗಿ ಕೊಡಬಲ್ಲರೋ, ಯಾರು ಅವನು ಕೇಳತಕ್ಕ ಹಣದ ಮೊಬಲಗಿಗೆ ಸರಿಯಾಗಿ ಸೆಕ್ಯೂರಿಟಿ ಕೊಟ್ಟು, ಎಲ್ಲಾ ಕಂಡಿಷನ್‌ಗಳನ್ನು ಪೂರೈಸಬಲ್ಲರೋ, ಅವರಿಗೆ ಸಾಲ ಕೊಡುತ್ತಾರೆ. ಬಡವರಿಗೆ ಸೆಕ್ಯೂರಿಟಿ ಕೊಡಲು ಸಾಧ್ಯ

ವಿಲ್ಲದೆ ಸಾಲಗಳನ್ನು ತೆಗೆದುಕೊಳ್ಳಲು ಕಷ್ಟವಾಗುತ್ತದೆ. ಯಾವಾಗ ಅವರು ಸಾಲಗಳನ್ನು ತೆಗೆದುಕೊಳ್ಳಲು ಕಷ್ಟವಾಗುತ್ತದೋ, ಆಗ ನಾವು ಸಮಾಜದಲ್ಲಿನ ಬಡ ಜನರಿಗೆ ಸಹಾಯಮಾಡುತ್ತೇವೆ ಎಂದು ಯೋಜನೆಗಳನ್ನು ಅಳವಡಿಸಿಕೊಂಡ ಪಕ್ಷದಲ್ಲಿ, ಆ ಯೋಜನೆಯ ಉದ್ದೇಶ ಬಹಳವಾಗಿ ಸಾಧ್ಯವಾಗಲಾರದು. ಇದಕ್ಕೆ ಸರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಅಗತ್ಯ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಯಾವ ಯಾವ ಅಂಶಗಳಲ್ಲಿ ನಾವು ಅಭಿವೃದ್ಧಿ ಹೊಂದಿದ್ದೇವೆ, ಯಾವ ಯಾವ ಅಂಶಗಳಲ್ಲಿ ನಾವು ಅಭಿವೃದ್ಧಿಹೊಂದಿಲ್ಲ ಎಂಬ ಸಂಗತಿಯನ್ನು ವಿಮರ್ಶೆ ಮಾಡತಕ್ಕ ಕಾಲವಿದು. ಈಗಿನ ಮಂತ್ರಿಮಂಡಲ ಅಧಿಕಾರಕ್ಕೆ ಬಂದಮೇಲೆ ಅನೇಕ ವಿಷಯಗಳಲ್ಲಿ ಮುಂದುವರಿದಿದ್ದೇವೆ. ಅನೇಕ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರ ಬಂದರೆ ನಮಗೆಲ್ಲಾ ಬಹಳ ಒಳ್ಳೆಯದಾಗುತ್ತದೆ, ನಮ್ಮ ಜೀವನದ ಮಟ್ಟ ಸ್ವಲ್ಪ ಮಟ್ಟಿಗೆ ಮುಂದುವರಿಯುತ್ತದೆ, ಇನ್ನು ಸ್ವಲ್ಪ ಸುಖ ಬರಬಹುದು ಎಂಬುದಾಗಿ ಯಾವ ಈ ಸರ್ಕಾರದಲ್ಲಿ ನೌಕರಿ ಮಾಡತಕ್ಕ ಬಡ ನೌಕರರು ನಿರೀಕ್ಷಿಸಿದ್ದರೋ ಅವರ ಆಶೆಯೆಲ್ಲಾ ಇವೊತ್ತು ಮಣ್ಣು ಪಾಲು ಆಯಿತು. ಅಕ್ಟೋಬರ್ ಆದಮೇಲೆ ಮಾಡತಕ್ಕದ್ದು ನಮ್ಮ ಕೈಯ್ಯಲ್ಲಿಲ್ಲ. ಒಂದು ಸಣ್ಣ ನದಿ ದೊಡ್ಡ ಸಮುದ್ರಕ್ಕೆ ಸೇರುವ ಹಾಗಿದೆ. ನಾವು ಸಣ್ಣ ನದಿಯಲ್ಲಿ ದೋಣಿಯಲ್ಲಿ ಓಡಾಡುತ್ತಾ ಇರ ವಾಗ ಮಾಡುವುದನ್ನು ಬಿಟ್ಟು, ಆಮೇಲೆ ಸಮುದ್ರಕ್ಕೆ ಸೇರಿದ ಮೇಲೆ ಮಾಡುತ್ತೇವೆ ಎನ್ನುವುದು ಬೇಡ. ಮುಂದೆ ಆಗುವುದಕ್ಕೆ ಭಗವಂತನ ದಯೆ ಬರಬೇಕೇ ಹೊರತು ನಮ್ಮ ಕೈಯ್ಯಲ್ಲಿಲ್ಲ. ಈಗ ನಮ್ಮ ಕೈಯ್ಯಲ್ಲಿರುವಾಗ, ಅವಕಾಶವಿರುವಾಗ, ಒಂದು ಒಳ್ಳೆಯ ಕಾರ್ಯವನ್ನು ನಾವು ಗಟ್ಟಿ ಮನಸ್ಸಿನಿಂದ ಮಾಡುವುದಕ್ಕೆ ಪ್ರಯತ್ನ ಪಡಬೇಕು. ನಾನು ಈ ಸಭೆಗೆ ಬಂದಮೇಲೆ ನಾಲ್ಕೈದು ವರ್ಷಗಳಿಂದಲೂ ಪ್ರತಿ ವರ್ಷವೂ ಈ ಸರ್ಕಾರದ ಬಡ ನೌಕರರ ವಿಷಯವನ್ನು ಪ್ರಸ್ತಾಪ ಮಾಡುತ್ತಲೇ ಇದ್ದೇನೆ. ' ಏಕೆಂದರೆ ಇವರ ಕಷ್ಟ ಕಾರ್ಪಣ್ಯಗಳ ಅನುಭವ ನನಗೆ ಪ್ರತಿನಿತ್ಯದಲ್ಲೂ ಇದೆ. ಇವರ ಸಂಪರ್ಕ ಪ್ರತಿನಿತ್ಯದಲ್ಲಿಯೂ ಇದೆ. 4,800 ಕೋಟಿ ರೂಪಾಯಿಗಳನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚುಮಾಡುತ್ತೇವೆ. 2,600 ಕೋಟಿ ರೂಪಾಯಿಗಳನ್ನು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚುಮಾಡಿದ್ದೇವೆಂದು ಅವರಲ್ಲಿ ಹೇಳಿದರೆ, ಈ ಹಣವೆಲ್ಲಾ ಎಲ್ಲಿ ಹೋಯಿತು ಎಂದು ಅವರು ಕೇಳುತ್ತಾರೆ. ಈ ಐದ ವರ್ಷಗಳಲ್ಲಿ ಒಂದು ರೂಪಾಯಿಯಷ್ಟು ಕೂಡ ಇವರ ವರಮಾನವನ್ನು ಹೆಚ್ಚಿಸಿಲ್ಲ. ಎಷ್ಟೋ ಸುಧಾರಣೆಗಳನ್ನು ಮಾಡಬೇಕೆಂದು ಪ್ರಯತ್ನ ನಡೆದಿದೆ, ನಡೆಯುತ್ತಿದೆ. ವಿದ್ಯಾ ಸುಧಾರಣೆ ಮಾಡಬೇಕೆಂದು ಸರ್ಕಾರದವರು ಒಂದು ದೊಡ್ಡ ಸಮಿತಿಯನ್ನು ಮಾಡಿ. ಅದಕ್ಕಾಗಿ ನಲವತ್ತು ಸಾವಿರ ರೂಪಾಯಿ ಖರ್ಚು ಮಾಡಿದರು. ಆ ಸಮಿತಿಯವರು ಬಡ ಉಪಾಧ್ಯಾಯರ ಸಂಬಳ ಹೆಚ್ಚು ಮಾಡಬೇಕೆಂದೂ ಅವರ ಸ್ಥಿತಿಯನ್ನು ಉತ್ತಮಪಡಿಸಬೇಕೆಂದೂ ಸಲಹೆ ಮಾಡಿದರು. ವಿದ್ಯಾ ಸಚಿವರು. ಉಪಾಧ್ಯಾಯರಿಗೆ ಒಂದು ರೂಪಾಯಿ, ಎರಡು ರೂಪಾಯಿ ಹೆಚ್ಚು ಮಾಡಿದರೂ ಎಷ್ಟೋ ಲಕ್ಷ ರೂಪಾಯಿ ಹೆಚ್ಚು ಖರ್ಚಾಗುತ್ತದೆ, ಆದುದರಿಂದ ಏನನ್ನೂ ಮಾಡುವುದಕ್ಕಾಗುವುದಿಲ್ಲವೆಂದು ಅಭಿಪ್ರಾಯ ಸೂಚಿಸಿದರು. ಇದು ಹೋಗಲಿ ಎಂದರೆ, ಸಂಬಳ ರಚನಾ ಸಮಿತಿ ಎಂದು ಒಂದು ಸಮಿತಿಯನ್ನು ನೇಮಿಸಿದರು. ಈ ಸಮಿತಿಯವರು ನಮ್ಮ ಸರ್ಕಾರದ ಈಗಿನ ಹಣಕಾಸಿನ ಸ್ಥಿತಿಯನ್ನು ನೋಡಿಕೊಂಡು ಬಹು ಜಾಗರೂಕತೆಯಿಂದ ನೌಕರರ ಸಂಬಳಗಳ ವಿಷಯವನ್ನು ಪರಿಶೀಲಿಸಿ, ಎರಡು ಕೋಟಿ ರೂಪಾಯಿ ಮಾತ್ರ ಖರ್ಚಾಗುವ ಸಲಹೆ ಮಾಡಿದರು. ಆದರೆ ನಮ್ಮ ಸರ್ಕಾರದವರು ಈ ಸಲಹೆಯನ್ನೂ ಈಗ ಪರ್ಯಾಲೋಚನೆ ಮಾಡುವುದಕ್ಕಾಗುವುದಿಲ್ಲ, ಇದನ್ನು ಆಕ್ಟೋಬರ್ ಆದಮೇಲೆ, ಹೊಸ ಸಂಸ್ಥಾನವಾದ ಮೇಲೆ ವಿಮರ್ಶೆ ಮಾಡಬಹುದೆಂದು ಹೇಳಿದರು. ಈ ಸಭೆಯಲ್ಲೇ ನಮ್ಮ ಮಂತ್ರಿಗಳು ಒಂದು ಮಾತನ್ನು ಅನೇಕ ಸಾರಿ ಹೇಳಿದ್ದಾರೆ. ಅದೇನೆಂದರೆ, 'Our administration is the cheapest administration in India and in the world' ಎಂದು ಹೇಳಿದ್ದಾರೆ. ಇದು ನಾವು ಸಂತೋಷಪಡತಕ್ಕ ವಿಷಯವಲ್ಲ, ಪಶ್ಚಾತ್ತಾಪ ಪಡತಕ್ಕ ವಿಷಯ. ಏಕೆಂದರೆ, ಸರ್ಕಾರದಲ್ಲಿ ಕೆಲಸ ಮಾಡತಕ್ಕ ಬಡ ನೌಕರರು ಸಂತುಷ್ಟಿಯಿಂದ ಕೆಲಸ ಮಾಡಿದರೆ ಸರ್ಕಾರದ ಕೆಲಸ ಚೆನ್ನಾಗಿ ನಡೆಯುತ್ತದೆಯೇ ವಿನಾ ಅವರಲ್ಲಿ ಅತೃಪ್ತಿಯಿದ್ದರೆ ಸಮರ್ಪಕವಾಗಿ ನಡೆಯುವುದಿಲ್ಲ. Socialist Pattern Society ನಿರ್ಮಾಣ ಮಾಡಬೇಕು, disparities, ಎಂದರೆ, ಅಂತರಗಳು ತೊಲಗಬೇಕು ಎಂದು ಹೇಳುತ್ತಾ ಇದ್ದರೂ ಸಂಬಳ ಸಾರಿಗೆಗಳಲ್ಲಿ ಸಮಾನತೆಯನ್ನು ತಂದಿಲ್ಲ. ಈ ಹೊತ್ತಿಗೂ ನಮ್ಮ ಸಂಸ್ಥಾನದಲ್ಲಿ ನೌಕರನಿಗೆ ತಿಂಗಳಿಗೆ 40 ರೂಪಾಯಿ ದೊರೆಯುತ್ತಿಲ್ಲವೆಂದು ಹೇಳುವಾಗ, ನಿಜವಾಗಿಯೂ ನಮ್ಮ ಆತ್ಮವನ್ನು ಶೋಧಿಸಿ ನೋಡಿಕೊಳ್ಳಬೇಕು. ಬರಿಯ ಘೋಷಣೆಯಾಗಿ Socialist Pattern Society ಎಂದು ಹೇಳುತ್ತಿದ್ದೇವೆಯೋ ಅಥವಾ ಇದು ನಮ್ಮ ಅಂತಃಕರಣದಲ್ಲಿದೆಯೆ, ಇದನ್ನು ಜಾರಿಗೆ ತರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆಯೆ ಎಂಬುದನ್ನು ನೋಡಿಕೊಳ್ಳಬೇಕು. ಏಕೋ ಈ ವಿಷಯದಲ್ಲಿ ನಮ್ಮ ಸರ್ಕಾರದ ಮನಸ್ಸು ಕಲ್ಲಾಗಿದೆ, ವಿಧಾನ ಸೌಧದಲ್ಲಿ ಹಾಕಿರುವ ಕಲ್ಲಿನಷ್ಟು ಕಲ್ಲಾಗಿದೆ. ಈ ವಿಷಯದಲ್ಲಿ ನಮ್ಮ ಮುಖ್ಯ ಮಂತ್ರಿಗಳ ಮನಸ್ಸು ಕರಗಬೇಕು. ಈಗ ಒಳ್ಳೆಯ ಅವಕಾಶವಿದೆ ಉಪಕಾರ ಮಾಡುವುದಕ್ಕೆ. ಅಕ್ಟೋಬರ್ ಬರುವುದಕ್ಕೆ ಮುಂಚೆಯೇ ನಾವು ಒಳ್ಳೆಯ ಕೆಲಸ ಮಾಡಬೇಕು. ಯಾವಾಗಲೂ ಧರ್ಮದ ಕೆಲಸ ಮಾಡಬೇಕಾದರೆ, ಶುಭಕಾರ್ಯ ಮಾಡಬೇಕಾದರೆ, ಅದು ಯಾವಾಗ ತೋರುತ್ತದೆಯೋ ಆಗಲೇ ಮಾಡಿಬಿಡಬೇಕು. ಈಗಲೇ ಮಾಡಬೇಕು. ಆದುದರಿಂದ ಈಗ ಅವಕಾಶವಿರುವಾಗಲೇ, ಇನ್ನು ಮೂರು ತಿಂಗಳು ಅಧಿಕಾರವಿರುವಾಗಲೇ ಸರ್ಕಾರ ತನ್ನ ಮನಸ್ಸನ್ನು ಕರಗಿಸಿಕೊಂಡು ತನ್ನ ನೌಕರರಿಗೆ ಸಹಾಯ ಮಾಡಬೇಕು. ಸಣ್ಣ ಸಂಬಳದ ನೌಕರರು, ಉಪಾಧ್ಯಾಯರು, ಪೋಲೀಸ್ ಕಾನ್ಸ್ಟೇಬಲ್‌ಗಳು, ತಾಲ್ಲೂಕು ಕಚೇರಿಯಲ್ಲಿ ಕೆಲಸ ಮಾಡುವವರು, ಇಂಥವರಿಗೆ ಸಂಬಳ ಹೆಚ್ಚಿಸಿದರೆ ಐವತ್ತು ಲಕ್ಷ ರೂಪಾಯಿಗಿಂತ ಹೆಚ್ಚಾಗುವುದಿಲ್ಲವೆಂದು ತೋರುತ್ತದೆ. ಇದನ್ನು ಜಾರಿಗೆ ತರಬೇಕು. ಐದು ವರ್ಷದ ಯೋಜನೆಯಲ್ಲಿ ಬಡ ನೌಕರರ ಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ಪ್ರಯತ್ನಪಟ್ಟಿಲ್ಲ.

Sri H. M. CHANNABASAPPA (Minister for Industries).—The Hon'ble

(SRI H. M. CHANNABASAPPA.) Member knows that in view of the Government of India's instructions, no change in the pay structure should be effected till the reorganisation of the States is over.

ಶ್ರೀ ಪಿ. ಆರ್. ರಾಮಯ್ಯ.—ಸ್ವಾಮಿ, ಇದೇನೂ ಹೊಸದಾಗಿ ಬಂದಿರುವ ವಿಷಯವಲ್ಲ, ಕಳೆದ ಐದು ವರ್ಷಗಳಿಂದಲೂ ಹೇಳುತ್ತಿದ್ದೇವೆ. ಈಗ ಇದನ್ನು ಮುಂದೆ ಹಾಕುವುದಕ್ಕೆ ಈ 'ಅನುಕೂಲ ಸಿಂಧು' ಬಂದಿದೆ. ಇದು ಚೆನ್ನಾಗಿಲ್ಲ. ಇದನ್ನು ಇಂಡಿಯಾ ಸರ್ಕಾರಕ್ಕೆ ಬರೆದು ಅವರಿಗೆ ಸುಲಭವಾಗಿ ಮನದಟ್ಟು ಮಾಡಬಹುದು. ಮುಂದೆ ಹೊಸ ಸಂಸ್ಥಾನ ಬಂದರೆ, ಹೊರಗಿನಿಂದ ಬರುವ ನೌಕರರ ಸಂಬಳ ಸಾರಿಗೆಗಳಿಗೂ ನಮ್ಮವರ ಸಂಬಳ ಸಾರಿಗೆಗಳಿಗೂ ಬಹಳ ಅಂತರ ವಿರುತ್ತದೆ. Fact Finding Committee ಯವರು ಕೂಡ ಬೊಂಬಾಯಿ, ಮದರಾಸು ಸರ್ಕಾರಗಳಲ್ಲಿ ಏನಿದೆಯೆಂಬುದನ್ನು ಲೆಕ್ಕಾಚಾರ ಹಾಕಿ ತಮ್ಮ ವರದಿಯಲ್ಲಿ ಕೊಟ್ಟಿದ್ದಾರೆ. ಇದನ್ನು ನೋಡಿದರೆ, ಬಡವರು ಐಶ್ವರ್ಯವಂತರ ಮನೆಯಲ್ಲಿ ಸೇರಿದ ಹಾಗಾಗುತ್ತದೆ. ಆಗ ನಮ್ಮ ಬಡ ನೌಕರರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕಾಗುವುದಿಲ್ಲ. ಅಕ್ಟೋಬರಿನಲ್ಲಿ ಹೊಸ ಸಂಸ್ಥಾನ ಬರುತ್ತದೆ. ಆಮೇಲೆ ಹೊಸ ಚುನಾವಣೆ ಬರುತ್ತದೆ. ಆರೇಳು ತಿಂಗಳು ಈ ವಿಷಯವನ್ನು ಪರಿಶೀಲನೆಗೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ, ಸರಿಪಡಿಸುವುದಕ್ಕಾಗುವುದಿಲ್ಲ, ಆದುದರಿಂದ ಇದನ್ನು ಈಗಲೇ ಪುನರ್ವಿಮರ್ಶೆ ಮಾಡಿ ಬಡ ನೌಕರರ ಕಷ್ಟ ನಿವಾರಣೆ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ಅಧಿಕಾರ ವರ್ಗದವರ ಸಂಬಳವನ್ನು ಒಂದೆರಡು ರೂಪಾಯಿ ಹೆಚ್ಚಿಸಿ, ಅಂತರವನ್ನು ಕಡಮೆ ಮಾಡಬೇಕೆಂದು ಹೇಳಿದರು, ಮಿಕ್ಕ ಬಹುತೇಕ ಜನರಲ್ಲಿರುವ ಬಡವರಿಗೂ ಇತರರಿಗೂ ಇರುವ ಅಂತರವನ್ನು ಸರಿಮಾಡುವುದು ಹೇಗೆ ?

ಶ್ರೀ ಪಿ. ಆರ್. ರಾಮಯ್ಯ.—ಅದಕ್ಕೆ ಉತ್ತರ ಕೊಡುತ್ತೇನೆ. ಎಲ್ಲಕಡೆಯೂ ಬಡವರಿದ್ದಾರೆ, ಅವರ ಸ್ಥಿತಿಯನ್ನು ಉತ್ತಮ ಪಡಿಸಬೇಕೆಂಬ ವಿಷಯದಲ್ಲಿ ನಾನು ಸಂಪೂರ್ಣ ಸಹಾನುಭೂತಿಯುಳ್ಳವನಾಗಿದ್ದೇನೆ. ಈ ವಿಷಯದಲ್ಲಿ ಸರ್ಕಾರ ಬೇಕಾದಷ್ಟು ಕೆಲಸ ಮಾಡಿದೆ, ಇನ್ನೂ ಮಾಡಬೇಕು. ಆದರೆ ಯಾವ ಸರ್ಕಾರ ಇತರರ ವಿಷಯದಲ್ಲಿ ಇಂಥಾ ನೌಕರರಿಗೆ ಬೇಸಿಕ್ ಸಂಬಳ ಅಥವಾ ಮೂಲ ಸಂಬಳ ನಲವತ್ತು ರೂಪಾಯಿಗಿಂತ ಕಡಿಮೆ ಇರಬಾರದೆಂದು ಹೇಳುತ್ತಾರೋ ಅವರು ತಮ್ಮನ್ನು ಸೇವೆಮಾಡತಕ್ಕ ನೌಕರರ ವಿಷಯದಲ್ಲಿ ಈ ಮೂಲ ಸಂಬಳ ಕೊಡುವ ನೀತಿಯನ್ನು ಜಾರಿಗೆತರಬಾರದೆ ! ಈ ವಿಷಯದಲ್ಲಿ ನಮ್ಮ ಸರ್ಕಾರ ಬಹಳ ತಾತ್ಸಾರ ಮಾಡಿದೆಯೆಂದು ಹೇಳಬೇಕಾಗಿದೆ. ಮೈಸೂರು, ಬೆಂಗಳೂರು ನಗರಗಳಲ್ಲಿಯೂ, ಇತರ ತಾಲ್ಲೂಕುಗಳಲ್ಲಿಯೂ, ಈ ನೌಕರರ ಜೀವನವನ್ನು ನೋಡಿದ್ದೇನೆ. ಅವರು ಬಹಳ ಕಷ್ಟಪಡುತ್ತಿದ್ದಾರೆ. ಬೆಂಗಳೂರಿನಲ್ಲಿ 93 slum ಪ್ರದೇಶಗಳಿದ್ದವು, ಇವುಗಳನ್ನು ನಿವಾರಿಸುವುದಕ್ಕೇನೋ ಪ್ರಯತ್ನ ಮಾಡಿದರು, ನಾವು ಬೆಂಗಳೂರಿನಲ್ಲಿ ವಾಸಮಾಡುವವರು. ಅನೇಕ ಸದಸ್ಯರು ಗ್ರಾಮಾಂತರಗಳಿಂದ ಬಂದಿರುವವರು. ಬೆಂಗಳೂರಿನಲ್ಲಿ ಎಷ್ಟು ಹಣ ಬರುತ್ತದೆಯೋ ಅದನ್ನು ಹಳ್ಳಿಗಳಿಗೆ ಉಪಯೋಗಿಸುತ್ತಿದ್ದೇವೆ.

This distinction between rural areas and urban areas should not be brought forth in this House. Every member of this House is a representative of the population of the entire State. He may be elected from a particular area, but he represents the whole State. Therefore, I plead with the Hon'ble Members who come from rural parts that they should also consider sympathetically the wants of the people living in the urban areas. With this appeal, I close my speech.

*ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಸ್ವಾಮಿ, 68,19,65,136 ರೂಪಾಯಿಗಳನ್ನು ಕೇಳಿರತಕ್ಕ ಎರಡನೆಯ ಅಪ್ರೋಪ್ರಿಯೇಷನ್ ಮಸೂದೆಯನ್ನು ವಿರೋಧಿಸುತ್ತಾ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಇಷ್ಟೊಂದು ಹಣವನ್ನು ಖರ್ಚು ಮಾಡುವುದಕ್ಕೆ ಸರ್ಕಾರ ಅಧಿಕಾರವನ್ನು ಕೇಳಿರುವುದು ನೋಡಿದರೆ, ಇಷ್ಟು ಹಣಕ್ಕೆ ಸಾಕಷ್ಟು ಪ್ರಮಾಣದಲ್ಲಿ ಜನರಿಗೆ ಫಲ ದೊರಕುತ್ತಿಲ್ಲವೆಂದು ಹೇಳದೆ ವಿಧಿಯಿಲ್ಲ. ಇದು ಯಾವ ರೀತಿ ಇದೆಯೆಂದರೆ, ಒಂದು ಬಡಸಂಸಾರದಲ್ಲಿರತಕ್ಕ ಬಡಜನರು ಬೆಳಗಿನಿಂದ ಸಾಯಂಕಾಲದವರೆಗೂ ದುಡಿದು ತಂದ ಹಣವನ್ನು ಯಜಮಾನನ ಕೈಗೆ ಕೊಟ್ಟು ಸಂಸಾರಕ್ಕೆ ಆವಶ್ಯಕವಾದ ಸಾಮಾನುಗಳನ್ನು ತರಬೇಕೆಂದು ಹೇಳಿದರೆ, ಅವನು ಆ ದುಡ್ಡನ್ನು ಪಡಖಾನೆಗೆ ಹಾಕಿ ತಾನು ಕುಡಿದುಬಿಟ್ಟು, ಒಂದಾಣೆ ಕೊಟ್ಟು ಒಂದು ಸೌತೇಕಾಯಿ ತಂದು ಮನೆಗೆ ಬಂದು, ನಾನು ಎಲ್ಲವನ್ನೂ ತಂದಿದ್ದೇನೆ ಎಂದು ಹೇಳುವ ಹಾಗಿದೆ.

ಮತ್ತು ಇಷ್ಟೊಂದು ಹಣ ಖರ್ಚು ಮಾಡುವಾಗ Socialistic Pattern of Society ಎಂದು ಏನು ಹೇಳುತ್ತಾರೆಯೋ, ಅದರಲ್ಲಿಯೂ ಕೂಡ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಇಷ್ಟ ಯಾವ ರೀತಿ ಇದೆಯೋ ಅದಕ್ಕೆ ನಿಜವಾದ ಮನ್ನಣೆ ದೊರೆಯುತ್ತಿಲ್ಲ. ಮಂತ್ರಿಮಂಡಳದಲ್ಲಿರತಕ್ಕ ಮಂತ್ರಿಗಳ ಮನೋಭಾವ ಹೆಚ್ಚಾಗಿ ನೆರವೇರುತ್ತದೆಯೇ ಹೊರತು ಪ್ರಜೆಗಳ ಇಷ್ಟಕ್ಕೆ ಹೆಚ್ಚಿನ ಮಾನ್ಯತೆ ಇದರಿಂದ ಸಿಕ್ಕುತ್ತಿಲ್ಲ. ಇವೊತ್ತು ಯಾವ ಇಲಾಖೆಯನ್ನು ತೆಗೆದುಕೊಂಡರೂ ಕೂಡ ದಕ್ಷತೆಯಲ್ಲಿ ದಿವಾಳಿತನ ಎದ್ದು ಕಾಣುತ್ತಿದೆ. ಪೋಲೀಸ್ ಇಲಾಖೆಯಲ್ಲಿ ಕೂಡ ದಕ್ಷತೆಯಲ್ಲಿ ದಿವಾಳಿತನವಿದೆ. ಒಂದೇ ಒಂದು ಉದಾಹರಣೆ ಕೊಡುವುದಾದರೆ, ಪೋಲೀಸ್ ಇಲಾಖೆಯ ಕೆಲವು ಅಧಿಕಾರಿಗಳಿಗೆ ಅನೇಕ ವಿಧವಾದ ಪಾರಿತೋಷಕಗಳನ್ನು ಕೊಟ್ಟಿದ್ದಾರೆ. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳಿಗೆ ಕೂಡ ಇದು ಅನಿರೀಕ್ಷಿತವಾಗಿದೆ. ಲಂಚ ನಿರೋಧ ಇಲಾಖೆಯವರ ಕೈಗೆ ಸಿಕ್ಕಿಹಾಕಿಕೊಳ್ಳುತ್ತೇವೆಂದು ಭಯಪಟ್ಟಿದ್ದ ಕೆಲವು ಅಧಿಕಾರಿಗಳಿಗೂ ಸಹ ರಾಷ್ಟ್ರಾಧ್ಯಕ್ಷರ ಪಾರಿತೋಷಕ ದೊರೆಯುತ್ತಿರುವುದು ನಮಗೆಲ್ಲ ಗೊತ್ತಿದೆ.

ಕೆಲವು ಕಾಮಗಾರಿಗಳನ್ನು ಮರಾಮತ್ತು ಇಲಾಖೆಯವರು ನೆರವೇರಿಸುತ್ತಿರುವುದನ್ನು ನೋಡಿದ್ದೇವೆ. 1955ನೆ ಇಸವಿಯಲ್ಲಿ technical sanction ಆಗದೆ ಇರತಕ್ಕ ಸನ್ನಿವೇಶಗಳು ಎಷ್ಟೋ ಇವೆ. ಒಂದಕ್ಕೊಂದಕ್ಕೂ ತುಲನಾತ್ಮಕವಾಗಿ ನೋಡುವುದಾದರೆ ವಿಧಾನ ಸೌಧವನ್ನು ಕಟ್ಟುವುದಕ್ಕೆ ಯಾವ ನೀತಿ ನಿಯಮಗಳನ್ನನುಸರಿಸುತ್ತಿದ್ದಾರೆ? ಬಡವರಿಗೆ ಅತ್ಯಾವಶ್ಯಕ

ವಾದ, ಜನಗಳ ಉಪಯೋಗಕ್ಕೆ ಬೇಕಾಗಿರತಕ್ಕ ಕೆಲಸಗಳಲ್ಲಿ ಸರ್ಕಾರ ಇಷ್ಟೊಂದು ನಿಧಾನ ಮಾಡುತ್ತಿರುವುದಕ್ಕೆ ಕಾರಣವೇನು ? ಎಂದು ಸರ್ಕಾರದವರನ್ನು ತೀವ್ರವಾಗಿ ಪ್ರಶ್ನೆ ಮಾಡಬೇಕಾಗಿದೆ.

ಇನ್ನೂ ಅನೇಕ ಇಲಾಖೆಗಳಲ್ಲಿ, ಎಷ್ಟೋ ಕ್ಷೇತ್ರಗಳಲ್ಲಿ distress conditions ಇವೆ, ತಕ್ಷಣ ಸರ್ಕಾರದವರು ಅವರಿಗೆ ಪರಿಹಾರವನ್ನು ಕೊಡಬೇಕು ಎಂದು ಸರ್ಕಾರದವರಲ್ಲಿ ಮೊರೆ ಇಟ್ಟರೂ ಕೂಡ ಸರ್ಕಾರದವರು ಇದರ ಕಡೆ ತಮ್ಮ ಗಮನವನ್ನು ಕೊಟ್ಟಂತೆ ಕಾಣಲಿಲ್ಲ.

ಮಾನ್ಯ ಸದಸ್ಯರಾದ ಶ್ರೀಮಾನ್ ವೀರಣ್ಣಗೌಡರು ಮಾತನಾಡುವಾಗ ವಿರೋಧಪಕ್ಷದವರು ತಮ್ಮ ಬೆನ್ನು ಚಪ್ಪರಿಸಿಕೊಂಡು ಸರ್ಕಾರವನ್ನು ಟೀಕಿಸಬಾರದು, ಸುಮ್ಮನೆ ಟೀಕೆ ಮಾಡುವುದರಿಂದ ತಲೆ ತಗ್ಗಿಸಬೇಕಾಗುತ್ತದೆ ಎಂದು ತಿಳಿಸಿದರು. ಆದರೆ ನಾನು ಅವರಿಗೆ ಒಂದಂಶವನ್ನು ತಿಳಿಸಲು ಇಷ್ಟಪಡುತ್ತೇನೆ. ನಾವೇನೂ ಬೆನ್ನು ಚಪ್ಪರಿಸಿಕೊಳ್ಳುತ್ತಿಲ್ಲ. ಸರ್ಕಾರವನ್ನು ಟೀಕೆ ಮಾಡುವಾಗ ಅವರು ಯಾವ ರೀತಿ, ಯಾವ ಮಟ್ಟದಲ್ಲಿ ಟೀಕೆ ಮಾಡುತ್ತಾರೆಯೋ ಅದೇ ರೀತಿ ತಾವು ಕಾರ್ಯದಲ್ಲೂ ತೋರಿಸಬೇಕು. ಅದು ಬಿಟ್ಟು ನುಡಿದಂತೆ ನಡೆ ಇಲ್ಲದೆ ಇರುವುದು ಆತ್ಮದ್ರೋಹ ಮಾಡಿಕೊಂಡಂತಾಗಿ ಅವರು ತಲೆ ತಗ್ಗಿಸಬೇಕಾಗಿದೆ ಎಂದು ಮಾತ್ರ ಹೇಳುತ್ತೇನೆ. ಇಷ್ಟು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎನ್. ಸಿ. ನಾಗಯ್ಯರೆಡ್ಡಿ (ಗೌರಿಬದನೂರು).—ಸ್ವಾಮಿ, ನಾನು ಇಲ್ಲದೆ ಇರುವಾಗ ನೀವು ಭಾಷಣ ಮಾಡುತ್ತೀರಿ, ನಾನು ಇರಬೇಕಾಗಿತ್ತು ಎಂದು ಹೇಳಿದರು. ಅವರು ಇಲ್ಲದಿರುವುದು ನನ್ನ ದೌರ್ಭಾಗ್ಯವೆಂದು ಕಾಣುತ್ತದೆ. ಅವರು ನನ್ನನ್ನು ಕ್ಷಮಿಸುತ್ತಾರೆಂದು ತಿಳಿದುಕೊಂಡಿದ್ದೇನೆ.

ಈ ಅಪ್ರೋಪ್ರಿಯೇಷನ್ ಬಿಲ್‌ಮೇಲೆ ಒಂದೆರಡು ಮಾತುಗಳನ್ನಾಡಬೇಕಾಗಿದೆ. ಈಚೆಗೆ ಇಂಡಿಯಾ ಸರ್ಕಾರದವರು re-classification of works ಎಂದು ಮಾಡಿದ್ದಾರೆ, ಅದರ ಪ್ರಕಾರ 20 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟಿರತಕ್ಕ ಕೆಲಸಗಳು ಕ್ಯಾಪಿಟಲ್ ಅಕೌಂಟಿಗೆ ಹೋಗಬೇಕು ಎಂದು ಮಾಡಿದ್ದಾರೆ. 20 ಸಾವಿರ ರೂಪಾಯಿಗಳಿಗೆ ಕೆಳಪಟ್ಟಿರತಕ್ಕ ಕೆಲಸಗಳೆಲ್ಲವೂ ರೆವೆನ್ಯೂ ಅಕೌಂಟಿಗೆ ಹೋಗಬೇಕೆಂದು ಮಾಡಿದ್ದಾರೆ. ಆದರೆ ಕ್ಯಾಪಿಟಲ್ ಅಕೌಂಟಿಗೆ ಹಾಕಿದರೂ, ರೆವೆನ್ಯೂ ಅಕೌಂಟಿಗೆ ಹಾಕಿದರೂ ಎರಡರಲ್ಲಿಯೂ ಡಿಫಿಸಿಟ್ ಬಡ್ಜೆಟ್ ಇದೆ. ರೆವೆನ್ಯೂ ಅಕೌಂಟಿನಲ್ಲಿ 389 ಲಕ್ಷ ರೂಪಾಯಿಗಳ ಖೋತಾ ಇರುವುದರಿಂದ ಇದರಲ್ಲಿ ಸಣ್ಣ ಕೆಲಸಗಳನ್ನು ಮಾಡುವುದಕ್ಕಾಗಲಿ, ಪ್ರಾಜೆಕ್ಟ್ ಕೆಲಸಗಳನ್ನು ಮಾಡುವುದಕ್ಕಾಗಲಿ ಆಗುವ ಹಾಗಿಲ್ಲ. ಕ್ಯಾಪಿಟಲ್ ಅಕೌಂಟಿನಲ್ಲಿ 14 ಕೋಟಿ ರೂಪಾಯಿಗಳ ಖೋತಾ ಇದೆ. ಅದರಿಂದ ಏನಾದರೂ ಕೆಲಸ ಮಾಡೋಣವೆಂದರೆ ಒಂದು ಕಾಸೂ ಗತಿ ಇಲ್ಲ. ಹೇಗೆ ಕೆಲಸಗಳನ್ನು ಮಾಡುತ್ತಾರೆನ್ನುವುದು ನನಗೆ ಆಶ್ಚರ್ಯವಾಗಿದೆ. ಈ ಸರ್ಕಾರದವರು ಹೀಗೆ ದುಡ್ಡಿಲ್ಲದೇ ಏನು ಮಾಡುತ್ತಾರೆನ್ನುವುದೇ ತಿಳಿಯದಾಗಿದೆ. ಸಾಲ ಮಾಡೋಣವೆಂದರೆ ಅದಕ್ಕೂ ಒಂದು ಮಿತಿ ಇರಬೇಕು. ಮಗ ಪೋಲಿಯಾದರೆ ತಂದೆ ಕಬ್ಬಿಣದ ಪೆಟ್ಟಿಗೆಯ ಬೀಗ ಕೊಡುತ್ತಾನೆಯೇ ? ಸರ್ಕಾರ ಪೋಲಿಯಾದರೆ ರೈತರು ದುಡ್ಡು ಕೊಡುತ್ತಾರೆಯೇ ? ಖಂಡಿತ ಕೊಡುವುದಿಲ್ಲ. ಈಗ 15ಕೋಟಿ ರೂಪಾಯಿಗಳ ಸಾಲ ಮಾಡಬೇಕೆಂದಿದ್ದಾರೆ. ರೈತರಿಂದ ಇದು ದೊರೆಯುವುದು ಬಹಳ ಕಷ್ಟ. ಹಣ ಖರ್ಚು ಮಾಡುವುದನ್ನು ನೋಡಿದರೆ ಖಂಡಿತವಾಗಿ ಯಾರಿಗೂ ಗೌರವ ಬರುವುದಿಲ್ಲ. ಇದಕ್ಕೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ. Parks and gardens ಎಂಬ ಒಂದು new item of expenditure ಹಾಕಿದ್ದಾರೆ. ದುಡ್ಡಿಲ್ಲವೆಂದು ಹೇಳುವಾಗ ಇದಕ್ಕೆ ಯಾಕೆ ಇಷ್ಟು ದುಡ್ಡು ? Parks and minor gardensನಲ್ಲಿ 5,75,000 ರೂಪಾಯಿಗಳನ್ನು non-recurring charges ಗಾಗಿ ಒದಗಿಸಿದ್ದಾರೆ. 1954-55ರಲ್ಲಿ 9,771 ರೂಪಾಯಿ ಖರ್ಚಾಗಿದೆ. 1955-56ರಲ್ಲಿ ಒಂದು ಲಕ್ಷ ರೂಪಾಯಿ ಮಂಜೂರಾಗಿದ್ದು 95 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಈ ವರ್ಷ ಲಾಲ್‌ಬಾಗ್‌ನಲ್ಲಿ ಖರ್ಚು ಮಾಡಲು ಐದು ಲಕ್ಷ ಆರು ಸಾವಿರ ರೂಪಾಯಿಗಳನ್ನು ತೋರಿಸಿದ್ದಾರೆ. ಇಷ್ಟು ಮೊತ್ತ ಯಾಕೆ ? ಇದೆಲ್ಲವನ್ನೂ ಸದ್ವಿನಿಯೋಗ ಮಾಡುತ್ತಾರೆಯೋ ? ಇದರ ಜೊತೆಗೆ new item ಏಕೆ ತೆಗೆದುಕೊಳ್ಳಬೇಕಾಗಿತ್ತು ? ಇದರಲ್ಲಿ ಇನ್ನೂ ಒಂದು ವಿಷಯವಿದೆ. ವಿಧಾನಸೌಧದಲ್ಲಿ ಒಂದು ಬೋರ್‌ವೆಲ್ ಹಾಕಬೇಕಂತೆ. ಅದಕ್ಕೆ parks and gardensನಲ್ಲಿ ಖರ್ಚು ಮಾಡಲು ಹಣವನ್ನೊದಗಿಸಿದ್ದಾರೆ. ಲೆಕ್ಕ ಹಾಕಿ ನೋಡಿದರೆ ಹಣವನ್ನು ಮನಸ್ವಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ಹೀಗೆಲ್ಲ ಮಾಡಿದ್ದಾರೆಂದು ಹೇಳಿದರೆ ಖಂಡಿತವಾಗಿಯೂ ತಪ್ಪಾಗಲಾರದು. ಈಗಾಗಲೇ ಶ್ರೀಮಾನ್ ಇಮಾಂ ಸಾಹೇಬರು ಒಂದು ವಿಷಯವನ್ನು ಹೇಳಿದರು, Agricultural demonstration and seed distribution ಎನ್ನುವುದರಲ್ಲಿ 14 ಲಕ್ಷ ರೂಪಾಯಿಗಳನ್ನು write off ಮಾಡಿದ್ದಾರೆ ಎಂದು. ಯಾಕೆ ಈ ರೀತಿ ಮಾಡಬೇಕು ? ಯಾರ ಮನೆ ಗಂಟು ಎಂದು ಹೀಗೆ ಮಾಡಿದ್ದಾರೆ ? ಇದರಲ್ಲಿ ಏನಾಗಿದೆ ಎಂದರೆ, ಹಿಂದೆ ಸಬ್ಸಿಡಿ ಕೊಟ್ಟು ಎಲ್ಲಾ ಮಾಡುತ್ತಿದ್ದರು. ಆಗ ತಿಂದುಹಾಕಿರುವುದನ್ನೆಲ್ಲ ಇದರಲ್ಲಿ ಸೇರಿಸಿದ್ದಾರೆಂದು ಕಾಣುತ್ತದೆ. 'ಏಟಿಲೋ ವೇಸಿನಾ ಎಂಚಿವೇಯಿ' ಎಂದು ತೆಲುಗಿನಲ್ಲಿ ಒಂದು ಗಾದೆ ಹೇಳುತ್ತಾರೆ. ಇದರ ಅರ್ಥ ಹೊಳೆಯಲ್ಲಿ ಹಾಕಿದರೂ ಕೂಡ ಎಣಿಸಿ ಹಾಕಬೇಕು ಎಂದು. ಇದರಲ್ಲಿ ಇನ್ನೂ ಒಂದು ವಿಷಯವಿದೆ. ಮುಖ್ಯಮಂತ್ರಿಗಳ ತಮ್ಮಂದಿರಾದ ಶ್ರೀ ವಿ. ನಂಜಪ್ಪನವರು ಸುಮಾರು ಮೂರು ಲಕ್ಷ ರೂಪಾಯಿಗಳನ್ನು ಡಿಪೋನಲ್ಲಿ ತಿಂದುಹಾಕಿದ್ದಾರೆ. ಅದನ್ನು ಸೇರಿಸಿ, ಈಚೆಗೆ ತಿಂದುಹಾಕಿರುವುದನ್ನೆಲ್ಲ ಸೇರಿಸಿ write off ಮಾಡಬೇಕೆಂದಿದ್ದಾರೆ. ಒಬ್ಬ ಮನುಷ್ಯನು ತಿಂದುಹಾಕಿರುವುದನ್ನು write off ಮಾಡುವುದಕ್ಕೋಸ್ಕರ ಸರ್ಕಾರಕ್ಕೆ 14 ಲಕ್ಷ ರೂಪಾಯಿ ಲುಕ್ಸಾನಾಗಬೇಕು. ಇದು ಪೋಲಿ ಮಗನ ನೀತಿಯೋ ಅಥವಾ ಬೇರೆಯೋ . . . .

Mr. SPEAKER.—May I request Hon'ble Member not to make any personal references but to speak on the Appropriation Bill ?

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ನಾನು ಪೋಲಿ ಮಗನ ವಿಷಯ ಹೇಳಿದರೆ ಇವರಿಗೆ ಯಾಕೆ ಕೋಪ ಬರಬೇಕು ?

ಎರಡನೆಯದು, ಸರ್ಕಾರದ ದುಡ್ಡು ಎಂದರೆ ಪ್ರಜೆಗಳದು Excise Departmentನಲ್ಲಿ ಎಂದೂ ರೆಮಿಷನ್ ಕೊಟ್ಟಿಲ್ಲ. ಲೆಕ್ಕಗಳನ್ನು ತೆಗೆದು ನೋಡಿದರೆ ಎಷ್ಟೋ ಲಕ್ಷ ರೂಪಾಯಿಗಳ ರೆಮಿಷನ್ ಕೊಟ್ಟಿದ್ದಾರೆ. ಇದಕ್ಕೆ ವಿವರಣೆ ಕೊಡಬೇಕು. ಯಾವುದೋ

(ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.)

ಒಂದು ಪಾರ್ಟ ಕ್ಲರ್ಕ್ ಇರಬಹುದು. ಒಂದು ವರ್ಷದ ಮೇಲೆ ಸುಮಾರು ಲಕ್ಷಾಂತರ ರೂಪಾಯಿಗಳ ರೆಮಿಷನ್ ಕೊಟ್ಟಿದ್ದಾರೆ. ಬರತಕ್ಕ ಆದಾಯ ನೋಡಿದರೆ ಕಡಿಮೆಯಾಗಿದೆ. ಆದರೆ ಇವರು ಮಾಡುತ್ತಿರುವ ಖರ್ಚನ್ನು ನೋಡಿದರೆ reckless ಆಗಿದೆ. ನಾನು ಒಂದು ವಿಷಯ ಹೇಳುತ್ತೇನೆ. ರೇಸ್‌ಕೋರ್ಸ್‌ನಲ್ಲಿ 15 ಲಕ್ಷ ರೂಪಾಯಿ ಆದಾಯ ಬರುತ್ತಿತ್ತು. ಸರಿಯಾದ ಕಾರಣಗಳಿಗಾಗಿ ರೇಸ್‌ಗಳನ್ನು ನಿಲ್ಲಿಸಬೇಕೆಂದು ಹೇಳಿದ್ದರೆ ಒಪ್ಪಿಕೊಳ್ಳುತ್ತಿದ್ದೆವು. ಮೈಸೂರಿನಲ್ಲಿ ಮಾತ್ರ ರೇಸುಗಳನ್ನು ನಡೆಸುವುದು, ಇಲ್ಲಿ ಮಾತ್ರ ಬೇಡವೆಂದು ಹೇಳುವುದು—ಯಾಕೆ ಹೀಗೆ ಹೇಳುತ್ತಾರೆಂಬುದು ಅರ್ಥವಾಗುವುದಿಲ್ಲ. ಸರ್ಕಾರದವರು ನಮ್ಮ ರೂಲ್ಸ್ ಅನುಸರಿಸಿ ಎಂದು ಹೇಳುತ್ತಿದ್ದಾರೆ. ಇವರ ರೂಲ್ಸ್ ಏನೆಂದು ನೋಡಿದರೆ ಮುಖ್ಯಮಂತ್ರಿಗಳು ವೈಸ್-ಪೇಟ್ರನ್ ಆಗಿ ಇರಬೇಕಂತೆ, ಸ್ಟೂವರ್ಡ್‌ಗಳು ನಾಲ್ಕು ಜನ ಇವರೇ ಇರಬೇಕಂತೆ. ಅದು ಒಂದು ಪ್ರೈವೇಟ್ ಕ್ಲಬ್. ಅದರಲ್ಲಿ ಇವರ ಆಡಳಿತ ವೇಕೆ? ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಎಷ್ಟು ಬೇಕಾದರೂ ಲೆಕ್ಕಗಳನ್ನು ತರಿಸಿ ತನಿಖೆ ಮಾಡುವುದಕ್ಕೆ ಅಧಿಕಾರವಿದೆ. ಈಗಾಗಲೇ ಸರ್ಕಾರದ ಪೈಕಿ ಮೂರು ಜನ ಸ್ಟೂವರ್ಡ್‌ಗಳಿದ್ದಾರೆ. ಅದರ ಮೇಲೆ observer ಎಂದು 100 ರೂಪಾಯಿಗಳ ಸಂಬಳದ ಮೇಲೆ ಒಬ್ಬರನ್ನು ಮಾಡಿದ್ದಾರೆ. ಲೆಕ್ಕಗಳನ್ನು ತನಿಖೆ ಮಾಡಿ ಸರಿಯಾದ ರೀತಿಯಲ್ಲಿಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ರೇಸ್ ಕ್ಲಬ್‌ನಲ್ಲಿರುವವರೆಲ್ಲ ದೊಡ್ಡ ದೊಡ್ಡ ಮನುಷ್ಯರು. ಇಷ್ಟೆಲ್ಲ ಇದ್ದರೂ ಕೂಡ ಸರ್ಕಾರದವರು ಯಾಕೆ ಈ ಕ್ಲಬ್ಬಿನ ಆಡಳಿತದಲ್ಲಿ interfere ಆಗಬೇಕು? ಇದು ನನಗೆ ಅರ್ಥವಾಗುತ್ತಿಲ್ಲ. 15 ಲಕ್ಷ ರೂಪಾಯಿಗಳು ಯಾರ ಒಡವೆ? ಇಷ್ಟು ಆದಾಯ ಸರ್ಕಾರಕ್ಕೆ ಯಾಕೆ ಹೋಗಬೇಕು? ಬರುವ ದುಡ್ಡು ನೋಡಿದರೆ ಈ ರೀತಿಯಾಗಿದೆ. ಬಂದಿರತಕ್ಕ ದುಡ್ಡನ್ನು ನೋಡಿದರೆ ಮನಸ್ಸು ಬಂದಂತೆ reckless ಆಗಿ ಖರ್ಚು ಮಾಡುತ್ತಿದ್ದಾರೆ. ಮೂರು ಕೋಟಿ 85 ಲಕ್ಷ ರೂಪಾಯಿ revenue deficit ಮತ್ತು 14 ಕೋಟಿ ರೂಪಾಯಿ capital deficit. ಹೀಗಿರುವಾಗ ದುಡ್ಡು ಬರುವುದಕ್ಕೆ ಆಸಕ್ತಿವಹಿಸಿ ಬಂದ ದುಡ್ಡನ್ನು ನ್ಯಾಯವಾಗಿ ಖರ್ಚು ಮಾಡಿದರೆ, ದೇಶದ ಹಿತದೃಷ್ಟಿಯಿಂದ ಖರ್ಚು ಮಾಡಿದರೆ ಎಷ್ಟೋ ಚೆನ್ನಾಗಿರುತ್ತದೆ.

11-30 A. M.

ಇನ್ನೊಂದು ವಿಷಯ ಹೇಳಬಯಸುತ್ತೇನೆ. ಅದು ಬಹಳ ಚೆನ್ನಾಗಿದೆ. ರೆಕ್ಟಿಫೈಡ್ ಸ್ಪಿರಿಟ್ ಎಂಬುದನ್ನು 1,800 ಗ್ಯಾಲನ್‌ನಷ್ಟು ಔಷಧಿ ಮಾಡುವುದಕ್ಕೆ ಟಾನಿಕ್ ಮಾಡುವುದಕ್ಕೆ ನಾಲ್ಕು ಜನರಿಗೆ ಕೊಡುತ್ತಾರೆ. ಅದರಲ್ಲಿ ಶೇಕಡ 98 ಭಾಗ ಆಲ್ಕೋಹಾಲ್ ಇದೆ. ಅದನ್ನು ತೆಗೆದುಕೊಂಡು ಜನರಿಗೆ ಕುಡಿಯುವುದಕ್ಕೆ ಒದಗಿಸುತ್ತಿದ್ದಾರೆ. ಬೀರ್‌ನಲ್ಲಿ ಶೇಕಡ ಐದರಷ್ಟು ಆಲ್ಕೋಹಾಲ್ ಇರುತ್ತದೆ. ಅಷ್ಟಿದ್ದರೇ ಅಲ್ಲಿಗೆ ಅದನ್ನು ಕುಡಿಯುವವರಿಗೆ ತಲೆ ನಿಲ್ಲುವುದಿಲ್ಲ. ಅಂಥಾದ್ದರಲ್ಲಿ ಶೇಕಡ 98 ಭಾಗ ಆಲ್ಕೋಹಾಲ್ ಇರುವುದನ್ನು ಬಾಟಲುಗಳಿಗೆ ಹಾಕಿ ದೇಶದಲ್ಲಿ ಮಾರಾಟ ಮಾಡುತ್ತಿದ್ದಾರೆ. ಅದನ್ನು ಕುಡಿದರೆ ಗತಿಯೇನು? ಒಂದು ಗ್ಯಾಲನ್ ರೆಕ್ಟಿ ಫೈಡ್ ಸ್ಪಿರಿಟ್ಟಿಗೆ ಐದು ರೂಪಾಯಿಗಳ ಬೆಲೆಯಿದೆ. ಅದನ್ನು ತೆಗೆದುಕೊಂಡು ಹೋಗಿ ಬಾಟಲುಗಳಿಗೆ ಹಾಕಿ ಬಾಟಲ್ ಒಂದಕ್ಕೆ ರೂ. 1-4-0 ನಂತೆ ಮಾರುತ್ತಿದ್ದಾರೆ. ಅದಕ್ಕೆ 55 ರೂಪಾಯಿಗಳು ದೊರೆಯುತ್ತವೆ, ಹೀಗೆ ಬಹಳ ಅನ್ಯಾಯವಾಗುತ್ತಿದೆ ಎಂದು ಹೋದ ಸಲ ಅಸೆಂಬ್ಲಿಯಲ್ಲೇ ಹೇಳಿದೆ. ಈ ಪ್ರಶ್ನೆ ಪಕ್ಷದಲ್ಲೂ ಬಂತು. ಆಗ ಇದು ದುರುಪಯೋಗವಾಗುತ್ತಿದೆ, ಡಿಸೆಂಬರಿನಿಂದ ತಕ್ಷಣ ಇದನ್ನು ನಿಲ್ಲಿಸಬೇಕೆಂದು ನಿರ್ಣಯ ಮಾಡಿದರು, ಆದರೆ ಅದರಂತೆ ನಿಲ್ಲಿಸಲಿಲ್ಲ. ಪುನಃ ಕೊಡುತ್ತಾ ಬಂದರು. ಇದಕ್ಕಾಗಿ ಲಂಚನಿರೋಧ ಶಾಖೆಯ ಡೈರೆಕ್ಟರನ್ನು ನೇಮಕಮಾಡಿದರು. ಅವರು ಎಕ್ಸೈಜ್ ಅಥಾರಿಟಿ ಬೇಕೆಂದು ಕೆಲವು ದಿವಸ ಕಾದರು. ಆಮೇಲೆ ಆಂಟಿ ಕರಪ್ಷನ್‌ನವರು ತಪ್ಪಿತಸ್ಥರನ್ನು ಹಿಡಿದು ಶ್ರೀ ನಾಗಯ್ಯರೆಡ್ಡಿಯವರು ಹೇಳಿರುವುದೆಲ್ಲಾ ನಿಜ, ಅನ್ಯಾಯವಾಗುತ್ತಿದೆ, ಪಾನನಿರೋಧ ಎಂದು ಮಾಡುವುದಕ್ಕೆ ಅಪಘಾತ ತಂದಿದೆ, ದೇಶದಲ್ಲೆಲ್ಲಾ ಮಾರುತ್ತಿದ್ದಾರೆ ಎಂದು ತಿಳಿಸಿದರು. ಆಮೇಲೆ ಲಂಚನಿರೋಧ ಇಲಾಖಾ ಸಚಿವರು ಬಹಳ ಅನ್ಯಾಯವಾಗುತ್ತಿದೆ, ತಕ್ಷಣ ಇದನ್ನು ನಿಲ್ಲಿಸಿ ಎಂದು ಆರ್ಡರು ಮಾಡಿದರು. ಅದು ಎಕ್ಸೈಜ್ ಇಲಾಖಾ ಸಚಿವರಿಗೆ ಹೋಯಿತು; ಅವರು ಕೇರ್ ಮಾಡಲಿಲ್ಲ, ಈಗಲೂ ಕೊಡುತ್ತಿದ್ದಾರೆ. ಒಬ್ಬ ಸಚಿವರು ಕೂಡದೆಂದು ಹೇಳಿದ್ದಾರೆ. ಇನ್ನೊಬ್ಬರು ಅದಕ್ಕೆ ಗಮನ ಕೊಡಲಿಲ್ಲ. ಇದು ಸರಿಯೆ! ಬೇಕಾದರೆ ಇದಕ್ಕೆ ಒಂದು ಸಮಿತಿ ಮಾಡಿ, ಇದು ನಿಜವೆ, ಸುಳ್ಳೆ ಎಂದು ತಿಳಿದುಕೊಂಡು ತಮ್ಮ ಗೌರವ, ಪ್ರತಿಷ್ಠೆಗಳನ್ನು ಉಳಿಸಿಕೊಳ್ಳಬೇಕಾದುದು ಸರ್ಕಾರದ ಕರ್ತವ್ಯ. ಇದರಲ್ಲೇನಾದರೂ ಸ್ವಲ್ಪ ಲೋಪವಿದ್ದರೆ ನಾನು ಜವಾಬ್ದಾರನಾಗುತ್ತೇನೆ. ಹೀಗೆ ಮಾಡುವುದು ಖಂಡಿತ ಯಾವ ಸರ್ಕಾರಕ್ಕೇ ಆಗಲಿ ಗೌರವ ತರತಕ್ಕುದಲ್ಲ. ಕಾಂಗ್ರೆಸ್ ಧ್ಯೇಯಕ್ಕನುಗುಣವಾಗಿ ನಡೆದುಕೊಳ್ಳಬೇಕು. ಕಾಂಗ್ರೆಸ್ಸಿನಲ್ಲಿ ಸತ್ಯವಂತರೂ ದೇಶಪ್ರೇಮಿಗಳೂ ಅನೇಕರಿದ್ದಾರೆ. ಅದರಿಂದಲೇ ಕಾಂಗ್ರೆಸ್ಸಿನವಗೆ ಓಟುಗಳು ಸಿಕ್ಕುತ್ತಿವೆ; ಅದಿಲ್ಲದಿದ್ದರೆ ಸಿಕ್ಕುತ್ತಿರಲಿಲ್ಲ. ಸತ್ಯ ಪರಿಪಾಲನೆಯನ್ನು ಗಾಂಧೀಜಿಯವರು ಒತ್ತಿ ಹೇಳಿದರು. ಕಾಂಗ್ರೆಸ್ ಧ್ಯೇಯವನ್ನು ಗಮನಿಸಿ ದೇಶದ ಹಿತದೃಷ್ಟಿಯಿಂದ ಇಂಥ ಕೆಲಸಗಳಿಗೆ ಇನ್ನು ಮುಂದೆ ಅವಕಾಶ ಕೊಡುವುದಿಲ್ಲವೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಅಧ್ಯಕ್ಷರೆ, ಶ್ರೀ ರಾಮಯ್ಯನವರು ಬೆಂಗಳೂರು ಸ್ಲಮ್ಸ್ ವಿಚಾರ ಹೇಳಿದ್ದಾರೆ. ಅನೇಕ ಸದಸ್ಯರು ಕೋಪ ಮಾಡಿಕೊಂಡರು; ಅದು ಸರಿಯಲ್ಲ. ಏಕೆಂದರೆ ಶ್ರೀ ರಾಮಯ್ಯನವರು ಬಿಟ್ಟಿ ಕೊಡಿ ಎಂದು ಹೇಳಲಿಲ್ಲ. ಇಂಥ ರಾಜಧಾನಿಯಲ್ಲಿ ನೂರು ಸ್ಲಮ್ಸ್ ಇವೆ, ವರ್ಷಕ್ಕೆ ಇಷ್ಟು ಎಂದು ಸಾಲವಾದರೂ ಕೊಟ್ಟು ಸ್ಲಮ್ಸ್ ಶುಚಿ ಮಾಡಬೇಕಾದದ್ದು ಕರ್ತವ್ಯ, ಹಾಗೆ ಮಾಡಿದ್ದರೆ ಒಳ್ಳೆಯದು, ಇಲ್ಲದಿದ್ದರೆ ದೊಡ್ಡ ಪಟ್ಟಣ ಕೆಟ್ಟುಹೋಗುತ್ತದೆ ಎಂದು ಹೇಳಿದರು. ಇದು ಸೂಕ್ತವಾಗಿದೆ.

ಎರಡನೆಯದಾಗಿ ಅಧಿಕಾರಿಗಳ ಸಂಬಳ ವಿಮರ್ಶೆ ಮಾಡುವ ವಿಚಾರವನ್ನು ಶ್ರೀ ರಾಮಯ್ಯನವರು ಹೇಳಿದರು. ಈ ವಿಚಾರದಲ್ಲಿ ನನ್ನ ಸಲಹೆಯನ್ನು ಆಗಲೇ ಹೇಳಿದ್ದೇನೆ. ಎಲ್ಲಾ ಅಧಿಕಾರಿಗಳಿಗೂ ಸಂಬಳ ಹೆಚ್ಚಿಸಲು ಸುಮಾರು ಎರಡು ಕೋಟಿ ರೂಪಾಯಿಗಳು ಬೇಕೆಂದು ಹೇಳಿದರು. ಅಷ್ಟು ಖರ್ಚು ಮಾಡುವುದು ಬೇಡ, ಉಪಾಧ್ಯಾಯರಿಗೆ ಮಾತ್ರ ಹೆಚ್ಚಿಸಿ ಎಂದು ನಾನು ಹೇಳಿದೆ. ಈ ಬಗ್ಗೆ ಐದು ವರ್ಷದ ಅಥವಾ ಹತ್ತು ವರ್ಷದ ಯೋಜನೆ ಹಾಕಿ ಈ ವರ್ಷ ಉಪಾಧ್ಯಾ

ಯರಿಗೆ, ಮುಂದಿನ ವರ್ಷ ನಾನ್‌ಗೆಜೆಟೆಡ್ ಆಫೀಸರುಗಳಿಗೆ ಹೀಗೆ ಹೆಚ್ಚಿಸುತ್ತಾ ಹೋದರೆ ಅನುಕೂಲ. ಉಪಾಧ್ಯಾಯರಿಗೆ ಸಂಬಳ ಹೆಚ್ಚಿಸಿದರೆ ಶೇಕಡ 75 ಭಾಗ ಕೇಂದ್ರದಿಂದ ಕೊಡುವಾಗ ಶೇಕಡ 25 ಭಾಗ ನಮ್ಮ ಸರ್ಕಾರ ಒದಗಿಸದಿದ್ದರೆ ಇನ್ನೇನು ತಾನೆ ಮಾಡಲು ಸಾಧ್ಯವಾದೀತು ?

ಆಮೇಲೆ ಆಹಾರದ ವಿಚಾರ. ಬೆಂಗಳೂರು ನಗರದಲ್ಲಿ ದಿವಸ ದಿವಸಕ್ಕೂ ಆಹಾರ ಪದಾರ್ಥಗಳ ಬೆಲೆ ಏರುತ್ತಿದೆ. ರೈತರಿಂದ ಅಕ್ಕಿ ಮೊದಲಾದವನ್ನು ವರ್ತಕರು ಕಡಮೆ ಬೆಲೆಗೆ ಕೊಂಡು ಇಲ್ಲಿ ಬಹಳ ಹೆಚ್ಚು ಬೆಲೆಗೆ ಮಾರುತ್ತಿದ್ದಾರೆ. ರಾಗಿ ರೂಪಾಯಿಗೆ 3-4 ಸೇರು ಕೂಡ ಸಿಕ್ಕುವುದಿಲ್ಲ. ಅಕ್ಕಿ $1\frac{1}{2}$ ಸೇರಾಗಿದೆ. ಇದರಿಂದ ರೈತರಿಗೂ ಅನುಕೂಲವಿಲ್ಲ, ಉಪಯೋಗಿಸುವವರಿಗೂ ಅನುಕೂಲವಿಲ್ಲ. ಈ ವಿಚಾರವಾಗಿ ಕೇಂದ್ರದಲ್ಲಿ ಆಹಾರ ಪದಾರ್ಥ ಶೇಖರಿಸಲ್ಪಟ್ಟಿದೆ, ಜನರಿಗೆ ಒದಗಿಸುತ್ತೇವೆ ಎಂದು ಬೆಜವಾಡದಲ್ಲಿ ಶ್ರೀ ಕೃಷ್ಣಪ್ಪನವರು ಹೇಳಿದ್ದಾರೆ. ಅದೇ ರೀತಿ ಬೆಂಗಳೂರು ನಗರ, ಮೈಸೂರು, ಕೆ. ಜಿ. ಎಫ್. ಇಂಥ ಕಡೆಗಳಿಗೆ ಸರ್ಕಾರದವರು ಆಹಾರವನ್ನೊದಗಿಸಿ ಜನರಿಗೆ ಹಂಚಬೇಕು; ಗೋಡೌನ್ಸ್‌ನಲ್ಲಿ ಆಹಾರಧಾನ್ಯಗಳನ್ನು ಶೇಖರಿಸಿ ಜನರಿಗೆ ಕಡಮೆ ಬೆಲೆಯಲ್ಲಿ ಒದಗಿಸಬೇಕು. ಇಲ್ಲದಿದ್ದರೆ ಈಗ ಸುಗ್ಗಿ ಕಾಲದಲ್ಲೇ ಅಕ್ಕಿ ರೂಪಾಯಿಗೆ ಒಂದೂವರೆ ಸೇರಾಗಿರುವುದು ಇನ್ನೊಂದು ತಿಂಗಳಲ್ಲಿ ಒಂದು ಸೇರಾಗುತ್ತದೆ. ದರ ಇಳಿಯುವುದಿಲ್ಲ, ಬಡವರಿಗೆ, ಕೂಲಿಗಾರರಿಗೆ ತೊಂದರೆಯಾಗುತ್ತದೆ, ಆದ್ದರಿಂದ ಸರ್ಕಾರದವರು ಆದಷ್ಟು ಬೇಗ ರೈತರಿಗೆ ಪದಾರ್ಥಗಳು ಅಗ್ಗದಲ್ಲಿ ಸಿಕ್ಕುವ ಹಾಗೆ ಮಾಡಬೇಕು. ರೂಪಾಯಿಗೆ ಎರಡು ಸೇರಾದರೂ ಅಕ್ಕಿ ಸಿಕ್ಕದಿದ್ದರೆ ಹೇಗೆ ಜೀವನ ಮಾಡುವುದು ? ರೈತರಿಗೂ ಸಾರ್ವಜನಿಕರಿಗೂ ಅನುಕೂಲವಿಲ್ಲದೆ ವರ್ತಕರಿಗೆ ಮಾತ್ರ ಈಗ ಅನುಕೂಲವಾಗುತ್ತಿದೆ. ಇದನ್ನು ತಪ್ಪಿಸಬೇಕಾದದ್ದು ಮುಖ್ಯವಾದ ಕರ್ತವ್ಯ.

ಇನ್ನೊಂದು ವಿಚಾರ, ನಮ್ಮ ಬೆಂಗಳೂರು ನಗರದಲ್ಲಿ ನೀರನ್ನೊದಗಿಸಲು ಒಂದು ಕಾರ್ಯಕ್ರಮವಿದೆ. ಸರ್ಕಾರದವರು 79 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಬೇಕಾದಷ್ಟು ನೀರು ಸಿಕ್ಕುತ್ತದೆ ಎಂದು ಹೇಳುತ್ತಾರೆ. ಒಂದು ಮೋಟಾರು ಕೆಟ್ಟು ಸುಮಾರು ನಾಲ್ಕೈದು ವರ್ಷವಾಯಿತು, ಅಷ್ಟು ದಿವಸದಿಂದ ಅದನ್ನು ರೀಪ್ಲೇಸ್ ಮಾಡಿ ಸಾಕಾದಷ್ಟು ನೀರನ್ನು ಪಂಪು ಮಾಡುತ್ತಿಲ್ಲ. ಕೇಳಿದರೆ ಅಮೇರಿಕಾಕ್ಕೆ ಇಂಡೆಂಟ್ ಮಾಡಿದ್ದೇವೆ, ಮೋಟಾರ್ ಬಂದಿಲ್ಲ, ಆದ್ದರಿಂದ ನೀರಿಗೆ ಸ್ವಲ್ಪ ತೊಂದರೆಯಾಗಿದೆಯೆಂದು ಹೇಳುತ್ತಾರೆ. ಈಗಲಾದರೂ ಸರ್ಕಾರದವರು ಇದು ಜರೂರಾದ ವಿಚಾರವೆಂಬುದನ್ನು ಗಮನಿಸಿ ಬೇಗ ಬರೆದು ಮೋಟಾರ್ ತರಿಸಿ ನೀರು ಸಾಕಾದಷ್ಟು ಜಾಗ್ರತೆ ಸಿಕ್ಕುವ ಹಾಗೆ ಏರ್ಪಾಡು ಮಾಡಬೇಕು. ಸಿವಿಲ್ ಸ್ಟೇಷನ್ ಕಾರ್ಪೊರೇಷನ್ ವಶದಲ್ಲಿದೆ, ಸಿಟಿಯೆಲ್ಲಾ ಸರ್ಕಾರದ ವಶದಲ್ಲಿದೆ. ಇದು ಅನ್ಯಾಯ, ಸರ್ಕಾರದವರೇ ಸಿವಿಲ್ ಸ್ಟೇಷನ್ ಸಹ ವಹಿಸಿಕೊಳ್ಳಬೇಕು ಅಥವಾ ಸಿಟಿ ಮತ್ತು ಸಿವಿಲ್‌ಸ್ಟೇಷನ್ ಎರಡನ್ನೂ ಕಾರ್ಪೊರೇಷನ್ನಿಗೆ ವಹಿಸಿ ಎರಡು ಕಡೆಯೂ ನೀರು ಸಾಕಾದಷ್ಟು ದೊರೆಯುವ ಏರ್ಪಾಡು ಮಾಡಬೇಕು. ಎಷ್ಟೋ ಕಡೆ ಸರಿಯಾಗಿ ನೀರು ಸರಬರಾಯಾಗುತ್ತಿಲ್ಲ. ಈ ಅನುಭವ ಅನೇಕರಿಗಿದೆ. ಮಧ್ಯಾಹ್ನದ ವೇಳೆ ನೀರೇ ಸಿಕ್ಕುವುದಿಲ್ಲ. ಆದ್ದರಿಂದ ಸರ್ಕಾರದವರು ಈ ವಿಚಾರಕ್ಕೆ ಬಹಳ ಹೆಚ್ಚಿನ ಗಮನ ಕೊಡಬೇಕಾಗಿದೆ. ವಾಟರ್ ವರ್ಕ್ಸ್ ಕಾರ್ಪೊರೇಷನ್ನಿಗೆ ಸೇರದೆ ಸರ್ಕಾರದ ಕೈಯಲ್ಲೇ ಇರುವುದರಿಂದ ನೀರು ಸಲೀಸಾಗಿ ಜನರಿಗೆ ಸಿಕ್ಕುವ ಹಾಗೆ ಮಾಡಬೇಕಾದದ್ದು ಸರ್ಕಾರದ ಕರ್ತವ್ಯವಾಗಿದೆ.

*Sri L. SIDDAPPA (Chennagiri).—Under the Constitution it is the Legislative Assembly which is the supreme authority in financial matters. In a way the Legislature exercises authority by the Hon'ble Members of the House offering their remarks in the course of general discussion on the Budget and also when various Demands are discussed here. But very effective control is exercised by the committees of this House like the Public Accounts Committee and the Estimates Committee. It was the practice in the previous session. . . . (*Sri T. MARIAPPA.—All through*)—even when the old Representative Assembly was functioning—for the Government to allot certain days for the discussion of the Public Accounts Committee Report and subsequently the Estimates Committee Report. (*Interruption*) I do not know whether both the Committees have been functioning—either the Public Accounts Committee or the Estimates Committee has not been functioning at all. It is only about two years ago we received one or two reports of the Estimates Committee, but since then we have not been having any reports of the Estimates Committee and it is not known whether the Estimates Committee has been functioning at all. Anyway, it is my earnest appeal to the Government to afford occasions to the House to discuss the Public Accounts Committee Report and also the Estimates Committee Report. When the late Speaker Sri Mavalankar inaugurated the Estimates Committee of the Parliament, he has emphasised the importance of the Estimates Committee and he has shown that the Parliament or the State Legislatures can exercise effective control over the expenditure and over the finance of the State or the Union Government as the case may be.

One other thing I would like to stress on this occasion is, I think it is Sri Pattabhiraman who made a suggestion to Government that Government may take vote on account and afford an opportunity to the House to go into

(SRI L. SIDDAPPA)

the budget estimates in detail. I believe the Leader of the House made a sort of an assurance to this House that he would consider the question of adopting that procedure. I think it is very necessary in the interests of the effective control of the finance of the State that that procedure is adopted. We see in some of the spending departments, very heavy amounts are being spent. For instance, the Public Works Department is spending nearly Rs. 6-7 crores; likewise the Education Department and similarly the Electricity Department. Unless there is very close scrutiny and effective control over the expenditure, it is likely that the funds allotted to the various spending departments are misused or are not properly used. So my appeal to the Government is that they should give to the House an opportunity to discuss the reports of the various committees.

Another thing to which I would like to draw the attention of the Government is, when the House met last time they distributed copies of the Draft Proposals of the Second Five-Year Plan relating to the Mysore State. We expected that they would give an opportunity to the House to discuss the various proposals made therein. (*Sri T. MARIAPPA.—Discussion was also initiated.*) I believe Sri Rachiah spoke for some time and it was presumed that it would be continued here in this Assembly session because in a way it is also closely related to the finance of the State. My appeal to the Government is that they should even now—it is not late—afford an opportunity to this House to discuss the draft proposals of the Second Five-Year Plan.

Regarding certain allotments made in the Public Works Department, I would like the Hon'ble Minister for Public Works to kindly note these things. There are certain very heavy amounts allotted in the Budget. For instance in the Budget of the current year, for the year 1955-56, there are certain amounts allotted for various works. The Department perhaps will ask for these grants with the hope that they will obtain sanction for the various works mentioned therein. I may bring to his notice one or two instances. In Holalkere taluk of Chitaldrug District, there is a proposal to construct a tank at Kagalkere village. You have made some provision for it, but the department has not been able to utilise that provision for want of sanction to the estimate. While this is one aspect, there is the other aspect. In the same taluk there are Muthugur tank works. The estimate has been revised and the revised estimate has been sanctioned by the Government. But the balance of works have not been taken up during the year for the reason that there is no allotment for the works in the budget. In one case while there has been allotment in the budget, but the allotment has not been utilised for want of sanction to the estimate; in the other case, while an estimate has been sanctioned, the work has not been taken up because no allotment has been made in the budget. I mean the head of the department or whoever is responsible for all these things, when he takes grants for certain works, he must see that sanction of Government is obtained for the estimate in question and when estimates have been sanctioned, he must come up before Government either for additional or supplementary grant when he finds there is no allotment in the budget or for re-appropriation.

Finally I would like to stress the point urged by the Leader of the Opposition that a very heavy sum of the order of about Rs. 14 lakhs has been shown as losses sustained in the Agricultural Department. This is a very serious matter and atleast with a view to allay the apprehension in the minds of the Hon'ble Members or the general public, it is incumbent on the Government to set up a small committee of this House to go into the matter and to see whether there has been any irregularity or anything of that kind.

Now that the Finance Minister is here, I once again appeal to him that it is very necessary that this House should be given an opportunity to

discuss the Public Accounts Committee Report and also to create facilities for the functioning of the Estimates Committee. I do not know whether it is the responsibility of the Chairman of the Estimates Committee or the responsibility of the Government to call for meetings of the Estimates Committee. Whoever is responsible, certain facilities should be created for these committees to function properly.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಸುಮಾರು ಇಲ್ಲಿಗೆ ಇಪ್ಪತ್ತು ದಿವಸಗಳವರೆಗೂ ಈ ಮಾನ್ಯ ಸಭೆಯು ಮುಂದೆ 1956-57ನೆಯ ಸಾಲಿನ ಆಯವ್ಯಯ ಪಟ್ಟಿಯಮೇಲೆ ಬಹಳ ಪ್ರಾಮುಖ್ಯವಾದಂಥ ಚರ್ಚೆ ಸಾಗಿದೆ. ಹೀಗೆ ಈ ಚರ್ಚೆಯನ್ನು ಮಾಡುತ್ತಿರುವಾಗ ಒಂದು ಬಹಳ ಮುಖ್ಯವಾದಂಥ ಅಂಶ ಹೊರಬಿದ್ದಿದೆ. ಆ ಮುಖ್ಯವಾದಂಥ ಅಂಶದ ಮೇಲೆ ಈ ಮಾನ್ಯ ಸಭೆಯ ಗಮನ ಬಿದ್ದಿರತಕ್ಕದ್ದು ಅಷ್ಟೇ ಅಲ್ಲದೆ ಇದರಮೇಲೆ ಇಡೀ ಸಂಸ್ಥಾನದ ಗಮನ ಕೂಡ ಈಗ ಬಿದ್ದಿದೆ. ಅದು ನಮ್ಮ ಮಂತ್ರಿಗಳು ಸಂಚಾರಣೆ ಮಾಡುವ ವಿಚಾರ ಮತ್ತು ಇದಕ್ಕೆ ಸಂಬಂಧಪಟ್ಟ Travelling Allowance, Dearness Allowanceಗಳನ್ನು ತೆಗೆದುಕೊಳ್ಳುವ ವಿಚಾರ.

ಕೋಟ್ಯಂತರ ರೂಪಾಯಿ ವ್ಯವಹಾರ ನಡೆಸುವಾಗ ಸಾವಿರಾರು ರೂಪಾಯಿಗಳ ವಿಚಾರ ಬಹಳ ಸಣ್ಣದು. ಸಣ್ಣವಿಚಾರವಾದರೂ ಕೂಡ ಅದರ ಮೇಲೆ ಅದೇಕೆ ಇಷ್ಟೊಂದು ಪ್ರಾಮುಖ್ಯತೆ ಕೊಟ್ಟೆ ಎನ್ನುವ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಸಂಸ್ಥಾನದ ಹಣ ಬಹಳವಾಗಿ ಪೋಲಾಗಿದೆ, ಬಹಳವಾಗಿ ಖರ್ಚಾಗಿದೆ ಎನ್ನುವುದು ಒಂದೇ ದೃಷ್ಟಿ ಅಲ್ಲ. ಅದು ಸಾಮಾನ್ಯವಾಗಿ ಎಲ್ಲರೂ ಚರ್ಚೆ ಮಾಡಿರುವುದೇ ಆಗಿದೆ. ಯಾವಾಗಲೂ ನಿಮ್ಮ ಆಡಳಿತ ಅಭ್ಯಂತರವಿಲ್ಲದೇ ನಡೆಯುತ್ತಾ ಇದೆಯೇ, ನಿಮ್ಮ ಆಡಳಿತ ಮಿತವ್ಯಯದಿಂದ ನಡೆಯುತ್ತಾ ಇದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕಾದರೆ ಇದೂ ಒಂದು ಬಹು ಸುಲಭವಾದ ಅಂಶ. ಈ ವಿಚಾರವನ್ನು ಚರ್ಚೆಮಾಡುವಾಗ, ನಮಗಾದರೂ ಕಂಡಿರುವುದು, ಎಷ್ಟು ಮಿತವ್ಯಯದಿಂದ ಈ ಬಾಬಿನಲ್ಲಿ ಖರ್ಚಾಗಬೇಕಾಗಿತ್ತೋ ಅಷ್ಟು ಮಿತವ್ಯಯದಿಂದ ನಡೆದಿಲ್ಲ. ಯಾವಾಗಲೂ ಒಂದು ಖಂಡಗ ಅಕ್ಕಿ ಬೇಯಿಸಿದರೂ ಕೂಡ ಒಂದು ಅಗಳು ನೋಡಿ ಅದು ಬೆಂದಿದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸುತ್ತಾರೆ. ಹಾಗೆ ಇಷ್ಟೊಂದು ಕೋಟ್ಯಂತರ ರೂಪಾಯಿ ವ್ಯವಹಾರ ಜರಗುವಾಗ ಅದೆಲ್ಲವನ್ನೂ ಪರಿಶೀಲನೆಮಾಡಿ, ಅದೆಲ್ಲದರಮೇಲೂ ಕೂಡ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವೇ ಇಲ್ಲ. ಅದಕ್ಕೆ ತಕ್ಕಂಥ ಅವಕಾಶವೂ ಕೂಡ ದೊರೆಯುವುದಿಲ್ಲ, ದೊರೆತರೂ ಕಷ್ಟ. ಅದಕ್ಕೇ ಈ ಸುಲಭವಾದ ಮಾರ್ಗದಲ್ಲಿ ಪ್ರಶ್ನೆಗಳನ್ನು ಹಾಕಿ ಆ ವಿಚಾರದಲ್ಲಿ ಉತ್ತರವನ್ನು ಪಡೆಯುತ್ತೇವೆ. ಅದಕ್ಕೆ ಬಹಳ ಪ್ರಾಮುಖ್ಯತೆಯನ್ನು ಸದಸ್ಯರು ಕೊಟ್ಟಿದ್ದಾರೆ. ಹಣದ ದೃಷ್ಟಿಯಿಂದ ಪ್ರಾಮುಖ್ಯತೆ ಕೊಟ್ಟಿದ್ದಾರೆ ಎನ್ನುವ ದೃಷ್ಟಿಯಿಂದ ನೋಡಬಾರದು. ಸದಸ್ಯರಾದರೂ ಕೂಡ ಆ ಪ್ರಶ್ನೆಗಳನ್ನು ಹಾಕಿರುವುದು ಆಡಳಿತದಲ್ಲಿ ದುಂದುವ್ಯಯ ಆಗುತ್ತಾ ಇದೆಯೇ ಇಲ್ಲವೇ ಅಥವಾ ಮಿತವ್ಯಯದಿಂದ ಆಡಳಿತ ಸಾಗಿದೆಯೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ. ಇದನ್ನೆಲ್ಲಾ ನೋಡಿದರೆ ನಮಗಾದರೂ ಎನ್ನಿಸುತ್ತದೆ, ಕೆಲವು ಖರ್ಚು ಅನಾವಶ್ಯಕವಾಗಿತ್ತು, ಅದರಲ್ಲಿ ಮಿತವ್ಯಯ ಮಾಡಬೇಕಾಗಿತ್ತು ಎಂದು. ಈ ವಿಚಾರವನ್ನು ಪ್ರಸ್ತಾಪಮಾಡುವಾಗ ಒಂದು ಅಂಶವನ್ನು ಹೇಳದೇ ವಿಧಿಯಿಲ್ಲ. ಈ ವಿಚಾರವನ್ನು ಕೇಳಿದಾಗಲೆಲ್ಲಾ ಮಂತ್ರಿಮಂಡಲದವರು ಬಹಳ ಸಿಟ್ಟಿನಿಂದ ಉತ್ತರ ಕೊಡುತ್ತಾರೆ. ಅದು ಸರಿಯಲ್ಲ ಎಂದು ಈ ಸಮಯದಲ್ಲಿ ಬಹಳ ವಿನಯದಿಂದ ಅವರಿಗೆ ಹೇಳಬೇಕಾಗಿದೆ. ಅಷ್ಟೇ ಅಲ್ಲ ಸ್ವಾಮಿ, ಈ ಸಭೆಯ ಕಾರ್ಯಕಲಾಪಗಳು ಹೇಗೆ ನಡೆಯುತ್ತಾ ಇವೆ ಎಂಬುದನ್ನು ಸ್ವಲ್ಪ ಅವಲೋಕಿಸಿದರೆ ಶ್ರೀ ಮರಿಯಪ್ಪನವರು ಈ ಬಡ್ಜೆಟ್ಟಿನಮೇಲೆ ಮಾತನಾಡುತ್ತಾ, ಅವರು ಬಹುವಿಧವಾಗಿ ಮಂತ್ರಿಮಂಡಲವನ್ನು ಕೇಳಿಕೊಂಡರೂ ಕೂಡ ನಿಷ್ಫಲವಾಯಿತೋ ಏನೋ ಎಂದು ನನಗೆ ಅನ್ನಿಸುತ್ತಿದೆ. ಹನ್ನೆರಡನೇ ತಾರೀಖಿನಿಂದ ಈ ಆಯವ್ಯಯದ ಚರ್ಚೆ ಮೊದಲಾದಮೇಲೆ ಆದ್ಯಂತವಾಗಿಯೂ ಕೂಡ. ಸಭೆ ಸೇರಿದೆ. ಆದ್ಯಂತವಾಗಿ ಸೇರಿ ಕೆಲಸಮಾಡಬೇಕಾಗಿ ಬಂತು. ಆದರೆ ಯಾವ ದಿನ ನೋಡಿದರೂ ಕೂಡ ಮಂತ್ರಿಮಂಡಲದ ಸದಸ್ಯರು ಪೂರ್ತಿಯಾಗಿ ಸಭೆಯಲ್ಲಿ ಇರುತ್ತಾ ಇರಲಿಲ್ಲ. ಸಂಚಾರ ಕೂಡ ಹೋಗಿದ್ದರು. ಆ ವಿಚಾರವನ್ನು ಚರ್ಚೆಮಾಡಿ ಪ್ರಸ್ತಾಪಮಾಡಿದ್ದಾರೆ. ಈ ಸಭೆಗೆ ಸಲ್ಲಬೇಕಾದ ಮಾನ್ಯತೆ ಎಷ್ಟೋ ಪೂರ್ವಭಾವಿಯಾಗಿ ಎಚ್ಚರಿಕೆ ಕೊಟ್ಟರೂ ಕೂಡ ಸಲ್ಲಲಿಲ್ಲವಲ್ಲ ಎಂದು ನನ್ನ ವಿಷಾದ.

ಇನ್ನು ಈ ಸಭೆಯ ಕಾರ್ಯಕಲಾಪ ಯಾವ ರೀತಿ ನಡೆದಿದೆ? ಯೂನಿವರ್ಸಿಟಿ ಬಿಲ್ ಅಕ್ಟೋಬರ್ ತಿಂಗಳಿನಲ್ಲಿ ಸೆಲೆಕ್ಟ್ ಸಮಿತಿಗೆ ಹೋಯಿತು. ಸೆಲೆಕ್ಟ್ ಸಮಿತಿ ಮೊದಲು ಸೇರಿದ್ದು ಯಾವಾಗ? ಮೊದಲು ಸೇರಿದ್ದು ಫೆಬ್ರವರಿ ಕೊನೆಯಲ್ಲಿ. ಅಲ್ಲಿಯವರೆಗೂ ಏಕೆ ಕೆಲಸ ಮಾಡುವುದಕ್ಕೆ ಆಗಲಿಲ್ಲವೋ ಗೊತ್ತಿಲ್ಲ. ಇನ್ನು ಜೂನ್ ತಿಂಗಳಿಗೆ ಯೂನಿವರ್ಸಿಟಿಯ ಎಲ್ಲಾ ಅಂಗಸಂಸ್ಥೆಗಳಿಗೂ ಕೂಡ ಅವುಗಳ ಅಧಿಕಾರಾವಧಿ ಮುಗಿಯುತ್ತದೆ. ಏನು ಮಾಡುತ್ತೀರಿ! ಮಾನ್ಯ ಮುಖ್ಯ ಮಂತ್ರಿಗಳು ಅವರ ಬಡ್ಜೆಟ್ ಭಾಷಣದಲ್ಲಿ ವಿಧಾನ ಸೌಧದ ಪ್ರಾರಂಭೋತ್ಸವವನ್ನು ಜುಲೈ ಅಥವಾ ಆಗಸ್ಟ್ ತಿಂಗಳಿನಲ್ಲಿ ನಡೆಸುತ್ತೇವೆ ಎಂದು ಹೇಳಿದರು. ಅಂತೂ ಜೂನ್ ತಿಂಗಳಿನಿಂದ ಈಚೆಗೆ ಅಲ್ಲ. ಹಾಗಾದರೆ ಯೂನಿವರ್ಸಿಟಿ ಅಂಗ ಸಂಸ್ಥೆಗಳ ವಿಚಾರ ಏನು ಮಾಡುತ್ತೀರಿ ?

ಸ್ವಾಮಿ, ಈ ದಿನ ಮುಖ್ಯ ಮಂತ್ರಿಗಳು ಭಾಷಣ ಮಾಡಿದಮೇಲೆ ನಾನು ಒಂದು ವಿಷಯ ಹೇಳಬೇಕು ಎಂದು ಕೇಳಿದ್ದೆ. ಜೂನ್ ತಿಂಗಳ ಅಂತ್ಯದಲ್ಲಿ ಈಗಿರತಕ್ಕ ಅಂಗ ಸಂಘಗಳ ಅಧಿಕಾರಾವಧಿ ಮುಗಿಯುತ್ತದೆಯಲ್ಲಾ, ಅದಕ್ಕೆ ಹಳೇ ಆಕ್ಟ್ ಪ್ರಕಾರ ತಾವು ಚುನಾವಣೆ ನಡೆಸುತ್ತೀರಾ? ಮುಖ್ಯ ಮಂತ್ರಿಗಳ ಅಭಿಪ್ರಾಯದ ಪ್ರಕಾರ ಜೂನ್ ತಿಂಗಳಿಗೆ ಮುಂಚೆ ಈ ಆಕ್ಟ್ ಆಗುವ ಹಾಗಿಲ್ಲ. ಈ ವಿಚಾರವನ್ನು ನಾನು ಆಗಲೇ ಮುಖ್ಯ ಮಂತ್ರಿಗಳಿಗೆ ಕೇಳಿದ್ದಕ್ಕೆ, ಆಖೈರಾಗಿ ಉತ್ತರ ಕೊಡುವಾಗ ಹೇಳುತ್ತೇನೆ ಎಂದು ಹೇಳಿದರು. ಈಗ ಒಂದು ಕಷ್ಟವಿದೆ ಸ್ವಾಮಿ. ಅವರ ಅಭಿಪ್ರಾಯ ತಿಳಿದುಕೊಂಡು ಅದರಮೇಲೆ ಜನಗಳ ಪ್ರತಿನಿಧಿಗಳಾಗಿರತಕ್ಕ ನಮ್ಮ ರಿ-ಆಕ್ಷನ್ ಏನು ಎನ್ನುವುದನ್ನು ತಿಳಿಸುವುದಕ್ಕೆ ನಾವು ಹೇಳಬೇಕಾಗಿದೆಯೇ ಹೊರತು ಒತ್ತಾಯಮಾಡುವುದಕ್ಕಲ್ಲ. ಅನೇಕ ಸಾರಿ ಅಧ್ಯಕ್ಷರಾದ ತಮಗೆ ಹೇಳಿದ್ದೇವೆ. ತಾವು ಉತ್ತರ ಕೊಟ್ಟೇತೀರಬೇಕೆಂದು ಅವರನ್ನು ಒತ್ತಾಯ ಮಾಡು

(ಶ್ರೀ ಕೆ. ಪುಟ್ಟಸ್ವಾಮಿ).

ವುದಕ್ಕಾಗುವುದಿಲ್ಲ ಎಂದು ಹೇಳುತ್ತೀರಿ. ಇದು ಸಣ್ಣ ವಿಚಾರ, ಯಾವ ಸಮಯದಲ್ಲಿ ಹೇಳಬೇಕು, ಯಾವ ಸಮಯದಲ್ಲಿ ಹೇಳಬಾರದು ಎಂಬುದು ಅವರಿಗೆ ಬಿಟ್ಟದ್ದು. ಯಾರಿಗೂ ಒತ್ತಾಯಮಾಡುವ ಹಾಗಿಲ್ಲ. ತಾವಾಗಿಯೇ ಮುಂಚಿತವಾಗಿ ಹೇಳಿದರೆ ನಮ್ಮ ಅಭಿಪ್ರಾಯ ಏನು ಎಂಬುವನ್ನು ಹೇಳಬಹುದಾಗಿತ್ತು. ನಾವು ಕೇಳಿಕೊಂಡರೂ ಕೂಡ ಆಮೇಲೆ ಹೇಳುತ್ತೇನೆ ಎಂದರೆ ಅರ್ಥವೇನು ? ಒಂದು ತೋರುತ್ತದೆ, ಇಷ್ಟ ಬಂದರೆ ಹೇಳಬಹುದು, ಇಷ್ಟವಿಲ್ಲದೇ ಇದ್ದರೆ ಬಿಡಬಹುದು ಎಂದು ಇನ್ನೊಂದು ವಿಷಯ ಹೇಳಿ ಮುಗಿಸುತ್ತೇನೆ. ಈ ಸಭೆಯಲ್ಲಾಗತಕ್ಕ ಪ್ರತಿಕ್ರಿಯೆ, ಇಲ್ಲಿ ವ್ಯಕ್ತಪಡಿಸತಕ್ಕ ಅಭಿಪ್ರಾಯಕ್ಕೆ ಇನ್ನೂ ಹೆಚ್ಚಿನ ಮಾನ್ಯತೆಯನ್ನು ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

12 NOON

*ಶ್ರೀ ಎ. ಜಿ. ರಾಮಚಂದ್ರರಾವ್ (ವಿದ್ಯಾ ಮತ್ತು ನ್ಯಾಯಾಂಗ ಇಲಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರು ಈ ಮೊದಲೇ ಈ ಹೊತ್ತು ಏನೇನು ಟೀಕೆಯಾಗಿದೆಯೋ ಪ್ರಾಯಶಃ ಅದನ್ನೇ ಈ ಹಿಂದಿನ ಒಂದೂವರೆ ತಿಂಗಳಿನಿಂದಲೂ ಅನೇಕಸಲ ಮಾಡಿದ್ದಾರೆ. ಅದಕ್ಕೆ ಜವಾಬನ್ನೂ ಕೊಟ್ಟಿದ್ದಾಗಿದೆ. ಆದರೂ ಪುನಃ ಅದಕ್ಕೆ ಜವಾಬು ಕೊಡುತ್ತೇನೆ. ಯೂನಿವರ್ಸಿಟಿ ವಿಷಯದಲ್ಲಿ ಗ್ರಾಂಟ್ಸ್ ಕಮಿಷನ್ನಿನವರು ನಮ್ಮ ಸಹಾಯಕ್ಕೆ ಬರುತ್ತೇವೆ, ಸಂಬಳ ಸಾರಿಗೆಗಳಿಗೆ ಸಹಾಯಮಾಡುತ್ತೇವೆಂದು ಹೇಳಿದ್ದರೂ ಅವರುಬರಲಿಲ್ಲ ಎಂದು ಹೇಳಬೇಕಾಗಿದೆ. ಯೂನಿವರ್ಸಿಟಿಯ structureಅನ್ನೂ ಮತ್ತು ಯೂನಿವರ್ಸಿಟಿಯ ಪವರ್‌ಗಳನ್ನೂ ಬದಲಾಯಿಸದೆ ಇದ್ದರೆ ಅವರು ಸಹಾಯ ಮಾಡಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ನಮ್ಮ ವಿಶ್ವವಿದ್ಯಾ- ನಿಲಯ ಸರ್ಕಾರ ಕೈಕೊಳ್ಳಪಟ್ಟು ಕೆಲಸ ನಡೆಸುತ್ತಿರುವುದಾದುದರಿಂದ, ಈ ವ್ಯವಸ್ಥೆಯನ್ನು ಬದಲಾವಣೆಮಾಡಿದ ಹೊರತು ಸಾಧ್ಯವಿಲ್ಲವೆಂದಿದ್ದಾರೆ. Academic freedom, administrative freedom ಹಾಗೂ Financial Autonomyಗಳನ್ನು ನಮ್ಮ ವಿಶ್ವವಿದ್ಯಾನಿಲಯಕ್ಕೆ ಕೊಡಬೇಕು, ಅದು ಆಗುವವರೆಗೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಈ ಬಗ್ಗೆ ಕಾರ್ಯಕ್ರಮ ಕೈಕೊಳ್ಳುತ್ತಿರಲಾಗಿದೆ. Pay Structure Committeeಯನ್ನು appointಮಾಡುವುದರಿಂದಲೇ ಗೊತ್ತಾಗುತ್ತದೆ, ಇವರುಗಳ ಸಂಬಳ ಸಾರಿಗೆಗಳನ್ನು ಸುಧಾರಿಸುವುದರಲ್ಲಿ ಸರ್ಕಾರದ ಆಸಕ್ತಿ ಎಷ್ಟರಮಟ್ಟಿಗಿದೆ ಎಂಬುದು. ಆದರೆ ದುರದೃಷ್ಟವಶಾತ್, ಅದನ್ನೆಲ್ಲಾ ಚರ್ಚೆಮಾಡಿ ಕಾರ್ಯಕ್ರಮ ಕೈಕೊಳ್ಳುವ ಸಂದರ್ಭದಲ್ಲಿ ಇಂಡಿಯಾ ಸರ್ಕಾರದಿಂದ ಡೈರೆಕ್ಟಿವ್ ಬಂದು ಈ ಕಾರ್ಯಕ್ರಮಕ್ಕೆ ಸದ್ಯದಲ್ಲಿ ಕೈಹಾಕಬೇಡಿ ಎಂದು ಹೇಳಿದ್ದಾರೆ.

ಒಬ್ಬ ಸದಸ್ಯರು.—ಹೀಗಿರುವಾಗ ಜಡ್ಜಿಗಳ ಸಂಬಳಗಳನ್ನು ಹೇಗೆ ರಿವೈಸ್‌ಮಾಡಿದಿರಿ, ಇಂಡಿಯಾ ಸರ್ಕಾರದ ಸರ್ಕ್ಯುಲರ್ ಇದ್ದರೂ ಅವರ ಸಂಬಳವನ್ನು ಹೇಗೆ ರಿವೈಸ್‌ಮಾಡಿದಿರಿ, ಅವರ ವಿಷಯದಲ್ಲಿ ಈ ತತ್ವವಿರಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಕ್ಟಿನಲ್ಲೇ ಅವರ ಸಂಬಳವನ್ನು ಹೇಗೆ ರಿವೈಸ್ ಮಾಡಬೇಕೆಂಬುದನ್ನೂ ಕೊಟ್ಟಿದೆ. ಅದನ್ನು ಮಾಡದೆ Separation of Judiciary ಆಗುವುದಕ್ಕೆ ಸಾಧ್ಯವೇ ಇಲ್ಲ. ಈ ಕಾರಣದಿಂದ ಹೊಸದಾಗಿ ಸಿವಿಲ್ ಜಡ್ಜ್‌ಗಳ ಕೇಡರ್ ಅವಶ್ಯಕವಾಗಿ ಆಗಬೇಕಾಗಿದ್ದುದರಿಂದ ಮಾಡಲಾಯಿತು, ಅಷ್ಟೆ.

A MEMBER.—You could have waited even there.

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಕೂಡ ಜಾರಿಗೆ ಕೊಡದಿರುವುದು ಮಾನ್ಯಸದಸ್ಯರಿಗೇ ಗೊತ್ತಿದೆ. Pay Structure Committeeಯ ವರದಿಯೂ ತೀರ್ಮಾನಕ್ಕೆ ಕಾದಿರುವಂತೆ ಇದೂ ಕಾದಿದೆ. ಈ ಬಗ್ಗೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಕೆ. ಪುಟ್ಟಸ್ವಾಮಿಯವರು ಮಾತನಾಡುತ್ತಾ, ಯೂನಿವರ್ಸಿಟಿಯ ರಿ-ಕಾನ್‌ಸ್ಟಿಟ್ಯೂಷನ್ ಆಗಬೇಕಾಗಿತ್ತು, ಎರಡು ವರ್ಷಗಳಿಂದಲೂ ಇದು ಹಾಗೆಯೇ ನಿಂತಿದೆ. ಒಂದುಕಡೆ ಯೂನಿವರ್ಸಿಟಿ ಬಿಲ್ಲನ್ನಿಟ್ಟುಕೊಂಡಿದ್ದೀರಿ, ಇನ್ನೊಂದುಕಡೆ Re-constitution ಪ್ರಶ್ನೆಯಿದೆ, ಒಂದಕ್ಕೊಂದಕ್ಕೆ ಸಂಬಂಧವಿಲ್ಲ, ಫೆಬ್ರವರಿಯ ಮುಂದೆಯೇ ಏಕೆ ಮಾಡಲಿಲ್ಲ ಎಂದು ಹೇಳಿದರು. ಅನೇಕ ಕಾರಣಗಳಿಂದ ಆಗಲಿಲ್ಲ. ಆ ಕಾರಣಗಳನ್ನೆಲ್ಲಾ ಈಗ ಹೇಳುವುದಕ್ಕಾಗುವುದಿಲ್ಲ. ಈಗ ಹೇಗೂ ನಾವೆಲ್ಲಾ ಒಪ್ಪಿದ್ದೇವೆ. ಪುನಃ ಸಭೆ ಸೇರಿದಕ್ಷಣ ಬೇಗ ತೀರ್ಮಾನವಾಗುತ್ತದೆ. ಮಾನ್ಯ ಸದಸ್ಯರಿಗೆಲ್ಲರಿಗೂ ತೊಂದರೆಯಾಗಿರುವುದು ಗೊತ್ತಿದೆ. ಇಷ್ಟು ನಿಧಾನವಾಗಿದ್ದರೂ ಮಾನ್ಯಸದಸ್ಯರಿಗೇ ಗೊತ್ತಿದೆ, ಸರ್ಕಾರದವರಿಗೆ ಈ ವಿಷಯದಲ್ಲಿ ಆಸಕ್ತಿ ಹಾಗೂ ತೀವ್ರತೆಯಿದೆಯೋ ಇಲ್ಲವೇ ಎಂಬುದು. ಮಾನ್ಯಸದಸ್ಯರೂ ಸಹಕಾರ ನೀಡುತ್ತಿದ್ದಾರೆ. ಆದ್ದರಿಂದ ಆದಷ್ಟುಬೇಗನೆ ಸದ್ಯದಲ್ಲೇ ಇದನ್ನು ತೀರ್ಮಾನ ಮಾಡುತ್ತೇವೆ.

Sri Mulka GOVINDA REDDY.—Are the Government aware that the University is already taking steps to reconstitute the authority ; what is going to be the position ?

Sri A. G. RAMACHANDRA RAO.—That position itself we are considering. ಲೇಬರ್ ಇಲಾಖೆಯ ವಿಚಾರದಲ್ಲಿ ಇನ್ನೊಂದು ಪ್ರಶ್ನೆ ಕೇಳಿದರು. Labour participation in the management of industries ಎಂಬುದನ್ನು ಮುಖ್ಯಮಂತ್ರಿಗಳೇ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ರೀತಿ ಒಂದು ತೀರ್ಮಾನ ಮಾಡಿದ್ದರೂ, ಏಪ್ರಿಲ್ ತಿಂಗಳ ಆಖೈರೊಳಗೆ ಮ್ಯಾನೇಜ್‌ಮೆಂಟಿನವರ ಮತ್ತು labourರ ಒಂದು ಕಾನ್‌ಫರೆನ್ಸ್ ಕರೆದು, ಈ ಬಗ್ಗೆ ಯಾವರೀತಿ ಮಾಡಬೇಕೆಂದು ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದಿದ್ದೇವೆ. ಇಷ್ಟು ಮಾಡಿದರೂ, ಒಂದು ಮುಖ್ಯಾಂಶವನ್ನು ಮಾನ್ಯಸದಸ್ಯರು ಗಮನದಲ್ಲಿಡಬೇಕು. ಒಂದು Socialistic pattern ಸಮಾಜವನ್ನು ನಾವು ರಚಿಸಬೇಕೆಂದಿದ್ದೇವೆ. ಇದಕ್ಕೆ ಸಾಧ್ಯವಾದ ಮಟ್ಟಿಗೂ ಎಲ್ಲರ ಸಹಕಾರವೂ ಬೇಕು. ಕೂಲಿಗಾರರಿಗೆ ಅಧಿಕಾರ ಜಾಸ್ತಿ ದೊರೆತಂತಾಗುತ್ತದೆ. ಅಧಿಕಾರಕ್ಕೆ ತಕ್ಕಹಾಗೆ ಅವರು ತಮ್ಮ ಜವಾಬ್ದಾರಿಯನ್ನೂ ಅರಿತುಕೊಳ್ಳಬೇಕಾದದ್ದು ಅವಶ್ಯಕ. ಈ ಹೊತ್ತಿನ ಸ್ಟ್ರೈಕ್ ಮುಂತಾದುವುಗಳಿಂದ ಉತ್ಪತ್ತಿ ಎಷ್ಟರ ಮಟ್ಟಿಗೆ ಕುಂಠಿತವಾಗುತ್ತಿದೆಯೆಂಬುದನ್ನು ಇನ್ನೂ ಹೆಚ್ಚಿನ ಜವಾಬ್ದಾರಿಯಿಂದ ಅವರು ಅರಿತುಕೊಳ್ಳಬೇಕಾಗ ತ್ತದೆ. ಸೋಷಿಯಲಿಸ್ಟ್ ಫ್ಯಾಕ್ಟರಿಗಳಲ್ಲಿ ಸ್ಟ್ರೈಕ್ ಎಂಬುವೇ ಇರಬಾರದು, Production

ಕಡಮೆಯಾಗಬಾರದು. ಈಗೇನಿದ್ದರೂ labour ಶೋಷಣೆಯಾಗುತ್ತಿದೆಯೆಂದು ಹೇಳುತ್ತಿದ್ದಾರೆಯೇ ಹೊರತು ಮತ್ತೇನೂ ಹೆಚ್ಚಿಗೆ ಕಾರ್ಯತತ್ಪರತೆಯನ್ನು ವ್ಯಕ್ತಪಡಿಸುತ್ತಿಲ್ಲ. ಆದ್ದರಿಂದ ಕೂಲಿಗಾರರು ತಮ್ಮ ಜವಾಬ್ದಾರಿಯನ್ನೂ ಅರಿತು ಕೊಂಡು ಎಷ್ಟರಮಟ್ಟಿಗೆ ಸಹಾಯ ಮಾಡುತ್ತಾರೋ ಅಷ್ಟರಮಟ್ಟಿಗೆ ಅವರು ಮ್ಯಾನೇಜ್‌ಮೆಂಟಿನಲ್ಲಿ participation ಹೊಂದಲು ಅರ್ಹತೆಯನ್ನು ಪಡೆಯುತ್ತಾರೆಂದು ಹೇಳಬಹುದು. ಇದೊಂದು ಮುಖ್ಯವಾದ ಅಂಶ. ಬರುವ ಏಪ್ರಿಲ್ ತಿಂಗಳ ಆಖೈರ್ ಒಳಗೆ ಇದನ್ನು ಕಾರ್ಯಗತಮಾಡಲು ಸಾಧ್ಯವಾಗುತ್ತದೆಂದು ನಾನು ಹೇಳಲಪೇಕ್ಷಿಸುತ್ತೇನೆ.

ಹರಿಜನರ ಅಭಿವೃದ್ಧಿಯ ವಿಷಯದಲ್ಲಿ ಸರ್ಕಾರಕ್ಕಿರುವ ತೀವ್ರಾಸಕ್ತಿಯನ್ನು ತೋರಿಸಲು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಪಾರ್ವತಮ್ಮನವರ ಸ್ಥಾನಮಾನಗಳ ವಿಚಾರದಲ್ಲಿ ಏನಾದರೂ ಚ್ಯುತಿ ಬಂದಿದೆಯೇ ಎಂಬ ವಿಚಾರದಲ್ಲಿ ಪತ್ರವ್ಯವಹಾರ ನಡೆಯುತ್ತಿದೆ. ಅಷ್ಟಕ್ಕೇ ಬಿಟ್ಟಿಲ್ಲ. ಪಾರ್ವತಮ್ಮನವರು ಫಸ್ಟ್‌ಕ್ಲಾಸ್‌ನಲ್ಲಿ ಪರೀಕ್ಷೆ ಮಾಡಿದ್ದಾರೆ. ಅವರನ್ನು ಆ ದರ್ಜೆಯಿಂದ ಇನ್ನೂ ಮೇಲಕ್ಕೆ ಎತ್ತಿ ಯೂನಿವರ್ಸಿಟಿಗೆ ಭೂಷಣವಾಗುವಂತೆ ಮಾಡಬೇಕೆಂದು ಹೇಳಿ ದಾಮೋದರ್ ಸ್ಕಾಲರ್‌ಷಿಪ್ ಕೊಟ್ಟು ಅವರನ್ನು ಉತ್ತಮಮಟ್ಟಕ್ಕೆ ತರಬೇಕೆಂದು ತೀರ್ಮಾನಮಾಡಲಾಗಿದೆಯೆಂದು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇವೆ.

ಗೃಹಸಚಿವರು ಈ ಹೊತ್ತು ಇಲ್ಲದಿರುವುದರಿಂದ ಆ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಮಾತು ಹೇಳುತ್ತೇನೆ. ಹೋಮ್ ಇಲಾಖೆಯಲ್ಲಿ ಪೋಲೀಸಿನವರು ದಕ್ಷತೆ ಕಡಮೆಯಾಗಿದೆಯೆಂದು ಹೇಳಿದರು. ಇದು ಸತ್ಯಕ್ಕೆ ಬಹಳ ದೂರವಾದುದು. ಇಂಡಿಯಾ ದೇಶದ ಇತರ ಸರ್ಕಾರಗಳ ಪೋಲೀಸ್ ಇಲಾಖೆಯಲ್ಲಿ ಎಷ್ಟು ಕೆಲಸ ನಡೆಯುತ್ತಿದೆ, ಇಲ್ಲಿ ಎಷ್ಟು ಕೆಲಸ ನಡೆಯುತ್ತಿದೆ, ಅಲ್ಲಿ ಎಷ್ಟು ಖರ್ಚಾಗುತ್ತಿದೆ ಇಲ್ಲಿ ಎಷ್ಟು ಖರ್ಚಾಗುತ್ತಿದೆ, ಮೈಸೂರು | ದೇಶದಲ್ಲಿ crime position ಏನಿದೆಯೆಂಬುದನ್ನು ನೋಡಿದರೆ ನಮ್ಮದು ಇಂಡಿಯಾ ದೇಶದಲ್ಲೆಲ್ಲಾ cheapest ಇಲಾಖೆಯೆಂದು ಹೇಳಬಹುದಾಗಿದೆ. Crimes ವಿಷಯದಲ್ಲೂ ಬಾಕಿ ಯಾವ ರಾಜ್ಯದಲ್ಲೂ ಇಷ್ಟು ಕಡಮೆ ಸಂಖ್ಯೆಯಲ್ಲಿ ನಡೆಯುತ್ತಿಲ್ಲ. ಜನರ ಮೇಲಿನ ಹತೋಟಿ, ಪೋಲೀಸ್ ಜನರ ಸಂಯಮ ಮತ್ತು ದಕ್ಷತೆ ಇದರಿಂದಲೇ ಗೊತ್ತಾಗುತ್ತದೆ. ಅಲ್ಲಲ್ಲಿ ಕೆಲವು caseಗಳು ಇರಬಹುದು. ಆದರೂ ಒಟ್ಟಿನಲ್ಲಿ ನೋಡಿದರೆ, it is being run in the most efficient and satisfactory manner ಎಂದು ಹೇಳಬಹುದು.

ಈ ಮೂರು ಇಲಾಖೆಗಳ ವಿಷಯದಲ್ಲಿ ನಾನು ಕೊಟ್ಟಿರತಕ್ಕ ಉತ್ತರ ಸಮಾಧಾನ ಕರವಾಗಿದೆಯೆಂದು ಭಾವಿಸಿ ಮಾನ್ಯಸದಸ್ಯರು ಈ ಮಸೂದೆಯನ್ನು ಅನುಮೋದಿಸಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಅಧ್ಯಕ್ಷರೇ, ಈ ದಿವಸ ಈ ಮಾನ್ಯ ಸಭೆಯ ಮುಂದೆ ಶ್ರೀಮಾನ್ ನಾಗಯ್ಯರೆಡ್ಡಿಯವರು ಎರಡು ವಿಷಯಗಳಿಗೆ ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ಮೊದಲನೆಯದಾಗಿ ಸರ್ಕಾರವು ಯಥೇಚ್ಛವಾಗಿ compensation ಮತ್ತು ರಿಮಿಷನ್‌ಗಳನ್ನು ಕೊಟ್ಟಿದೆಯೆಂದು ಆಪಾದನೆ ಮಾಡಿದ್ದಾರೆ. ಸಾಮಾನ್ಯವಾಗಿ ರಿಮಿಷನ್ ಮತ್ತು compensation ಕೊಡುವ ಕಾಲದಲ್ಲಿ ಸರ್ಕಾರದವರು ಯಾವಾಗಲೂ ಕಾನೂನು ರೀತ್ಯಾ ವರ್ತಿಸುತ್ತಾರೆ. ಅನಿವಾರ್ಯವಾಗಿ ಎಕ್ಸೈಸ್ ಕಂಟ್ರಾಕ್ಟರುಗಳು ತೆಗೆದುಕೊಂಡಿರುವ ಬಾಬಿನಲ್ಲಿ ನಷ್ಟವಾದರೆ, ಅವರಿಗೆ ಅನಿರೀಕ್ಷಿತವಾಗಿ ತೊಂದರೆಯಾದ ಸಂದರ್ಭದಲ್ಲಿ, ಅವರಿಗೆ ಕಾಂಪೆನ್‌ಸೇಷನ್ ಮತ್ತು ರಿಮಿಷನ್ ಕೊಡುವ ಪದ್ಧತಿ ನಮ್ಮ ಕಾಲದಲ್ಲೇ ಅಲ್ಲ ಹಿಂದಿನಿಂದಲೂ ಕೂಡ ನಡೆದು ಬಂದಿದೆ. ಆ ಪ್ರಕಾರ ಕಾಂಪೆನ್‌ಸೇಷನ್ ಕೊಟ್ಟಿರುವುದನ್ನು ಅವರು ಬಹಳ ಪ್ರಾಮುಖ್ಯವಾಗಿ ಹೇಳಿದ್ದಾರೆ. ಕಾಂಪೆನ್‌ಸೇಷನ್ ಕೊಡತಕ್ಕ ವಿಷಯದಲ್ಲೂ ಕೂಡ ಈ ಮಾನ್ಯ ಸಭೆಯಲ್ಲಿ ಅನೇಕ ಸಾರಿ ಪ್ರಶ್ನೆಗಳೂ ಬಂದು ಚರ್ಚೆಯಾಗಿ ಸೂಕ್ತ ಉತ್ತರಗಳನ್ನು ಕೂಡ ಕೊಟ್ಟಿರುವುದು ಮಾನ್ಯ ಸದಸ್ಯರಿಗೇ ಗೊತ್ತಿರಬಹುದು. ಮುಖ್ಯವಾಗಿ ಅವರ ಆಪಾದನೆ, ಯಾರೋ ಒಬ್ಬರಿಗೆ ಬಹಳ ಹೆಚ್ಚಿನ ರೀತಿಯಲ್ಲಿ compensation ಕೊಟ್ಟಿದೆಯೆಂಬುದು. ಇದರ ವಿಷಯದಲ್ಲಿಯೂ ನಾನು ಹೇಳುವುದಿಷ್ಟೆ: ಸರ್ಕಾರವು ಇದುವರೆಗೂ ಯಾವ ನೀತಿಯನ್ನು ಅನುಸರಿಸಿ compensation ಕೊಟ್ಟಿದೆಯೋ ಅದೇ ರೀತಿ ಈಗಲೂ ಕೊಟ್ಟಿದೆಯೇ ಹೊರತು, arbitrary ಯಾಗಿ ಏನನ್ನೂ ಮಾಡಿ ಯಾವ ಬಗೆಯ ಅಭಿಮಾನವನ್ನೂ ಕೂಡ ತೋರಿಸಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಟಿ. ಮರಿಯಪ್ಪ (ಮೈಸೂರು-ಉತ್ತರ).—ಎಷ್ಟು ಕಾಂಪೆನ್‌ಸೇಷನ್ ಕೊಟ್ಟಿದ್ದೀರಿ ?

ಶ್ರೀ ಟಿ. ಚನ್ನಯ್ಯ.— ಈಗ ಇಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ

ಶ್ರೀ ಟಿ. ಮರಿಯಪ್ಪ.—ಎರಡು ಲಕ್ಷ 80 ಸಾವಿರ ರೂಪಾಯಿಗಳೇ ?

ಶ್ರೀ ಟಿ. ಚನ್ನಯ್ಯ.— ಜ್ಞಾಪಕವಿಲ್ಲ. ಅಲ್ಲದೆ, compensation ಕೊಡುವಾಗಲೂ ಸರ್ಕಾರವೇ ಕಾಂಪೆನ್‌ಸೇಷನ್ ಮೊಬಲಗನ್ನು ನಿಗದಿಮಾಡಿದ್ದ ಪಕ್ಷದಲ್ಲಿ ಅವರ ಆಪಾದನೆ ಸಲ್ಲುತ್ತಿತ್ತು. ಅದಕ್ಕೆ ಬದಲು ಮಾನ್ಯ ಸದಸ್ಯರ ಸಲಹೆಯ ಮೇಲೆ ಒಬ್ಬ ಆರ್ಬಿಟ್ರೇಟರನ್ನು ನೇಮಕಮಾಡಿ ಅವರ ತೀರ್ಮಾನದ ಮೇಲೆ ಕೊಟ್ಟಿದೆಯೇ ಹೊರತು ಸರ್ಕಾರವೇ ನೇರವಾಗಿ ಗೊತ್ತುಮಾಡಿಲ್ಲ.

ಶ್ರೀ ಟಿ. ಮರಿಯಪ್ಪ.—ಆ ಸಂದರ್ಭದಲ್ಲಿ reject ಆಗಿದೆ. ಆಗ ಕೊಡದ ಬಾಬಿಗೆ ತಾವು ಆಮೇಲೆ ಕೊಟ್ಟಿರಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅದಕ್ಕೆ ಹಿನ್ನೆಲೆಯನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಎಕ್ಸೈಸ್ ಕಂಟ್ರಾಕ್ಟ್ ಎಂಬುದು ಕುದುರೆಯ ಜೂಜು ಇದ್ದ ಹಾಗೆ. ಕಾರಣವೇನೆಂದರೆ sales ಆಗುವ ಕಾಲದಲ್ಲಿ ಪ್ರತಿಯೊಬ್ಬ ಕಂಟ್ರಾಕ್ಟರೂ ಕೂಡ ತಾನು ಗೆಲ್ಲಲು ಪ್ರಯತ್ನಪಡುತ್ತಾನೆ. ಕೊನೆಗೆ ತನಗೆ ಬೇಕಾದವರಿಗೆ ಕಂಟ್ರಾಕ್ಟ್ ಸಿಕ್ಕದೇ ಇದ್ದರೆ ಯಾವ ರೀತಿ ಅವನಿಗೆ ತೊಂದರೆ ಕೊಡಬೇಕು, ಯಾವರೀತಿ ಅವನಿಗೆ ತಪ್ಪಿಸಬೇಕು ಎಂದು ಅವನು ಪ್ರಯತ್ನಪಡುತ್ತಾನೆ.\ ಅದಕ್ಕೆ ತಕ್ಕ ವಿಧಾನಗಳೂ ಇವೆ. ಪ್ರಕೃತ ಸಂದರ್ಭದಲ್ಲಿ sales ಆದ ಸ್ವಲ್ಪ ಕಾಲದಲ್ಲೇ ಮದರಾಸ್ ಸರ್ಕಾರದವರು prohibition ಅನ್ನು introduce ಮಾಡಿ, Border areaಗಳಲ್ಲಿ tapping of trees ಇರಕೂಡದೆಂದು ಹೇಳಿ, ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಮೈಸೂರು ಸರ್ಕಾರಕ್ಕೆ ತಿಳಿಸಿದರು. ಅಂತಹ ಸಮಯದಲ್ಲಿ ಇಲ್ಲಿ ಎಕ್ಸೈಜು ಕಂಟ್ರಾಕ್ಟು ಹಳಬರಿಗೆ ಸಿಕ್ಕಲಿಲ್ಲ. ಬೇರೆ ಒಬ್ಬರಿಗೆ ಹೋಯಿತು. ಹೇಗಾದರೂ ಮಾಡಿ ತೊಂದರೆ ಕೊಡಬೇಕೆಂದು ಯೋಚನೆ ಮಾಡಿ ಆಂಧ್ರದ ಮುಖಂಡರ ಮುಖಾಂತರ ಪ್ರಭಾವ ಬೀರಿ ಈ ಸರ್ಕಾರದವರು ಎಕ್ಸೈಜು ಸೇಲ್ಸ್‌ಗಳನ್ನು hold ಮಾಡಿ, ಯಾರಿಗೆ tree tap ಮಾಡುವ

(ಶ್ರೀ ಟಿ. ಚನ್ನಯ್ಯ.)

ದಕ್ಕೆ ಅವಕಾಶ ಕೊಟ್ಟಿದ್ದರೋ ಆ ಅವಕಾಶವನ್ನು ಮೈಸೂರು ಸರ್ಕಾರದಿಂದ ತಪ್ಪಿಸುವಂತೆ ಮಾಡಿದರು. ಯಾರ ಮುಖಾಂತರ ತಪ್ಪಿಸಿದರೋ, ಯಾರಿಗೆ ತೊಂದರೆ ಆಯಿತೋ, ಅದೇ ಎಕ್ಸೈಜು ಕಂಟ್ರಾಕ್ಟರ್ ಹೋಗಿ "ನಮಗೆ ತೊಂದರೆಯಾಯಿತು, ಈ prohibited areas ಗೋರಿಬಿದನೂರು, ವಗೈರೆ ತಾಲ್ಲೂಕ್‌ಗಳಲ್ಲಿ ಮರಗಳನ್ನು tap ಮಾಡುವುದಕ್ಕೆ ನಿಲ್ಲಿಸಿದ್ದು ಅನ್ಯಾಯವಾಗಿದೆ, ನಷ್ಟವಾಗುತ್ತಿದೆ, Contract ಕೊಡುವಾಗ ಇದೇ ಮರಗಳನ್ನು ಕೊಡುತ್ತೇವೆ ಎಂದು ಹೇಳಿ, ಈಗ ತಪ್ಪಿಹೋಗಿರುವುದರಿಂದ ತೊಂದರೆಯಾಗಿದೆ, ಆದ್ದರಿಂದ ಪುನಃ ಈ ವಿಷಯದಲ್ಲಿ ಶಿಫಾರ್ಸು ಮಾಡಬೇಕು ಎಂದು ಕೇಳಿಕೊಂಡ ಮೇಲೆ, ಮೊದಲು ತಪ್ಪಿಸುವುದಕ್ಕೆ ಏರ್ಪಾಡು ಮಾಡಿದವರು ಪುನಃ ಅವರಲ್ಲೇ ಹೋಗಿ ಈರೀತಿ ಕೇಳಿಕೊಂಡ ಮೇಲೆ, ಅವರೇ ಬಂದು ಮೈಸೂರು ಸರ್ಕಾರದವರಲ್ಲಿ ಯಾರಲ್ಲಿ ಹೇಳಬೇಕೋ ಅವರಿಗೆ ಹೇಳಿ ಪುನಃ ಅವರಿಗೆ ಕೊಡುವಂತೆ ಮಾಡಿದರು. ಇದು ಒಂದು ಕಡೆ ಮಗುವನ್ನು ಚಿಗುಟುವುದು ಮತ್ತೊಂದು ಕಡೆ ಅದನ್ನೇ ತೊಟ್ಟಿಲಿನಲ್ಲಿ ತೂಗುವುದು ಎಂಬಂತಾಯಿತು.

ಶ್ರೀ ಟಿ. ಮರಿಯಪ್ಪ.—Applicationನನ್ನು reject ಮಾಡಿದಮೇಲೆ firm ಆಗಿ ಇರಬೇಕು.

ಶ್ರೀ ಟಿ. ಚನ್ನಯ್ಯ.— Firm ಆಗಿ ಇದ್ದೇನೆಯೋ ಎನ್ನುವುದನ್ನು ಮಾನ್ಯ ಸಭೆಯೇ ಹೇಳಬೇಕು. ಆದ್ದರಿಂದ ಇಂತಹ ಕಾರ್ಯಕ್ರಮಗಳು ಎಕ್ಸೈಜು ಕಂಟ್ರಾಕ್ಟಿನಲ್ಲಿ ಹಿಂದಿನಿಂದ ನಡೆದುಕೊಂಡು ಬಂದಿದೆ. ಆದ್ದರಿಂದ ನಾವು ಯಾವ ತರಹ ಅಭಿಮಾನವನ್ನಾಗಲಿ, ಅವರಲ್ಲಿ ತೋರಿಸದೆ ಯಾವುದೋ ಒಂದು ಗೌರವವನ್ನು ಅವರಿಂದ ಪಡೆಯಬೇಕೆಂದು ಯಾವ ಎಕ್ಸೈಜು ಕಂಟ್ರಾಕ್ಟರಿಗೂ ಅನುಕೂಲ ಮಾಡಬೇಕೆಂದು ಹೊರಟಿಲ್ಲ. ಹೇಳತಕ್ಕವರು ಯಾರಾದರೂ ಕೂಡ ಅದರಂತೆ ನಡೆದುಕೊಳ್ಳಬೇಕು. ಶ್ರೀ ನಾಗರಾಜಮೂರ್ತಿಯವರು ನುಡಿದಂತೆ ನಡೆಯಬೇಕು ಎಂದು ಹೇಳಿದರು. ಹೇಳುವುದು ಒಂದು, ಮಾಡುವುದು ಒಂದು, ಈ ತರಹ ಇರಕೂಡದು. ನುಡಿದಂತೆ ನಡೆದಿದ್ದೇವೆ. ಬೇರೆ ತರಹ ಮಾಡಿಲ್ಲ. ಶ್ರೀಮಾನ್ ನಾಗರಾಜಮೂರ್ತಿಯವರು ಹೇಳಿದ ಮಾತು ಅವರಿಗೆ ಸಲ್ಲತಕ್ಕದ್ದೇ ಹೊರತು ನಮಗೆ ಸಲ್ಲತಕ್ಕದ್ದಲ್ಲ. ಎರಡನೇ ವಿಷಯವನ್ನು ಅವರು ಪ್ರಸ್ತಾಪ ಮಾಡಿದರು. ಸರ್ಕಾರದವರು ನಾಲ್ಕೈದು ಫಾರ್ಮಸ್ಯುಟಿಕಲ್ ಕಂಪೆನಿಗಳಿಗೆ ಲೈಸನ್ಸ್ ಕೊಟ್ಟಿದ್ದಾರೆ. ಮೂರು ಸಾವಿರ ಗ್ಯಾಲನ್ ಕೊಡುತ್ತಾ ಇರುವುದು ಅನ್ಯಾಯ ಎಂದು ಹೇಳಿದರು. ಇದನ್ನು ಬಹಳಸಾರಿ ಪ್ರಶ್ನೆ ರೂಪದಲ್ಲಿ ಈ ಸಭೆಯಲ್ಲಿ ತರುತ್ತಿದ್ದಾರೆ. ದಸರಾ ಕಾಲದಲ್ಲಿ ಈ ಸಭೆಯಾದಾಗ ಅದಕ್ಕೂ ಉತ್ತರವನ್ನು ಕೊಟ್ಟಿದ್ದೇನೆ. ಇದರ ವಿಷಯದಲ್ಲಿ ಸ್ವಲ್ಪ ಹಿನ್ನೆಲೆಯನ್ನು ತಿಳಿದುಕೊಳ್ಳದೆ ನೇರವಾಗಿ ಉತ್ತರ ಕೊಟ್ಟರೆ ಮಾನ್ಯ ಸಭೆಗೆ ಗೊತ್ತಾಗುವುದಿಲ್ಲ. ಮೂರು-ನಾಲ್ಕು ಫಾರ್ಮಸ್ಯುಟಿಕಲ್ ಕಂಪೆನಿಗಳ ಮೇಲೆ ಅಭಿಮಾನವಿಟ್ಟು ಅನುಕೂಲ ಮಾಡುತ್ತಿದ್ದಾರೆ ಎನ್ನುವ ಅಭಿಪ್ರಾಯ ಸರಿಯಾದುದಲ್ಲ ಎಂದು ಹೇಳುತ್ತೇನೆ. ನಾವು ಎರಡು ಫಾರ್ಮಸ್ಯುಟಿಕಲ್ ಕಂಪೆನಿಗಳಿಗೆ ಮಾತ್ರ ಲೈಸನ್ಸ್ ಕೊಟ್ಟಿದ್ದೇವೆ. ಅವು ಯಾವುವು ಎಂಬುದನ್ನು ಶ್ರೀ ನಾಗಯ್ಯರೆಡ್ಡಿಯವರು ಅನೇಕ ಸರ್ತಿ ಈ ಸಭೆಯ ಗಮನಕ್ಕೆ ತಂದಿದ್ದಾರೆ. ಫಾರ್ಮಸ್ಯುಟಿಕಲ್ ಕಂಪೆನಿಗಳು 14-15 ಇವೆ. ಹೊಸದಾಗಿ ಎರಡು ಕೊಟ್ಟಿರುವುದು ಮಾತ್ರವಲ್ಲ. ಹಿಂದಿನಿಂದಲೂ, ಅಂದರೆ 20-25 ವರ್ಷಗಳಿಂದಲೂ ಈ ಕಂಪೆನಿಗಳಿಗೆ ಲೈಸನ್ಸ್ ಕೊಟ್ಟು, ಅವು ಆಲ್ಕೊಹಾಲ್‌ನಿಂದ ಕೆಲವು ಔಷಧಿಗಳನ್ನು ಮಾಡಿ ಮಾರಾಟಮಾಡುವ ಪದ್ಧತಿ ಹಿಂದಿನಿಂದಲೂ ಬಂದಿದೆ. ಆದರೆ ಎರಡು ಮೂರು ಕಂಪೆನಿಗಳಿಗೆ ಮಾತ್ರ ಸರ್ಕಾರದವರು ಏನೋ ಅಭಿಮಾನವಿಟ್ಟು ಕೊಟ್ಟಿದ್ದಾರೆ, ಏನೋ interest ಇದೆ ಎನ್ನುವ ಅಭಿಪ್ರಾಯ ಬರತಕ್ಕ ರೀತಿಯಲ್ಲಿ ಈ ಸಭೆಯ ಮುಂದೆ ಇಟ್ಟಿದ್ದಾರೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಪಾಲುದಾರರು ಏನೋ ಎಂದು.

ಶ್ರೀ ಬಿ. ಎಂ. ಸೀನಪ್ಪ.—(ಕಬ್ಬಿಣಪೇಟೆ) ಅಭಿಮಾನವಿಟ್ಟು ಕೊಟ್ಟಿದ್ದಾರೆ ಎಂದಲ್ಲ. ನೀವು ಕೊಟ್ಟಿರತಕ್ಕದ್ದನ್ನು ಬೇರೆ ರೀತಿಯಲ್ಲಿ ದುರುಪಯೋಗ ಪಡಿಸುತ್ತಿದ್ದಾರೆ ಎಂದು ಹೇಳುತ್ತಿದ್ದೇವೆ.

ಶ್ರೀ ಟಿ. ಚನ್ನಯ್ಯ.—14-15-ಫಾರ್ಮಸ್ಯುಟಿಕಲ್ ಕಂಪನಿಗಳು ಮೊದಲಿನಿಂದಲೂ ನಡೆದುಕೊಂಡು ಬಂದಿರತಕ್ಕವು, ಹೊಸವು ಎರಡು. ಯಾವ ಫಾರ್ಮಸ್ಯುಟಿಕಲ್ ಕಂಪನಿಗಳನ್ನು ತೆಗೆದುಕೊಂಡರೂ ಕೂಡ ಸೆಂಟ್‌ಪರ್ಸೆಂಟ್ ಸತ್ಯದಿಂದ ಕೆಲಸ ಮಾಡುತ್ತಿವೆ ಎಂದು ನಾನು ಈ ಸಭೆಯ ಮುಂದೆ ಹೇಳುವುದಕ್ಕೆ ತಯಾರಾಗಿಲ್ಲ. ಅವುಗಳಲ್ಲಿ ಲೋಪದೋಷಗಳು ಇರಬಹುದು. ಸರ್ಕಾರದವರೂ ಕೂಡ ಫಾರ್ಮಸ್ಯುಟಿಕಲ್ ಕಂಪನಿಗಳಿಗೆ ಸರ್ಕಾರೀ ಅಧಿಕಾರಿಗಳನ್ನು ನೇಮಕಮಾಡುತ್ತಾರೆ, watch and ward ಏರ್ಪಾಡು ಮಾಡಿದ್ದಾರೆ, ಅಸಿಸ್ಟೆಂಟ್ ಇನ್ಸ್‌ಪೆಕ್ಟರ್‌ನ್ನು ಎಕ್ಸೈಜು ಇನ್ಸ್‌ಪೆಕ್ಟರ್‌ನ್ನು ನೇಮಕ ಮಾಡಿದ್ದಾರೆ. ಅದನ್ನು ಸರಿಯಾದ ರೀತಿಯಲ್ಲಿ ಹಾಗೆ ದುರುಪಯೋಗವಾಗದ ರೀತಿಯಲ್ಲಿ ವ್ಯವಸ್ಥೆ ಮಾಡತಕ್ಕ ಜವಾಬ್ದಾರಿ, ಎಕ್ಸೈಜು ಇಲಾಖೆಗಳ ಅಧಿಕಾರಿಗಳಿಗೆ ಸೇರಿದ್ದು. ಅವರು ನೋಡಿಕೊಳ್ಳುತ್ತಿದ್ದಾರೆ. ಏನಾದರೂ ಆರೀತಿ ದಾರಿತಪ್ಪಿ ನಡೆದ ಪಕ್ಷದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಕ್ಕಾಗಲಿ ಸಂಬಂಧಪಟ್ಟ ದೊಡ್ಡ ಅಧಿಕಾರಿಗಳಿಗಾಗಲಿ ತಿಳಿಸಿದ ಪಕ್ಷದಲ್ಲಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಆರೀತಿ ನಮ್ಮ ಗಮನಕ್ಕೆ ಬಾರದೇ ಇರುವುದರಿಂದ ಶ್ರೀಮಾನ್ ನಾಗಯ್ಯರೆಡ್ಡಿಯವರು ಎರಡು ಫಾರ್ಮಸ್ಯುಟಿಕಲ್. ಕಂಪನಿಗಳಿಗೆ ಹೆಚ್ಚಿನ ಆಲ್ಕೊಹಾಲ್‌ನ್ನು ಕೊಡುತ್ತಿದ್ದೇವೆ. ಅದನ್ನು ತೆಗೆದುಹಾಕಬೇಕು ಎಂದು ಕೇಳುವುದು ಯಾವ ನ್ಯಾಯ ?

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ದುರುಪಯೋಗವಾಗುತ್ತಿದೆ. ಅವರಿಗೆ ಕೊಟ್ಟರೆ 20 ಜನರಿಗೂ ಕೊಡಿ.

ಶ್ರೀ ಟಿ. ಚನ್ನಯ್ಯ.—ಯಾವುದು ಆಗುವುದಿಲ್ಲ ಎಂದು ನಾನು ಕೇಳುವುದು ? ಆದ್ದರಿಂದ ತಪ್ಪು ಏನಾದರೂ ಇದ್ದರೆ, ಸರ್ಕಾರದ ಗಮನಕ್ಕಾಗಲೀ, ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕಾಗಲಿ ತಂದರೆ ಅದನ್ನು ತಡೆಗಟ್ಟುವುದಕ್ಕೆ ನಾವು ಸದಾ ಸಿದ್ಧರಾಗಿದ್ದೇವೆ. ಮುಖ್ಯವಾಗಿ ಹಿಂದೆ ಕೆಲವು ಫಾರ್ಮಸ್ಯುಟಿಕಲ್ ಕಂಪನಿಗಳಿದ್ದುವು. ಅವು ಇದ್ದ ಕಾಲದಲ್ಲಿ ಒಂದು ವರ್ಷಕ್ಕೆ 30 ಸಾವಿರ ಗ್ಯಾಲನ್ ತೆಗೆದುಕೊಂಡು ಅವರು business ಮಾಡಿದ್ದಾರೆ. ಒಂದು ತಿಂಗಳಿಗೆ 3-3½ ಸಾವಿರ ತೆಗೆದುಕೊಂಡು ವ್ಯಾಪಾರ ಮಾಡಿದ್ದಾರೆ. ಆಗ ಅವರಿಗೆ ಕಿವಿ ಇರಲಿಲ್ಲವೇ, ಕಣ್ಣು ಇರಲಿಲ್ಲವೇ, ಬಾಯಿ ಇರಲಿಲ್ಲವೇ? ಎಲ್ಲಾ ಇದ್ದರೂ ಕೂಡ, ಆಗ ಏತಕ್ಕೆ ಹೇಳಲಿಲ್ಲ ?

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—Licence issue ಮಾಡುವಾಗ brain ಇರಲಿಲ್ಲವೇ ? My allegation is that you are a party to it.

ಶ್ರೀ ಟಿ. ಚನ್ನಯ್ಯ.—I deny your statement. Large quantities ನ್ನು ಅನೇಕ ವರ್ಷಗಳಿಂದ ಕೊಟ್ಟುಕೊಂಡು ಬರತಕ್ಕ ಕಂಪನಿಗಳಲ್ಲಿ ಅವರು ಹೋಗುತ್ತಾ ಬರುತ್ತಾ ಇದ್ದರು. ಅಲ್ಲಿ ಕುಳಿತುಕೊಳ್ಳುತ್ತಾ ಇದ್ದರು. ಒಂದು ಉದಾಹರಣೆಗೆ ಹೇಳುವುದಾದರೆ ಅಮೃತ್ ಲಾಬೊರೇಟರೀಸ್ ಇದೆ. ಅದು ವರ್ಷಕ್ಕೆ 30-32 ಸಾವಿರ ಗ್ಯಾಲನ್‌ಗಳನ್ನು ಡ್ರಾ ಮಾಡಿದೆ. ಹೀಗೆ ಯುದ್ಧ ಕಾಲದಲ್ಲಿ Profits ನ್ನು ಬೇಕಾದಷ್ಟು ಮಾಡಿತ್ತು, ಆಮೇಲೆ ಇನ್‌ಕಂಟ್ಯಾಕ್ಸನ್ನು ಅದಕ್ಕೆ ಲಕ್ಷಗಟ್ಟಲೆ ಹಾಕಿದರು. ಅದನ್ನು liquidate ಮಾಡಿಬಿಟ್ಟರೆ, ಇನ್‌ಕಂಟ್ಯಾಕ್ಸ್ avoid ಮಾಡಬಹುದು ಎಂಬ ಉಪಾಯ ಹುಡುಕಿ, ತಕ್ಷಣವೇ ಅದನ್ನು liquidate ಮಾಡಿ, ಎರಡು ಕಂಪನಿಗಳಾಗಿ ಬೇರೆಬೇರೆ ಮಾಡಿದರು. ಒಂದು ಸುಂದರ ಕೆಮಿಕಲ್ಸ್ ಇನ್ನೊಂದು ಇಂದು ಫಾರ್ಮಸ್ಯೂಟಿಕಲ್ ಕಂಪನಿ. ಅದೇ ಕಂಪನಿಯನ್ನು ಬೇರೆ ಎರಡು ಸ್ಥಳಗಳಲ್ಲಿ ನಡೆಸಿದರು. ಏತಕ್ಕೆಂದರೆ ಇನ್‌ಕಂ ಟ್ಯಾಕ್ಸನ್ನು avoid ಮಾಡುವುದಕ್ಕೆ ಮಾಡಿದಂಥ ಉಪಾಯ. ಈ ರೀತಿ ಇಂತಹ ಕಂಪನಿಗಳು ಬೇಕಾದಷ್ಟಿವೆ.

Sri T. MARIAPPA.—I rise to a point of order. How is this relevant? Simply because Sri Nagiah Reddy raised the other question can he say this? I want him to be relevant in his answer. After all, we cannot shut our ears to hard facts.

Mr. SPEAKER.—The Hon'ble Minister does not yield.

Sri T. CHANNIAH.—Perhaps Sri Mariappa was also visiting that Pharmaceutical Company and spending some time there.

Sri T. MARIAPPA.—I want you to call him to order. After all, how is this relevant?

Sri T. CHANNIAH.—I have quoted an example.

Sri T. MARIAPPA.—Is there a case of misappropriation in this firm?

Sri N. C. NAGAIAH REDDY.—Irrelevant and irresponsible talk should cease.

Mr. SPEAKER.—I am here.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—I rise to a point of order. ಈಗ ಯಾವ ಸಂಸ್ಥೆಗಳ ಹೆಸರನ್ನು ಹೇಳಿ, ಅವುಗಳಲ್ಲಿ ದುರುಪಯೋಗವಾಗುತ್ತಿತ್ತು ಎಂದು ಹೇಳುತ್ತಾರೋ ಅದು ಅವರ ಗಮನಕ್ಕೆ ಬಂದೂ ಹೀಗಿದ್ದರೆ ಅದು ಇನ್ನೂ ಹೆಚ್ಚು ಅನ್ಯಾಯ. ಹೀಗಿರುವಾಗ ಇದನ್ನು ಯಾವರೀತಿ defend ಮಾಡಿಕೊಳ್ಳುತ್ತಿದ್ದಾರೋ ಗೊತ್ತಿಲ್ಲ. ದುರುಪಯೋಗಪಡಿಸಿಕೊಂಡಿರುವುದಕ್ಕೆ ಅವರೂ ಒಳಗಾಗಿದ್ದಾರೆಂಬುದನ್ನು prove ಮಾಡುತ್ತೇನೆ.

Sri J. MOHAMED IMAM.—For a proper appreciation of the situation I would like to ask the Minister to clarify about Amrit Laboratory, Sunduramurthy Company, etc, ಅಮೃತ್ ಕಂಪನಿ ಯಾವುದು, ಸುಂದರಮೂರ್ತಿ ಕಂಪನಿ ಯಾವುದು ಎಂಬುದನ್ನು ಹೇಳಿದರೆ ಒಳ್ಳೆಯದು.

ಶ್ರೀ ಟಿ. ಚನ್ನಯ್ಯ.—ಏಕೆ ಇದನ್ನು ಹೇಳಬೇಕಾಗಿ ಬಂತೆಂದರೆ, ಕೆಲವು ಕಂಪನಿಗಳವರು 32,000 ಗ್ಯಾಲನ್ ವರ್ಷಕ್ಕೆ ತೆಗೆದುಕೊಂಡು ಉಪಯೋಗ ಮಾಡುತ್ತಿದ್ದರೂ ಅಂಥ ಕಾಲದಲ್ಲಿ, ಈಗ ಈ ಪ್ರಶ್ನೆಯನ್ನು ಯಾರು ಎತ್ತಿದರೋ ಅವರೇ ಕೊಟ್ಟಿದ್ದರೂ, ಕೇಳಲಿಲ್ಲ. . . . .

Sri T. MARIAPPA.—I rise to a point of order. How is that relevant? I want you to kindly decide the question. Is it right on the part of the Minister, while questions are put to him, to say that such a thing was not checked because the members of the Assembly did not question? It is his responsibility to find it out. If it is wrong, he must sack them and the Government agency is there to find it out. It is a great reflection on himself if he has omitted.

Mr. SPEAKER.—The only relevancy . . . . .

Sri N. C. NAGAIAH REDDY.—How is it my responsibility to find who has misused the rectified spirit? Is it not the duty of the Government? How could you say that I know it?

Mr. SPEAKER.—It is not the duty of the Hon'ble Member.

ಶ್ರೀ ಟಿ. ಚನ್ನಯ್ಯ.—ಸ್ವಾಮಿ, ಈಗ ಫಾರ್ಮಸ್ಯೂಟಿಕಲ್ ಲೈಸನ್ಸುಗಳನ್ನು ರದ್ದು ಮಾಡಬೇಕಾದರೆ, ಕಾನೂನು ರೀತ್ಯ ಮಾಡಬೇಕು. ಪ್ರತಿಯೊಂದು ಕಂಪೆನಿಯೂ ಅವರಿಗೆ ಕೊಟ್ಟ 'ಲಿಕರ್' ಖಚಿತವಾಗಿ ಸರ್ಕಾರಕ್ಕೆ ಗೊತ್ತಾಗಬೇಕು. ಆ ರೀತಿ ಸರ್ಕಾರದ ಗಮನಕ್ಕೆ ಬಂದರೆ, ಸರ್ಕಾರ ಕಾರ್ಯಕ್ರಮ ತೆಗೆದುಕೊಂಡು ಯಾವರೀತಿ ತಪ್ಪಿತಸ್ಥರಿಗೆ ಶಿಕ್ಷೆ ಮಾಡಬೇಕೋ ಆ ರೀತಿ ಮಾಡುತ್ತದೆ. ಶ್ರೀಮಾನ್ ನಾಗಯ್ಯರೆಡ್ಡಿಯವರು ಮಾನ್ಯ ಸಭೆಗೆ ಈ ಪ್ರಶ್ನೆಯನ್ನು ತಂದ ಕಾಲದಲ್ಲಿ, ಆ ರೀತಿ ಕೊಟ್ಟ ಲಿಕರ್ಸ್ ದುರುಪಯೋಗವಾಗಿ ಅದನು ಕಂಡುಹಿಡಿದು ತನಿಖೆ ಮಾಡಬೇಕೆಂದು ಸರ್ಕಾರದವರು ಇದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ, ಕಾರ್ಯಕ್ರಮ ತೆಗೆದುಕೊಂಡು, ಅವರಿಂದ ಅನೇಕ ವರದಿಗಳು ಬಂದಿವೆ. ಇನ್ನೂ ಪೂರ್ತಿಯಾಗಿಲ್ಲ. ಲಂಚವಿರೋಧ ಇಲಾಖೆಯ ಮುಖ್ಯಾಧಿಕಾರಿಗಳಾದ ಶ್ರೀರಾಮನಾಥಯ್ಯನವರನ್ನು ನೇಮಕ ಮಾಡಿದ್ದೇವೆ. ಅವರು ಯಾವ ಯಾವ ತಪ್ಪುಗಳಿವೆಯೆಂದು ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಅವರು ಕಳುಹಿಸಿರುವ ವರದಿಯ ಮೇಲೆ ನಾವು, *bona fide* purposesಗೆ ಮಾತ್ರ limited quantity issue ಮಾಡಬೇಕು, ಹೆಚ್ಚು ಕೊಡಬಾರದೆಂದು ಎಕ್ಸೈಜು ಕಮೀಷನರಿಗೆ ಆಜ್ಞೆ ಕೊಟ್ಟಿದ್ದೇವೆ. ಅದೇರೀತಿ ಅವರು limited quantity ಕೊಡುತ್ತಿದ್ದಾರೆ. ಯಾವ ಕಾರ್ಯಕ್ರಮ ತೆಗೆದುಕೊಂಡರೂ ತಕ್ಷಣ ಅವಸರದಲ್ಲಿ ಮಾಡಬಾರದು, ಕಾನೂನು ರೀತಿ ಮಾಡಬೇಕು. ಅವರು ಹೇಳಿದರು

(ಶ್ರೀ ಟಿ. ಚೆನ್ನಯ್ಯ)

ಆದ್ದರಿಂದ ನಾವು ಮಾಡಬೇಕು ಎಂದು ನಾನು ಮಾಡುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಮಂತ್ರಿಗಳು ಒಂದು ವಿಚಾರವನು ಪ್ರಸ್ತಾಪ ಮಾಡಿದ್ದಾರೆ. ದೇಶಾದ್ಯಂತ 'ಸ್ಪಿರಿಟ್ಸ್' ಉಪಯೋಗಿಸುವ ಕಂಪನಿಗಳು ಇರುವುದು ಎರಡೇ ಅಲ್ಲ ಇನ್ನೂ ಅನೇಕ ಇವೆ ಎಂಬುದೊಂದು.

Mr. SPEAKER.—Hon'ble Member knows we cannot discuss the matter now. It is closed.

ಶ್ರೀ ಡಿ. ದೇವರಾಜ ಅರಸ್.—ಇನ್ನೊಂದು ಸಮಾಚಾರ ಬೇಕಾಗಿದೆ. That is a serious matter about which the House is not aware; the issue has been raised in the house now.

ಮತ್ತು ಇನ್ನೊಂದು ವಿಚಾರ ಹೇಳಿದರು.

Mr. SPEAKER.—Not now at this juncture. You may take some other time.

*ಡಾ|| ಆರ್. ನಾಗನಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ವಿರೋಧಪಕ್ಷದ ನಾಯಕರು ಒಂದು ಮುಖ್ಯ ಅಂಶವನ್ನು ಹೇಳಿದ್ದಾರೆ. ಅದೇನೆಂದರೆ, ತಮ್ಮ ಕಾಲದಲ್ಲಿ 'ಎಂದರೆ, ಅವರು 1940 ರಿಂದ 1944ರ ವರೆಗೆ ಸಚಿವರಾಗಿದ್ದರು, ಆಕಾಲದಲ್ಲಿ, ವ್ಯವಸಾಯ ಇಲಾಖೆಯಲ್ಲಿ ಹತ್ತು ಹನ್ನೆರಡು ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದೆವು, ಈಗ ಎಪ್ಪತ್ತು ಲಕ್ಷ ಖರ್ಚಾಗುತ್ತಿದೆ ಎಂದು ಹೇಳಿದರು. ಅವರು ವ್ಯವಸಾಯಗಾರರು, ದೊಡ್ಡ ಆರಂಬವನ್ನಿಟ್ಟುಕೊಂಡಿದ್ದಾರೆ, ಆದಕಾರಣ ಅವರಿಗೆ ವ್ಯವಸಾಯ ಇಲಾಖೆಯಿಂದ ಏನೇನು ಒಳ್ಳೆಯದಾಗಿದೆ ಎಂಬುದು ಗೊತ್ತು, ಸ್ವತಃ ಅನುಭವಿಸಿದ್ದಾರೆ. ಇಂಥವರು ಹೀಗೆ ಹೇಳಿದುದನ್ನು ಕೇಳಿ ಬಹಳ ಆಶ್ಚರ್ಯವಾಯಿತು. ಈಗ 70 ಲಕ್ಷ ಒದಗಿಸಿದ್ದೇವೆ, ಎಂದರೆ, ಹೋದ ವರ್ಷಕ್ಕಿಂತ ಈ ವರ್ಷ 24 ಲಕ್ಷ ರೂಪಾಯಿಗಳಿಗೆ ಹೆಚ್ಚುಮಾಡಿದ್ದೇವೆ. ಇದನ್ನು ಅಭಿವೃದ್ಧಿ ಯೋಜನೆಗಳಿಗೆ ಕೊಟ್ಟಿದ್ದೇವೆಂಬುದನ್ನು ಅವರು ಮರೆತರು. ಈ 24ಲಕ್ಷವನ್ನು ಹೇಗೆ ಖರ್ಚುಮಾಡುತ್ತೇವೆಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಕಳೆದ 18ದಿವಸಗಳಿಂದ ಹೇಳುತ್ತಿದ್ದಾರೆ; ಅಣಬೆ ರೋಗ ಬಂದಿದೆ, ಏನಾದರೂ ಮಾಡಬೇಕು, ನರ್ಸರಿ ಗಿಡಗಳನ್ನು ಕೊಡಬೇಕು ಎಂದು ಅನೇಕರು ಹೇಳಿದ್ದಾರೆ. ಇತ್ತೀಚೆಗೆ ಅವರು ಮಂತ್ರಿಯಾಗಿದ್ದು ಬಿಟ್ಟಮೇಲೆ Japanese method of cultivation ಬಂದಿದೆ, ಎಂ. ಎ. 5 ಹತ್ತಿ ಬಂದಿದೆ. ಇದಕ್ಕೆ ಬೆಲೆ ಹೆಚ್ಚುಬರುತ್ತದೆ, 1,125 ರೂಪಾಯಿನಂತೆ ಮಾರುತ್ತಿದ್ದಾರೆ. ಇನ್ನೂ ಹೊಸಹೊಸ ಜಾತಿಯ ಬತ್ತಗಳು ಬಂದಿವೆ. ಒಂದೇ ಉದಾಹರಣೆ ಕೊಟ್ಟು ನಾವು ಖರ್ಚು ಮಾಡಿದುದೆಲ್ಲ ಅದರಲ್ಲೇ ಬಂತು ಎಂಬುದನ್ನು ತೋರಿಸಬಲ್ಲೆ. ಆಗಿಗೂ ಈಗಿಗೂ ನಡುವೆ ಕಾವೇರಿ ನದಿಯಲ್ಲಿ ಬಹಳ ನೀರು ಹರಿದುಹೋಗಿದೆ. ಆಗಿಗೂ ಈಗಿಗೂ ಧಾರಣೆ ಎಷ್ಟೋ ಹೆಚ್ಚಿವೆ. ಈಗ ನನಗೆ ತಲೆ ಬೆಳ್ಳಗಾಗಿದೆ. ನಾನು ಚಿಕ್ಕವನಾಗಿದ್ದಾಗ ರೂಪಾಯಿಗೆ 10-16 ಸೇರು ಜೋಳ ಮಾರುತ್ತಿದ್ದರು. ಈಗ ಎಷ್ಟಾಗಿದೆಯೆಂಬದನ್ನು ನೋಡಬೇಕು. ಈಚೆಗೆ ವ್ಯವಸಾಯದ ಕಾಲೇಜು ಸ್ಥಾಪನೆ ಮಾಡಿದ್ದೇವೆ, ಎರಡು ವ್ಯವಸಾಯದ ಶಾಲೆಗಳಿವೆ.

12-30. P.M.

ಆದರೆ Opposition leader criticise ಮಾಡುವುದು ಬಹಳ ಒಳ್ಳೆಯದು. ನಾವು ಮತ್ತೆ ಹೊರಗೆ ಹೋದ ಮೇಲೆ ನಮ್ಮ ಹೆಸರನ್ನೆತ್ತಿ ಇನ್ನೊಬ್ಬರು criticise ಮಾಡಬಾರದು. ಶ್ರೀಮಾನ್ ಇಮಾಂ ಸಾಹೇಬರು ಮಂತ್ರಿಗಳಾಗಿದ್ದಾಗ ಒಂದು ಆರ್ಡರ್ ಹೊರಡಿಸಿದರು. ಅವೊತ್ತಿನ ದಿನ ಮಾಡಿದ್ದು ಇವೊತ್ತಿನ ದಿನ ನಾವು ಅನುಭವಿಸುತ್ತಿದ್ದೇವೆ. Manures, Fertilisers ಇವಕ್ಕೆಲ್ಲ ಶೇಕಡ 50, ಶೇಕಡ 75 Concession rates ಮೇಲೆ ಕೊಡಬೇಕೆಂದು 1943ರಲ್ಲಿ ಒಂದು ಆರ್ಡರ್ ಮಾಡಿದರು. ಆಗ ರಿಯಾಯಿತಿಗಳನ್ನು ಕೊಟ್ಟುದರ ಲೆಕ್ಕಗಳನ್ನು ಈಗ clear ಮಾಡುತ್ತಿದ್ದೇವೆ. ಈಗ 14,60,000 ರೂಪಾಯಿ ಹೇಗೆ ಹೋಗಿದೆ ಎಂದು ಎಲ್ಲ ಸದಸ್ಯರಿಗೂ ಗಾಬರಿಯಾಗುವ ಹಾಗೆ ಹೇಳಿದ್ದಾರೆ. ಕಳೆದ ಅಕ್ಟೋಬರ್ ಅಧಿವೇಶನದಲ್ಲಿ 13 ಲಕ್ಷ ರೂಪಾಯಿಗಳು ಬೇಕು ಎಂದು ಸಪ್ಲಿಮೆಂಟರಿ ಡಿಮ್ಯಾಂಡ್ ಕೇಳಿದಾಗ,

> "to meet adjustments of pending Bills in respect of concessions allowed to raiyats by way of selling manures at 50 per cent and 75 per cent cost price as stipulated in the Government Order (of Mr. Imam) dated 30th July 1943."

Sri J. MOHAMED IMAM.—For manures every year a provision of 8 lakhs is being made to cover losses.

Dr. R. NAGAN GOWDA.—These accounts have been gone through by the Public Accounts Committee in their report of 1954 of which my Hon'ble friend was also a member and it was suggested approximately as 26 lakhs which amount they have recommended to be written off. They say:

> "such portion of the advances as represents the subsidy or losses may be written off by obtaining a specific grant."

Sri K. PUTTASWAMY.—If it were subsidy, then how is it shown as loss?

Dr. R. NAGAN GOWDA.—Sir, it was completely explained in the Supplementary Demand for 1955-56 of the last Dasara Session. I refer to the revised estimates for 1955-56 relating to an amount of Rs. 14,60,000 which includes this amount of 13 lakhs; and so I was surprised that my friend from Chennagiri and my friend from Jagalur should have raised such a howl about this; and my friend from Madhugiri

asked us that we should have a committee for this.

A MEMBER.—No no.

Dr. R. NAGAN GOWDA.—I am sorry. Thank you.

And then, Sir, there was another important point that was raised and that was by Sri Imam about tractors. In 1948 there were about 23 tractors. Between 48 and 49, the number that was purchased was 128. But, it must be remembered that tractors also get old as men do. They naturally require repairs after a period of ten years. We could have closed this tractor business but we could not do it because there is so much of demand for them. Similarly, bulldozers. This year we have raised the charges of tractors and bulldozers; still people are taking them. My friend Sri Kemparaj raised a point and I sympathise with the point that he raised.

ಕೋ-ಆಪರೇಟಿವ್ ಸೊಸೈಟಿಗಳಿಂದ ಸಾಲ ಪಡೆಯಬೇಕಾದರೆ ಜಮೀನಾಗಲಿ ಅಥವಾ ಅಡಮಾನವಾಗಲಿ ಇರಬೇಕು, ಏನೂ ಇಲ್ಲದಿರುವ ಬಡವರು ಸಾಲ ತೆಗೆದುಕೊಳ್ಳಬೇಕಾದರೆ ಏನು ಕೊಡಬೇಕು ಎಂಬುದಾಗಿ ಪ್ರಸ್ತಾಪ ಮಾಡಿದರು. ಇಂಡಿಯಾ ಸರ್ಕಾರದವರು ಸಹ ಇದನ್ನು ಯೋಚನೆ ಮಾಡುತ್ತಿದ್ದಾರೆ. ಕೆಲವು ಸೊಸೈಟಿಗಳಲ್ಲಿ ಒಂದು ವ್ಯವಸ್ಥೆ ಮಾಡಿದ್ದೇವೆ, ಈ ವಿಷಯ ಯೋಚನೆಯಲ್ಲಿದೆ. ಈ ವಿಚಾರದಲ್ಲಿ ಇಂಡಿಯಾ ಸರ್ಕಾರದೊಡನೆ ಪರ್ಯಾಲೋಚನೆ ಮಾಡುತ್ತಿದ್ದೇವೆ. Sir, another point was raised by Sri Nagaiah Reddy about Horticultural gardens. ಈ ವರ್ಷ ಲಾಲ್‌ಬಾಗ್ ಹತ್ತಿರವಿರುವ ಪ್ರದೇಶವನ್ನು ಅಕ್ವೈರ್ ಮಾಡುತ್ತಿದ್ದೇವೆ. ಲಾಲ್‌ಬಾಗ್ ಹಿಂದೆ ಕಲ್ಲು ಪ್ರದೇಶ, ಒಂದು ದೊಡ್ಡ ಗುಂಡಿ ಇದೆ. ಅದು ಲಾಲ್‌ಬಾಗ್ ಪಕ್ಕದಲ್ಲಿದೆ. ಆದಕಾರಣ ಅದನ್ನು ತೆಗೆದುಕೊಳ್ಳಬೇಕೆಂದು ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಇದೆ. ಆ ಗುಂಡಿಯಲ್ಲಿ ಅಗಸರು ಬಟ್ಟೆ ಒಗೆಯುತ್ತಾರೆ. ಆಮೇಲೆ ಈಗ ಬೆಂಗಳೂರಿನ ವೈಶಿಷ್ಟ್ಯ ಗಾರ್ಡನ್ಸ್ ಮತ್ತು ಪಾರ್ಕ್ಸ್ ಹೊಂದಿರುವುದು ಇಂಡಿಯಾ ದೇಶದಲ್ಲೇ ಪ್ರಸಿದ್ಧಿಯಾಗಿದೆ, ಪ್ರಪಂಚಕ್ಕೇ ಪ್ರಸಿದ್ಧಿಯಾಗಿದೆ. ಇಂಥಾದ್ದಕ್ಕೆ ತಕ್ಕಷ್ಟು ಖರ್ಚು ಮಾಡಿದೆ. ಬೋರ್ ವೆಲ್ಸ್‌ಗೆ ಖರ್ಚು ಮಾಡುತ್ತಿದ್ದಾರೆಂದು ಹೇಳಿದರು. ತಿಪ್ಪಗೊಂಡನಹಳ್ಳಿಯಿಂದ ನೀರನ್ನು ತಂದುಕೊಂಡು ಉಪಯೋಗಿಸುವುದಕ್ಕೆ ಬದಲಾಗಿ ಇಲ್ಲೇ ಬೋರ್‌ವೆಲ್ಸ್ ತೆಗೆದು ನೀರನ್ನೊದಗಿಸಲು ಪ್ರಯತ್ನ ಮಾಡೋಣ ಎಂಬ ಉದ್ದೇಶವಿದೆ. Another point was raised against a person who is not here to defend himself. ಶ್ರೀ ನಂಜಪ್ಪನವರು ಮೂರು ಲಕ್ಷ ರೂಪಾಯಿಗಳವರೆಗೆ ದುರುಪಯೋಗ ಮಾಡಿದ್ದಾರೆ, ಅಕೌಂಟ್ಸ್ ರಿಕನ್‌ಸಿಲಿಯೇಷನ್ ಆಗಬೇಕು ಎಂದು ಹೇಳಿದರು. ಆದರೆ ಅಕೌಂಟ್ಸ್ ನೋಡುವವರು ಎಲ್ಲಕ್ಕೂ ವೆಚ್ಚ ತೋರಿಸಿದ್ದಾರೆ. ಆದಕಾರಣ ಮೂರು ಲಕ್ಷ ರೂಪಾಯಿ ಅವರ ಮೇಲೆ ಹೇಳಿರುವುದು ಸರಿಯಲ್ಲ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕೆ ಶಾಖೆಯ ಮಂತ್ರಿಗಳು).—ಸ್ವಾಮಿ, ಇಮಾಂ ಸಾಹೇಬರವರು ಆಂಟಿಕರಪ್ಷನ್ ಮತ್ತು ಎಫಿಷಿಯನ್ಸಿ ಆಡಿಟ್ ಇಲಾಖೆಯನ್ನು ವಜಾ ಮಾಡಿದರೆ ಉತ್ತಮವೆಂದು ಸಲಹೆ ಮಾಡಿದರು. ಅದು ಈ ದಿವಸ ಏರ್ಪಾಡಾಗಿಲ್ಲ. 1946ನೆಯ ಇಸವಿಯಲ್ಲಿ ಶ್ರೀ ಇಮಾಂರವರು ಮಂತ್ರಿಗಳಾಗಿದ್ದಾಗ ಶ್ರೀ ಬ್ಯಾನರ್ಜಿಯವರ ಛೇರ್ಮನ್‌ಷಿಪ್ಪಿನಲ್ಲಿ ಒಂದು ಸಮಿತಿ ಏರ್ಪಾಡು ಮಾಡಿ ಅನಂತರ ಎಫಿಷಿಯೆನ್ಸಿ ಆಡಿಟ್ ಇಲಾಖೆ ಕೆಲಸಮಾಡಲು ಪ್ರಾರಂಭಿಸಿತು. ಇಲಾಖಾ ಮೊಖ್ತೇಸರರು ಮೇಲ್ವಿಚಾರಣೆ ಮಾಡುವುದು ಕಡಮೆಯಾಗಿದೆ, ಉಸ್ತುವಾರಿ ಕಡಮೆಯಾಗಿದೆ, ಅದರಿಂದ ಲಂಚ ರುಷವತ್ತು ಹೆಚ್ಚಾಗಿದೆ ಎಂದು ಹೇಳಿದರು. ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ, ಲಂಚ ರುಷುವತ್ತನ್ನು ತಡೆಗಟ್ಟುವುದಕ್ಕೆ ಮತ್ತು ದಕ್ಷತೆ ಹೆಚ್ಚಿಸುವುದಕ್ಕೆ ಎಫಿಷಿಯನ್ಸಿ ಆಡಿಟ್ ಇಲಾಖೆ ಏರ್ಪಾಡಾಯಿತು. ಇಲಾಖಾ ಮೊಖ್ತೇಸರರು ತಮ್ಮ ಇಲಾಖೆಗಳಲ್ಲಿ ಕೆಲಸ ಮಾಡುವವರನ್ನು ಬಿಟ್ಟುಕೊಡಲು ಹಿಂದೆಗೆಯುತ್ತಾರೆ, ಅದಕ್ಕೆ ಅವಕಾಶವಿರಬಾರದು ಎಂದು, ಸರಿಯಾಗಿ ಮೇಲ್ವಿಚಾರಣೆ ನೋಡಿಕೊಳ್ಳಲು ಲಂಚ ನಿರೋಧ ಇಲಾಖೆಯನ್ನು ಏರ್ಪಾಡು ಮಾಡಲಾಯಿತೇ ವಿನಾ ಇಲಾಖಾ ಮೊಖ್ತೇಸರರ ಮೇಲ್ವಿಚಾರಣೆಯನ್ನು ಕಡಮೆ ಮಾಡಬೇಕೆಂದಲ್ಲ. ಆದುದರಿಂದ ಆಯಾಯ ಇಲಾಖೆಯ ಮೊಖ್ತೇಸರರುಗಳು ತಮ್ಮ ತಮ್ಮ ಇಲಾಖೆಯಲ್ಲಿ ಖರ್ಚು ಮಾಡತಕ್ಕ ಮೊಬಲಗು ಹೆಚ್ಚಾಗಿರುತ್ತದೆ. ಹಾಗೆ-ಆ ಮೊಬಲಗನ್ನು ಖರ್ಚುಮಾಡಬೇಕಾದರೆ ಅವರು ಯಾವ ರೀತಿ ಕೆಲಸ ನಡೆಸಬೇಕು, ಯಾವ ಯಾವ ನಿಬಂಧನೆಗಳನ್ನು ಅನುಸರಿಸಬೇಕು, ಆ ಕೆಲಸ ಕಾರ್ಯಗಳು ಬೇಗ ನೆರವೇರುವಂತೆ ಮಾಡಲು ಅವರೇನು ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುದರ ಬಗ್ಗೆ ಈಗಾಗಲೇ ಕೆಲವು ನಿಯಮಗಳನ್ನು ವಿಧಾಯಕ ಮಾಡಲಾಗಿದೆ. ಆದರೆ ಈ ಇಲಾಖೆಗಳಲ್ಲಿ ಅಲ್ಲಲ್ಲೆ ಕಂಡು ಬಂದಂಥ ಅಲ್ಪ ಸ್ವಲ್ಪ ದೋಷಗಳನ್ನು ಸರಿಪಡಿಸದಿದ್ದರೆ ಅವುಗಳು ಅದೇ ಮಾರ್ಗದಲ್ಲಿ ಮುಂದುವರಿದರೆ ಅದರಿಂದ ಅನಾನುಕೂಲವಾಗುತ್ತದೆ, ಅವುಗಳನ್ನು ಬೇಗ ಸರಿಪಡಿಸಬೇಕೆಂದು ಮಾನ್ಯ ಸದಸ್ಯರುಗಳು ಹೇಳಿರತಕ್ಕದ್ದು ಸಹಜವಾಗಿಯೇ ಇದೆ. ಈ ವಿಚಾರದಲ್ಲಿ ಈ ಹಿಂದೆ ಒಂದು ಸಂದರ್ಭದಲ್ಲಿ ನಾನು ಈಗಾಗಲೇ ಒಂದು ಇಂಟಲಿಜನ್ಸ್ ಡಿಪಾರ್ಟ್‌ಮೆಂಟನ್ನು ಕೂಡ ತೆರೆಯಬೇಕೆಂಬ ಆಲೋಚನೆ ಸರ್ಕಾರಕ್ಕಿರುವುದಾಗಿ ತಿಳಿಸಿದ್ದೇನೆ. ಈ ಇಲಾಖೆಯ ಮೂಲಕ ಅಧಿಕಾರಿಗಳಲ್ಲಿ ದಕ್ಷತೆ ಹೆಚ್ಚಿಸಿ, ಅವರು ಅವರ ಕೆಲಸಕಾರ್ಯಗಳನ್ನು ನಿರ್ವಂಚನೆಯಿಂದ ಕೈಗೊಂಡು ಅವುಗಳನ್ನು ನಡೆಸುವ ಹಾಗೆ ಮಾಡಬೇಕೆಂಬ ಉದ್ದೇಶ ಸರ್ಕಾರದವರಿಗೆ ಇದೆಯೆಂದು ತಿಳಿಸಿರುತ್ತೇನೆ. ಇನ್ನು ಈ P. W. D. ಇಲಾಖೆಯಲ್ಲಿ ದೇಶಾಭಿವೃದ್ಧಿಯ ಬಗ್ಗೆ ಕೈಗೊಳ್ಳಬೇಕಾದ ನಾನಾ ಕೆಲಸಕಾರ್ಯಗಳು ಪ್ರಗತಿದಾಯಕ ಮಾರ್ಗದಲ್ಲಿ ಮುಂದುವರಿಯುವಂತೆ ಮಾಡುವುದಕ್ಕೂ ಮತ್ತು ಆ ಇಲಾಖೆಗೆ ಒದಗಿಸತಕ್ಕ ಹಣವನ್ನು ಒಂದು ಸುವ್ಯವಸ್ಥೆಯ ಮಾರ್ಗದಲ್ಲಿ ಖರ್ಚಾಗುವಂತೆ ಮಾಡುವುದಕ್ಕೂ ಮತ್ತು ಆ ಇಲಾಖೆಯಲ್ಲಿ ಇನ್ನೂ ಸಾಧ್ಯವಾದ ಮಟ್ಟಿಗೆ ಖರ್ಚನ್ನು ಕಮ್ಮಿ ಮಾಡುವುದಕ್ಕೂ ಯಾವ ರೀತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ವಿಚಾರ ಕೂಡ ನಮ್ಮ ಗಮನದಲ್ಲಿಟ್ಟುಕೊಂಡಿದ್ದೇನೆ. ಆದರೆ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ಮಾನ್ಯ ಸದಸ್ಯರು ಕೆಲವರು ಈ ವಿಚಾರದಲ್ಲಿ ಸೂಕ್ತ ಸಲಹೆಗಳನ್ನೇನಾದರೂ ಕೊಡಬಹುದೆಂದು ನಾನು ಆಶಿಸುತ್ತಿದ್ದೆನು. ಈ ಬಗ್ಗೆ ಕೆಲವು ಮಾನ್ಯ ಸದಸ್ಯರು ಅಂಥ ರಚನಾತ್ಮಕ ಸಲಹೆಗಳೇನನ್ನೂ ಕೊಡದೆ ಇದನ್ನೇ ವಜಾ ಮಾಡಿಬಿಡಿ ಎಂದರು. ಆದರೆ ಇದು ಅಷ್ಟು ಸರಿಯಲ್ಲ ಮತ್ತು ಸೂಕ್ತವೂ ಅಲ್ಲ ಎಂದು ನಾನು ತಿಳಿಸಲಿಚ್ಛಿಸುತ್ತೇನೆ.

ಇನ್ನು ಶ್ರೀ ಎಚ್. ಕೆ. ವೀರಣ್ಣಗೌಡರು ಈ P.W.D. ಇಲಾಖೆ ದೇಶಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಜನರಿಗೆ ಹಿತವಾಗತಕ್ಕ ಮಾರ್ಗದಲ್ಲಿ ಹಣವನ್ನು ಖರ್ಚು ಮಾಡುವಂತೆ ಏರ್ಪಾಡಾಗಬೇಕೆಂದು ಹೇಳಿದ್ದಾರೆ. ಇದು ಎಲ್ಲರೂ ಒಪ್ಪತಕ್ಕಂಥ ಮಾತಾಗಿದೆ. ಇತ್ತೀಚೆಗೆ ದೇಶಾಭಿವೃದ್ಧಿ ಕೆಲಸ ಕಾರ್ಯಗಳ ಒತ್ತಡ ಬಹಳ ಜಾಸ್ತಿಯಾಗುತ್ತಿದೆ. ಜನರು ಈ ಕೆಲಸಕಾರ್ಯಗಳೆಲ್ಲಾ ಬಹಳ ಬೇಗ ಆಗಬೇಕೆಂಬ ಆಕಾಂಕ್ಷೆಯುಳ್ಳವರಾಗಿದ್ದಾರೆ. ಕೆಲಸ ನಡೆಯತಕ್ಕ ವೇಗ ಮತ್ತು ಅವುಗಳ ಪ್ರಮಾಣ ಬಹಳ ಹೆಚ್ಚಿನ ಮಟ್ಟದಲ್ಲಿ ನಡೆಯಬೇಕೆಂಬ ಆಸೆ ಎಲ್ಲೆಲ್ಲಿಯೂ ಮೂಡಿರುತ್ತದೆ. ಆದರೆ ಈ ಕಾರ್ಯಗಳನ್ನೆಲ್ಲಾ ಒಂದು ಮಟ್ಟದಲ್ಲಿ ಒಂದು ಪಾಲಿಸಿ ಪ್ರಕಾರ ನಮ್ಮಲ್ಲಿರತಕ್ಕ ಹಣದ ಸೌಲಭ್ಯವನ್ನು ನೋಡಿಕೊಂಡು ಅವುಗಳನ್ನು ನಾವು ನಡೆಸಿಕೊಂಡು ಬರುತ್ತಿದ್ದೇವೆ. ಆದರೆ ಕೆಲಕೆಲವು ಕಾರಣಗಳಿಂದ ಈ ದಿವಸ ಕೆಲವು ಕಡೆ ಕೆಲಸಗಳು ಬಹಳ ನಿಧಾನವಾಗಿರುತ್ತವೆ. ಹಾಗೆ ನಿಧಾನವಾಗಿರತಕ್ಕದ್ದು ಕೆಲವು ಅನಿವಾರ್ಯಗಳಿಂದ. ಆದರೆ ಹಾಗಾಗಬಾರದಾರಗಿತ್ತು. ಆದರೆ ನಾವು ಎಷ್ಟೆಷ್ಟರ ಮಟ್ಟಿಗೆ ಸಾರ್ವಜನಿಕರಿಗೆ ಅನುಕೂಲಗಳನ್ನು ಕಲ್ಪಿಸಬಹುದಾಗಿತ್ತೋ ಅಷ್ಟರ ಮಟ್ಟಿಗೂ ಅವುಗಳನ್ನು ನಡೆಸಿಕೊಂಡು ಬಂದಿರುತ್ತೇವೆ. ಆದರೆ ಈವರಿಗೆ ಎಷ್ಟೋ ಕಡೆಗಳಲ್ಲಿ ಸ್ಕೂಲುಗಳು, ಆಸ್ಪತ್ರೆಗಳು, ಬಾವಿಗಳು, ರಸ್ತೆ ಇತ್ಯಾದಿಗಳನ್ನೆಲ್ಲಾ ಕಟ್ಟಿಸಿಕೊಟ್ಟಿದ್ದಾಗ್ಯೂ ಇವುಗಳ ಬಗ್ಗೆ ಒತ್ತಡ ದಿನದಿನಕ್ಕೂ ಜಾಸ್ತಿಯಾಗುತ್ತಿದೆ. ಹೀಗೆ ಸರ್ಕಾರಕ್ಕೆ ವಿಶೇಷ ಒತ್ತಡ ಹಾಕಿದರೆ ಅವುಗಳನ್ನು ನಡೆಸಲು ಸರ್ಕಾರಕ್ಕೆ ಬಹಳ ಕಷ್ಟವಾಗುತ್ತದೆ. ವರ್ಷವರ್ಷವೂ ಎಷ್ಟು ಹಣದ ಸೌಕರ್ಯವಿರುತ್ತದೋ ಅಷ್ಟನ್ನೂ ನಾವು ಈ ದಿವಸ ಈ ಸ್ಕೂಲು ಆಸ್ಪತ್ರೆ-ರಸ್ತೆ ಇವುಗಳ ಬಗ್ಗೆ ಖರ್ಚು ಮಾಡುತ್ತಿದ್ದೇವೆ. ಆದರೆ ಈಗ ತಾನೆ ಒಬ್ಬ ಮಾನ್ಯ ಸದಸ್ಯರು ತಮ್ಮ ತಾಲ್ಲೂಕಿನಲ್ಲಿರತಕ್ಕ 80 ಕೆರೆಗಳ ರಿಪೇರಿಯನ್ನೂ ಕೂಡಲೇ ಸರ್ಕಾರ ಕೈಗೊಳ್ಳಬೇಕೆಂದು ಹೇಳಿದರು. ಹೀಗೆ ಪ್ರತಿಯೊಂದು ತಾಲ್ಲೂಕಿನಲ್ಲೂ ಎಷ್ಟೆಷ್ಟು ಕೆರೆಗಳ ರಿಪೇರಿ ಕೆಲಸ ನಡೆಯಬೇಕಾಗಿದೆಯೋ ಅಷ್ಟೆಲ್ಲವನ್ನೂ ಏಕ ಕಾಲದಲ್ಲಿಯೇ ನಡೆಸಬೇಕೆಂದರೆ ಅದು ಸಾಧ್ಯವಾಗದ ಮಾತು ಎಂಬುದನ್ನು ತಾವೆಲ್ಲರೂ ಒಪ್ಪುತ್ತೀರೆಂದು ನಂಬಿದ್ದೇನೆ. ಈವರೆಗೆ ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಂಡಿದ್ದಾರೆ. ಅವುಗಳನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತಂದು ದೇಶಾಭಿವೃದ್ಧಿಯ ಕೆಲಸಕಾರ್ಯಗಳು ಬಹಳ ತ್ವರಿತದಿಂದ, ನ್ಯಾಯ ನೀತಿಯ ಮಾರ್ಗದಲ್ಲಿ ಯಾರೊಬ್ಬರಿಗೂ ಅನ್ಯಾಯವಾಗದ ರೀತಿಯಲ್ಲಿ ಅವುಗಳನ್ನು ಮುಂದುವರಿಸತಕ್ಕ ಏರ್ಪಾಡು ಮಾಡುತ್ತೇವೆಂದು ತಮ್ಮೆಲ್ಲರಿಗೂ ನಾನು ಈಗ ಭರವಸೆ ಕೊಡುತ್ತೇನೆ.

ಇನ್ನು ಶ್ರೀ ನಾಗರಾಜಮೂರ್ತಿಯವರು ಸರ್ಕಾರದವರು ಏನೂ ಕೆಲಸ ಮಾಡಿಲ್ಲವೆಂದು ಆರೋಪಣೆ ಮಾಡಿರುತ್ತಾರೆ. ಆದರೆ ಅವರಿಗೆ ನಾನು ಹೆಚ್ಚಿಗೆ ಹೇಳಬೇಕಾದ್ದೇನೂ ಇಲ್ಲ. ಈ ದಿವಸ ಅವರು ಓಡಾಡತಕ್ಕ ದಾರಿಯಲ್ಲಿ ನೋಡುತ್ತಿರುವಂಥ ಹೊಸ ಹೊಸ ಆಸ್ಪತ್ರೆಗಳು, ಹೈಸ್ಕೂಲುಗಳು, ಮಿಡಲ್ ಸ್ಕೂಲುಗಳು ಇತ್ಯಾದಿಗಳನ್ನೆಲ್ಲಾ ನೋಡಿದರೆ ಅವರಿಗೇ ಈ ವಿಚಾರಗಳೆಲ್ಲಾ ಗೊತ್ತಾಗುತ್ತದೆ. ಮಾನ್ಯ ಸದಸ್ಯರುಗಳಿಗೆಲ್ಲಾ ಈ ಹೆಚ್ಚು ಹೆಚ್ಚು ಆಸ್ಪತ್ರೆ, ಸ್ಕೂಲು, ರಸ್ತೆ ಇತ್ಯಾದಿಗಳನ್ನು ಮಾಡಿಸಬೇಕೆಂಬ ವಿಚಾರದಲ್ಲಿ ಎಷ್ಟು ಕುತೂಹಲ ಮತ್ತು ಆಕಾಂಕ್ಷೆಗಳಿರುತ್ತವೆಯೋ ಅಷ್ಟೇ ಅವುಗಳ ಬಗ್ಗೆ ಸರ್ಕಾರದವರಿಗೂ ಇದೆ. ಇನ್ನು ಈ ಸಾರ್ವಜನಿಕ ಕೆಲಸ ಕಾರ್ಯಗಳನ್ನು ಒಂದು ಬಂದೋಬಸ್ತಾದ ರೀತಿಯಲ್ಲಿ ನಡೆಸಿಕೊಂಡು ಹೋಗತಕ್ಕ ಬಗ್ಗೆ ಈ ದಿವಸ ಆ ಎಫಿಷಿಯೆನ್ಸಿ ಆಡಿಟ್ ಇಲಾಖೆಯವರು ವಿಶೇಷ ಆಸಕ್ತಿ ವಹಿಸಿ ಕೆಲಸಮಾಡುತ್ತಿದ್ದಾರೆ. ಈ ದಿವಸ ಈ ಸಂಬಂಧದಲ್ಲೇ ಎರಡು ಮೂರು ವಿಷಯಗಳು ನನ್ನ ತಿಳಿವಳಿಕೆಗೆ ಬಂದಿರುತ್ತವೆ. ಆದರೆ ಅವುಗಳನ್ನೆಲ್ಲಾ ಈ ಸಭೆಯ ಮುಂದೆ ಬಿಚ್ಚಿಡತಕ್ಕದ್ದು ಸೂಕ್ತವಲ್ಲ. ಇನ್ನು ಮುಂದಕ್ಕೆ ಈ ಅನ್ಯಾಯಗಳೊಂದೂ ನಡೆಯುವುದಕ್ಕೆ ಅವಕಾಶವಿಲ್ಲ. ಆ ಬಗ್ಗೆ ಸೂಕ್ತ ಕಾರ್ಯಗಳನ್ನು ಕೈಗೊಳ್ಳಲಾಗುತ್ತದೆಂಬ ಸರ್ಕಾರದ ಭರವಸೆಯನ್ನು ತಮ್ಮೆಲ್ಲರಿಗೂ ಕೊಡುತ್ತೇನೆ. ಆದುದರಿಂದ ತಾವು ಈ ಅಪ್ರೋಪ್ರಿಯೇಷನ್ ಬಿಲ್ಲಿಗೆ ತಮ್ಮೆಲ್ಲರ ಬೆಂಬಲ ನೀಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri K. HANUMANTHAIYA.—Sir, my Hon'ble Friend the Leader of the Opposition has been repeating his argument probably for the last four years and probably even at the previous session of the Assembly.

Sri J. MOHAMED IMAM.—They are first-class, new arguments. There is no repetition.

Sri K. HANUMANTHAIYA.—They are neither new nor of first rate importance.

Sri L. SIDDAPPA.—The nature of the reply also is being repeated.

Sri K. HANUMANTHAIYA.—I can only say that the budget speech I have made clearly explains all the points he has raised. May be that he has not read it carefully. May be that he has read it and found no other argument to resort to except the old arguments. It is true that Rs. 68 crores odd are mentioned in the Appropriation Bill. But actually recoveries to the extent of Rs. 15 crores 44 lakhs 91,836 are included in the total amount of the Bill. Details of such recoveries by major heads are indicated on pages 4 to 9 of the Schedule of Demands for Grants in Volume I of the Budget Estimates. The figures are there. The recoveries represent drawals from funds like Irrigation Development

Fund, Sugarcane Cess Fund, etc. It also represents the grants from the Government of India to centrally sponsored and other schemes. It also represents moneys drawn from credits appearing under heads like Civil Works, 81 A Capital outlay on Electrical Schemes. All these details are given in the Budget Memorandum. The net expenditure under the following sections is as follows—I am giving the figures under Charged, Voted and Total.

Expenditure met from Revenue.

Charged	...	Rs. 3,01,42,300
Voted	...	Rs. 26,65,16,200

Working Expenses of Industrial and Commercial Concerns.

Charged	...	Rs. 3,65,800
Voted	...	Rs. 3,21,51,200
Total	...	Rs. 3,25,17,000

Capital Outlay not met from Revenue.

Voted	...	Rs. 14,50,96,800

Total is the same.

Advances and Loans.

Voted	...	Rs. 3,12,86,000

Total is the same. In fact all the details under Loans and Advances I have elaborately discussed on page 43 of the budget speech.

Public Debt (repayments).

Charged	...	Rs. 2,20,15,000

Total is the same.

Therefore the total of Charged and Voted items comes to Rs. 52,74,73,300.

My friend asked again: How are you going to meet the deficit? How are you going to find money for it? That also has been explained in the budget speech. It is partly from incomings, from Public Accounts and partly from the opening balance.

Sir, the Leader of the Opposition made out a plausible case that when he was the Minister the interest charges amounted to only a few lakhs but now it comes to 3 crores odd. It is true. In the villages whenever there is a heated argument about some property dispute and other things, by way of what is called argument they say: Why do you boast? All your property is not even worth my debts. Therefore the proportion of expenditure has increased so much that all expenditure and incomings of the previous regime fall into insignificance. The kind of work that is now being taken up like the Bhadra and Honnemaradu Projects and the Mahatma Gandhi Hydro Electric Works are all of such colossal proportion that naturally you have to borrow and all the borrowed money is capital there. The very fact that our loan was over-subscribed last year within an hour shows the amount of confidence the public have in the financial position of the State. It is true that we are spending more than we actually earn in a year. That is the deficit that is evident from the budget papers. But leave that alone, take the picture as a whole, how much money has been borrowed, how much capital has been created. If you place these two aspects side by side, you will see much more property has been created in the State than the loans outstanding against them. With one observation I agree, that the State Governments have come to depend upon Central Government to a very large extent and that dependence is increasing yearly—almost annually it is increasing. That is the common point with which every member of this House agrees. That is why I have been repeating that the Constitution has made a provision for the Finance Commission to be appointed every five years examining for the financial position between the Centre and the States. We have to urge our point of view before that Commission. When the Constitution itself contemplates the change of financial position between State and State and between State and Centre, there is no point in going on emphasising that the position of the State is becoming progressively weak. It is becoming weak. We have to place that point before the concerned

(SRI K. HANUMANTHAIYA.)

authorites and make suitable adjustments between the Centre and the State.

Sir, my friend Sri Mulka Govinda Reddy raised the question of District Boards and I have answered on an another occasion; I do not want to repeat it.

In regard to Hindi Commission, Sir, what observation he made, generally Government is in agreement with it. The pressure of time was such that we had not had the time to disuss it. But so far as South India is concerned even without a discussion one can sense the common opinion in regard to Hindi. I agree with the observation of Sri Govinda Reddy that Hindi should not be forced on Mysore State or on any other State in South India. English has not only taught us scientific and technical knowledge but also the tenets of democracy. I very much wonder whether we could have had this system of representative democratic system of Government but for the English language. To cry hoarse against English language is a kind of fanaticism as I have already said on one occasion. So far as South India is concerned, if enthusiasts of Hindi language force it or make the position of non-Hindi speaking people very difficult, that will be a very unhappy day and that is the surest way of endangering Indian unity. I am certain, when the decision is taken finally on this subject, the Parliament and the Government of India will do whatever is necessary, will sufeguard the Indian unity, will not allow Hindi enthusiasts to break up this unity which we have forged after several centuries.

Sri Mulka Govinda Reddy again said that rural indebtedness must be liquidated. He knows that the Reserve Bank has sponsored a scheme and that is specifically meant for purposes of liquidating the rural indebtedness. One of the ideas that prevailed in the matter of nationalising the Imperial Bank and the establishment of the State Bank of India is for the purpose of helping the rural folk to get easy loans and to be free from the clutches of money-lenders. Never before in our history has such a bold and effective measure been taken. That one measure ought to satisfy Sri Mulka Govinda Reddy that the Congress Governments in India are doing more for rural folk than for any other set of individuals.

Sir, my friend Sri Basappa suggested some interim relief for the non-gazetted officers. I did not fully understand what his suggestion was. If he writes to me what his definite proposal is, I would be very happy to examine it.

Sir, in my notes, next appears the name of Sri Veeranna Gowda. I will come to him last. I will take his points for answering at the conclusion of my speech.

MR. SPEAKER.—There are only two minutes more.

SRI K. HANUMANTHAIYA.—Sir, some reckless allegations have been made and I say with all sense of responsibility that it has become the habit of some. The House will find that certain members are very enthusiastic when the question of granting licence to the Race Course comes up and certain members are very critical when licence has to be granted to R.M.D.C. I may assure this House that after I came to office, all people who were taking a good deal of interest in canvassing for licence have completely stopped. I am not allowing even one individual to step into my house who comes to plead for licence for this man or that man or for this cause or that cause. Whether that is true or not, subsequently my Hon'ble friends will judge me and time will show the truth of it. If necessary, as to why these members take up a partisan attitude in regard to the Race Club, R.M.D.C. and Exise Contractors, if this House wants, a whole day can be set apart for discussing it and I will lay bare all those things pertaining to them and leave them for the judgment of the House. I do not want to enter into personal acrimony. Sri Veeranna Gowda today has set a noble example in assuaging our feelings and telling us to follow very sincerely the teachings of Mahatma Gandhi. I agree with him. I have understood him correctly. Many a time when he

gets into what is called righteous mood, he becomes very angry.

Sri H. K. VEERANNA GOWDH.—I am always in a righteous mood.

Sri K. HANUMANTHAIYA.—Many a time he is misinformed. Many a time he does not know the state of affairs, for he is not in the habit of discussing matters with me. I am certain, whenever a doubt arises in his mind, if he discusses matters with me, I may assure this House that he will be my greatest admirer.

1 P.M.

Sir, I may assure him—the advice he has given—he is entitled to give as an elderly Congress leader—that whenever we spend money, we will see that the utmost economy is effected and that every pie is considered as a rupee. For want of time I cannot answer other points. I would request the House to give its full approval to this appropriation Bill.

Mr. SPEAKER.—The question is:

"That the Mysore Appropriation (No. 2) Bill, 1956, be taken into consideration."

The motion was adopted.

Mr. SPEAKER.—Clauses 2 and 3. The question is:

"That Clauses 2 and 3 stand part of the Bill."

The motion was adopted.

Clauses 2 and 3 were added to the to the Bill.

Mr. SPEAKER.—Schedule. The question is:

"That the Schedule stand part of the Bill."

The motion was adopted.

The Schedule was added to the Bill.

Mr. SPEAKER.—Clause 1, Title and Preamble. The question is:

"That Clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri K. HANUMANTHAIYA.—Sir, I move.—

"That the Mysore Appropriation (No. 2) Bill, 1956, be passed".

Mr. SPEAKER.—The question is:

"That the Mysore Appropriation (No. 2) Bill, 1956, be passed".

The motion was adopted.

Half-an-hour Debate on Question No. 243 *re*. Shifting of Ayurvedic College from Mysore to Bangalore and upgrading it.

Mr. SPEAKER.—There is another item on the agenda—half-an-hour discussion raised by Sri Devaraj Urs. He will move now.

Sri Mulka GOVINDA REDDY (Chitaldrug).—It is already time, Sir.

Mr. SPEAKER.—It will take only five minutes.

Sri D. DEVARAJ URS (Hunsur).—I have to refer to the questions put during the last budget session and answer furnished by Government. I request that more time than five minutes be given to me.

Sri K. HANUMANTHAIYA (Chief Minister).—There is no time and I do not want this important matter to be left in a state of suspense. Therefore, as the Speaker has wisely suggested, we may allot some time and discuss. I will give the reply on behalf of the Government.

*ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಮೈಸೂರು ನಗರದಲ್ಲಿ ಅನೇಕ ವರ್ಷಗಳ ಹಿಂದೆ ಸ್ಥಾಪಿತವಾಗಿದ್ದ ಆಯುರ್ವೇದ ಕಾಲೇಜಿನ ಸಂಬಂಧವಾಗಿ ಹಿಂದೆ ಈ ಸಭೆಯಲ್ಲಿ ಸರ್ಕಾರದವರು, ಆ ಕಾಲೇಜನ್ನು ಬೆಂಗಳೂರು ನಗರಕ್ಕೆ ವರ್ಗಾಯಿಸಬೇಕೆಂಬದಾಗಿ ಉತ್ತರಕೊಟ್ಟ ಮೇಲೆ ಮತ್ತು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿಯೂ ಕೂಡ ಈ ವಿಷಯವನ್ನು ಪ್ರಸ್ತಾಪಮಾಡಿ ಆ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕೆಂದು ಹೇಳಿದ ಮೇಲೆ, ಮೈಸೂರು ನಗರದ ಜನರ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ಜನರ ಮನಸ್ಸಿನಲ್ಲಿ ಬಹಳ ವ್ಯಥೆಯುಂಟಾಗಿದೆ. ಈ ಹಿಂದೆ, ಎಂದರೆ, 1955

(ಶ್ರೀ ಡಿ. ದೇವರಾಜ ಅರಸ್.)

ನೆಯ ಫೆಬ್ರವರಿ 25ನೆಯ ತಾರೀಖು ಈ ಸಭೆಯ ಅಧಿವೇಶನದಲ್ಲಿ ಈ ಆಯುರ್ವೇದಿಕ್ ಕಾಲೇಜಿನ ವಿಚಾರವಾಗಿ ಎರಡು ಪ್ರಶ್ನೆಗಳು ಈ ಸಭೆಯ ಮುಂದೆ ಬಂದು ಅವಕ್ಕೆ ಸರ್ಕಾರದವರು ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಶ್ರೀಮಾನ್ ವಿ. ಆರ್. ನಾಯ್ಡು ರವರು 481ನೆಯ ಪ್ರಶ್ನೆ ಕೇಳಿದ್ದಾರೆ. ಆ ಪ್ರಶ್ನೆಗೆ ಸರ್ಕಾರದವರು ಏನು ಉತ್ತರ ಹೇಳಿದ್ದಾರೆಂಬುದನ್ನು ಉದಹರಿಸಲು ಅಪೇಕ್ಷೆ ಪಡುತ್ತೇನೆ.

"(*a*) whether it has come to their notice that the expansion of the Mysore Ayurvedic and Unani College is very necessary ;

(*b*) whether they have noticed the list of grievances of the students thereof ;

(*c*) whether they had given any assurance when the students of that College had last launched Sathyagraha ;"

ಇಷ್ಟಕ್ಕೂ ಕೂಡ 'Yes' 'Yes' ಎಂದು ಹೇಳಿದ್ದಾರೆ. ಕೊನೆಯ ಪ್ರಶ್ನೆಯಲ್ಲಿ

"(*f*) whether it is under their contemplation to transfer the Ayurvedic College to Bangalore or whether they would expand the College there and provide a hostel for the convenience of the boy and girl students ?"

ಇದಕ್ಕೆ 'No' ಎಂದು ಹೇಳಿದ್ದಾರೆ. ಇದೇ ರೀತಿಯಾಗಿ ಇದರಮೇಲೆ ಉಪಪ್ರಶ್ನೆಗಳನ್ನು ಕೇಳುತ್ತಾ ಕೊನೆಯದಾಗಿ ಶ್ರೀಮಾನ್ ಎ. ವಿ. ನರಸಿಂಹರೆಡ್ಡಿಯವರು ಪ್ರಶ್ನೆಗಳನ್ನು ಹಾಕಿದ್ದಾರೆ. ಅವರ ಪ್ರಶ್ನೆಗಳನ್ನೂ ಮತ್ತು ಅದಕ್ಕೆ ಕೊಟ್ಟಿರುವ ಉತ್ತರಗಳನ್ನೂ ಸಭಾಸದಸ್ಯರ ಗಮನಕ್ಕೆ ತರುತ್ತೇನೆ.

"ಶ್ರೀ ಎ. ವಿ. ನರಸಿಂಹರೆಡ್ಡಿ.—ಈ ಆಯುರ್ವೇದ ಮತ್ತು ಯುನಾನಿ ಕಾಲೇಜನ್ನು ಮೈಸೂರಿನಲ್ಲೇ ಉಳಿಸಬೇಕೆಂದು ಹೇಳಲು ಪ್ರಬಲವಾದ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಈಗ ಅಲ್ಲಿರತಕ್ಕ ಕಾಲೇಜು ಕಟ್ಟಡವನ್ನು ಒಬ್ಬರು ದಾನಿಗಳು ಕಟ್ಟಿಸಿದ್ದು. ಆದುದರಿಂದ ಅಲ್ಲೇ ಇರಿಸಬೇಕೆಂಬ ಅಭಿಪ್ರಾಯ ಬಂತು. ಅಲ್ಲದೆ ಮೈಸೂರು ನಗರಕ್ಕೆ ಈ ಅನುಕೂಲ ಬೇಕೆಂದೂ, ಅಲ್ಲೇ ಕಾಲೇಜಿರಬೇಕೆಂದೂ ಅಲ್ಲಿನ ಜನ ಒತ್ತಾಯ ಮಾಡಿದುದೂ ಮತ್ತೊಂದು ಕಾರಣ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರಿನಲ್ಲಿ ದೊಡ್ಡ ಆಯುರ್ವೇದಿಕ್ ಆಸ್ಪತ್ರೆ ಇದೆಯಲ್ಲವೆ ?

ಶ್ರೀ ಟಿ. ಚನ್ನಯ್ಯ—ಇದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಲ್ಲದೆ ಬೇರೆ ಹೆಚ್ಚು ಆಸ್ಪತ್ರೆಗಳಿದ್ದು, ಬೆಡ್‌ಸ್ಟ್ರೆಂಗ್ತ್ ಕೂಡ ಹೆಚ್ಚಾಗಿದ್ದು ಇಲ್ಲಿಗೆ ಕಾಲೇಜನ್ನು ವರ್ಗ ಮಾಡುವುದಾದರೆ ಹೆಚ್ಚಿನ ಖರ್ಚಿಲ್ಲದೆ ಉತ್ತಮಪಡಿಸಲವಕಾಶವಾಗುತ್ತದಲ್ಲವೆ ?

ಶ್ರೀ ಟಿ. ಚನ್ನಯ್ಯ.—ಅಗುತ್ತದೆ. ಆದರೂ ಅಲ್ಲಿ ಈಗಿರತಕ್ಕ ಆಸ್ಪತ್ರೆಯ ಬೆಡ್‌ಸ್ಟ್ರೆಂಗ್ತ್ ಹೆಚ್ಚುಮಾಡಿ, ಕಟ್ಟಡವನ್ನು ದೊಡ್ಡದಾಗಿ ಕಟ್ಟಿಸಿ, ಅದನ್ನು ಅದೇ ಸ್ಥಳದಲ್ಲಿಡಬೇಕೆಂದು ಅನೇಕ ಜನರು ಸರ್ಕಾರದಲ್ಲಿ ಹೇಳಿದುದು ಮತ್ತು ಇನ್ನೂ ಕೆಲವು ಕಾರಣಗಳಿಂದ ಅಲ್ಲೇ ಇರಬೇಕೆಂದು ಸರ್ಕಾರದವರು ತೀರ್ಮಾನಕ್ಕೆ ಬಂದಿದ್ದಾರೆ."

ಈ ಪ್ರಶ್ನೆಗಳಿಗೆ ಉತ್ತರ ಕೊಟ್ಟಿರುವ ರೀತಿಯಲ್ಲಿ ......

ಶ್ರೀ ಕೆ. ಹನುಮಂತಯ್ಯ.—ಅದರಲ್ಲಿ ನಮಗೆ ಪಕ್ಷಪಾತವಿಲ್ಲವೆಂದು ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಪಕ್ಷಪಾತವಿಲ್ಲದೆ ಈರೀತಿ ತೀರ್ಮಾನ ತೆಗೆದುಕೊಂಡಿದ್ದೀರೆಂದು ನಮ್ಮ ನಂಬಿಕೆ. 1955ನೆ ಇಸವಿ ಫೆಬ್ರವರಿ ತಿಂಗಳಿನಲ್ಲಿ ತೆಗೆದುಕೊಂಡ ಒಂದು ತೀರ್ಮಾನ 1956ನೆ ಇಸವಿ ಫೆಬ್ರವರಿ ತಿಂಗಳಿನಲ್ಲೋ, ಮಾರ್ಚಿ ತಿಂಗಳಿನಲ್ಲೋ ಬದಲಾವಣೆಯಾಗಬೇಕಾದರೆ, 1955ನೆ ಇಸವಿಯಲ್ಲಿ ಪಕ್ಷಪಾತವಿಲ್ಲದಂಥ ತೀರ್ಮಾನವನ್ನು ತೆಗೆದುಕೊಂಡ ಸರ್ಕಾರದವರು 1956ನೆ ಇಸವಿಯಲ್ಲಿ ಪಕ್ಷಪಾತ ಭಾವನೆಯಿಂದ ತೀರ್ಮಾನ ತೆಗೆದುಕೊಂಡಿಲ್ಲವೆಂದು ನಾನು ಹೇಗೆ ಭಾವಿಸಬೇಕಾಗಿಬರುತ್ತದೆನ್ನುವುದೇ ನನ್ನ ಸಂಕಟ.

ಈ ಆಯುರ್ವೇದ ಕಾಲೇಜು ಬೆಂಗಳೂರಿನಲ್ಲಿರಬೇಕೇ, ಮೈಸೂರಿನಲ್ಲಿರಬೇಕೇ ಎಂಬತಕ್ಕ ವಾದ ವಿವಾದದಲ್ಲಿ ಹೀಗೆಯೇ ಮಾಡಬೇಕೆಂಬ ಒಂದು ಮೊಂಡುತನದಿಂದ ಇದನ್ನು ಸಮರ್ಥನೆ ಮಾಡುವ ಗೋಜಿಗೆ ನಾನು ಹೋಗುವವನಲ್ಲ. ಆದರೆ ಸನ್ನಿವೇಶವೇನಿದೆ ಎಂದರೆ, ಈ ಆಯುರ್ವೇದ ಕಾಲೇಜಿಗೆ ಸರ್ಕಾರದವರೇ ಹೇಳಿದಹಾಗೆ ಒಬ್ಬರು ದಾನಿಗಳು ದುಡ್ಡು ಕೊಟ್ಟಿದ್ದಾರೆ. ಅದರ ಜೊತೆಗೆ ಸರ್ಕಾರದವರು ಹೊಸದಾಗಿ ಯಾವುದಾದರೂ ಒಂದು ಕಾಲೇಜನ್ನು ಸ್ಥಾಪನೆ ಮಾಡುವ ಪರಿಸ್ಥಿತಿ ಇದ್ದರೆ ಆ ಕಾಲೇಜು ನಮ್ಮ ಮೈಸೂರು ನಗರಕ್ಕೇ ಇರಬೇಕು ಎಂಬ ಹಟಮಾರಿತನ ಸಾಧನೆ ಮಾಡುವುದಾಗಿದ್ದರೆ ಆ ವಿಷಯಕ್ಕೆ ಕೈಹಾಕುತ್ತಿರಲಿಲ್ಲ. ಮುಖ್ಯವಾದ ಪರಿಸ್ಥಿತಿಯೇನೆಂದರೆ, ಅನೇಕ ವರ್ಷಗಳಿಂದ ಮೈಸೂರಿನಲ್ಲಿ ಒಂದು ಕಾಲೇಜಿದೆ. ಇರತಕ್ಕ ಕಾಲೇಜನ್ನು, ಈಗ ಒಂದು ಹೊಸ ಆಜ್ಞೆಯನ್ನು ಹೊರಡಿಸಿ, ಮೈಸೂರಿನಿಂದ ಬೆಂಗಳೂರು ನಗರಕ್ಕೆ ತರುವುದಕ್ಕೆ ಪ್ರಬಲವಾದ ಕಾರಣಗಳೇನಾದರೂ ಇವೆಯೇ ? ಹಾಗಿಲ್ಲದ ಪಕ್ಷದಲ್ಲಿ ಸರ್ಕಾರದವರು ಈರೀತಿ ಮಾಡುವುದು ಸಾಧುವಾದದ್ದಲ್ಲವೆಂದು ಚರ್ಚೆಮಾಡುವುದು ಅಗತ್ಯ. ಸರ್ಕಾರದವರು ಈ ಸಭೆಯಲ್ಲಿ ಇದರ ಬಗ್ಗೆ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿ ಒಂದೆರಡು ಸಂದರ್ಭದಲ್ಲಿ ಹೇಳಿದ್ದಾರೆ ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಮೇಲ್ಮನೆಯಲ್ಲಿ ಈ ವಿಚಾರವಾಗಿ ಒಂದು ಪ್ರಶ್ನೆ ಬಂದಾಗ, ಇದು ಮೈಸೂರಿನ ಸ್ವತ್ತಲ್ಲ, ಮೈಸೂರಿನ ಜನರ ಆಸ್ತಿಯಲ್ಲ, ಅಲ್ಲಿಯೇ ಇರಬೇಕು ಎಂದು ಹೇಳುವುದಕ್ಕೆ ಅವರಿಗೆ ಹಕ್ಕುಬಾಧ್ಯತೆ ಇದೆಯೇ ಎಂದು ಹೇಳಿ

ದರೆಂದು ನಾನು ಪತ್ರಿಕೆಗಳಲ್ಲಿ ಓದಿದೆನು. ಸರ್ಕಾರದವರು ತಾವು ಕೊಟ್ಟಂಥ ಭರವಸೆಯನ್ನು ಈಡೇರಿಸಬೇಕು. ಶ್ರೀಮಾನ್ ಚನ್ನಯ್ಯನವರು ನುಡಿದಂತೆ ನಡೆಯಬೇಕು. ಹಾಗೆ ಅವರು ನಡೆಯಲೆಂದು ಕೇಳುವುದಕ್ಕೆ ಮಾತ್ರ ನಾನು ಎದ್ದು ನಿಂತಿದ್ದೇನೆಯೇ ಹೊರತು ಮತ್ತೆ ಬೇರೆ ಇಲ್ಲ. ಸರ್ಕಾರದವರು ಒಂದೆರಡು ಮುಖ್ಯಕಾರಣ ಹೇಳಿದ್ದಾರೆ. ಹೊಸ ಕಾರಣ ಬಂದಿದೆ, ಅದಕ್ಕೆ ಆಮೇಲೆ ಬರುತ್ತೇನೆ. ಮೈಸೂರು ನಗರದಿಂದ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದಕ್ಕೆ ಹಳೆಯಕಾರಣಗಳನ್ನು ಬೇರೆ ಹೇಳಿದ್ದಾರೆ. ಹಿಂದೆ ಸರ್ಕಾರದವರು ಕೊಟ್ಟಿರುವ ಉತ್ತರದಲ್ಲೂ ಅವು ಇವೆ. ಮೈಸೂರಿನಲ್ಲಿರುವ ಕಾಲೇಜಿನಲ್ಲಿ ಬೆಡ್‌ಸ್ಟ್ರೆಂಗ್ತ್ ಸಾಕಾದಷ್ಟಿಲ್ಲ. ಅಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಖಾಯಿಲೆ ವಿಚಾರ ತಿಳಿದುಕೊಳ್ಳುವುದಕ್ಕೆ ಸಾಕಾದಷ್ಟು ಪ್ರಮಾಣದ ರೋಗಿಗಳಿಲ್ಲ. ಇದಕ್ಕೆ ಕಾರಣ ಕಾಲೇಜು ಕಟ್ಟಡದಲ್ಲಿ ಹೆಚ್ಚು ರೋಗಿಗಳನ್ನಿರಿಸಿ ಅವರಿಗೆ ಹಾಸಿಗೆ ವಗೈರೆ ಕೊಡುವುದಕ್ಕೆ ಸ್ಥಳವಿಲ್ಲ. ಬೆಂಗಳೂರಿನಲ್ಲಿ ಈಗಾಗಲೆ ಒಂದು ಆಯುರ್ವೇದ ಆಸ್ಪತ್ರೆ ಸ್ಥಾಪನೆಯಾಗಿ ಅಲ್ಲಿ ನೂರು ಚಿಲ್ಲರೆ ಬೆಡ್ಸ್ ಇರುವುದರಿಂದ ಅಲ್ಲೇ ಕಾಲೇಜನ್ನು ಸ್ಥಾಪಿಸಿದರ ವಿದ್ಯಾರ್ಥಿಗಳಿಗೆ ಓದುವುದಕ್ಕೆ ಬಹಳ ಅನುಕೂಲಗಳು ಸಿಕ್ಕುತ್ತವೆ ಎಂದು ಕಾರಣ ಹೇಳಿದ್ದಾರೆ. ಜೊತೆಗೆ ಇನ್ನೊಂದು ಕಾರಣ ಹೇಳುತ್ತಿರುವುದು, ಇತ್ತೀಚೆಗೆ ಈ ಕಾಲೇಜು ವಿದ್ಯಾರ್ಥಿಗಳು ಈ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕೆಂದು ಸ್ಟ್ರೈಕ್ ಮಾಡುತ್ತಿದ್ದಾರೆ ಎಂಬುದು. ಹೋದವರ್ಷ ಕೂಡ ಸ್ಟ್ರೈಕ್ ಮಾಡಿದರೆಂದು ಹೇಳಿದ್ದಾರೆ. 1955ರಲ್ಲಿ ವಿದ್ಯಾರ್ಥಿಗಳು ಬೆಂಗಳೂರಿಗೆ ಈ ಕಾಲೇಜನ್ನು ವರ್ಗಾಯಿಸಬೇಕೆಂದು ಗಲಭೆಮಾಡಿ 1956ನೆಯ ಇಸವಿಯಲ್ಲಿ ಈ ಬೇಡಿಕೆಯನ್ನಿಟ್ಟಿದ್ದಾರೆ. ಇದು ಬಹಳ ಗಮನಾರ್ಹವಾದ ವಿಚಾರ. ಈ ಕಾಲೇಜಿನಲ್ಲಿ ಇಂಥ ಅನುಕೂಲಗಳಿವೆಯೆಂಬುದು ಈ ದಿವಸ ಹೊಸದಾಗಿ ಕಂಡುಹಿಡಿದ ವಿಷಯವಲ್ಲ. 1955ರಲ್ಲೇ ಸರ್ಕಾರಕ್ಕೆ ಇದು ಗೊತ್ತಿತ್ತು. ಅದಕ್ಕಿಂತ ಹಿಂದೆಯೇ ಸರ್ಕಾರಕ್ಕೆ ಇದು ಗೊತ್ತಾಗಿ ಈ ಕಾಲೇಜನ್ನು ಅಪ್‌ಗ್ರೇಡ್ ಮಾಡಬೇಕೆಂದು ಶಿವನಂಜೇಗೌಡರು ಕೇಳಿದ ಪ್ರಶ್ನೆಗೆ ಇದಕ್ಕೆ ಸುಮಾರು 8 ಲಕ್ಷ ರೂಪಾಯಿಗಳವರೆಗೆ ಖರ್ಚಾಗುತ್ತದೆ, ಇದಕ್ಕಾಗಿ ನಾವು ಒಂದು ಸಮಿತಿ ನೇಮಕಮಾಡಿದ್ದೇವೆ, ಆ ಸಮಿತಿಯ ವರದಿ ಬಂದ ಕೂಡಲೆ 8 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಅಪ್‌ಗ್ರೇಡ್ ಮಾಡುವ ವಿಚಾರ ತೆಗೆದುಕೊಳ್ಳುತ್ತೇವೆ ಎಂದು ಉತ್ತರವನ್ನು ಸರ್ಕಾರದವರು ಹೇಳಿದ್ದರು. ಹೀಗೆ ಹೊಸಕಟ್ಟಡವಾಗಿ ಆಸ್ಪತ್ರೆ ಇನ್ನೂ ವಿಶಾಲವಾಗಿ ಆಗುವುದೆಂಬ ನಿರೀಕ್ಷಣೆಯಿರುವಾಗ ಸರ್ಕಾರದವರು ಈ ದಿವಸ ವಿದ್ಯಾರ್ಥಿಗಳ ಮುಷ್ಕರದ ಕಾರಣವನ್ನು ನಮ್ಮ ಮುಂದಿಡುತ್ತಿದ್ದಾರೆ. ಇದು ಹೊಸ ಪ್ರಶ್ನೆಯಲ್ಲ. ಈಗ ನಮಗೆ ವರದಿ ಬಂದಿರುವ ಪ್ರಕಾರ ವಿದ್ಯಾರ್ಥಿಗಳನ್ನು ಕೆಲವು ಕಾಲೇಜಿನ ಅಧ್ಯಾಪಕರು ಪ್ರಚೋದನೆ ಮಾಡಿ ಈ ರೀತಿಯಾಗಿ ಈ ಕಾಲೇಜು ಮೈಸೂರಿನಲ್ಲಿರಕೂಡದು, ಬೆಂಗಳೂರಿಗೆ ವರ್ಗಮಾಡಬೇಕು ಎಂದು ವಿದ್ಯಾರ್ಥಿಗಳು ಮುಷ್ಕರ ಮಾಡುವಂತೆ, ಬೇಡಿಕೆ ಇಡುವಂತೆ ಮಾಡಿದ್ದಾರೆಂದು ತಿಳಿದುಬಂದಿದೆ. ಇದೇನೇ ಇರಲಿ, ವಿದ್ಯಾರ್ಥಿಗಳು ಮುಷ್ಕರ ಮಾಡಿದ್ದಾರೆಂಬ ಒಂದು ದೊಡ್ಡ ಕಾರಣವನ್ನು ನಮ್ಮ ಮುಂದಿಟ್ಟು ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕೆಂದಿರುವಂತೆ ಭಾಸವಾಗುತ್ತಿದೆ. ಒಂದು ಕಡೆ ವಿದ್ಯಾರ್ಥಿಗಳು ಮುಷ್ಕರ ಹೂಡುತ್ತಿದ್ದರೆ ಇನ್ನೊಂದು ಕಡೆ ಮೈಸೂರು ನಗರದ ಇಡೀ ಜನರು ಅದಕ್ಕೆ ವ್ಯತಿರಿಕ್ತವಾಗಿ ಮುಷ್ಕರ ಹೂಡಬೇಕು ಅಥವಾ ಸತ್ಯಾಗ್ರಹ ಮಾಡಬೇಕು ಎಂದು ಪ್ರಯತ್ನಿಸಿ ಅನೇಕ ಸಭೆಗಳನ್ನು ಮಾಡಿದ್ದಾರೆ. ಮೈಸೂರು ನಗರದ ಪೌರಸಭೆಯವರೂ ಸಹ ಒಮ್ಮತದಿಂದ ಒಂದು ನಿರ್ಣಯಮಾಡಿ ಈ ಕಾಲೇಜು ಮೈಸೂರಿನಲ್ಲೇ ಇರುವುದು ಸೂಕ್ತ, ಹಿಂದೆ ಸರ್ಕಾರದವರು ಭರವಸೆ ಕೊಟ್ಟಿರುವಂತೆ ಇದನ್ನು ಮೈಸೂರಿನಲ್ಲೇ ಇಡಬೇಕು ಎಂದು ತಿಳಿಸಿದ್ದಾರೆ.

Sri K. HANUMANTHAIYA.—That is exactly the point. Municipal Council has its own jurisdiction and it is very zealous of its autonomy. If that is the position, it should not interfere by threatening and abusing so far as the Government decisions are concerned. Merely because it is free to talk anything, it cannot go on threatening the Government.

Sri D. DEVARAJ URS.—I am one with the Chief Minister when he says that the Government cannot yield to threats and strikes and other things, but with what face does the Government rely on the very same basis ?

Sri K. HANUMANTHAIYA.—We are not relying. My Hon'ble friend's premise is wrong. We are not yielding to threats of students, nor are we yielding to the threat of the Municipal Council or the agitators behind them. We are concerned solely with the interests of the institution.

Sri K. PUTTASWAMY (Sreeranga-patna).—May I point out that the Municipal Council has not yielded to any threat ? It has only requested the Government to consider this question.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಹಾಗಿದ್ದರೆ ನನಗೂ ಬಹಳ ಸಂತೋಷ. ತಾವು ಆ ರೀತಿ ಹೇಳಿರುವುದರಿಂದ ನಾನಿನ್ನು ಹೆಚ್ಚು ಮಾತನಾಡಬೇಕಾದ್ದೇನೂ ಇಲ್ಲ. ಸರ್ಕಾರದವರು ಕೂಡಲೆ ಒಂದು ಸಮಿತಿಯನ್ನು ಈ ಬಗ್ಗೆ ನೇಮಕಮಾಡಿ, ಅದಕ್ಕೆ ಈ ವಿಚಾರವನ್ನು ಒಪ್ಪಿಸಿ, ಅನಂತರ ಆ ಸಮಿತಿಯವರೇನು ತೀರ್ಮಾನ ಕೊಡುತ್ತಾರೋ ಅದರಂತೆ ಎಲ್ಲರೂ ನಡೆದುಕೊಳ್ಳೋಣ. ಆ ಸಮಿತಿಯವರು ಕೊಡತಕ್ಕಂಥ ತೀರ್ಮಾನಕ್ಕನುಗುಣವಾಗಿ ಕಾರ್ಯ ನಡೆಸತಕ್ಕವರ ಪೈಕಿ ನಾನೊಬ್ಬನಾಗಿದ್ದೇನೆ. ಆದರೆ ಈ ಸಂಬಂಧವಾಗಿ ಇಲ್ಲಿಯುತನಕಸರ್ಕಾರ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿರುತ್ತದೆಯೋ ಅವುಗಳನ್ನು ಈ ಒಂದು ತೀರ್ಮಾನ ಆಗುವ ತನಕ ಇಂಪ್ಲಿಮೆಂಟ್ ಮಾಡಬಾರದೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri K. HANUMANTHAIYA.—It is true that they are interested in the institution only and I am very sorry to

(SRI K. HANUMANTHAIYA.)

say that certain people are, as you say, instigating this party or that party, but this House need not take any notice of it. I am prepared to entrust this question to be examined dispassionately to any independent authority. Let him give his finding. Government will implement it. Government should not be cajoled or threatened to take a decision. I know threats are being administered to us. Therefore I make this proposal and that institution belongs to the whole State and everybody is interested in it. Let some independent agency, whether it be a committee or a person, who has no interest or illwill in this matter, let him apply his mind to find out whether this institution will be better served by locating it in Bangalore or retaining it in Mysore. We are prepared to take such independent advice and act accordingly.

Mr. SPEAKER.—The Hon'ble Minister will now reply.

Sri K. HANUMANTHAIYA.—When we agree to the appointment of a committee or a person to look into the interests of this College, the question of implementing this does not arise.

Mr. SPEAKER.—Now the House will rise for the day and meet at 8-30 A.M. to-morrow.

The House adjourned at Twenty Minutes past One of the Clock to meet again at Thirty Minutes past Eight of the Clock on Saturday the 31st March 1956.

WD 2896—GPB—550—25-7-56

MYSORE LEGISLATIVE ASSEMBLY

TWENTY-SIXTH DAY.

Saturday, 31st March 1956.

The House met in the Assembly Hall, Atara Kacheri, Bangalore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

SRI H. M. CHANNABASAPPA (Minister for Industries).—Sir, I would request the Chair to first take up questions pertaining to Sri A. G. Ramachandra Rao, Minister for Law and Education, as he has got to go to the Upper House.

MR. SPEAKER.—I have no objection. Question No. 121.

Kannada Primary School at Krishnarajapuram, Hassan Town (Building).

Q.—121. SRI D. R. KARI GOWDA (Hassan).—

Will the Government be pleased to state :—

(*a*) whether there is any proposal for the construction of a building for the Government Kannada Primary School at Krishnarajapuram, Hassan Town ;

(*b*) if not, what is the arrangement made for efficient accommodation ?

A.—SRI A. G. RAMACHANDRA RAO (Minister for Law and Education).—

(*a*) No.

(*b*) The school is held in a rented building on a monthly rent of Rs. 25. The owner has agreed to provide additional accommodation.

ಶ್ರೀ ಡಿ. ಆರ್. ಕರಿಗೌಡ.—ಕಟ್ಟಡ ಸಾಲದೆಂದು ಸರ್ಕಾರಕ್ಕೆ ಎಷ್ಟು ದಿವಸಗಳಿಂದ ಮನವಿ ಬಂದಿದೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ "The owner has agreed to provide additional accommodation." ಎಂದು ಉತ್ತರ ಕೊಟ್ಟಿದೆ.

ಶ್ರೀ ಡಿ. ಆರ್. ಕರಿಗೌಡ.—ಎರಡು ಮೂರು ವರ್ಷಗಳಿಂದ ಹೀಗೆ ಹೇಳುತ್ತಿದ್ದಾರೆ, ಹಣ ಸಾಕಾಗುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

SRI A. G. RAMACHANDRA RAO.—We will get it examined

ಶ್ರೀ ಡಿ. ಆರ್. ಕರಿಗೌಡ.—ಸರ್ಕಾರದವರು ಕಟ್ಟಡ ಕಟ್ಟಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ಅಷ್ಟು ಸುಲಭವಾಗಿ ಹೇಳುವುದಕ್ಕಾಗುವುದಿಲ್ಲ, ಸ್ಥಳಾವಕಾಶಕ್ಕೆ ಏರ್ಪಾಡು ಮಾಡುತ್ತೇವೆ.

Boys' Primary School of Chinnahalli (Building).

Q.—377. SRI MUDDURAMAIAH (Koratagere-Madhugiri).—

Will the Government be pleased to state :—

(*a*) whether it is a fact that Chinnahalli Boys' Primary School of Koratagere Taluk has been taken over by the Public Works Department ;

(*b*) if so, what arrangements are made for the improvement and annual repairs of the building ?

A.—SRI A. G. RAMACHANDRA RAO (Minister for Law and Education).—

(*a*) No.

(*b*) The Building built by the villagers having collapsed, the materials have been ordered to be auctioned. Necessary plan and estimate for the construction of a new building have been called for from the Public Works Department.

ಶ್ರೀ ಮುದ್ದುರಾಮಯ್ಯ.—ಈಗ ಸ್ಕೂಲು ಎಲ್ಲ ನಡೆಯುತ್ತಿದೆ ?

* Asterisk indicates that the remarks or speeches have not been revised by the Member concerned

*ಶ್ರೀ ಎ. ಜಿ. ರಾಮಚಂದ್ರರಾವ್.—ಯಾವುದೋ ಗ್ರಾಮದ ಕಟ್ಟಡದಲ್ಲಿ ನಡೆಯುತ್ತಿರಬೇಕು, ವಿಚಾರ ಮಾಡಬೇಕು.

ಶ್ರೀ ಮುದ್ದುರಾಮಯ್ಯ.—ಕಟ್ಟಡವನ್ನು ಆದಷ್ಟು ಜಾಗ್ರತೆ ಕಟ್ಟಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಕಟ್ಟಡವು ಕುಸಿದು ಬಿದ್ದು ಹೋದಾಗ ಹುಡುಗರು ಯಾರೂ ಸ್ಕೂಲಿನಲ್ಲಿರಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಲಿಲ್ಲ.

Inams Abolition Act (Implementation).

Q.—621. Sri MALLIKARJUNAPPA GOWDA (Sorab-Shikaripur).—

Will the Government be pleased to state :—

(*a*) since when the Inams Abolition Act has come into force in Mysore State ;

(*b*) the various kinds of inams that have been decided to be abolished ;

(*c*) whether survey of the lands has been taken up in such of the villages where inams have been abolished ;

(*d*) whether it has come to their notice that the raiyats cultivating lands in these villages are being troubled by the inamdars since action has not been taken in these inam villages ;

(*e*) the action they would take to afford relief and to save the raiyats from these troubles ?

A.—Sri A. G. RAMACHANDRA RAO (Minister for Law and Education).—

(*a*) The Mysore (Personal and Miscellaneous) Inams Abolition Act, 1954 and the Mysore (Religious and Charitable) Inams Abolition Act, 1955, received the assent of the President on 15th March 1955 and 19th August 1955 respectively.

Neither of the Acts has been brought into force as yet.

(*b*) (1) Under the Mysore (Personal and Miscellaneous) Inams Abolition Act, 1954 :—

(i) Personal Inams including the Yelandur Jahagir but excluding any enfranchised Inam in respect of which full land revenue assessment is payable;

(ii) Khayamgutta Villages ;

(iii) Kodagi and Bawadi Daswandam Inams ;

(iv) Miscellaneous Service Inams including artizan inams and and excluding village service Inams held by Shanbhogs and Patels, Thoties, Talaris and Nirgantis.

(2) Under the Mysore (Religious and Charitable) Inams Abolition Act, 1955 :—

(i) Religious Inams including the Sringeri Jahagir ; and

(ii) Charitable Inams.

(*c*) Does not arise in view of reply to clause (*a*). However, before implementing the Inams Abolition Acts, the Inam Villages which are not surveyed and settled are proposed to be surveyed and settled.

(*d*) A few cases have been reported.

(*e*) Action is being taken under the Mysore Alienated Villages (Protection of Tenants and Miscellaneous Provisions) Act, 1950 and the Mysore Tenancy Act of 1952.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಈಗ ಇನಾಂ ಗ್ರಾಮಗಳಲ್ಲಿರುವ ರೈತರಿಗೆ ಜಮೀನುದಾರರು ಜಮೀನು ಬಿಡಿಸುವುದಕ್ಕೆ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ತೊಂದರೆಯಿಂದ ಪಾರುಮಾಡುವುದಕ್ಕೆ ಅವಕಾಶಮಾಡಿದೆ. ಹೊಸದಾಗಿ ಆಕ್ಟ್ ತಿದ್ದುಪಡಿ ಮಾಡಿದೆ. ಆದ್ದರಿಂದ ತೊಂದರೆಯಾಗುವುದಿಲ್ಲವೆಂದು ಭಾವಿಸಿದೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಜಮೀನು ಸರ್ವೆ ಆಗದಿರುವುದರಿಂದ ಯಾವ ಜಮೀನನ್ನು ಯಾರು ಮಾಡಿದ್ದಾರೆಂಬುದು ಗೊತ್ತಿಲ್ಲದೆ ರೈತರಿಗೆ ತೊಂದರೆಯಾಗುತ್ತಿರುವುದು ಅವಗಾಹನೆಗೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ತಪ್ಪಿಸುವುದಕ್ಕೆ ಯಾವ್ಯಾವ ಅವಕಾಶವಿದೆಯೋ ಅದನ್ನು ಉಪಯೋಗಿಸಿಕೊಂಡು ಸರಿಪಡಿಸುತ್ತಿದ್ದೇವೆ.

ಶ್ರೀ ಬಿ. ಎನ್. ಬೋರಣ್ಣಗೌಡ.—ರೈತರಿಗೆ 'ನೀವೇ ಜಮೀನನ್ನು ಕೊಂಡುಕೊಳ್ಳಬೇಕು, ಕೊಂಡುಕೊಳ್ಳದಿದ್ದರೆ ಬೇರೆಯವರಿಗೆ ಕೊಡುತ್ತೇವೆ' ಎಂದು ಜೋಡಿದಾರರು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಬಿ. ಎನ್. ಬೋರಣ್ಣಗೌಡ.—ಈಗ ಜಮೀನು ಪರಭಾರೆ ಮಾಡಬೇಕಾದರೆ ಡೆಪ್ಯುಟಿಕಮಿಷನರ ಅನುಮತಿ ಪಡೆದುಕೊಳ್ಳಬೇಕೆಂದು ವಿಧಾಯಕವಾಗಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಿದೆ.

ಶ್ರೀ ಬಿ. ಎನ್. ಬೋರಣ್ಣಗೌಡ.—ಅದನ್ನು ಉಲ್ಲಂಘನೆ ಮಾಡಿ ಎಷ್ಟು ಜನ ಜೋಡೀದಾರರು ಜಮೀನನ್ನು ಪರಭಾರೆ ಮಾಡಿದ್ದಾರೆಂಬುದನ್ನು ವಿಚಾರಿಸಿದಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಆಕ್ಟನ್ನು ಜಾರಿಗೆ ಕೊಡುವುದಕ್ಕೆ ಸ್ಪೆಷಲ್ ಸಿಬ್ಬಂದಿ ನೇಮಕ ಮಾಡಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಯಾರುಯಾರನ್ನು ನೇಮಕ ಮಾಡಿದೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಬ್ಬರು ಸ್ಪೆಷಲ್ ಡೆಪ್ಯುಟಿಕಮಿಷನರು, ಮೂರು ಅಮಲ್ದಾರರು, ಒಬ್ಬರು ಸಬ್‌ಡಿವಿಜನ್ ಆಫೀಸರು ಮತ್ತು ಆವಶ್ಯಕವಾದ ಇತರ ಸಿಬ್ಬಂದಿ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಯಾವತ್ತಿನಿಂದ?

ಶ್ರೀ ಎ. ಜಿ. ರಾಮಚಂದ್ರರಾವ್.—ಆರ್ಡರನ್ನು ಪಾಸ್ ಮಾಡಿದೆ, ತಾರೀಖು ಬೇಕಾದರೆ ನೋಡಿ ಹೇಳಬೇಕು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇದಕ್ಕೆ ಮೂರು ಜನ ಡೆಪ್ಯುಟಿಕಮಿಷನರನ್ನು ನೇಮಕ ಮಾಡುವುದು ಗಮನದಲ್ಲಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಒಬ್ಬರೇ ಡೆಪ್ಯುಟಿ ಕಮಿಷನರು.

ಶ್ರೀ ಜಿ. ಪಾಪಣ್ಣ.—ರಾಷ್ಟ್ರಾಧ್ಯಕ್ಷರ ಒಪ್ಪಿಗೆ ದೊರೆತು ಒಂದು ವರ್ಷವಾದರೂ ಕೂಡ ಕಾನೂನನ್ನು ಜಾರಿಗೆ ಕೊಡದಿರುವುದಕ್ಕೆ ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಫೈನಲ್ ರೂಲ್ಸನ್ನು ಒಂದು ಆಕ್ಟಿಗೆ ಪಬ್ಲಿಷ್ ಮಾಡಿದೆ. ಇನ್ನೊಂದು ತಯಾರಾಗಿದೆ. ಅಬ್ಜೆಕ್ಷನ್ಸ್ ಏನಾದರೂ ಇದ್ದರೆ ಸೂಚಿಸಲು ಅವಕಾಶ ಕೊಟ್ಟಿದೆ.

ಶ್ರೀ ಜಿ. ಪಾಪಣ್ಣ.—ಕಾನೂನು ಮಾಡಿದಮೇಲೆ ಅದನ್ನು ಕಾರ್ಯಗತ ಮಾಡಬೇಡವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಕಾನೂನು ಮಾಡಿದ ಮೇಲೆ ಅದಕ್ಕೆ ರಾಷ್ಟ್ರಪತಿಯವರ ಅನುಮತಿ ದೊರೆಯಬೇಕು. ಅದು ದೊರೆತ ಮೇಲೆ ಅದಕ್ಕನುಸಾರವಾಗಿ ರೂಲ್ಸ್ ತಯಾರು ಮಾಡಬೇಕು. ಉದ್ದೇಶ ಪೂರ್ವಕವಾಗಿ ಕಾಲಹರಣ ಮಾಡಿಲ್ಲ.

ಶ್ರೀ ಜಿ. ಪಾಪಣ್ಣ.—ಈಗ ರಾಷ್ಟ್ರಾಧ್ಯಕ್ಷರ ಅನುಮತಿ ಪಡೆದು ಒಂದು ವರ್ಷವಾದರೂ ಕೂಡ ರೂಲ್ಸ್ ಫ್ರೇಂ ಮಾಡಿ ಕಾರ್ಯಗತ ಮಾಡುವುದಕ್ಕೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲದಿರುವುದಕ್ಕೆ ಕಾರಣವೇನು?

ಅಧ್ಯಕ್ಷರು.—ರೂಲ್ಸ್ ಫ್ರೇಂ ಮಾಡಿ ಗೆಜೆಟ್ಟಿನಲ್ಲಿ ಪ್ರಕಟಿಸಿ ಆಕ್ಷೇಪಣೆಗಳಿದ್ದರೆ ಸೂಚಿಸಬೇಕೆಂದು ಕೇಳಿದ್ದಾರೆ.

ಶ್ರೀ ಜಿ. ಪಾಪಣ್ಣ.—ಅದಕ್ಕೆ ಒಂದು ವರ್ಷ ಬೇಕೆ?

Sri A. G. RAMACHANDRA RAO.—Yes, to frame the rules properly, it requires some time.

ಶ್ರೀ ಜಿ. ಪಾಪಣ್ಣ.—ಸರ್ವೆ ಮಾಡುವುದಕ್ಕೆ ಏರ್ಪಾಡು ಮಾಡಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬೇಕಾದ ಸಿಬ್ಬಂದಿ ನೇಮಕ ಮಾಡಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಎಷ್ಟು ಜಹಗೀರಿಯಿರುವ ಗ್ರಾಮಗಳಿವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಕಿಅಂಶ ವಿಚಾರಿಸಿ ಹೇಳಬೇಕು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇದನ್ನು ಸರ್ವೆ ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನೂ ಆ ಕೆಲಸ ಆಗಬೇಕಾಗಿದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಅದಕ್ಕೆ ಇನ್ನೂ ಎಷ್ಟು ದಿವಸ ಬೇಕು?

ಶ್ರೀ ಎ. ಜಿ. ರಾಮಚಂದ್ರರಾವ್.—ಸಿಬ್ಬಂದಿ ಏರ್ಪಾಡು ಮಾಡಿದೆ. ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಕಾನೂನು ಜಾರಿಗೆ ಬರಲು ಇನ್ನೂ ಎಷ್ಟು ದಿವಸಗಳು ಬೇಕಾಗುತ್ತವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ರೂಲ್ಸ್ ಫೈನಲೈಜ್ ಆದ ತಕ್ಷಣವೇ ಜಾರಿಗೆ ಕೊಡುತ್ತೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಯಾವಾಗ ಜಾರಿಗೆ ಬರುತ್ತದೆ?

ಶ್ರೀ ಎ. ಜಿ. ರಾಮಚಂದ್ರರಾವ್.—ತಾರೀಖನ್ನು ಹೇಳಲಾರೆ.

Sri H. C. LINGA REDDY.—Are the Government aware that on account of the delay in the enforcement of this Act, a number of alienations has taken place? the inamdars have alienated the lands without the permission of the Government.

Sri A. G. RAMACHANDRA RAO.—It has not come to the notice of the Government.

Sri H. C. LINGA REDDY.—How many Jodi villages have been so far surveyed and settled?

Sri A. G. RAMACHANDRA RAO.—Nearly a third.

Sri H. C. LINGA REDDY.—Will the Government apply the Act at least to the villages where survey and settlement have been effected, immediately?

Sri A. G. RAMACHANDRA RAO.—That is the intention. We are considering that.

Mirase System for Village Officers

Q.—311. Sri T. HANUMIAH (Hiriyur—Scheduled Castes).—

Will the Government be pleased to state:—

(*a*) the number of Patels, Shanbhogues, Toties and Talaries in the State (Districtwar and talukwar figures to be given);

(*b*) whether they are carrying out their duties as in the past; or whether there is any change in it;

(*c*) whether it has come to their notice that in each and every village

(SRI T. HANUMIAH)

the Patels and Shanbhogues are extracting free service from Toties and Talaries ;

(*d*) whether the Mirase System is in vogue ; if so, whether they would furnish a D.C.B. statement in a tabular form for each taluk in every district of the State from the year 1945 to 1955 ?

A.—Sri A. G. RAMACHANDRA RAO (Minister for Law and Education).—

(*a*) A statement furnishing the information is placed on the Table. (Copy placed in the Legislature Library *vide* No. 14—L.A., dated 31st March 1956).

(*b*) Yes. There is no change.

(*c*) No.

(*d*) Yes. It is felt that the expenditure, time and labour involved in preparing a talukwise D.C.B. Statement for ten years would not be commensurate with the result sought to be achieved.

ಶ್ರೀ ಟಿ. ಹನುಮಯ್ಯ.—ತಾವು (ಸಿ)ಗೆ ಉತ್ತರವಾಗಿ 'ಇಲ್ಲ' ಎಂದು ತಿಳಿಸಿದ್ದೀರಿ. ಹಾಗಾದರೆ ಪ್ರತಿಯೊಂದು ಹಳ್ಳಿಯಲ್ಲಿಯೂ ಪಟೇಲ್ ಶಾನುಭೋಗರು ಒತ್ತಾಯ ಮಾಡಿ, ಜುಲುಂ ಮಾಡಿ ತೋಟಿ-ತಳೈರಿಗಳಿಂದ ಬಿಟ್ಟಿ ಕೆಲಸಗಳನ್ನು ಮತ್ತು ಕಂದಾಯ ಕವಳಿಗೆಗಳನ್ನು ಫ್ರೀಯಾಗಿ ವಸೂಲ್ಮಾಡಿಸುತ್ತಿಲ್ಲವೆ?

*ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಬಿಟ್ಟಿ ಕೆಲಸವೆಂದು ಹೇಳುವುದಕ್ಕಾಗುವುದಿಲ್ಲ. ಅವರಿಗೆ ಮಿರಾಸೆ ಕೊಡುತ್ತಿದ್ದಾರೆ. ಉಂಬಳಿ ಜಮೀನುಗಳಿವೆ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ತಾವೀಗ ಆ ಮಿರಾಸೆ ತಕರಾರು ತಃಖ್ತೆ ತಯಾರಿಸಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಯಾ ತಾಲ್ಲೂಕಿನಲ್ಲಿ ಅದು ಇರಬೇಕು.

ಶ್ರೀ ಟಿ. ಹನುಮಯ್ಯ.—ಆ ರೀತಿ ಈಗ ಮಿರಾಸೆ ವಸೂಲ್ಮಾಡುತ್ತಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ವಸೂಲ್ಮಾಡುತ್ತಿರಬೇಕು.

ಶ್ರೀ ಟಿ. ಹನುಮಯ್ಯ.—ಆ ರೀತಿ ಎಲ್ಲಿಯೂ ವಸೂಲ್ಮಾಡುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ಹತ್ತಾರು ವರ್ಷಗಳಿಂದಲೂ ಈ ಮಿರಾಸೆ ವಸೂಲಾಗಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಟಿ. ಹನುಮಯ್ಯ.—ರಾಜ್ಯಾಂಗಕ್ಕೆ ವಿರುದ್ಧವಾಗಿ ತೋಟಿ ತಳಾರಿಗಳಿಗೆ ಯಾವ ಪ್ರತಿಫಲವನ್ನೂ ಕೊಡದ ಹಾಗೆ ಅವರಿಂದ ಕಂದಾಯ ಕವಳಿಗೆಗಳನ್ನು ವಸೂಲ್ಮಾಡಿಸುತ್ತಿದ್ದಾರೆಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—"ಇಲ್ಲ" ಎಂದು ನಾನಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಟಿ ಹನುಮಯ್ಯ.—ಪ್ರತಿ ತಾಲ್ಲೂಕಿನಲ್ಲೂ ಅಮಲ್ದಾರರು ತೋಟಿ ತಳಾರಿಗಳಿಂದ ಬಿಟ್ಟಿ ಚಾಕರಿ ಮಾಡಿಸಿಕೊಳ್ಳುತ್ತಿರುವುದೂ ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ತಾವು ಆ ರೀತಿ ಹೇಳಿದರೆ ಆಗುವುದಿಲ್ಲ. ನಿರ್ದಿಷ್ಟವಾದ ವಿಚಾರಗಳಿದ್ದರೆ ತಿಳಿಸಿ. ನಾನು ಅದನ್ನು ವಿಚಾರಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ಈ ದಿವಸ ತಾವು ಪಟೇಲ್ ಶಾನುಭೋಗರುಗಳಿಗೆ ಕೊಡುತ್ತಿರುವ ಸಂಭಾವನೆಯನ್ನು ದುಡ್ಡಿನ ರೂಪದಲ್ಲಿ ಕೊಡುತ್ತಿದ್ದೀರೋ ಅಥವಾ ಧಾನ್ಯ ರೂಪದಲ್ಲಿ ಕೊಡುತ್ತಿದ್ದೀರೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಣದ ರೂಪದಲ್ಲಿ ಕೊಡಲಾಗುತ್ತಿದೆ. ಕೆಲವು ಕಡೆ ಕೆಲವರಿಗೆ ಜಮೀನನ್ನೂ ಕೊಡಲಾಗಿದೆ.

ಶ್ರೀ ಜಿ. ದುಗ್ಗಪ್ಪ.—ಈ ದಿವಸ ತಾವು ತೋಟಿ-ತಳಾರಿಗಳಿಗೆ ಅವರ ಸೇವೆಗಾಗಿ ಕೊಡಲಾಗುತ್ತಿರುವ ಪ್ರತಿಫಲವನ್ನು ದುಡ್ಡಿನ ರೂಪದಲ್ಲಿ ಕೊಡುತ್ತಿದ್ದೀರೊ ಅಥವಾ ಧಾನ್ಯ ರೂಪದಲ್ಲಿ ಕೊಡುತ್ತಿದ್ದೀರೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಜಮೀನು ರೂಪದಲ್ಲೂ ಮತ್ತು ಮಿರಾಸೆ ರೂಪದಲ್ಲೂ ಕೊಡಲಾಗುತ್ತಿದೆ.

ಶ್ರೀ ಜಿ. ದುಗ್ಗಪ್ಪ.—ಇವರಿಗೂ ಕೂಡ ಆ ಪಟೇಲ್-ಶಾನುಭೋಗರುಗಳಿಗೆ ಕೊಟ್ಟ ಹಾಗೆ ದುಡ್ಡಿನ ರೂಪದಲ್ಲೇ ಕೊಡುವುದಕ್ಕಾಗುವುದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಿರಾಸೆಯನ್ನು ತೋಟಿ-ತಳಾರಿಗಳೇ ಧಾನ್ಯ ರೂಪದಲ್ಲಿ ರೈತರಿಂದ ವಸೂಲ್ಮಾಡಿಕೊಳ್ಳುತ್ತಿದ್ದಾರೆ. ಆದುದರಿಂದ ಈ ಪ್ರಶ್ನೆಯೇ ಏಳುವುದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಅವರಿಗೆ ಸಲ್ಲಬೇಕಾದ ಮಿರಾಸೆ ಸರಿಯಾಗಿ ಸಲ್ಲುತ್ತಿಲ್ಲ. ಆದಕಾರಣ ಅವರಿಗೆ ಮಿರಾಸೆಗೆ ಬದಲಾಗಿ ದುಡ್ಡಿನ ರೂಪದಲ್ಲೇ ಪ್ರತಿಫಲ ದೊರೆಯುವಂತೆ ಏಕೆ ಮಾಡುವುದಕ್ಕಾಗುವುದಿಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಿರಾಸೆ ವಸೂಲಾಗುತ್ತಿಲ್ಲವೆಂದು ಹೇಳಿದ್ದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಜಿ. ದುಗ್ಗಪ್ಪ.—ನಾನು ಕೇಳುತ್ತಿರುವುದು ತಾವು ತೋಟಿ-ತಳಾರಿಗಳಿಗೆ ಮಿರಾಸೆ ಕೊಡುವುದಕ್ಕೆ ಬದಲಾಗಿ ದುಡ್ಡಿನ ರೂಪದಲ್ಲೇ ಅದನ್ನು ವಸೂಲ್ಮಾಡಿ ಕೊಡಲು ತಮಗೇನು ಬಾಧಕವಿದೆ? ಇದರಿಂದ ವಸೂಲಿಗೂ ಸುಲಭ, ನೌಕರರಿಗೂ ಅನುಕೂಲವಿದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಈ ವಿಚಾರವನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ತೋಟಿ-ತಳಾರಿಗಳಿಗೆ ಈ ದಿವಸ ಯಾವ ಪರಿಹಾರವನ್ನೂ ಕೊಡದೆ ಅವರಿಂದ ಕೆಲಸ ಮಾಡಿಸಿಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ತೋಟಿ ತಳಾರಿಗಳಿಗೆ ಅವರಿಂದ ಪಡೆಯುತ್ತಿರುವ ಕೆಲಸಗಳ ಬಗ್ಗೆ ಅವರಿಗೆ ಯಾವ ಕಾಂಪನ್‌ಸೇಷನ್ ಕೊಡದಿರುವುದೂ

ಇರಲಿ, ಆ ಕಸಬಾ ಹೋಬಳಿ ಬಾಲರೆಡ್ಡಿಪಲ್ಲಿ ಎಂಬ ಗ್ರಾಮದಲ್ಲಿ ತಳಾರಿಯ ಜಮೀನಿನಲ್ಲಿ 1.2 ಅಡಿ ಆಳದವರೆಗೂ ಮಣ್ಣನ್ನು ಅಗೆದು ಕೆರೆಗೆ ಹಾಕಿ ರಿಪೇರಿ ಮಾಡಿರುತ್ತಾರೆ, ಆ ಬಗ್ಗೆ ತಳಾರಿಗೆ ಕ್ರಾಪ್ ಕಾಂಪೆನ್ಸೇಷನ್ ಜಮೀನ ಕಾಂಪೆನ್ಸೇಷನ್ ಇತ್ಯಾದಿ ಯಾವುದನ್ನೂ ಕೊಡದೆ ಕೈಬಿಟ್ಟಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ. ಆದರೆ ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಸರ್ಕಾರದವರು ತೋಟಿ-ತಳಾರಿಗಳಿಗೆ ಅವರು ಮಾಡತಕ್ಕ ಕೆಲಸ ಕಾರ್ಯಗಳಿಗೋಸ್ಕರವಾಗಿ ಮಿರಾಸೆ ಕೊಡುವುದರ ಜೊತೆಗೆ ಮಾನ್ಯದ ಜಮೀನುಗಳನ್ನೂ ಸಹ ಕೊಟ್ಟಿದ್ದಾರಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು. ಕೊಟ್ಟಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ತೋಟಿ ತಳಾರಿಗಳು ಆಯಾ ರೈತರಿಗೆ ಬೇಕಾದಂಥ ಕೆಲಸಗಳನ್ನು ಎಷ್ಟರಮಟ್ಟಿಗೆ ಮಾಡಿಕೊಡುತ್ತಿದ್ದಾರೋ ಅದಕ್ಕನುಸಾರವಾಗಿ ಆ ರೈತರು ಇವರಿಗೆ ಮಿರಾಸೆಗಳನ್ನು ಕೊಡಬೇಕಾಗಿರುತ್ತದೆಯಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

Sri A. V. NARASIMHA REDDY.—So it is not compulsory on the part of the ryots but it is obligatory and in proportion to the service rendered that the ryots have got to pay mirase ?

Sri A. G. RAMACHANDRA RAO.—It is in the rules. The practice is customary and is embodied in the rules also.

ಶ್ರೀ ವಿ. ಆರ್. ನಾಯ್ಡು.—ತೋಟಿ-ತಳಾರಿಗಳೆಂದು ಕರೆಯುವುದಕ್ಕೆ ಬದಲಾಗಿ ಇವರಿಗೆ ಬೇರೆ ಏನಾದರೂ ಮತ್ತೊಂದು ಹೆಸರನ್ನು ಇಡಬೇಕೆಂದು ಮಹಾಜನಗಳೂ ಮತ್ತು ಈ ಸಭೆಯ ಸದಸ್ಯರೂ ಸರ್ಕಾರಕ್ಕೆ ಒತ್ತಾಯಪಡಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ತೋಟಿ-ತಳಾರಿಗಳ ದಿನಚರಿ ಕೆಲಸವೇನು ?

Sri A. G. RAMACHANDRA RAO.—We are going into the fundamentals. It is all described in the rules.

Sri A. BHEEMAPPA NAIK.—Are the Government recovering the mirase and giving it to the Thoties and Talaries, or are the ryots asked to pay to them ?

Sri A. G. RAMACHANDRA RAO.—The Government is not intervening. It is the ryots that pay to the Thoties and Talaries.

Sri A. BHEEMAPPA NAIK.—Is there any logic in Government not intervening, but asking the ryots only to pay to these people ? Why should not the same thing be done in the case of Shanbhogues and Patels ?

Sri A. G. RAMACHANDRA RAO.—It is a hoary practice which has worked well.

Sri A. BHEEMAPPA NAIK.—When there is that continuous agitation in this House, why should not the Minister take it into account that it has not been working well and consider the other proposal to see that it is levied on kandayam and Patels and Shanbhogues recover the same and pay it to Thoties and Talaris ? When they pay in kind why should not they pay in cash and that be recovered from them by the Shanbhogues and Patels ?

Sri A. G. RAMACHANDRA RAO.—I have already said that it will be examined.

Sri A. BHEEMAPPA NAIK.—Will the Government take immediate action to see that this change is effected as early as possible ?

Sri A. G. RAMACHANDRA RAO.—It will be examined.

Sri H. C. LINGA REDDY.—Are the Government aware that the Gundappa Gowda Committee on land reforms recommended that the village officers be paid a fixed remuneration ?

Sri A. G. RAMACHANDRA RAO.—Yes.

Sri H. C. LINGA REDDY.—What is the action taken by Government on that recommendation ?

Sri A. G. RAMACHANDRA RAO.—They said that the question of mirase would be examined.

Sri H. C. LINGA REDDY.—Is mirase part of assessment ?

Sri A. G. RAMACHANDRA RAO.—To say the exact nature of it I want notice.

Sri K. PUTTASWAMY.—Is there any legal obligation on the part of the occupant of land to pay mirase ?

Sri A. G. RAMACHANDRA RAO.—I have said already that it is the hoary practice which has survived to this day.

Sri K. PUTTASWAMY.—Are not Talaries and Thoties employees under Government ?

Sri A. G. RAMACHANDRA RAO.—Yes.

Sri K. PUTTASWAMY.—What is the consideration that the Government is giving to them in view of their services?

Sri A. G. RAMACHANDRA RAO.—They are given inam lands and that is the consideration.

Sri K. PUTTASWAMY.—In places where there are no service inams to Thoties and Talaries, what is the consideration that the Government is giving to them? (*Interruption*) Sir, this question of Thoties and Talaries unnecessarily gives rise to so much of enthusiasm from every quarter. As I asked already, in places where there are no service inam lands granted in favour of Thoties and Talaries, what is the consideration that the Government is giving to such Thoties and Talaries?

Sri A. G. RAMACHANDRA RAO.—I want notice for that.

Sri R. CHENNIGARAMIAH.—What is the practice obtaining in Bellary in respect of these officers?

Sri A. G. RAMACHANDRA RAO.—I believe some cash is paid there. But I have got to verify.

Sri R. CHENNIGARAMIAH.—If that is found feasible in Bellary District which is part of Mysore now, how is it that in other parts of Mysore it is not found feasible?

Sri A. G. RAMACHANDRA RAO.—I have already said that it will be examined.

Committee on Failures in University Examinations.

Q.—60. Sri B. NARAYANASWAMY (Mysore City South).—

Will the Government be pleased to state:—

the action the University has taken on the report of the committee which investigated into the causes for a large number of failures in the University examinations in the matter of—

(*a*) avoidance of late admission to colleges,

(*b*) removing indiscipline amongst teachers and students,

(*c*) checking 'poor materials' that entered the college,

(*d*) introducing quality control in the matter of recruitment of teachers?

A.—Sri A. G. RAMACHANDRA RAO (Minister for Law and Education).—

Report of the Committee was placed before the Senate at the meetings held on 7th January 1956 and 28th January 1956.

(*a*), (*b*), (*c*) and (*d*) These matters are under the active consideration of the University.

Sri B. NARAYANASWAMY.—Am I to understand that the report of this committee is pending before the University Council?

*Sri A. G. RAMACHANDRA RAO.—Yes. My information was that it was in the Senate and I do not know if it has come up before the Council.

Sri B. NARAYANASWAMY.—You have been pleased to say that at the meetings of the Senate held on 7th January 1956 and 28th January 1956 the matter was considered by it. May I know the decision of the Senate in the matter?

Sri A. G. RAMACHANDRA RAO.—We have not yet received the report on that matter from the University body.

Sri B. NARAYANASWAMY.—At least have the Government come to know what the decision of the Senate is in the matter?

Sri A. G. RAMACHANDRA RAO.—In due course we will be informed of it.

Sri B. NARAYANASWAMY.—This question has been pending for a long time and a convenient answer has been given that these matters are under the active consideration of the University. I am afraid that the purpose of my putting such a question will be of no avail and I do not know what further questions I have to put on these matters. I seek the protection of the Chair.

Sri A. G. RAMACHANDRA RAO.—On 28th January 1956 we called for information and whatever answers were available then, we have given.

Mr. SPEAKER.—It has been replied that the matter is under the consideration of the University. They have not withheld any answer.

Sri B. NARAYANASWAMY.—Does the University body take such a long time to consider the question?

Mr. SPEAKER.—That is a different matter.

Sri B. NARAYANASWAMY.—I am helpless, sir.

Mr. SPEAKER.—There is one question of Sri Mulka Govinda Reddy. The Member is not here.

(*Sri Swamidurai rose.*)

Sri H. M. CHANNABASAPPA.—His question may be taken up a little later when the Chief Minister comes.

Electrification of Mandya Koppal, and other villages.

Q.—138. Sri K. PUTTASWAMY (Srirangapatna).—

Will the Government be pleased to state :—

(*a*) whether the estimates for electrification of the villages of Mandya Koppal, Mahadevipura, Vadiyandahalli and Gamanahalli of Srirangapatna taluk are prepared and sanctioned by Government ;

(*b*) what is the expected return from each of these villages on the estimated cost ;

(*c*) whether the load survey forms have been sent by the Deputy Commissioner for the abovementioned villages ; if not, the reasons for the delay ;

(*d*) since when the applications of the abovementioned villages are pending with the electrical department ;

(*e*) the reasons for not taking up the work so far ?

A.—Sri H. M. CHANNABASAPPA (Minister for Industries).—

(*a*) Estimates have been prepared for all villages except Mandya Koppal. That pertaining to Gamanahalli has been sanctioned.

(*b*)	Mahadevipura ...	11 per cent.
	Vadiyandahalli ...	10·5 ,,
	Gamanahalli ..	8·4 ,,
(*c*)	Yes.	
(*d*)	Mahadevipura ...	1953
	Vadiyandahalli ...	1953
	Mandya Koppal ...	January 1956

(*e*) The work pertaining to Gamanahalli will be taken up shortly. The estimates for the other two villages of Mahadevipura and Vadiyandahalli are being finalised. The estimate for Mandya Koppal has to be prepared after completing the investigation.

Sri K. PUTTASWAMY.—May I know the date of preparing the estimates for the first two villages, namely, Mahadevipura and Vadiyandahalli ?

*Sri H. M. CHANNABASAPPA.—1954.

Sri K. PUTTASWAMY.—The year consists of 12 months. May I know the month ?

Sri H. M. CHANNABASAPPA.—I have not got information about the exact month ?

Sri K. PUTTASWAMY.—What is the difficulty in sanctioning the estimates though they were prepared in the year 1954 ?

Sri H. M. CHANNABASAPPA.—The load survey forms have got to be countersigned and sent to the Deputy Commissioner and the delay in sanctioning is mostly due to that.

Sri K. PUTTASWAMY.—May I know what was the chief difficulty in completing the load survey forms in the office of the Deputy Commissioner ?

Sri H. M. CHANNABASAPPA.—It is not the Deputy Commissioner who prepares the load survey forms. It is the parties, the village panchayets, and they have got to be scrutinised by the Amildar and certified and thereafter the Deputy Commissioner has got to countersign.

Sri K. PUTTASWAMY.—I said completion and not preparation. Has it come to the notice of the Government that there has been a lot of delay in the office of the Deputy Commissioner even after the receipt of load survey forms ?

Sri H. M. CHANNABASAPPA.—If the forms are prepared correctly they will be countersigned automatically. If the panchayets have no funds and if they simply pass a resolution and fill in the forms and send them, naturally they have got to be delayed.

SRI K. PUTTASWAMY.—The answers given are not satisfactory. I am making a positive statement saying that there has been a lot of delay in the office of the Deputy Commissioner in the matter of finalising these load survey forms. Will the Government kindly look into this aspect of the question ?

SRI H. M. CHANNABASAPPA.—If the forms are pending in the office of the Deputy Commissioner and if they are received in proper form, they will be examined.

SRI K. PUTTASWAMY.—May I know whether there was a requisition from the representative of the area to the Minister concerned about two years ago in respect of the complaints by these villages that the forms are not being properly attended to in the office of the Deputy Commissioner ?

SRI H. M. CHANNABASAPPA.—I do not remember exactly. Anyway the matter will be verified and the Hon'ble Member will be informed about the cause of the delay.

SRI K. PUTTASWAMY.—In respect of Mandya Koppal, will the Government kindly verify whether the information given is correct ? There has been an application, properly filled much earlier.

SRI H. M. CHANNABASAPPA.—The question is pendency of estimates pertaining to Mandya Koppal with the Superintendent of Power of Light. The Superintendent has been in receipt of the forms and the applications were completed on 14-2-1956.

Power Supply to I.P. sets in Gudibanda and Bagepalli Taluks.

Q.—193. SRI B. V. NARAYANA REDDY (Bagepalli-Gudibanda).—

Will the Government be pleased to state :—

(*a*) how many applications were received for the last three years from the raiyats of Gudibanda and Bagepalli Taluks for power supply for I.P. sets ;

(*b*) how many were sanctioned ;

(*c*) how many are still pending and where pending ?

A.—SRI H. M. CHANNABASAPPA (Minister for Industries).—

(*a*) Bagepalli Taluk	...	128
Gudibanda Taluk	...	25
(*b*) Bagepalli	...	93
Gudibanda	...	5

(*c*) Bagepalli Taluk.—

No. of Applications.	*Where pending.*
29 applications at Gulur and Maraganakunte.	Pending in the Section.
3 at Pathabagepalli ...	Do
3 at Narepally ...	Do

Gudibanda Taluk.—

20 I.P. sets Bachaganahalli and Bommenahalli.	Pending with Chief Electrical Engineer.

SRI B. V. NARAYANA REDDY.—May I know the number of places in Bagepalli Taluk where pump sets have been given ?

*SRI H. M. CHANNABASAPPA.—The names are not before me.

SRI B. V. NARAYANA REDDY.—Can you give at least the number of places where power has been sanctioned ?

SRI H. M. CHANNABASAPPA.—Out of 95 cases which have been sanctioned, 53 were sanctioned in February 1956 and in respect of the remaining 45 some are serviced and some are nearing completion.

SRI B. V. NARAYANA REDDY.—There are only 9 sets working today.

SRI H. M. CHANNABASAPPA.—I have given you the information. Out of 98 sanctioned, 53 were sanctioned only in February 1956 and out of the remaining 45, some are serviced and some are nearing completion.

9 A.M.

SRI B. V. NARAYANA REDDY.—What is exactly the number of pumps which are working and the quantity of power supplied to these pumps ?

SRI H. M. CHANNABASAPPA.—Those details I have not got with me. Anyway all the 53 are nearing completion.

Sri B. V. NARAYANA REDDY.—Out of 93 sanctioned, can the Hon'ble Minister at least tell me when power will be supplied ?

Sri H. M. CHANNABASAPPA.—Immediately ofter the work is completed and the parties fulfil the conditions, power will be given.

Sri B. V. NARAYANA REDDY.—In spite of conditions being fulfilled, I have been saying that power has still not been given. They say, there is lack of material.

ದ್ದಾರೆ, ಭಾಷಣಗಳನ್ನು ಮಾಡಿದ್ದಾರೆ, ದೇಶದ ಅಭಿಪ್ರಾಯವನ್ನು ಅಳೆದಿದ್ದಾರೆ. ಅನಂತರ ಅವರೇ ಅಸೆಂಬ್ಲಿಯಲ್ಲಿ 'ದಕ್ಷಿಣ ಭಾರತ'ದ ಸೃಷ್ಟಿಯಾಗಬೇಕೆಂಬ ಸೂಚನೆ ಏನಿದೆಯೋ, ಅದು ಜನಾನುರಾಗಿಯಾಗಿಲ್ಲ, ಅದನ್ನು ಕಾರ್ಯಗತ ಮಾಡುವುದು ಕಷ್ಟ ಎನ್ನತಕ್ಕ ಪದಗಳನ್ನು ಪ್ರಯೋಗ ಮಾಡಿದ್ದಾರೆ. He has said, "It is neither popular nor practicable." That is the hard fact that faces us from Madras. ಅದರಲ್ಲಿ ತಮಗೆ ಗೊತ್ತಿರುವ ಹಾಗೆ, ಅಲ್ಲಿನ ಮಂತ್ರಿ ಮಂಡಳಿದಲ್ಲಿ ಮತ್ತು ಶಾಸನ ಸಭೆಗಳಲ್ಲಿ ಭಿನ್ನಾಭಿಪ್ರಾಯವಿದ್ದು, ಯಾರು ದಕ್ಷಿಣ ಪ್ರದೇಶಕ್ಕೆ ಪರವಾಗಿದ್ದರೋ ಅವರೇ ಈ ವಾದ ಸರಣಿಯನ್ನು ಹೂಡಿದರೆ ನಾವು ವಿಚಾರದಲ್ಲಿ ಹೇಗೆ ವರ್ತಿಸಬೇಕು ಎನ್ನತಕ್ಕದನ್ನು ಆಲೋಚನೆ ಮಾಡಬೇಕು. ಇನ್ನು ತಿರು-ಕೊಚ್ಚಿ ವಿಷಯವನ್ನು ಪ್ರಸ್ತಾಪ ಮಾಡಿದರೆ ತಿರು-ಕೊಚ್ಚಿ ಮಂತ್ರಿ ಮಂಡಳದವರೂ, ಕಾಂಗ್ರೆಸ್ ಸಂಸ್ಥೆಯವರೂ ಮೈಸೂರಿನ ಜೊತೆಗೆ ಸೇರಿಕೊಳ್ಳುವುದಕ್ಕೆ ಅಥವಾ ಎರಡು ಮೂರು ಪ್ರಾಂತಗಳಿಂದ ಕೂಡಿದ ದೊಡ್ಡ ಪ್ರಾಂತವನ್ನು, ಎಂದರೆ, ದಕ್ಷಿಣ ಪ್ರದೇಶವನ್ನು ಮಾಡುವುದಕ್ಕೆ ಸಿದ್ಧರಾಗಿದ್ದರು, ಒಪ್ಪಿದರು, ಅದೇನೂ ಗುಟ್ಟಿನ ಮಾತಲ್ಲ. ಈ ದಿವಸದ ಪರಿಸ್ಥಿತಿ ಏನಾಗಿದೆ ಎಂದರೆ ಯಾರು ಯಾರು ಈ ವಾದಕ್ಕೆ ಒಪ್ಪಿ ಕಾರ್ಯೋನ್ಮುಖರಾಗಿದ್ದರೋ ಅವರು ದುರದೃಷ್ಟವಶಾತ್ ಪದಚ್ಯುತರಾಗಿದ್ದಾರೆ; ಅಲ್ಲಿ ಶಾಸನ ಸಭೆಗಳಿಲ್ಲ. ರಾಜಕೀಯ ದೃಷ್ಟಿಯಿಂದ ನೋಡಿದರೆ ಕೇರಳ ಕೇರಳವಾಗಿಯೇ ಉಳಿಯಬೇಕು ಎನ್ನತಕ್ಕವರ ಅಭಿಪ್ರಾಯ ಬಹುಮತವಾಗಿದ್ದ ಹಾಗೆ ಕಾಣುತ್ತದೆ. ಬಹುಮತವೆನ್ನತಕ್ಕದನ್ನು majority ಎನ್ನುವ ಅರ್ಥದಲ್ಲಿ ಉಪಯೋಗಿಸುತ್ತೇನೆ. Majority ಸ್ವಲ್ಪ ಮಾತ್ರ ವಿರಬಹುದು; ಬಹು ಸಂಖ್ಯೆಯಲ್ಲಿಲ್ಲದೆ ಇರಬಹುದು. ಆದರೆ ಕೇರಳ ಪ್ರಾಂತ ಮತ್ತೊಂದು ಸಂಸ್ಥಾನದೊಡನೆ ಸೇರಿ ದೊಡ್ಡ ದ್ವಿಭಾಷಾ ಅಥವಾ ತ್ರಿಭಾಷಾ ಪ್ರಾಂತವಾಗಬೇಕು ಎನ್ನತಕ್ಕವರ ಅಭಿಪ್ರಾಯಕ್ಕೆ ಎಷ್ಟು ಬಲ, ಶಕ್ತಿ, ಒತ್ತಾಯ ಇರಬೇಕೋ ಅಷ್ಟು ಇದ್ದಹಾಗೆ ನನಗೆ ಕಾಣುವುದಿಲ್ಲ. ಇನ್ನು ಉಳಿದಿರತಕ್ಕದ್ದು ಆಂಧ್ರ ಪ್ರಾಂತ. ಈ ಮಹತ್ಪ್ರಶ್ನೆಯಲ್ಲಿ ಈ ಸಭಾಸದಸ್ಯರಿಗೆ ಎಲ್ಲ ವಿಷಯಗಳನ್ನೂ ತಿಳಿಸಬೇಕಾದದ್ದು ನನ್ನ ಕರ್ತವ್ಯ. ನಾನಾದರೂ ಈ ವಿಚಾರದಲ್ಲಿ ತಟಸ್ಥನಾಗದೆ ಅವರೊಡನೆ ಸಮಾಲೋಚನೆ ಮಾಡಿದ್ದೇನೆ. ಸಮಾಲೋಚನೆ ಮಾಡಿದ್ದರ ಫಲವಾಗಿ ಆಂಧ್ರ ನಾಯಕರುಗಳು ಈ ಒಂದು ದೊಡ್ಡ ದ್ವಿಭಾಷಾ, ಅಥವಾ ತ್ರಿಭಾಷಾ ಪ್ರಾಂತವನ್ನು ಸ್ಥಾಪನೆ ಮಾಡೋಣವೆನ್ನುವ ಸೂಚನೆಗೆ ಅಷ್ಟಾಗಿ ಮನಸ್ಸನ್ನು ಕೊಡಲಿಲ್ಲ. ಸಾರ್ವಜನಿಕವಾಗಿಯೂ ಕೂಡ ಮೈಸೂರು ಮತ್ತು ಆಂಧ್ರ ಜೊತೆಗೆ ಸೇರಿಕೊಂಡು ಒಂದು ಸಂಸ್ಥಾನವಾಗಬೇಕು ಎನ್ನತಕ್ಕ ಸೂಚನೆಯನ್ನು ಅವರು ಇತ್ತಿಲ್ಲ. ಆದರೆ ಕೆಲವರು ಅಲ್ಲೊಬ್ಬರು ಇಲ್ಲೊಬ್ಬರು ಹೇಳಿದ್ದಾರೆ ಎಂದು ಮಾತ್ರ ಹೇಳಬಹುದು. ಹಾಗೆ ಹೇಳಿರತಕ್ಕ ಉದಾಹರಣೆಗಳೂ ಇವೆ. ಆದರೆ ನಾವು ಈ ದಿವಸ ಕಾನೂನುಬದ್ಧವಾಗಿ, ಅಧಿಕಾರಯುತವಾಗಿ ಚರ್ಚೆ ಮಾಡುತ್ತಿರುವಾಗ ಆ ಮಟ್ಟದಲ್ಲಿ ಅಭಿಪ್ರಾಯಗಳು ಬಂದಿದೆಯೇ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಶಾಸನ ಸಭೆಗಳಲ್ಲಿ ಆ ಅಭಿಪ್ರಾಯ ಬಂದಿದೆಯೇ, ಮಂತ್ರಿ ಮಂಡಲದಲ್ಲಿ ಆ ಅಭಿಪ್ರಾಯ ಹೊರಪಟ್ಟಿದೆಯೇ, ಆಂಧ್ರ ಪ್ರೊವಿನ್ಷಿಯಲ್ ಕಾಂಗ್ರೆಸ್ ಕಮಿಟಿಯಲ್ಲಿ ಆ ಅಭಿಪ್ರಾಯ ರೂಪ ತಾಳಿದೆಯೇ, ಅಲ್ಲಿರತಕ್ಕ ಇತರ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಬೆಂಬಲ ಕೊಟ್ಟಿವೆಯೇ ಎನ್ನತಕ್ಕದ್ದನ್ನು ಪರಿಶೀಲನೆ ಮಾಡಬೇಕು. ಆ ರೀತಿ ನೋಡಿದ್ದರಲ್ಲಿ ಅಧಿಕೃತವಾದ ಪ್ರತಿನಿಧಿಯುತವಾದ ಪ್ರಜಾಭಿಪ್ರಾಯ ಈ ವಿಷಯದಲ್ಲಿ ಹೊರಪಟ್ಟಹಾಗೆ ನನಗೆ ಕಾಣುವುದಿಲ್ಲ. ಆದುದರಿಂದ ಇತರರನ್ನು ಸ್ವಾಗತಿಸುವುದಕ್ಕೆ ಸ್ವಾಭಾವಿಕವಾಗಿರತಕ್ಕ ಸತ್ಸಂಪ್ರದಾಯವನ್ನು ಹಾಕಿರತಕ್ಕ ಈ ಸಭೆಯವರು ಆ ಸತ್ಸಂಪ್ರದಾಯದ ಮಾರ್ಗದಲ್ಲಿ ನಡೆದುಕೊಂಡು ಹೋಗತಕ್ಕದ್ದು ಶ್ರೇಯಸ್ಕರ. ನಾವು ಈ ವಿಷಯದಲ್ಲಿ ಒತ್ತಾಯವನ್ನು ಮಾಡತಕ್ಕದ್ದು ಸರಿಯಲ್ಲವೆನ್ನತಕ್ಕದ್ದನ್ನು ಎಲ್ಲರೂ ಒಪ್ಪಿಕೊಳ್ಳುತ್ತೇವೆ. ಕೆಲವರು ಹೇಳಬಹುದು ತೆರೆದ ಬಾಗಿಲನ್ನು ಮುಚ್ಚದೆ ಯಾವ ರೀತಿ ಹೇಳಿದೆಯೋ ಹಾಗೆ ತೆರೆದಿರೋಣವೆಂದು. ಅದು ನ್ಯಾಯವಾದ ಸೂಚನೆ, ಸರ್ವ ಸಮ್ಮತವಾದ ಸೂಚನೆ. ಅಧಿಕೃತವಾಗಿ ಶಾಸನಸಭೆಯಿಂದ ತಿರು-ಕೊಚ್ಚಿ ಪ್ರಾಂತದವರಾಗಲಿ, ಮದರಾಸು ಪ್ರಾಂತದವರಾಗಲಿ, ಆಂಧ್ರ ಪ್ರಾಂತದವರಾಗಲಿ, ಎಲ್ಲರೂ ಒಪ್ಪಿ ಒಂದು ದೊಡ್ಡ ಪ್ರಾಂತವನ್ನು ದೇಶದ ಹಿತ ದೃಷ್ಟಿಯಿಂದ ಮಾಡೋಣವೆಂದು ಹೇಳಿದರೆ ಆ ಸೂಚನೆಯ ವಿಷಯದಲ್ಲಿ ನಾವು ಸರ್ವಥಾ ತೆರದ ಮನಸ್ಸು ತೆರೆದ ಬಾಗಿಲು ಇಟ್ಟುಕೊಂಡಿರತಕ್ಕವರಾಗಿರತಕ್ಕದ್ದು ಒಳ್ಳೆಯದು. ಈ ವಿಷಯದಲ್ಲಿ ನಾನು ಪುನಃ ಪುನಃ ಪ್ರಾರ್ಥಿಸಿ ಹೇಳಿಕೊಳ್ಳುತ್ತೇನೆ. ಇದು ಬಹಳ ವಿವಾದಯುತ ಪ್ರಶ್ನೆ. ಈ ಪ್ರಶ್ನೆಯಲ್ಲಿ ನನ್ನ ಅಭಿಪ್ರಾಯವೇ ಸರಿ ಎಂದು ಯಾರು ವಾದಿಸುವುದಕ್ಕೆ ಹೋಗುತ್ತಾರೆಯೋ ಅವರು ದೇಶದಲ್ಲಿ ಶಾಂತಿ ಸೌಹಾರ್ದಗಳಿಗೆ ಸಹಾಯ ಮಾಡಿದಂತಾಗುವುದಿಲ್ಲ. ಈ ದಿವಸ ವಿಶಾಲ ಮನೋಭಾವವಿಲ್ಲವೆಂದು ಮತ್ತೊಬ್ಬರಿಗೆ ಆರೋಪಣೆ ಮಾಡುತ್ತಾರೆ. ಅವರು ಒಬ್ಬರು ಇನ್ನೊಬ್ಬರಿಗೆ ಆರೋಪಣೆ ಮಾಡತಕ್ಕ ಪರಿಸ್ಥಿತಿ ಬಂದಿದೆ. ಈ ರೀತಿ ಇರುವಾಗ ಮುಖ್ಯವಾದುದೇನೆಂದರೆ: ಯಾವಾಗಲೂ ಎಲ್ಲ ಪ್ರಶ್ನೆಗಳಲ್ಲಿಯೂ ಎರಡು ಇರುತ್ತವೆ, ತಿರುಳು, ಮತ್ತು ಸಿಪ್ಪೆ (form and substance). ಎಲ್ಲ ಶಾಸನಸಭೆಗಳೂ ಕಾನೂನು ಮಾಡತಕ್ಕದಕ್ಕೆ, ತೀರ್ಮಾನಮಾಡತಕ್ಕದಕ್ಕೆ ಒಂದು ಉದ್ದೇಶ (substance) ಯಾವುದೆಂದರೆ, ದೇಶಕ್ಕೆ ಒಳ್ಳೆಯದಾಗಲಿ, ಜನಗಳಲ್ಲಿ ಶಾಂತಿ ಮತ್ತು ನೆಮ್ಮದಿ ಇರಲಿ ಎಂಬುದು. ಕಾನೂನುಗಳು, ತೀರ್ಮಾನಗಳು ಎಲ್ಲವನ್ನೂ ಮಾಡಿದ್ದೇವೆ ಅಷ್ಟೆ. ಇವುಗಳ ಧ್ಯೇಯ ಜನಗಳಿಗೆ ಒಳ್ಳೆಯದಾಗಲಿ ನೆಮ್ಮದಿಯಾಗಲಿ, ಶಾಂತಿಯಾಗಲಿ ಎಂದು. ಹಾಗೆ ನಾವು ಮಾಡತಕ್ಕ ತೀರ್ಮಾನ, 'This is merely a means to an end, this is not an end in itself' ಎಂದು ಅನೇಕರು ವಾದಿಸುತ್ತಾರೆ. ಕರ್ಣಾಟಕ ಏಕೀಕರಣ 'is an end in itself' ಎಂದು ವಾದಿಸತಕ್ಕದ್ದೂ ಸರಿಯಲ್ಲ, Mysore for Mysoreans ಎಂದು ವಾದಿಸತಕ್ಕದ್ದೂ ಸರಿಯಲ್ಲ. Even in the minds of these two sections, if they analyse the situation, these proposals are merely a means to an end, the end being the happiness and well-being of the people. ಅದನ್ನು ನಾವು ಸರಿಯಾಗಿ ಅರ್ಥ ಮಾಡಿಕೊಂಡು ಮನಸ್ಸಿಗೆ ಅಂಟಿಸಿಕೊಂಡರೆ, ಈ ತೀರ್ಮಾನ ಯಾವ ರೂಪತಾಳಬೇಕು ಎನ್ನತಕ್ಕವರಲ್ಲಿ ಒಂದು ಹಠವೇನಿದೆಯೋ ಆ ಹಠ ಕ್ರಮ ಕ್ರಮವಾಗಿ

ಹೋಗಿ ಎಲ್ಲರಲ್ಲಿಯೂ ಶಾಂತಿ ಸೌಹಾರ್ದ ಭಾವ ಉಂಟಾಗುತ್ತದೆ. ಈ ದಿವಸ ನಾವು ಮಾಡತಕ್ಕ ತೀರ್ಮಾನಗಳನ್ನು ಹೊರಗಡೆಯಿಂದ ಅಕ್ಟೋಬರು ತಿಂಗಳಿನಿಂದ ಆಚೆಗೆ ಬಂದು ಸೇರತಕ್ಕಂಥವರು ಒಪ್ಪಿಕೊಂಡಿಲ್ಲವೆಂದು ನನ್ನ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ನಮ್ಮ ಕಷ್ಟಗಳನ್ನೂ ಇಲ್ಲಿರುವ ಪರಿಸ್ಥಿತಿಯನ್ನೂ ಅವರು ಅರಿತುಕೊಂಡಿಲ್ಲ. 'ಮೈಸೂರು' ಎಂದು ಹೆಸರನ್ನು ಇಟ್ಟರೆ ಸತ್ಯಾಗ್ರಹ ಮಾಡುತ್ತೇವೆ ಎಂದು ಪತ್ರಿಕೆಗಳಲ್ಲಿ ಸಂಪಾದಕೀಯಗಳನ್ನು ಬರೆದಿರುತ್ತಾರೆ. ಇದನ್ನು ಒಪ್ಪಬಾರದು ಎಂದು ಹೇಳಿ ಅಗ್ರಲೇಖನಗಳನ್ನ ಬರೆದಿರುತ್ತಾರೆ. ಅನೇಕ ಮುಖಂಡರುಗಳು ಸಹ ತಪ್ಪು ಅರ್ಥ ಮಾಡಿಕೊಂಡಿರುತ್ತಾರೆ. ಇಂದು ಮೈಸೂರು ಸಭೆಯವರು ಒಮ್ಮತವಾದ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರಲ್ಲ ಅದನ್ನು ನಾವೆಲ್ಲ ಕಲೆತುಕೊಂಡಾಗ ಸಮಾಲೋಚನೆ ಮಾಡೋಣವೆನ್ನುವ ಮಟ್ಟದಲ್ಲಿಯೂ ಅವರು ಇಲ್ಲ.

11 A.M.

ಮೈಸೂರು ಸರ್ಕಾರದವರು ಸರ್ವಾನುಮತದಿಂದ ಮಾಡಿರುವ ತೀರ್ಮಾನವಿರುವಾಗ, ನಾವೆಲ್ಲಾ ಕುಳಿತುಕೊಂಡು ಯೋಚನೆ ಮಾಡೋಣ ಎಂದು ಹೇಳಿದ್ದರೆ ನನ್ನ ಮನಸ್ಸಿಗೆ ಬಹಳ ಸಂತೋಷವಾಗುತ್ತಿತ್ತು. ಮೈಸೂರು ಶಾಸನ ಸಭೆಗಳು ಒಂದು ಬಹುಮತದ ತೀರ್ಮಾನನವನ್ನು ಕೈಕೊಂಡಿರುವಾಗ ಮಿಕ್ಕವರ ಅಭಿಪ್ರಾಯ ತೆಗೆದುಕೊಳ್ಳುವುದು ಸೂಕ್ತವಲ್ಲ. ನಿಮ್ಮ ಕುದುರೆ ಎತ್ತ ಕಡೆ ಬೇಕಾದರೂ ಓಡಲಿ, ನಮ್ಮ ದಾರಿ ನಮ್ಮದು ಎಂದು ವಾದಿಸುವವರಿದ್ದರೆ ಏನು ಮಾಡುವುದು? ಇಲ್ಲಿ ಅಧಿಕಾರ ಸ್ಥಾನಗಳಲ್ಲಿರುವ ಮುಖಂಡರಾದ ನಾವೆಲ್ಲರೂ ಒಗ್ಗಟ್ಟಾಗಿ ಒಟ್ಟು ಕುಟುಂಬದವರಂತೆ ಬಾಳಬೇಕೆಂಬ ಅಭಿಪ್ರಾಯ ಸೂಚಿಸಿದರೆ, ಅದು ಬೇಡವೆಂದು ಹೇಳಿದರೆ, ಅದಕ್ಕೇನು ಮಾಡಬೇಕು? ಯಾವ ಕಾರಣದಿಂದಲೋ ಏನೋ 35 ಜನ ಅಸೆಂಬ್ಲಿ ಸದಸ್ಯರು ಜವಾಹರಲಾಲ್ ನೆಹ್ರೂ ಅವರಿಗೆ ಒಂದು ಸ್ಟೇಟ್‌ಮೆಂಟ್ ಕಳುಹಿಸಿದರು. ಇಷ್ಟು ಕಷ್ಟಪಟ್ಟು ನಾವು ಒಂದು ತೀರ್ಮಾನಕ್ಕೆ ಬಂದಿರುವಾಗ ನಮ್ಮನ್ನು ಕೇಳುವ ಮನಸ್ಸು ಕೂಡ ಆ ಮಾನ್ಯ ಸದಸ್ಯರಿಗೆ ಬರಲಿಲ್ಲ. ಅದೇನೋ ಆಗಿಹೋಯಿತು. ಮೈಸೂರಿನವರನ್ನು ಕಟ್ಟಿಹಾಕಿ ದರದರ ಎಳೆದುಕೊಂಡು ಹೋಗೋಣ ಎಂಬ ಭಾವನೆಯಿದ್ದರೆ ಹೇಗೆ? ಸರಿಯಾದ ಮಾರ್ಗದಲ್ಲಿ ನಿರ್ದೇಶ ಕೊಡಲಿಲ್ಲವಲ್ಲ ಎಂಬುದೇ ಈ ದಿವಸ ಒಂದು ದೊಡ್ಡ ಚಿಂತೆಯಾಗಿದೆ. ಆದರೆ ನಾವು ನಿರಾಶರಾಗಬಾರದು. ಮನುಷ್ಯನ ಗುಣ ಅನೇಕಾವರ್ತಿ ಸಮಯಕ್ಕೆ ತಕ್ಕ ಹಾಗೆ ಪ್ರವರ್ತಿಸುವುದೇ ಆಗಿದೆ. ಇಬ್ಬರು ಕಲೆತು ಮಾತನಾಡುವ ಉದ್ದೇಶವೇನು? ಅದರಿಂದ ಅನೇಕ ಸಾರಿ ಅಭಿಪ್ರಾಯ ಮಾರ್ಪಾಡಾಗುತ್ತದೆ. ಇದು ನಮ್ಮೆಲ್ಲರ ಅನುಭವ. ಆದುದರಿಂದ ಉದ್ವೇಗದಿಂದ ಕೂಡಿರತಕ್ಕ ಉತ್ತರ ಕರ್ಣಾಟಕದವರು ನಮ್ಮಲ್ಲಿಗೆ ಬಂದು ನಮ್ಮೊಡನೆ ಕಲೆತು ಸಮಾಲೋಚನೆ ಮಾಡಬಹುದೆಂದು ಹೇಳಿದಮೇಲೆ ಅವರ ಉದ್ವೇಗ ಸ್ವಲ್ಪ ಕಡಮೆಯಾಗಬಹುದು. ಅವರೂ ನಾವೂ ಎಲ್ಲರೂ ಭಾರತೀಯರೇ ಆಗಿರುವುದರಿಂದ ಯಾವುದಾದರೂ ಒಂದು ತೀರ್ಮಾನಕ್ಕೆ ಬಂದೇ ಬರಬೇಕು. ಗತ್ಯಂತರವಿಲ್ಲ. ಪಾಕೀಸ್ಥಾನ, ಹಿಂದೂಸ್ಥಾನ ಹರಿದು ಹಂಚಿದ ಹಾಗೆ ಇಂಡಿಯಾ ದೇಶದಲ್ಲಿರುವ 'ನಾವು ನಾವೇ ಬೇರೆ, ನೀವೇ ಬೇರೆ' ಎಂದು ಉತ್ತರ ಕರ್ಣಾಟಕದವರೂ ಮತ್ತು ದಕ್ಷಿಣ ಕರ್ಣಾಟಕದವರೂ ಒಂದು ಚೈನೀಸ್ ವಾಲ್ ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ. ಒಂದು ವೇಳೆ ಅವರು ಉದ್ವೇಗ ತೋರಿಸಿದರೂ ಅವರ ಮನಸ್ಸನ್ನು ಒಲಿಸಿಕೊಂಡು ಅವರ ಅನುಮಾನವನ್ನು ಪರಿಹಾರ ಮಾಡಿ ನೆಮ್ಮದಿಯಿಂದ ಬಾಳತಕ್ಕಂಥ ಒಂದು ಪರಿಸ್ಥಿತಿಯನ್ನು ರೂಪಿಸಬೇಕಾಗಿರತಕ್ಕ ಜವಾಬ್ದಾರಿ ನಮ್ಮದೇ ಆಗಿದೆ. ಈ ದಿವಸ ನಾವು ಈ ಎಲ್ಲ ದೃಷ್ಟಿಗಳನ್ನೂ ಗಮನದಲ್ಲಿಟ್ಟು ತೀರ್ಮಾನ ಮಾಡಬೇಕು. ಇತರರ ಉದ್ವೇಗವನ್ನು ಕಡಮೆ ಮಾಡುವುದಕ್ಕೆ ಯಾವುದಾದರೂ ದಾರಿಯಿದೆಯೆ ಎಂದು ನಾವು ಯೋಚನೆ ಮಾಡಬೇಕು. ತೆಗೆದುಕೊಂಡಿರತಕ್ಕ ತೀರ್ಮಾನವನ್ನು ನಿಸ್ಪೃಹತೆಯಿಂದ ಕಾರ್ಯರೂಪಕ್ಕೆ ತರಲು ಯಾವ ದಾರಿಯಿದೆಯೆಂಬುದನ್ನು ಯೋಚನೆ ಮಾಡಬೇಕು. ಎಷ್ಟೇ ಹೇಳಿದರೂ ಕೂಡ ಈ ದಿವಸ ಮೈಸೂರು ಸಂಸ್ಥಾನಕ್ಕೆ ಮತ್ತು ಈ ಸಭೆಗೆ ಬಹಳ ಪ್ರಾಮುಖ್ಯವಾದ ಸ್ಥಾನವಿದೆ. ಮಿಕ್ಕವರು ಏನೇ ಹೇಳಿದರೂ ಕೂಡ ಈ ಸಭೆಯ ಅಭಿಪ್ರಾಯಕ್ಕೆ ದೇಶದಲ್ಲಿ, ಪಾರ್ಲಿಮೆಂಟಿನಲ್ಲಿ, ಇಂಡಿಯಾ ಸರ್ಕಾರದಲ್ಲಿ ಹೆಚ್ಚಾದ ಮಾನ್ಯತೆ ದೊರೆತಿದೆ. ಆದುದರಿಂದಲೇ ಈ ಜವಾಬ್ದಾರಿ, ಈ ರೀತಿ ರೂಪಿತವಾಗಿರತಕ್ಕಂಥ ದೊಡ್ಡ ಜವಾಬ್ದಾರಿ, ನಮ್ಮ ಮೇಲೆ ಬಿದ್ದಿರುವುದರಿಂದ ನಾವು ಜವಾಬ್ದಾರಿಯುತವಾಗಿಯೇ ವರ್ತಿಸಬೇಕು. ಇಷ್ಟೇ ನಾನು ಪ್ರಾರ್ಥಿಸಿಕೊಳ್ಳುವುದು : ಈ ಸಭೆಯವರೇನು ತೀರ್ಮಾನವನ್ನು ಕೈಗೊಂಡಿದ್ದೇವೋ ಆ ವಿಚಾರದಲ್ಲಿ ಸದಾ ಒಮ್ಮನಸ್ಸಿನಿಂದ, ಒಗ್ಗಟ್ಟಿನಿಂದ ವರ್ತಿಸದೇ ಹೋದರೆ ಅದು ನಮ್ಮ ಆತ್ಮಕ್ಕೆ ನಾವೇ ವಂಚನೆಯನ್ನು ಮಾಡಿಕೊಂಡ ಹಾಗಾಗುತ್ತದೆ, ನಮ್ಮ ಭಾಷೆಗೆ ನಾವೇ ತಪ್ಪಿದ ಹಾಗಾಗುತ್ತದೆ. ನಾಳೆಯ ದಿವಸ ಮೈಸೂರಿನ ಹೆಸರಿನ ವಿಷಯ ಬರಬಹುದು ಅಥವಾ ಮೈಸೂರಿನ ಹಿನ್ನೆಲೆಯ ವಿಷಯ ಬರಬಹುದು. ಇಲ್ಲಾದ ತೀರ್ಮಾನಕ್ಕೆ ಒಪ್ಪಿರುವವರು, ಇಲ್ಲಿ ತೀರ್ಮಾನ ಮಾಡಿರುವವರು ನಾಳೆ ತಮ್ಮ ಮನಸ್ಸನ್ನು ಬದಲಾಯಿಸುವುದು ಸೂಕ್ತವಲ್ಲ. ಬದಲಾಯಿಸಿದ್ದೇ ಆದರೆ ಮನಸ್ಸನ್ನು ನೋಯಿಸಿದಂತಾಗುವುದೂ ಅಲ್ಲದೆ ಆ ನೋವು ಮಾಯುವುದಕ್ಕೆ ಅವಕಾಶವೂ ಇರುವುದಿಲ್ಲ. ಯಾವಾಗ ಮನಸ್ಸು ನೋಯುತ್ತದೆಯೋ ಯಾರಿಂದಲೂ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಅದರ ಪರಿಣಾಮ ಆಟಂಬಾಂಬ್, ಹೈಡ್ರೋಜನ್ ಬಾಂಬಿಗಿಂತ ವಿಪರೀತವಾಗಬಹುದು. ಆದುದರಿಂದ ಮನಸ್ಸಿನ ಸಹಜಗುಣವರಿತು ಸರಿಯಾದ ರೀತಿಯಲ್ಲಿ ವರ್ತಿಸಿದರೆ ಮುಂದೆ ಶಾಂತಿಯಿದೆ, ಸೌಹಾರ್ದವಿದೆ. ಈ ಶಾಂತಿ ಸೌಹಾರ್ದವನ್ನು ಕಾಪಾಡುವ ಬಹುಮಟ್ಟಿನ ಜವಾಬ್ದಾರಿ ಈ ಸಭೆಯ ಸದಸ್ಯರದೇ ಆಗಿದೆ. ಈ ಸಭೆಯಲ್ಲಿರತಕ್ಕ ಎಲ್ಲ ಸದಸ್ಯರೂ ಜಾತಿ, ಕೋಮು, ಪ್ರದೇಶ ಇವುಗಳ ಅಭಿಮಾನವನ್ನೆಲ್ಲಾ ಬಿಟ್ಟು ಮೈಸೂರು ಅಸೆಂಬ್ಲಿ ಏನೊಂದು ತೀರ್ಮಾನ ಮಾಡಿದೆಯೋ, ನಮ್ಮ ಸರ್ವಾನುಮತ ತೀರ್ಮಾನವೇನಿದೆಯೋ, ಅದರ ಪ್ರಕಾರ ಸದಾ ನಡೆದುಕೊಂಡು ಹೋಗೋಣ ಎಂದು ಮನಸ್ಸುಳ್ಳವರಾಗಿದ್ದರೆ ಅವರ ವಾತಾವರಣವೇ ಬೇರೆಯಾಗುತ್ತದೆ. ದಕ್ಷಿಣ ಪ್ರದೇಶದ ಸೂಚನೆ, ಅದರ ಸಮಸ್ಯೆ, ಇವುಗಳನ್ನು ನಾವುಗಳೆಲ್ಲರೂ ಒಪ್ಪಿ ಅದರ ತತ್ವ ಸರಿಯಾಗಿದೆಯೆಂದು ಒಪ್ಪಿಕೊಂಡರೂ ಕೂಡ ಅದನ್ನು ಕಾರ್ಯರೂಪಕ್ಕೆ ತರತಕ್ಕುದರಲ್ಲಿ ಬೇಕಾದಷ್ಟು ಅಡಚಣೆಯಿದೆ, ಅದಕ್ಕೆ ಅವಕಾಶವಿಲ್ಲ ಎಂಬುದನ್ನೂ ಕೂಡ ಮನಸ್ಸಿಗೆ ತಂದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಬಹುಶಃ ಇನ್ನೂ ಕೆಲವು ದಿವಸ ಕಾದು ನೋಡೋಣ. ಮದರಾಸ್ ಅಸೆಂಬ್ಲಿಯಲ್ಲಿ "It is neither practicable

(SRI K. HANUMANTHAIYA.)

nor popular" ಎಂದು ತೀರ್ಮಾನಮಾಡಿದರು. ಆಂಧ್ರ ಅಸೆಂಬ್ಲಿಯಲ್ಲಿ ಏನು ಹೇಳುತ್ತಾರೋ ನೋಡೋಣ. ಕೇರಳದ ವಿಷಯ ಈ ದಿವಸ ಪ್ರಸ್ತಾಪಮಾಡುವುದಕ್ಕೇ ಆಗುವುದಿಲ್ಲ. ಆದುದರಿಂದ ಮೈಸೂರು ದೊಡ್ಡ ಮೈಸೂರಾಗತಕ್ಕ ಸಂದರ್ಭದಲ್ಲಿ ಇದೇ ಹೆಸರನ್ನೇ ಉಳಿಸಿಕೊಳ್ಳಲಿ ಅಥವಾ ಬೇರೆ ಹೆಸರನ್ನಿಡತಕ್ಕ ಸಂಭವ ಬರಲಿ ಆಗ ನಾವು ಮನಸ್ಸಿನಲ್ಲಿ ಭಿನ್ನತೆ ಇಟ್ಟುಕೊಳ್ಳಬಾರದು. ಇದಕ್ಕೆ ಯಾವಾಗಲೂ ಒಂದು ಹಠವನ್ನು ಹಿಡಿಯಬಾರದು. ಏಕೆಂದರೆ ಪರಿಸ್ಥಿತಿ ಹಾಗಿದೆ. ಹಟವನ್ನು ಬಿಟ್ಟು ತಾವೀಗ ಕಾಲ ಪರಿಸ್ಥಿತಿಯನ್ನು ಪರಿಗಣನೆಗೆ ತೆಗೆದುಕೊಂಡು ಈ ಸಂದರ್ಭದಲ್ಲಿ ಒಂದು ಸರಿಯಾದ ನಿರ್ಧಾರಕ್ಕೆ ಬರುವುದಕ್ಕೆ ಸಾಧ್ಯವಿದೆಯೆಂದು ನನ್ನ ಅಭಿಪ್ರಾಯ.

ಎರಡನೆಯ ವಿಷಯ ಈ ಬಿಲ್ಲಿನಲ್ಲಿರುವುದು ಜೋನಲ್ ಕೌನ್ಸಿಲ್ಲಿಗೆ ಸಂಬಂಧಪಟ್ಟಿದ್ದು. ಆ ವಿಚಾರದಲ್ಲಿ ಪ್ರತ್ಯೇಕವಾಗಿ ತಿದ್ದುಪಡಿಗಳಮೇಲೆ ಚರ್ಚೆಯಾಗುತ್ತದೆ. ಒಂದೆರಡು ಅಭಿಪ್ರಾಯಗಳನ್ನು ಮಾತ್ರ ಆ ವಿಷಯದಲ್ಲಿ ನಾನು ಸೂಚಿಸುತ್ತೇನೆ. ಈಗ ಈ ಜೋನಲ್ ಕೌನ್ಸಿಲ್ ಎಂಬುದು ಯಾವರೀತಿ ರಚನೆಯಾಗಿದೆ ಮತ್ತು ಇದಕ್ಕೆ ಯಾವ ಕೆಲಸವನ್ನು ವಹಿಸಿದ್ದಾರೆ ಅದನ್ನು ಇನ್ನೂ ಉತ್ತಮಪಡಿಸಬಹುದೆಂಬುದೇ ನನ್ನ ಅಭಿಪ್ರಾಯ. ಸಂಸ್ಥಾನಗಳ ಪ್ರತಿನಿಧಿಗಳೆಲ್ಲಾ ಸೇರಿ ಇತರ ಸಂಸ್ಥಾನಗಳಿಗೂ ಈ ಸಂಸ್ಥಾನಕ್ಕೂ ಸಂಬಂಧಪಟ್ಟ ವಿಷಯವನ್ನು ಆಲೋಚಿಸಬಹುದು. ಈ ಸಮಿತಿಗೆ, ಜೋನಲ್ ಕೌನ್ಸಿಲ್ಲಿಗೆ, ಕೇಂದ್ರ ಸರ್ಕಾರದ ಆಡಳಿತಕ್ಕೊಳಪಟ್ಟಿರತಕ್ಕಂಥ ವಿಷಯಗಳನ್ನೂ ಕೂಡ ಸಮಾಲೋಚನೆ ಮಾಡುವುದಕ್ಕೂ ಮತ್ತು ಸಲಹೆ ಕೊಡುವುದಕ್ಕೂ ಅವಕಾಶವಿರಬೇಕೆಂಬುದು ನನ್ನ ವಾದ. ಆ ವಾದವನ್ನು ಒಂದು ದೃಷ್ಟಿಯಿಂದ ಈ ಬಿಲ್ಲಿನಲ್ಲಿ ಇಂಡಿಯಾ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಸಂಸ್ಥಾನಗಳ ಮಂತ್ರಿಗಳು ಈ ಕೌನ್ಸಿಲ್ಲಿಗೆ ಅವರ ಸಂಸ್ಥಾನಗಳ ವಿಷಯಗಳನ್ನು ತಿಳಿಸುವುದಕ್ಕೆ ಹೋಗುತ್ತಾರೆ. ಈ ಸಮಿತಿಗೆ ಕೇಂದ್ರ ಸರ್ಕಾರದ ಮಂತ್ರಿಗಳು ಛೇರ್ಮನ್ ಆದಾಗ 'common pool' ನಂತೆ ಇರಬೇಕು, ಅವರು ಎಲ್ಲ ವಿಷಯಗಳನ್ನೂ ತಿಳಿದುಕೊಳ್ಳಬೇಕು. ಛೇರ್ಮನ್ ವ್ಯಾಜ್ಯವಾಡುವುದನ್ನು ಬಿಡಿಸುವುದಕ್ಕೆ ಬರುತ್ತಾರೆಂದು ಹೇಳಿದರೆ ಅದು ಸಂಸ್ಥಾನಗಳಿಗೆ ಮರ್ಯಾದೆ ತರತಕ್ಕ ವಿಷಯವಲ್ಲ. ನಾನು ಈ ದಿವಸ ಮರ್ಯಾದೆಯ ದೃಷ್ಟಿಯಿಂದ ಇದನ್ನು ಪರಿಶೀಲಿಸುತ್ತಿಲ್ಲ. ಜನಜೀವನಕ್ಕೆ ಸಂಬಂಧಪಟ್ಟ ದೊಡ್ಡ ಕಾರ್ಯವಿದು. ಇದು ಸಂಸ್ಥಾನಕ್ಕೇ ಸೇರಿರಲಿ ಅಥವಾ ಕೇಂದ್ರಕ್ಕೇ ಸೇರಿರಲಿ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ನಡೆಯಬೇಕು. ಯಾರ ಹಕ್ಕು ಹೆಚ್ಚು ಎಂಬ ಪ್ರಶ್ನೆ ಇದಲ್ಲ. ಆಯಾ ಇಲಾಖೆಗಳು ಜನರಿಗೆ ಸರಿಯಾದ ಸೇವೆಯನ್ನು ಸಲ್ಲಿಸುತ್ತಿವೆಯೆ ಎಂಬುದು ಮುಖ್ಯವಾದುದು. ಜನಜೀವನದ ನಿತ್ಯಸೌಕರ್ಯಕ್ಕೆ ಸಂಬಂಧಪಟ್ಟಿರುವ ಅನೇಕ ಟೀಕೆಗಳು ಇಂಡಿಯಾ ಸರ್ಕಾರದ ಆಡಳಿತಕ್ಕೆ ಸಂಬಂಧಪಟ್ಟಿವೆ. ಈಗ ರೈಲ್ವೆಯನ್ನು ತೆಗೆದುಕೊಳ್ಳಿ. ರೈಲ್ವೆ ಈಗ ಕೇಂದ್ರದ ಆಡಳಿತಕ್ಕೆ ಸೇರಿದೆ. ಇಲ್ಲಿರುವ ಸರ್ಕಾರಕ್ಕೆ ಅದರ ಮೇಲೆ ಯಾವ ಅಧಿಕಾರವೂ ಇಲ್ಲ. ಇದು ತಮಗೆ ಗೊತ್ತಿದೆ. ಬೆಂಗಳೂರು ರಸ್ತೆ ಚೆನ್ನಾಗಿದೆ, ಸಿಮೆಂಟ್ ಕಾಂಕ್ರೀಟ್ ಬೇರೆ ಹಾಕಿ ರಸ್ತೆ ಮಾಡುತ್ತಿದ್ದಾರೆ. ಒಂದು ದಿವಸ ನಾನು ರೈಲ್ವೆ ಸ್ಟೇಷನ್ನಿಗೆ ಹೋದೆ. ಅಲ್ಲಿಗೆ ಪೂರ್ವ ಭಾಗದಿಂದ ಹೋಗಿ ಅಲ್ಲಿರುವ ಅಂಡರ್ ಬ್ರಿಡ್ಜಿನಿಂದ ಸ್ವಲ್ಪ ಮುಂದೆ ಹೋದರೆ ರಸ್ತೆಯಲ್ಲಿ ನಾಲ್ಕೈದು ರಿಪೇರಿ ಮಾಡದಿರುವ ಗುಂಡಿಗಳು ಕಂಡು ಬಂದುವು. 'ಏಕೆ ಹೀಗಿದೆ? ಅಂಡರ್ ಬ್ರಿಡ್ಜ್‌ವರೆಗೆ ರಸ್ತೆ ಚೆನ್ನಾಗಿದೆ, ಅಲ್ಲಿಂದ ಮುಂದೆ ಚೆನ್ನಾಗಿಲ್ಲ, ನಾಲ್ಕೈದು ಗುಂಡಿಗಳಿವೆ, ಕಾರು ಅಲ್ಲಿ ಉರುಳುವ ಪರಿಸ್ಥಿತಿಯಾಗಿದೆ, ಮುನಿಸಿಪಾಲಿಟಿ ಸರಿಯಾಗಿ ನೋಡಿಕೊಂಡು ಕೆಲಸ ಮಾಡುತ್ತಿಲ್ಲ, ಮನಸ್ಸಿಗೆ ಬಂದಹಾಗೆ ಮಾಡುತ್ತಿದೆ' ಎಂದು ಕಮಿಷನರನ್ನು ಕರೆಸಿ ಕೇಳಿದೆ. ರಸ್ತೆಯನ್ನು ಸರಿಮಾಡಬೇಕೆಂದು ಹೇಳಿದೆ. ಅದಕ್ಕೆ ಅವರು 'ಈ ವಿಚಾರದಲ್ಲಿ ಒಂದು ವರ್ಷದಿಂದ ವ್ಯವಹಾರ ನಡೆಯುತ್ತಿದೆ. ಅಂಡರ್ ಬ್ರಿಡ್ಜಿನಿಂದೀಚೆಗಿರುವುದು ಮುನಿಸಿಪಾಲಿಟಿಗೆ ಸೇರಿದೆ, ಅಲ್ಲಿಂದಾಚೆಗೆ ರೈಲ್ವೆ ಜ್ಯೂರಿಸ್ ಡಿಕ್ಷನ್ನಿಗೆ ಸೇರಿದೆ, ಅವರು ರಿಪೇರಿ ಮಾಡಬೇಕು, ಎಷ್ಟೋಸಾರಿ ಬರೆದರೂ ರಿಪೇರಿ ಮಾಡಿಸಿಲ್ಲ ಎಂದು ಹೇಳಿದರು. 'ನಿಮ್ಮ ಇಲಾಖೆಯು ಬಡ್ಜೆಟ್ಟಿನಲ್ಲಿ ನಗರದ ಅಭಿವೃದ್ಧಿಗೆ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ, ಅದರಲ್ಲೇ ಈ ಗುಂಡಿಗಳನ್ನು ಮುಚ್ಚಿಸಿ ರಸ್ತೆ ರಿಪೇರಿ ಮಾಡಿ ಆಮೇಲೆ ಇಷ್ಟು ಖರ್ಚಾಗಿದೆ, ಕೊಡಿ ಎಂದು ಇಂಡಿಯಾ ಸರ್ಕಾರಕ್ಕೆ ಬರೆಯಿರಿ' ಎಂದು ಹೇಳಿದೆ. This shows that the straw shows which way the wind blows. ಇದಕ್ಕಿಂತಲೂ ಮನಸ್ಸಿಗೆ ಹಿಡಿಯತಕ್ಕ ಉದಾಹರಣೆ ಕೊಡುವುದಕ್ಕೆ ಸಾಧ್ಯವಿಲ್ಲ. ಇತರ ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು. ಕೇಂದ್ರ ಸರ್ಕಾರದಲ್ಲಿರುವ ಇಲಾಖೆಗಳೇನಿವೆಯೋ ಅವುಗಳಲ್ಲಾಗತಕ್ಕಷ್ಟು ದುಂದು ವೆಚ್ಚ ಇಂಡಿಯಾ ದೇಶದ ಯಾವ ಸ್ಟೇಟ್ ಸರ್ಕಾರಗಳಲ್ಲೂ ಆಗುತ್ತಿಲ್ಲ. ಇಲ್ಲಿ ಹತ್ತು ರೂಪಾಯಿ ಹೆಚ್ಚಾಗಿ ಖರ್ಚು ಮಾಡಿದರೆ ಕೇಳುವ ಅಧಿಕಾರವಿದೆ, ಅವಕಾಶವಿದೆ. ಇಂಡಿಯಾ ದೇಶದಲ್ಲಿರುವ ಪಾರ್ಲಿಮೆಂಟ್ 365 ದಿವಸವೂ ಸಭೆ ಸೇರಿದರೂ ಕೂಡ ಸಂಸ್ಥಾನದ ಶಾಸನ ಸಭೆಗಳಿಗೆ ಎಷ್ಟು ಅವಕಾಶವಿದೆಯೋ ಅಷ್ಟನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಪಾರ್ಲಿಮೆಂಟ್ 36 ಕೋಟಿ ಪ್ರಜೆಗಳ ಯೋಗಕ್ಷೇಮವನ್ನು ನೋಡಬೇಕು. ಆದುದರಿಂದಲೇ ವಿಕೇಂದ್ರೀಕರಣವಾಗಬೇಕೆಂದು ಮಹಾತ್ಮ ಗಾಂಧಿಯವರು ಹೇಳಿದರು. ಇನ್ನೊಂದು ವಿಷಯ ಹೇಳುತ್ತೇನೆ. ಎಲ್ಲರಿಗೂ ಸ್ವಾನುಭವವಿದೆ. ಮೈಸೂರು ಸರ್ಕಾರದ ಆಡಳಿತದಲ್ಲಿ ಟೆಲಿಫೋನ್ ಇದ್ದಾಗ ಬಹಳ ದಕ್ಷತೆಯಿಂದ ಕೆಲಸ ನಡೆಯುತ್ತಿತ್ತು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ, ಖರ್ಚು ಸಹ ಕಡಿಮೆಯಾಗಿತ್ತು. ಈ ಇಲಾಖೆಯು ಇಂಡಿಯಾ ಸಕಾರದ ಕೈಗೆ ಹೋದಮೇಲೆ ಖರ್ಚು ಬೇರೆ ಜಾಸ್ತಿಯಾಯಿತು, ಅನುಕೂಲ ಕಡಿಮೆಯಾಯಿತು. ಅನೇಕ ಸಾರಿ ಪ್ರೈಂ ಮಿನಿಸ್ಟರ್ ಸಂಗಡ ಮಾತನಾಡುವಾಗ ಟ್ರಂಕ್‌ಕಾಲ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಅರ್ಧ ಘಂಟೆ ಪರದಾಡಬೇಕಾಗಿದೆ. ಈ ಅನುಭವ ಅನೇಕ ವೇಳೆ ನನಗೇ ಉಂಟಾಗಿದೆ. ಮೈಸೂರು ಸರ್ಕಾರದಲ್ಲಿ ಟೆಲಿಫೋನ್ ಇಲಾಖೆಯಿದ್ದಾಗ ಎಕ್ಸ್‌ಛೇಂಜಿಗೆ ರಿಂಗ್ ಮಾಡಿದರೆ ಒಂದು ಸೆಕೆಂಡಿನಲ್ಲಿ ಕನೆಕ್ಷನ್ ಸಿಕ್ಕಿ ಉತ್ತರ ಕೊಡುತ್ತಿದ್ದರು. Now we have to wait. ಹತ್ತು ಹದಿನೈದು ಸಲ ರಿಂಗ್ ಆದಮೇಲೆ ಎಕ್ಸ್‌ಛೇಂಜ್ ಸಿಕ್ಕುತ್ತದೆ. ಇದಿಷ್ಟು ಈ ಟೆಲಿಫೋನ್ ಎಕ್ಸ್‌ಛೇಂಜ್ ವಿಷಯವಾಯಿತು. ಇನ್ನೊಂದು ವಿಚಾರ ಅದೂ ಹೀಗೆಯೇ ಇದೆ. ವಿಧಾನಸೌಧದ ಮುಂದೆ ಈಗ ವಿಧಾನ ವೀಧಿ ಎಂಬ ಒಂದು ರಸ್ತೆ ಇರತಕ್ಕದ್ದು ತಮಗೆಲ್ಲರಿಗೂ ಗೊತ್ತೇ ಇದೆ. ಈ ರಸ್ತೆಯನ್ನು ಮಾಡಿಸ

ತಕ್ಕ ಸಂದರ್ಭದಲ್ಲಿ ಈ ರಸ್ತೆಯ ಪಕ್ಕದಲ್ಲೇ ಇರತಕ್ಕಂಥ ಜನರಲ್ ಪೋಸ್ಟಾಫೀಸಿಗೆ ಸೇರಿದ್ದ ಒಂದು ಗುಂಟೆ ಜಮೀನು ನಮಗೆ ಬೇಕಾಗಿತ್ತು. ನಾವು ಇಂಡಿಯಾ ಸರ್ಕಾರಕ್ಕೆ ಸಂಬಂಧಪಟ್ಟ ಅಕೌಂಟೆಂಟ್ ಜನರಲ್‌ಅವರ ಕಛೇರಿಯನ್ನು ಕಟ್ಟಿಸಲು ಅವರಿಗೆ ಐದಾರು ಎಕರೆಗಳಷ್ಟು ಜಮೀನನ್ನು ಮುಫತ್ತಾಗಿ ಕೊಟ್ಟಿದ್ದೇವೆ. ಆದರೆ ಒಂದು ಗುಂಟೆ ಜಮೀನಿಗೋಸ್ಕರವಾಗಿ ಕೇಂದ್ರ ಸರ್ಕಾರದವರೊಡನೆ ಈಗ್ಗೆ ಎರಡು ವರ್ಷಗಳಿಂದ ಪತ್ರವ್ಯವಹಾರ ನಡೆಸಲಾಗುತ್ತಿದ್ದರೂ ಆ ವಿಚಾರವಿನ್ನೂ ತೀರ್ಮಾನವಾಗಿಲ್ಲ. ಇದೇ ವಿಚಾರದಲ್ಲಿ ನಾನು ಒಂದಾವರ್ತಿ ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಜಗಜೀವನ್‌ರಾಂಅವರನ್ನು ಸಹ ಆ ಸ್ಥಳಕ್ಕೆ ಕರೆದುಕೊಂಡು ಹೋಗಿ ಅವರಿಗೆ ತೋರಿಸಿ ಈ ವಿಚಾರ ಹೇಳಿದ್ದೆ. ಹೀಗೆ ನಾನೇ ಅವರನ್ನು ಎರಡು ಸಲ ಸ್ವತಃ ಕರೆದುಕೊಂಡು ಹೋಗಿ ತೋರಿಸಿ ವಿಚಾರ ತಿಳಿಸಲಾಗಿತ್ತು. ಆಗ ಅವರಿಗೆ ಇನ್ನೂ ಈ ಗೌರ್ನವೆಂಟ್ ಆರ್ಡರ್ ಬರುವುದಕ್ಕೆ ಎಷ್ಟು ದಿವಸಗಳಾಗುತ್ತದೆಯೋ ಏನೋ ಎಂದು ತಿಳಿಸಿದ್ದಕ್ಕೆ, ಅವರು ಹೋಗಲಿ ಈ ಕಾಂಪೌಂಡನ್ನು ಒಡೆಸಿ ರಸ್ತೆ ಮಾಡಿಸಿಕೊಳ್ಳಿ ಎಂದು ತಿಳಿಸಿದ ನಂತರ ನಾವು ಆ ಜಮೀನನ್ನು ತೆಗೆದುಕೊಳ್ಳಬೇಕಾಯಿತು. ಮೈಸೂರಿನಲ್ಲಿದ್ದಂಥ 'ಆಕಾಶವಾಣಿ' ಕಛೇರಿ ಬೆಂಗಳೂರಿಗೆ ಬರುತ್ತದೆಂಬ ವಿಚಾರ ಮುಂಚಿತವಾಗಿಯೇ ನಮ್ಮ ಸರ್ಕಾರಕ್ಕೆ ಗೊತ್ತಾಗಿತ್ತು ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ. ಹಾಗೆ ಮೈಸೂರಿನಲ್ಲಿದ್ದ ಆಕಾಶವಾಣಿ ಬೆಂಗಳೂರಿಗೆ ಬಂದನಂತರ ಮೈಸೂರಿನಲ್ಲಿರತಕ್ಕ ಆ ಕಟ್ಟಡ ಖಾಲಿ ಆಗುತ್ತದೆ, ಆ ಕಟ್ಟಡ ನಮ್ಮ ಕಾಲೇಜುಗಳಿಗೆ ಬೇಕಾಗಿರುತ್ತದೆ, ಅದನ್ನು ನಮ್ಮ ಸರ್ಕಾರಕ್ಕೆ ಬಿಟ್ಟುಕೊಡಬೇಕು ಎಂಬುದಾಗಿ ಆಕಾಶವಾಣಿ ಮಂತ್ರಿಗಳಾದ ಶ್ರೀ ಕೇಸ್ಕರ್ ಎಂಬವವರಿಗೆ ತಿಳಿಸಿದ್ದೆನು. ಈ ಆಕಾಶವಾಣಿ ಹೀಗೆ ಬೆಂಗಳೂರಿಗೆ ವರ್ಗಾಯಿಸಲ್ಪಡುವುದೆಂಬ ಅಂಶ ನಮಗೆ ಇನ್ನೂ 7-8 ತಿಂಗಳ ಹಿಂದೆಯೇ ಗೊತ್ತಾಗಿತ್ತು. ಆದುದರಿಂದ ನಾವು ಈ ಆಕಾಶವಾಣಿ ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸಲ್ಪಡುವುದು ಇನ್ನೂ ಇದ್ದ ಹಾಗೆಯೇ ಈ ಕಟ್ಟಡಕ್ಕಾಗಿ ಮುಂಚಿತವಾಗಿಯೇ ಪತ್ರ ವ್ಯವಹಾರ ನಡೆಸಲು ಪ್ರಾರಂಭಿಸಿದೆವು. ಆದರೆ ಆ ಕಟ್ಟಡವನ್ನು ಅವರಿನ್ನೂ ನಮ್ಮ ವಶಕ್ಕೆ ಬಿಟ್ಟುಕೊಟ್ಟಿಲ್ಲ; ಅವರೇ ಆಳುಗಳನ್ನಿಟ್ಟು ಆ ಕಟ್ಟಡದ ನಿಗಾವಣೆಯನ್ನು ನೋಡಿಕೊಳ್ಳುತ್ತಿದ್ದಾರೆ. ಹೀಗೆ ಈ ಅಧಿಕಾರ ಒಂದೇ ಕಡೆ ವಿಪರೀತ ಕೇಂದ್ರೀಕೃತವಾಗಿರುವುದರಿಂದ ಸ್ಟೇಟ್ ಸರ್ಕಾರಗಳಿಗೆ ಅನೇಕ ಕಿರುಕುಳಗಳಿರುತ್ತವೆ. ಇದನ್ನು ತಪ್ಪಿಸಬೇಕೆಂದೇ ಅವರು ಈಗ ಸೂಕ್ತ ಕಾರ್ಯಕ್ರಮಗಳನ್ನು ಈ ಮೂಲಕ ಕೈಗೊಳ್ಳುತ್ತಿದ್ದಾರೆ. ಆದರೆ ಎಲ್ಲಕ್ಕಿಂತಲೂ ಈಗ ಇನ್ನೊಂದು ವಿಚಾರವಿದೆ—ಅದನ್ನು ನಾನು ತಮಗೆ ತಿಳಿಸಬೇಕೆಂದಿದ್ದೇನೆ—ಮೈಸೂರು ಸಿಟಿಯಲ್ಲಿ 300-400 ಮನೆಗಳು ಹಾಗೆಯೇ ಖಾಲಿ ಬಿದ್ದಿರುತ್ತವೆ. ಇವೂ ಅವರ ಆಡಳಿತಕ್ಕೇ ಸೇರಿವೆ. ಹೀಗೆಯೇ ಇನ್ನೊಂದು ಕಡೆ ಸ್ಟಾಫ್ ಕ್ವಾರ್ಟರ್ಸ್‌ಗಳೆಂದು ಇವೆ. ಅಲ್ಲೂ ಸಹ ಈಗ 300-400 ಮನೆಗಳು ಖಾಲಿ ಬಿದ್ದಿವೆ. ಹಾಗೆ ಒಂದು ಕಡೆ ವಿಶೇಷವಾಗಿ ಕಟ್ಟಡಗಳು ಖಾಲಿ ಬಿದ್ದಿರುವಾಗ ಅವುಗಳನ್ನು ಉಪಯೋಗಕ್ಕೆ ತಾರದೆ ಅವರು ಮತ್ತೊಂದು ಕಡೆ ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡಿ ಲೋ-ಇನ್‌ಕಂ ಗ್ರೂಪ್ ಹೌಸಿಂಗ್ ಸ್ಕೀಂ ಇತ್ಯಾದಿಗಳನ್ನು ನಡೆಸುತ್ತಿದ್ದಾರೆ. ಈ ವಿಚಾರದಲ್ಲಿ ನಾನು ಹಿಂದೆ ಕೇಂದ್ರದ ಡಿಫೆನ್ಸ್ ಮಂತ್ರಿಗಳಾದ ಮಾನ್ಯ ಶ್ರೀ ತ್ಯಾಗಿ ಅವರಿಗೆ ಆ ಕಟ್ಟಡಗಳನ್ನು ಜಾಗ್ರತೆಯಾಗಿ ಬಿಡಿಸಿಕೊಡಿ ಎಂದು ಕೇಳಿದ್ದೆ. ಅವರಿಗಾದರೂ ಹಾಗೆ ಅವುಗಳನ್ನು ಬಿಡಿಸಿ ಕೊಡಬಾರದು ಎನ್ನುವ ಉದ್ದೇಶವೇನೂ ಇಲ್ಲ. ಈ ಅಧಿಕಾರಗಳೆಲ್ಲಾ ಒಂದೇ ಕಡೆ ಬಹಳವಾಗಿ ಕೇಂದ್ರೀಕೃತವಾಗಿರುವುದರಿಂದ ಈ ನಾನಾ ಕೆಲಸಗಳು ಹೀಗೆಲ್ಲಾ ನಿಧಾನವಾಗಲು ಕಾರಣವಾಗಿದೆ. ನಾನು ತಮಗೆ ಒಂದು ಮಾತನ್ನು ಹೇಳುವುದಾದರೆ, ಈ ಸ್ಟೇಟ್ ಸರ್ಕಾರಗಳ ವಿಚಾರ ಕೇಂದ್ರದ ಮುಂದೆ "ಸಾಹುಕಾರನ ಮುಂದೆ ಸಾಲಗಾರ ಇದ್ದಹಾಗೆ" ಆಗಿದೆ. ಈ ಹಿಂದೆ ನಮಗೆ ವಯಸ್ಕರ ಮತದಾನ ಪದ್ಧತಿ ಇಲ್ಲದಿದ್ದಂಥ ಕಾಲದಲ್ಲಿ ನಾವು ಓಟುಗಳನ್ನು ಪಡೆಯಬೇಕಾಗಿದ್ದರೆ ಸಾಹುಕಾರರ ಮುಂದೆ ಹೋಗಿ ತಾವು ನಮಗೆ ಜನರಿಂದ ಓಟುಗಳನ್ನು ಕೊಡಿಸಿ ಎಂದು ಕೇಳಬೇಕಾದ ಸ್ಥಿತಿಯಿತ್ತು. ಈ ದಿವಸ ಹಾಗೆಯೇಇಂಡಿಯಾ ಸರ್ಕಾರ ಆ ಸಾಹುಕಾರರಾಗಿಯೂ, ನಾವು (ಸ್ಟೇಟ್ ಸರ್ಕಾರಗಳು) ಸಾಲಗಾರರಾಗಿಯೂ ಇರುವ ಸ್ಥಿತಿಗೆ ಬಂದುಬಿಟ್ಟಿದ್ದೇವೆ. ಈ ಅಂಶದಲ್ಲಿ ಕೇವಲ ನಮ್ಮ ಶಾಸನ ಸಭೆ ಮಾತ್ರ ತನ್ನ ಅಭಿಪ್ರಾಯವನ್ನು ತಿಳಿಸಿಬಿಟ್ಟರೆ ಸಾಲದು. ಆದರೆ ಈಗ ಇನ್ನಾವ ಶಾಸನ ಸಭೆಗಳೂ ಇದನ್ನು ತಿಳಿಸಿರುವುದಿಲ್ಲ ಎಂದು ನಾವು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವುದೂ ಕೂಡ ಸರಿಯಲ್ಲ. ಕೇಂದ್ರ ಸರ್ಕಾರ ನಮ್ಮೊಬ್ಬರಿಗಾಗಿ ಇದನ್ನು ಏನೂ ಮಾಡಬೇಕಾದ್ದಿಲ್ಲ. ಈ ಹಿಂದೆ ಮಹಾತ್ಮ ಗಾಂಧಿಯವರಿದ್ದ ಕಾಲದಲ್ಲೇ ಈ ವಿಪರೀತ ಅಧಿಕಾರ ಕೇಂದ್ರೀಕೃತವಾಗತಕ್ಕದ್ದನ್ನು ತಪ್ಪಿಸುವ ಉದ್ದೇಶದಿಂದ ಈ ರೀತಿಯಾಗಿ ಜೋನಲ್ ಕೌನ್ಸಿಲ್‌ಗಳನ್ನು ಏರ್ಪಡಿಸಿ, ಇವುಗಳ ಆಡಳಿತಕ್ಕೆ ರೈಲ್ವೆ, ಪೋಸ್ಟಲ್ ಸರ್ವಿಸ್ ಇತ್ಯಾದಿಗಳನ್ನೆಲ್ಲಾ ಕೊಡಬಹುದೆಂದು ಹೇಳಿದ್ದರು. ಈ ದಿವಸ ಇವುಗಳಮೇಲೆ ಸೆಂಟರಿನವರ ಆಡಳಿತವೇತಕ್ಕೆ ಇರಬೇಕು? ಆದರೆ ಪ್ರತಿಯೊಂದು ಪ್ರಾಂತೀಯ ಸರ್ಕಾರಗಳೂ ಒಂದು ಸುವ್ಯವಸ್ಥಿತವಾದ ರೀತಿಯಾದ ಆಡಳಿತ ನಡೆಸಿಕೊಂಡು ಬರುತ್ತಿವೆ. ಹೀಗಿರುವಾಗ ಈ ಕೇಂದ್ರಾಡಳಿತ ಕಟ್ಟಡಗಳ ವಿಚಾರದಲ್ಲಿ ಡೆಲ್ಲಿಯಲ್ಲಿರತಕ್ಕಂಥ ಸೆಂಟ್ರಲ್ P.W.D. ಇಲಾಖೆಯೇ ನೇರವಾಗಿ ಟೆಂಡರುಗಳನ್ನು ಕರೆದು ಈ ಕಟ್ಟಡಗಳ ಕೆಲಸವನ್ನೆಲ್ಲಾ ನಡೆಸಬೇಕೆಂದು ಹೇಳಿದರೆ ಈ ಕೆಲಸಗಳ ಬಗ್ಗೆ ಎಷ್ಟು ನಿಧಾನವಾಗುತ್ತದೆ! ಇಂಡಿಯಾ ಸರ್ಕಾರದ ಅಕೌಂಟೆಂಟ್ ಜನೆರಲ್‌ಅವರಾದ ಶ್ರೀ ನರಹರಿರಾಯರವರ ಮೂಲಕ ಈ ವಿಚಾರವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಪ್ರಾಂತೀಯ ಸರ್ಕಾರಗಳು ಈ ಕೆಲಸಗಳನ್ನೆಲ್ಲಾ ಬಹಳ ದಕ್ಷತೆಯಿಂದ ನಡೆಸಿಕೊಂಡು ಬರುತ್ತಿವೆ, ಆದುದರಿಂದ ಈಗ ಈ ಅಧಿಕಾರಗಳನ್ನೆಲ್ಲಾ ಪ್ರಾಂತೀಯ ಸರ್ಕಾರಗಳಿಗೇ ಬಿಟ್ಟುಕೊಡತಕ್ಕ ವಿಚಾರವನ್ನು ಪರಿಶೀಲನೆ ಮಾಡಬೇಕೆಂದು ಹೇಳಲಾಯಿತು. ಈ ದಿವಸ ನಮ್ಮ ಮೈಸೂರು ದೇಶದಲ್ಲಿ ಒಂದು ಅಕೌಂಟೆಂಟ್ ಜನರಲ್ ಅವರ ಆಫೀಸನ್ನು ಕಟ್ಟಿಸಿದ್ದಾರೆ. He took special exemption from the Central P.W.D. and entrusted it to the Mysore Government and now everybody knows that the Mysore Government built that building at less cost and very expeditiously too. ಈಗ ಈ ರೀತಿ ಸೆಂಟ್ರಲ್ P.W.D. ಇಲಾಖೆ ಡೆಲ್ಲಿಯಲ್ಲಿ ಕುಳಿತುಕೊಂಡು—$1\frac{1}{2}$ ಸಾವಿರ, 2 ಸಾವಿರ ಮೈಲಿಗಳ ದೂರದಲ್ಲಿದ್ದುಕೊಂಡು ಕೆಲಸ ಮಾಡುತ್ತಿರುವಾಗ ನಮಗೆ ಈ ಕಟ್ಟಡಗಳನ್ನು ಬಿಡಿಸಿ

(SRI K. HANUMANTHAIYA.)

ಕೊಡುವಂತೆ ಮಾಡಲು ನಾವು ಏನೇ ಪ್ರಯತ್ನ ಪಟ್ಟಾಗ್ಯೂ ಅವರು ಈ ಕೆಲಸಗಳನ್ನು ಅಷ್ಟು ತಕ್ಷಣ ಮಾಡುವುದಕ್ಕಾಗುವುದಿಲ್ಲ. ಅಲ್ಲದೆ ಈ ಕಟ್ಟಡಗಳ ಕೆಲಸವನ್ನು ಅಷ್ಟು ದಕ್ಷತೆಯಿಂದ ಮಾಡಿಸುವುದಕ್ಕೂ ಸಾಧ್ಯವಾಗುವುದಿಲ್ಲ. ನಾನೇನಾದರೂ ಹೀಗೆ ನನ್ನ ಅಭಿಪ್ರಾಯಗಳನ್ನು ತಿಳಿಸಿದರೆ ಶ್ರೀ ವೆಂಕಟಪ್ಪನವರು ಕೋಪ ಮಾಡಿಕೊಳ್ಳುತ್ತಾರೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಆದರೆ ತಾವು ಈ ಕೋಪವನ್ನು ಅವರಮೇಲೆ ಮಾಡದೆ ನಮ್ಮಮೇಲೆ ಮಾಡುತ್ತೀರಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಹನುಮಂತಯ್ಯ.—ಈ ಕೆಲಸಗಳು ಆಗ ಬೇಕಾಗಿದ್ದರೆ ಎಗ್ಸಿಕ್ಯುಟೀವ್ ಇಂಜಿನಿಯರ್ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಛೀಫ್ ಇಂಜಿನಿಯರ್ ಮೂಲಕ ಈಗ ಪತ್ರವ್ಯವಹಾರಗಳನ್ನು ಮಾಡುತ್ತಿದ್ದಾರೆ. ಆದರೆ ಈಗ ಆ ಅಧಿಕಾರವನ್ನು ಈ ಸ್ಟೇಟ್ ಸರ್ಕಾರಗಳಿಗೆ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಈ ಮಸೂದೆಯಲ್ಲಿ ಸೂಚಿಸಿದ್ದಾರೆ. Procedural delay is the real trouble. ಆದುದರಿಂದ ಇನ್ನುಮೇಲೆ ಈ ಜೋನಲ್ ಕೌನ್ಸಿಲ್ ಗಳು ಜಾರಿಗೆ ಬರುವುದರಿಂದ ಈಗ ಇರತಕ್ಕಂಥ ಸೆಂಟ್ರಲ್ P.W.D. ಇಲಾಖೆಯನ್ನು ಅಬಾಲಿಷ್ ಮಾಡಬೇಕಾಗುತ್ತದೆ.

ಹೀಗೆ ಈ ದಿವಸ ಸೆಂಟರಿಗೆ ಸೇರಿರತಕ್ಕಂಥ ಯಾವ ಯಾವ ಕಾಮಗಾರಿಗಳ ವಿಭಾಗಗಳು ಯಾವ ಯಾವ ಸ್ಟೇಟಿಗೆ ಸೇರಿರುತ್ತವೆಯೋ ಅವುಗಳನ್ನು ಆಯಾ ಸ್ಟೇಟ್ ಗೌರ್ನಮೆಂಟೇ ವಹಿಸಿಕೊಳ್ಳಬೇಕು ಎಂದು ಹೇಳಿರುವ ಹಾಗೆಯೇ ಈ ಬ್ರಾಡ್‌ಕ್ಯಾಸ್ಟಿಂಗ್ ಇಲಾಖೆಯನ್ನೂ ಸಹ ಒಪ್ಪಿಸಬೇಕು. ಏಕೆಂದರೆ ಯಾವ ಇಲಾಖೆ ಅಲ್ಲಿಯ ಜನಜೀವನದ ಒಂದು ನಿಕಟ ಸಂಬಂಧವನ್ನು ಹೊಂದಿರುತ್ತದೆಯೋ ಇನ್ನೂ ಯಾವ ಯಾವ ಇಲಾಖೆಗಳು ಆಯಾ ಪ್ರಾಂತ್ಯಗಳ ಜನ ಜೀವನದ ಒಂದು ನಿಕಟ ಸಂಪರ್ಕವನ್ನು ಇಟ್ಟು ಕೊಂಡಿರುತ್ತವೆಯೋ ಅಂಥ ಎಲ್ಲ ಇಲಾಖೆಗಳ ಮೇಲ್ವಿಚಾರಣೆಯನ್ನೂ ಈ ಜೋನಲ್ ಕೌನ್ಸಿಲ್‌ಗಳಿಗೆ ವಹಿಸಿಕೊಟ್ಟರೆ, ಕೇಂದ್ರ ಸರ್ಕಾರ ಒಂದು ಮಹದುಪಕಾರ ಮಾಡಿದಂತಾಗುತ್ತದೆ. ಈ ಜೋನಲ್ ಕೌನ್ಸಿಲ್‌ಗಳು ಸರ್ಕಾರಗಳ ವಿಚಾರಕ್ಕೆ ಸಂಬಂಧ ಪಟ್ಟ ಎಲ್ಲ ವಿಷಯಗಳನ್ನು ಚರ್ಚೆ ಮಾಡುವುದಕ್ಕೂ ಮತ್ತು ಆ ಬಗ್ಗೆ ಕೇಂದ್ರ ಮತ್ತು ಪ್ರಾದೇಶಿಕ ಸರ್ಕಾರಗಳಿಗೆ ಸಲಹೆ ನೀಡುವುದಕ್ಕೂ ಅವಕಾಶವಿದೆ. ಇಂಡಿಯಾ ಸರ್ಕಾರದ ಆಡಳಿತಕ್ಕೆ ಒಳಪಟ್ಟಿರತಕ್ಕಂಥ ವಿಷಯಗಳು ಎಷ್ಟಿರುತ್ತವೆಯೋ ಅವುಗಳಲ್ಲಿ ಈ ಪ್ರಾಂತೀಯ ಸರ್ಕಾರಗಳ ಜನಜೀವನಕ್ಕೆ ಒಂದು ನಿಕಟವಾದ ಸಂಬಂಧವನ್ನು ಇಟ್ಟುಕೊಂಡಿರುವಂಥ ಎಲ್ಲ ವಿಷಯಗಳನ್ನೂ ಚರ್ಚೆ ಮಾಡಲು ಈ ಜೋನಲ್ ಕೌನ್ಸಿಲ್‌ಗಳಿಗೆ ಸಮಾನಾವಕಾಶವಿದೆ. ಈ ಬಾಡಿಗಳೆಲ್ಲ ಕೇವಲ ಸಲಹಾರೂಪದವುಗಳೆಂದು ಹೇಳಿದ್ದಾರೆ. ಈ ಮಾತು ಹಾಗಿರಲಿ. ಆದರೆ ಈ ಕೌನ್ಸಿಲ್‌ಗಳಿಗೆ ಗಡಿ ನಿರ್ಧಾರ, ಇತ್ಯಾದಿ ಅನೇಕ ವಿಷಯಗಳಲ್ಲದೆ ಆರ್ಥಿಕ ವ್ಯವಸ್ಥೆಗೆ ಸಂಬಂಧಪಟ್ಟ ವಿಚಾರಗಳನ್ನು ಚರ್ಚೆ ಮಾಡತಕ್ಕ ಅಧಿಕಾರ ಸಹ ಕೊಟ್ಟಿದ್ದಾರೆ. ಇದರಿಂದ ನಮಗೆಲ್ಲಾ ಇನ್ನೂ ಅನುಕೂಲವಾಯಿತು. ಆದರೆ ಇದೇ ವಿಚಾರದಲ್ಲಿ ಈಗಾಗಲೆ ನಾನು ಒಂದು ಅಂಶವನ್ನು ನನ್ನ ಹಿಂದಿನ ಭಾಷಣದಲ್ಲಿ ಹೇಳಿದ್ದೇನೆ. ಅದೇನೆಂದರೆ, ಈ "ಗಡಿ ವಾದಗಳ" ಜವಾಬ್ದಾರಿಯನ್ನು ಮಾತ್ರ ಈ ಜೋನಲ್ ಕೌನ್ಸಿಲ್‌ಗಳಿಗೆ ಕೊಡುವುದು ಬೇಡ ಎಂದು ಹೇಳಿದ್ದೆನು. ಈ ದಿವಸ ನಾವು ಈ ಜೋನಲ್ ಕೌನ್ಸಿಲ್‌ನಲ್ಲಿ ಕುಳಿತು ನಾವೂ ಆಂಧ್ರದವರೂ ಚರ್ಚೆ ಮಾಡುತ್ತಾ ನಮಗೆ ಮಡಕಸಿರಾ ತಾಲ್ಲೂಕನ್ನು ಬಿಟ್ಟುಕೊಡಿ ಎಂದು ಕೇಳಿದರೆ ಆಗ ಇದಕ್ಕೆ ಅವರು ನಿಮ್ಮ ಕೋಲಾರವನ್ನು ನಮಗೆ ಬಿಟ್ಟು ಕೊಡಿ ಎಂದು ಹೇಳಿ ಚರ್ಚೆ ಮಾಡಲು ಹೊರಡುವರು. ಆಗ ಹೇಗಾಗುತ್ತದೆ ಎಂದರೆ "ಪ್ರಥಮ ಚುಂಬನಂ, ದಂತ ಭಗ್ನಂ" ಎಂಬ ನಾಣ್ಣುಡಿಯಂತಾಗುವುದು. (ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಈ ಶ್ಲೋಕದ ಅರ್ಥವನ್ನು ಹೇಳಬೇಕೆಂದು ಹೇಳುತ್ತಿದ್ದ ಧ್ವನಿಗಳು ಬರುತ್ತಿದ್ದವು)

ನೀವು ಇದರ ಅರ್ಥವೇನೆಂಬುದನ್ನು ಮನೆಯಲ್ಲಿ ಹೋಗಿ ಕೇಳಿ ಆಗ ಗೊತ್ತಾಗುತ್ತದೆ. (ನಗು.) ಆದರೆ ಈ ದಿವಸ ಈ ಜೋನಲ್ ಕೌನ್ಸಿಲ್‌ಗಳು ಏರ್ಪಾಡಾಗ ಬೇಕಾಗಿದೆ. ಈ ಮಹಾ ಪ್ರಶ್ನೆಯನ್ನು ದೇಶದ ಮುಂದೆ ಇಟ್ಟಿರತಕ್ಕವರು ನಮ್ಮ ಪ್ರಧಾನ ಸಚಿವರಾದಂಥ ಪಂಡಿತ ನೆಹರೂ ಅವರು. ಅವರ ಈ ಉದ್ದೇಶ ಸಮರ್ಪಕವಾಗಿ ಸಾಧಿತವಾಗಬೇಕಾಗಿದ್ದರೆ ಯಾವ ಯಾವ ವಿಷಯಗಳಲ್ಲಿ ಈ ಪ್ರಾಂತೀಯ ಸರ್ಕಾರಗಳಿಗೆ ವ್ಯಾಜ್ಯ ವ್ಯವಹಾರ ಉಂಟಾಗಲು ಅಂಥ ಅವಕಾಶ ಗಳಿರುತ್ತವೋ, ಅಂಥ ಸಂದರ್ಭಗಳಲ್ಲಿ ಆ ಬಾಧಕ ಗಳುಂಟಾಗದಂತೆ ಅವುಗಳನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಮತ್ತು ಆ ವಿಚಾರಗಳನ್ನೆಲ್ಲಾ ಒಂದು ಸಹೃದಯ ಭಾವನೆಯಿಂದ ಬಗೆಹರಿಸುವಂತೆ ಅವಕಾಶ ಕಲ್ಪಿಸಲು ಮೊಟ್ಟಮೊದಲನೆಯದಾಗಿ ಅಂಥ ವಿಚಾರ ಗಳನ್ನೇ ಇದಕ್ಕೆ ಸೇರಿಸಿದ್ದಾರೆ. ಆದರೆ ನಾನು ಈ ಜೋನಲ್ ಕೌನ್ಸಿಲ್‌ಗಳಿಗೆ ಎಲ್ಲಿ ಅಧಿಕಾರ ಕೊಡಬೇಕು, ಎಲ್ಲಿ ಅಧಿಕಾರ ಕೊಡಬಾರದು ಎಂಬ ಪ್ರಶ್ನೆಗೆ ಹೋಗುವುದಿಲ್ಲ. ಎಲ್ಲೆಲ್ಲಿ ಅವಶ್ಯಕತೆ ಬೀಳುತ್ತದೆಯೋ ಅಲ್ಲಿ ಈ ಬೌಂಡರಿ ಕಮಿಷನ್‌ಗಳನ್ನು ನೇಮಕ ಮಾಡಬೇಕೆಂದು ಈ ಹಿಂದೆ ನಾನು ಒಂದಾವರ್ತಿ ಹೇಳಿದ್ದೆನು. ಆದರೆ ಅದೃಷ್ಟವಶಾತ್ ಅದೇ ರೀತಿಯಾಗಿ ಈಗ ಈ ಬಿಲ್ಲಿನಲ್ಲಿಯೂ ಹೇಳಿದೆ. ನಮ್ಮ ಮೈಸೂರು ದೇಶಕ್ಕೆ ಸಂಬಂಧಪಟ್ಟಹಾಗೆ ಒಂದು ಬೌಂಡರಿ ಕಮಿಷನ್ ನೇಮಕವಾಗಬೇಕಾಗಿದೆ. ಆಲೂರು, ಆದೋನಿ, ಮತ್ತು ರಾಯದುರ್ಗ ಪ್ರದೇಶಗಳೆಲ್ಲಾ ಮೈಸೂರು ಸಂಸ್ಥಾನಕ್ಕೇ ಸೇರಬೇಕಾಗಿರುತ್ತದೆಂದು ಅಲ್ಲಿಯ ಜನರೆಲ್ಲ ತುಂಬ ಆಸೆಯಿಟ್ಟುಕೊಂಡಿದ್ದಾರೆಂಬ ಸಮಾಚಾರ ನಮಗೆ ಲಿಖಿತ ಮೂಲಕವಾಗಿ ತಿಳಿದು ಬಂದಿದೆ. ಇನ್ನೂ ಇದೇ ರೀತಿಯಾಗಿ ಮಡಕಶಿರಾ, ತಳವಾಡಿ, ಗೋಬಿಚೆಟ್ಟಿಪಾಳ್ಯಂ, ನೀಲಗಿರಿ, ಚಂದ್ರಗಿರಿ ನದಿಯ ಉತ್ತರ ಭಾಗದ ಕಾಸರಗೋಡು ತಾಲ್ಲೂಕು ಇವುಗಳೆಲ್ಲಾ ನಮ್ಮ ಮೈಸೂರಿಗೆ ಸೇರಬೇಕೆಂದು ಅವರ ಮೆಮೋರ್‍ಯಾಂಡಂಗಳನ್ನು ಬರೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಾವು ಸಂಯೋಗದಿಂದ ಕೆಲಸವನ್ನು ಸಾಧಿಸಬೇಕಾಗಿದೆ. ನಾನೀಗ ಇಷ್ಟೊಂದು ಊರುಗಳ ಹೆಸರನ್ನು ಹೇಳಿದೆನು. ಆದರೆ, ಈ ಭೂಮಿಯ ವಿಷಯದಲ್ಲಿ ನಾವು ಅತ್ಯಂತ ಮಿತಿಮೀರಿದ ದಾಹವನ್ನು ತೋರಿಸುವುದಕ್ಕೆ ಹೋದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಈ ವಿಚಾರದಲ್ಲಿ ಮದರಾಸ್ ಸರ್ಕಾರ ಮತ್ತು ನಮ್ಮ ಸರ್ಕಾರ ಬಹಳ ಸಂಯಮ ರೀತಿಯಲ್ಲಿ ವರ್ತಿಸಬೇಕಾಗಿದೆ. ಮದರಾಸಿನವರು ದೇವಿಕೊಳಂ ಮತ್ತು ಪೀಲಮೇಡ್ ಪ್ರದೇಶಗಳಿಗೆ ಬಹಳ ಚಳವಳಿ ಮಾಡುತ್ತಿದ್ದರು. ಆದರೆ ಈಗ ಒಮ್ಮನಸ್ಸಿನಿಂದ ಇಂಡಿಯಾ ಸರ್ಕಾರದ ತೀರ್ಮಾನಕ್ಕೆ ಒಪ್ಪಿದ್ದಾರೆ. ಅವರು ಒಂದು ಬಹಳ ದೊಡ್ಡನೀತಿಯನ್ನು ಅನುಸರಿಸಿದ್ದಾರೆ. ಆದರೆ ಹೀಗೆ ನಾವು ಕೇಳ

ತಕ್ಕ ವಿಷಯಗಳಲ್ಲಿ ಬಹಳ ಎಚ್ಚರದಿಂದಿರಬೇಕು. ನಾವು ಹೇಗೆ ಕೇಳುವುದಕ್ಕೆ ಪ್ರಾರಂಭಿಸುತ್ತೇವೋ ಹಾಗೆ ಇತರರೂ ಕೂಡ ನಮಗೂ ಹಾಗೆಯೇ ಕೊಡಿ ಎಂದು ಕೇಳುವುದಕ್ಕೆ ಪ್ರಾರಂಭಿಸಿದರೆ ಆಗ ನಾವೇ ಈ ತಪ್ಪಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಈ ದಿವಸ ಕಾಸರಗೋಡು-ನೀಲಗಿರಿ ಬೌಂಡರಿಗಳನ್ನು ನಮಗೆ ಕೊಡಿ ಎಂದು ಮದರಾಸಿನವರೂ, ಮಹಾರಾಷ್ಟ್ರರು ನಮಗೆ ಬೆಳಗಾಂ ಕೊಡಿ ಎಂದೂ, ಆಂಧ್ರರು ನಮಗೆ ಬಳ್ಳಾರಿ ತಾಲ್ಲೂಕನ್ನು ಕೊಡಿ ಎಂದೂ, ತಮಿಳರು K.G.F.ನ್ನು ನಮಗೆ ಕೊಡಿ ಎಂದೂ ಎಲ್ಲರೂ ಕೇಳಬಹುದು. ಇದೊಂದು ಬಹಳ ದೊಡ್ಡ ಸಮಸ್ಯೆ. ಏಕೆಂದರೆ, ಇಂಥ ದೊಡ್ಡ ಸಮಸ್ಯೆಗಳ ಬಗ್ಗೆ ನಾವು ಒಂದು ಬಾಗಿಲನ್ನು ತೆರೆದರೆ ಆಗ ಒಂದು ದೊಡ್ಡ ಪ್ರವಾಹವೇ ಬಂದುಬಿಡುತ್ತದೆ. We will be opening the flood-gates of territorial greed. ಆದರೆ ಈ ಸಭೆಯು ಈ ವಿಚಾರಗಳಲ್ಲಿ ಒಪ್ಪಿಗೆಕೊಟ್ಟರೂ ಕೊನೆಗೆ ಅದು ಪಾರ್ಲಿಮೆಂಟಿನ ಒಪ್ಪಿಗೆ ಪಡೆಯಬೇಕಾಗಿದೆ. ಈ ನಮ್ಮ ಬೇಡಿಕೆಗಳು ನ್ಯಾಯವಾದವುಗಳೆಂದು ಅವರ ಮನಸ್ಸಿಗೆ ಭಾಸವಾಗಬೇಕು. ಈ ದೃಷ್ಟಿಯಿಂದ ನಾವು ಯಾವ ಯಾವ ವಿಷಯಗಳಲ್ಲಿ ಈ ಬೌಂಡರಿ ಕಮಿಷನ್ ನೇಮಿಸಬೇಕೆಂದು ಕೇಳಬೇಕಾಗಿರುತ್ತದೆಯೋ ಆ ಎಲ್ಲ ವಿಚಾರಗಳಲ್ಲಿಯೂ ಒಂದು ವಿಶಾಲ ದೃಷ್ಟಿಯನ್ನಿಟ್ಟುಕೊಂಡು ನಾವು ಅವುಗಳನ್ನು ಕೇಳಬೇಕಾಗಿದೆ. ನಾವು ಹೀಗೆ ಕೇಳುವಾಗ ಬೇರೆ ಪ್ರಾಂತ್ಯಗಳವರು ಈ ಬಗ್ಗೆ ಮತ್ತೆ ಯಾವ ವಿಚಾರ ಕೇಳಬಹುದು ಎಂಬುದನ್ನು ನಾವು ಮನದಲ್ಲಿಟ್ಟುಕೊಂಡು ಈ ಬಗ್ಗೆ ಒಂದು ಕೊನೆಯ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಯಾವ ಪಕ್ಷಗಳೇ ಇರಲಿ, ಪಾರ್ಟಿಗಳೇ ಇರಲಿ ನಾವು ಈ ಬಗ್ಗೆ ಒಂದು ಸರ್ವಸಮ್ಮತವಾದ ಅಭಿಪ್ರಾಯವನ್ನು ತೆಗೆದುಕೊಳ್ಳತಕ್ಕ ಬಗ್ಗೆ ಇದಕ್ಕೆ ಯಾವ ಭಿನ್ನಾಭಿಪ್ರಾಯವೂ ಇರಬಾರದು. ಈ ವಿಚಾರದಲ್ಲಿ ನಾವು ಬಹಳ ಜವಾಬ್ದಾರಿಯುತವಾಗಿ ವರ್ತಿಸಬೇಕಾಗಿದೆ.

11-30 A.M.

ಇನ್ನೂ ಒಂದು ವಿಚಾರ ಪ್ರಸ್ತಾಪಮಾಡಬೇಕಾಗಿದೆ. ಅದು ಬಹಳ ಪ್ರಾಮುಖ್ಯವಾದ ವಿಚಾರ. ಅದಕ್ಕೆ ಅನೇಕರು ಗಮನಕೊಟ್ಟಿದ್ದಾರೆ, ಕೆಲವರು ಮಾತ್ರ ಗಮನಕೊಟ್ಟಿಲ್ಲ. ಮುಂದೆ ಈ ಹೊಸ ಸಂಸ್ಥಾನ ಆದಾಗ ಸಂಬಳ ಸಾರಿಗೆಗಳು ಹೇಗೆ ಇರುತ್ತವೆ ಎಂಬ ವಿಷಯ. ಮೈಸೂರು ಸಂಸ್ಥಾನದಲ್ಲಿ ಸಂಬಳ ಸಾರಿಗೆಗಳು ಕಡಿಮೆ ಬೊಂಬಾಯಿ ಮದರಾಸು ಈ ಪ್ರಾಂತ್ಯಗಳಲ್ಲಿ ಸಂಬಳ ಹೆಚ್ಚು, ಅಧಿಕಾರಿ ಇಲ್ಲಿ ಬಂದರೆ ಸೀನಿಯಾರಿಟಿ ಹೋಗುತ್ತದೆ ಎಂಬ ಇತ್ಯಾದಿ ಸಮಸ್ಯೆಗಳು ಇವೆ. ಒಬ್ಬ ಸಂಬಂಧಪಟ್ಟ ಅಧಿಕಾರಿ ಅಥವಾ interested officer ಯಾವುದಾದರೂ ಒಂದು viewpoint ಹೇಳಿದರೆ,—ಆ viewpoint ಯೋಚನೆಮಾಡಬೇಕಾದದ್ದು ನ್ಯಾಯ ಅಥವಾ ಒಂದು ಗುಂಪಿನ ಅಧಿಕಾರಿ ಹೇಳಿದರೆ ಅದನ್ನು ಯೋಚನೆ ಮಾಡಬೇಕಾದದ್ದು ನ್ಯಾಯ. ಆದರೆ ನಾನು ತಮ್ಮಲ್ಲಿ ಪ್ರಾರ್ಥಿಸತಕ್ಕದ್ದು ಇಷ್ಟೆ—ಈ ಮಹಾ ಪ್ರಶ್ನೆಯನ್ನು ಬಗೆಹರಿಸುವಾಗ ಯಾವುದಾದರೂ ಒಂದು ವರ್ಗದ ಜನರಿಗೆ ಸಂಬಳ ಕಡಿಮೆಯೇ ಅಥವಾ ಹೆಚ್ಚೇ ಎಂದು ಹೇಳಿ ಪರಿಶೀಲನೆ ಮಾಡಬಾರದು. ಮನೆಯಲ್ಲಿ ಅಡಿಗೆ ಎಷ್ಟಿದ್ದರೆ ಅಷ್ಟನ್ನು ಎಲ್ಲರೂ ಕೂಡಿ ಒಟ್ಟು ಕುಟುಂಬದವರು ಹಂಚಿಕೊಂಡು ಊಟಮಾಡುವ ಹಾಗೆ ಮುಂದೆ ಸ್ಥಾಪನೆಯಾಗತಕ್ಕ ಸಂಸ್ಥಾನದಲ್ಲಿ ಎಷ್ಟು ಇದೆಯೋ ಅಷ್ಟನ್ನು ಎಲ್ಲರೂ ಸಮರ್ಪಕವಾಗಿ ಹಂಚಿಕೊಳ್ಳಬೇಕು.

ಸಂಸ್ಥಾನ ಸ್ಥಾಪನೆಯಾಗತಕ್ಕದ್ದು ಸರ್ಕಾರಿ ಅಧಿಕಾರಿಗಳ ಯೋಗಕ್ಷೇಮ ರಕ್ಷಣೆಗೆ ಅಲ್ಲ, ಎಂಬುದನ್ನು ಮನಸ್ಸಿನಲ್ಲಿ ಸ್ಪಷ್ಟಪಡಿಸಿಕೊಂಡರೆ ಸಂಬಳ ಹೆಚ್ಚಿಸಿ, ಅದು ಮಾಡಿ, ಇದು ಮಾಡಿ ಎಂದು ಹೇಳುವ ಉದ್ವೇಗ ಕಡಿಮೆಯಾಗುತ್ತದೆ. ಅಧಿಕಾರಿಗಳನ್ನು ಹೊಗಳಿ, ಮೆಚ್ಚಿಸಿಕೊಳ್ಳಬೇಕು ಎಂದೆನ್ನುವ ವಾದವೂ ಸರಿಯಲ್ಲ ಅಥವಾ ಅವರಿಗೆ ತೊಂದರೆ ಮಾಡಬೇಕು ಎನ್ನುವ ವಾದವೂ ಸರಿಯಲ್ಲ. Every one must fit in into the picture that is coming into being. ಅದಕ್ಕೆ ನಾನು ಹೇಳುತ್ತೇನೆ, ಮುಂದಿನ ಸಂಸ್ಥಾನದ ಆಯವ್ಯಯದ ದೃಷ್ಟಿಯಿಂದ ಹೆಚ್ಚಿಗೆ ಸಂಬಳ ಇರತಕ್ಕವರು ಸ್ವಲ್ಪ ಕಡಿಮೆಮಾಡಿಕೊಳ್ಳಬೇಕು ಎಂದರೆ ಅದಕ್ಕೆ ಸಿದ್ಧರಾಗಿರಬೇಕು. ಮೈಸೂರು ದೇಶದಲ್ಲಿ ಕಡಿಮೆ ಸಂಬಳ ಇರುವುದರಿಂದ ಅದನ್ನು ಸ್ವಲ್ಪ ಹೆಚ್ಚುಮಾಡುತ್ತೇವೆ ಎಂದರೆ ಹೊರಗಡೆ ಇರತಕ್ಕವರು ಸಂತೋಷಪಡಬೇಕು. ಕರ್ಣಾಟಕ ಆಗಬೇಕು ಎನ್ನುವುದರಲ್ಲಿ ಹೊರಗಡೆ ಇರತಕ್ಕ ಅಧಿಕಾರ ವರ್ಗದವರೂ ಕೂಡ ಬಹಳ ಉತ್ಸಾಹಿತರಾಗಿದ್ದಾರೆ; ಆ ಉತ್ಸಾಹಕ್ಕೆ ಸ್ವಲ್ಪ ಕಾಣಿಕೆಯಾದರೂ ಅರ್ಪಿಸಲು ಅವರು ಸಿದ್ಧವಾಗಿರಬೇಕು, ಅವರೇನಿದ್ದರೂ ಕೂಡ ಎಲ್ಲಿ ಹೋದರೆ ಹೆಚ್ಚು ಸಂಬಳ ಸಿಕ್ಕುತ್ತದೆ, ಹೆಚ್ಚು ಸಂಭಾವನೆ ಸಿಕ್ಕುತ್ತದೆ, ಹೆಚ್ಚು ಹಣ ಸಿಕ್ಕುತ್ತದೆ ಎಂದು ಭಾವಿಸಿಕೊಂಡು, ಅದಕ್ಕೇ ಕರ್ಣಾಟಕವಾಗಬೇಕೆಂದು ಹೇಳಿದರೆ, ಆ ವಾದದಲ್ಲಿ ಅಷ್ಟು ದೇಶಾಭಿಮಾನ ಇರುವುದಿಲ್ಲ, ಅಷ್ಟು ಸದುದ್ದೇಶವೂ ಇರುವುದಿಲ್ಲ. ಇವೊತ್ತಿನ ದಿವಸ ಘಂಟಾಘೋಷವಾಗಿ ನಾನು ಹೇಳುತ್ತೇನೆ, ಈ ಶಾಸನಸಭೆ ಈ ಆಯವ್ಯಯಗಳನ್ನು ಪರಿಶೀಲನೆಗೆ ತೆಗೆದುಕೊಂಡು ಎಲ್ಲ ಅಧಿಕಾರಿಗಳಿಗೂ ಯಾವ ಸಂಬಳಸಾರಿಗೆಗಳನ್ನು ನಿಗದಿಮಾಡುತ್ತಾರೆಯೋ ಅದನ್ನು ಸಂತೋಷದಿಂದ ಅವರು ಒಪ್ಪಿಕೊಳ್ಳತಕ್ಕವರಾಗಿರಬೇಕು. ಒಂದು ವೇಳೆ ಮೈಸೂರಿನ ಪೇ ಸ್ಟ್ರಕ್ಚರ್ ಏನಿದೆ ಅದನ್ನು ಮದರಾಸು, ಬೊಂಬಾಯಿನ ಪೇ ಸ್ಟ್ರಕ್ಚರಿಗೇ ನಾವುಗಳೆಲ್ಲಾ ಸೇರಿ ಏರಿಸಲೂಬಹುದು ಅಥವಾ ದುಡ್ಡಿಲ್ಲದ ಸಂದರ್ಭದಲ್ಲಿ ಅವರ ಸಂಬಳವನ್ನು ಕಡಿಮೆ ಮಾಡಿ ಇವರ ಸಂಬಳವನ್ನು ಹೆಚ್ಚು ಮಾಡಿ ಒಂದು ರಾಜಿ ಮಾಡಿದರೂ ಮಾಡಬಹುದು. ಆದರೆ ಯಾವ ಅಧಿಕಾರಿಯೇ ಆಗಲಿ ನನ್ನ ಸಂಬಳ ಒಂದು ಕಾಸೂ ಕಡಿಮೆಯಾಗಕೂಡದು ಎಂದು ಹೇಳಿ ವಾದಿಸುವುದಕ್ಕೆ ಪ್ರಾರಂಭ ಮಾಡಿದರೆ ಅದು ಮುಂದೆ ಸ್ಥಾಪನೆಯಾಗತಕ್ಕ ಒಂದು ಸಂಸ್ಥಾನ ಏನಿದೆಯೋ ಆ ಸಂಸ್ಥಾನದ ಹಿತವನ್ನು ಅವರು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಇದು ಹೇಗೆ ಆಗುತ್ತದೆ ಎಂದರೆ, we must eat to live and not live to eat. ಹೀಗೆ ಸರ್ಕಾರದ ಅಧಿಕಾರಿಗಳ ಸಂಸ್ಥಾನದ ಸೇವೆಮಾಡುವುದಕ್ಕಾಗಿಯೇ ಹೊರತು, ಸಂಸ್ಥಾನ ಇರತಕ್ಕದ್ದು ಸರ್ಕಾರದ ಅಧಿಕಾರಿಗಳಿಗೆ ಸಂಬಳ ಕೊಡುವುದಕ್ಕಲ್ಲ. ಈ ವಾತಾವರಣವನ್ನು ತಾವು ಅವರ ಮನಸ್ಸಿನಲ್ಲಿ ಕಲ್ಪಿಸಬೇಕಾಗಿರತಕ್ಕದ್ದು ತಮ್ಮ ಗುರುತರವಾದ ಜವಾಬ್ದಾರಿ ಆಗಿದೆ. ಈ ಸರ್ಕಾರಿ ಅಧಿಕಾರಿಗಳಿಗೆ ಹೆಚ್ಚು ಸಂಬಳ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ ನಾನು ಕೆಟ್ಟವನಾದ ಹಾಗೂ ತಾವು ಒಳ್ಳೆಯವರಾಗಿ ಹೆಚ್ಚು ಸಂಬಳ ಕೊಡಿಸುವುದಕ್ಕೆ ಪ್ರಯತ್ನಮಾಡಿದ ಹಾಗೂ ಶ್ರೀ ಮುಲ್ಕ ಗೋವಿಂದ

(ಶ್ರೀ ಕೆ. ಹನುಮಂತಯ್ಯ.)

ರೆಡ್ಡಿಯವರು ಹೇಳಿದರೆ ನಾನು ಏನು ಹೇಳಲಿ? These officials who come from outside must be prepared if necessary for salary cuts and if they are not prepared to make such sacrifice they may as well opt out to remain in other States. ಮೈಸೂರು ಸಂಸ್ಥಾನದಲ್ಲಿ ಈ ಶಾಸನ ಸಭೆಯಲ್ಲಿ ಅಂತ್ಯವಾಗಿ ಯಾವೊಂದು ರಾಜಿ ತೀರ್ಮಾನವಾಗುತ್ತದೆಯೋ ಆ ತೀರ್ಮಾನಕ್ಕೆ ಒಪ್ಪಿ ಕೊಳ್ಳತಕ್ಕ ಅಧಿಕಾರಿಯಾಗಬೇಕು. ಹೈಕೋರ್ಟ್ ಜಡ್ಜಿಗಳದು ಒಂದು ದೊಡ್ಡ ಸಮಸ್ಯೆಯಾಗಿದೆ. ನಾವು ಹೈಕೋರ್ಟು ಜಡ್ಜಿಗಳಿಗೆ ಎರಡುಸಾವಿರ ರೂಪಾಯಿ ಸಂಬಳ ಕೊಟ್ಟುಕೊಂಡು ಸಂತೋಷವಾಗಿ ಕೆಲಸ ಮಾಡಿಕೊಂಡು ಹೋಗುತ್ತಾ ಇದ್ದೇವೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗಿನಲ್ಲಿ ಈ ವಿಚಾರವಾಗಿ ನನಗೂ ಇತರರಿಗೂ ತೀವ್ರವಾದ ಚರ್ಚೆ ಆಯಿತು. ಅವರು ಎಲ್ಲ ಹೈಕೋರ್ಟುಗಳಲ್ಲೂ ಘನತೆ, ಗಾಂಭೀರ್ಯ ಕಾಪಾಡಬೇಕಾದರೆ ಮದರಾಸು, ಬೊಂಬಾಯಿ ಹೈಕೋರ್ಟುಗಳಲ್ಲಿ ಎಷ್ಟು ಸಂಬಳ ಇದೆಯೋ ಅಷ್ಟೇ ಸಂಬಳವನ್ನು ಮೈಸೂರಿನಲ್ಲೂ ತಿರುವಾಂಕೂರು-ಕೊಚ್ಚಿನಲ್ಲೂ ಕೊಡಬೇಕೆಂದು ಹೇಳಿದರು. ಅದರಿಂದ ಎರಡು ಸಾವಿರ ರೂಪಾಯಿ ಸಂಬಳ ಇರುವುದು ನಾಲ್ಕು ಸಾವಿರ ರೂಪಾಯಿ ಆಗುತ್ತದೆ. ಚೀಫ್‌ಜಸ್ಟಿಸ್‌ಗೆ ಐದು ಸಾವಿರ ರೂಪಾಯಿ ಆಗುತ್ತದೆ. ಇದು ಬಹಳ ಹೆಚ್ಚಾಗುತ್ತದೆ. ಅಲ್ಲೆಲ್ಲಾ ಮೊದಲಿನಿಂದಲೂ ಕೊಟ್ಟಿದ್ದಾರೆ, ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಇಲ್ಲಿ ಈ ಶಾಸನ ಸಭೆಯಲ್ಲಿ ಹಿಂದೆ ನಾನು ಇಲ್ಲದೇ ಇರುವಾಗ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಸಂಬಳ ಯಾವ ಅಧಿಕಾರಿಗೂ ಕೊಡಬಾರದು ಎಂದು ಹೇಳಿ ನಿರ್ಣಯ ಮಾಡಿದ್ದಾರೆ. ನಾವು ಯಾವುದಾದರೂ ಒಪ್ಪಿಕೊಳ್ಳೋಣ. ಆದರೆ ಈ ಶಾಸನಸಭೆಯ ಅಭಿಪ್ರಾಯಕ್ಕೆ ಮನ್ನಣೆ ಇರಬೇಕು. ಒಂದು ವೇಳೆ ತಾವು ಸಾವಿರ ರೂಪಾಯಿ ಎಂದರೆ ಸಾವಿರ ರೂಪಾಯಿಯನ್ನೇ ಕಟ್ಟುನಿಟ್ಟಾಗಿ ಮಾಡಿ, ಒಂದು ಕಾಸೂ ಹೆಚ್ಚಿಗೆ ಕೊಡಬಾರದು ಎಂದು ಅರ್ಥವಲ್ಲ. ಆ ಒಂದು ಮಟ್ಟದಿಂದ ಮಿತಿಮೀರಿ ಹೋಗಬಾರದು ಎಂಬ ಡೈರೆಕ್ಷನ್ ಈ ಸಭೆ ಕೊಟ್ಟಿರುವಾಗ ಅದು ಎಲ್ಲರಿಗೂ ಅನ್ವಯಿಸುತ್ತದೆ. ತಾವು ಸೋಷಿಯಲ್ ಜಸ್ಟೀಸ್ ಎಂದು ಏನು ಹೇಳುತ್ತೀರೋ ಅದನ್ನು ಕಾರ್ಯರೂಪಕ್ಕೆ ತರಬೇಕು. ನಾನು ಅನೇಕಸಾರಿ ಹೇಳಿದ್ದೇನೆ, 80 per cent of our people are in the villages. I would request my friend Sri Mulka Govinda Reddy to consider their economic position. While we are pleading for increased emoluments to workers in factories and Government servants in offices, we should also consider the *per capita* income of the villagers for the purpose of distributing what may be called the national wealth. ತಾವು ಸರ್ಕಾರಿ ಅಧಿಕಾರಿಗಳಿಗೆ ಮತ್ತು ಕಾರ್ಮಿಕರಿಗೆ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಿಕೊಡಿ, ಅವರಿಗೆ ಪ್ರಾವಿಡೆಂಟ್ ಬೆನಿಫಿಟ್, ಲೈಫ್ ಇನ್ಷೂರೆನ್ಸ್, ಪೆನ್ಷನ್ ಕೊಡಿ, ಮನೆ ಕಟ್ಟಿಸಿಕೊಡಿ, ಎಲ್ಲ ಅನುಕೂಲಗಳನ್ನು ಮಾಡಿಕೊಡಿ ಎಂದು ಹೇಳಿ ಶೇಕಡ 80 ಭಾಗದ ಮಿಕ್ಕ ಜನರಿಗೆಯಾವ ಸೌಲಭ್ಯವನ್ನೂ ಕಲ್ಪಿಸಿ ಕೊಡದಿದ್ದರೆ ಅದು ಸೋಷಿಯಲ್ ಜಸ್ಟೀಸ್ ಆಗುವುದಿಲ್ಲ. 100 ರೂಪಾಯಿ ಇದ್ದರೆ ಅದನ್ನು ಸಮನಾಗಿ ಹಂಚಿಕೊಳ್ಳಬೇಕೇ ಹೊರತು 100 ರೂಪಾಯಿಗಳಲ್ಲಿ ಒಂದುವರ್ಗಕ್ಕೆ ಹೆಚ್ಚಿನ ಭಾಗ ಕೊಡಿ ಮಿಕ್ಕ ಇನ್ನೊಂದು ವರ್ಗಕ್ಕೆ ಕಡಿಮೆ ಭಾಗ ಕೊಡಿ ಎಂದರೆ ಹೇಗಾಗುತ್ತದೆ? I believe in your sincerity and in your political philosophy. If you want to do social justice, take into consideration the national resources, distribute them equitably between the classes. In the existing state of affairs, the organised labour and the officers in Government employment get a far better deal than the man in the village. That must be recognised. I do not say that this can be completely got rid of. And I am not pleading either that the level of the emoluments of these two classes of employees should be brought down to the level of the *per capita* income of the villager. I am not so unreasonable. There is bound to be great disparity. But let us not aggravate that disparity. Let us not further increase that gap. The duty cast on us by the socialistic society, we all have in view. It is therefore that I make an earnest attempt and the earliest attempt to clarify the situation that the incoming officers must be prepared if necessary for salary cuts.

ಮೇಲ್‌ಮನೆ ಮತ್ತು ಕೆಳವನೆಯ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿ ನನ್ನ ಮಾನ್ಯ ಮಿತ್ರರಾದ ಭೀಮಪ್ಪನಾಯಕರು ಹೇಳುತ್ತಾರೆ. ಈಗ ನಾನು ಮೇಲ್‌ಮನೆ ಇರಬೇಕು ಎಂದರೂ ಕಷ್ಟ, ಹೋಗಬೇಕು ಎಂದರೂ ಕಷ್ಟ. ಆದ್ದರಿಂದ ಈ ವಿಚಾರದಲ್ಲಿ ಸಮಾಲೋಚನೆ ಮಾಡೋಣ. ಯಾವ ಅಭಿಪ್ರಾಯಕ್ಕೆ ಬರುತ್ತೇವೆಯೋ ಆ ರೀತಿ ಮಾಡಿಕೊಳ್ಳೋಣ. ಅದನ್ನು ಈ ದಿವಸವೇ ತಿಳಿಸಿ ನಾನು ಒಂದು ಲೀಡ್ ಕೊಡುವುದು ಸರಿಯಲ್ಲ ಎಂದು ಹೇಳಿ ಆ ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ.

ಇನ್ನೊಂದು ವಿಷಯ ತಾವು ಹೇಳುವುದು ಪಾರ್ಲಿಮೆಂಟರಿ ಕಾನ್‌ಸ್ಟಿಟ್ಯೂಯೆನ್ಸಿಯ ಒಂಭತ್ತು ಜನ ಶಾಸನ ಸಭೆಯ ಸದಸ್ಯರು ಇದ್ದರು, ಅದನ್ನು ಈ ಬಿಲ್ಲಿನಲ್ಲಿ ಏಳಕ್ಕೆ ಇಳಿಸಿದ್ದಾರೆ, ಅದನ್ನು ಪ್ರಸ್ತಾಪ ಮಾಡಬೇಕು ಎಂದು. ಇದು ಒಂದಕ್ಕೊಂದು ಸಂಬಂಧವಿದೆ. ಲೆಜಿಸ್ಲೇಟಿವ್ ಕೌನ್ಸಿಲ್ ಇದ್ದರೆ ಎಷ್ಟಿರಬೇಕು, ಲೆಜಿಸ್ಲೇಟಿವ್ ಕೌನ್ಸಿಲ್ ರದ್ದಾದರೆ ಎಷ್ಟಿರಬೇಕು ಎಂಬುದೇ ಅದಕ್ಕೂ ಇದಕ್ಕೂ ಇರುವ ಸಂಬಂಧ. ಆದ್ದರಿಂದ ಇವೆರಡು ಪ್ರಶ್ನೆಗಳನ್ನೂ ಜೊತೆಯಲ್ಲೇ ಬಗೆಹರಿಸಿದರೆ ಸುಲಭವಾಗಿ ಬಗೆಹರಿಯುತ್ತದೆ.

ಮೂರು ನಾಲ್ಕು ತತ್ವಗಳ ವಿಚಾರದಲ್ಲಿ ಮಾತ್ರ ನಾನು ಈ ದಿವಸ ಮಾತನಾಡಿದ್ದೇನೆ. ಅನೇಕ ತಿದ್ದುಪಡಿಗಳು ಬರುತ್ತವೆ. ನಾನೂ ತಿದ್ದುಪಡಿಗಳನ್ನು ಕಳುಹಿಸುತ್ತೇನೆ ಮತ್ತು ಸಭೆಯ ಅನೇಕ ಮಾನ್ಯ ಸದಸ್ಯರುಗಳೂ ಕೂಡ ಕಳುಹಿಸುತ್ತಾರೆ. ಈ ಎಲ್ಲ

ತಿದ್ದುಪಡಿಗಳೂ ಬಂದಮೇಲೆ ನಾನು ಒಂದು ಮಾರ್ಗವನ್ನು ಅನುಸರಿಸಬೇಕೆಂದು ಇದ್ದೇನೆ. ಅದಕ್ಕೆ ಈ ಸಭೆಯ ಸಮ್ಮತಿ ಬೇಕೆಂದು ಹೇಳಿ ನನ್ನ ಪ್ರಾರ್ಥನೆ.

ಕಾರಣಾಂತರದಿಂದ, ನಾವು ಉದ್ದೇಶಪಟ್ಟೆವೋ ಪಡಲಿಲ್ಲವೋ, ಈ ಎಸ್.ಆರ್. ಕಮಿಷನ್ ವರದಿ ಮತ್ತು ಈ ಬಿಲ್ಲು ಪಕ್ಷಾತೀತವಾದ ಪ್ರಶ್ನೆ ಆಗಿದೆ. ಅದು ಒಂದು ದೃಷ್ಟಿಯಿಂದ ನೋಡಿದರೆ ಒಳ್ಳೆಯದೇ. ಸಂಸ್ಥಾನಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲೂ ಈ ಸಭೆ ಪಕ್ಷಭೇದವನ್ನು ಮರೆತು ಒಂದು ಕುಟುಂಬದಂತೆ ವರ್ತಿಸತಕ್ಕ ಸಂಪ್ರದಾಯವನ್ನು ಸ್ಥಾಪಿಸಬೇಕು. ಆ ಸಂಪ್ರದಾಯ ಈ ಬಿಲ್ಲಿಗೂ ಕೂಡ ಅನ್ವಯಿಸುತ್ತದೆ. ಎಲ್ಲ ತಿದ್ದುಪಡಿಗಳೂ ಬಂದಮೇಲೆ ಇಲ್ಲಿರತಕ್ಕ ಎಲ್ಲ ಪಕ್ಷಗಳವರೂ ಸೇರಿ ಚರ್ಚೆಮಾಡಿ ಸರ್ವಸಮ್ಮತವಾದ ತೀರ್ಮಾನಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ಎನ್ನತಕ್ಕದ್ದೇ ನನ್ನ ಯೋಚನೆ. ಆ ರೀತಿ ಮಾಡಬೇಕು ಎನ್ನುವುದಕ್ಕೆ ತಮ್ಮೆಲ್ಲರ ಒಪ್ಪಿಗೆ ಸಿಕ್ಕಿದರೆ ಮುಂದುವರಿಯುವುದಕ್ಕೆ ನನಗೆ ಅವಕಾಶವಾಗುತ್ತದೆ.

ಕೊನೆಯದಾಗಿ, ನನ್ನ ಪ್ರಾರ್ಥನೆ : ಈ ಸಭೆ ಈ ವಿಷಯದಲ್ಲಿ ಚರ್ಚೆ ಮಾಡುವಾಗ ಮೊದಲು ನಾನು ಏನು ಗುರಿಯನ್ನು ಹೇಳಿದೆನೋ ಆ ಗುರಿಯನ್ನು ಇಟ್ಟುಕೊಂಡು ಮಾತನಾಡಬೇಕು; ಅದರಿಂದ ಜನರಿಗೆ ಒಳ್ಳೆಯದಾಗುತ್ತದೆ. ಎಲ್ಲಕ್ಕಿಂತಲೂ ಶಾಂತಿ, ಸೌಹಾರ್ದ ಬೆಳೆಯಬೇಕು. ನಾವು ಮಾತನಾಡುತ್ತಾ ಇರುವುದು ನಮ್ಮ ಮೈಸೂರು ದೇಶದ ಒಂದು ಕೋಟಿ ಜನರ ಪರವಾಗಿಯೇ ಅಲ್ಲ; ಮುಂದೆ ಆಗತಕ್ಕ ಸಂಸ್ಥಾನದ ಇನ್ನೊಂದು ಕೋಟಿ ಜನರೂ ಇಲ್ಲಿನ ನಡೆವಳಿಕೆಯನ್ನು ನೋಡುತ್ತಾ ಇರುತ್ತಾರೆ; ಅದಕ್ಕಿಂತಲೂ ಹೆಚ್ಚು ಜನರೂ ಕೂಡ ಈ ನಮ್ಮ ಚರ್ಚೆಯನ್ನು ಓದುತ್ತಾರೆ, ತಿಳಿದುಕೊಳ್ಳುತ್ತಾರೆ. ನಾವು ಮಾತನಾಡತಕ್ಕ ಮಾತುಗಳು ಅವರ ಮನಸ್ಸಿನಮೇಲೆ ಒಂದು ಪರಿಣಾಮವನ್ನು ಉಂಟುಮಾಡುತ್ತವೆ. ಎಲ್ಲ ಪರಿಣಾಮಗಳೂ ಕೂಡ ಸತ್ ಪರಿಣಾಮಗಳಾಗಿ ಪರಿವರ್ತಿಸಬೇಕು, ಯಾರ ಮನಸ್ಸಿನಲ್ಲೂ ಕೂಡ ನಾವು ಮಾಡತಕ್ಕ ಭಾಷಣಗಳಿಂದ ಉದ್ರೇಕ ಉಂಟಾಗಬಾರದು. ನಮ್ಮ ಮಾತುಗಳು ಕೋಪ ಬರುವಂತೆ ಮಾಡಬಾರದು. ಈ ಒಂದು ಸದುದ್ದೇಶದಿಂದ ನೆಮ್ಮದಿ ಮತ್ತು ಶಾಂತಿಯನ್ನು ಕಾಪಾಡತಕ್ಕ ಸಾಧನಗಳಾಗಬೇಕು ನಮ್ಮ ಮಾತುಗಳು ಎಂದು ಮನಸ್ಸು ಮಾಡಿಕೊಂಡು ಆ ರೀತಿ ಭಾಷಣ ಮಾಡಬೇಕೆಂದು ನಾನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

Mr. SPEAKER.—Motion moved :

"That the States Reorganisation Bill, 1956, referred by the President under article 3 of the Constitution, be taken into consideration."

Before further discussion proceeds, I want to put before the House one suggestion. Four days have been allotted for this Bill. The first two days we may devote for the discussion of the general principles and on the 3rd and 4th April we can take up amendments. Keeping this in view, I request Hon'ble Members to be as brief as possible in their observations.

Sri Mulka GOVINDA REDDY (Chitaldrug).—I request that the time for tabling amendments may be extended till Monday.

Sri K. PATTABHIRAMAN (Kolar).—Sir, what about those who speak on the general principles and subsequently send in amendments ? Will they have an opportunity to speak for a second time, Sir ?

Mr. SPEAKER.—Yes.

Sri B. V. NARAYANA REDDY (Bagepalli—Gudibanda).—Sir, hitherto the Chief Minister was having the gadget of the All-India Radio. I request that Sri Imam also may be given the same privilege, Sir.

Sri J. MOHAMED IMAM (Jagalur).—I do not want my follies and omissions to be recorded.

Mr. SPEAKER.—Anyhow, Sri Narayana Reddy desires and Sri Imam can have it.

(The gadget was transferred to the table of Sri Imam).*

*ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಅಧ್ಯಕ್ಷರೇ, ಕನ್ನಡಿಗರೆಲ್ಲರೂ ಒಟ್ಟುಗೂಡತಕ್ಕ ವಿಷಯದ ಮೇಲೆ ಕನ್ನಡದಲ್ಲಿಯೇ ಮಾತನಾಡಬೇಕೆಂದು ಅಪೇಕ್ಷೆಪಡುತ್ತೇನೆ. ಇದುವರೆಗೂ ಪ್ರಾಂತ ಪುನರ್ವಿಂಗಡಣೆಯ ವಿಷಯವಾಗಿ ಅನೇಕ ದೀರ್ಘ ಭಾಷಣಗಳಾಗಿವೆ. ಈ ವಿಷಯವಾಗಿ ಎಲ್ಲ ಪಂಗಡಗಳಿಂದ ಬಹಳ ಅಮೂಲ್ಯವಾದ ಅಭಿಪ್ರಾಯಗಳು ಬಂದಿವೆ. ಮುಖ್ಯ ಮಂತ್ರಿಗಳು ಹೇಳಿದಹಾಗೆ, ಈ ವಿಷಯ ಈ ಸಭೆಯಲ್ಲಿ ಪಕ್ಷಾತೀತವಾಗಿ, ಎಂದರೆ, ಪಾರ್ಟಿಗೆ ಸಂಬಂಧಪಡದೆ ಎಲ್ಲರೂ ಒಂದೇ ದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಇದುವರೆಗೂ ವಿಮರ್ಶೆಮಾಡಿದ್ದಾರೆ. ಅವರು ಹೇಳಿದ ಹಾಗೆ, ನಾವೆಲ್ಲ ಒಂದೇ ಒಂದು ಗುರಿಯನ್ನು ನಮ್ಮ ಮುಂದಿಟ್ಟುಕೊಂಡಿದ್ದೇವೆ. ಅದೇನೆಂದರೆ, ಜನಗಳಿಗೆ ಒಳ್ಳೆಯದಾಗಬೇಕು, ಅವರಿಗೆ ಸುಖ ಸಂಪತ್ತು ಲಭಿಸಬೇಕು ಮತ್ತು ದೇಶದ ಕೀರ್ತಿಯು ಹೆಚ್ಚಾಗಬೇಕು, ಇದರಿಂದ ಮುಂದೆ ನಮ್ಮ ದೇಶ ಒಗ್ಗಟ್ಟಾಗಿ ಅದಕ್ಕೆ ಯಾವ ತರಹ ಧಕ್ಕೆ ಮತ್ತು ತೊಂದರೆ ಸಂಭವಿಸಕೂಡದು ಎಂಬ ಈ ಗುರಿಗಳನ್ನು ಮುಂದಿಟ್ಟುಕೊಂಡು ಇದುವರೆಗೂ ಟೀಕೆಮಾಡಿದ್ದೇವೆ. ನಾನೂ ಸಹ ದೊಡ್ಡ ಮೈಸೂರಾಗಬೇಕು, ಅಥವಾ ಕರ್ಣಾಟಕವಾಗಬೇಕು ಎಂಬ ವಾದವನ್ನು ಎತ್ತಿಹಿಡಿದು ಮೊದಲಿನಿಂದಲೂ ಅದಕ್ಕೆ ನನ್ನ ಬೆಂಬಲವನ್ನು ಕೊಟ್ಟಿದ್ದೇನೆ. ಆ ಬೆಂಬಲವನ್ನು ಕೊಟ್ಟಿರುವಾಗ ನನ್ನ ಮನಸ್ಸಿನ ಆಕಾಂಕ್ಷೆ, ನನ್ನ ಮನಸ್ಸಿನ ಗುರಿ ಏನೆಂದರೆ, ಮುಂದೆ ಈ ದೇಶಕ್ಕೆ ವಿಶಾಲ ಮೈಸೂರಿಗೆ ಅಥವಾ ಕರ್ಣಾಟಕಕ್ಕೆ ಒಳ್ಳೆಯದಾಗಬೇಕು ಎಂಬುದು. ಈ ರೀತಿಯಾದ ಪ್ರಾಂತಪುನರ್ವಿಂಗಡಣೆ ಮಾಡುವುದರಿಂದ ದೇಶಕ್ಕೂ ಒಳ್ಳೆಯದು ಆ ದೇಶದಲ್ಲಿ ವಾಸಿಸುವ ಎಲ್ಲ ಜನಾಂಗಗಳಿಗೂ ಒಳ್ಳೆಯದು ಮತ್ತು ಇಡೀ ಇಂಡಿಯಾ ದೇಶಕ್ಕೆ ಇದರಿಂದ ಒಳ್ಳೆಯದಾಗುತ್ತದೆ

(ಶ್ರೀ ಜೆ. ಮಹಮ್ಮದ್ ಇಮಾಂ.)

ಎಂಬ ಅಂಶವನ್ನು ನಾವು ತಿಳಿದುಕೊಂಡಿದ್ದರಿಂದ ಇದಕ್ಕೆ ಮೊದಲಿನಿಂದಲೂ ಬೆಂಬಲ ಕೊಟ್ಟಿದ್ದೇವೆ.

ಈಗ ಮುಖ್ಯಮಂತ್ರಿಗಳು ದೀರ್ಘವಾದ ಭಾಷಣವನ್ನು ಮಾಡಿರುವುದು ನಮಗೆಲ್ಲರಿಗೂ ಸಂತೋಷದ ಸಂಗತಿ. ಯಾವ ಗುರಿಗೋಸ್ಕರ, ಧ್ಯೇಯಕ್ಕೋಸ್ಕರ ಕರ್ಣಾಟಕದಲ್ಲಿರುವ ಎಲ್ಲ ಜನಗಳೂ ಹೋರಾಡುತ್ತಿದ್ದೆವೋ ಅದು ಈಗ ನೆರವೇರುವ ಪರಿಸ್ಥಿತಿಗೆ ಬಂದಿದೆ. ಈ ಹೋರಾಟ ಇವೊತ್ತಿನದಲ್ಲ, ನಿನ್ನೆಯದಲ್ಲ, ಸುಮಾರು ಒಂದು ಶತಮಾನದಿಂದಲೂ ನಡೆಯುತ್ತಿದೆ. ಇದರಿಂದ ಎಲ್ಲರ ಹಾರೈಕೆಯೂ ಪೂರೈಸೀತು, ಒಂದು ಬೆಡಗಿನ ಜನಗಳು, ಹಿಂದೆ ಒಂದು ದೇಶದಲ್ಲಿ ವಾಸ ಮಾಡುತ್ತಿದ್ದ ಜನಗಳು, ಒಂದು ಭಾಷೆಯನ್ನಾಡುವ ಜನಗಳು, ಒಂದು ಸಂಸ್ಕೃತಿಯನ್ನನುಸರಿಸತಕ್ಕವರು, ಸಾಧ್ಯವಾದಷ್ಟೂ ಒಂದೇ ಆಡಳಿತದಲ್ಲಿರಬೇಕು, ಒಂದೇ ಚಾಮರ, ಛತ್ರಿಯ ಕೆಳಗೆ ಇರಬೇಕು ಎಂಬ ಉದ್ದೇಶದಿಂದ ಸುಮಾರು ಒಂದು ಶತಮಾನದ ಲಾಗಾಯ್ತು ಈ ಗುರಿಯ ಸಾಧನೆಗೋಸ್ಕರ ಹೋರಾಡುತ್ತಿದ್ದೆವು. ಅದಕ್ಕೆ ಮೈಸೂರಿನವರೂ ಮೈಸೂರಿನ ಹೊರಗಿನವರೂ ಬಹಳವಾಗಿ ಶ್ರಮಿಸಿದ್ದಾರೆ. ಅನೇಕ ರೀತಿಯಲ್ಲಿ ತ್ಯಾಗವನ್ನೂ ಮಾಡಿದ್ದಾರೆ. ಇದಕ್ಕೆ ಇದ್ದ ಅಡಚಣೆಗಳನ್ನು ಹೋಗಲಾಡಿಸಿ, ಕಷ್ಟಗಳನ್ನು ಎದುರಿಸಿ, ಆ ಗುರಿಯು ಕಾರ್ಯರೂಪಕ್ಕೆ ಈಗ ಬರುವುದಾಗಿದೆ. ಹೋದವರ್ಷದ ಅಸೆಂಬ್ಲಿ ಅಧಿವೇಶನದಲ್ಲಿ ಈ ಸಭೆಯು ಪ್ರಾಂತ ಪುನರ್ವಿಂಗಡಣೆ ಸಮಸ್ಯೆಯಲ್ಲಿ, ಮೈಸೂರು ಮತ್ತು ಅದರ ಸುತ್ತಮುತ್ತಲಿನ ಎಲ್ಲ ಕರ್ಣಾಟಕ ಪ್ರಾಂತಗಳೂ ಒಂದುಗೂಡಬೇಕು ಎಂಬುದಾಗಿ ಒಂದು ತೀರ್ಮಾನವನ್ನು ತೆಗೆದುಕೊಂಡಿತ್ತು. ಆ ತೀರ್ಮಾನವನ್ನು ಕೇಂದ್ರ ಸರ್ಕಾರದವರೂ ಹೈಕಮ್ಯಾಂಡಿನವರೂ ಪುರಸ್ಕರಿಸಿ, ಕರ್ಣಾಟಕ ರಾಜ್ಯವಾಗಬೇಕು,--ಅದಕ್ಕೆ ಮೈಸೂರು ಎಂಬ ಹೆಸರು ಇಡಬೇಕೆಂಬುದಾಗಿ ಒಪ್ಪಿ ಈ ಮಸೂದೆಯನ್ನು ನಮಗೆ ಕಳುಹಿಸಿಕೊಟ್ಟಿದ್ದಾರೆ. ಇದರಲ್ಲಿ ಒಂದು ಸಂತೋಷವಾದ ಅಂಶವೇನೆಂದರೆ, ಬಳ್ಳಾರಿಯ ಏಳು ತಾಲ್ಲೂಕುಗಳನ್ನು ಮೈಸೂರಿನಲ್ಲಿಯೇ ಉಳಿಸಿದ್ದು. ಇದಕ್ಕೆ ಕೇಂದ್ರ ಸರ್ಕಾರದವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಬಳ್ಳಾರಿಯ ವಿಷಯವಾಗಿ ಇದುವರೆಗೂ ಬಹಳ ತೊಡಕುಗಳಿದ್ದವು. ಅದು ಒಂದು ರೀತಿಯ ಕಳವಳವನ್ನುಂಟುಮಾಡಿತ್ತು. ಹಿಂದೆ ಬಳ್ಳಾರಿಯ ವಿಷಯದಲ್ಲಿ ಬಹಳ ಕೂಲಂಕಷವಾಗಿ ಪರಿಶೀಲನೆಮಾಡಿ ಇಬ್ಬರು ಜಡ್ಜಿಗಳು ಅಭಿಪ್ರಾಯವನ್ನು ಕೊಟ್ಟನಂತರ ಮೈಸೂರಿನವರು ಕೇಳದೆಯೇ ಕೇಂದ್ರ ಸರ್ಕಾರದವರು ಬಳ್ಳಾರಿ ಜಿಲ್ಲೆಯ ಆಡಳಿತವನ್ನು ಮೈಸೂರಿಗೆ ವಹಿಸಿಕೊಟ್ಟರು. ಆದರೆ ಮತ್ತೆ ಪ್ರಾಂತಗಳ ಪುನರ್ವಿಂಗಡಣೆಯ ಸಂಬಂಧದಲ್ಲಿ ನೇಮಕವಾಗಿದ್ದ ಮಂಡಳಿಯವರು (States Reorganisation Commission) ಏನೋ ಒಂದು ಕಾರಣದಿಂದ ಅಥವಾ ಸರಿಯಾದ ಅಂಕಿ ಅಂಶಗಳನ್ನು ಅವರ ಮುಂದೆ ಇಡದೆ ಇದ್ದುದರಿಂದಲೋ ಏನೋ, ಬಳ್ಳಾರಿಯ ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೆ ಕೊಡಬೇಕು ಎಂಬುದಾಗಿ ಶಿಫಾರ್ಸು ಮಾಡಿದರು. ಆ ವಿಷಯವಾಗಿ ಬಹಳವಾಗಿ ಕಳವಳ ಉಂಟಾಗಿತ್ತು. ಒಂದು ರೀತಿಯಲ್ಲಿ ಆತ್ಮಗೌರವಕ್ಕೆ ಧಕ್ಕೆ ಬಂದಂತಿತ್ತು. ಹಿಂದೆ ಬಳ್ಳಾರಿ ಜಿಲ್ಲೆಯು ಮೈಸೂರಿಗೆ ಸೇರಿದಾಗ ಎಷ್ಟು ಜನ ವಂದನೆಗಳನ್ನರ್ಪಿಸಿದರೋ, ಎಷ್ಟು ಜನಕ್ಕೆ ಸಂತೋಷವಾಗಿತ್ತೋ, ಅವರಮೇಲೆ ಒಂದು ರೀತಿಯ ಮುಗಿಲು ಎದ್ದಂತಾಗಿತ್ತು. ಆದರೆ ಕೇಂದ್ರ ಸರ್ಕಾರದವರು ನ್ಯಾಯಾನ್ಯಾಯವನ್ನು ಪರಿಶೋಧಿಸಿ ಬಳ್ಳಾರಿ ಜಿಲ್ಲೆಯು ಈಗಿರುವ ಹಾಗೆಯೇ ಮೈಸೂರಿನಲ್ಲಿಯೇ ಇರಬೇಕೆಂದು ತೀರ್ಪು ಕೊಟ್ಟಿದ್ದು ಬಹಳ ಸಂತೋಷಕರವಾದದ್ದು ಮತ್ತು ನ್ಯಾಯವನ್ನು ಮಾಡಿದ್ದಾರೆ. ಅದಕ್ಕೋಸ್ಕರವಾಗಿ ಈ ಸಭೆಯ ಪರವಾಗಿ ಇದಕ್ಕೆ ಸಂಬಂಧಪಟ್ಟ ಎಲ್ಲ ಜನಗಳ ಪರವಾಗಿ ನಾನು ಕೇಂದ್ರ ಸರ್ಕಾರಕ್ಕೆ ವಂದನೆಗಳನ್ನು ಅರ್ಪಿಸಬೇಕಾಗಿದೆ.

ಮುಖ್ಯವಾದದ್ದೇನೆಂದರೆ, ಬಳ್ಳಾರಿಯ ವಿಷಯವಾಗಿ ಇಷ್ಟು ಕಳವಳಕ್ಕೆ ಕಾರಣವಾದದ್ದು ತುಂಗಭದ್ರ ಪ್ರಾಜೆಕ್ಟ್. ತುಂಗಭದ್ರ ಜಲಾಶಯದ ವಿಷಯವಾಗಿ ಮೈಸೂರಿನವರಿಗೂ ಮತ್ತು ಆಂಧ್ರದವರಿಗೂ ಒಬ್ಬರಿಗೊಬ್ಬರಿಗೆ ಒಂದು ತರಹ ಭಿನ್ನಾಭಿಪ್ರಾಯ ಎಲ್ಲಿ ಬರುತ್ತದೆಯೋ ಮತ್ತು ಆ ಭಿನ್ನಾಭಿಪ್ರಾಯದಿಂದ ಮುಂದೆ ಕೆಲಸ ಕಾರ್ಯರೂಪಕ್ಕೆ ಬರುವುದಕ್ಕೆ ಎಲ್ಲಿ ತೊಂದರೆಯುಂಟಾಗುತ್ತವೆಯೋ ಎಂಬ ಒಂದು ದೊಡ್ಡ ಸಮಸ್ಯೆ ಒಂದು ಅನುಮಾನ, ಇದೇ ಈ ಕಳವಳಕ್ಕೆ ಕಾರಣ ಎಂದು ಎಲ್ಲರಿಗೂ ಗೊತ್ತು. ಆದರೆ ಇಷ್ಟು ಮಾತ್ರ ಹೇಳಬಲ್ಲೆ. ಮೈಸೂರಿಗೂ ಮತ್ತು ಇತರ ಪ್ರಾಂತಗಳಿಗೂ ನೀರಿನ ವಿಷಯವಾಗಿ, ಜಲಾಶಯಗಳ ವಿಷಯವಾಗಿ ಎಷ್ಟೋ ಒಪ್ಪಂದಗಳು ಆಗಿವೆ. ಮದರಾಸಿಗೂ ಮತ್ತು ಮೈಸೂರಿಗೂ ಕಾವೇರೀನದಿಯ ನೀರಿನ ವಿಷಯವಾಗಿ ಒಪ್ಪಂದ ನಡೆದು, ಮೈಸೂರಿಗೂ ಮತ್ತ ಬೊಂಬಾಯಿಗೂ ಜೋಗ್ ಜಲಾಶಯದ ವಿಷಯವಾಗಿ ಒಪ್ಪಂದ ನಡೆದು ಇದುವರೆಗೂ ಈ ಪ್ರಾಂತಗಳಿಗೆ ನೀರಿನ ವಿಷಯದಲ್ಲಿ common interest ಇದ್ದರೂ ಕೂಡ ಯಾವ ತರಹ ಭಿನ್ನಾಭಿಪ್ರಾಯವೂ ಬಂದಿಲ್ಲ. ಒಬ್ಬರಿಗೊಬ್ಬರಿಗೆ ಅನುಮಾನಪಡಬೇಕಾದ ಪ್ರಸಂಗವೇ ಬರಲಿಲ್ಲ. ಕಾವೇರಿ ನದಿಯಿಂದ ನಮಗೆ ನೀರು ಸ್ವಲ್ಪ ಬರುತ್ತಿದ್ದರೂ ಮದರಾಸಿಗೂ ಸಹ ನಾವು ಎಷ್ಟೋ ಮನ್ನಣೆ ಕೊಡುತ್ತೇವೆ. ಹೀಗಿರುವಾಗ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿದರೆ ತುಂಗಭದ್ರ ನೀರನ್ನೆಲ್ಲ ಮೈಸೂರಿನವರೇ ಉಪಯೋಗಿಸಿಕೊಳ್ಳುತ್ತಾರೆ ಎಂಬ ಒಂದು ಅಭಿಪ್ರಾಯವನ್ನು ಆಂಧ್ರದವರು ಹೊಂದುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಅಗ್ರಿಮೆಂಟ್ ಇದೆ, ಒಪ್ಪಂದವಿದೆ, ಎಲ್ಲವೂ ಇವೆ. ಅವರಿಗೆ ಎಷ್ಟರಮಟ್ಟಿಗೆ ಬಾಧ್ಯತೆ ಇದೆಯೋ ಅಷ್ಟೇ ಮೈಸೂರು ಸರ್ಕಾರಕ್ಕೂ ಇದೆ. ಆದರೆ ಅವರ ಹಕ್ಕು ಬಾಧ್ಯತೆಗಳಿಗೆ ಮತ್ತು ಅವರ ಕೆಲಸಕಾರ್ಯಗಳಿಗೆ ಧಕ್ಕೆ ಬರುವುದಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆ. ಇನ್ನೊಂದು ಮುಖ್ಯವಾದ ವಿಷಯವೆಂದರೆ, ರಾಯಚೂರು ಮೈಸೂರು ಸಂಸ್ಥಾನಕ್ಕೆ ಬರುತ್ತದೆ. ತುಂಗಭದ್ರ ಜಲಾಶಯದ ಉತ್ತರ ಭಾಗ ಸಂಪೂರ್ಣವಾಗಿ ಎಂದರೆ ಅರ್ಧಭಾಗದ ನೀರಿನ ಹಕ್ಕುಬಾಧ್ಯತೆ ಮೈಸೂರಿಗೇ ಬರುತ್ತದೆ. ಮತ್ತು ಇನ್ನೊಂದುಕಡೆ ಕಾಲುಭಾಗದ ಹಕ್ಕುಬಾಧ್ಯತೆ ಮೈಸೂರಿಗೇ ಬರುತ್ತದೆ. ಅಂದರೆ ಒಟ್ಟಿನಲ್ಲಿ ಮುಕ್ಕಾಲುಭಾಗದ ಹಕ್ಕುಬಾಧ್ಯತೆ ಮೈಸೂರಿಗೇ ಸೇರುವುದು. ಆದುದರಿಂದ ಮೈಸೂರಿನವರಿಗೆ ತುಂಗಭದ್ರಾ ಅಣೆಕಟ್ಟಿನ ವಿಚಾರದಲ್ಲಿ ಹೆಚ್ಚಿನ ಅಭಿಮಾನವಿರುತ್ತದೆಂದು ಎಲ್ಲರೂ ಹೇಳಬೇಕಾದದ್ದೇ. ಇದರಿಂದ ಮೈಸೂರಿನವರಿಗೆ ತುಂಗಭದ್ರಾ ಜಲಾಶಯದ ಮೇಲೆ ಹೆಚ್ಚಿನ ಅಧಿಕಾರವಿರಬೇಕು. ಈ ಎಲ್ಲ ದೃಷ್ಟಿಗಳಿಂದಲೂ ಬಳ್ಳಾರಿಯನ್ನು ಮೈಸೂರಿಗೇ ಕೊಟ್ಟಿರುವುದು ಒಳ್ಳೆಯ ಕೆಲಸ, ಬಹಳ ಉತ್ತಮವಾದದ್ದು ಎಂದು ಹೇಳಬೇಕಾಗಿದೆ.

ಮುಖ್ಯಮಂತ್ರಿಗಳು ದಕ್ಷಿಣ ಪ್ರದೇಶದ ವಿಷಯವಾಗಿ ಬಹಳ ಸ್ಥೂಲವಾಗಿ ಪ್ರಶ್ನೆಮಾಡಿದ್ದಾರೆ. ದಕ್ಷಿಣ ಪ್ರದೇಶದ ವಿಷಯವಾಗಲಿ, ಉತ್ತರ ಪ್ರದೇಶದ ವಿಷಯವಾಗಲಿ, ಪಶ್ಚಿಮ ಪ್ರದೇಶದ ವಿಷಯವಾಗಲಿ, ಈ ಸಮಸ್ಯೆಗಳು ಹೇಗೆ ಉದ್ಭವವಾದವು ಎಂಬುದನ್ನು ತಿಳಿದುಕೊಳ್ಳಲಾರೆ. ಈ ಸಮಸ್ಯೆಯನ್ನು ಇಷ್ಟು ತೀವ್ರವಾಗಿ ಇಂಡಿಯಾ ದೇಶದೆಲ್ಲೆಲ್ಲ ಜನಗಳ ಮುಂದೆ ಇಟ್ಟುದಕ್ಕೆ ನಾನು ಸಂತೋಷಪಡಲಾರೆ. ಈಗಾಗಲೇ ನಾವು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ ಮತ್ತು ಬಗೆಹರಿಸಬೇಕಾಗಿದೆ. ಈ ಪ್ರಾಂತ ಪುನರ್ವಿಂಗಡಣೆ ಸಮಸ್ಯೆ ಬಹಳ ಕಠಿಣವಾದದ್ದು ಮತ್ತು ತೀಕ್ಷ್ಣವಾದದ್ದು. ಆ ಸಮಸ್ಯೆಯನ್ನ ಬಗೆಹರಿಸಿಕೊಂಡರೆ ಸಾಕು. ಆದರೆ ಇಂಡಿಯಾ ಸರ್ಕಾರದವರು ಸಮಸ್ಯೆಯಮೇಲೆ ಸಮಸ್ಯೆಯನ್ನು ತಂದೊಡ್ಡುವುದು ಅಷ್ಟು ಸಮರ್ಪಕವಾಗಿ ಕಾಣುವುದಿಲ್ಲ. ಪ್ರದೇಶಗಳನ್ನು ಮಾಡುವ ಸಮಸ್ಯೆಗಳು ಯಾವ ಕಾರಣದಿಂದ, ಯಾವ ಸಂದರ್ಭದಲ್ಲಿ ದೇಶದ ಮುಂದೆ ಬಂದವು ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತು. ಪ್ರಾಂತ ವಿಂಗಡಣೆ ಸಮಿತಿಯ ವರದಿಯು ಬಂದನಂತರ ಅದು ದೇಶದಲ್ಲಿ ಸ್ವಲ್ಪ ಕಳವಳವನ್ನುಂಟುಮಾಡಿತು. ಕೆಲವು ಪ್ರಾಂತಗಳಲ್ಲಿ ಒಂದು ರೀತಿಯ ಅಸಭ್ಯವರ್ತನೆ ನಡೆಯಿತು. ಅದರಿಂದ ಬಹಳ ಜಿಗುಪ್ಸೆ ಆಯಿತು. ಅದನ್ನು ಬಗೆಹರಿಸುವುದಕ್ಕೋಸ್ಕರ ಪ್ರದೇಶ ಪ್ರಾಂತಗಳನ್ನು ಮಾಡಬೇಕೆಂಬುದಾಗಿ ಒಂದು ಸಲಹೆ ಬಂದಿರಬಹುದು. ಆದರೆ ನಾನು ಹೇಳಬೇಕಾದದ್ದೇನೆಂದರೆ, ಮುಖ್ಯಮಂತಿಗಳು ಹೇಳಿದಹಾಗೆ, ಪ್ರದೇಶಗಳ ರಚನೆಯು ಹೊಸಸಮಸ್ಯೆಯಲ್ಲ. ಈಗ ಅನೇಕ ಪ್ರದೇಶಗಳು bi-lingual ಪ್ರದೇಶಗಳಾಗಿವೆ. ಕೇಂದ್ರಸರ್ಕಾರದವರ ಈ ಉದ್ದೇಶವೂ ಸಾಧುವಾದದ್ದು. ಕೇವಲ ಭಾಷಾವಾರು, ಪ್ರಾಂತಗಳನ್ನು ನಿರ್ಮಿಸಿದರೆ, ಒಂದು ಪ್ರಾಂತಕ್ಕೂ ಇನ್ನೊಂದು ಪ್ರಾಂತಕ್ಕೂ rivalry ಬರಬಹುದು. ಅದನ್ನು ಬಿಟ್ಟು ಮೂರು ನಾಲ್ಕು ಪ್ರಾಂತಗಳನ್ನು ಒಟ್ಟುಗೂಡಿಸಿದರೆ ಒಬ್ಬರಿಗೊಬ್ಬರಿಗೆ ಸೌಹಾರ್ದ, ಪರಸ್ಪರ ಪ್ರೀತಿ ದೇಶದಲ್ಲಿ ಹೆಚ್ಚಿನ ಐಕಮತ್ಯ ಬರುತ್ತದೆ ಎಂದು ಈ ಸಮಸ್ಯೆಯನ್ನು ನಮ್ಮ ಮುಂದೆ ಇಟ್ಟರು. ಬಂಗಾಳ ಮತ್ತು ಬಿಹಾರದ ಮುಖ್ಯಮಂತ್ರಿಗಳು ಮುಂದೆ ಬಂದು ನಾವಿಬ್ಬರೂ ಒಟ್ಟಿಗೆ ಬಾಳುತ್ತೇವೆ ಎಂದು ಯಾವಾಗ ಈ ಸಮಸ್ಯೆಯನ್ನು ಕೇಂದ್ರಸರ್ಕಾರದ ಮುಂದಿಟ್ಟರೋ ಆಗ ಈ ಪ್ರಶ್ನೆ ಉದ್ಭವಿಸಿತು. ನನ್ನ ಅಭಿಪ್ರಾಯದಲ್ಲಿ ಇದರ ಸಾಧಕಭಾಧಕಗಳನ್ನೂ ಮತ್ತು ಇದರಿಂದ ಪ್ರಯೋಜನ ಉಂಟೇ ಇಲ್ಲವೇ ಎಂಬುದನ್ನೂ ಸ್ವಲ್ಪ ಪರಿಶೀಲಿಸಿ ಈ ಸಮಸ್ಯೆಯನ್ನು ದೇಶದ ಮುಂದೆ ಇಟ್ಟಿದ್ದರೆ ಚೆನ್ನಾಗಿತ್ತು. ಆದರೆ ಒಂದು ದಿವಸ ಇಂಡಿಯಾ ದೇಶವನ್ನು ಐದು ಪ್ರದೇಶಗಳನ್ನಾಗಿ ಮಾಡುತ್ತಾರೆಂದು ಪತ್ರಿಕೆಗಳಲ್ಲಿ ಬಂದದ್ದರಿಂದ ಹೆಚ್ಚಿನ ತೊಡರುಂಟಾಯಿತು.

ಶ್ರೀ ಕೆ. ಹನುಮಂತಯ್ಯ.—ಅದರಿಂದ ಬಹಳ ಒಳ್ಳೆಯದಾಯಿತು.

ಶ್ರೀ ಜೆ. ಮಹಮ್ಮದ್ ಇಮಾಂ.—ಆದರೆ ಸಂಯುಕ್ತ ಪ್ರದೇಶಗಳ ರಚನೆ ಹೊಸದಲ್ಲ. ಈಗಿರುವುವೆಲ್ಲ bi-lingual ಅಥವಾ tri-lingual States. ಮದರಾಸು ಹಿಂದೆ tri-lingual States, ಆಗಿತ್ತು ಎಂದರೆ ತಮಿಳು, ತೆಲುಗು ಮತ್ತು ಕನ್ನಡ ಮಾತನಾಡುವ ಪ್ರದೇಶಗನ್ನೊಳಗೊಂಡಿತ್ತು. ಇದೇ ರೀತಿಯಾಗಿ ಮಧ್ಯಪ್ರದೇಶದಲ್ಲಿ ಮಹಾರಾಷ್ಟ್ರ ಮತ್ತು ಹಿಂದಿ ಮಾತನಾಡುವ ಪ್ರದೇಶಗಳು ಸೇರಿ ಅದು bi-lingual State ಆಗಿತ್ತು. ಬೊಂಬಾಯಿ ಪ್ರಾಂತದಲ್ಲಿ ಗುಜರಾತಿ, ಕನ್ನಡ, ಮಹರಾಷ್ಟ್ರ ಮೊದಲಾದ ಭಾಷೆಗಳನ್ನಾಡುವ ಭಾಗಗಳೂ ಸೇರಿದ್ದುವು. ಈ ರೀತಿಯಾಗಿರಬೇಕಾದರೆ, ಆ ಪ್ರಾಂತಗಳಲ್ಲಿ ಆಡಳಿತ ಅಷ್ಟು ಚೆನ್ನಾಗಿ ನಡೆಯುತ್ತಿರಲಿಲ್ಲ. There was dissatisfaction.

12 NOON.

ಈಗಿರುವ ಒಂದು ದೂರು ಏನೆಂದರೆ, ಬಹುಸಂಖ್ಯಾತರು ಅಲ್ಪಸಂಖ್ಯಾತರನ್ನು ಕಡೆಗಣ್ಣಿನಿಂದ ನೋಡುತ್ತಾರೆ, ಅವರಿಗೆ ಸ್ಥಾನಮಾನ ಸರಿಯಾಗಿ ಒದಗಿಸುವುದಿಲ್ಲ, ಬೇಕಾದ್ದನ್ನು ಸರಿಯಾಗಿ ಕೊಡುವುದಿಲ್ಲ ಎಂಬುದು. ಆದುದರಿಂದಲೇ ಸಮ್ಮಿಶ್ರ ಪ್ರಾಂತ ಸರಿಹೋಗುವುದಿಲ್ಲ, ಏಕ ಭಾಷಾ ಪ್ರಾಂತ ಮಾಡಬೇಕು ಎಂದು ಚಳವಳಿ ಪ್ರಾರಂಭವಾಯಿತು. ಎಲ್ಲ ಕಡೆಯೂ ಸಾಧ್ಯವಾದಷ್ಟು ಭಾಷಾವಾರು ಪ್ರಾಂತ ಮಾಡಬೇಕೆಂದು ಕೇಂದ್ರ ಸರ್ಕಾರದವರು ಪ್ರಯತ್ನಪಟ್ಟರು. ಅದರಂತೆ ಕೆಲಸ ಮುಂದುವರಿಯಿತು. ಈಗ ಪುನಃ ನಾವು ವಾಪಸು ಹೋಗಿ ಮೂರು ನಾಲ್ಕು ಪ್ರಾಂತಗಳನ್ನು ಸೇರಿಸಿ ಒಂದು ಪ್ರದೇಶ ಮಾಡುತ್ತೇವೆಂದು ಹೇಳಿದರೆ, again we will be going back to the same old troubles and creating all the old problems. ಬಹುಶಃ ಕೇಂದ್ರ ಸರ್ಕಾರದವರು ಜನರ ದೃಷ್ಟಿಯನ್ನು ಬೇರೆಕಡೆಗೆ ತಿರುಗಿಸಬೇಕೆಂಬ ಉದ್ದೇಶದಿಂದ ಹಾಗೆ ಹೇಳಿರಬಹುದು. ಮೂರು ನಾಲ್ಕು ಪ್ರಾಂತಗಳನ್ನು ಸೇರಿಸಿ ಬೈಲಿಂಗ್ವಲ್ ಅಥವಾ ಟ್ರೈಲಿಂಗ್ವಲ್ ಅಥವಾ ಕ್ವಾಡ್ರಿಲಿಂಗ್ವಲ್ ಸ್ಟೇಟ್ ಮಾಡಬೇಕೆಂಬ ಅಭಿಪ್ರಾಯ ಯಾರಿಗೂ ಇಲ್ಲ. ಅಲ್ಲದೆ ಮದರಾಸಿನವರು ಇಷ್ಟಪಡುವುದಿಲ್ಲ, ಕೇರಳದವರು ಅಭಿಪ್ರಾಯ ವ್ಯಕ್ತಪಡಿಸಿಲ್ಲ, ಆಂಧ್ರದವರು ಅಭಿಪ್ರಾಯ ವ್ಯಕ್ತಪಡಿಸಿಲ್ಲ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಇದರಿಂದ ಒಂದು ಅನುಮಾನ ಬಂತು; ಮಧರಾಸು ಒಪ್ಪಿಲ್ಲ, ಕೇರಳ ಒಪ್ಪಿಲ್ಲ, ಆದ್ದರಿಂದ ನಾವೂ ಒಪ್ಪಿಲ್ಲ ಎಂಬುದು ಮುಖ್ಯಮಂತ್ರಿಗಳ ವಾದ. ಇದರಿಂದ ಒಂದು ಪಕ್ಷ ಅವರು ಒಪ್ಪಿದರೆ ಮೈಸೂರೂ ಒಪ್ಪಿಕೊಳ್ಳಬಹುದು ಎಂದು ಅರ್ಥವಾಯಿತು. ಅವರು ಒಪ್ಪಿದರೆ ಮೈಸೂರೂ ಸಹ ಅಂಥ ಪ್ರದೇಶವನ್ನು ರಚಿಸುವ ಅಭಿಪ್ರಾಯವನ್ನು ಒಪ್ಪುವುದಕ್ಕೆ ಸಿದ್ಧ ಎಂಬ ಅಭಿಪ್ರಾಯವಿದೆ. ಆದರೆ ಮೊದಲನೆಯದು ನಾವು ಹೋಗಿ ಅವರ ಯಾಚನೆ ಏಕೆ ಮಾಡಬೇಕು ? ಎರಡನೆಯದಾಗಿ, ಒಂದು ಪಕ್ಷ ಮದರಾಸು ಮತ್ತು ಕೇರಳ ಒಪ್ಪಿದರೂ ಆ ಪ್ರದೇಶಕ್ಕೆ ಮೈಸೂರು ಈಗಿನ ಪರಿಸ್ಥಿತಿಯಲ್ಲಿ ಸೇರುವುದು ಉಚಿತವಾದುದಲ್ಲ. ಏಕೆಂದರೆ ಇದರಿಂದ ಯಾವ ಧ್ಯೇಯ ಇಷ್ಟು ದಿನಗಳಿಂದ ಜನರ ಮುಂದೆ ಇದೆಯೋ ಆ ಧ್ಯೇಯ ಸಾಧನೆಯಾಗುವುದಿಲ್ಲ ಮತ್ತು ಇದುವರೆಗೆ ಯಾವ ಸಮಸ್ಯೆ, ತೊಂದರೆ ಇದೆಯೋ ಅದನ್ನು ಮುಂದುವರಿಸಬೇಕಾಗುತ್ತದೆ. ಆದ್ದರಿಂದ ಈಗ ಸದ್ಯಕ್ಕೆ ನಾವು ಈ ಪ್ರಾದೇಶಿಕ ಪ್ರಶ್ನೆಯನ್ನು ತರುವುದು ಒಳ್ಳೆಯದಲ್ಲ. ಮೊದಲು ಪ್ರಾಂತಗಳೆಲ್ಲಾ ಆಗಲಿ. ಕೆಲವು ಕಾಲವಾದನಂತರ, ಮುಂದೆ ಹೇಗೆ ಯಾವ ರೀತಿ ಇರುತ್ತದೆ, ಯಾರ ಮನಸ್ಸು ಯಾವ ರೀತಿಯಿದೆ, ಇಂಡಿಯಾ ದೇಶದ ಸ್ಥಿತಿ ಯಾವ ರೀತಿಯಾಗಿರುತ್ತದೆ ಎಂದು ಅವಲೋಕಿಸಿ ಆಗ ಮಾಡಬಹುದೇ ಹೊರತು ಈಗ ನಾವು ಇಲ್ಲದ ತೊಂದರೆ ತಂದುಕೊಂಡು ದೇಶದ ಅಭಿವೃದ್ಧಿಗೆ ಧಕ್ಕೆ ತರುವುದು ಉಚಿತವಾಗಿ ಕಾಣುವುದಿಲ್ಲ. ಈಗ ಜೋನಲ್

(ಶ್ರೀ ಜೆ. ಮಹಮ್ಮದ್ ಇಮಾಂ.)

ಕರ್ಸ್ಪ್ಟಿಸಿಲ್ ವಿಷಯ ಹೇಳುವುದಿಲ್ಲ, ತಿದ್ದುಪಡಿ ತಂದಾಗ ಹೇಳುತ್ತೇನೆ.

ಇನ್ನೊಂದು ವಿಷಯವನ್ನು ನಾನು ಹೇಳಬೇಕಾಗಿದೆ. ಮೈಸೂರೆಂಬ ಹೆಸರನ್ನಿಡುವಾಗ ಕೇಂದ್ರ ಸರ್ಕಾರದವರೂ ಒಪ್ಪಿದರು, ಕರ್ಣಾಟಕವೆಂಬ ಪದ ಬಂದಮೇಲೆ ಮೈಸೂರು ಎಂಬ ಹೆಸರು ಬಂದಿದೆ, ಇದು ಉತ್ತರ ಕರ್ಣಾಟಕದಲ್ಲಿರುವವರಿಗೆ, ಮುಂದೆ ಮೈಸೂರಿಗೆ ಬಂದು ಸೇರುವವರಿಗೆ ಒಂದು ರೀತಿಯಲ್ಲಿ ಉದ್ರೇಕ ಉಂಟು ಮಾಡುತ್ತದೆಯೋ ಏನೋ ಎಂದು ಮುಖ್ಯ ಮಂತ್ರಿಗಳು ಎಚ್ಚರಿಕೆ ಕೊಟ್ಟರು. ಈ ರೀತಿ ಮಾಡಿದರೆ ಒಳ್ಳೆಯದಲ್ಲ, ನಿಜ. ನಾನೂ ಮೈಸೂರು ದೇಶದಲ್ಲೇ ವಾಸಮಾಡುವವನು. ನಾವೆಲ್ಲರೂ ಮೈಸೂರು ದೇಶಕ್ಕೆ ಇತರ ಪ್ರಾಂತಗಳನ್ನು ಸೇರಿಸುವಾಗ ಮೈಸೂರು ಎಂಬ ಹೆಸರೇ ಇರಬೇಕೆಂದು ಅಭಿಪ್ರಾಯ ಪಟ್ಟೆವು. ಆದರೆ ಒಂದು ವಿಷಯವನ್ನು ಮಾತ್ರ ಮುಖ್ಯ ಮಂತ್ರಿಗಳು ಗಮನಿಸಬೇಕು. ಅವರನ್ನು ಈ ವಿಷಯ ದಲ್ಲಿ ಟೀಕೆ ಮಾಡುವುದು ಅನಾವಶ್ಯಕ. ಮೊದಲಿನಿಂದ, ಕರ್ಣಾಟಕ ಏಕೀಕರಣ ಚಳವಳಿ ಹುಟ್ಟಿದಲ್ಲಾಗಾಯ್ತು ಕರ್ಣಾಟಕ ಎಂಬ ಹೆಸರು ಇದುವರೆಗೂ ಬಂತು. ಕರ್ಣಾಟಕದ ಸಿಗ್ನಿಫಿಕೆನ್ಸ್ ಇದೆಯೆಂದು ಇವರು ಹೇಳಿದ್ದಾರೆ. ಅದರ ಸಿಗ್ನಿಫಿಕೆನ್ಸ್ ಏನೆಂದರೆ ಕನ್ನಡ ಭಾಷೆ ಎಲ್ಲೆಲ್ಲಿ ಜಾರಿಯಲ್ಲಿದೆಯೋ, ಕನ್ನಡ ಸಂಸ್ಕೃತಿ ಎಲ್ಲೆಲ್ಲಿ ಜಾರಿಯಲ್ಲಿದೆಯೋ, ಆ ಪ್ರಾಂತಗಳೆಲ್ಲಾ ಸೇರಿ ಕರ್ಣಾಟಕ ಅಥವಾ ಮೈಸೂರು ಆಗುವುದಕ್ಕೆ ಬಹುಮಟ್ಟಿಗೆ ಮನ್ನಣೆಯಿದೆ. ಮೊನ್ನೆ ಅಸೆಂಬ್ಲಿಯಲ್ಲಿ ನಿರ್ಣಯ ಸಹ ಆಗಿದೆ. ಕರ್ಣಾಟಕ ಎಂಬ ಹೆಸರಿದ್ದರೆ ಒಂದು ರೀತಿ ಮೈಸೂರು ಪ್ರಜೆಗೆ ಅತೃಪ್ತಿ, ಅದಕ್ಕೆ ಬದಲಾಗಿ ದೊಡ್ಡ ಮೈಸೂರು ಎಂದು ಕರೆದರೆ ಸಮಾಧಾನವಿರುತ್ತದೆ ಎಂದು ತೀರ್ಮಾನ ಮಾಡಿರುವುದು ನಿಜವಾಗಿಯೂ ಇತರರಿಗೆ ಸಂಕಟವನ್ನುಂಟುಮಾಡಿದೆಯೆಂದು ಯಾರೂ ಸಹ ಭಾವನೆ ಮಾಡಬೇಕಾಗಿಲ್ಲ. ಕರ್ಣಾಟಕವೆಂಬ ಹೆಸರನ್ನು ತೆಗೆದು ಏಕಾಏಕಿ ಮೈಸೂರು ಎಂದು ಕರೆದುದರಿಂದ ಒಂದು ರೀತಿಯಲ್ಲಿ ಸಂಕಟವಾಗಿರಬಹುದು. ಎರಡನೆಯದು ಮೈಸೂರು ಎಂಬ ಹೆಸರನ್ನು ಚುನಾಯಿಸುವಾಗ ಮುಂಚಿತವಾಗಿ ಮುಂದಿನ ಕರ್ಣಾಟಕದಲ್ಲಿ ಮೈಸೂರಿನವರಲ್ಲದೆ, ಮೈಸೂರೇತರರ ಯಾರು ಮೈಸೂರೊಂದಿಗೆ ಸೇರುವರೋ ಅವರು ಜವಾಬ್ದಾರಿ ವಹಿಸಬೇಕಾಗುತ್ತದೆ, ದಕ್ಷತೆಗೆ ಎಲ್ಲರೂ ಜವಾಬ್ದಾರರು, ಎಂಬುದನ್ನು ಅರಿತು, ಹೆಸರನ್ನು ಬದಲಾಯಿಸುವುದಕ್ಕೆ ಮುಂಚೆ, ಮುಖ್ಯ ಮಂತ್ರಿಗಳು ಮೈಸೂರು ದೇಶದ ಹೊರಗಿರುವ ಮುಖಂಡರುಗಳನ್ನೂ ಕರೆಸಿ ಸಮಾಲೋಚನೆ ಮಾಡಿ ಮೈಸೂರಿನ ವೈಶಿಷ್ಟ್ಯ ಮತ್ತು ಕೀರ್ತಿಯನ್ನು ಉಳಿಸಲು ಕರ್ಣಾಟಕ ಎಂಬುದಕ್ಕೆ ಬದಲಾಗಿ ಮೈಸೂರು ಎಂಬ ಹೆಸರನ್ನೇ ಇಡೋಣ ಎಂದು ಅಭಿಪ್ರಾಯ ಸೂಚಿಸಿದ್ದರೆ ಬಹುಶಃ ಒಂದು ಗೌರವ ನಮಗೆ ಬರುತ್ತಿತ್ತು, ಔಚಿತ್ಯವಿರುತ್ತಿತ್ತು, ನಮ್ಮೊಡನೆ ಸೇರಲಿರುವವರ ಆತ್ಮ ಗೌರವವೂ ಸಹ ಉಳಿಯುತ್ತಿತ್ತು. ಆಗಲೇ ಈ ವಿಷಯ ಹೊಳೆಯಿತು. ಆದರೆ ಎಸ್.ಆರ್. ಬಿಲ್ಲು ಬರಲಿ ಎಂದು ಸುಮ್ಮನಿದ್ದೆ. ಆ ರೀತಿ ಒಂದು ಕ್ರಮವನ್ನು ಅನುಸರಿಸಿ ಮಾಡಿದ್ದರೆ ಬಹುಶಃ ಅವರೂ ಒಪ್ಪುತ್ತಿದ್ದರು, ನಾವೂ ಒಪ್ಪುತ್ತಿದ್ದೆವು. ಆಗ ಸರ್ವಾನುಮತದಿಂದ ಮೈಸೂರು ಎಂಬ ಹೆಸರಿಗೇ ಒಪ್ಪಿಗೆ ದೊರೆಯುತ್ತಿತ್ತು. ಎಲ್ಲರೂ ಸೌಹಾರ್ದದಿಂದ ಮುಂದಿನ ಆಡಳಿತವನ್ನು ಜವಾಬ್ದಾರಿಯುತವಾಗಿ ವಹಿಸಿ ಯಶಸ್ವಿಯಾಗಿ ನಡೆಸಬೇಕಾಗಿದೆ. ಭವಿಷ್ಯವನ್ನು ಬದಲಾಯಿಸುವ ವಿಷಯದಲ್ಲಿ ದೊಡ್ಡ ದೊಡ್ಡ ಸಮಸ್ಯೆಗಳನ್ನು ಎದುರಿಸುವಾಗ ನಮ್ಮಲ್ಲಿಗೆ ಬರಲಿರುವವರಲ್ಲೂ ಇರುವ ದೊಡ್ಡ ದೊಡ್ಡ ಎಂ.ಎಲ್.ಎ. ಗಳನ್ನು, ಪಿ.ಸಿ.ಸಿ. ಯವರನ್ನು ಕರೆಸಿ ಆಲೋಚಿಸಿ ಅವರ ಮನಸ್ಸಿಗೆ ನೋವುಂಟಾಗಿದ್ದರೆ ಪರಿಹರಿಸೋಣ. ಹಿಂದೆ ಕರ್ಣಾಟಕವೆಂಬ ಹೆಸರಿರಬೇಕೆಂದು ಹೇಳುತ್ತಿದ್ದರು. ಈಗ ಕೇಂದ್ರಸರ್ಕಾರದವರು ಮೈಸೂರು ಎಂದು ಕರೆದಿದ್ದಾರೆ. ಒಟ್ಟಿಗೆ ಎಲ್ಲರೂ ಸೇರಿದಾಗ ಸೌಹಾರ್ದದಿಂದ ನಡೆಯಬೇಕಾದ್ದದ್ದು ಅತ್ಯಾವಶ್ಯಕ. ಆದ್ದರಿಂದ ಮೈಸೂರು ಎಂಬ ಹೆಸರನ್ನು ಅವರು ಒಪ್ಪುವುದಿಲ್ಲವೆಂದು ಮುಖ್ಯಮಂತ್ರಿಗಳು ಉದ್ರೇಕಗೊಳ್ಳಬೇಕಾಗಿಲ್ಲವೆಂದು ಎಚ್ಚರಿಕೆ ಕೊಡಬೇಕಾದ ಆವಶ್ಯಕತೆಯಿಲ್ಲ.

ಇನ್ನೊಂದು ಸಂಬಳಸಾರಿಗೆ ವಿಚಾರವಾಗಿ ಮುಖ್ಯ ಮಂತ್ರಿಗಳು ಹೇಳಿದರು. ಅದರಲ್ಲಿ ಅನೇಕ ವಿಷಯಗಳನ್ನು ನಾನು ಒಪ್ಪುತ್ತೇನೆ. ಬಜೆಟ್ ಭಾಷಣದಲ್ಲೇ ನಾನು ಈ ವಿಷಯ ಹೇಳಿದೆ. ನಮ್ಮ ಆರ್ಥಿಕ ಸ್ಥಿತಿಯನ್ನು ಗಣನೆಗೆತೆಗೆದುಕೊಂಡರೆ ಮತ್ತು ಬಜೆಟ್ ಅಂದಾಜಿನ ಆಯವ್ಯಯವನ್ನು ಸರಿದೂಗಿಸಬೇಕಾದರೆ ಬಹುಶಃ ಎಲ್ಲ ಅಧಿಕಾರಿಗಳೂ ಎಲ್ಲ ಸರ್ಕಾರಿ ನೌಕರರೂ ಅವರ ಸಂಬಳಗಳನ್ನು ಕಡಮೆಮಾಡಿಕೊಳ್ಳಬೇಕಾದ ಕಾಲ ಬರಬಹುದೆಂದು ಹೇಳಿದೆ. ಈಗ ಪ್ರಾಂತ ಪುನರ್ವಿಂಗಡಣೆಯಿಂದ ಇದೊಂದು ದೊಡ್ಡ ಸಮಸ್ಯೆಯಾಗಿದೆ. ಬೊಂಬಾಯಿನಲ್ಲಿ, ಮದರಾಸಿನಲ್ಲಿ ಮತ್ತು ಮೊದಮೊದಲು ಪ್ರೆಸಿಡೆನ್ಸಿಯಿದ್ದ ಕಡೆ ಸಂಬಳ ಜಾಸ್ತಿಯೇ ಇದೆ. ಅಲ್ಲಿರುವ ಇಂಡಿಯನ್ ಆಫೀಸರುಗಳು, ಇಂಪೀರಿಯಲ್ ಸರ್ವಿಸ್‌ನಲ್ಲಿದ್ದವರು, ಐ.ಎ.ಎಸ್. ಸರ್ವಿಸ್‌ನಲ್ಲಿರುವವರು ಇಂಥ ಆಫೀಸರುಗಳಿಗೆಲ್ಲಾ ಸಂಬಳ ಜಾಸ್ತಿ. ಅವರಿಗೆ ಹೋಲಿಸಿದರೆ ಮೈಸೂರಿನವರಿಗೆ ಸಂಬಳ ಕಡಮೆ, ಮೈಸೂರಿಗೆ ಹೊರಗಿನಿಂದ ಬರುವವರು ಮೈಸೂರಿನಲ್ಲಿ ಈಗ ಏನು ಸಂಬಳ ಕೊಡುತ್ತೇವೋ ಅದನ್ನು ಒಪ್ಪಿಕೊಳ್ಳುವ ಹಾಗಿದ್ದರೆ ಅಂಥವರು ಮಾತ್ರ ಬರಬಹುದು ಎಂದು ಮುಖ್ಯಮಂತ್ರಿಗಳು ಹೇಳಿದರು. ನಾನು ಅದನ್ನು ಒಪ್ಪುತ್ತೇನೆ. ಇಲ್ಲಿಗೆ ಬರುವ ಸರ್ಕಾರಿ ನೌಕರಿಯಲ್ಲಿರುವವರೆಲ್ಲರೂ ಬರೀ ಸಂಬಳದ ವಿಷಯವಾಗಿ ಯೋಚನೆ ಮಾಡಕೂಡದು; ಈ ದೇಶದ ಆರ್ಥಿಕ ಸ್ಥಿತಿ ಯಾವರೀತಿಯಿದೆಯೋ ಅದಕ್ಕನುಗುಣವಾಗಿ ಅವರಿಗೆ ಎಷ್ಟು ಸಂಬಳ ಕೊಡಬಹುದು ಎಂಬುದನ್ನು ಅವರು ಅರಿತುಕೊಳ್ಳಬೇಕು. ನಾವು ಒಂದು ಪಕ್ಷ ನಮ್ಮ ಸೀಮೆಯಲ್ಲಿರುವ ಆಫೀಸರುಗಳ ಸಂಬಳವನ್ನು ಅದೇ ಮಟ್ಟದಲ್ಲಿಟ್ಟರೂ ಈ ಸಮಸ್ಯೆ ಬಗೆಹರಿಯುವುದಿಲ್ಲ. ಇಂಡಿಯಾ ದೇಶವೆಲ್ಲಾ ಒಂದೇ; ಕೆಲವರಿಗೆ ಕಡಿಮೆ ಸಂಬಳ, ಕೆಲವರಿಗೆ ಜಾಸ್ತಿ, ಸಂಬಳ ಇದ್ದರೆ ಸಮಾಧಾನವಿರುವುದಿಲ್ಲ. ಪಕ್ಕದ ಮನೆಯಲ್ಲಿ ಒಬ್ಬನಿಗೆ ಹೆಚ್ಚು ಸಂಬಳ ಬರುತ್ತಿದ್ದು ಅದೇ ಕೆಲಸಮಾಡುವ ಇನ್ನೊಬ್ಬನಿಗೆ ಕಡಮೆ ಸಂಬಳ, ಕಡಮೆ ಸೌಲಭ್ಯವಿದ್ದರೆ ಅವನ ಹೊಟ್ಟೆಯುರಿ ಮಾಯವಾಗುವುದಿಲ್ಲ. ಅದ್ದರಿಂದ ನಾವು ಸಲಹೆಮಾಡುವುದೇನೆಂದರೆ, ಕೇಂದ್ರ ಸರ್ಕಾರದವರು ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬರಬೇಕು. ಎಲ್ಲ ಪ್ರಾಂತಗಳೂ ಒಂದಾಗುವಾಗ ಒಂದೇ ರೀತಿಯಿರಬೇಕು. ಈಗ ಹೈಕೋರ್ಟ್ ಜಡ್ಜಿಗಳಿಗೆ ಒಂದೊಂದು ಪ್ರಾಂತದಲ್ಲಿ ಒಂದೊಂದು ರೀತಿಯ ಸಂಬಳವಿದೆ. ಮೈಸೂರಿನಲ್ಲಿ ಎರಡು ಸಾವಿರ ರೂಪಾಯಿಗಳು, ಮದರಾಸಿನಲ್ಲಿ ಮತ್ತು ಬಂಗಾಳದಲ್ಲಿ ಐದು ಸಾವಿರ ರೂಪಾಯಿಗಳು, ಅಸ್ಸಾಂನಲ್ಲಿ ಕಡಿಮೆ—ಹೀಗೆಲ್ಲಾ ಇದೆ. ಇಂಡಿಯಾ ದೇಶದಲ್ಲೆಲ್ಲ

ಹೈಕೋರ್ಟ್ ಜಡ್ಜಿಗಳಿಗೆ ಒಂದೇ ಸಮವಾದ ಸಂಬಳವಿರಬೇಕು, ಒಂದು ಹೈಕೋರ್ಟಿನಿಂದ ಇನ್ನೊಂದು ಹೈಕೋರ್ಟಿಗೆ ವರ್ಗಮಾಡುವ ಹಾಗಿರಬೇಕು, ಹೊರದೇಶದಿಂದ ಇಲ್ಲಿಗೆ ಬರುವ ಹಾಗಿರಬೇಕು.

Sri K. HANUMANTHAIYA.—It is on this basis of uniformity that the scales of pay are going up.

ಶ್ರಿ ಜೆ. ಮುಹಮ್ಮದ್ ಇಮಾಂ.—ಎರಡನೆಯದೇನೆಂದರೆ, ಸೋಷಿಯಲಿಸ್ಟಿಕ್ ಪ್ಯಾಟರ್ನ್ ಜಾರಿಗೆ ತರಬೇಕೆಂದಿದೆ. ದೊಡ್ಡ ದೊಡ್ಡ ಅಧಿಕಾರಿಗಳಿಗೆ ಇದನ್ನು ಅನ್ವಯಿಸಿದ ಹಾಗೆ ಕಾಣುವುದಿಲ್ಲ. ಯಾವ ಅಧಿಕಾರಿಯ ಸಂಬಳವನ್ನು ನಿಗದಿಮಾಡಬೇಕಾದರೂ ನಮ್ಮ ಸೀಮೆಯ ಆರ್ಥಿಕ ಸ್ಥಿತಿ, ಪರ್ ಕ್ಯಾಪಿಟಾ ಇನ್‌ಕಂ, ಜನರಿಗೆ ತೆರಿಗೆಕೊಡುವುದಕ್ಕಿರುವ ಶಕ್ತಿ, ನ್ಯಾಷನಲ್ ಇನ್‌ಕಮ್ಮಿಗೆ ಜನತೆ ಎಷ್ಟು ಕಾಂಟ್ರಿಬ್ಯೂಟ್ ಮಾಡಬಹುದು ಎಂಬುದನ್ನು ನೋಡಿ ಅದಕ್ಕನುಗುಣವಾಗಿ ಮಾಡಬೇಕು. There must be certain proportion. ಈಗ ಇಂಡಿಯಾ ದೇಶದಲ್ಲಿ ಒಬ್ಬ ಆಫೀಸರಿಗೆ ಆತನು ಅನುಕೂಲವಾಗಿ ಜೀವನ ನಡೆಸುವುದಕ್ಕೆ ಎಷ್ಟು ಸಂಬಳ ಕೊಡಬಹುದು ಎಂಬುದನ್ನು ಗಮನಿಸಿ ಸರಿಯಾದ ರೀತಿಯಲ್ಲಿ ನಮ್ಮ ಸೀಮೆಗೆ ತಕ್ಕ ಹಾಗೆ ಯೂನಿಫಾರಂ ಸ್ಕೇಲನ್ನು ಎಲ್ಲಾ ಕಡೆಯೂ ನಿಗದಿಮಾಡುವುದು ಉಚಿತವಾಗಿದೆ. ಐ. ಎ. ಎಸ್. ಆಫೀಸರುಗಳಿಗೆ ಎರಡು ಸಾವಿರ ರೂಪಾಯಿಗಳವರೆಗೆ ಸಂಬಳವಿದೆ. ಅದೇ ಕೆಲಸ ಮಾಡುವವರಿಗೆ ಮೈಸೂರು ದೇಶದಲ್ಲಿ 800 ರೂಪಾಯಿಗಳಿವೆ. ಐ. ಎ. ಎಸ್. ಸ್ಕೇಲ್ ಏಕೆ ತೆಗೆಯಬಾರದು ? ಲೋಕಲ್ ಆಫೀಸರುಗಳಿಗೂ ಅವರಿಗೂ ಏಕೆ ವ್ಯತ್ಯಾಸ ?

ಮುಖ್ಯ ಮಂತ್ರಿಗಳು, ನಾವುಗಳೆಲ್ಲರೂ ಒಂದೇ ಒಂದು ಧ್ಯೇಯದಿಂದ ದುಡಿಯಬೇಕು, ನಮ್ಮ ದೇಶದ ಹಿತ ದೃಷ್ಟಿಯಿಂದ ವರ್ತಿಸಬೇಕು ಎಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ ಈ ಪ್ರಾಂತಗಳಲ್ಲಿ, ಭಾಷಾವಾರು ಪ್ರಾಂತವೇ ಆಗಲಿ ಅಥವಾ ಬೇರೆ ರೀತಿಯೇ ಆಗಲಿ, ಒಂದು ಪ್ರಾಂತದಲ್ಲಿ ಹಣಕಾಸಿದ್ದರೂ ಸಹ ದೇಶದ ಸಾಲಿಡ್ಯಾರಿಟಿಗೆ ಯಾವ ವಿಧದಲ್ಲೂ ಧಕ್ಕೆ ಬರುವುದಿಲ್ಲ. ಈ ವಿಚಾರದಲ್ಲಿ ನನಗೆ ಸಂಪೂರ್ಣವಾದ ನಂಬಿಕೆಯಿದೆ. ಇದುವರೆಗೆ ಇಂಡಿಯಾ ದೇಶದಲ್ಲಿ ಭಿನ್ನಾಭಿಪ್ರಾಯ, ಅಪನಂಬಿಕೆ ಇತ್ತು ; ಪ್ರಾಂತಗಳಲ್ಲಿ ಭಿನ್ನಾಭಿಪ್ರಾಯ, ತೊಂದರೆ, ಹೆಟೆರೋಜಿನಿಟಿ ಇತ್ತು. ಪ್ರಾಂತ ಪುನರ್ವಿಂಗಡಣೆಯಾದ ನಂತರ ಹೋಮೋಜಿನಿಟಿ, ಒಂದೇ ತರಹ ಭಾಷೆ, ಸಂಸ್ಕೃತಿ ಇರುವುದರಿಂದ ಅಂತಹ ಕಲಹ ಮಾಯವಾಗುವುದಕ್ಕೆ, ಪ್ರಾಂತ ಅಭಿವೃದ್ಧಿಯಾಗುವುದಕ್ಕೆ ಒಂದು ತರಹ ಅವಕಾಶವಾಗುತ್ತದೆ. ಇದುವರೆಗೂ ಮದರಾಸು ಆಂಧ್ರ ಎಷ್ಟೋ ಸಲ ಒಟ್ಟಿಗಿದ್ದರೂ ಸಹ ಆಂಧ್ರರಿಗೂ ತಮಿಳರಿಗೂ ಜಗಳವಾಗುತ್ತಿತ್ತು. ಭಿನ್ನಾಭಿಪ್ರಾಯದಿಂದ ಅವರಲ್ಲಿ ಸರಿಸಮಾನವಾದ ದೃಷ್ಟಿಯಿರಲಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಬಂಗಾಳ ಮತ್ತು ಯು. ಪಿ. ಅಲ್ಲಿ ಭಿನ್ನಾಭಿಪ್ರಾಯ, ವ್ಯಾಜ್ಯ ಯಾವುದೂ ಇರಲಿಲ್ಲವೆ ?

ಶ್ರೀ ಜೆ. ಮುಹಮ್ಮದ್ ಇಮಾಂ—ನಾನು ಕಂಡ ಹಾಗೆ ಇಲ್ಲ. ಪೊನ್ನೆ ಎಸ್. ಆರ್. ಸಿ. ಕಮಿಷನ್ ಅವರು ವಿಭಾಗ ಮಾಡಕೂಡದು, ಒಟ್ಟಿಗೆ ಇರಬೇಕು ಎಂದು ಹೇಳಿದರು.

ಹೀಗೆ ಮಾಡಿದರೆ ಎಲ್ಲಕಡೆಗಳಲ್ಲಿಯೂ ಒಂದು ಭಾಷೆ, ಒಂದು ಸಂಸ್ಕೃತಿ ಇರಲು ಅವಕಾಶವಾಗುತ್ತದೆ. ಇದರಿಂದ ಮುಂದೆ ದೇಶದಲ್ಲಿ ಇಂಟರ್ನಲ್ ಟ್ರಬಲ್ಸ್ ಯಾವವೂ ಇರುವುದಿಲ್ಲ. ಆಗ ದೇಶದಲ್ಲಿರತಕ್ಕಂಥ ಎಲ್ಲ ಜನರಿಗೂ ತಮ್ಮ ಸರ್ವಶಕ್ತಿ ಸಾಮರ್ಥ್ಯಗಳನ್ನೂ ಉಪಯೋಗಿಸಿ ದೇಶವನ್ನು ಅಭಿವೃದ್ಧಿ ಸ್ಥಿತಿಗೆ ತರಲು ಇದರಿಂದ ತುಂಬ ಸಹಾಯವಾಗುತ್ತದೆ. ಇದರಿಂದ ದೇಶ ಜಾಗ್ರತೆ ಅಭಿವೃದ್ಧಿಗೆ ಬರಲು ಅವಕಾಶವಿದೆ. ಈ ರೀತಿ ಒಂದೊಂದು ಪ್ರಾಂತ್ಯದಲ್ಲಿರುವ ಜನರೂ ಒಂದು ಹೊಂದಾಣಿಕೆಯಿಂದ ಸಹಕರಿಸಿ ಅಣ್ಣತಮ್ಮಂದಿರಂತೆ ವರ್ತಿಸಲು ಅವಕಾಶವಿರುವುದರಿಂದ ಈ ಪ್ರಾಂತ್ಯ ಸರ್ಕಾರಗಳ ನೆಮ್ಮದಿಯ ವಿಚಾರದಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿ ಕಡಮೆಯಾಗುತ್ತದೆ. ಅಷ್ಟು ಹೆಚ್ಚಿಗೆ ನಿಗಾ ಕೊಡಬೇಕಾದ ಅವಶ್ಯಕತೆಯಿರುವುದಿಲ್ಲ. ಇದರಿಂದ ಜನರಲ್ಲಿರತಕ್ಕಂಥ ಭಿನ್ನಾಭಿಪ್ರಾಯಗಳೆಲ್ಲಾ ಮಾಯವಾಗುತ್ತವೆ, ದೇಶಾಭಿವೃದ್ಧಿಗೆ ಆಗ ಹೆಚ್ಚು ಅನುಕೂಲವಾಗುತ್ತದೆ. ಈಗ ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ನಮ್ಮ ಮನೆಗೆ ಯಾರಾದರೂ ಅತಿಥಿಗಳು ಬಂದರೆ ನಾವು ಅವರನ್ನು ಉಪಚರಿಸಬೇಕಾದದ್ದು ನಮ್ಮ ಕರ್ತವ್ಯ. ಹೀಗೆ ನಾವು ಮಾಡತಕ್ಕದ್ದು ಅಗತ್ಯ. ಇದರಿಂದ ಜನರಲ್ಲಿ ಪರಸ್ಪರ ಪ್ರೇಮ ಉಂಟಾಗುತ್ತದೆ. ನಾವು ಇತರರ ಬಗ್ಗೆ ಹೇಗೆ ವರ್ತಿಸುತ್ತೇವೋ ಹಾಗೆಯೇ ಇತರರೂ ನಮ್ಮನ್ನು ಪ್ರೀತಿಸುತ್ತಾರೆ. ಇದರಿಂದ ದೇಶಾಭಿವೃದ್ಧಿ ಬಗ್ಗೆ ಇರತಕ್ಕ ಸಂಶಯಗಳೆಲ್ಲ ನಿವಾರಣೆಯಾಗುತ್ತವೆ. ಈ ದಿವಸ ಇಂಡಿಯಾ ದೇಶದಲ್ಲಿ ಈ ಹೊಸ ಏರ್ಪಾಡು ಜಾರಿಗೆ ಬಂದದ್ದು ಬಹಳ ಒಳ್ಳೆಯದು. ಈ ವಿಷಯದಲ್ಲಿ ಈ ಹಿಂದೆ ಕೆಲವರಿಗೆ ಕೆಲವು ವಿಚಾರಗಳ ಬಗ್ಗೆ ಭಿನ್ನಾಭಿಪ್ರಾಯವಿತ್ತು. ಆದರೆ ನಮಗೆ ಈ ದಿವಸ ಅನೇಕ ಪ್ರದೇಶಗಳು ಹೊರಗಡೆಯಿಂದ ಬರುತ್ತವೆ. ಆದುದರಿಂದ ಈಗ ನಮ್ಮ ಮುಂದಿನ ಕರ್ತವ್ಯಗಳೇನೆಂಬುದನ್ನು ನಾವು ವಿಮರ್ಶೆ ಮಾಡಬೇಕಾದದ್ದು ಬಹಳ ಮುಖ್ಯವಾದದ್ದು. ಈ ಸಂದರ್ಭದಲ್ಲಿ ಕನ್ನಡಿಗರ ಮನಸ್ಸು ವಿಶಾಲಗೊಳ್ಳಬೇಕು. ಅವರು ದೇಶಕ್ಕೊಂದು ದೊಡ್ಡ ಸೇವೆ ಸಲ್ಲಿಸಬೇಕು. ಈ ನಮ್ಮ ನೂತನ ಮೈಸೂರು ದೇಶ ಕರ್ಣಾಟಕಕ್ಕೆ ಒಂದು ತಿಲಕ ಪ್ರಾಯವಾಗತಕ್ಕ ರೀತಿಯಲ್ಲಿ ಎಲ್ಲರೂ ವರ್ತಿಸಬೇಕಾದದ್ದು ಯುಕ್ತವೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri K. PATTABHIRAMAN (Kolar).—Mr. Speaker, Sir, the States Reorganisation Bill is before us. Possibly, this is an occasion when memories of so many of our recent events naturally crowd back and still, as has been suggested by the Leader of the House, this must also be the occasion when we forget those recent events and look at this not merely as a *fait accompli* but as implicit for our future and for the future of this country. So, I do not propose to traverse those events or what we have spent during those dark days but say that to-day we will be starting a new era as it were in Mysore when from every section of this House there would be wholehearted and enthusiastic welcome to the proposed big State of Mysore. At the out-

(SRI K. PATTABHIRAMAN.)

Sri H. SIDDAVEERAPPA.—Yes, at that time there was no valid application at all. Now there is valid application. I have made it clear that under the Licensing Act, duty is cast on the Government, before issuing licence, to see that all the conditions of licence are examined in the interest of the public. And as soon as they gave the application, according to rules, I have immediately made it known to them that the licence application would not be considered until the bye-laws are suitably amended.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ತಾವು suitable amendment ಕೇಳಿರುವುದು ಏತಕ್ಕೆ ?

ಶ್ರೀ ಎಚ್. ಸಿದ್ದವೀರಪ್ಪ.—ತಮಗೆ ಕೊಟ್ಟಿರತಕ್ಕ ರಿಪೋರ್ಟಿನ ಅಪೆಂಡಿಕ್ಸ್ (*c*)ಅಲ್ಲಿ ಸ್ಪಷ್ಟವಾಗಿದೆ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಎಂದರೆ ಚೀಫ್ ಮಿನಿಸ್ಟರು ವೈಸ್ ಪೇಟ್ರನ್ ಆಗಿರಬೇಕು, ಅವರನ್ನು invite ಮಾಡಬೇಕೆಂದು ಇದೆ. Uninvited guest ಆಗಿ ತೆಗೆದುಕೊಂಡಿದೆ. ಎರಡನೆಯದು ಮ್ಯಾನೇಜ್‌ಮೆಂಟ್ ಕಮಿಟಿಯಲ್ಲಿ ಮೆಜಾರಿಟಿ ಇರಬೇಕೆಂದು ಇದೆ. ಇವೆರಡನ್ನು ತಾನೆ ತಾವು ಅಮೆಂಡ್‌ಮೆಂಟ್‌ನಲ್ಲಿ ಸೂಚಿಸಿರುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಚೀಫ್ ಮಿನಿಸ್ಟರ ವಿಷಯ ಇದರಲ್ಲಿ ಬರುವುದಿಲ್ಲ. ಅವರು ವೈಸ್ ಪೇಟ್ರನ್ ಆಗಿದ್ದಾರೆ. It is purely a consequential thing ಆದ್ದರಿಂದ ಚೀಫ್ ಮಿನಿಸ್ಟರ್ ಬೇಡ ಎಂದು ಹೇಳುವುದಕ್ಕೆ ಕಾರಣವೇ ಇಲ್ಲ. ಚೀಫ್ ಮಿನಿಸ್ಟರು ಹನುಮಂತಯ್ಯನವರೇ ಇರುವುದಿಲ್ಲ, ಯಾವ ಚೀಫ್ ಮಿನಿಸ್ಟರು ಬರುತ್ತಾರೋ ಅವರು ಇರುತ್ತಾರೆ. ರೂಲ್ 12ರಲ್ಲಿ ಅಮೆಂಡ್‌ಮೆಂಟ್ ಕೇಳಿದ್ದೇವೆ. ರೂಲ್ 13, 14, 15 (*a*), 19, 32 ಮತ್ತು 60 ಇವು ಮುಖ್ಯವಾದ ಬದಲಾವಣೆಗಳು.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಮುಖ್ಯಮಂತ್ರಿಗಳನ್ನು invite ಮಾಡಬೇಕೆಂದಿದೆಯೇ ಹೊರತು ಅವರನ್ನು ಆ ಸ್ಥಾನಕ್ಕೆ ನೇಮಿಸಿಯೇ ತೀರಬೇಕೆಂದಿಲ್ಲ. ಇದನ್ನು ಸ್ವಲ್ಪ clarify ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈಗಿರತಕ್ಕ ರೂಲ್ ಓದಿದರೆ ಬಹುಶಃ ಅದು clear ಆಗುತ್ತದೆ. ಈಗಿರತಕ್ಕ ರೂಲ್ ಪ್ರಕಾರ—

> 5. "The club consists of a patron, vice-patrons, club Members, Stand Members and Hon'y Stand Members."

ಎಂದಿದೆ. ಈಗ ರೂಲ್ 7ರಲ್ಲಿ

> "The Head of the Administration in Mysore and the General Officer Commanding Madras, Area will be invited to become Vice-Patrons of the Club."

ಈ ರೀತಿ ಇದೆ. ನಾವು ಅದಕ್ಕೆ—

> "The Chief Minister of Mysore will be invited to become Vice-Patron of the Club."

ಎಂದು ಹೇಳಿದ್ದೇವೆ. ಯಾತಕ್ಕೋಸ್ಕರವೆಂದರೆ ಈಗ ಮದರಾಸು ಸಬ್-ಏರಿಯಾ ಕಮ್ಯಾಂಡರ್ ಬೆಂಗಳೂರಿನಲ್ಲಿಲ್ಲ. ಪೂನಾಕ್ಕೆ ಹೋಗಿದ್ದಾರೆ. ಅದಕ್ಕೋಸ್ಕರ ಬೈಲಾದಲ್ಲಿ to that extent consequential amendment ಮಾಡಿದ್ದೇವೆ.

> "The object of the amendment was to delete the 'Madras Area Commander.'

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—Will be invited or shall be invited ಎಂದು mandatory ಯಾಗಿದೆ. ಇಷ್ಟಬಂದರೆ invite ಮಾಡುತ್ತಾರೆ ಇಲ್ಲದೆ ಇದ್ದರೆ ಇಲ್ಲ. ಇದು ಯಾಕೆ ಇರಬೇಕು ?

ಶ್ರೀ ಎಚ್. ಸಿದ್ದವೀರಪ್ಪ.—ಈಗಿರುವುದರಲ್ಲಿ phraseology ಹೆಚ್ಚುಕಡಿಮೆ ಇದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. The Chief Minister of Mysore will be invited ಎನ್ನುವುದು ಬೇಡವೆಂದರೆ—

> "The Head of the Administration and the General Officer Commanding, Madras Area will be invited to become Vice-Patrons of the Club."

ಎಂದು ಮಾಡಬಹುದು. Invited ಎನ್ನುವುದೂ ಬೇಡ, ಅದಕ್ಕೆ ಬದಲು ಬೇರೆ ಹಾಕಬೇಕು ಎಂದರೆ ಅದಕ್ಕೂ ನನ್ನ ಅಭ್ಯಂತರವಿಲ್ಲ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ತಾವೇನಾದರೂ ಇದನ್ನು ರಾಷ್ಟ್ರೀಕರಣ ಮಾಡಬೇಕೆಂದು ಯೋಚನೆ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಪ್ರಶ್ನೆ ಬರುವುದಿಲ್ಲ.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ತಾವು ಎಲ್ಲ ಶಿಫಾರ್ಸುಗಳನ್ನೂ ಸಹ ಒಪ್ಪಿಕೊಂಡಿದ್ದೇವೆಂದು ಹೇಳಿದಿರಿ. ಆ ಶಿಫಾರ್ಸುಗಳಲ್ಲಿ Punter or Gambler ಇರಕೂಡದೆಂದಿದೆ. ಅಂಥವರನ್ನು ನೇಮಕ ಮಾಡಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಇಂಥವರೊಬ್ಬರಿದ್ದಾರೆಯೋ ಎಂದು ತಾವು ಕೇಳಿದ್ದೀರಿ. ಆ ವಿಷಯದಲ್ಲಿ public enquiry ಮಾಡುತ್ತಿದ್ದೇವೆ.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ತಾವು ಗೃಹ ಸಚಿವರಾಗಿದ್ದೀರಿ. ಶ್ರೀ ಎಸ್. ವಿ. ಸುಬ್ರಹ್ಮಣ್ಯಂ ಎಂಬವರು ಗ್ಯಾಂಬ್ಲರ್ ಆಗಿದ್ದಾರೆ, ಪಂಟರ್ ಆಗಿದ್ದಾರೆ, ರಾಜಕೀಯ ಗ್ಯಾಂಬ್ಲರ್ ಆಗಿದ್ದಾರೆ. 'Government are not aware of it' ಎಂದು ಹೇಳಿದ್ದೀರಿ. ಇದು ಸತ್ಯಕ್ಕೆ ದೂರವಾದದ್ದಲ್ಲವೆ?

Mr. SPEAKER.—Personal imputations should not be made.

Sri N. C. NAGAIAH REDDY.—It is a fact. ಅವರು, ಗ್ಯಾಂಬ್ಲರ್, ಪಂಟರ್ ಎರಡೂ ಆಗಿದ್ದಾರಲ್ಲವೇ? Also a political gambler?

ಶ್ರೀ ಎಚ್. ಸಿದ್ದವೀರಪ್ಪ.—Political gambler ವಿಚಾರ ಗೊತ್ತಿಲ್ಲ. ಗ್ಯಾಂಬ್ಲರ್ ವಿಚಾರ ಗೊತ್ತಿಲ್ಲ. ಪಂಟರ್ ಎಂದು ಹೇಳುತ್ತಾರೆ. ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಮುಖ್ಯಮಂತ್ರಿಗಳ advice ಮೇಲಲ್ಲವೆ ಮೇದಪ್ಪನವರ ಸ್ಥಾನದಲ್ಲಿ ಈ ಮಹಾಪುರುಷರನ್ನು ತೆಗೆದುಕೊಂಡದ್ದು?

Sri H. SIDDAVEERAPPA.—Sir, I may tell my Hon'ble friends, it is not true to facts, for this reason. ಮೇದಪ್ಪನವರು ಅಲ್ಲಿ ರಾಜ ಪ್ರಮುಖರ ನಾಮಿನಿಯಾಗಿದ್ದರು. ಮೇದಪ್ಪನವರು ರಾಜಿನಾಮೆ ಕೊಟ್ಟಮೇಲೆ ಅಲ್ಲಿ ಒಂದು ವೇಕೆನ್ಸಿ ಬಿತ್ತು. ಆ ಜಾಗಕ್ಕೆ ಮಹಾರಾಜರು ಇವರನ್ನು ನಾಮಿನೇಟ್ ಮಾಡಿದರು.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಕಳೆದ ವರ್ಷ ಬಡ್ಜೆಟ್ಟನ್ನು ಮುಂಚೆಯೇ ಪ್ರಕಟಿಸಿದ 'ಡೈಲಿ ಪೋಸ್ಟ್' ಪತ್ರಿಕೆಯ Proprietor ಇವರೇ ಅಲ್ಲವೆ?

ಅಧ್ಯಕ್ಷರು.—ಆ ವಿಷಯ ಬೇರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಕೇಳಿ.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಇವರಿಗಿದ್ದ mining licence ಸಸ್ಪೆಂಡ್ ಮಾಡಿ ಇವರಮೇಲೆ ಪ್ರಾಸಿಕ್ಯೂಷನ್ ಕ್ರಮ ಜರುಗಿಸಿದ್ದು ನಿಜವೆ?

Sri H. SIDDAVEERAPPA.—Does it arise, Sir?

Sri N. C. NAGAIAH REDDY.—I want to know whether that man is the same person. It is political immorality that such a man should be appointed as Steward. Government has committed political immorality in selecting such a man as that for that post. I want to know whether it is the same man or not.

Sri H. SIDDAVEERAPPA.—Does it arise out of this, Sir?

Mr. SPEAKER.—The Hon'ble Member can ask another question.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಮಿರ್ಲೆ ಲಕ್ಷ್ಮೀನಾರಣಪ್ಪ ಎಂಬ ಮಹನೀಯರು ಯಾರು?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಹಿಂದೆ ಅಡ್ವೋಕೇಟ್ ಜನರಲ್‌ರಾಗಿದ್ದರು. ಬಹಳ ಪ್ರಸಿದ್ಧರಾದ ವಕೀಲರು.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಅವರು ಹಿಂದೆ ಸ್ಟೂವರ್ಡ್ ಆಗಿದ್ದು ಅವರನ್ನು ತೆಗೆದು ಹಾಕಿದ್ದಿರಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಹಿಂದೆ ಇದ್ದರೆನ್ನುವುದು ಗೊತ್ತು. ಅವರನ್ನು ಯಾತಕ್ಕೆ ತೆಗೆದು ಹಾಕಿದರೆನ್ನುವುದಕ್ಕೆ ರಿಕಾರ್ಡ್ ಇಲ್ಲ. ಅನೇಕವೇಳೆ ಕೆಲವರು ಇರುತ್ತಾರೆ, change ಆಗುತ್ತಾರೆ. ಹಾಗೆಯೇ ನಡೆದಿರಬಹುದು.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಶ್ರೀಮಾನ್ ಹನುಮಂತಯ್ಯನವರ ತಮ್ಮಂದಿರಾದ ನಂಜಪ್ಪನವರ ಕೇಸಿನಲ್ಲಿ ವಕಾಲತ್ತು ವಹಿಸಿ ಅದನ್ನು ನಡೆಸಿದವರು ಇವರೇ ಅಲ್ಲವೇ?

Mr. SPEAKER.—It is not necessary, Sri Nagaiah Reddy.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—15 ಲಕ್ಷ ರೂಪಾಯಿಗಳು ಸರ್ಕಾರಕ್ಕೆ ನಷ್ಟವಾಗತಕ್ಕ ವಿಷಯವಾಗಿರುವುದರಿಂದ, ಮತ್ತು whims and fancies ಗೋಸ್ಕರ ಈ ರೀತಿ ಮಾಡುತ್ತಿದ್ದಾರಾದ್ದರಿಂದ, ಈ ಮನೆಯ ಮೂರು ನಾಲ್ಕು ಜನ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ಮಾಡುವುದಕ್ಕೆ ತಾವು ತಯಾರಾಗಿದ್ದೀರಾ?

Sri H. SIDDAVEERAPPA.—A Committee is already there. I am prepared always to take this House into confidence and if anybody says that the Government have not exercised proper control or their discretion, I am prepared to make amends.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಈ ಮನೆಯಿಂದ ಮೂರು ಜನರನ್ನು ನೇಮಕಮಾಡಿ, ಇದರ ಸಂಬಂಧದಲ್ಲಿ ವಿಚಾರಣೆಮಾಡಿ ಈ ಮನೆಗೆ ಒಂದು ವರದಿಯನ್ನು ಮಾಡತಕ್ಕದ್ದು ಅತ್ಯಾವಶ್ಯಕವೆಂದು ತಿಳಿದುಕೊಂಡಿದ್ದೇನೆ. ಸರ್ಕಾರದವರು ಆ ರೀತಿ ಮಾಡುತ್ತಾರೆಯೇ?

Sri H. SIDDAVEERAPPA.—I do not think it would be possible for me to accept that suggestion for the reason that a Committee has already gone into the question on which the Hon'ble Members of both the Houses were duly represented.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಈ grazing field ಹೆಚ್ಚಿಗೆ ಮಾಡಬೇಕು ಎಂದು ಆಟ ಹೂಡಿದ್ದಾರೆ ಎಂದು ಜನರು ಆಡಿಕೊಳ್ಳುತ್ತಿದ್ದಾರೆ. ಮೇಯುವುದಕ್ಕೆ ಜಮಾನು ಸಾಲದು, ಇನ್ನೂ ಹೆಚ್ಚು ಮಾಡಬೇಕೆಂದು ಈ ರೀತಿಯಾಗಿ ಮಾಡುತ್ತಾರೆಂದು ಅಂದುಕೊಳ್ಳುತ್ತಾರೆ. ಇದು ನಿಜವೇ?

ಶ್ರೀ ಎಚ್. ಸಿದ್ದವೀರಪ್ಪ.—ಜನರು ಆಡಿಕೊಳ್ಳಬಹುದು. ತಾವು ಮಟ್ಟಿಗೆ ಹಾಗೆ ತಿಳಿದುಕೊಳ್ಳಬೇಡಿ.

ಶ್ರೀ ಎ. ಭೀಮಪ್ಪನಾಯಕ್.—ರೇಸಿಂಗ್ ವಗ್ಯೆರೆ ನಡೆಸುವುದಕ್ಕೆ ಸರ್ಕಾರದ ಕಾನೂನು ಮತ್ತು ರೂಲ್ಸ್ ಇಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಇವೆ.

ಶ್ರೀ ಎ. ಭೀಮಪ್ಪನಾಯಕ್.—ಹಾಗಿದ್ದಮೇಲೆ ನಮ್ಮ ರೂಲ್ಸ್‌ಗೆ ಒಳಪಟ್ಟು ಕೆಲಸಮಾಡುವುದಾದರೆ ಲೈಸೆನ್ಸ್ ಕೊಡುತ್ತೇವೆಂದು ಹೇಳದೆ, ಅವರು ಮಾಡಿ ಕೊಂಡಿರುವ ರೂಲ್ಸ್‌ವಗ್ಯೆರೆ ಹೀಗೆ ಬದಲಾವಣೆ ಮಾಡಿ, ಹಾಗೆ ಬದಲಾವಣೆ ಮಾಡಿ ಎಂದು ಪ್ರತಿ ಯೊಂದು ಖಾಸಗೀ ಸಂಸ್ಥೆಗೂ ಹೇಳುವುದಕ್ಕೆ ನೀವು ಯಾರು ? ಏನಾದರೂ ಇದ್ದರೆ ನಿಮ್ಮ rules enforce ಮಾಡಬಹುದು. ಆ ರೀತಿ ಯಾಕೆ ಮಾಡಬಾರದು ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಖಾಸಗಿ ಸಂಸ್ಥೆ ಎನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ. 1938ನೆ ಇಸವಿಯಲ್ಲಿ ಬೈಲಾಗಳನ್ನು ಫ್ರೇಂ ಮಾಡಿದಾಗ ಶ್ರೀಮನ್ಮಹಾರಾಜ ಸರ್ಕಾರದವರ ಒಪ್ಪಿಗೆಯನ್ನು ಪಡೆದಿದ್ದಾರೆ. ಆಪಾಗ ನಡೆದಿರತಕ್ಕ ಪತ್ರವ್ಯವ ಹಾರವನ್ನು ನಾನು ನೋಡಿರಬೇಕಾದರ ಈ ಸಂಸ್ಥೆ 'ಪ್ರೈವೇಟ್' ಅಲ್ಲ.

It is an association of people in whom trust is reposed so that they may work in the larger interests of the public.

ಶ್ರೀ ಎ. ಭೀಮಪ್ಪನಾಯಕ್.—ನಾನು ಕೇಳು ತ್ತಿರುವುದೂ ಅದೇ. ನೀವು ಅವರ ರೂಲ್ಸ್ ಈ ರೀತಿ ಬದಲಾವಣೆ ಮಾಡಿ ಎಂದು ಮುಂತಾಗಿ ಹೇಳುವುದ ಕ್ಕಿಂತ, ನಿಮಗೆ ಸೂಕ್ತ ಕಂಡ ಆಕ್ಟ್ ಮತ್ತು ರೂಲ್ ಮಾಡಿಕೊಂಡು, ಅದರ ಪ್ರಕಾರ ನಡೆದುಕೊಳ್ಳುವು ದಾದರೆ ಲೈಸೆನ್ಸ್ ಕೊಡುತ್ತೇವೆ ಇಲ್ಲದಿದ್ದರೆ ಕೊಡುವು ದಿಲ್ಲವೆಂದು ತಿಳಿಸಲು ತಮಗಿರುವ ಕಷ್ಟವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಹೋಗ ಬಾರದು, ಸಮಾಧಾನವಾಗಿ ಹೋಗಬೇಕೆಂದು ಆಲೋಚನೆಮಾಡಿ ಹೀಗೆ ಮಾಡುತ್ತಿದ್ದೇವೆ. ಸಭೆ ಯವರು ಅ ರೀತಿ ಮಾಡಬೇಕೆಂದು ಇಷ್ಟಪಟ್ಟರೆ ಹಾಗೆ ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಎ. ಭೀಮಪ್ಪನಾಯಕ್.—ನಮ್ಮ ಕಾನೂನು ಮತ್ತು ರೂಲ್ಸ್ ಪ್ರಕಾರ ನಡೆದರೆ ಕೊಡುತ್ತೇವೆ, ಇಲ್ಲ ದಿದ್ದರೆ ಇಲ್ಲವೆಂದು ಹೇಳ ವುದರಲ್ಲಿ ತಪ್ಪೇನು ?

Sri H. SIDDAVEERAPPA.—I will certainly examine that.

ಶ್ರೀ ವಿ. ವೆಂಕಟಪ್ಪ.—ಈ ಸಭೆಯಲ್ಲಿ ಕೆಲವು ದಿವಸ ಗಳ ಹಿಂದೆ ಮುಖ್ಯಮಂತ್ರಿಗಳು ರೇಸ್‌ಕ್ಲಬ್‌ನಿಂದ ಅರ್ಜಿ ಸರಿಯಾಗಿ, ವ್ಯಾಲಿಡ್ ಆಗಿ, ಬಂದಿಲ್ಲ, ಸರಿಯಾದ ಅರ್ಜಿ ಬಂದರೆ ಅದನ್ನು ಪರಿಶೀಲಿಸುತ್ತೇವೆಂದು ಉತ್ತರ ಕೊಟ್ಟಿದ್ದಾರಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಹೇಳಿದಾಗ valid ಅರ್ಜಿ ಬಂದಿರಲಿಲ್ಲವಾದ್ದರಿಂದ ಆ ರೀತಿ ಹೇಳಿ ದರು. ನಾವು ಬಾಗಿಲನ್ನು ಮುಚ್ಚಿಲ್ಲ. ಅವರು ಸರಿಯಾದ ರೀತಿಯಲ್ಲಿ, ಸರ್ಕಾರದ ನೀತಿಗನುಸಾರ ವಾಗಿ ನಡೆಯುವುದಾದರೆ ಈಗಲೂ ಯೋಚನೆ ಮಾಡು ತ್ತೇವೆ.

Sri M. PALANIYAPPAN.—Sir, has it come to the notice of the Government that the members of this House and the public are pressing the Government not to issue licence for this Race Club ?

Sri H. SIDDAVEERAPPA.—I have already said in my statement—there is one section like that.

12-30 P.M.

Sri M. PALANIYAPPAN.—Are the Government aware that on account of the racing in Bangalore, huge sums of money flow out of Bangalore ?

Sri H. SIDDAVEERAPPA.—That is a matter of opinion.

Sri M. PALANIYAPPAN.—Are the Government aware that on account of the racing in Bangalore there would be economic depression in Bangalore ?

Sri H. SIDDAVEERAPPA.—Sir, as I have already said, there are two opinions ; there are some people who feel that there would be economic depression in Bangalore if races are held and there are some who think quite the contrary.

Sri M. PALANIYAPPAN.—Will the Government stop the races in the interest of the public ?

Sri H. SIDDAVEERAPPA.—That is not the policy of the Government now. If the Government are satisfied that a license should not be issued in the interest of the public, then, they will consider it.

Sri M. PALANIYAPPAN.—Are the Government aware that Sri S. V. Subramaniam is a Justice of the Peace in Bangalore ?

Sri H. SIDDAVEERAPPA.—Yes.

Sri M. PALANIYAPPAN.—Are the Government aware that he is owner of race-horses ?

Sri H. SIDDAVEERAPPA.—I believe so.

Sri T. MARIAPPA.—I want to know whether Government have imposed some conditions in the case of Race Club, Mysore.

Sri H. SIDDAVEERAPPA.—No. Licence was given under very special circumstances because it was not racing.

Sri T. MARIAPPA.—Have you imposed the same conditions in the case of Mysore Race Club as you have done in the case of Bangalore Race club ?

Sri H. SIDDAVEERAPPA.—No.

Sri T. MARIAPPA.—What are the special circumstances that prompted Government not to impose these conditions ?

Sri H. SIDDAVEERAPPA.—The case of the Mysore Race Club cannot be considered on a parallel with the Bangalore Race Club because it was given purely for the purpose of sport.

ಶ್ರೀ ಆರ್. ಅನಂತರಾಮನ್.—ರೇಸ್‌ಕೋರ್ಸ್ ಸಮಿತಿ ಮೆಂಬರುಗಳು ಮತ್ತು ಸೂಪರ್ಡ್ ಸ್ವಂತ ಕುದುರೆಗಳನ್ನು ಇಟ್ಟುಕೊಂಡು ಜೂಜಿನಲ್ಲಿ ಭಾಗ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಕೆಲವು ವರದಿಗಳು ಬಂದಿವೆ, ಅವನ್ನು ಪರಿಶೀಲಿಸುತ್ತಿದ್ದೇನೆ. In fact, that is one of the amendments suggested to the bye-law.

Sri R. ANANTARAMAN.—Do you admit that racing is a licensed gambling ?

Sri T. MARIAPPA.—Everybody knows it.

Sri R. ANANTARAMAN.—In view of the fact that it is a licensed gambling, will the Government consider the question of abolishing it ?

Sri H. SIDDAVEERAPPA.—That is a different issue altogether.

Sri B. NARAYANASWAMY.—Is it the opinion of the Government that at Mysore there was no betting or there were no Bookies appointed ?

Sri H. SIDDAVEERAPPA.—There was betting and I have received betting tax; betting tax is not abolished; only the licensing fee was exempted.

Sri B. NARAYANASWAMY.—Is there anything in the License Act to exempt Gymkhana Races ?

Sri H. SIDDAVEERAPPA.—So far as I know, there is nothing in the rules. But, Government, in the exercise of their discretion, did it.

ಶ್ರೀ ಟಿ. ಎನ್. ಮುದಲಗಿರಿಗೌಡ.—ಈ ರೇಸ್ ಕ್ಲಬ್ಬಿಗೆ ಕುಣಿಗಲ್ ಸ್ಟಡ್ ಫಾರಂನಿಂದ ಒಬ್ಬ ಮೆಂಬರ್ ತೆಗೆದುಕೊಳ್ಳಬೇಕೆಂದು ರೆಸಲ್ಯೂಷನ್ ಮಾಡಿ ಕಳುಹಿಸಿ ದ್ದಾರೆಯೆ ?

Sri H. SIDDAVEERAPPA.—I want notice ; I think there is some resolution like that.

ಶ್ರೀ ಟಿ. ಎನ್. ಮುದಲಗಿರಿಗೌಡ.—ಕುಣಿಗಲ್ ಸ್ಟಡ್ ಫಾರಂ ಕುದುರೆಗಳು ರೇಸ್‌ನಲ್ಲಿ ಓಡುತ್ತವೆ ಅಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಕಡೆ ಚೆನ್ನಾಗಿ ಹೆಸರು ಗಳಿಸಿವೆ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಅಲ್ಲಿಂದ ಒಬ್ಬ ಮೆಂಬರನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಹಿಂದುಮುಂದು ನೋಡುವುದೇಕೆ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಮಾಡುವುದು ಸರ್ಕಾರವಲ್ಲ, ರೇಸ್ ಕ್ಲಬ್ಬಿನವರು.

ಶ್ರೀ ಟಿ. ಎನ್. ಮುದಲಗಿರಿಗೌಡ.—ಸರ್ಕಾರ ದವರು ಮೆಂಬರನ್ನು ತೆಗೆದುಕೊಳ್ಳುವ ವಿಷಯದಲ್ಲಿ ಒತ್ತಾಯ ಹಾಕಿಲ್ಲವೆ ?

Sri H. SIDDAVEERAPPA.—I want notice ; that question will be examined.

Sri K. PUTTASWAMY.—In answer to question 266 (*d*) asking whether it is a fact that the Chief Minister requested His Highness the Maharaja not to continue Sri P. Medappa (Retired Chief Justice) as his nominee in the Race Club, it is said that information is not readily available. May I know whether Government were not able to trace the case or consult the Chief Minister in the matter and answer the question ?

Sri H. SIDDAVEERAPPA.—Sir, Sri Medappa was the nominee of His Highness. We have not called for any information from His Highness. So far as I could find from the records, it is : His Highness has intimated that he has the pleasure to nominate so and so.

Sri K. PUTTASWAMY.—Government could have asked the Chief Minister whether this was a fact. It was not necessary for them to have asked His Highness for the information.

Sri H. SIDDAVEERAPPA.—Information is not available ; I want notice for that.

Sri K. PUTTASWAMY.—Was not sufficient notice given ?

Sri H. SIDDAVEERAPPA.—Notice was not adequate; I want further notice.

Sri K. PUTTASWAMY.—In answer to question 267, it is said that Rs. 75 per mensem for servants is paid to the Special Officer. Are Government providing servants to their Officers ?

Sri H. SIDDAVEERAPPA.—It was according to the suggestion of the Senior Steward that he came here. It was generally observed that if officers draw more, they credit it to the Government as they do in other private institutions.

Sri K. PUTTASWAMY.—What about the Rs. 75 to the servants ?

Sri H. SIDDAVEERAPPA.—So far as that is concerned, he is entitled to two free servants as Senior Assistant Commissioner; that is given.

Sri K. PUTTASWAMY.—Is it a fact that Senior Assistant Commissioners are entitled to free servants at the cost of the Government for their personal work ?

Sri H. SIDDAVEERAPPA.—It is not for the personal work; it is for office work.

Sri K. PUTTASWAMY.—Then, there is absolutely no necessity to pay Rs. 75 for the servants.

Sri H. SIDDAVEERAPPA.—There is the Accountant-General to consider all that. If he has drawn anything against the rule, I will see that he pays it back.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕುದುರೆ ಜೂಜಿನಿಂದ ಬಹಳ ಜನ ಬಡವರು ಹಾಳಾಗುತ್ತಾರಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸುಮಾರು ಮೂರು ವರ್ಷಗಳ ಹಿಂದೆ ಯಾರೋ ಒಬ್ಬರು ರೇಸಿನಲ್ಲಿ ಹಣವನ್ನೆಲ್ಲಾ ಕಳೆದುಕೊಂಡು ರೈಲಿನಲ್ಲಿ ಪ್ರಯಾಣ ಮಾಡಲು ಹಣವಿಲ್ಲದೆ ಎವರೆಸ್ಟ್ ಹೋಟೆಲ್ ಮಹಡಿ ಮೇಲಿನಿಂದ ಬಿದ್ದು ಪ್ರಾಣ ಕಳೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಜೀವನದಲ್ಲಿ ಸಿಹಿ ಕಹಿ ಎರಡೂ ಇವೆ.

ಶ್ರೀ ವಿ. ಆರ್. ನಾಯ್ಡು.—ಈಗ ಕೇವಲ ಮನರಂಜನೆಗಾಗಿ ಕುದುರೆ ಜೂಜನ್ನು ಏರ್ಪಡಿಸಿದ್ದಾರಲ್ಲವೇ ?

Sri H. SIDDAVEERAPPA.—It is called Royal Sports.

ಶ್ರೀ ವಿ. ಆರ್. ನಾಯ್ಡು.—ಹಾಗಾದರೆ ರಾಯಲ್ ಸ್ಪೋರ್ಟ್ಸ್‌ಗೆ ಹೋಗುವುದು ಒಂದು ಸಂಪ್ರದಾಯವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಹಾಗಾಗಲೆಂದು ಸಲಹೆ ಮಾಡಿದೆ.

ಶ್ರೀ ವಿ. ಆರ್. ನಾಯ್ಡು.—ಈಗ ರೇಸ್ ಕ್ಲಬ್ಬನ್ನು ಊರಿಂದಾಚೆ ಸ್ಯಾನಿಟೋರಿಯಂ ಹತ್ತಿರಕ್ಕೆ ಬದಲಾಯಿಸಬೇಕೆಂದು ಸರ್ಕಾರದವರು ಅದಕ್ಕೆ ಜಾಗವನ್ನು ಮಂಜೂರು ಮಾಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

Mr. SPEAKER.—Question Numbers 250, 386, 390 and 460 may be taken up together.

Kolar Gold Fields (Nationalisation).

Q.—250. Sri N. C. NAGAIAH REDDY (Gauribidanur).—

Will the Government be pleased to state :—

(a) whether the Government of India had deputed a team of officials to investigate into the question of nationalisation of Kolar Gold Mines and whether this team assessed the nature of the problems involved ;

(b) whether they have sent up any report or recommendations to the Government of Mysore or the Government of India ;

(c) whether this report will be placed on the Table of this House ?

A.—Sri H. SIDDAVEERAPPA (Minister for Home).—

(a) An investigation was made by the team of officers of the Government of India.

(b) No report has been sent by the team to this Government.

(c) Does not arise in view of reply to (b) above.

Q.—386. Sri S. GOPALA GOWDA (Sagar-Hosanagar).—

Will the Government be pleased to state :—

(a) the steps taken for nationalising the Kolar Gold Mines ;

(b) whether the Central Government have approved the scheme ?

A.—Sri H. SIDDAVEERAPPA (Minister for Home).—

(a) Bill for nationalising the Gold Mines has been prepared and will be placed before the House.

(b) The matter has been under correspondence with the Government of India whose views are awaited.

Q.—390. Sri K. S. VASAN (Kolar Gold Fields).—

Will the Government be pleased to state :—

whether they have taken any further steps to implement the deci-

sions of both the Houses of Legislature regarding nationalisation of the Gold Mines Industry in the State ?

A.—Sri H. SIDDAVEERAPPA (Minister for Home).—

Yes; necessary steps are being undertaken to implement the decision as expeditiously as practicable.

Q.—460. Sri H. C. LINGA REDDY (Malur).—

Will the Government be pleased to state :—

(*a*) the stage at which the scheme of nationalisation of the Kolar Gold Field Mining industry is at present;

(*b*) whether the Central Government have given their concurrence in the matter;

(*c*) the likely time required for the implementation of the scheme;

A.—Sri H. SIDDAVEERAPPA (Minister for Home).—

(*a*) A Bill for nationalising the Mines has been prepared and is under scrutiny.

(*b*) The views of the Central Government are awaited.

(*c*) The scheme will be implemented as expeditiously as possible.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಎಕ್ಸ್‌ಪರ್ಟ್ ಸಮಿತಿಯವರು ಏನು ಬರೆದಿದ್ದಾರೆಂಬುದು ಸರ್ಕಾರಕ್ಕೆ ಗೊತ್ತಿಲ್ಲವೆ ?

*ಶ್ರೀ ಎಚ್. ಸಿದ್ದವೀರಪ್ಪ.—ಗೊತ್ತಿದೆ. ಆದರೆ ಅದು ಕಾನ್‌ಫಿಡೆನ್‌ಷಿಯಲ್.

ಅಧ್ಯಕ್ಷರು.—ಡೆಲ್ಲಿಯಿಂದ ಸಮನ್ಸ್ ಬಂದಿದೆ, ಮೂರು-ನಾಲ್ಕು ಸದಸ್ಯರನ್ನು ಕರೆದುಕೊಂಡು ಹೋಗಿ ತೀರ್ಮಾನ ಮಾಡಬೇಕಾಗಿದೆಯೆಂದು ಹಿಂದೆಯೇ ಹೇಳಿದ್ದಾರೆ.

Sri K. S. VASAN.—Is the 1949 Agreement between the Government and the Company being implemented now ?

Sri H. SIDDAVEERAPPA.—It is still in force according to law, but there are various breaches every now and then.

Sri K. S. VASAN.—Have not the Management of the mines agreed with the Government in the middle of last year when they were told that the mines would be nationalised, that they would go on with the developmental work in the normal way ? That is what they had said. Are there no breaches in that undertaking also now?

Sri H. SIDDAVEERAPPA.—There are various breaches.

Sri K. S. VASAN.—Are the Government aware that the Mining Companies, particularly the Champion Reef Company, have stopped all the developmental works and sinking operations in that mine ?

Sri H. SIDDAVEERAPPA.—I have been receiving daily reports. I have myself examined it.

Sri K. S. VASAN.—Does it not result in completely crippling that mine ?

Sri H. SIDDAVEERAPPA.—I hope it will not be. We have been telling them every now and then.

Sri K. S. VASAN.—Are not the Government aware that they have closed down one-third of the mine already ?

Sri H. SIDDAVEERAPPA.—Yes; due to an unfortunate rockburst, between the 94th and the 98th levels, certain sections have been closed.

Sri K. S. VASAN.—After the rock-burst, have not the Mining Company deliberately refused to re-claim the damaged portions in that mine ?

Sri H. SIDDAVEERAPPA.—I do not go so far as to use the word 'deliberately'. What I find is works of innovation have not been taken up.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈ K.G.F. ಪ್ಯಾನನ್ನು ರಾಷ್ಟ್ರೀಕರಣ ಮಾಡಬೇಕೆಂಬುದರ ಬಗ್ಗೆ ಯಾರಾದರೂ ಅಡ್ಡಿ ಬಂದು ಅದು ನಿಂತರೆ ನಾನು ರಾಜೀನಾಮೆ ಕೊಡುತ್ತೇನೆಂದು ಚೀಫ್ ಮಿನಿಸ್ಟ್ರು ರವರು ಈ ಹಿಂದೆ ಹೇಳಿದ್ದರಲ್ಲವೇ ?

Sri H. SIDDAVEERAPPA.—I do not remember. If you place it now I will look into it and see whether he said so.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಒಂದು ವೇಳೆ ಅವರೇನಾದರೂ ಹಾಗೆ ಹೇಳಿದ್ದರೆ ಅದನ್ನು ಅವರು ನಡೆಸುತ್ತಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ತಮ್ಮ ಪ್ರಶ್ನೆ ಹೈಪೊತೆಟಿಕಲ್ ಆಯಿತು.

Sri Mulka GOVINDA REDDY.—Are the Government aware that the managing interests are bringing undue pressure and influence on the powers-that-be in Delhi to see that nationalisation does not take place ?

*Sri H. SIDDAVEERAPPA.—I have no information.

Sri M. PALANIYAPPAN.—Will the Government consider appointing a special officer to look into these breaches of the 1948 Agreement, instead of a Deputy Commissioner ?

Sri H. SIDDAVEERAPPA.—That is all past history—the 1948 Agreement. Now the Government Director who is the Deputy Commissioner, has been watching the events almost every day and keeping the Government informed of the day-to-day happenings.

Sri M. PALANIYAPPAN.—Will the Government consider the question of appointing a special officer to look after the K.G.F. Mine, instead of the Deputy Commissioner ?

Sri H. SIDDAVEERAPPA.—That does not arise for the present for our consideration.

Sri M. PALANIYAPPAN.—I would like to bring to the notice of the Hon'ble Minister that the Deputy Commissioner being a very busy man, it will be better in the interest of the Government and in the interest of the State to appoint a special officer to look after the K.G.F. Mine till it is nationalised ?

Sri H. SIDDAVEERAPPA.—We have given one other officer for his help so that he may have leisure to attend to this work.

Land grants to Depressed Class People in Tumkur District.

Q.—97. Sri C.T. HANUMANTHAIYA (Pavagada—Scheduled Castes).—

Will the Government be pleased to state :—

(*a*) the extent of area sanctioned to the Depressed Class people for cultivation in Amrithmahal Kavals, forest and date grove reserves in Tumkur District;

(*b*) the extent of land given to Depressed Class people from 1951 to 1954 (talukwar, hobliwar and villagewar information to be furnished) ?

A.—Sri A. G. RAMACHANDRA RAO (Minister for Law and Education).—

(*a*) Amrithmahal.

Kaval		*Forest*		*Date Groves*	
A.	G.	A.	G.	A.	G.
1,171	14	177	0	284	18

(*b*) A statement is placed on the Table of the House. (Copy placed in Legislature Library—*Vide* No. 16, L.A. dated 2-4 56).

ಶ್ರೀ ಸಿ. ಟಿ. ಹನುಮಂತಯ್ಯ.—ಶಿರಾ ಮತ್ತು ಪಾವಗಡ ತಾಲ್ಲೂಕುಗಳಲ್ಲಿ ಈಚಲು ಮರಗಳಿಲ್ಲದ ಜಮೀನನ್ನು 'ಈಚಲುವನ' ಎಂದು ಅದನ್ನು ವ್ಯವಸಾಯಕ್ಕೆ ಬಿಟ್ಟುಕೊಡದೆ ಹಾಗೇ ರಿಜರ್ವ್‌ನಲ್ಲಿಟ್ಟುಕೊಂಡಿರುವುದು ತಮ್ಮ ಅವಗಾಹನೆಗೆ ಬಂದಿದೆಯೇ? ಇದು ನಿಜವೇ ?

*Sri A. G. RAMACHANDRA RAO.—I will get the information and answer.

ಶ್ರೀ ಸಿ. ಟಿ. ಹನುಮಂತಯ್ಯ.—ಶಿರಾ ತಾಲ್ಲೂಕು ಗೌಡಗೆರೆ ಹೋಬಳಿಯಲ್ಲಿರುವ ಸ. ನಂ. 8ರಲ್ಲಿ ಒಂದು ಈಚಲುಮರವೂ ಇಲ್ಲ. ಹಾಗಿದ್ದರೂ ಅದನ್ನು ರಿಜರ್ವ್‌ನಲ್ಲಿಟ್ಟುಕೊಂಡಿರುವುದು ನಿಜವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ.—ಹಾಗೆಯೇ ಪಾವಗಡ ತಾಲ್ಲೂಕಿನಲ್ಲಿ ಕನ್ನವೇಡಿ ಹೋಬಳಿಯ ಸ. ನಂ. 33 ಮತ್ತು 39ರಲ್ಲಿ ಒಂದೂ ಈಚಲ ಮರವೂ ಇಲ್ಲ. ಹಾಗಿದ್ದರೂ ನಾಲ್ಕು-ಐದು ವರ್ಷಗಳಿಂದ ಅಲ್ಲಿ ವ್ಯವಸಾಯಕ್ಕೆ ಜಮೀನನ್ನು ಕೊಡಿ ಎಂದು ಕೇಳುತ್ತಿದ್ದರೂ ಕೊಡದೆ, ಆ ರಿಕಾರ್ಡ್ಸ್‌ಗಳೆಲ್ಲಾ ಹಾಗೆ ಮುಲ್ಕಿ ಬದ್ದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಹಾಗಾದರೆ ಅದನ್ನು ವಿಚಾರ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ.

Primary Schools with no buildings in Holalkere Taluk.

Q.—339. Sri G. DUGGAPPA (Holalkere—Scheduled Castes) —

Will the Government be pleased to state :—

the number of villages in Holalkere Taluk where there are no buildings for the Primary Schools ?

A.—Sri A. G. RAMACHANDRA RAO (Minister for Law and Education).—

Five.

ಶ್ರೀ ಜಿ. ದುಗ್ಗಪ್ಪ.—ಹೊಳಲ್ಕೆರೆ ತಾಲ್ಲೂಕಿನಲ್ಲಿ ಸರ್ಕಾರಿ ಕಟ್ಟಡಗಳಿಲ್ಲದೆ ಎಷ್ಟು ಬಾಡಿಗೆ ಕಟ್ಟಡಗಳಲ್ಲಿ ಪಾಠಶಾಲೆಗಳನ್ನು ನಡೆಸಲಾಗುತ್ತಿದೆ ?

Sri A. G. RAMACHANDRA RAO.—Except five schools which are in rented buildings, the others are in Government buildings.

Primary School Building for Singonahally village, Kothagere Hobli, Kunigal Taluk.

Q.—497. Sri T. N. MUDALAGIRI GOWDA (Kunigal).—

Will the Government be pleased to state :—

(*a*) whether the villagers of Singonahalli, Kothagere Hobli, Kunigal Taluk, were not constructing a primary school building at a cost of about rupees six thousand ;

(*b*) whether this work has not come to a stand-still for want of help from the Government ;

(*c*) (*i*) whether the Elementary Education Committee had recommended for Government's help for completing the construction of this building ;

(*ii*) whether the Government have been requested to sanction L.D. grant ;

(*d*) the reasons for the delay in granting funds in spite of all this ?

A.—Sri A. G. RAMACHANDRA RAO (Minister for Law and Education).—

(*a*) The villagers are reported to have started the construction of a building for the primary school at an estimated cost of Rs. 6,000.

(*b*) No.

(*c*) (*i*) No.

(*ii*) No.

(*d*) Does not arise in view of reply to clause (*d*).

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಈ ಕಟ್ಟಡ ಯಾವ ಸ್ಥಿತಿಯಲ್ಲಿದೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಆ ಕಟ್ಟಡವನ್ನು ಕಟ್ಟುತ್ತಿದ್ದಾರೆಂದು ನಮಗೆ ತಿಳಿದುಬಂದಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಆ ಕೆಲಸ ಯಾವ ಸ್ಟೇಜಿನಲ್ಲಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವ ಸ್ಟೇಜಿನಲ್ಲಿದೆ ಎಂಬ ಸಮಾಚಾರ ನಮಗೆ ತಿಳಿದುಬಂದಿಲ್ಲ. ಕೆಲಸ ನಡೆಯುತ್ತಿದೆ ಎಂಬ ವರದಿ ಬಂದಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇಲ್ಲ (ಬಿ) ಮತ್ತು (ಸಿ)ಗೆ ಉತ್ತರವಾಗಿ 'ಇಲ್ಲ' ಎಂದು ತಿಳಿಸಲಾಗಿದೆ. ಅದಕ್ಕಾಗಿ ನಾನು ಈಗ ಕೆಲಸ ಯಾವ ಸ್ಟೇಜಿನಲ್ಲಿದೆ ಎಂದರೆ—ಕೆಲಸ ಪೂರೈಸುವ ಸ್ಟೇಜಿಗೆ ಬಂದಿದೆಯೇ ಅಥವಾ ಈ ಕೆಲಸವನ್ನು ಅಲ್ಲಿಗೆ ಕೈಬಿಡುವ ಸ್ಟೇಜಿಗೆ ಬಂದಿದೆಯೇ ಎಂಬುದನ್ನು ತಿಳಿದುಕೊಳ್ಳಲು ಕೇಳುತ್ತಿದ್ದೇನೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರಗಳು ಯಾವವೂ ನಮಗಿನ್ನೂ ತಿಳಿದುಬಂದಿಲ್ಲ. ವಿಚಾರ ಮಾಡುತ್ತೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಅವರ ಪ್ರಯತ್ನಗಳೆಲ್ಲಾ ಪೂರೈಸಿಹೋಗಿ ಆ ಕೆಲಸ ಕೈಬಿಡತಕ್ಕ ಸ್ಥಿತಿಗೆ ಬಂದು ನಿಂತಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ಕಟ್ಟಡವನ್ನು ಆ ಗ್ರಾಮಸ್ಥರೇ ರೂಫಿಂಗ್ ಲೆವಲ್‌ವರೆಗೆ ತಂದು ಮುಂದೆ ಸಾಧ್ಯವಿಲ್ಲದೆ ಅಲ್ಲಿಗೇ ಕಟ್ಟಡದ ಕೆಲಸ ನಿಂತುಹೋಗಿದೆ. ಅದನ್ನು ಈಗ ಮುಂದುವರಿಸಿ ಪೂರೈಸುವಂತೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ:

Educated Unemployed.

Q.—396. Sri K. S. VASAN (Kolar Gold Fields).—

Will the Government be pleased to state :—

(*a*) whether they propose to collect data regarding educated and others unemployed in the State ;

(*b*) whether they have been asked by the National Planning Commission to collect this information by a thorough survey ?

A.—Sri A. G. RAMACHANDRA RAO (Minister for Law and Education).—

(*a*) A scheme for conducting a statewide socio-economic survey with special emphasis on unemployment in the State, has been included in the Second Five-Year Plan and the survey is proposed to be taken up in 1956-57.

(*b*) No.

Sri K. S. VASAN.—I have no supplementaries to ask.

Compulsory Education.

Q.—410. Sri H. T. PUTTAPPA (Hoskote-Anekal-Scheduled Castes).—

Will the Government be pleased to state :—

(*a*) whether they intend to introduce compulsory education ;

(*b*) if so, when it would be introduced ?

A.—Sri A. G. RAMACHANDRA RAO (Minister for Law and Education).—

(*a*) Compulsory Education has already been initiated.

(*b*) Does not arise in view of reply to clause (*a*).

ಶ್ರೀ ಎಚ್. ಟಿ. ಪುಟ್ಟಪ್ಪ.—ಈಗ ನಮ್ಮ ಸಂಸ್ಥಾನದಲ್ಲಿ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆಯೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಇದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಯಾವ ಯಾವ ತಾಲ್ಲೂಕಿನಲ್ಲಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರತಿಯೊಂದು ಜಿಲ್ಲೆಯ ಒಂದೊಂದು ತಾಲ್ಲೂಕಿನಲ್ಲೂ ಇದು ಜಾರಿಯಲ್ಲಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಬಾಕಿ ಕಡೆಗಳಲ್ಲಿ ಇದನ್ನು ಯಾವಾಗ ಜಾರಿಗೆ ತರುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಣದ ಅಭಾವದಿಂದ ನಿಲ್ಲಿಸಲಾಗಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಬೆಂಗಳೂರು ಜಿಲ್ಲೆಯಲ್ಲಿ ಯಾವ ತಾಲ್ಲೂಕಿನಲ್ಲಿ ಇದನ್ನು ಜಾರಿಗೆ ತರಲಾಗಿದೆ ?

Sri A. G. RAMACHANDRA RAO.—I will give the information.

Mr. SPEAKER.—The answer can be furnished to the Hon'ble Member.

Sri A. G. RAMACHANDRA RAO.—Yes.

Rural Housing Co-operative Societies (Loans granted).

Q.—125. Sri D. R. KARI GOWDA (Hassan).—

Will the Government be pleased to state :—

(*a*) the amount so far granted as loan for Rural Housing Co-operative Societies during the year 1955-1956 ;

(*b*) how many societies are granting loans for rural housing purposes and in which districts ?

A.—Dr. R. NAGAN GOWDA (Minister for Agriculture).—

(*a*) Nil so far.

(*b*) Does not arise.

ಶ್ರೀ ಡಿ. ಆರ್. ಕರಿಗೌಡ.—ಮೈಸೂರು ದೇಶದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಸಹಾಯ ನೀಡುವ ಎಷ್ಟು ಪರಸ್ಪರ ಸಹಾಯಕ ಸಂಘಗಳು ರಿಜಿಸ್ಟರ್ ಆಗಿವೆ ?

*ಡಾ॥ ಆರ್. ನಾಗನಗೌಡ.—ಈಗಾಗಲೆ 23 ಸೊಸೈಟಿಗಳು ರಿಜಿಸ್ಟರ್ ಆಗಿವೆ. ಇನ್ನೂ 3 ಸೊಸೈಟಿಗಳು ರಿಜಿಸ್ಟರ್ ಆಗುವುದರಲ್ಲಿವೆ.

ಶ್ರೀ ಡಿ. ಆರ್. ಕರಿಗೌಡ.—ಈ 23 ಸೊಸೈಟಿಗಳಲ್ಲಿ ಎಷ್ಟು ಸಾಲ ಕೇಳಿವೆ ?

ಡಾ ॥ ಆರ್. ನಾಗನಗೌಡ.—ಇತ್ತೀಚೆಗೆ ನಾವು ಹೌಸ್ ಬಿಲ್ಡಿಂಗ್ ಸೊಸೈಟಿಗಳಿಗೆ ಸಾಲ ಕೊಡತಕ್ಕ ಬಗ್ಗೆ 2 ಲಕ್ಷ ರೂಗಳನ್ನು ತೆಗೆದಿಟ್ಟಿದ್ದೇವೆ.

ಶ್ರೀ ಡಿ. ಆರ್. ಕರಿಗೌಡ.—55-56ನೆಯ ಸಾಲಿನಲ್ಲಿ ಈ ಬಾಬಿಗೆ ತಾವೇಕೆ ದುಡ್ಡನ್ನು ಒದಗಿಸಲಿಲ್ಲ ?

ಡಾ ॥ ಆರ್. ನಾಗನಗೌಡ.—ಈ ರೂರಲ್ ಹೌಸಿಂಗ್ ಸೊಸೈಟಿಗಳು ಈಗೀಗ ಹೊಸದಾಗಿ ಪ್ರಾರಂಭವಾಗಿವೆ. ಈ ಯೋಜನೆಗಾಗಿಯೇ ನಾವೀಗ 2 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ.

ಶ್ರೀ ಡಿ. ಆರ್. ಕರಿಗೌಡ.—ಈ 2 ಲಕ್ಷ ರೂಪಾಯಿಗಳು ಒಂದು ತಾಲ್ಲೂಕಿಗೂ ಕೂಡ ಸಾಕಾಗುವುದಿಲ್ಲ ಎಂಬುದು ತಮಗೆ ಗೊತ್ತಿದೆಯೆ ?

ಡಾ ॥ ಆರ್. ನಾಗನಗೌಡ.—ಸಾಕಾಗುವುದಿಲ್ಲ ಎನ್ನುವುದು ನಿಜ. ಆದರೆ ಈಗೀಗ ಯೋಜನೆ ಆರಂಭವಾಗಿದೆ.

ಶ್ರೀ ಡಿ. ಆರ್. ಕರಿಗೌಡ.—ಸಿಟಿಗಳಿಗೆ ಈ ಲೋ ಹೌಸಿಂಗ್ ಗ್ರೂಪ್ ಬಗ್ಗೆ ಎಷ್ಟು ಹಣ ಒದಗಿಸಿದ್ದೀರಿ ?

ಡಾ॥ ಆರ್. ನಾಗನಗೌಡ.—ಸ್ವಲ್ಪ ಹೆಚ್ಚಿಗೆ ಒದಗಿಸಿದ್ದೇವೆ. 35 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಹೌಸಿಂಗ್ ಕಾರ್ಪೊರೇಷನ್ನಿಗೆ ಒಂದಷ್ಟು ಕೊಟ್ಟಿದ್ದೇವೆ.

ಶ್ರೀ ಡಿ. ಆರ್. ಕರಿಗೌಡ.—ಹಳ್ಳಿಗಳಲ್ಲಿ ಹೆಚ್ಚಾಗಿ ಬಡವರು ಇರುವುದರಿಂದ ಅಲ್ಲಿಗೆ ಈ ಮೊಬಲಗನ್ನು ಹೆಚ್ಚಿಗೆ ಒದಗಿಸಬೇಕಾದುದು ಸರ್ಕಾರದವರ ಕರ್ತವ್ಯವಲ್ಲವೇ ?

ಡಾ॥ ಆರ್. ನಾಗನಗೌಡ.—ಆ ವಿಚಾರವನ್ನು ಇನ್ನು ಮುಂದೆ ಆಲೋಚನೆ ಮಾಡುತ್ತೇವೆ.

ಶ್ರೀ ಟಿ. ಎಲ್. ಮೂಡಲಗಿರಿಗೌಡ.—ಸರ್ಕಾರದವರು ರೂರಲ್ ಪಾರ್ಟ್ಸ್‌ಗಳಿಗೆ ಈ ವಿಚಾರದಲ್ಲಿ ಎಷ್ಟು ಹಣ ಕೊಡಬೇಕೆಂದು ಆಲೋಚನೆ ಮಾಡಿದ್ದೀರಿ ?

ಅಧ್ಯಕ್ಷರು.—2 ಲಕ್ಷ ರೂಪಾಯಿಗಳೆಂದು ಆಗಲೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಟಿ. ಎಲ್. ಮೂಡಲಗಿರಿಗೌಡ.—ಈ ಮೊಬಲಗನ್ನು ತಾವು ಯಾವಯಾವ ಸೊಸೈಟಿಗಳ ಮೂಲಕ ವಿಲೇವಾರಿ ಮಾಡಲು ಶಿಫಾರ್ಸು ಮಾಡಿದ್ದೀರಿ ?

ಡಾ॥ ಆರ್. ನಾಗನಗೌಡ.—ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಹೌಸ್ ಬಿಲ್ಡಿಂಗ್ ಸೊಸೈಟಿ ಇರುತ್ತದೆ. ಇವುಗಳಿಗೆ ಹಣವನ್ನು ರೂರಲ್ ಹೌಸಿಂಗ್ ಸೊಸೈಟಿ ಸಂಸ್ಥೆ ಮೂಲಕ ವಿಲೇವಾರಿ ಮಾಡಲಾಗುತ್ತದೆ.

ಶ್ರೀ ಟಿ. ಎಲ್. ಮೂಡಲಗಿರಿಗೌಡ.—ತಾಲ್ಲೂಕು ಸೊಸೈಟಿಗಳು ಮತ್ತು ರೂರಲ್ ಸೊಸೈಟಿಗಳು ಆಯಾ ಪ್ರದೇಶಕ್ಕೆ ಮಾತ್ರ ಗಮನ ಕೊಟ್ಟು ಬಾಕಿ ಪ್ರದೇಶಕ್ಕೆ ಅವರು ಅಷ್ಟಾಗಿ ಗಮನ ಕೊಡುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಹಾಗೂ ಆಗಬಹುದು.

ಶ್ರೀ ಟಿ. ಎನ್. ಮುಡಲಗಿರಿಗೌಡ.—ಆ ಸಂಸ್ಥೆಗಳಲ್ಲಿ ಯಾರೂ ಈ ರೂರಲ್ ಪಾರ್ಟಿಗಳ ಪ್ರತಿನಿಧಿಗಳಿಲ್ಲವಲ್ಲವೇ ?

ಡಾ|| ಆರ್. ನಾಗನಗೌಡ.—ಹೌದು.

ಶ್ರೀ ಟಿ. ಎನ್. ಮುಡಲಗಿರಿಗೌಡ.—ಯಾವ ರೂರಲ್ ಸೊಸೈಟಿಗಳನ್ನು ಏರ್ಪಾಡು ಮಾಡಿದ್ದೀರಿ ?

ಡಾ|| ಆರ್. ನಾಗನಗೌಡ.—ತುಮಕೂರಿನಲ್ಲಿ ಮಾಯಸಂದ್ರ ರೂರಲ್ ಹೌಸಿಂಗ್ ಸೊಸೈಟಿ, ಬಳ್ಳಾರಿಯಲ್ಲಿ ಗೌರೀಪುರ ರೂರಲ್ ಹೌಸಿಂಗ್ ಸೊಸೈಟಿ, ಚಿತ್ರದುರ್ಗದಲ್ಲಿ ಚಿಕ್ಕನಹಳ್ಳಿ ರೂರಲ್ ಹೌಸಿಂಗ್ ಸೊಸೈಟಿ, ಈ ರೀತಿಯಾಗಿ 23 ಸೊಸೈಟಿಗಳು ಇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿ ಕಟ್ಟಡ ಕಟ್ಟುವುದಕ್ಕೆ ಪ್ರತ್ಯೇಕವಾದ ಸೊಸೈಟಿಗಳನ್ನು ಪ್ರಾರಂಭ ಮಾಡುವುದಕ್ಕೆ ಬದಲಾಗಿ, ತಾಲ್ಲೂಕು ಮಲ್ಟಿಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳಿಗೇ ಈ ಕೆಲಸವನ್ನು ವಹಿಸುವುದರಲ್ಲಿ ಸರ್ಕಾರದವರ ಅಭಿಪ್ರಾಯವೇನು ?

ಡಾ|| ಆರ್. ನಾಗನಗೌಡ.—ಹೌಸ್ ಬಿಲ್ಡಿಂಗ್ ಸೊಸೈಟಿ ಪ್ರತ್ಯೇಕವಾಗಿರಬೇಕೆಂದು ಅಂದುಕೊಂಡಿದ್ದೇವೆ, ಏಕೆಂದರೆ ಇಲ್ಲಿ ಉದ್ಭವಿಸುವ ಸಮಸ್ಯೆಗಳೇ ಬೇರೆ, ಮಲ್ಟಿಪರ್‌ಪಸ್ ಸೊಸೈಟಿಗಳಲ್ಲಿ ನಡೆಯತಕ್ಕ ಕೆಲಸಕಾರ್ಯಗಳೇ ಬೇರೆ. ಸರ್ಕಾರದ ಸೊಸೈಟಿಗಳಲ್ಲಿ ಷಾರ್ಟ್ ಟರ್ಮ್ ಕ್ರೆಡಿಟ್ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ತಾಲ್ಲೂಕು ಸೊಸೈಟಿಗಳಿಗೆ ಮಾರ್ಕೆಟಿಂಗ್ ವರ್ಕ್ ಕೊಟ್ಟಿದ್ದೇವೆ. ಆದ್ದರಿಂದ ಹೌಸ್ ಬಿಲ್ಡಿಂಗ್ ಸೊಸೈಟಿಯೂ ಕೂಡ ಪ್ರತ್ಯೇಕವಾಗಿದ್ದರೇ ಚೆನ್ನ ಎಂದು ಅಭಿಪ್ರಾಯ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾಲ್ಲೂಕು ಮಟ್ಟದಲ್ಲಿ ಈಗಿರತಕ್ಕ ಕೆಲವು ಹೌಸ್ ಬಿಲ್ಡಿಂಗ್ ಸೊಸೈಟಿಗಳಿಗೆ ಗ್ರಾಮಾಂತರ ಪ್ರದೇಶಗಳ ಜ್ಯೂರಿಸ್‌ಡಿಕ್ಷನ್ ಇಲ್ಲದೇ ಇರುವುದರಿಂದ ಅಲ್ಲಿಗೆ ಬೇರೆ ಸೊಸೈಟಿಗಳನ್ನು ಪ್ರಾರಂಭಮಾಡುವುದಕ್ಕೆ ಏರ್ಪಾಡುಮಾಡಬೇಕೆಂದಿದ್ದೀರಾ ?

ಡಾ|| ಆರ್. ನಾಗನಗೌಡ.—ಈಗ ಗ್ರಾಮಾಂತರಗಳಲ್ಲೇ ಈ ಸೊಸೈಟಿಗಳನ್ನು ಪ್ರಾರಂಭಮಾಡಿರುವುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗ್ರಾಮಾಂತರ ಪ್ರದೇಶಗಳಲ್ಲೆಲ್ಲಾ ಹೊಸದಾಗಿ ಸೊಸೈಟಿಗಳನ್ನು ಪ್ರಾರಂಭಮಾಡಿ, ಕೆಲಸ ನಡೆಸಬೇಕಾದರೆ ಬಹಳ ಕಾಲ ಹಿಡಿಯುವುದಿಲ್ಲವೇ ?

ಡಾ|| ಆರ್. ನಾಗನಗೌಡ.—ಗ್ರಾಮಾಂತರಗಳಲ್ಲಿ ಸೊಸೈಟಿಗಳು ಪ್ರಾರಂಭವಾಗಿ ಕೆಲಸಮಾಡಲು ಸ್ವಲ್ಪ ಆಲಸ್ಯವಾಗುತ್ತದೆ. ಇತ್ತೀಚೆಗೆ ನಾವು ಕೋ-ಆಪರೇಟಿವ್ ಎಸ್ಟಾಬ್ಲಿಷ್‌ಮೆಂಟ್ ಹೆಚ್ಚು ಮಾಡಿ, ಸೂಪರ್‌ವೈಜರ್‌ಗಳು, ಇನ್ಸ್‌ಪೆಕ್ಟರುಗಳು ಮುಂತಾದವರನ್ನು ನೇಮಕ ಮಾಡಿರುವುದರಿಂದ ಜಾಗ್ರತೆ ಆಗಬಹುದು, ಅಷ್ಟು ಆಲಸ್ಯ ಆಗಲಿಕ್ಕಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆದಷ್ಟು ಜಾಗ್ರತೆ ಈ ಸೊಸೈಟಿಗಳನ್ನು ಪ್ರಾರಂಭಮಾಡಿಸುವುದಕ್ಕೆ ಇಲಾಖೆಯ ಅಧಿಕಾರಿಗಳು ಗಮನ ಕೊಡಬೇಕೆಂದು ತಿಳಿವಳಿಕೆ ಕೊಡುತ್ತೀರಾ ?

ಡಾ|| ಆರ್. ನಾಗನಗೌಡ.—ಆಗಬಹುದು.

ಶ್ರೀ ಬಿ. ಮಾಧವಾಚಾರ್.—ಅರ್ಬನ್ ಏರಿಯಾದಲ್ಲಿರತಕ್ಕ ಸೊಸೈಟಿಗಳಿಗೇ ರೂರಲ್ ಏರಿಯಾದ ಜ್ಯೂರಿಸ್‌ಡಿಕ್ಷನ್ ಎಕ್ಸ್‌ಟೆಂಡ್ ಮಾಡಬೇಕೆಂದರೆ ಅದು ಬಹಳ ಒಳ್ಳೆಯ ಪ್ರಪೋಸಲ್ ಅಲ್ಲವೇ ?

ಡಾ|| ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ. ಈಗ ಅಂದುಕೊಂಡಿರುವುದು ಯಾವುದಾದರೂ ಸಣ್ಣ ಗ್ರಾಮಗಳಲ್ಲಿ ಸೊಸೈಟಿ ಮಾಡಿಕೊಳ್ಳುತ್ತೇವೆ ಎಂದರೆ ಉತ್ತೇಜನ ಕೊಡಬೇಕೆಂದು ಇದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸಂಸ್ಥಾನದಲ್ಲಿರತಕ್ಕ ಟೌನ್‌ಗಳಿಗೆ 35 ಲಕ್ಷ ರೂಪಾಯಿ, ಹಳ್ಳಿಗಳಿಗೆ ಕೇವಲ 2 ಲಕ್ಷ ರೂಪಾಯಿ ಸಾಕೇ ?

ಡಾ|| ಆರ್. ನಾಗನಗೌಡ.—ಇನ್ನು ಮುಂದೆ ಬೇಕಾದರೆ ಜಾಸ್ತಿ ಕೊಡೋಣ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಟೌನ್‌ಗಳಿಗಿಂತ ಗ್ರಾಮಾಂತರಗಳಿಗೆ ಜಾಸ್ತಿ ಹಣಬೇಕು, ಅಲ್ಲಿ ಸರಿಯಾದ ಮನೆಗಳಿಲ್ಲ ಎಂಬುದು ಗೊತ್ತೇ ?

ಡಾ|| ಆರ್. ನಾಗನಗೌಡ.—ಹಳ್ಳಿಗಳಿಗೆ ಇನ್ನೂ ಹೆಚ್ಚು ಸಹಾಯ ಮುಂದೆ ಕೊಡೋಣ.

ಶ್ರೀ ಶಿವನಂಜೇಗೌಡ.—ರೂರಲ್ ಏರಿಯಾದಲ್ಲಿ ಹೋಬಳಿಗಳಲ್ಲೂ ಕೂಡ ಈ ರೂರಲ್ ಹೌಸಿಂಗ್ ಸೊಸೈಟಿಗಳನ್ನು ಸ್ಥಾಪನೆ ಮಾಡುತ್ತೀರಾ ?

ಡಾ|| ಆರ್. ನಾಗನಗೌಡ.—ಯಾವಯಾವ ಗ್ರಾಮಗಳವರು ಕೇಳುತ್ತಾರೆಯೋ ಅಲ್ಲೆಲ್ಲಾ ಉತ್ತೇಜನ ಕೊಡುತ್ತೇವೆ.

ಶ್ರೀ ಶಿವನಂಜೇಗೌಡ.—ಹಳ್ಳಿಗಳಿಗೆ 2 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಈ ಲೆಕ್ಕದ ಪ್ರಕಾರ 16 ಸಾವಿರ ಹಳ್ಳಿಗಳಿಗೂ ಕೂಡ ದುಡ್ಡು ಹಂಚಿಕೆ ಆಗಬೇಕಾದರೆ ಎಷ್ಟು ಲಕ್ಷ ರೂಪಾಯಿ ಬೇಕಾಗುತ್ತದೆ ?

ಡಾ|| ಆರ್. ನಾಗನಗೌಡ.—ಬಹಳ ದುಡ್ಡು ಬೇಕಾಗುತ್ತದೆ.

ಶ್ರೀ ಶಿವನಂಜೇಗೌಡ.—ಈಗ ಸಿಟಿಯಲ್ಲಿ ಕಟ್ಟಿರತಕ್ಕ ಬಂಗಲೆ ಹೇಗಿದೆ, ಹಳ್ಳಿಯಲ್ಲಿ ಕಟ್ಟಿರತಕ್ಕ ಮನೆ ಹೇಗಿದೆ ನೋಡಿ. ತಾರತಮ್ಯ ಹಾಕಿದರೆ ಎಲ್ಲಿಗೆ ದುಡ್ಡು ಹೆಚ್ಚಾಗಿ ಕೊಡಬೇಕು ?

ಡಾ|| ಆರ್. ನಾಗನಗೌಡ.—ಅಭಿಪ್ರಾಯ ಕೇಳುತ್ತಾರೆ. ಪಟ್ಟಣಗಳಲ್ಲಿ ಸಾಲಮಾಡಿ ಮನೆ ಕಟ್ಟಿರುತ್ತಾರೆ, ಹಳ್ಳಿಗಳಲ್ಲಿ ತಮ್ಮ ಯೋಗ್ಯತೆಯೊಳಗೆ ಮನೆ ಕಟ್ಟಿಕೊಂಡು ಸಾಲಕ್ಕೆ ಈಡಾಗುವುದಿಲ್ಲ.

ಶ್ರೀ ಶಿವನಂಜೇಗೌಡ.—ಹಳ್ಳಿಗಳಲ್ಲಿ ಈಗ ಸಾಲ ಮಾಡಿ ಆಸ್ತಿಪಾಸ್ತಿಗಳನ್ನೆಲ್ಲಾ ಕಳೆದುಕೊಂಡು ಮನೆ ಇಲ್ಲದೇ ಇರತಕ್ಕವರು ತಮ್ಮ ಗಮನದಲ್ಲಿಲ್ಲವೇ ?

ಡಾ|| ಆರ್. ನಾಗನಗೌಡ.—ಇಲ್ಲ. ಒಳ್ಳೆ ಮನೆ ಕಟ್ಟಬೇಕೆಂದು ಯಾರು ಹೇಳುತ್ತಾರೋ ಅವರಿಗೆ ಈ ರೂರಲ್ ಸೊಸೈಟಿ ಮುಖಾಂತರ ಸಾಲ ಕೊಡಬೇಕೆಂದು ಈ ಏರ್ಪಾಡು ಮಾಡಿದೆ.

ಶ್ರೀ ಶಿವನಂಜೇಗೌಡ.—ಮೈಸೂರು ಜಿಲ್ಲೆಗೆ ಹೆಚ್ಚು ಹಣ ಒದಗಿಸಿ ಸುಲಭ ದರದಲ್ಲಿ ಮನೆಗಳನ್ನು ಕಟ್ಟಿಸಿ ಕೊಡುವ ಏರ್ಪಾಡು ಮಾಡುತ್ತೀರಾ ?

ಡಾ|| ಆರ್. ನಾಗನಗೌಡ.—ಆಲೋಚನೆ ಮಾಡೋಣ.

Multi-purpose Co-operative Society at Jalanadu Village, Javanagondanahalli Hobli, Hiriyur Taluk.

Q.—317. Sri V. MASIYAPPA (Hiriyur).—

Will the Government be pleased to state:—

(*a*) whether there is a Multi-purpose Co-operative Society at Jalanadu Village, Javanagondanahalli Hobli Hiriyur Taluk;

(*b*) whether it is working now;

(*c*) whether there are any complaints regarding the finances of the Society;

(*d*) if so, what is the action taken in the matter?

A.—Dr. R. NAGAN GOWDA (Minister for Agriculture).—

(*a*) Yes.

(*b*) No.

(*c*) Yes.

(*d*) On a complaint to the police, the matter is under police investigation.

ಶ್ರೀ ವಿ. ಮಸಿಯಪ್ಪ.—ಈ ಸೊಸೈಟಿ ಕೆಲಸ ನಿಲ್ಲಿಸಿ ಎಷ್ಟು ವರ್ಷವಾಯಿತು ಎಂಬುದನ್ನು ಹೇಳುತ್ತೀರಾ,

*ಡಾ॥ ಆರ್. ನಾಗನಗೌಡ.—ಈ ಸೊಸೈಟಿ 1952 ರಿಂದ ಯಾವ ವಿಧವಾದ ವ್ಯಾಪಾರವನ್ನೂ ಜರುಗಿಸಿಲ್ಲ.

ಶ್ರೀ ವಿ. ಮಸಿಯಪ್ಪ.—ಈ ಹಣ ದುರುಪಯೋಗವಾಗಿರುವ ಮೊತ್ತ ಎಷ್ಟು ಎಂಬುದನ್ನು ಹೇಳುತ್ತೀರಾ?

ಡಾ॥ ಆರ್. ನಾಗನಗೌಡ.—ಸೆಕ್ರೆಟರಿಯವರು ಡಿಪಾಸಿಟ್ ಬಾಬ್ತು 30 ರೂಪಾಯಿ ತಮ್ಮ ಸ್ವಂತಕ್ಕಾಗಿ ಉಪಯೋಗಿಸಿದ್ದಾರೆ ಎಂದು ರಿಪೋರ್ಟ್ ಬಂದಿದೆ.

ಶ್ರೀ ವಿ. ಮಸಿಯಪ್ಪ.—ಪೋಲಿಸಿಗೆ ದೂರು ಬಂದಿರುವುದರಿಂದ ಎಂದು ಹೇಳಿದ್ದೀರಿ. ಪೋಲೀಸಿಗೆ ದೂರು ಹೋಗಿ ಎಷ್ಟು ವರ್ಷವಾಯಿತು ಎಂಬುದನ್ನು ಹೇಳುತ್ತೀರಾ?

ಡಾ॥ ಆರ್. ನಾಗನಗೌಡ.—11-1-56 ರಲ್ಲಿ.

ಶ್ರೀ ವಿ. ಮಸಿಯಪ್ಪ.—ಇದಕ್ಕೆ ಸಂಬಂಧಪಟ್ಟಿರತಕ್ಕ ವ್ಯಕ್ತಿ ಆ ಗ್ರಾಮದ ಲ್ಯಾಂಡ್ ರೆವಿನ್ಯೂ ಮತ್ತು ಪಂಚಾಯಿತಿ ರೆವಿನ್ಯೂನಲ್ಲಿ ಸುಮಾರು 1,800 ರೂಪಾಯಿಗಳಿಂದ 2 ಸಾವಿರ ರೂಪಾಯಿಗಳವರೆಗೂ ದುರುಪಯೋಗಪಡಿಸಿಕೊಂಡಿರುವುದಾಗಿ ಸರ್ಕಾರದವರಿಗೆ ದೂರು ಬಂದಿದೆಯೇ?

Dr. R. NAGAN GOWDA.—A complaint was lodged with the Police on 17-8-55 and then a reminder was sent to the Superintendent of Police on 11-1-56. I have no other information with me.

ಶ್ರೀ ಎ. ಭೀಮಪ್ಪ ನಾಯಕ್.—ಈ ಕೋಆಪರೇಟೀವ್ ಸೊಸೈಟಿ ಪೋರ್ಟ್‌ಫೋಲಿಯೋ ಮಂತ್ರಿಗಳಿಗೆ ಆರ್‌ರಿಗೆ ಪೋಲೀಸಿನವರು ಬೆಲೆ ಕೊಡಕೂಡದು ಎಂದು ಮಾಡಿಕೊಂಡಿದ್ದಾರೆಯೇ ಅಥವಾ ತಮಗೆ ಅದನ್ನು force ಮಾಡುವ ಶಕ್ತಿ ಇಲ್ಲವೇ?

ಡಾ॥ ಆರ್. ನಾಗನಗೌಡ.—ಪೋಲೀಸ್‌ನವರು ಸರ್ಕಾರದ ಎಲ್ಲ ಕೆಲಸಗಳನ್ನೂ ಮಾಡುತ್ತಾ ಇದ್ದಾರೆ. ಅದರ ಜೊತೆಗೆ ಇದನ್ನೂ ಮಾಡುತ್ತಾ ಇದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—ಸಾರ್ವಜನಿಕರ ಹಣವನ್ನು ದುರುಪಯೋಗಪಡಿಸಿದ ಎಂಬ ದೂರು ಬಂದ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳದೇ ಇದ್ದರೆ ಜನತೆಗೆ ಉಪಕಾರವಾಗುತ್ತದೆಯೇ?

ಡಾ॥ ಆರ್. ನಾಗನಗೌಡ.—ಇಲ್ಲ ನಾವು ಮೇಲಿಂದ ಮೇಲೆ ರಿಮೈಂಡ್ ಮಾಡಿದ್ದೇವೆ. ಜಾಗ್ರತೆ ಕ್ರಮ ತೆಗೆದು ಕೊಳ್ಳುತ್ತಾರೆ.

1 P.M.

ಶ್ರೀ ಎ. ಭೀಮಪ್ಪನಾಯಕ್.—ತಮ್ಮ ಆಡಳಿತ ಬಿಗಿಯಾಗಿಲ್ಲವೆಂದು ಇದರಿಂದ ಅರ್ಥವಾಗುತ್ತದೆಯಲ್ಲವೆ?

ಡಾ॥ ಆರ್. ನಾಗನಗೌಡ.—ಇಲ್ಲ. ಬಹಳ ಬಿಗಿಯಾಗಿದೆ.

ಶ್ರೀ ಎ. ಭೀಮಪ್ಪನಾಯಕ್.—ದಯವಿಟ್ಟು ಈ ವಿಷಯದಲ್ಲಿ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆರ್ಡರ್ ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಆದಷ್ಟು ಬೇಗನೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

Land for the construction of Regulated Market yard in Arasikere (Delay in acquisition).

Q.—446. Sri K. PANCHAKSHARIAH (Arsikere).—

Will the Government be pleased to state:—

(*a*) (*i*) whether they have sanctioned the amount for the construction of a Regulated Market yard at Arsikere;

(*ii*) when it was so sanctioned; and the amount:

(*b*) the steps taken by them to expedite the construction;

(*c*) whether acquisition proceedings have been completed?

A.—Dr. R. NAGAN GOWDA (Minister for Agriculture).—

(*a*) (*i*) Yes.

(*ii*) On 24th March 1955, a sum of Rs. 75,000 has been sanctioned.

(*b*) The Regulated Market Committee, Arsikere, have resolved at their meeting on 28th February 1955

to acquire 65 acres and 10 guntas of land at Arsikere for construction of a Market Yard. The Deputy Commissioner, Hassan District (Chairman, Regulated Market Committee', Arsikere, has been requested to take necessary action in the matter.

(c) No.

ಶ್ರೀ ಕೆ. ಪಂಚಾಕ್ಷರಯ್ಯ.—ಅಕ್ವಿಸಿಷನ್ ಕಾರ್ಯಕ್ರಮ ನಡೆದಿಲ್ಲವೆಂದು ಹೇಳಿದ್ದೀರಿ. ಈ ಕ್ರಮ ನಡೆಸುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ?

*Dr. R. NAGAN GOWDA.—This land was taken about a year ago and since then, the Deputy Commissioner, who is also the President, has been requested to take action in the matter. In the meanwhile, we have a communication from the Deputy Commissioner saying that there have been some protests from the owners of lands which are being acquired. Hence probably there is some delay.

ಶ್ರೀ ಕೆ. ಪಂಚಾಕ್ಷರಯ್ಯ.—ತಾವು 75 ಸಾವಿರ ರೂಪಾಯಿ ಕೊಟ್ಟು ಒಂದು ವರ್ಷವಾಗಿದೆ. ಅಕ್ವಿಸಿಷನ್ ಕಾರ್ಯಕ್ರಮ ನಡೆಸುವುದಕ್ಕೆ ಇನ್ನೂ ಎಷ್ಟು ವರ್ಷ ಬೇಕಾಗುತ್ತದೆ?

ಡಾ॥ ಆರ್. ನಾಗನಗೌಡ.—ಅಕ್ವಿಸಿಷನ್ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ (ಇವರೇ ರೆಗ್ಯುಲೇಟೆಡ್ ಮಾರ್ಕೆಟ್ಟಿನ ಅಧ್ಯಕ್ಷರು) ಹೇಳಿದ್ದೇನೆ. ಅವರು ಕ್ರಮ ತೆಗೆದುಕೊಂಡಿದ್ದಾರೆ. ಅಕ್ವಿಸಿಷನ್ ಮಾಡುವುದರಲ್ಲಿ ಜಮೀನನ್ನು ಹೊಂದಿರುವವರು ತಕರಾರು ಮಾಡಿದರೆ ಸ್ವಲ್ಪ ನಿಧಾನವಾಗುತ್ತದೆಂಬುದು ಮಾನ್ಯ ಸದಸ್ಯರಿಗೇ ಗೊತ್ತಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ತಾವು ಕೊಟ್ಟಿರುವ 75 ಸಾವಿರ ರೂಪಾಯಿಗಳಿಗೆ ಬಡ್ಡಿ ತೆಗೆದುಕೊಳ್ಳುವುದಿಲ್ಲವೆ?

ಡಾ॥ ಆರ್. ನಾಗನಗೌಡ.—ಸಾಲ ತೆಗೆದುಕೊಂಡು ಬಡ್ಡಿ ಕೊಡುವುದಿಲ್ಲವೆಂದರೆ ಹೇಗೆ ಒಪ್ಪುವುದಕ್ಕೆ ಸಾಧ್ಯವಾಗುತ್ತದೆ?

Mr. SPEAKER.—Sri Mulka Govinda Reddy is permitted to put his question in the previous set, Question No. 170.

1 P.M.

Primary School Building for Dandina Kurubarahatti, Chitaldrug Taluk

Q.—170. Sri Mulka GOVINDA REDDY (Chitaldrug).—

Will the Government be pleased to state :—

(a) whether the people of Dandina Kurubarahatti, Chitaldrug Taluk, have deposited any amount as donation for construction of a primary school building :

(b) if so, when and what is the amount ;

(c) what action has been taken ?

A. Sri A. G. RAMACHANDRA RAO (Minister for Law and Education).—

(a Yes.

(b) On 16th April 1949 : Rs. 2,000,

(c) Necessary action is being taken to put up a suitable building for the school.

Sri Mulka GOVINDA REDDY.—May I know, Sir, why the Government have delayed for such a long time taking action in this matter ?

*Sri A. G. RAMACHANDRA RAO.—Financial difficulties were responsible for the delay.

Sri Mulka GOVINDA REDDY.—I want to know whether the estimate has been prepared and approved ?

Sri A. G. RAMACHANDRA RAO.—We have not yet approved. We will take immediate action in the matter.

QUESTIONS FOR ANSWERS ON THE DAY

(But not taken up).

Bangalore Race Club (Renewal of Licence)

Q.—159. Sri SYDNEY A. THOMAS (Nominated).—

Will the Government be pleased to state:—

(a) whether they have decided against renewing the licence of the Bangalore Race Club for the year 1956 ;

(b) if so, the reasons for the same ;

(c) whether they are aware that racing in the State attracts increased business and trade, not to speak of increased revenue by way of Betting and Entertainment taxes ;

(d) whether as an alternative they intend to invite the Palace authorities to conduct races at Mysore as was done last year ;

(e) whether any definite policy decision regarding horse racing in the Stateh as been taken ?

A.—Sri H. SIDDAVEERAPPA (Minister for Home).—

(*a*) In the absence of a valid application from the Race Club for renewal of licence for the year 1956, the question of grant or refusal of the same does not arise.

(*b*) *Vide* reply to clause (*a*).

(*c*) Yes.

(*d*) No.

(*e*) The matter is under the consideration of Government.

Co-operation (Central Aid in Five-Year Plans)

Q.—106. Sri D. DEVARAJ URS (Hunsur).—

Will the Government be pleased to state:—

(*a*) the total amount of aid given by the Central Government to the State Governnment for 'Co-operation' both in the form of grants and loans during the First Five-Year Plan;

(*b*) the amount of grant or loan asked for in the Second Five-Year Plan;

(*c*) the amount of money allotted in the Plan for the development of co-operative farming?

A.—Dr. R. NAGAN GOWDA (Minister for Agriculture).—

(*a*) Nil.

(*b*) Rs. 133·3 lakhs (for both the items). The allocation between loans and grants has not yet been finalised.

(*c*) Nil, according to the State plan.

Adikarnataka Co-operative Societies.

Q.—630. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) how many A.K. Co-operative Societies there were in the State during 1930, 1940, 1950;

(*b*) how many are still continuing as A.K. Co-operative Societies;

(*c*) what is the total amount of subsidy and subvention distributed to societies during 1954-55 in the State (name of each society may be given along with its address)?

A.—Dr. R. NAGAN GOWDA (Minister for Agriculture).—

(*a*) 1930 .. 39
1940 ... 159
1950 ... 143

(*b*) 143.

(*c*) The total amount sanctioned as subvention to the following Co-operative Societies is Rs. 99,100 during 1954-55.

1	Sri Laxmidevi A. K. C. S., Nerale, Nanjangud Taluk ...	5,000
2	District Co-operative Central Banks of Shimoga, Hassan and Mandya	15,750
3	Mysore State Cotton Handloom Weavers' C.S., Bangalore	8,000
4	Koppa Circle M.P.C.S., Maddur Taluk	3,000
5	Hittanahalli Koppal Circle M.P.C.S.	2,000
6	Arsikere Taluk M.P.C.S.	3,000
7	Holenarasipur Taluk M.P. C.S. ...	2,000
8	Shikaripur Taluk M.P.C.S.	5,000
9	Humcha Circle M.P.C.S.	1,000
10	Devangi Circle M.P.C.S.	2,000
11	Gubbi Taluk M.P.C.S.	4,000
12	Medical College C.S., Mysore	500
13	Co-operative Department C.S., Bangalore	2,000
14	Mysore Co-operative Institute ...	3,000
15	Abbinahole Circle M.P.C.S.	3,000
16	Lingadahalli Sri Anjaneyaswamy Co-operative Society	2,500
17	Kunigal Taluk M.P.C.S.	5,000
18	Jai Bharat High School C.S., Attibele	500
19	Hassan Taluk M.P.C.S.	3,100
20	Gandhigram C.S., Nelamangala ...	1,000
21	Jagalur Town C.S.	4,000
22	Mysore Provincial House Building Corporation, Bangalore	2,750

23	Co-operative Cottage Industries Co-operative Society, Tumkur ...	1,000
24	Mullegal Valley Co-operative Farming Co-operative Society ...	1,000
25	Attigudda Tenant Farming C.S. ..	1,500
26	Karekere Joint Farming C.S.	2,000
27	Halaganahalli Farming C.S.	2,500
28	Vanakemaradi Farming C.S.	1,000
29	Arehalli Farming C.S. ...	1,000
30	Thalikatte Farming C.S. ...	1,000
31	Anjanapura Co-operative Farming Co-operative Society ...	7,500
32	Rudrapura Co-operative Farming Co-operative Society, Channagiri taluk	2,500
	Total ...	99,100

PRIVILEGE MOTION.

Re. Sri H. M. Channabasappa's Eligibility to be Member of the House.

Sri K. PUTTASWAMY (Srirangapatna).– Sir, is he raising a point of privilege of the House or privilege of a member ?

*Sri Mulka GOVINDA REDDY (Chitaldrug).—Sir, I have tabled a motion of privilege of the House.

Sir, Sri H. M Channabasappa was sitting and participating in the deliberations of this House. Under the Constitution of India and under Article 170, the State Assemblies are constituted by direct election and in one particular case only, namely, with regard to the Anglo-Indian community, the Rajapramukh has got power to nominate one Member. So, it is only the elected Members of this Assembly that can sit and participate in the deliberations of this House. Sri Channabasappa contested for the elections in 1952 and he was defeated by one Sri Mariappa and that election was set aside and when a re-election was held, for the improper rejection of the nomination of one Sri Kariappa, Sri Channabasappa was declared elected, though there was no contest as such. An election petition was filed. The Tribunal after sitting for 13½ months, gave a decision on 31st March 1956 declaring the election of Sri Channabasappa as wholely void. That decision was the unanimous decision of the Tribunal. They have particularly stated that the election was wholely void, implying that from the date of election Sri Channabasappa was not elected and whatever action he has done as a member of the Legislature from that date does not amount to have been done according to law. It must be remembered, Sir, that in the first general elections, he was defeated; in the second election, he was elected without any contest, as there was improper rejection of the nomination paper. The Election Tribunal has very unequivocally said that the rejection of the nomination paper was improper and therefore Sri Channabasappa has ceased to be member of the Legislative Assembly according to the Tribunal from the date on which he was declared to have been elected. Sri Channabasappa being a party in that election proceedings, has come to know of the judgment that has been delivered by the Election Tribunal on 31st March 1956. He cannot at any rate plead ignorance of the result of his election. To-day, he has attended this Assembly—in what capacity, I do not know. When he was made a Minister of the Government of Mysore, he was made a Minister in his capacity as Member of the Legislative Assembly, and to-day when he has ceased to be a Member of the Legislative Assembly, he has no right to come and attend and participate in the proceedings of this House. For my purpose and for the purpose of the Constitution, he is a stranger and an intruder and he has committed an offence for which he will have to pay a penalty of Rs. 500 for every day of his attendance. When a person is not a Member of this Assembly, either elected or nominated—and only an Anglo-Indian member can get nominated and no other—he has

(SRI MULKA GOVINDA REDDY.)

come and attended this Assembly and therefore fundamentally the principle of election that has been adumbrated under the Constitution has been violated by him and he is a culprit to that extent and therefore a breach of privilege of the Members of this House, severally and collectively has occurred. I would therefore request the Chair to direct Sri Channabasappa not to step into the precincts of this House and request that immediate steps be taken to hold an election for Periapatna Constituency.

Sri A. BHEEMAPPA NAIK (Molakalmuru).—How do we know that this order has been passed unless it has been published somewhere officially? How do we know that Sri Channabasappa wants to come in here? Sri Channabasappa is not here and my friend said that he is an intruder and so on when he is not actually sitting in this House. I think the House cannot take cognisance of the information which has been published only in a newspaper.

Sri Mulka GOVINDA REDDY.—Sir, Sri Bheemappa Naik was not here when I raised the point of privilege as soon as the Assembly commenced its business today. Sri Channabasappa was sitting in the Assembly and I raised the point of privilege drawing attention of the Chair to the fact that the election of Sri H. M. Channabasappa has been declared wholely void and that the matter had been published in the issue of the *Deccan Herald* and all other newspapers on 1st April 1956; and the judgment was delivered in the open court wherein he was a party. Knowing fully well that his election was declared void, by sitting in the House, he has committed a double offence. If he had attended the Session without knowing what the result was, it was a different matter. Knowing full well, that his election had been set aside, he participated in the deliberations of this Assembly to which the attention of the Chair was drawn.

Mr. SPEAKER.—Is it the opinion of the Hon'ble Member that he is offending article 193 of the Constitution?

Sri Mulka GOVINDA REDDY.—I will read that Article, Sir:

> "If a person sits or votes as a member of the Legislative Assembly or the Legislative Council of a State before he has complied with the requirements of article 188, or when he knows that he is not qualified or that he is disqualified for membership thereof, or that he is prohibited from so doing by the provisions of any law made by Parliament or the Legislature of the State, he shall be liable in respect of each day on which he so sits or votes to a penalty of five hundred rupees to be recovered as a debt due to the State."

That is the point referred to in Article 193. If in addition to participating in the deliberations of this House, he has carried on the administration of the State, he is also liable under some other provisions of this Constitution.

Mr. SPEAKER.—What does the Hon'ble Member say about 164 (4)?

Sri Mulka GOVINDA REDDY.—I shall read that Article also, Sir:

> "164 (4): A Minister who for any period of six consecutive months is not a member of the Legislature of the State, shall at the expiration of that period cease to be a Minister"

This clause does not apply to Sri Channabasappa for the following reasons, Sir: Sri Channabasappa was a Minister of the Government of Mysore in his capacity as a Member of the Legislative Assembly. He was not made Minister of the State when he was not a Member of this Assembly. That distinction should be clearly made. He was made Minister because he was a Member of the Legislative Assembly and therefore this particular clause does not apply. According to the Election tribunal, his election has been set aside from the date of his declaration as being elected Member of the Assembly Even granting that he was not a Member when he was made a Minister of the Government of Mysore, he has spent more than eleven months as a Minister even

granting that this clause does not apply to Sri Channabasappa.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಈಗ ಮಾನ್ಯ ಸದಸ್ಯರಾದ ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಎತ್ತಿರತಕ್ಕಂಥ ಸಭೆಯ ಹಕ್ಕು ಬಾಧ್ಯತೆಗೆ ಸಂಬಂಧಪಟ್ಟ ಪ್ರಶ್ನೆಯ ಬಗ್ಗೆ ಅವರು ಹೇಳಿರುವುದರ ಜೊತೆಗೆ ಒಂದೆರಡು ವಿಷಯಗಳನ್ನು ಮಾತ್ರ ಹೇಳಬೇಕಾಗಿದೆ. ಇದರಲ್ಲಿ ಶ್ರೀ ಭೀಮಪ್ಪನಾಯಕರು ಒಂದು ಅನುಮಾನವನ್ನು ವ್ಯಕ್ತಪಡಿಸಿದರು. ಇಲ್ಲಿ ಶ್ರೀ ಭೀಮಪ್ಪನಾಯಕರು ವ್ಯಕ್ತಪಡಿಸಿರುವ ಅನುಮಾನಕ್ಕೆ ಯಾವ ಆಸ್ಪದವೂ ಇಲ್ಲ. ಅವರು ವಕೀಲರಾದ್ದರಿಂದ ಓಪನ್ ಕೋರ್ಟಿನಲ್ಲಿ ಜಡ್ಜ್‌ಮೆಂಟ್ ಅನೌನ್ಸ್ ಮಾಡಿದರೆ ಅದರ ಅರ್ಥವೇನೆಂಬುದು ಕೂಡ ಅವರಿಗೆ ಗೊತ್ತಿದೆ.

ಆಮೇಲೆ ಶ್ರೀ ಎಚ್. ಎಂ. ಚನ್ನಬಸಪ್ಪನವರು ಮಾನ್ಯ ಸಭೆಯ ಸದಸ್ಯರಾಗಿದ್ದಾರೆ ಮತ್ತು ಶ್ರೀ ಎಚ್. ಎಂ. ಚನ್ನಬಸಪ್ಪನವರು ಅವರ ಚುನಾವಣೆಗೆ ಸಂಬಂಧಪಟ್ಟ ಹಾಗೆ ಆ ಕೇಸಿನಲ್ಲಿ ಒಬ್ಬರು ಪಾರ್ಟಿ ಕೂಡ ಆಗಿದ್ದಾರೆ. ಆದ್ದರಿಂದ ಎಲೆಕ್ಷನ್ ಟ್ರಿಬ್ಯೂನಲ್ ತೀರ್ಮಾನ ಕೊಟ್ಟ ತಕ್ಷಣವೇ ಶ್ರೀ ಚನ್ನಬಸಪ್ಪನವರಿಗೆ ಆ ವಿಷಯ ತಿಳಿದಿದೆ. ಮತ್ತು ಆ ಸದಸ್ಯರಿಗೆ ಇಲ್ಲಿ ಸಂಬಂಧಪಟ್ಟಿರತಕ್ಕ ಒಬ್ಬರು ಸಭಾ ಸದಸ್ಯರಿಗೂ ಅಧ್ಯಕ್ಷರಿಗೂ ಈ ತೀರ್ಮಾನವನ್ನು ಕಮಿಷನ್ನಿನವರು ತಿಳಿಸಿಯೇ ಇರುತ್ತಾರೆ; ತಿಳಿಸಬೇಕಾದದ್ದೂ ಅವರ ಕೆಲಸ. ಆದ್ದರಿಂದ ತಾವು 174ನೆಯ ವಿಧಿ ಪ್ರಕಾರ ಈ ವಿಷಯವನ್ನು ಸಭೆಯ ಗಮನಕ್ಕೆ ತಂದು ಕಾರ್ಯಕ್ರಮವನ್ನು ತೆಗೆದುಕೊಂಡು ಒಂದು ವ್ಯವಸ್ಥೆ ಮಾಡಿರುತ್ತೀರಿ. ಶ್ರೀ ಚನ್ನಬಸಪ್ಪನವರು ಈ ದಿವಸ ಸಭೆಯಲ್ಲಿ ಹಾಜರಿರುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಈಗಾಗಲೇ ತಾವು ಸಭೆಯ ಗಮನಕ್ಕೆ ತಂದಿರತಕ್ಕ ಕ್ಲಾಜಿನ ಆಶ್ರಯದಂತೆ ಅವಕಾಶವನ್ನು ಪಡೆದು ಒಂದು ಅರ್ಥದಲ್ಲಿ ಬಹುಶಃ ಈ ಸಭೆಗೆ ಬರತಕ್ಕ ಒಂದು ದಾರ್ಷ್ಟ್ಯವನ್ನು ಮಾಡಿರಬೇಕೆಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಮಾಡಿಲ್ಲ, ಅವರಿಗೇನೂ ಹೇಳಿಲ್ಲ, ಈ ವಿಷಯ ನನಗೆ ಗೊತ್ತಿಲ್ಲ. I also read it in the paper. The point is: whether that is sufficient. Another point is: under 164 (4), is he not entitled to si tas a Member and continue to work in this House ?

ಶ್ರೀ ಎಸ್. ಗೋಪಾಲಗೌಡ.—ಆ ವಿಧಿಯ ಪ್ರಕಾರ ಸಾಮಾನ್ಯವಾಗಿ ಯಾರು ಈ ಸಭೆಯ ಸದಸ್ಯರಲ್ಲವೋ, ಚುನಾವಣೆ ಮುಖಾಂತರವೇ ಆಗಲಿ, ನಾಮಕರಣದ ಮುಖಾಂತರವೇ ಆಗಲಿ ಯಾರು ಈ ಸಭೆಯ ಸದಸ್ಯರಾಗಿರುವುದಿಲ್ಲವೋ ಅಂಥವರಿಗೆ ಮಂತ್ರಿಮಂಡಲದಲ್ಲಿ ಸ್ಥಾನ ಕೊಡುವ ಸಂದರ್ಭದಲ್ಲಿ ಮೇಲ್ಮನೆ ಸದಸ್ಯರನ್ನಾಗಿ ಮಾಡಿ ಅಥವಾ ನಾಮಕರಣ ಮಾಡಿ ಆರು ತಿಂಗಳಲ್ಲಿ ಅವರು ಈ ಸಭೆಯ ಸದಸ್ಯರಾಗಬೇಕು. ರಾಜ್ಯಾಂಗದಲ್ಲಿ ಈ ರೀತಿ ಕಾಣಿಸಿದೆ. ಯಾವ ಸದಸ್ಯರು ಈ ಸಭೆಯ ಸದಸ್ಯರಾಗಿದ್ದಾರೋ ಮತ್ತು ಯಾರ ಸದಸ್ಯತ್ವದ ಬಗ್ಗೆ ಎಲೆಕ್ಷನ್ ಡಿಸ್ಪ್ಯೂಟ್ ಇದ್ದು ಅವರ ಕೇಸನ್ನು ಟ್ರಿಬ್ಯೂನಲ್‌ಗೆ ಒಪ್ಪಿಸಿದ್ದು ಆ ಟ್ರಿಬ್ಯೂನಲ್ ಅವರ ಚುನಾವಣೆ ಸಂಪೂರ್ಣವಾಗಿ ಅಕ್ರಮವೆಂದು ತಿಳಿಸಿದ ಮೇಲೂ ಕೂಡ ಈ ಸಭೆಯಲ್ಲಿ ಅವರು ಸದಸ್ಯರಾಗಿ ಬೇರೆ ಒಂದು ವಿಧಿಯ ಆಶ್ರಯದಲ್ಲಿ ಇಲ್ಲಿದ್ದಾರೆಂದರೆ, ಅದು ಸಂಪೂರ್ಣವಾಗಿ ಅಕ್ರಮವಾಗುತ್ತದೆ. ಅಂಥ ಒಂದು ಅವಕಾಶ ಈ ವಿಧಿಗಳಲ್ಲಿ ಎಲ್ಲೂ ಕಂಡುಬರುವುದಿಲ್ಲವೆಂಬುದು ನನ್ನ ಖಚಿತವಾದ ಅಭಿಪ್ರಾಯ. ಆದ್ದರಿಂದ ಇದರಲ್ಲಿ ಈಗಾಗಲೇ ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಹೇಳಿರುವ ಹಾಗೆ ಶ್ರೀ ಚನ್ನಬಸಪ್ಪನವರು ನಾನಾ ಅಕ್ರಮಗಳಿಗೆ ಈ ಕಾರಣದಿಂದ ಗುರಿಯಾಗಿದ್ದಾರೆ.

Mr. SPEAKER.—We shall not go into the merits of the case.

ಶ್ರೀ ಎಸ್. ಗೋಪಾಲಗೌಡ.—ಪ್ರಿವಿಲೆಜ್ ಹೇಗೆ ಬ್ರೀಚ್ ಆಗಿದೆ ಎಂಬುದನ್ನು ತಿಳಿಸುತ್ತೇನೆ. ಚುನಾವಣೆ ಕ್ರಮವಾಗಿ ನಡೆಯಲಿಲ್ಲ ಎಂದು ಎಲೆಕ್ಷನ್ ಟ್ರಿಬ್ಯೂನಲ್ ತೀರ್ಮಾನ ಕೊಟ್ಟ ತಕ್ಷಣ, ಅದು ಯಾವಾಗ ತಿಳಿಯಿತೋ ಆ ಕ್ಷಣ, ಅವರು ಮಂತ್ರಿಮಂಡಲದ ಕೆಲಸ ಮತ್ತು ಈ ಸಭೆಯಲ್ಲಿ ಭಾಗವಹಿಸತಕ್ಕ ಕೆಲಸ ಎರಡನ್ನೂ ಕೈಬಿಡಬೇಕಾಗಿತ್ತು. ಇದು ಪ್ರೈಮಾಫ್ಯಾಸಿ ಕೇಸ್, ಇದರಲ್ಲಿ ಹೆಚ್ಚಿನ ವ್ಯಾಖ್ಯಾನಕ್ಕೆ ಅವಕಾಶವಿಲ್ಲ. ಜೊತೆಗೆ ತಾವು ಉದಹರಿಸಿದ ವಿಧಿಯ ಪ್ರಕಾರ ಅವರು ಶನಿವಾರದಿಂದ ಮಂತ್ರಿಮಂಡಲದ ಕೆಲಸವನ್ನು ಕೂಡ ಮುಂದುವರಿಸಿಕೊಂಡು ಹೋಗಿದ್ದಾರೆ; ಈಗಲೂ ಮುಂದುವರಿಸಿಕೊಂಡು ಹೋಗುತ್ತಾ ಈ ಸಭೆಯಲ್ಲಿ ಕುಳಿತಿದ್ದಾರೆ ಎಂದು ಹೇಳುವುದು ನನಗಂತೂ ಅರ್ಥವಾಗುವುದಿಲ್ಲ; ಯಾವ ರೀತಿ ತಾವು ಆಶ್ರಯ ಕೊಟ್ಟಿದ್ದೀರೋ ನನಗೆ ತಿಳಿಯುವುದಿಲ್ಲ. ಆದ್ದರಿಂದ ಈ ರೀತಿ ಮಾನ್ಯ ಸಭೆಯ ಹಕ್ಕು ಬಾಧ್ಯತೆಗೆ ಧಕ್ಕೆ ಬರತಕ್ಕ ಒಂದು ಸಂಬಂಧದಲ್ಲಿ ತಾವು ಸೂಕ್ತವಾದ ಕ್ರಮವನ್ನು ಕೈಕೊಳ್ಳಬೇಕೆಂಬುದು ನನ್ನ ಅರಿಕೆ. ತಾವೂ, ನಾನೂ ಅವರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಬಹುದು. ಮಾನ್ಯ ಸದಸ್ಯರೊಬ್ಬರು ಈ ರೀತಿ ತೀರ್ಮಾನವಾಗಬಾರದಾಗಿತ್ತು ಎಂದು ಹೇಳುತ್ತಿದ್ದರು. ಆದರೆ ಇದು ನಮ್ಮ ಕೈವಾಡವಲ್ಲ. ಆದ್ದರಿಂದ ಸಹಾನುಭೂತಿಯನ್ನು ವ್ಯಕ್ತಪಡಿಸಿದರೂ ಅದು ವ್ಯರ್ಥವೇ. ಅವರಿಗೆ ಪ್ರತ್ಯೇಕವಾಗಿ ಸಹಾನುಭೂತಿಯನ್ನು ವ್ಯಕ್ತಪಡಿಸಬಹುದೇ ಹೊರತು ಈ ಸಭೆಯಲ್ಲಿ ಸದಸ್ಯರಾಗಿರಲಿ, ಪದವಾಗಿಲ್ಲ ಎಂಬ ಸಹಾನುಭೂತಿಯನ್ನು ಮಾತ್ರ ಅವರಿಗೆ ಕರುಣಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದು ಪ್ರೈಮಾಫ್ಯಾಸಿ ಕೇಸ್ ಆಗಿರುವುದರಿಂದ ತಾವು ಹೆಚ್ಚು ತಡಮಾಡದೆ ಸೂಕ್ತ ಕಾರ್ಯಕ್ರಮ ಕೈಕೊಂಡು ಶ್ರೀ ಚನ್ನಬಸಪ್ಪನವರು ಟ್ರೆಜರಿ ಗ್ಯಾಲರಿಯಲ್ಲಿ ಬಂದು ಕೂತುಕೊಳ್ಳದಂತೆ ಅಪ್ಪಣೆ ಕೊಡಿಸಬೇಕೆಂದು ಪ್ರಾರ್ಥಿಸುತ್ತೇನೆ.

Sri K. PATTABHIRAMAN (Kolar).—Sir, before I offer some remarks on this very important issue that has been raised by my friend Sri Mulka Govinda Reddy, I should like to give some personal expression. To the person concerned—Sri Channabasappa—I have absolutely nothing but greatest regard and I am sure he will not mistake the spirit in which I am making these remarks.

We are only concerned with one question and that is, Sri Channabasappa has not been reappointed as a Minister and he continues to sit in this House. If the former was the case, I personally feel, it would have

(SRI K. PATTABHIRAMAN.)

made a world of difference. That kind of a case would have certainly attracted article 164 (4) that you were referring to. This is how it reads :

> "164 (4). A Minister who for any period of six consecutive months is not a member of the Legislature of the State shall at the expiration of that period cease to be a Minister."

Therefore, we must draw a distinction, in my humble opinion, between the two positions. Sri Channabasappa is a Minister who was appointed some months ago—nearly a year—continuing to sit in contradistinction from Sri Channabasappa reappointed as a Miniter after the orders were pronounced in the open Court on Saturday. But the question is, Sri Channabasappa is here as a *bona fide* member of this House on account of the Returning Officer declaring him as returned unopposed and then he being appointed as a Minister. The Tribunal has now declared his election as void and therefore he ceases to be a member. It is in that background that you will have to consider this point. I personally feel, the determining test in this case would be the six months period; that is the most important point in article 164(4). It means not that he could continue in spite of the order of the Tribunal for another six months from now, but it says that the statut ry period of six months means from the date of his becoming a member. That is the extreme limit. If you say six months would apply from this day, that would be extending the period that is not contemplated. If you think that from Saturday last the six months period would apply and he can become a member, that would be defying the very purpose of article 164(4) and extending the period that is not warranted under law and what is not in conformation with 164(4). Therefore, it is very clear. It is one of the accepted principles of Constitution, Law and Practice that wherever periods are mentioned they should always be strictly considered. It is not open to any Authority to extend that period. Therefore, he ceases to be a member.

In these matters, apart from the Constitution, it is the usage and what is called the political and conventional side of these things that count. Proper conventions have got to be set up. When a Judicial Tribunal pronounces that he ceases to be a member, to say, notwithstanding that decision he may continue for six months from now, would be—I do not want to say contempt—I would only say, discourtesy to the Tribunal. As I already pointed out, this is not a question of reappointment, but a question of continuing as Minister.

So far as the right of audience is concerned, the right of audience and the right of sitting in this House is available in three ways. One is, duly elected as a member of this House; second, by being a nominated member who can only be an an Anglo-Indian; and third, any Minister who can sit here but without the right of voting. These would be the three tests to see if there is breach of privilege of this House or not. Certainly, Sri Channabasappa cannot come under the first category becase the competent Tribunal has declared that he ceases to be a member of this House; nor in the second, only available to an Anglo-Indian; the only provision under which he can get the right of audience is as Minister who gets the right of sitting in the House but not entitled to vote. The moment he is declared to have ceased as a member, he has got to be reappointed; then only 164(4) will be attracted.

Sir, there is also a precedent, though to a limited extent, in the case of the Finance Minister of Mandhya Pradesh. I do not say that the circumstances in both the cases are similar. Sri Byani the Finance Minister of Madhya Pradesh had to face a similar case before the Tribunal. The Tribunal pronounced that he ceased to be a member and the election was set aside. He did not resign. A writ was filed in the High Court. When the writ was pending, he resigned. Though it is not a judicial precedent that I should like to cite before this House,

I only suggest that he did well in resigning. I feel Sri Channabasappa should resign and if the Government think that they cannot go on without him, it is certainly open for them to renominate him as Minister. This is a matter which you can either dispose of as on *prima facie* material or refer it to the Privilege Committee as you deem it right.

1-30 P.M.

I personally feel that the privilege motion made by Sri Govinda Reddy deserves to be upheld.

Mr. SPEAKER.—May I bring this to the notice of the Hon'ble Member? Section 107 of the Representation of the People Act says :

> "An order of the Tribunal under Section 98 or Section 99 shall not take effect until it is published in the *Gazette of India* under Section 106."

Sri K. PATTABHIRAMAN.—Your doubts are very genuine, but may I hope to satisfy you? Please read Section 107 a bit carefully. "An order of the Tribunal under Section 98 or section 99 shall not take effect until it is published in the *Gazette of India* under section 106." That refers to the consequential steps which should ensue as a result of that. But so far as this is concerned, you will see under the Constitution a judgment pronounced in open court is a judgment *in rem* and not a judgment *in personem*. It is a judgment known to the whole world. You may remember another case arising from Tarikere constituency. The Tribunal's order was questioned by the High Court of Mysore and the High Court of Mysore set aside the order of the Tribunal and declared that Mr. Nagappa was a member. You may remember that the moment the order was pronounced, Sri Nagappa came and sat as a member of this House. It is the question of further steps that is what is contemplated in Section 107. Unless it comes in the *Gazette of India*, the further steps cannot take the effect. Suppose Sri Channabasappa—I don't propose it to him but I am giving an analogy—had filed an appeal before the High Court and the High Court stayed the order. He would have been entitled to sit here. That is different from the interpretation that you are putting on section 107. That, with great respect I may suggest, would be very much narrowing down the scope of section 107. That refers to the further steps that follow as a result of section 107. He can get the right of audience only if he is a Minister. Sri Mulka Govinda Reddy has made it very clear. Even Sri Channabasappa does not claim to be a member of this House to-day. He claims the right of audience as a Minister of the State and he is entitled to that, except to the question of right of voting; in other respects the Minister of State has got a right of auidence, provided he again becomes a Minister. The easiest thing, the correct thing is for him to be re-appointed as a Minister and he takes the oath of office again, comes and sits; we would be very happy with him. It is only the technical aspect I want the Chair to consider.

Mr. SPEAKER.—Can the Chair take notice of what has appeared in the Press and act according to it?

Sri K. PATTABHIRAMAN.—A judgment pronounced in open court is a judgment *in rem*. Supposing in a sessions trial, the accused is in the dock. In open court the Judge delivers a judgment to the stenographer. "In these circumstances, I acquit the man." That moment the accused is out of the dock, but to retain him then would be a case of wrongful custody. In fact, under the Constitution, you can take judicial notice of a judgment pronounced in open court. It does not mean that a copy of it has to be sent to you. Sri Channabasappa can get away to London and say, 'I do not know.' The moment it is pronounced, "may it be known to whomsoever concerned"—that is the tendency of a Judgment. It is certainly open to you to take judicial notice of a judgment delivered by a Tribunal. I do not know if Sri Channabasappa really pleads ignorance of the judgment. If he does, we would be very anxious to hear him to take up that stand so that

(SRI K. PATTABHIRAMAN.)

we may add further, if need be. Will you give him an opportunity?

* ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಶ್ರೀ ಕೆ. ಪುಟ್ಟಾಭಿರಾಮನ್ ಅವರಿಗೆ ಮಾನ್ಯ ಅಧ್ಯಕ್ಷರು ಆ ಪೀಪಲ್ಸ್ ರೆಪ್ರೆಸೆಂಟೇಷನ್ ಆಕ್ಟಿನ 107 ನೆಯ ಸೆಕ್ಷನ್ನನ್ನು ನೋಡಿ ಎಂಬುದಾಗಿ ಹೇಳಿದಾಗ, ಅವರು ಆ ಸೆಕ್ಷನ್ನನ್ನು ಓದಿ ಅದು ಈ ಸಂದರ್ಭಕ್ಕೆ ಅನ್ವಯಿಸುವುದಿಲ್ಲ ಎಂಬುದಾಗಿ ಹೇಳಿದರು. ಹಾಗೆ ಅನ್ವಯಿಸುವುದಿಲ್ಲ ಎಂಬುದು ಏತಕ್ಕಾಗಿ ಎಂದರೆ—ಅದಕ್ಕೆ ಕಾರಣಗಳನ್ನು ಸೂಚಿಸುತ್ತ ಶ್ರೀ ಕೆ. ಪಟ್ಟಾಭಿರಾಮನ್ ಅವರು ಈಗ ಆ ಟ್ರಿಬ್ಯುನಲ್ಲಿನವರು ಆ ತೀರ್ಮಾನವನ್ನು ಓಪನ್ ಕೋರ್ಟಿನಲ್ಲಿ ಬಹಿರಂಗವಾಗಿ ಪ್ರೊನೌನ್ಸ್ ಮಾಡಿದ್ದಾರೆ, ಆದಕಾರಣ ಶ್ರೀ ಎಚ್. ಎಂ. ಚನ್ನಬಸಪ್ಪನವರು ನನಗೆ ಆ ವಿಚಾರ ಗೊತ್ತಿಲ್ಲ ಎಂಬುದಾಗಿ ಹೇಳಿ ಈಗ ಅದರ ಸೌಲಭ್ಯವನ್ನು ಪಡೆಯಲು ಸಾಧ್ಯವಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಅಷ್ಟೇ ಅಲ್ಲದೆ ಅವರು ಈ ವಿಚಾರವನ್ನು ಪತ್ರಿಕೆಗಳಲ್ಲೂ ಕೂಡ ಪಬ್ಲಿಷ್ ಮಾಡಿಸಿದ್ದಾರೆ ಎಂಬುದಾಗಿ ಹೇಳಿ ಈಗ ಶ್ರೀ ಚನ್ನಬಸಪ್ಪನವರು ಈ ವಿಚಾರ ನನಗೆ ಗೊತ್ತಿಲ್ಲ ಎಂದು ಹೇಳಲು ಸಾಧ್ಯವಿಲ್ಲ ಎಂದು ಹೇಳಿದರು. ಆದರೆ ಈಗ ಈ 107ನೆಯ ಸೆಕ್ಷನನ್ನು ವ್ಯಾಖ್ಯಾನ ಮಾಡುವುದಕ್ಕೆ ಪ್ರವೇಶಮಾಡುವ ಮುನ್ನ ನಾವು ಈ ಸೆಕ್ಷನ್ನನ್ನು ಒಂದಾವರ್ತಿ ಓದಿ ಬಿಡೋಣ. ಆಗ ಇದು ಸರಿ ಹೋಗುತ್ತದೆ ಆ ಸೆಕ್ಷನ್ 107ರಲ್ಲಿ ಹೀಗೆ ಹೇಳಿದೆ:—

"*Orders to take effect only on publication.*—An order of the Tribunal under section 98 or section 99 shall not take effect until it is published in the *Gazette of India* under section 106."

ಹೀಗೆ ಈ ಸೆಕ್ಷನ್ 98 ಮತ್ತು 99 ಈ ಸಂದರ್ಭಕ್ಕೆ ಅನ್ವಯವಾಗುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದ್ದರೆ ಶ್ರೀಮಾನ್ ಪಟ್ಟಾಭಿರಾಮನ್‌ರವರು ಈ ಸೆಕ್ಷನ್ 98 ಮತ್ತು 99 ಎರಡನ್ನೂ ಸೇರಿಸಿ ಓದಿದ್ದರೆ ಆಗ ಅವರಿಗೆ ಇದು ಚೆನ್ನಾಗಿ ಅರ್ಥವಾಗುತ್ತಿತ್ತು. ಆದರೆ ಈ ಸೆಕ್ಷನ್‌ಗಳು ಈ ಸಂದರ್ಭಕ್ಕೆ ಅನ್ವಯಿಸುವುದಿಲ್ಲ ಎಂಬ ಅಂಶವನ್ನು ಅವರು ಏತಕ್ಕಾಗಿ ಹೇಳಿದರೆಂದರೆ: ಆ ಟ್ರಿಬ್ಯುನಲ್ ಅವರು ಆ ಆರ್ಡರನ್ನು ಓಪನ್ ಕೋರ್ಟಿನಲ್ಲಿ ಪ್ರೊನೌನ್ಸ್ ಮಾಡಿದ್ದಾರೆ. ಆದುದರಿಂದ ಇವು ಅನ್ವಯಿಸುವುದಿಲ್ಲವೆಂದು ಹೇಳಿದರು.

"Section 98: Decision of the Tribunal.—At the conclusion of the trial of an election petition the Tribunal shall make an order—

(*a*) dismissing the election petition; or (*b*) declaring the election of the returned candidate to be void; or (*c*) declaring the election of the returned candidate to be void and the petitioner or any other candidate to have been duly elected; or (*d*) declaring the election to be wholly void."

ಈಗ ಆ ಟ್ರಿಬ್ಯುನಲ್ ಆರ್ಡರ್‌ನ್ನು ನಾವು ಪತ್ರಿಕೆಗಳಲ್ಲಿ ಮಾತ್ರ ಓದಿದ್ದೇವೆ. ಆದರೆ ಈ ಸೆಕ್ಷನ್‌ನಲ್ಲಿ ಡಿಫೈನ್ ಮಾಡಿರುವ ರೀತ್ಯಾ ಎಂದರೆ—

"Section 99: Other orders to be made by the Tribunal—(1) At the time of making an order under section 98 the Tribunal shall also make an order—(*a*) Where any charge is made in the petition of any corrupt or illegal practice having been committed at the election. . . ."

ಇದು ಹಾಗೆ ಅಕ್ರಮವಾದ ಪ್ರಾಕ್ಟಿಸ್ ಆಗಿದ್ದಿದ್ದರೆ ಆ ವಿಚಾರವನ್ನು ಈ ಸೆಕ್ಷನ್ 99 ರಲ್ಲಿ ಅವರು ನಮೂದಿಸುತ್ತಿದ್ದರು. ಈಗ ನಮ್ಮ ಪ್ರಕೃತ ಸಂದರ್ಭಕ್ಕೆ ಈ ಸೆಕ್ಷನ್ 99ನ್ನು ತೆಗೆದುಕೊಳ್ಳೋಣ. ಈ ಸೆಕ್ಷನ್ ಪ್ರಕಾರ ಆ ಟ್ರಿಬ್ಯುನಲ್‌ವರು ಹೊರಡಿಸಿರುವ ಜಡ್ಜ್‌ಮೆಂಟು ಈ ಮಾನ್ಯಸಭೆಗೆ ಮಾನ್ಯ ಅಧ್ಯಕ್ಷರಾದ ಸ್ಪೀಕರ್ ಅವರ ಮೂಲಕ ತಿಳಿದು ಬಂದಿಲ್ಲ. ಅವರೇನೋ ತೀರ್ಮಾನವನ್ನು ಓಪನ್ ಕೋರ್ಟಿನಲ್ಲಿ ಪ್ರೊನೌನ್ಸ್ ಮಾಡಿದ್ದಾರೆ. ಆದರೆ ಅದನ್ನು ಈ ಮಾನ್ಯ ಸಭೆಯು ಗವನಕ್ಕೆ ಈ ಸೆಕ್ಷನ್ 107ರ ರೀತ್ಯ ತೆಗೆದುಕೊಳ್ಳಬೇಕಾದುದಿಲ್ಲ. ಅಷ್ಟೇ ಅಲ್ಲದೆ ಈ ತೀರ್ಮಾನ ಆ ಎಲೆಕ್ಷನ್ ಕಮಿಷನ್‌ನವರ ಮೂಲಕ ಇಂಡಿಯಾ ಸರ್ಕಾರದ ಗೆಜೆಟ್ಟಿನಲ್ಲಿ ಪಬ್ಲಿಷ್ ಮಾಡಬೇಕೆಂದು ಸೆಕ್ಷನ್ 106ರಲ್ಲಿ ಹೇಳಿದೆ. ಆ ಸೆಕ್ಷನ್ 106 ರಲ್ಲಿ ಏನು ಹೇಳಿದೆ ಎಂದರೆ:—

"*Transmission of order to the appropriate authority, etc., and its publication.*—As soon as may be after the receipt of any order made by the Tribunal under section 98 or 99, the Election Commission shall forward copies of the order to the appropriate authority and, in the case where such order relates to an election (other than a primary election). . . ."

You please mark these words "...in the case where such order relates to an election (other than a primary election) to a House of Parliament or to an election to the House or a House of the Legislature of a State, also to the Speaker or Chairman, as the case may be, of the House concerned, and shall cause the order to be published in the *Gazette of India* and in the Official Gazette of the State concerned."

ಈ ಸೆಕ್ಷನ್ ರೀತ್ಯಾ ಆ ಟ್ರಿಬ್ಯುನಲ್‌ನವರು ನಾವೇ ಈ ರೀತಿ ಆರ್ಡರ್ ಮಾಡಿದ್ದೇವೆ ಎಂದು ಹೇಳುವುದಕ್ಕೆ ಅವರಿಗೆ ಅಧಿಕಾರವಿಲ್ಲ. ಅಲ್ಲದೆ ಈ ಟ್ರಿಬ್ಯುನಲ್ ಎನ್ನುವುದು ಒಂದು ದೇಶದಲ್ಲಿರತಕ್ಕ ಹೈಕೋರ್ಟುಗಳ ಹಾಗೆ ಇಂಡಿಪೆಂಡೆಂಟ್ ಬಾಡಿ ಕೂಡ ಆಗಿರುವುದಿಲ್ಲ.

A Tribunal is not an independent body, since it is created by the Election Commission of India.

ಆದಕಾರಣ ಈ ಸೆಕ್ಷನ್ 106ರ ಪ್ರಕಾರ ಈ ಒಂದು ಟ್ರಿಬ್ಯುನಲ್ ಅವರು ಕೊಟ್ಟಿರತಕ್ಕ ಆರ್ಡರನ್ನು ನೇರವಾಗಿ ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲ. ಈ ಟ್ರಿಬ್ಯುನಲ್ ಅವರು ಅವರ ತೀರ್ಪನ್ನು ಎಲೆಕ್ಷನ್ ಕಮಿಷನರಿಗೆ ಕಳುಹಿಸಬೇಕು. ಆ ಎಲೆಕ್ಷನ್ ಕಮಿಷನ್ ಅವರು ಇದನ್ನು ಆರ್ಡರ್ ಮಾಡಿದ ಪಕ್ಷದಲ್ಲಿ ಅವನ್ನು ಅವರು ಸಂಬಂಧಪಟ್ಟ ಶಾಸನಸಭಾ ಸ್ಪೀಕರ್ ಅವರಿಗೆ ಆ ತೀರ್ಮಾನದ ಕಾಪಿ ಕಳುಹಿಸಬೇಕು. ಅಷ್ಟೇ ಅಲ್ಲದೆ ಆ ಕಮಿಷನ್ನಿನವರು ಆ ತೀರ್ಪನ್ನು ಇಂಡಿಯಾ ಸರ್ಕಾರದ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಿಸಬೇಕೆಂಬುದಾಗಿ ಈ ಸೆಕ್ಷನ್‌ನಲ್ಲಿ ತಿಳಿಸಿದೆ. ಈ ಅಂಶವನ್ನು ಈ ಮಾನ್ಯ ಸಭೆ ಗಮನಿಸಬೇಕಾದದ್ದು ಬಹಳ ಮುಖ್ಯವಾದ್ದೆಂದು ನಾನು ತಿಳಿಸುತ್ತೇನೆ. ಈಗ ಆ ಟ್ರಿಬ್ಯುನಲ್ ಅವರು ಕೊಟ್ಟಿರುವ ತೀರ್ಪನ್ನು ನಾವು ಅಷ್ಟಾಗಿ ಗಮನಿಸಬೇಕಾಗಿಲ್ಲ. ಆದರೆ ಈ ದಿವಸ ಶ್ರೀ ಚನ್ನಬಸಪ್ಪನವರು ಮಂತ್ರಿಗಳಾಗಿರಬೇಕೇ ಅಥವಾ ಬೇಡವೇ ಎನ್ನುವುದು ಪ್ರಾಮುಖ್ಯವಾದ ಪ್ರಶ್ನೆಯಲ್ಲ. ಅವರು ಈ ಸಭೆಗೆ ಮೆಂಬರಾಗಿ ಇರಬಾರದು ಎಂದು ಆರ್ಡರ್ ಬಂದ ಮೇಲೆ does he continue to be a member of the House or not is the question at issue. We are not concerned with whether he is a Minister or not. The Ministership comes in later. According to this provision, he does continue to be a member of this House until the Speaker receives the intimation from the Election Commission, and also, for the House to take cognisance of the fact that there is an order to that effect, it must be published, according to section 106 of this Act, in the *Gazette of India*.

Sri A. BHEEMAPPA NAIK.—This is a primary election. They need not send it to the Speaker. It will have to be only published in the Gazette.

Sri D. DEVARAJ URS.—When it says "...Other than a primary election...," this is not a primary election at all. The section is so fool-proof. Here the question whether Sri Channabasappa continues to be a member of this House or not does not at all arise until and unless the order is communicated to this House, that is, through you the Speaker, disqualifying Sri Channabasappa to be the member of this House.

Mr. SPEAKER.—If it is communicated even by the Tribunal, does it come into effect ?

Sri D. DEVARAJ URS.—It is very clear. The Election Tribunal has no authority to communicate its order to the Speaker because the Section clearly provides that the Election Tribunal can only. . . .

Mr. SPEAKER.—Suppose one of the Hon'ble Members brings a copy of the judgment and forwards it to me. Can I take cognisance of it ?

Sri D. DEVARAJ URS.—No. The Section is very clear. The Tribunal can only send its order to the Election Commission. It is the Election Commission that has to publish it or has to convey the order to the concerned Speaker and to the House of the Legislature.

***ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ)** —193ನೇ ಸೆಕ್ಷನ್ ಪ್ರಕಾರ ಒಬ್ಬ ಸದಸ್ಯರಿಗೆ ಡಿಸ್‌ಕ್ವಾಲಿಫಿಕೇಷನ್ ಉಂಟಾಯಿತು ಎಂದ ಕೂಡಲೇ ಅವರು ಈ ಸಭೆಗೆ ಬರಕೂಡದು ಎಂದು ಇದೆ. ಈಗ ಇನ್ನೊಂದು ವಿಷಯವೇನೆಂದರೆ, ಉದಾಹರಣೆಗೆ ಇಬ್ಬರು ಇದ್ದು ಒಬ್ಬರು ಡಿಸ್ ಕ್ವಾಲಿಫೈ ಆದರು ಎಂದ ಕೂಡಲೇ ಇನ್ನೊಬ್ಬರು ಬಂದು ಕುಳಿತುಕೊಳ್ಳುತ್ತಾ ಇದ್ದರೋ ಇಲ್ಲವೊ ?

Sri A. BHEEMAPPA NAIK.—How can you say that ?

Sri B. HUTCHE GOWDA.—It is for me to say. ಎರಡು ಪಾರ್ಟಿ ಇದ್ದು ಒಬ್ಬರ ಎಲೆಕ್ಷನ್ set aside ಆಗಿ ಇನ್ನೊಬ್ಬರು ಬಂದು ಆ ದಿವಸವೇ ಇಲ್ಲಿ ಕುಳಿತುಕೊಂಡಿದ್ದುದನ್ನು ಹಿಂದೆ ಈ ಸಭೆಯಲ್ಲಿ ಎರಡು ಮೂರುಸಾರಿ ನೋಡಿದ್ದೇವೆ. ನಾಗಪ್ಪನವರ ಎಲೆಕ್ಷನ್ ಸೆಟ್ ಅಸೈಡ್ ಆಯಿತು, ಟಿ. ಸಿ. ಬಸಪ್ಪನವರು ಬಂದರು. ಅವೆಲ್ಲವೂ ಕೂಡ ಗೆಜೆಟ್ ನೋಟಿಫಿಕೇಷನ್ ಆಗುವುದಕ್ಕೆ ಮುಂಚೆಯೇ ಆದವು. ಈಗಲೂ ಕೂಡ ಅದೇ ರೀತಿ ಎಲೆಕ್ಷನ್ ಕೇಸು ಯಾವಾಗ ತೀರ್ಮಾನವಾಯಿತೋ ಆ ದಿವಸವೇ ಜಾರಿಗೆ ಬರಬೇಕಾದದ್ದು ನ್ಯಾಯ. ಅದಕ್ಕೆ ಈ 193 ನೇ ಸೆಕ್ಷನ್ ಉಪಯೋಗಿಸಬೇಕಾಗುತ್ತದೆ.

***Sri A. G. RAMACHANDRA RAO** (Minister for Law and Education).—Sir, I oppose the motion. I believe that the motion has been brought forward under a misconception of law. There are two issues arising out of this : one is with regard to membership and the other one is with regard to ministership. Regarding membership, as the House very well knows, immediately after election the Returning Officer will inform the House as to whether he is elected or not. That is the information given to the Speaker fore, till a notice is received by the Speaker, this House cannot take or such authority appointed. And loss of membership also has been provided for under section 106 of the Peoples, Representation Act. There-

(SRI A. G. RAMACHANDRA RAO.) cognisance of that. That is my first point.

Secondly, it is also provided under section 107 that any order passed by the tribunal will not be effective till it is notified in the Gazette of the Government of India. Publication of news in any paper, however esteemed the paper may be, has no effect on us and especially on an important matter like this. I may assure the House I have not read the paper and I do not know anything about it. I am stating a fact. But supposing it has appeared in the Gazette, I could not make that plea. Because it is my duty to take cognisance of notification in the Gazette, but not publication thereof in any paper whatsoever. Therefore, this House at this stage cannot take any cognisance of it nor can we consider that there is any privilege affected in respect of the rights of members of this House.

Sri A. BHEEMAPPA NAIK.—Supposing a judgment copy is produced.

Sri A. G. RAMACHANDRA RAO.—Let it come and then we will consider.

Next, regarding ministership, I would very earnestly invite attention of the Hon'ble Members to article 164 of the Constitution. No qualification is prescribed there as to who should be a Minister or even a Chief Minister. It does not say a member shall only be Minister or even Chief Minister. The Governor will call upon the person to be the Chief Minister and the Chief Minister in his turn will advise the Governor as to who should be the Minister.

Mr. SPEAKER.—I think there are no two opinions about it. The Hon'ble Minister may meet the point raised by Sri K. Pattabhiraman.

Sri A. G. RAMACHANDRA RAO.—I am coming to that. First, as to who should be made a Minister, I will clear that point. Supposing he is a member, there is no further question about it. Supposing he is not a member, even then, he has to wait for six months.

A MEMBER.—From what date ?

Sri A. G. RAMACHANDRA RAO.—From the date he is not a member.

Sri S. SRINIVASA IYENGAR.—A person need not be a member to be nominated as Minister. Therefore, the date of ministry is from the date of appointment of minister.

Sri A. G. RAMACHANDRA RAO.—Members are rather in a hurry. I read the relevant article of the Constitution.

> "A Minister who for any period of six consecutive months is not a member of the Legislature of the State shall at the expiration of that period cease to be a Minister."

So, non-membership is permissible for six months.

Mr. SPEAKER.—That is evident, of course.

Sri Mulka GOVINDA REDDY.—He is missing a very fundamental point. It is only a saving clause to meet a certain circumstance. He need not be a member for a period of six months. But it is a basic qualification that he should be a member to become a Minister.

Sri A. G. RAMACHANDRA RAO.—No condition is there.

Sri K. PATTABHIRAMAN.—Both of us join and are in perfect agreement on the language of sub-clause 4 of the article.

> "A Minister who for any period of six consecutive months is not a member of the Legislature..."

Therefore, at the time of the appointment as Minister, he is not a member. If such a man is appointed as Minister, the provision says that within six months he shall become a member. That is why I harped on the very idea that at the time of appointment he must be a non-member.

The statutory period of limitation is six months. Therefore I suggested that to get over all these, he may be reappointed as Minister, because he has ceased to be a member and he will get six months more to become a member of this House.

Sri A. G. RAMACHANDRA RAO.—The limitation suggested is not provided in the article. It is not provided that if a member is appointed as Minister and if he ceases to be a member,

then the following provisions follow. That is not the way in which the Constitution is enacted. It simply says that a non-member can be a Minister for six months. Therefore the question of reappointment does not arise.

Further, I draw the attention of the House to article 177 also.

> "Every Minister and the Advocate-General for a State shall have the right to speak in, and otherwise to take part in the proceedings of, the Legislative Assembly of the State or, in the case of State having a Legislative Council, both Houses, and to speak in, and otherwise to take part in the proceedings of, any committee of the Legislature of which he may be named a member, but shall not, by virtue of this article, be entitled to vote."

Therefore, in respect of membership about which a question has arisen now in respect of the judgment of the Tribunal, the judgment is not before us. Nor has the judgment been notified in the Gazette. Till then it is to be assumed that he is a member and the membership shall not cease unless he tenders resignation. Except in the case when he is out of office for a period of six months, and not otherwise, the restrictive interpretation put cannot be accepted, because that is not provided at all.

Further, I invite the attention of the House to article 192 also.

> "192. (1) If any question arises as to whether a member of a House of the Legislature of a State has become subject to any of the disqualifications mentioned in clause (1) of article 191, the question shall be referred for the decision of the Governor and his decision shall be final."

Certainly therefore the question cannot go before the Committee of Privileges. If and when the question arises, who should decide this matter is not this House; it cannot be referred to the Committee of Privileges; it is to be decided by the Governor and not this House.

Sri Mulka GOVINDA REDDY.—What is the judgment of the Tribunal?

Sri A. G. RAMACHANDRA RAO.—We do not know what the Election Commission has done.

Sri Mulka GOVINDA REDDY.—Article 192 must be read with article 191. I will read it.

> "(1) A person shall be disqualified for being chosen as, and for being, a member of the Legislative Assembly or Legislative Council of a State --
>
> (*a*) if he holds any office of profit under the Government of India or the Government of any State specified in the First Schedule, other than an office declared by the Legislature of the State by law not to disqualify its holder;
>
> (*b*) if he is of unsound mind. . . . ."

I am sure Sri H. M. Channabasappa is not of unsound mind.

> ". . and stands so declared by a competent court."

I may tell you that the members on the other side are of unsound mind.

> "(*c*) if he is an undischarged insolvent;"

He is not that.

> "(*d*) if he is not a citizen of India, or has voluntarily acquired the citizenship of a foreign State, or is under any acknowledgment of allegiance or adherence to a foreign State;"

He is a citizen of India.

> "(*e*) if he is so disqualified by or under any law made by Parliament."
>
> (2) for the purposes of this article, a person shall not be deemed to hold an office of profit under the Government of India or the Government of any State specified in the First Schedule by reason only that he is a Minister either for the Union or for such State."

(SRI MULKA GOVINDA REDDY.)

I would very much like to know from the Minister whether any of these provisions of the article warrant notification.

MR. SPEAKER.—Article 192 is conditional. If any of these disqualifications arise under sub-clauses of article 191, then the question shall be referred to the decision of the Governor and that decision shall be final.

SRI A. G. RAMACHANDRA RAO.—I would invite the attention of the Chair to sub-clause (*e*) of article 191 of the Constitution.

"if he is disqualified by or under any law made by Parliament."

The Peoples' Representation Act is the law made by the Parliament and if he has incurred any disqualification, the further procedure is laid down there. Therefore, I submit at this stage the House cannot discuss this question and no privilege has been affected.

MR. SPEAKER.—I will give the decision tomorrow.

A MEMBER.—Can the Minister continue to sit in this House?

MR. SPEAKER.—Myself and yourself are not responsible for that.

---

2 P.M.

Member's Representations.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಸಭೆಯ ಕೆಲವರು ಸದಸ್ಯರು 'ಸುದರ್ಶನ' ಅತಿಥಿ ಗೃಹದಲ್ಲಿದ್ದಾರೆ. ಇದರ ಸುತ್ತಲೂ ವಿಧಾನ ಸೌಧದ ಹತ್ತಿರದಿಂದ ಮಣ್ಣನ್ನು ತೆಗೆದುಕೊಂಡು ಬಂದು ಹಾಕುತ್ತಿದ್ದಾರೆ. ಈ ಸಂಬಂಧದಲ್ಲಿ ಮನವಿಯನ್ನು ತಮಗೂ ಒಂದು ಸಲ ಸಲ್ಲಿಸಿದ್ದೇನೆ. ಸರ್ಕಾರಕ್ಕೂ ಸಹ ಎರಡು ಸಲ ಸಲ್ಲಿಸಿದ್ದೇನೆ. ಆದರೂ ಕೂಡ ಯಾವ ವಿಧವಾದ ಪ್ರಯೋಜನವೂ ಆಗಿಲ್ಲ.

ಅಧ್ಯಕ್ಷರು.—ಕಾಗದವನ್ನು ಬರೆಯಿರಿ.

ಶ್ರೀ ಕೆ. ಪುಟ್ಟಸ್ವಾಮಿ.—ತಮಗೆ ಒಂದು ಸಲ ಸಾಕು ಎಂದು ತಿಳಿದುಕೊಂಡಿದ್ದೆ. ಸರ್ಕಾರಕ್ಕೆ ಎರಡು ಸಲ ಹೇಳಿದ್ದೇನೆ. ಈಗ ಪುನಃ ಕಾಗದ ಬರೆಯಿರಿ ಎಂದರೆ ನಾವೇನು ಅರ್ಜಿದಾರರೆ?

ಅಧ್ಯಕ್ಷರು.—ತಾವು ಹೇಳಿದ್ದು ನಿಜ. ಆದರೆ ವಿಷಯವನ್ನು ನಾನು ಮರೆತುಬಿಟ್ಟಿದ್ದೆ.

ADJOURNMENT MOTION

Re: Delay in Nationalization of the B.T.C.

MR. SPEAKER.—The adjournment motion will be taken up tomorrow. I will anyway read the motion for the information of the House.

"That this House do stand adjourned to discuss a definite matter of urgent public importance and of recent occurrence, to wit, the situation arising out of the failure of the Government in nationalizing the Bangalore Transport Company on 1st April 1956 as announced by the Government previously."

STATES REORGANISATION BILL, 1956.

Motion to consider—(contd).

MR. SPEAKER.—Before taking up the discussion on the S.R. Bill, the Chair desires to announce that on the 5th, if it is possible to close the debate on the Special Resolution earlier, the discussion on the Second Five-Year Plan will be taken up and it will be continued on the 6th and 7th also. The House will adjourn on the 7th.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಈ ಸಭೆಯ ಮಾನ್ಯ ನಾಯಕರು ಈಗ ಸಭೆ ಮುಂದೆ ಮಂಡಿಸಿರುವ ಮಸೂದೆ ಅಂದರೆ ಸಂಸ್ಥಾನಗಳ ಪುನರ್ವಿಂಗಡಣೆಗೆ ಸಂಬಂಧಪಟ್ಟ ಮಸೂದೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತಿದ್ದೇನೆ. ಈ ಮಸೂದೆಯ ವಿಚಾರದಲ್ಲಿ ಹೊಸದಾಗಿ ಹೇಳಬೇಕಾದಂಥ ಅಂಶಗಳು ಹೆಚ್ಚಾಗಿರುವುದಿಲ್ಲ. ಆದುದರಿಂದ ಹೆಚ್ಚು ಕಾಲ ನಾನು ಭಾಷಣ ಮಾಡುವುದಕ್ಕೆ ತೆಗೆದುಕೊಳ್ಳುವುದಿಲ್ಲ. ತಮ್ಮಲ್ಲಿ ಇನ್ನೂ ಒಂದು ಅಂಶ ಅರಿಕೆ ಮಾಡಿಕೊಳ್ಳುವುದೇನೆಂದರೆ, ಹೇಳಿದುದನ್ನೇ ಸಂದರ್ಭಾನುಸಾರ ಹೇಳಬೇಕಾಗಿದೆ. ಇದಕ್ಕೆ ನಾನು ಜವಾಬ್ದಾರನೂ ಅಲ್ಲ, ಕಾರಣನೂ ಅಲ್ಲ. ಹೇಳಿದ ಮಾತನ್ನೇ ಪುನಃ ಹೇಳುವಂಥ ಅವಕಾಶ ಉಂಟಾಗಿರುವುದರಿಂದ ಅದೇ ಮಾತನ್ನು ಉತ್ತರ ರೂಪದಲ್ಲಿ ಹೇಳಬೇಕಾದ ಅಗತ್ಯ ಉಂಟಾಯಿತು. ಈ ಮಾತನ್ನು ವಿವರಿಸಿ ಹೇಳಬೇಕಾದರೆ ಸಭಾನಾಯಕರು ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸುವಾಗ ಕಾನೂನು ಮತ್ತು ನ್ಯಾಯ ಇವುಗಳನ್ನು ಒತ್ತಟಿಗೆ ಇಟ್ಟು, ಲೌಕಿಕವಾಗಿ ಮಾತನಾಡೋಣ, ಯಾರಾದರೂ ಒಬ್ಬರು ನಮ್ಮ ಮನೆಗೆ ಬಂದರೆ, ಅತಿಥಿ ಸತ್ಕಾರ ಮಾಡತಕ್ಕ ಸಂಸ್ಕೃತಿ, ಇರತಕ್ಕ ಹಿಂದೂ ಜನ, ಮನೆಗೆ ಬರುವವರನ್ನು ಬರಬೇಡಿ

ಎಂದರೆ ಅಸಂಸ್ಕೃತಿಯಾಗುತ್ತದೆ ಎಂದು ಹೇಳಿದರು. ಹಿಂದೆಯೂ ಅದೇ ಮಾತು ಹೇಳಿದ್ದರು, ನಿನ್ನೆಯೂ ಸಹ ಅದನ್ನೇ ಹೇಳಿದರು. ಹಿಂದೆ ನಾನು ಒಂದು ವಿಧದಲ್ಲಿ ಉತ್ತರವನ್ನು ಹೇಳಿದ್ದೆ. ಪುನರುಚ್ಚಾರಣೆಯ ದೋಷಕ್ಕೆ ಗುರಿಯಾದರೂ ಈಗಲೂ ಸಹ ಹೇಳುತ್ತೇನೆ. ಅತಿಥಿಗಳು ಬಂದರೆ ಅವರನ್ನು ಸತ್ಕರಿಸೋಣ. ಅತಿಥಿಗಳು ಬಂದರೆ ಸಾಮಾನ್ಯವಾಗಿ ಅವರು ಖಾಯಂ permanent guests ಆಗಿ ಇರುವುದಿಲ್ಲ ಅವರು ಬಂದರೆ ಒಂದೆರಡು ದಿನ, ತಪ್ಪಿದರೆ 8-10 ದಿನಗಳಿರುತ್ತಾರೆ, ಖಾಯಂ ಆಗಿ ನಮ್ಮ ಮನೆಯಲ್ಲೇ ಇರುತ್ತೇವೆ ಎಂದರೆ ಅಂಥವರನ್ನು ನಾವು ಅತಿಥಿಗಳೆಂದು ಭಾವಿಸುವುದಕ್ಕಾಗುವುದಿಲ್ಲ. ಮತ್ತು ಅಂಥವರನ್ನು ನಾವು ಬೇಡವೆಂದರೆ ಅದು ಸಂಸ್ಕೃತಿಯಲ್ಲ, ಧರ್ಮವಲ್ಲ ಎಂದರೆ ಹೇಗೆ? ನಿಜವಾದ ಅತಿಥಿಗಳಿಗೂ ಖಾಯಂ ಆಗಿ ಇರಲು ಬರುವವರಿಗೂ ಹೋಲಿಕೆಯೇ ಇಲ್ಲವೆನ್ನಬಹುದು. ಇನ್ನೊಂದು ವಿಷಯ. ಹೊರಗಿನಿಂದ ತಾತ್ಕಾಲಿಕವಾಗಿ ಬರುವವರಿಗೆ ಮಾತ್ರ ಮನೆಯನ್ನು ಬಿಟ್ಟುಕೊಡುವ ಅಥವಾ ಸೌಲಭ್ಯವನ್ನು ಕಲ್ಪಿಸಿಕೊಡುವ ವಿಷಯವಲ್ಲ. ಅವರು ಖಾಯಂ ಆಗಿ ಇಲ್ಲೇ ಇರುತ್ತಾರೆ. ಅವರು ನಮ್ಮ ಮನೆಗೆ ಬರುವುದೂ ಅಲ್ಲದೆ ನಮ್ಮ ಹೆಸರನ್ನೂ ತೊಡೆದು ಹಾಕಬೇಕೆಂದಿದ್ದರು. ಈಗ ನಮ್ಮ ಹೆಸರು ಮಾತ್ರ ಉಳಿದಿದೆ. ಇದು ಅತಿಥಿ ಸತ್ಕಾರಕ್ಕೆ ಸಂಬಂಧಪಟ್ಟ ವಿಚಾರವಲ್ಲ. ಬೇರೆ ಪ್ರಾಂತದ ಜನರನ್ನು ನಮ್ಮ ಜೊತೆಯಲ್ಲಿ ಸೇರಿಸಿಕೊಳ್ಳುವುದರಿಂದ ಇಲ್ಲಿನ ಆರ್ಥಿಕ ವ್ಯವಸ್ಥೆ ವ್ಯತ್ಯಾಸವಾಗುವುದು, ಇಲ್ಲಿನ ಜನಜೀವನದ ಸೌಕರ್ಯ ಸೌಲಭ್ಯಗಳನ್ನು ಕಡಿಮೆಮಾಡುವುದು, ತಲೆತಲಾಂತರದಿಂದ ಅನೂಚಾನವಾಗಿ ನಡೆದುಕೊಂಡು ಬಂದಿರುವ ಪದ್ಧತಿ, ಆಡಳಿತ ಕ್ರಮ, ಒಂದು ವ್ಯವಸ್ಥೆ ಇವುಗಳನ್ನು ತಲೆಕೆಳಗು ಮಾಡುವುದು ಇವುಗಳಿಗೆ ಅವಕಾಶವಿರಬಾರದು. ಆದುದರಿಂದ ಹೊಸ ಪ್ರಾಂತದ ಜನರು ಬೇರೆ ಎಲ್ಲಿಯೂ ಇರುವುದಕ್ಕೆ ಅವಕಾಶವಿಲ್ಲವೇ ಎಂದು ನಾನು ಕೇಳುತ್ತೇನೆ. ಅಲ್ಲಿಯೂ ನಮ್ಮಂತೆಯೇ ಜನರಿದ್ದಾರೆ, ನಮ್ಮಂತೆಯೇ ವಿಶಾಲವಾದ ಪ್ರಾಂತವಿದೆ. ಅವರೇ ಒಂದು ಹೊಸ ಪ್ರಾಂತ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಇಂಥದರಲ್ಲಿ ನಾವು ನಮ್ಮ ಮನೆಗೆ ಬಂದವರನ್ನು ಬೇಡವೆಂದರೆ ಅಸಂಸ್ಕೃತರಾಗುತ್ತೇವೆಂದು ವಾದಿಸಿದರೆ ಅದು ಅಸಂಬದ್ಧ ಪ್ರಲಾಪವೆಂದು ಮಾತ್ರ ಯತ್ನವಿಲ್ಲದೆ ಹೇಳಬೇಕಾಗಿದೆ.

ಎರಡನೆಯದಾಗಿ ಇಲ್ಲಿ ಬೇಕಾದಂಥ ವ್ಯವಸ್ಥೆ ಇದೆ, ಸಿಬ್ಬಂದಿ establishment) ಇದೆ, ಅಠಾರ ಕಚೇರಿ ಇದೆ, ವಿಧಾನಸೌಧವನ್ನು ಕಟ್ಟುತ್ತಿದ್ದೀರಿ, ಎಲ್ಲವೂ ಅನುಕೂಲವಾಗಿದೆ; ಆದುದರಿಂದ ಇಲ್ಲಿಗೆ ಬಂದು ಝಾಂಡ ಊರೋಣವೆಂದರೆ ಇದರಲ್ಲ ಸಂಸ್ಕೃತಿ ಎಷ್ಟರಮಟ್ಟಿಗಿದೆ ಎಂದು ಯೋಚಿಸಬಹುದು. ಇದಕ್ಕೆ ಉಪಮಾನ ಉಪಮೇಯಗಳನ್ನು ಹೇಳಬಹುದು. ಹೀಗೆ ವಿರೋಧ ಮಾಡತಕ್ಕವರನ್ನು ಒಂದೇ ಮಾತಿನಲ್ಲಿ ತಮಾಷೆಗಾದರೂ ಸಹ ಅಸಂಸ್ಕೃತರು ಎಂದು ಕರೆಯುವುದು ಸಭಾನಾಯಕರಿಗೆ ಒಳ್ಳೆಯದಲ್ಲ. ನಾನಾ ವಿಷಯಗಳನ್ನು ಅವರು ಹೇಳಿದ್ದಾರೆ. ನಾನೂ ಅವುಗಳಿಗೆ ಉತ್ತರ ಕೊಟ್ಟಿದ್ದೇನೆ. ಇಲ್ಲಿಗೆ ಆ ವಿಚಾರ ಮುಗಿಯಿತು ಎಂದು ನನ್ನ ಅಭಿಪ್ರಾಯ.

ಈ ಪ್ರಾಂತಗಳ ವಿಂಗಡಣೆ ಏಕೆ ಬೇಡ ಎಂಬುದನ್ನು ಒಂದೆರಡು ಮಾತಿನಲ್ಲಿ ಹೇಳಬಹುದು. ನಮ್ಮಲ್ಲಿ ಒಂದು ಸುವ್ಯವಸ್ಥಿತ ಸರ್ಕಾರ, ಒಂದು ಆಡಳಿತಕ್ರಮ ಏರ್ಪಟ್ಟಿದೆ. ಬೇರೆ ಭಾಗಗಳಿಂದ ಬರತಕ್ಕವರ ಆಡಳಿತ ಕ್ರಮಕ್ಕೂ ನಮ್ಮ ಆಡಳಿತ ಕ್ರಮಕ್ಕೂ ವ್ಯತ್ಯಾಸವಿದೆ. ನಮ್ಮ ಕಾನೂನುಗಳಿಗೂ ಅವರ ಕಾನೂನುಗಳಿಗೂ ವ್ಯತ್ಯಾಸವಿದೆ. ಬೇರೆ ಕಡೆಯಿಂದ ಬರತಕ್ಕ ಜನರ ನಡೆ, ನುಡಿ, ಆಚಾರ, ವಿಚಾರ, ವ್ಯವಹಾರಗಳಿಗೂ ನಮ್ಮದಕ್ಕೂ ವ್ಯತ್ಯಾಸವಿದೆ. ಹೀಗೆ ಏರುಪೇರಾಗಿರತಕ್ಕ ಎರಡು ಭಾಗಗಳನ್ನು ಒಟ್ಟುಗೂಡಿಸುತ್ತೇವೆಂದರೆ ಹತ್ತಾರು ವರ್ಷಗಳಾದರೂ ಈ ಏರುಪೇರನ್ನು ಸಮತೂಗಿಸಿ ಒಂದು ಮಟ್ಟಕ್ಕೆ ತರುವುದಕ್ಕೆ ನಿಧಾನವಾಗುತ್ತದೆ, ಕಷ್ಟವಾಗುತ್ತದೆ. ಅದುವರೆಗೂ ಇಲ್ಲಿ ನಮಗೆ ತೊಂದರೆಯಾಗುತ್ತದೆಂಬ ಉದ್ದೇಶ ಒಂದು.

ಮತ್ತೊಂದು ವಿಷಯ. ನಮ್ಮಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಇಲ್ಲಿ ನಡೆಯುತ್ತಿರುವಂತೆ ಅಭಿವೃದ್ಧಿ ಕಾರ್ಯಗಳು ಅಲ್ಲಿ ನಡೆಯುತ್ತಿಲ್ಲ. ಬೇರೆ ಪ್ರಾಂತಗಳು ಬಂದು ಸೇರಿದಮೇಲೆ ಇಲ್ಲಿನ ಮೇಲ್ಮೆಗಾಗಿಯೇ ಕೆಲಸ ನಡೆಯುವುದಿಲ್ಲ. ಬೇರೊಂದು ಸಂದರ್ಭದಲ್ಲಿ ಮಾನ್ಯ ನಾಯಕರೇ ಹೇಳಿದ ಹಾಗೆ, ಈಗಾಗಲೇ ಆಗಿರತಕ್ಕ ಅಭಿವೃದ್ಧಿಯನ್ನು ಕಿತ್ತುಹಾಕುವುದಕ್ಕಾಗುವುದಿಲ್ಲ. ಮುಂದೆ ಇದೇ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸುವುದಕ್ಕೆ ತೊಡಕಾಗುತ್ತದೆ. ಇದೂ ಒಂದು ಕಾರಣ: ಇದಕ್ಕಿಂತಲೂ ಮುಖ್ಯವಾದ ಮತ್ತು ಪ್ರಬಲವಾದ ಕಾರಣವೇನೆಂದರೆ, ಕನ್ನಡ ಮಾತನಾಡುವವರು ಮಾತ್ರ ನಮ್ಮವರಲ್ಲ; ಅಂತೆಯೇ ತೆಲುಗು ಮತ್ತು ಇತರ ಭಾಷೆಗಳನ್ನು ಆಡುವವರೂ ನಮ್ಮವರೇ. ಹೀಗಿರದೆ ಈ ಭಾಗ ನಮಗೇ ಬರಬೇಕು ಆ ಭಾಗ ಬರಬೇಕು ಎಂದು ಕಾದಾಡತಕ್ಕದ್ದು ಯೋಗ್ಯವಾದದ್ದಲ್ಲ. ಹೀಗೆ ಮಾಡುವುದರಿಂದ ಜಗಳವಾಗುತ್ತದೆ, ಹೊಟ್ಟೆಕಿಚ್ಚು ಬರುತ್ತದೆ, ಜಗಳಗಳಾದದ್ದನ್ನು ಕೂಡ ನಾವು ನೋಡಿದ್ದೇವೆ. ನೆರೆಹೊರೆಯ ರಾಷ್ಟ್ರಗಳಲ್ಲಿ ಜಗಳವಾಯಿತು, ಎಷ್ಟೋ ಜನ ಪ್ರಾಣ ನೀಗಬೇಕಾಗಿ ಬಂತು. ಇದನ್ನೆಲ್ಲಾ ನಾನು ವಿವರಿಸಬೇಕಾಗಿಲ್ಲ. ಬೊಂಬಾಯಿ, ಒರಿಸ್ಸ, ಮಹಾರಾಷ್ಟ್ರ ಮತ್ತು ಕನ್ನಡನಾಡಿನ ಗಡಿಪ್ರದೇಶಗಳಲ್ಲಿ ಆದಂಥ ಗಲಭೆಗಳನ್ನು ನಾವು ಮರೆತಿಲ್ಲ. ಇವೊತ್ತು ಕೂಡ ಬೊಂಬಾಯಿಯಲ್ಲಿ ಸ್ತ್ರೀಯರ ಮಾನಭಂಗವಾಯಿತು ಎಂದು ಕೇಳಿದೆ. ಬೊಂಬಾಯಿ ಮೇಯರರು ಈ ಸಂಬಂಧವಾಗಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಹೀಗೆ ಏನೇನೋ ಅನಾಹುತಗಳಾದವು. ಇಂಥವು ನಡೆಯುವುದಕ್ಕೆ ಅವಕಾಶ ಕೊಡಬಾರದ ಎನ್ನುವ ದೃಷ್ಟಿಯಿಂದ, ದೇಶದಲ್ಲಿ ಒಗ್ಗಟ್ಟು ಇರಬೇಕು, ಪ್ರೀತಿ ವಿಶ್ವಾಸಗಳನ್ನು ಗಳಿಸಬೇಕು ಎಂಬ ಕಾರಣದಿಂದ, ನಾವೆಲ್ಲ ಏಕಚಕ್ರಾಧಿಪತ್ಯಕ್ಕೆ ಒಳಪಟ್ಟಿದ್ದೇವೆ. ಆ ಸೇತು ಹಿಮಾಚಲ ಪರ್ಯಂತ ಏರ್ಪಾಡಾಗಿರತಕ್ಕ ಏಕ ಚಕ್ರಾಧಿಪತ್ಯಕ್ಕೆ ಪುನಃ ಧಕ್ಕೆ ಬಾರದ ರೀತಿಯಲ್ಲಿ ನಾವು ನಡೆಯಬೇಕು. ಹೀಗೆ ದೇಶದ ಹಿತದೃಷ್ಟಿಯಿಂದ ಹೇಳಿದಂಥ ಉದ್ದೇಶವನ್ನು ಬೇರೆ ಒಂದು ಉಪಮಾನ ಉಪಮೇಯ ಕೊಟ್ಟು ಅದರ ತೂಕವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನಪಡತಕ್ಕದ್ದು ಸಾಧುವಾದದ್ದಲ್ಲವೆಂದು ಮಾತ್ರ ಹೇಳುತ್ತೇನೆ.

ಹೀಗಿದ್ದೂ ದಕ್ಷಿಣ ಪ್ರದೇಶದ ಪ್ರಸ್ತಾಪ ಬಂದಾಗ ಅದಕ್ಕೆ ಬೆಂಬಲ ಕೊಟ್ಟವರ ಪೈಕಿ ನಾನೂ ಒಬ್ಬ. ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ವಾದಿಸಿದವರನ್ನು ಹಿಂದೆ ಅನೇಕ ಸಾರಿ ಅವರಲ್ಲಿರುವುದು ಸಂಕುಚಿತ ಮನೋಭಾವವೆಂದೂ, ಅಸಂಸ್ಕೃತಿ ಮನೋಭಾವವೆಂದೂ, ಅವರ ಮನಸ್ಸು ವಿಶಾಲವಾಗಬೇಕೆಂದೂ, ಅವರಿಗೆ ವಿಶಾಲದೃಷ್ಟಿ

(ಶ್ರೀ ಎಚ್. ಕೆ. ವೀರಣ್ಣಗೌಡ.)

ಇರಬೇಕೆಂದೂ, ಹೇಳುತ್ತಿದ್ದರು. ರಾಜ್ಯ ವಿಸ್ತರಣೆಗೆ ಯುದ್ಧ ಮಾಡುತ್ತಾರೆ, ಕಾದಾಡುತ್ತಾರೆ, ಅಂಥದರಲ್ಲಿ ತಾನಾಗಿ ತಾನು ಬಂದರೆ, ಮನೆಗೆ ಬಂದ ಲಕ್ಷ್ಮಿಯನ್ನು ಎಡಗಾಲಿನಿಂದ ಒದ್ದು ಓಡಿಸಿದರು ಎಂಬಂತೆ ಇವರು ಬೇಡವೆನ್ನುತ್ತಾರೆ—ಎಂದು ಅನೇಕ ವಿಧವಾಗಿ ಆಕ್ಷೇಪಣೆ ಮಾಡಿದ್ದಾರೆ. ಗಡಿನಾಡು ಭಾಗಗಳಾಗಿ ಒಬ್ಬರಿಗೊಬ್ಬರಿಗೆ ಜಗಳ ಬೇಡ, ಹೊಡೆದಾಟಬೇಡ. ಗಡಿನಾಡು ವ್ಯಾಜ್ಯಗಳನ್ನು ಬಗೆಹರಿಸಲು ಯಾವ ಒಂದು ಸಮಿತಿಯೂ ಬೇಕಾಗಿಲ್ಲ. ನಾವೆಲ್ಲರೂ ಒಂದಾಗೋಣ. ಇದರಿಂದ ಆಗತಕ್ಕ ಅನುಕೂಲ ಪ್ರತಿಕೂಲಗಳನ್ನು ತೂಕ ಹಾಕಿ ನೋಡೋಣ. ಆಗ ಯಾವ ವ್ಯಾಜ್ಯವೂ ಇರುವುದಿಲ್ಲ. ಗಡಿಯ ವಿಚಾರದಲ್ಲಿ, ಈ ಊರು ಬೇಕು, ಆ. ಊರು ಬೇಕು ಎಂಬ ವ್ಯಾಜ್ಯವೇ ಇರುವುದಿಲ್ಲ. ಕಳೆದ ವಾರವೋ ಏನೋ ಶ್ರೀ ನಾಗಯ್ಯರೆಡ್ಡಿಯವರು ಪಾಲಾರ್ ನದಿಯ ನೀರಿನ ವಿಷಯದಲ್ಲಿ ಪ್ರಸ್ತಾಪ ಮಾಡುತ್ತ ಆಂಧ್ರ ಸರ್ಕಾರದವರು ಎರಡು ಕಡೆ ಅಣೆ ಕಟ್ಟಿಸಿದ್ದಾರೆ, ನಾವೂ ಹಾಗೆಯೇ ಮಾಡಬೇಕು, ''ನೀನೂ ದಡ್ಡ ನಾನೂ ದಡ್ಡ'' ಎಂದು ಹೇಳುವ ಹಾಗೆ ವ್ಯಾಜ್ಯ ವಾಡಬೇಕೆಂಬ ಧೋರಣೆಯಲ್ಲಿ ಮಾತನಾಡಿದರು. ಗಡಿನಾಡಿನ ವಾಜ್ಯ, ನೀರಿನ ವಾಜ್ಯ ಹೀಗಿದೆ. ಮತ್ತು ವಿದ್ಯುಚ್ಛಕ್ತಿ ತಯಾರು ಮಾಡಬೇಕಾದರೆ 'ನಮ್ಮ ದೇಶದಲ್ಲಿ ಹುಟ್ಟಿದ ನದಿ ನಿಮ್ಮ ದೇಶದಲ್ಲಿ ಬಂದು ಧುಮುಕುತ್ತದೆ, ಅದರಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿಕೊಳ್ಳಲು ನಮಗೂ ಹಕ್ಕಿದೆ' ಎಂದು ಹೀಗೆಯೇ ಅನೇಕ ವಿಚಾರಗಳಲ್ಲಿ ಒಂದು ಸಂಸ್ಥಾನಕ್ಕೂ ಮತ್ತೊಂದು ಸಂಸ್ಥಾನಕ್ಕೂ ವ್ಯಾಜ್ಯಗಳು ಪ್ರಾರಂಭವಾಗುವುದಕ್ಕೆ ಅವಕಾಶಗಳು ದೊಡ್ಡದಾದ ಒಂದು ಪ್ರಾಂತವಾದರೆ ಇರುವುದಿಲ್ಲ. ಮತ್ತು ದಕ್ಷಿಣ ಪ್ರದೇಶವೆಂಬ ಒಂದು ದೊಡ್ಡ ಪ್ರಾಂತವಾದರೆ, ಅಲ್ಲಿ ಒಂದೇ ಭಾಷೆ ಆಡತಕ್ಕ ಜನಗಳಿಲ್ಲದೆ ಇರುವುದರಿಂದ Composite State ಎಂದು ಏನು ಹೇಳುತ್ತೇವೆಯೋ ಅದು ಒದಗಿ, ನೀರಿನ ಅನುಕೂಲ, ವಿದ್ಯುಚ್ಛಕ್ತಿಯ ಅನುಕೂಲ ಇತ್ಯಾದಿಗಳನ್ನು ಒದಗಿಸಿಕೊಳ್ಳಲು ಉಂಟಾಗಬಹುದಾದ ಕಲಹಗಳು ಇವುಗಳೆಲ್ಲವೂ ತಪ್ಪಿ ಹೋಗುತ್ತವೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ದಕ್ಷಿಣ ಭಾರತ ಬಲವಾಗಿದ್ದರೆ, ಬಲಯುತವಾಗಿದ್ದರೆ, ಅದು ಇಂಡಿಯಾದೇಶದ, ಇಡೀ ಭಾರತದ ದೃಷ್ಟಿಯಿಂದ, ರಕ್ಷಣೆಯ ದೃಷ್ಟಿಯಿಂದ ಬಹಳ ಒಳ್ಳೆಯದೆಂದು ನನ್ನ ಅಭಿಪ್ರಾಯ. ಕಾರಣವೇನೆಂದರೆ, ಹಿಂದಿನ ಚರಿತ್ರೆಯನ್ನು ನಾವು ಸ್ವಲ್ಪ ಗಮನದಲ್ಲಿ ತಂದುಕೊಂಡರೆ, ಭಾರತ ದೇಶಕ್ಕೆ ಆಕ್ರಮಣ ನಡೆದಿದ್ದು ದಕ್ಷಿಣ ದೇಶದ ಮುಖಾಂತರ. ಉತ್ತರ ದೇಶದಲ್ಲಿ ಅಭೇದ್ಯವಾದ ಹಿಮಾಲಯ ಪರ್ವತ ಶ್ರೇಣಿಗಳಿರುವುದರಿಂದ ಅವುಗಳನ್ನು ದಾಟಿ ಬರುವುದಕ್ಕೆ ಆ ಕಾಲದಲ್ಲಿ ಬಹಳ ಕಷ್ಟವಾಗಿತ್ತು. ಆದುದರಿಂದ ಇಂಡಿಯಾ ದೇಶಕ್ಕೆ ಬರಲು ಇದ್ದ ಮಾರ್ಗವೆಂದರೆ ಸಮುದ್ರ ಮಾರ್ಗವಾಗಿ, ದಕ್ಷಿಣ ದೇಶವನ್ನು ಹೊಕ್ಕು ಬರಬೇಕಾಗಿತ್ತು. ಈಗ ಯಾವ ಮಾರ್ಗದಲ್ಲಿ ಬೇಕಾದರೂ ಬರುವುದಕ್ಕೆ ಬೇಕಾದ ಆಧುನಿಕ ಸೌಕರ್ಯಗಳು ಇರುತ್ತವೆ. ಹೇಗಾದರೂ ಇರಲಿ, ದಕ್ಷಿಣ ದೇಶದಲ್ಲಿ ಒಂದು ದೊಡ್ಡ ಸಂಸ್ಥಾನ, ಶಕ್ತಿಯುತವಾದ ರಾಜ್ಯ ಏರ್ಪಡುವುದಾದರೆ, ದಕ್ಷಿಣ ದೇಶದಲ್ಲಿ ನಾಲ್ಕಾರು ಬಂದರುಗಳೂ ಇರುವುದರಿಂದ ರಕ್ಷಣೆಗೆ ಹೆಚ್ಚು ನೌಕಾಬಲವಿದ್ದು ದೇಶದ ರಕ್ಷಣೆಯ ಜವಾಬ್ದಾರಿಯನ್ನು ಹೆಚ್ಚಿನ ರೀತಿಯಲ್ಲಿ ಹೊರುವುದಕ್ಕೆ ಶಕ್ತಿಯುಂಟಾಗುತ್ತದೆ. ಆದುದರಿಂದ ದಕ್ಷಿಣ ದೇಶದಲ್ಲಿ ಸಣ್ಣಸಣ್ಣ ಸಂಸ್ಥಾನಗಳು ಮೂರು ನಾಲ್ಕು ಇದ್ದರೆ, ಆ ಸಂಸ್ಥಾನಗಳ ಯೋಗ್ಯತೆಗೆ ತಕ್ಕ ಸಣ್ಣ ನೌಕಾಬಲವನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಶಕ್ತಿ ಮೀರಿದಂಥ ನೌಕಾಬಲವನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ಶಕ್ತಿಯುತವಾದ, ದೊಡ್ಡದಾದ, ವಿಸ್ತಾರವಾದ ದಕ್ಷಿಣ ಭಾರತ ಸರ್ಕಾರ ಏರ್ಪಡುವುದಾದರೆ ಈ ಕಾರ್ಯವನ್ನು ನಾವು ಸುಲಭವಾಗಿ ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ. ಅದರ ಜೊತೆಗೆ ಕೋಟ್ಯಂತರ ರೂಪಾಯಿಗಳ ಅಭಿವೃದ್ಧಿಕಾರ್ಯಗಳನ್ನು ಮಾಡಬೇಕಾದರೂ, ಎರಡು ಮೂರು ಸಂಸ್ಥಾನಗಳಿಗೆ ಅನ್ವಯಿಸತಕ್ಕ ಯೋಜನೆಗಳನ್ನು ಕೈಗೊಳ್ಳಬೇಕಾದಲ್ಲಿ ಬಹಳ ಸುಲಭವಾಗುತ್ತದೆ ಎಂಬ ದೃಷ್ಟಿಯಿಂದಲೂ ಸಹ ಒಂದೇ ಸಂಸ್ಥಾನವಿದ್ದರೆ ಒಳ್ಳೆಯದು ಎಂದು ಆ ಸೂಚನೆಯನ್ನು ಸ್ವಾಗತ ಮಾಡಿದವರ ಪೈಕಿ ನಾನೂ ಒಬ್ಬ.

ಕೆಲವು ಸ್ನೇಹಿತರೂ ಮತ್ತು ಪತ್ರಿಕೆಗಳೂ ಟೀಕೆ ಮಾಡುತ್ತ ಇದೆಲ್ಲ ಒಂದು ಅಸಂಬದ್ಧ ಪ್ರಲಾಪ, ನೈಸರ್ಗಿಕವಾಗಿ, ಸ್ವಾಭಾವಿಕವಾಗಿ ಈ ರೀತಿ ಮಾಡುವುದು ಸೂಕ್ತವಲ್ಲವೆಂಬುದಾಗಿಯೂ, ತಮಿಳರಿಗೂ ನಮಗೂ ಏನು ಸಂಬಂಧ ಮಲೆಯಾಳದವರಿಗೂ ನಮಗೂ ಏನು ಸಂಬಂಧ ಎಂದು ಮುಂತಾಗಿ ವಾದಮಾಡಿದ್ದಾರೆ. ನಾನೂ ಸಹ ಬರೀ ಕನ್ನಡ ಮಾತನಾಡುವವರೆಲ್ಲ ಒಂದೇ ತೆರನಾಗಿದ್ದಾರೆಯೇ ಎಂದು ಯೋಚಿಸಿದೆ. ಉತ್ತರ ಕರ್ಣಾಟಕದವರಿಗೂ ನಮಗೂ ಬಹಳ ವಿಧಗಳಲ್ಲಿ ವ್ಯತ್ಯಾಸವಿದೆ. ಅದನ್ನೆಲ್ಲ ನಾನು ಹಿಂದೆಯೇ ಹೇಳಿದ್ದೇನೆ. ಉದಾಹರಣೆಗೆ, ನಮ್ಮಲ್ಲಿ ''ಒಂದೂವರೆ ಘಂಟೆ ಆಯಿತು'' ಎಂದು ಹೇಳಿದರೆ ಉತ್ತರ ಕರ್ಣಾಟಕದವರು 'ದೇಡ್ ಘಂಟೆ ಬಡೀತು' ಎಂದೂ, ಆಂಧ್ರರು 'ಒಗಟಿನ್ನರ ಘಂಟ ಅಯ' ಎಂದೂ, ತಮಿಳರು 'ಒಣ್ಣರಮಣಿ ಆಚಿ' ಎಂದೂ ಹೇಳುತ್ತಾರೆ. ಇದರಲ್ಲಿ ಹೆಚ್ಚು ಸ್ವಾಭಾವಿಕವಾಗಿರುವುದು ಯಾವುದೆಂದು ತಾವುಗಳೇ ನೋಡಬಹುದು. ಆದುದರಿಂದ ಇವೆಲ್ಲ ಸುಮ್ಮನೆ ವಾದಕ್ಕೆ ವಾದವನ್ನು ಹೂಡಿಕೊಂಡು ಹೋಗುವ ಮಾತುಗಳೇ ಹೊರತು ದಕ್ಷಿಣ ಪ್ರದೇಶರಚನೆಯಲ್ಲಿ ಅಸ್ವಾಭಾವಿಕವಾದದ್ದು ಯಾವುದೂ ಕಾಣುವುದಿಲ್ಲ. ದಕ್ಷಿಣ ಪ್ರದೇಶವನ್ನು ಒಂದು ಸಂಸ್ಥಾನವಾಗಿ ಮಾಡಬಯಸುವುದಾದರೆ ದೇಶದ ಹಿತ ದೃಷ್ಟಿಯಿಂದ, ರಕ್ಷಣೆ ದೃಷ್ಟಿಯಿಂದ, ಒಗ್ಗಟ್ಟಿನ ದೃಷ್ಟಿಯಿಂದ, ವ್ಯಾಜ್ಯ, ಜಗಳ ಮುಂತಾದುವು ಇಲ್ಲದಿರುವಂತೆ ಮಾಡುವ ದೃಷ್ಟಿಯಿಂದ, ನಾವು ಸರ್ಕಾರವನ್ನು ಸರಿಯಾಗಿ ನಡೆಸಬಹುದು. ಇದಕ್ಕಿಂತ ಇನ್ನೊಂದು ವಿಷಯವನ್ನು ಧೈರ್ಯವಾಗಿ ಹೇಳಬೇಕೆನ್ನಿಸುತ್ತದೆ. ನಮ್ಮ ಸಭಾನಾಯಕರು ಈರೀತಿ ಹೇಳಿದ್ದಾರೆ: ದಕ್ಷಿಣ ದೇಶವನ್ನು ಕೇಂದ್ರ ಸರ್ಕಾರದವರು ಉದಾಸೀನ ಮಾಡುತ್ತಿದ್ದಾರೆ, ದಕ್ಷಿಣದೇಶ ಅನೇಕ ವಿಷಯಗಳಲ್ಲಿ ಅಭಿವೃದ್ಧಿಗೆ ಬಂದಿಲ್ಲ ಎಂದು ಅನೇಕ ಸಾರಿ ಹೇಳಿದ್ದಾರೆ. ಇದಕ್ಕೆ ಕಾರಣ ಪಾರ್ಲಿಮೆಂಟಿನಲ್ಲಿ ಉತ್ತರ ದೇಶದ ಪ್ರತಿನಿಧಿಗಳು ಹೆಚ್ಚಾಗಿದ್ದಾರೆ. ದಕ್ಷಿಣ ದೇಶದ ಪ್ರತಿನಿಧಿಗಳು ಕೇವಲ 10-15 ಜನ ಮಾತ್ರ ಲೋಕ ಸಭೆಯಲ್ಲಿದ್ದಾರೆ. ದಕ್ಷಿಣ ದೇಶದವರು ಒಟ್ಟಾಗಿ ಸೇರುವುದಕ್ಕಾಗಲಿ ಅವರು ಒಂದು ಸಂಸ್ಥಾನದವರೆಂದು ಅನ್ನಿಸಿಕೊಳ್ಳುವುದಕ್ಕಾಗಲಿ ಅವಕಾಶವಿಲ್ಲ. ದಕ್ಷಿಣ ದೇಶ ಒಂದು ಪ್ರಬಲವಾದ ಗುಂಪನ್ನು ಕಟ್ಟಿ ಅದಕ್ಕೆ ಬೇಕಾದ ಅನುಕೂಲ, ಸೌಕರ್ಯ ಮುಂತಾದುವಕ್ಕಾಗಿ ಪಾರ್ಲಿಮೆಂಟಿನಲ್ಲಿ ಹೊಡೆದಾಡಲು ಪ್ರತಿನಿಧಿಗಳ ಸಂಖ್ಯೆ ಕಡಮೆಯಿರುವುದರಿಂದ ಸಾಧ್ಯವಿಲ್ಲವಾಗಿದೆ. ಆದ್ದರಿಂದ ಈಗ ದಕ್ಷಿಣ

ದೇಶ ಒಂದು ಸಂಸ್ಥಾನವಾಗಿ ಒಂದೇ ಸರ್ಕಾರ ರಚನೆಯಾದರೆ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯ ಹೆಚ್ಚಿ ಅದರ ಶಕ್ತಿ ಬೆಳೆಯುತ್ತದೆ. ಉತ್ತರದೇಶ ಇದುವರೆಗೆ ಉದಾಸೀನ ಮಾಡಿರುವಂತೆ ಮುಂದೆ ಮಾಡಲು ಸಾಧ್ಯವಿಲ್ಲದಂತಾಗುತ್ತದೆ. ಆದ್ದರಿಂದ ದಕ್ಷಿಣ ಪ್ರದೇಶವಾಗಬೇಕಾದದ್ದು ಸೂಕ್ತ ಎಂದು ಅದನ್ನು ಸ್ವಾಗತಿಸುತ್ತೇನೆ.

ಈ ದಿವಸ ನನಗೆ ತಿಳಿದಿರುವಮಟ್ಟಿಗೆ ನಿಜವೆಂದು ಹೇಳಲಾರೆ. ಹಿಂದುಗಡೆ ಮಾತನಾಡಿಕೊಳ್ಳುವ ಮಾತನ್ನು ಸ್ವಲ್ಪಮಟ್ಟಿಗಾದರೂ ನಂಬುವುದಕ್ಕೆ ಅವಕಾಶವಿದೆ—ಉತ್ತರ ಪ್ರದೇಶದಲ್ಲಿ 6½ ಕೋಟಿ ಜನಸಂಖ್ಯೆಯಿದೆ. ಆದ್ದರಿಂದ ಅದು ಪ್ರಬಲವಾದ ಸಂಸ್ಥಾನವಾಗಿದೆ. ಹಾಗೆಯೇ ದಕ್ಷಿಣ ಪ್ರದೇಶ ಒಂದು ಸಂಸ್ಥಾನವಾದರೆ ಅದರ ಜನಸಂಖ್ಯೆ 10½ ಕೋಟಿ ಜನ ಆಗಿ 6½ ಕೋಟಿಗಳ ಮೇಲೆ ಹೋಗಲು ಅವಕಾಶವಿದೆ. ಆದ್ದರಿಂದ ದಕ್ಷಿಣ ಪ್ರದೇಶಕ್ಕೆ ಅವಕಾಶ ಕೊಡದೆ ಎರಡು ಭಾಷೆಯಿರುವ ಒಂದೊಂದು ರಾಜ್ಯ ಮಾಡಬೇಕು. ''ಮದರಾಸಿನಲ್ಲಿ 3½ ಕೋಟಿ ಜನಸಂಖ್ಯೆಯಿದೆ. ಅದು ಹಾಗೇ ಇರಲಿ'' ಮಲೆಯಾಳಿಗಳು ಮತ್ತು ಕನ್ನಡ ಮಾತನಾಡುವವರು 3½ ಕೋಟಿ ಆಗುತ್ತಾರೆ, ಅವರು ಒಂದು ಸಂಸ್ಥಾನವಾಗಲಿ ಆಂಧ್ರ ಮತ್ತು ತೆಲಂಗಾಣದ ಜನರು ಸುಮಾರು 3½ ಕೋಟಿ ಆಗುತ್ತಾರೆ. ಆದುದರಿಂದ ಹೆಚ್ಚು ಕಡಮೆ 3½ ಕೋಟಿ ಜನರಿರುವ 3 ಸಂಸ್ಥಾನಗಳನ್ನು ದಕ್ಷಿಣದಲ್ಲಿ ಏರ್ಪಡಿಸುವುದು ಚೆನ್ನಾಗಿದೆ'' ಎಂದು ಉತ್ತರದೇಶದ ಕೆಲವು ಮಹನೀಯರು ಒಂದು ಪ್ರಚಾರ ಕಾರ್ಯ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆಂದ ಕೇಳಿದ್ದೇನೆ. ಅವರ ಮಾತು ನಡೆಯುವ ಕಡೆ ಪ್ರತಿಭೆಯನ್ನು ಬೀರುತ್ತಿದ್ದಾರಂತೆ. ಇದರ ಉದ್ದೇಶ ದಕ್ಷಿಣ ಭಾರತದ ಜನರು ಒಗ್ಗಟ್ಟಾಗಿ ಉತ್ತರದೇಶದ ಜನರನ್ನಾಗಲಿ ಅಥವಾ ಪ್ರತಿನಿಧಿಗಳನ್ನಾಗಲಿ ಮೀರಿಸುವುದಕ್ಕೆ ಅವಕಾಶವಿಲ್ಲದಿರಲಿ ಎಂಬುದೇ ಆಗಿದೆ. ಎಲ್ಲಿ ದಕ್ಷಿಣ ದೇಶದವರು ಒಗ್ಗಟ್ಟಾಗಿ ಉತ್ತರದೇಶದವರನ್ನು ಹತೋಟಿಯಲ್ಲಿಡುತ್ತಾರೋ ಎಂಬ ಭಯದಿಂದ ಈ ರೀತಿ ಮಾಡುತ್ತಿದ್ದಾರೆಂದು ಹೇಳಬೇಕಾಗಿದೆ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ದಕ್ಷಿಣ ಪ್ರದೇಶವೆಲ್ಲಾ ಒಂದಾಗಿ ಒಂದು ಸರ್ಕಾರವಾಗಿ ಮಾರ್ಪಾಡಾಗತಕ್ಕದ್ದು ಬಹಳ ಅಗತ್ಯವಾಗಿದೆ.

ಮೊನ್ನೆ ಸಭಾನಾಯಕರು ದಕ್ಷಿಣ ಪ್ರದೇಶದ ಮಾತು one way traffic ಒಮ್ಮುಖದ ಮಾರ್ಗ ಇದ್ದಹಾಗಿದೆ, ಆಂಧ್ರದವರೇನೂ ಅಭಿಪ್ರಾಯ ಸೂಚಿಸಿಲ್ಲ, ಮದರಾಸಿನವರು ಇಷ್ಟಪಟ್ಟಿಲ್ಲ, ಕೇರಳದಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ, ನಾವು ಮಾತ್ರ ಮಾತಾಡಿದರೆ ಏನು ಪ್ರಯೋಜನ ಎಂದು ಹೇಳಿದರು. ವಾದಕ್ಕೆ ಹಾಗೆ ಹೇಳುವುದು ಸರಿಯಾಗಿ ಕಾಣಬಹುದು. ದೇಶದ ಹಿತ, ಒಗ್ಗಟ್ಟು ಇವನ್ನು ಕಾಪಾಡಬೇಕಾದರೆ, ನಿಜವಾಗಿಯೂ ಒಳ್ಳೆಯದಾಗಬೇಕೆಂದು ಆಶಿಸುವುದಾದರೆ, ಇಂಡಿಯಾ ಸರ್ಕಾರದವರು ಇಡೀ ದಕ್ಷಿಣ ದೇಶದಹಿತರಕ್ಷಣೆ ಮಾಡಲು ಒತ್ತಾಯವಾಗಿಯಾದರೂ ಅದನ್ನೇ ಒಂದು ಪ್ರಾಂತ ಮಾಡಬೇಕಾದದ್ದು ಅಗತ್ಯ.

ಮೈಸೂರಿನವರೆಲ್ಲರೂ ಒಮ್ಮನಸ್ಸಿನಿಂದ ಸರ್ವತೋಮುಖವಾಗಿ ಉತ್ತರ ಕರ್ಣಾಟಕ, ಮೈಸೂರು ಎಲ್ಲ ಸೇರಿ ಒಂದು ರಾಜ್ಯವಾಗಬೇಕೆಂದು ಹೇಳಿದರು, ಎಂದು ಸಭಾನಾಯಕರು ಸೂಚಿಸಿದರು. ಆದರೆ ಅದಕ್ಕೆ ಪ್ರಬಲವಾದ ವಿರೋಧವಿತ್ತು. ಬಹುಮತದ ಅಭಿಪ್ರಾಯ ಹಾಗಿರಲಿಲ್ಲ. ಬಲವಂತ ಮಾಘಸ್ನಾನಕ್ಕೆ ಒಪ್ಪಿದರು. ಹೆದರಿಸಿ ಸಂಸ್ಥೆಯ ಶಿಸ್ತನ್ನು ನಮ್ಮ ಮೇಲೆ ಹೇರಿ ಏನಾದರೂ ಮಾತನಾಡಿಕೊಳ್ಳಿ, ಕೈಮಾತ್ರ ಎತ್ತಬೇಡಿ, ಎಂದು ಹೇಳಿ, ಸಂಸ್ಥೆಯ ಶಕ್ತಿ ಕುಂದದ ಹಾಗೆ ನೋಡಿಕೊಳ್ಳಬೇಕಾದದ್ದು ಕರ್ತವ್ಯವೆಂದು ನಿರ್ಬಂಧ ಹಾಕಿ, ಪಕ್ಷದವರಿಗೆ ಸ್ವಾತಂತ್ರ್ಯವಿಲ್ಲದಂತೆ ಮಾಡಿ, ಒಪ್ಪಿಗೆ ಪಡೆದು, ಬಹುಮತದ ಒಪ್ಪಿಗೆ ದೊರೆಯಿತೆಂಬುದು ಸರ್ವವಿದಿತವಾದ ವಿಷಯವಾಗಿದೆ. ಹೀಗಿದ್ದರೂ ಯುನಾನಿಮಸ್ಸಾಗಿ ಒಪ್ಪಿಕೊಂಡಿದ್ದೇವೆಂದು ನಾಯಕರು ಹೇಳುತ್ತಾರೆ. ಅದು ನಿಜವಲ್ಲವೆಂದು ಹೇಳಬೇಕಾಗಿದೆ. ಶ್ರೀ ವೀರಣ್ಣಗೌಡರಿಗೆ ಯಾವಾಗಲೂ ನಮ್ಮಮೇಲೆ ಖಾರ ಎಂದು ಸಭಾನಾಯಕರು ಹೇಳುತ್ತಾರೆ. ಆದ್ದರಿಂದ ಅವರು ನಿಜವಲ್ಲದ ವಿಚಾರವನ್ನು ಒತ್ತಿ ಒತ್ತಿ ಹೇಳುತ್ತಿದ್ದಾಗ ನಾನು ಸುಮ್ಮನಿದ್ದೆ. ಯುನಾನಿಮಸ್ಸಾಗಿ ಅಭಿಪ್ರಾಯ ದೊರೆತಿದೆ, ಇದರಮೇಲೆ ಮಾತನಾಡುವುದಕ್ಕಾಗುವುದಿಲ್ಲ ಎಂದು ಹೇಳುವುದಕ್ಕೆ ಅವಕಾಶವಿಲ್ಲ. ಇದು ಬಲವಂತ ಮಾಘಸ್ನಾನ. ಕಾಂಗ್ರೆಸ್ ಶಿಸ್ತನ್ನು ನಮ್ಮಮೇಲೆ ಹೇರದಿದ್ದರೆ ಫಲಿತಾಂಶ ಬೇರೆಯಾಗುತ್ತಿತ್ತು. ಈಗ ಸ್ವಲ್ಪ ಸಡಿಲ ಬಿಟ್ಟಿದ್ದಾರೆ. ಈ ಮಸೂದೆಗೆ ತಿದ್ದುಪಡಿಗಳನ್ನು ಪಕ್ಷದ ನಾಯಕರನ್ನು ಕೇಳಿ ಕಳುಹಿಸಬಹುದೆಂದು ಹೇಳಿದ್ದಾರೆ. ಓಟು ಮಾಡುವುದಿಲ್ಲವೆಂದು ಹೇಳಿದರೆ ಸಂಸ್ಥೆಯ ಶಿಸ್ತು, ನಿಯಮ ಪಾಲಿಸಬೇಕು ಎಂದಿರುವವರಿಗೆ ಕಷ್ಟ. ಅದನ್ನು ಅವರಿಗೇ ಬಿಡೋಣ. ದೇಶದ ಹಿತರಕ್ಷಣೆ, ಅಭಿವೃದ್ಧಿ ಬಹು ಮುಖ್ಯವಾದುದು. ಅದನ್ನು ಸಾಧಿಸಬೇಕಾದರೆ .ದಕ್ಷಿಣ ಪ್ರದೇಶದ ಸರ್ಕಾರ ಏರ್ಪಾಡಾಗುವುದು ಅನುಕೂಲವೆಂದು ಮನಸ್ಸಿಗೆ ತೋರಿದರೆ ಯಾರು ಏನೇ ಹೇಳಲಿ ಆ ಕಾರ್ಯವನ್ನು ಸಾಧಿಸಬೇಕಾದದ್ದು ಕರ್ತವ್ಯ. ಅದನ್ನು ಬಿಟ್ಟು ಏನೋ ಹೇಳಿದರೆ ಪ್ರಯೋಜನವಿಲ್ಲ, ಈ ದಿವಸ ಕೇರಳದಲ್ಲಿ ಲೆಜಿಸ್ಲೇಚರ್ ಇಲ್ಲದಿರಬಹುದು. ಆರು ತಿಂಗಳಮೇಲೆ ಆಗುತ್ತದೆ, ದಕ್ಷಿಣ ಪ್ರದೇಶ ರಚನೆಯನ್ನು ಮೊದಲು ಸ್ವಾಗತಿಸಿ ಅನಂತರ ಇನ್ನೊಂದು ತರಹ ಹೇಳಿದರೆ ಅವಮಾನವಲ್ಲವೆ? ಯಾವ ಸಂಸ್ಥೆ ನಮ್ಮನ್ನು ಆಳುತ್ತಿದೆಯೋ, ಯಾವುದು ಏಕಚಕ್ರಾಧಿಪತ್ಯ ಕಟ್ಟಿ ಅಮೃತಸರದ ಅಧಿವೇಶನದಂಥ ಮಹಾ ಅಧಿವೇಶನದಲ್ಲಿ, ಒಂದು ಅಪೀಲು ಎಂದು ಹೇಳುವ ಹಾಗೆ, ದೇಶದ ಮುಂದೆ ಒಂದು ಅಭಿಪ್ರಾಯ ಸೂಚಿಸಿತೋ ಅದನ್ನು ಆಚರಣೆಗೆ ತರುವುದು ಒಳ್ಳೆಯದು; ಹಾಗೆ ಮಾಡಿ ಎಂದು ಹೇಳಿದಾಗ ಅದಕ್ಕೆ ಬೆಂಬಲ ಕೊಟ್ಟಾಗ, 'ಏನು ಬೇಕಾದರೂ ಹೇಳಿ, ಅದು ಮಾತ್ರ ಬೇಡ' ಎಂದು ಹೇಳುವ ವಾದ ಸರಿಯಲ್ಲ. ಈಗಲೂ ನಾನು ಸರ್ಕಾರದಲ್ಲಿ, ಇಂಡಿಯಾ ಸರ್ಕಾರದಲ್ಲಿ ಮತ್ತು ಸಂಬಂಧಪಟ್ಟ ಅಧಿಕಾರ ವರ್ಗದಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ: ದಕ್ಷಿಣ ಪ್ರದೇಶ ಮಾಡುವುದು ಬಹಳ ಸೂಕ್ತವಾಗಿದೆ, ಬಹಳ ಸುಲಭವಾಗಿಯೂ ಇದೆ, ಅದಕ್ಕೆ ಬೆಂಬಲ ನೀಡಬೇಕು ಎಂದು.

ಈ ಮಸೂದೆಯಲ್ಲಿ ಜೋನಲ್ ಕೌನ್ಸಿಲ್ ಮಾಡಬೇಕೆಂದು ಹೇಳಿದೆ. ಜೋನಲ್ ಕೌನ್ಸಿಲ್ಲಿಗೆ ಕೆಲವು ಅಧಿಕಾರಗಳಿವೆ. ನಾಲ್ಕು ಸಂಸ್ಥಾನಗಳು ಸೇರಿ ದಕ್ಷಿಣ ಪ್ರದೇಶದ ಜೋನಲ್ ಕೌನ್ಸಿಲ್ ಆಗಬೇಕು ಎಂದು ಹೇಳುತ್ತಾರೆ. ಅಂಥ ಕೌನ್ಸಿಲ್ಲಿಗೆ ಆಂಧ್ರ, ತೆಲಂಗಾಣ, ಮದರಾಸು, ಕೇರಳ ಇವೆಲ್ಲಾ ಸೇರಿ, ನಾಲ್ಕು ಮುಖ್ಯಮಂತ್ರಿಗಳು ಮತ್ತು ಬೇರೆ ಮುಖ್ಯ ಮಂತ್ರಿಗಳು ಮೂರು ಮೂರು ಜನ ಸೇರಿ, ಡೆವಲಪ್‌ಮೆಂಟ್ ಕಮಿಷನರ್, ಚೀಫ್ ಸೆಕ್ರೆಟರಿ ಇಷ್ಟು ಜನ ಮೆಂಬರಾಗಿರಲಿ, ಕೇಂದ್ರ ಸರ್ಕಾರದ ಮಂತ್ರಿಗಳು ಬಹುಶಃ ಸ್ಟೇಟ್ ಮಿನಿಸ್ಟ್ರಿಯವರು ಛೇರ್ಮನ್ ಆಗಿರಲಿ, ಒಂದೊಂದು ಸಂಸ್ಥಾನದ ಮುಖ್ಯಮಂತ್ರಿಗಳು

(ಶ್ರೀ ಎಚ್. ಕೆ. ವೀರಣ್ಣಗೌಡ)

ಒಂದೊಂದು ವರ್ಷ ವೈಸ್-ಚೇರ್ಮನ್ ಆಗಿರಲಿ, ಒಂದೊಂದು ಸಂಸ್ಥಾನದ ಚೀಫ್ ಸೆಕ್ರೆಟರಿ ಒಂದೊಂದು ವರ್ಷ ಈ ಸಂಸ್ಥೆ ಸೆಕ್ರೆಟರಿಯಾಗಿರಲಿ, ಗಡಿವ್ಯಾಜ್ಯ, ನೀರಿನ ಹಂಚಿಕೆ ವ್ಯಾಜ್ಯ ಇದು ಬಂದರೆ ಜೋನಲ್ ಕೌನ್ಸಿಲ್‌ನಲ್ಲಿ ಚರ್ಚೆಮಾಡಿ ಆ ಮೂಲಕ ಕೇಂದ್ರಕ್ಕೆ ಶಿಫಾರ್ಸು ಕಳುಹಿಸಲಿ ಎಂದು ಹೇಳಿದ್ದಾರೆ. ಭಿನ್ನಾಭಿಪ್ರಾಯ ಬಂದರೆ ಚರ್ಚೆಮಾಡಿ ಕೇಂದ್ರಕ್ಕೆ ಶಿಫಾರ್ಸು ಮಾಡಲಿ ಎಂದು ಹೇಳಿದ್ದಾರೆ. ಮೊನ್ನೆ ಸಭಾ ನಾಯಕರು ಮಾತನಾಡಿ ಈ ವಿಚಾರದಲ್ಲಿ ಕೆಲವು ಸಲಹೆಗಳನ್ನು ಕೊಟ್ಟರು. ಶ್ರೀ ಪಟ್ಟಾಭಿರಾಮನ್‌ರವರೂ ಕೆಲವು ಸಲಹೆ ಕೊಟ್ಟರು. ಇವೆರಡರಲ್ಲೂ ಅಂಗೀಕಾರಾರ್ಹವಾದ ಅಂಶವಿದೆಯೆಂದು ಒತ್ತಿ ಹೇಳಬೇಕಾಗಿದೆ. ಈಗ ನಮ್ಮ ಸಭಾನಾಯಕರು ಹೇಳಿದ ಅಂಶವನ್ನು ತೆಗೆದುಕೊಳ್ಳೋಣ. ಈದಿವಸವಲ್ಲ ಇನ್ನು ಮೂರು ತಿಂಗಳಾದರೂ 'ಕೋಲಾರ ಬಿಡಿ, ಬಳ್ಳಾರಿ ಮೂರು ತಾಲ್ಲೂಕು ಬಿಡಿ' ಎಂದು ಆಂಧ್ರರು ಹೇಳುವುದು ತಪ್ಪುವುದಿಲ್ಲ ಮತ್ತು ನಾವು 'ಮಡಕಸಿರಾ, ಹೊಸೂರು, ನೀಲಗಿರಿ ಇವನ್ನು ಮೈಸೂರಿಗೆ ಸೇರಿಸಿ' ಎಂದು ಹೇಳುವುದೂ ತಪ್ಪುವುದಿಲ್ಲ. ಇಂಥದಕ್ಕೆ ವ್ಯಾಜ್ಯವಾಗುತ್ತದೆಂದು ನಾಯಕರು ಹೇಳಿದ್ದು ನಿಜ. ಆದರೆ ವ್ಯಾಜ್ಯ ಮಾಡುವುದು ಸರಿಯಲ್ಲ. ಬೌಂಡರಿ ಕಮಿಷನ್ ಆಗುತ್ತದೆ. ಸ್ಪೆಷಲ್ ಟ್ರಿಬ್ಯೂನಲ್ ಸೇರಿಸಿ ಇತ್ಯರ್ಥಮಾಡಬೇಕು. ದಿನಚರಿ ಕಾರ್ಯಕ್ರಮಗಳಿಗೆ ವ್ಯಾಜ್ಯ ಮಾಡುವುದು ಸರಿಯಲ್ಲ, ಶ್ರೀ ಪಟ್ಟಾಭಿರಾಮನ್‌ರವರು ಹೇಳಿದ ಅಭಿಪ್ರಾಯವೂ ಚೆನ್ನಾಗಿದೆ. ಈಗಿರುವ ಸ್ಟೇಟ್ ನಮ್ಮ ಒಳಾಡಳಿತಕ್ಕೆ ಸಂಬಂಧಪಟ್ಟದ್ದಾಗಿ, ಒಬ್ಬ ಮುಖ್ಯಮಂತ್ರಿ, ಒಂದು ಸರ್ಕಾರವನ್ನು ನೇಮಿಸಿ, ನಾವು ಕಾರ್ಯ ಮಾಡುವಾಗ ಪ್ರತಿಯೊಂದು ಸಣ್ಣ ಪುಟ್ಟ ವ್ಯಾಜ್ಯ, ಪಾಲಾರ್‌ನದಿ ನೀರನ್ನು ಹಂಚಿಕೊಳ್ಳುವುದರಲ್ಲಿ ಉಂಟಾಗುವ ವಿವಾದ ಮುಂತಾದ ಸಂಸ್ಥಾನಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳು ನ್ಯಾಯ ತೀರ್ಮಾನ ಮಾಡುವುದಾದರೆ ನಾವು ಅಲ್ಲಿ ಕುಳಿತಿರುವುದು ನಮ್ಮ ಸ್ಟೇಟಸ್ಸಿಗೆ, ಸಂಸ್ಥಾನದ ಅಂತಸ್ತಿಗೆ ಧಕ್ಕೆ ತರಬಹುದು ಎಂದು ಅನುಮಾನ ಸೂಚಿಸಿದರು. ಅದರಲ್ಲಿ ತಿರುಳಿದೆಯೆಂದು ನನ್ನ ಅಭಿಪ್ರಾಯ. ಆದ್ದರಿಂದ ಜೋನಲ್ ಕೌನ್ಸಿಲ್ ಎಂದು ಸಲಹೆ ಮಾಡಿರುವಾಗ ಒಂದು ಮಾರ್ಪಾಡು ಮಾಡಿದರೆ ನಷ್ಟವಿಲ್ಲ. ಮೊನ್ನೆ ನಾಯಕರು ವಿದ್ಯುಚ್ಛಕ್ತಿ, ರೈಲ್ವೆ ಮತ್ತು ಸಂಚಾರ ಮಾರ್ಗಗಳು, ಘಾಟಮಾರ್ಗ, ಪೋಸ್ಟ್ ಇತ್ಯಾದಿ ವಿಚಾರಗಳನ್ನು ಜೋನಲ್ ಕೌನ್ಸಿಲ್‌ನಲ್ಲೇ ತೀರ್ಮಾನ ಮಾಡಿ ಕಾರ್ಯಕ್ರಮ ಕೈಗೊಳ್ಳಲು ಕಾನೂನು ದತ್ತವಾದ ಏರ್ಪಾಡು ಮಾಡಬೇಕು ಎಂದು ಹೇಳಿದರು. ಈ ಸಮಿತಿ ಅಥವಾ ಸಂಸ್ಥೆಯೇನಿದೆ, ಜೋನಲ್ ಕೌನ್ಸಿಲ್ ಎಂಬುದೇನಿದೆ, ಅದಕ್ಕೆ ಯಾರನ್ನು ಸೇರಿಸಬೇಕು ಎಂಬುದನ್ನು ಸ್ವಲ್ಪ ಬದಲಾವಣೆ ಮಾಡಿ, ವಿಸ್ತರಿಸಿ, ಅದನ್ನು ಒಂದು ಸಂಸ್ಥಾನದ ಹಾಗೆ ಮಾಡಿ, ಬೇರೆ ಬೇರೆ ಸಂಸ್ಥಾನಗಳಿಂದ ಹೋಗುವವರನ್ನು ಸೇರಿಸಿ ದಕ್ಷಿಣ ದೇಶದ ಪಾರ್ಲಿಮೆಂಟ್ ಆಗಿ ಮಾರ್ಪಾಡುಮಾಡಿ ಅಲ್ಲಿ ನಮ್ಮ ನಾಯಕರು ಹೇಳಿದ ಅಂಶಗಳನ್ನಲ್ಲದೆ ಹಾಗೆಯೇ ಇಂಟರ್‌ಸ್ಟೇಟ್ ಡೆವಲಪ್‌ಮೆಂಟಲ್ ವರ್ಕ್ಸ್ ಎಂದೇನಿವೆಯೋ ಭಾರಿ ಭಾರಿ ಕೈಗಾರಿಕೆ, ಕಾಂಗಾರಿಗಳೇನಿವೆಯೋ ಅವುಗಳ ಆಡಳಿತವನ್ನು ನೋಡಿಕೊಳ್ಳಲು ಸ್ಟಾಚ್ಯುಟರಿ ಬಾಡಿಯಾಗಿ ಈ ಸರ್ಕಾರ ನೇಮಿಸುವುದಕ್ಕೇನು ಕಷ್ಟ! ಸಭಾನಾಯಕರು 'Thus far and no further' ಎಂದು ಹೇಳಿದರೆ ನಾನು ಹೇಳುವುದು 'Go the whole hog' ಎಂದು. ಅವರು ನಾಲ್ಕಾರು ಭಾಗಗಳ ಅಧಿಕಾರವನ್ನು ನಮಗೇ ಕೊಡಲಿ, ಅದಕ್ಕೆ ಸಲಹಾ ಸಮಿತಿ ಬೇಡ ಎಂದು ಹೇಳುತ್ತಾರೆ. ನಾನು ಹೇಳುವುದು ಇನ್ನೂ ಕೆಲವು ಅಧಿಕಾರಗಳನ್ನು ಕೊಟ್ಟು ಸಲಹಾ ಸಮಿತಿಗೆ ಬದಲಾಗಿ ಸರ್ಕಾರ ಎಂದು ಮಾಡಿ ಎಂದು. ಇದನ್ನು ಅಕ್ಷರಶಃ ಮಾಡಬೇಕೆಂದು ಹೇಳುವುದಿಲ್ಲ. ಈ ಅಭಿಪ್ರಾಯವನ್ನು ಮುಂದುವರಿಸಿ ಆ ದಾರಿಯಲ್ಲಿ ಹೋದರೆ ಸರಿ. ದಕ್ಷಿಣ ಸಂಸ್ಥಾನಗಳು ಯಾವ ಕಾರಣದಿಂದಾಗಲಿ ಒಕ್ಕಡೆ ಸೇರುವ ಅಂಶ ಈ ಬಿಲ್ಲಿನಲ್ಲಿದೆ. ಅದನ್ನು ತಳಹದಿಯಾಗಿಟ್ಟು ಕಾರ್ಯ ಮುಂದುವರಿಸಿ ಸಾಧಿಸುವುದಕ್ಕೆ ಅವಕಾಶವಿದೆ. ಆದ್ದರಿಂದ ನಾನು ಈ ದಿವಸ ಇಂಡಿಯಾ ಸರ್ಕಾರದಲ್ಲಿ ಬಹಳ ನಮ್ರತೆಯಿಂದ ಪ್ರಾರ್ಥನೆ ಮಾಡುವುದು. ಈ ಬಿಲ್ಲಿನಲ್ಲಿ ಮಾರ್ಪಾಡು ಮಾಡಿ ದಕ್ಷಿಣ ದೇಶಕ್ಕೆ ಒಂದು ಜೋನಲ್ ಕೌನ್ಸಿಲ್ ಆಗಬೇಕೆಂದು ಸಲಹೆಮಾಡಿರುವುದನ್ನು ಕೈಬಿಟ್ಟು ದಕ್ಷಿಣ ದೇಶವನ್ನೂ ಒಂದು ಸಂಸ್ಥಾನಮಾಡಿ ಅದಕ್ಕೆ ಅಗತ್ಯವಾದ ತಿದ್ದುಪಡಿ ಮಾಡಿ ಈ ಮಸೂದೆಯನ್ನು ಪಾರ್ಲಿಮೆಂಟ್ ಮುಂದೆ ಮಂಡಿಸಬೇಕು ಎಂದು.

2-30 P.M.

ಕಡೆಯದಾಗಿ ಒಂದು ಮಾತು ಹೇಳಬೇಕಾಗಿದೆ. ಇದಕ್ಕೆಲ್ಲಾ ಇನ್ನೂ ಒಂದು ವಿಷಯ ಅನ್ವಯಿಸುತ್ತದೆ. ಈಗ ಈ ವಿಚಾರಗಳನ್ನು ಚರ್ಚೆ ಮಾಡುವಾಗ ನಾವು ಯಾರನ್ನೂ ದೂಷಣೆ ಮಾಡಬೇಕಾಗಿಲ್ಲ. ಈ ಚರ್ಚೆಗಳು ಅವರವರ ಮನೋಧರ್ಮ ಮತ್ತು ವಯೋಧರ್ಮಗಳಿಗನುಸಾರವಾಗಿ ನಡೆದುಕೊಂಡು ಹೋಗುತ್ತವೆ ಎಂಬುದಾಗಿ ಹೇಳುತ್ತ, ಶ್ರೀ ಕೆ. ಹನುಮಂತಯ್ಯನವರು ನನ್ನನ್ನೂ ಮತ್ತು ಶ್ರೀ ವೆಂಕಟಪ್ಪನವರನ್ನೂ ಉದ್ದೇಶಿಸಿ ಮಾತನಾಡುತ್ತ, 'ತಾವೇ ಉರುಳಿಸಿದ ಒಂದು ಗುಂಡು ಬಹಳ ವೇಗವಾಗಿ ಮೇಲಿನಿಂದ ಉರುಳಿಕೊಂಡು ಬರುತ್ತಿರುವಾಗ, ಅದರ ರಭಸವನ್ನು ತಡೆಯುವುದಕ್ಕೆ ಇವರಿಗೆ ಶಕ್ತಿ ಸಾಲದೆ ಇದೆ. ಆದರೆ ನಾನು ಮಾತ್ರ ಇನ್ನೂ ಯುವಕನಾಗಿದ್ದೇನೆ. ಅವರು ಮುದುಕರು. ನನಗೆ ತಡೆಯಲು ಶಕ್ತಿ ಇದೆ. ಅವರಿಗೆ ಶಕ್ತಿಯಿಲ್ಲ' ಎಂಬುದಾಗಿ ಏನೋ ಹೇಳಿದರು. ಇದೆಲ್ಲಾ ವಾದಕ್ಕೆ ಮಾತ್ರ ಸರಿಯಾಗಿದೆ. ಈಗ ನಾವು ಮುಖ್ಯವಾಗಿ ಗಮನಿಸಬೇಕಾದ ವಿಷಯಗಳು ಇವಲ್ಲ. ಈ ದಿವಸ ನಾವು ಮುಖ್ಯವಾಗಿ ಗಮನಿಸಬೇಕಾಗಿರುವುದೇನು ? ನಾವು ಈ ದಿವಸ ಮಾಡುತ್ತಿರುವ ಕೆಲಸಗಳೇನು ? ಇದರಿಂದ ದೇಶದಲ್ಲಿ ಮುಂದೆ ಏನಾದೀತು ? ಈಗಾಗಲೇ ದೇಶದಲ್ಲಿರತಕ್ಕಂಥ ಪರಿಸ್ಥಿತಿ ಏನು ಎಂಬುದನ್ನು ಗಮನಿಸಿ ಹೇಳುವುದಾದರೆ, ಭಾರತದಲ್ಲೇ ಅತಿ ಬೇಗ ಯುದ್ಧ ಪ್ರಾರಂಭವಾಗಲು ಅವಕಾಶ ಉಂಟಾಗತಕ್ಕ ಸನ್ನಿವೇಶಗಳು ಬಹಳವಾಗಿವೆ ಎಂದು ಹೇಳುವುದಕ್ಕೆ ಅನೇಕ ಸಕಾರಣಗಳಿವೆ. ಪಾಕೀಸ್ತಾನ ಯುದ್ಧ ಹೂಡಲು ಸಂಚು ಕಾದು ಕುಳಿತಿದೆ. ನೆಹರೂರವರು ಮತದಾನ ತೆಗೆದುಕೊಳ್ಳಬೇಕೆಂದು ಹೇಳಿರುವುದು ಟೆನಬಲ್ ಆಗುವುದಿಲ್ಲ ಎಂದು ಬಾಣ ಬಿಡುತ್ತಿದ್ದಾರೆ. ಹೀಗೆ ದೇಶದಲ್ಲಿ ಒಂದು ಕಡೆ ಬಿಸಿಬಿಸಿ ವಾತಾವರಣಗಳು ಏಳುತ್ತಿರುವಾಗ ನಾವಿಲ್ಲಿ ಕುಳಿತುಕೊಂಡು ನಮಗೆ ಆ ಮಡಕಶಿರಾ ಕೊಡಿ, ಹೊಸೂರನ್ನು ನಮಗೆ ಬಿಡಿಸಿಕೊಡಿ ಎಂದು ಕೇಳುತ್ತಿದ್ದರೆ, ಮತ್ತೊಂದು ಪ್ರಾಂತ್ಯದವರು ನಮಗೆ ಕೋಲಾರ ಬಿಡಿಸಿಕೊಡಿ ಎಂದು ವಾದ ಮಾಡುತ್ತ ಕುಳಿತುಕೊಳ್ಳುತ್ತಾರೆ. ಇದು ಸರಿಯಲ್ಲ. It is not tenable. When Rome was burning,

Nero was fiddling! ಎಂದಹಾಗೆ ರೋಂ ನಗರದಲ್ಲಿ ಪಟ್ಟಣಕ್ಕೆಲ್ಲಾ ಬೆಂಕಿ ಹತ್ತಿಕೊಂಡಿದ್ದಾಗ ಅಲ್ಲಿನ ಐಲು ದೊರೆ ಅಲ್ಲಿ ದಿಬ್ಬದ ಮೇಲೆ ಕುಳಿತು ಪಿಟೀಲ್ ಬಾರಿಸುತ್ತಿದ್ದನಂತೆ. ಆದುದರಿಂದ ಈ ದಿವಸ ನಾವು ಈ ವಾದ-ವಿವಾದಗಳಲ್ಲಿ ನಮ್ಮ ನಮ್ಮ ಚಾಕಚಕ್ಯತೆಯ ಜಾಣತನವನ್ನು ತೋರಿಸಿ ಚರ್ಚೆ ಮಾಡಲು ಇದು ಸರಿಯಾದ ಕಾಲವಲ್ಲ. ಈಗ ದೇಶಾದ್ಯಂತವೂ ಬಹಳ ತಲ್ಲಣಿಸುತ್ತಿರುವಂಥ ಸೂಚನೆಗಳು ಕಂಡುಬರತಕ್ಕಂಥ ಕಾಲವಾಗಿದೆ. ಆದುದರಿಂದ ನಾವು ಈಗ ಈ ವಿಚಾರಗಳನ್ನೆಲ್ಲಾ ಕೈಬಿಟ್ಟು ಇನ್ನೂ ಸ್ವಲ್ಪ ಕಾದು ನೋಡೋಣ, ಆದರೆ ದೇವರ ದಯೆಯಿಂದ ಅಂಥ ಸನ್ನಿವೇಶಗಳು ದೇಶದಲ್ಲಿ ಉಂಟಾಗದೆ ಇರಲೆಂದು ಹಾರೈಸುತ್ತೇನೆ. ಆ ರೀತಿ ಆಗುವುದೇ ಬೇಡ. ಆದುದರಿಂದ ಈ ಸಂದರ್ಭದಲ್ಲಿ ನಾನು ಬಹಳ ವಿನಯದಿಂದ ಇಂಡಿಯಾ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ: ದೇಶಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ಇನ್ನೂ ಒಂದು ಹತ್ತು ವರ್ಷಗಳ ಕಾಲ ಕೈಬಿಟ್ಟು ಬಿಡುವುದು ಒಳ್ಳೆಯದು ಎಂದು. ದೇಶವೆಲ್ಲೆಲ್ಲಾ ಶಾಂತಿ-ಸಮಾಧಾನಗಳು ನೆಲಸಲಿ. ಈಗ ಇರತಕ್ಕ ಪಾಕೀಸ್ತಾನ ಹೀಗೇ ಪ್ರತ್ಯೇಕವಾಗಿ ಇರುತ್ತದೆಯೋ ಅಥವಾ ಅದು ಹಿಂದೂಸ್ಥಾನದಲ್ಲೇ ಬೆರತುಹೋಗತಕ್ಕಂಥ ಕಾಲ ಬರುತ್ತದೆಯೋ ಅದೆಲ್ಲವನ್ನೂ ನೋಡೋಣ. ಯಾರೋ ಒಬ್ಬರು ಈ ಎರಡು ದೇಶಗಳೂ ಕೊನೆಗೆ ಒಂದೇ ಆಗುತ್ತವೆಂದು ಭವಿಷ್ಯ ಹೇಳಿದಾರಂತೆ. ಅವರ ಭವಿಷ್ಯ ಅಷ್ಟು ನಿಜವಾದದ್ದು ಎಂದು ಹೇಳುತ್ತಿದ್ದಾರೆ. ಹಾಗೆ ಪಾಕಿಸ್ತಾನದವರು ಏನಾದರೂ ದುಡುಕಿ ನಮ್ಮ ಮೇಲೆ ಬಿದ್ದು ತಮ್ಮ ರೆಕ್ಕೆ-ಪುಕ್ಕಗಳನ್ನೆಲ್ಲಾ ಕತ್ತರಿಸಿಕೊಂಡು ಕೊನೆಗೆ ವಿಧಿಯಿಲ್ಲದೆ ನಮ್ಮ ಒಡನೆಯೇ ಬಂದು ಬಾಳುತ್ತೇವೆಂದು ಹೇಳಬಹುದು. ಆದುದರಿಂದ ನಾವು ಅಲ್ಲಿಯವರೆಗೂ ಸ್ವಲ್ಪ ಕಾದು ನೋಡೋಣ. ದೇಶದಲ್ಲಿ ಶಾಂತಿ-ಸುಭಿಕ್ಷಗಳು ಉಂಟಾಗಲಿ. ಈ ಭಾಷಾ ವ್ಯಾಜ್ಯ, ಊರಿನ ವ್ಯಾಜ್ಯ, ನೀರಿನ ವ್ಯಾಜ್ಯ, ಗಡೀವ್ಯಾಜ್ಯಗಳ ಗೋಜಿಗೆ ಈಗ ಹೋಗುವುದು ಬೇಡ. ಇದು ದೇಶದ ಐಕಮತ್ಯವನ್ನು ಕಲಕಲು ಅವಕಾಶ ಕೊಟ್ಟ ಹಾಗೆ ಆಗುತ್ತದೆ. ಇದರಿಂದ ದಗ್ಗೆಂದಲಕ್ಕೆ ಅವಕಾಶವಾಗುತ್ತದೆ. ಈಗಾಗಲೇ ದೇಶದಲ್ಲಿ ಅಲ್ಲಲ್ಲೆ ಸಾಕಷ್ಟು ಗೊಂದಲವೆದ್ದಿದೆ. ಆದುದರಿಂದ ಈಗ ಸದ್ಯಕ್ಕೆ ಇದನ್ನು ಮುಂದುವರಿಸದೆ ಇಷ್ಟಕ್ಕೇ ಕೈಬಿಡುವುದು ಒಳ್ಳೆಯದು. ಈಗಾಗಲೇ ಈ ಪ್ರಾಂತ್ಯ ಪುನರ್ವಿಂಗಡಣೆಯ ಸಂಬಂಧದಲ್ಲೇ ಪುನಃ ಮಹರಾಷ್ಟ್ರದವರು ಸುಮಾರು 25 ಜನರು ಕಾಂಗ್ರೆಸ್ ಸದಸ್ಯರೇ ಸತ್ಯಾಗ್ರಹ ಹೂಡಲು ತೀರ್ಮಾನ ಮಾಡಿಕೊಂಡಿದ್ದಾರೆಂದು ಕೇಳುತ್ತಿದ್ದೇವೆ. ಆದುದರಿಂದ ಇದನ್ನು ಈಗಲೇ ಅಂಗೀಕಾರ ಮಾಡಲೇಬೇಕೆಂಬುದಕ್ಕೆ ಅಂಥ ಸುಗಮವಾದ ಅವಕಾಶಗಳೇನೂ ಕಂಡುಬರುವುದಿಲ್ಲ. ಇಂಥ ಅನಾನುಕೂಲಗಳಿರುವಾಗ ಮೈಸೂರು ಮೈಸೂರಿದ್ದ ಹಾಗೇ ಇದ್ದರೆ ಇದರಿಂದ ಏನು ಅನಾನುಕೂಲವಾಗುತ್ತದೆ? ನೂರಾರು ವರ್ಷಗಳಿಂದಲೂ ಇದು ಹೀಗೆಯೇ ಮುಂದುವರಿದುಕೊಂಡು ಬಂದಿರುವಾಗ ಇನ್ನೂ ಎಂಟು ಹತ್ತು ವರ್ಷಗಳು ಹೀಗೆಯೇ ಮುಂದುವರಿಯಲಿ ಎಂದು ಹೇಳಿದರೆ ಇದರಿಂದಾಗತಕ್ಕ ತೊಂದರೆಯಾದರೂ ಏನಿದೆ? ಈಗಿನ ಸಂದರ್ಭಗಳಲ್ಲಿ ನಾನು ಇಂಡಿಯಾ ಸರ್ಕಾರಕ್ಕೆ ಕೊಡತಕ್ಕಂಥ ನನ್ನ ಒಂದು ಖಚಿತವಾದ ಸಲಹೆಯೇನೆಂದರೆ ಮತ್ತು ಒಂದು ನನ್ನ ವಿನಯಪೂರ್ವಕವಾದ ಪ್ರಾರ್ಥನೆಯೇನೆಂದರೆ: ಈ ಪ್ರಶ್ನೆಯನ್ನು ಇನ್ನೂ ಹತ್ತು ವರ್ಷಗಳ ಕಾಲ ಮುಂದಕ್ಕೆ ಹಾಕಕಕ್ಕದ್ದು ಉಚಿತವಾದುದೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು-ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಅಧ್ಯಕ್ಷರೇ, ನಾನು ಈಗ ಸಭೆಯ ಮುಂದೆ ಮಂಡಿಸಲ್ಪಟ್ಟಿರುವ ಪ್ರಾಂತ್ಯಗಳ ಪುನರ್ವಿಂಗಡಣೆಯ ಮಸೂದೆಯನ್ನು ಸ್ವಾಗತಿಸುತ್ತೇನೆ. ಆದರೆ ಈ ಹಿಂದೆ ಈ ಸಭೆಯ ಮುಂದೆ ಈ ಪ್ರಾಂತ್ಯಗಳ ಪುನರ್ವಿಂಗಡಣೆಯ ವರದಿ ಚರ್ಚೆಗೆ ಬಂದಿದ್ದಾಗ ಇದ್ದಂಥ ಒಂದು ವಿರೋಧ ಸನ್ನಿವೇಶ ಈಗ ಬಹಳಮಟ್ಟಿಗೆ ಅಳಿಸಿ ಹೋಗಿರುವುದದನ್ನು ಕಂಡು ನನಗಂತೂ ಬಹಳ ಮಟ್ಟಿಗೆ ಸಂತೋಷವುಂಟಾಗಿದೆ. ಆದರೆ, ಈಗ್ಗೆ ಕೆಲವು ದಿವಸಗಳ ಹಿಂದೆ ನಾನೂ ಮತ್ತು ನಮ್ಮ ಚುನಾವಣೆ ಕ್ಷೇತ್ರದಿಂದ ಆರಿಸಿ ಬಂದಿರತಕ್ಕ ನನ್ನ ಮಿತ್ರರಾದ ಶ್ರೀ ಕೆ. ವಿ. ಬೈರೇಗೌಡರೂ ಇಬ್ಬರೂ ಒಟ್ಟಾಗಿ ನಮ್ಮ ಚುನಾವಣಾಕ್ಷೇತ್ರದಲ್ಲಿ ಸಂಚಾರ ಮಾಡಿ ಜನರ ಅಭಿಪ್ರಾಯವನ್ನು ಸಂಗ್ರಹಣೆ ಮಾಡಿದ್ದರಲ್ಲಿ ಅವರೆಲ್ಲರೂ ಈ ಪ್ರಾಂತ್ಯಗಳ ಪುನರ್ವಿಂಗಡಣೆಯಾಗತಕ್ಕದ್ದನ್ನು ನಾವುಗಳು ಈರ್ವರೂ ಸ್ವಾಗತ ಮಾಡಬೇಕು ಎಂಬುದಾಗಿ ಆ ಮಹಾ ಜನರು ನಮಗೆ ಅಪ್ಪಣೆಯಿತ್ತಿದ್ದಾರೆ. ಈ ಹಿಂದೆಯಾಗಲಿ ಮತ್ತು ಈಗ ಆಗಲಿ ಈ ಪ್ರಾಂತ್ಯಗಳ ಪುನರ್ವಿಂಗಡಣೆಯ ವಿಚಾರದಲ್ಲಿ ತಮ್ಮ ಒಂದು ಸಂಯಮವನ್ನು ತೋರಿಸಿ ಈ ಬಗ್ಗೆ ನಮ್ಮ ಮುಖಂಡರುಗಳೂ ಮತ್ತು ಇತರರೂ ಪಟ್ಟ ಕಷ್ಟಗಳಿಗಾಗಿ ನಾವೆಲ್ಲರೂ ಅವರಿಗೆ ನಮ್ಮ ಧನ್ಯವಾದಗಳನ್ನರ್ಪಿಸಬೇಕಾಗಿದೆ. ಈಗಾಗಲೇ ನಮ್ಮ ಕೆಲವು ಸ್ನೇಹಿತರು ಹೇಳಿರುವ ಹಾಗೆ, ಈ ಮೈಸೂರು ವಿಶಾಲವಾದರೆ ನಮಗೆ ಮುಂದೆ ಸ್ವಲ್ಪಮಟ್ಟಿಗೆ ಕಷ್ಟವಾಗಬಹುದು. ಆದರೂ ನಾವೆಲ್ಲರೂ ಅದನ್ನು ಬಹಳ ವಿಶಾಲ ಮನಸ್ಸಿನಿಂದ ಅನುಭವಿಸಬೇಕಾಗಿ ಬರಬಹುದು. ಹಾಗೇನಾದರೂ ಅಲ್ಪಸ್ವಲ್ಪ ಅನಿವಾರ್ಯಗಳು ತಲೆದೋರಿದರೆ ಆಗ ನಮ್ಮ ಈ ಸಭೆಯ ಮಾನ್ಯ ಸದಸ್ಯರುಗಳೂ ಆ ಕೇಂದ್ರ ಸರ್ಕಾರದವರೂ ಮತ್ತು ಪಾರ್ಲಿಯಮೆಂಟ್ ಸದಸ್ಯರೂ ಸೇರಿಕೊಂಡು ಯಾವ ಕಾಲಕ್ಕೇ ಆಗಲಿ ಅಂಥ ಕಷ್ಟಗಳೊದಗಿದರೆ ಅವುಗಳನ್ನು ಆಯಾ ಕಾಲಕ್ಕೆ ಸರಿಯಾಗಿ ಪರಿಹಾರ ಮಾಡಲು ಸಾಧ್ಯವಿರುವುದರಿಂದ ನಮಗೆ ಅಷ್ಟೇನೂ ತೊಂದರೆಗಳು ಇದರಿಂದ ಆಗಲಾರದು. ಆದರೆ ಈ ಹಿಂದೆ, ಎಂದರೆ, ಇಲ್ಲಿಗೆ ಮೂರು ವರ್ಷಗಳ ಕೆಳಗೆ ಆ ಬಳ್ಳಾರಿ ಜಿಲ್ಲೆಯನ್ನು ನಮ್ಮ ಮೈಸೂರಿಗೆ ಸೇರಿಸಲಾಗಿದ್ದಿತು. ಈಗಲೂ ಕೂಡ ಆ ಇಡೀ ಜಿಲ್ಲೆಯನ್ನು ನಮ್ಮ ಮೈಸೂರಿನಲ್ಲೇ ಉಳಿಸಿದ್ದೂ ಕೂಡ ನಮಗೆಲ್ಲರಿಗೂ ಬಹಳ ಸಂತೋಷವನ್ನುಂಟುಮಾಡಿದೆ. ಇದಕ್ಕಾಗಿ ನಾನು ಕೇಂದ್ರ ಸರ್ಕಾರದವರನ್ನು ವಂದಿಸುತ್ತೇನೆ. ಆದರೆ ಈ ದಿವಸ ನಮ್ಮ ಮೈಸೂರು ಒಂದು ಏಕ ಭಾಷಾ ರಾಜ್ಯವೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮಲ್ಲಿ ತೆಲುಗು, ತಮಿಳು, ಉರ್ದು, ಮರಾಠಿ, ತುಳು, ಮಲಯಾಳಿ ಇತ್ಯಾದಿ ಭಾಷೆಗಳನ್ನಾಡತಕ್ಕಂಥ ಜನರೂ ಸಹ ಈಗಿದ್ದಾರೆ. ಆದುದರಿಂದ ನಾವು ಇಲ್ಲಿ ಒಂದು ಭಾಷೆ, ಒಂದು ಸಂಸ್ಕೃತಿ ಇರತಕ್ಕ ರಾಜ್ಯವನ್ನು ಕಟ್ಟುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಈ ದಿವಸ ಈ ಪ್ರಾಂತ್ಯಗಳ ಪುನರ್ವಿಂಗಡಣೆಯನ್ನು ಒಂದು ಆಡಳಿತ ಸೌಕರ್ಯದ ದೃಷ್ಟಿಯಿಂದ, ಒಂದು ರಾಜಕೀಯ ದೃಷ್ಟಿಯಿಂದ, ಇಲ್ಲಿ ಬಹು ಭಾಗ ಕನ್ನಡ ಮಾತನಾಡತಕ್ಕ ಜನರಿರುವುದರಿಂದ, ಇಲ್ಲಿಯ ಎಲ್ಲ ಆಡಳಿತವನ್ನೂ ಕನ್ನಡ ಭಾಷೆಯೊಂದರಲ್ಲೇ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಅಭಿಪ್ರಾಯ

(ಶ್ರೀ ಆರ್. ಮುನಿಸ್ವಾಮಯ್ಯ.)

ದಿಂದ ಈ ದಿವಸ ಕೇಂದ್ರ ಸರ್ಕಾರದವರು ನಮ್ಮ ಮೈಸೂರಿನ ಅಕ್ಕಪಕ್ಕದ ಕೆಲವು ಕನ್ನಡ ಪ್ರಾಂತ್ಯಗಳನ್ನು ನಮ್ಮ ಮೈಸೂರಿಗೆ ಸೇರಿಸಿರುತ್ತಾರೆ. ಇನ್ನು ಮುಂದೆ ನಿರ್ಮಾಣವಾಗಲಿರತಕ್ಕ ಈ ವಿಶಾಲ ಕನ್ನಡ ಪ್ರದೇಶಕ್ಕೆ ಮೈಸೂರ ಎಂಬತಕ್ಕ ಹೆಸರೇ ಇರಲಿ ಎನ್ನುವುದಾಗಿ ಈ ಮೈಸೂರಿನಲ್ಲಿ ಉದ್ಭವಿಸಿದ್ದ ಸ್ಥಿತಿಗತಿಗಳನ್ನು ನೋಡಿ ಆ ಕೇಂದ್ರ ಸರ್ಕಾರ ಮತ್ತು ಪಾರ್ಲಿಯಮೆಂಟ್ ತೀರ್ಮಾನ ಮಾಡಿರುತ್ತವೆ. ಆದರೆ ಈಗ ಹೊರಗಡೆಯಿಂದ ನಾಳೆ ನಮ್ಮೊಡನೆ ಬಂದು ಸೇರಲಿರತಕ್ಕ ಪ್ರದೇಶದ ಜನಗಳಲ್ಲಿ ಕೆಲವರು ಹೀಗೆ ಈ ನೂತನ ಪ್ರಾಂತ್ಯಕ್ಕೆ ಮೈಸೂರು ಎಂಬ ಹೆಸರನ್ನಿಟ್ಟಿರುವುದು ತಪ್ಪು—ಇದು ಸರಿಯಲ್ಲ, ಇದಕ್ಕೆ ಕರ್ಣಾಟಕ ಎಂಬ ಹೆಸರನ್ನಿಡಬೇಕಾಗಿತ್ತೆಂದು ಕೆಲವರೂ, ಮತ್ತೆ ಕೆಲವರು ಇದಕ್ಕೆ ವಿಜಯನಗರ ಎಂಬ ಹೆಸರನ್ನಿಡಬೇಕಾಗಿತ್ತೆಂದೂ ಇತ್ಯಾದಿ ಟೀಕೆಗಳನ್ನು ಮಾಡುವುದಕ್ಕೆ ಪ್ರಾರಂಭಮಾಡಿದ್ದಾರೆ. ಈ ದಿವಸ ಈ ಹೆಸರನ್ನು ಬದಲಾವಣೆ ಮಾಡಲು ನಮ್ಮ ಮೈಸೂರಿನಲ್ಲಿ ಎಷ್ಟು ಕಷ್ಟವಿದೆ ಮತ್ತು ಈ 'ಮೈಸೂರು' ಎಂಬ ಪದಕ್ಕೆ ಈ ದಿವಸ ಎಷ್ಟು ಗೌರವವಿದೆ ಎನ್ನುವುದನ್ನು ಅವರು ಬಹುಶಃ ಅರ್ಥಮಾಡಿಕೊಳ್ಳಲು ಶಕ್ತಿ ಇಲ್ಲದೆ ಹಾಗೆ ಮಾತನಾಡಿರುತ್ತಾರೆಂದು ಕಾಣುತ್ತದೆ. ಆದರೆ ನಮ್ಮ ಶ್ರೀ ಕೆ. ಹನುಮಂತಯ್ಯನವರು ಅವರೆಲ್ಲರೂ ನಾಳೆ ಇಲ್ಲಿಗೆ ಬರಲಿ, ಅನಂತರ ಅವರಿಗೆ ನಾವು ಮಾಡಿರುವುದು ಸರಿ ಅನ್ನಿಸುತ್ತದೆ ಎಂದು ಹೇಳಿದ್ದಾರೆ. ಹಾಗೆ ಮುಂದಕ್ಕೆ ಇವರೇನು ಮಾಡುತ್ತಾರೋ ನನಗದು ತಿಳಿಯದು. ಆದರೂ ನಾಳೆ ಅವರೆಲ್ಲರೂ ಬಂದು ನಮ್ಮೊಡನೆ ಬೆರತುಕೊಂಡು ಹೋದಮೇಲೆ ಅವರಿಗೂ ಇದು ಅರ್ಥವಾಗುತ್ತದೆ. ಆಗ ಅವರೆಲ್ಲರೂ ಸಹ ಅವರ ಪಾಡಿಗೆ ಅವರೇ ಸರಿಯಾಗಿ ಹೊಂದಿಕೊಂಡು ಹೋಗುತ್ತಾರೆ. ಇದರಿಂದೇನೂ ಅಂಥ ಬಾಧಕ ಬರುವುದಿಲ್ಲ. ಆದ್ದರಿಂದ ನಾನು ಈಗ ಮುಂದೆ ನೂತನವಾಗಿ ಪ್ರಾರಂಭವಾಗಲಿರುವ ಕನ್ನಡ ಪ್ರಾಂತಕ್ಕೆ ಮೈಸೂರೆಂದು ಹೆಸರಿಟ್ಟಿರತಕ್ಕದ್ದು ಸರಿಯಾಗಿವೆಯೆಂದು ಭಾವಿಸಿದ್ದೇನೆ. ಈಗ ಮೈಸೂರಿನೊಂದಿಗೆ ತಾವಾಗಿಯೇ ಸೇರಲು ಬರತಕ್ಕಂಥ ಜನರನ್ನು ನಾವು ಸಂತೋಷದಿಂದ ಸ್ವಾಗತಿಸಬೇಕೆಂದೂ—ಅವರನ್ನು ಅತಿಥಿಗಳಂತೆ ಸ್ವಾಗತಿಸಬೇಕೆಂದೂ ಕೆಲವರು ಹೇಳಿದ್ದಾರೆ. ಆದರೆ ಆ ರೀತಿ ಹೇಳತಕ್ಕದ್ದು ಸರಿಯಾದದ್ದಲ್ಲವೆಂದು ನನ್ನ ಭಾವನೆ. ಈ ರಾಜ್ಯಗಳು ಚಿಕ್ಕದಾಗಿರುವುದರಿಂದ ಇವುಗಳ ಆಡಳಿತ ದೃಷ್ಟಿಯಿಂದ, ಈ ದಿವಸ ಆಗುತ್ತಿರುವ ವೆಚ್ಚವನ್ನು ಕಡಮೆಮಾಡಬೇಕೆಂಬ ದೃಷ್ಟಿಯಿಂದ, ಈ ದಿವಸ ಈ ದೊಡ್ಡ ರಾಜ್ಯಗಳನ್ನು ಮಾಡಲು ಪ್ರಯತ್ನ ಮಾಡಿರುತ್ತಾರೆ. ರಾಜ್ಯ ದೊಡ್ಡದಾದರೆ ಆಡಳಿತ ವೆಚ್ಚ ಕಡಮೆಯಾಗುತ್ತದೆಂದು ಹೀಗೆ ಮಾಡಿರುವಾಗ ನಾವು ಹೊರಗಡೆಯವರನ್ನು ಆದರದಿಂದ ಬರಮಾಡಿಕೊಳ್ಳಲೇಬೇಕಾಗಿದೆ ಆದರೆ ಏತನ್ಮಧ್ಯೆ ದೇಶಗಳನ್ನು ದೊಡ್ಡದು ಮಾಡಬೇಕೆಂದು ಹೇಳತಕ್ಕ ಸಂದರ್ಭದಲ್ಲೇ ಈ ದಕ್ಷಿಣ ಪ್ರದೇಶ, ಉತ್ತರ ಪ್ರದೇಶ, ಪೂರ್ವ ಮತ್ತು ಪಶ್ಚಿಮ ಪ್ರದೇಶಗಳನ್ನು ಮಾಡಬೇಕೆಂಬ ಒಂದು ಕೂಗೂ ಸಹ ಡೆಲ್ಲಿಯಲ್ಲಿ ಎದ್ದಿತ್ತೆಂಬ ಅಂಶ ತಮಗೆಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಆದರೆ ಅದೂ ಸಹ ಒಂದು ರಾಜಕೀಯ ದೃಷ್ಟಿಯಿಂದ ಸರಿಹೋದರೂ ಹೋಗಬಹ ದೆಂದು ಹೇಳಬಹುದು. ಈಗ ಸದ್ಯದಲ್ಲಿ ಅದು ಸರಿಯೇ ಅಥವಾ ಅಲ್ಲವೇ ಎಂಬ ಗೋಜಿಗೆ ಹೋಗಬೇಕಾಗಿಲ್ಲ. ಈಗ ಆ ಸಂದರ್ಭವೂ ಒದಗಿಲ್ಲ ಹಾಗೆ ಸಂದರ್ಭ ಒದಗಿದಾಗ ಬೇಕಾದರೆ ವಿಚಾರವನ್ನು ಮುಂದೆ ನೋಡೋಣ. ಮುಂದೆ ಅನುಕೂಲವೆಂದು ಕಂಡುಬಂದರೆ ಆಗ ದ್ವಿಭಾಷಾ ಅಥವಾ ಬಹುಭಾಷಾ ರಾಜ್ಯಗಳನ್ನು ಮಾಡಲು ಅವಕಾಶವಾಗಬಹುದು. ಆದರೆ ಈಗ ಮೈಸೂರಿನೊಂದಿಗೆ ಸೇರಲಿರತಕ್ಕ ಪ್ರದೇಶಗಳ ಬಗ್ಗೆ ಗಡಿ ಸಮಿತಿಗಳ ನಿರ್ಧಾರ ಸಮಿತಿಯೊಂದು ಏರ್ಪಾಡಾಗಬೇಕಾಗಿದೆ. ಈಗ ನಮ್ಮ ಮೈಸೂರಿಗೆ ಕಾಸರಗೋಡಿನ ಉತ್ತರ ಭಾಗ, ನೀಲಗಿರಿ, ಹೊಸೂರು ಭಾಗ, ಗೋಪಿಶೆಟ್ಟಿಪಾಳ್ಯ ಮತ್ತು ತಳವಾಡಿ ಫಿರ್ಕ ಇತ್ಯಾದಿಗಳು ಸೇರಬೇಕಾಗಿವೆ. ಇದೇ ರೀತಿ ಮಡಕಶಿರಾ ಕೂಡ ನಮಗೇ ಸೇರಬೇಕಾಗಿದೆ. ಆ ಪ್ರದೇಶಗಳಲ್ಲಿರತಕ್ಕಂಥ ಜನರೆಲ್ಲಾ ಬಹಳ ಒತ್ತಾಯಮಾಡಿ ಈ ಕನ್ನಡ ಪ್ರದೇಶಕ್ಕೆ ಅವರ ಭಾಗಗಳನ್ನು ಸೇರಿಸಿಕೊಳ್ಳುವಂತೆ ಮಾಡಿ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಅವರು ಅವರ ಅಭಿಪ್ರಾಯಗಳನ್ನು ಪತ್ರಿಕೆಗಳ ಮೂಲಕವೂ ನಿರ್ಣಯಗಳ ಮೂಲಕವೂ ಮಹಾ ಜನಗಳಿಗೆ ತಿಳಿಸಿ ಅದರಂತೆ ಕಾರ್ಯಕ್ರಮಗಳನ್ನು ಕೈಕೊಳ್ಳುವ ಹಾಗೆ ಪ್ರಾರ್ಥಿಸುತ್ತಿದ್ದಾರೆ. ಆ ಜನರು ಬಂದು ನಮ್ಮಲ್ಲಿ ಬೇಡಿಕೊಳ್ಳುತ್ತಿದ್ದಾರೆ. ಆದುದರಿಂದ ನಾವು ಅವರ ಕೇಳಿಕೆಗೆ ಮನ್ನಣೆ ಕೊಡಲೇಬೇಕಾಗಿದೆ. ಆದುದರಿಂದ ಅವರೆಲ್ಲರೂ ಬೇಗ ಬಂದು ನಮ್ಮೊಡನೆ ಸೇರಿಕೊಳ್ಳುವಂತೆ ಮಾಡಿ ಮುಂದಿನ ರಾಜ್ಯಭಾರ ಸುಗಮವಾಗಿ ನಡೆಯುವಂತೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ಜೋನಲ್ ಕೌನ್ಸಿಲ್ ವಿಚಾರ ಬೇರೆ ಈ ಬಿಲ್ಲಿನಲ್ಲಿ ತಿಳಿಸಲಾಗಿದೆ. ದಕ್ಷಿಣ ಪ್ರದೇಶದಲ್ಲಿರತಕ್ಕಂಥ ಆಂಧ್ರ, ಮದರಾಸ್, ಕೇರಳ ಮತ್ತು ಮೈಸೂರು ಪ್ರದೇಶಗಳೆಲ್ಲಾ ಸೇರಿ ಒಂದು ದಕ್ಷಿಣ ಜೋನಲ್ ಕೌನ್ಸಿಲ್ ರಚನೆಯಾಗಬೇಕೆಂದು ತಿಳಿಸಿದ್ದಾರೆ. ಆದರೆ ಇದೊಂದು ಕೇವಲ ಸಲಹಾ ರೂಪದ ಸಮಿತಿಯಾಗಿರುತ್ತದೆಂದು ಹೇಳಲಾಗಿದೆ. ಇದರಲ್ಲಿ ನಮ್ಮ ರಾಜ್ಯಾಡಳಿತದ ಬಿಗಿ ಅಷ್ಟರಮಟ್ಟಿಗೆ ಇರಲಾರದೆಂದು ತಿಳಿಯುತ್ತೇನೆ. ಆದಕಾರಣ ಇದಕ್ಕೆ ಅಂಥ ಒಂದು ಕಾರ್ಯನಿರ್ವಾಹಕ ಶಕ್ತಿ ಕೊಡುವಹಾಗೆ ಒಂದು ಏರ್ಪಾಡನ್ನು ಮಾಡಬೇಕೆಂದು ಸಲಹೆಮಾಡುತ್ತೇನೆ. ಈ ದಿವಸ ನಾವು ನಮ್ಮ ಗಡಿ ನಿರ್ಧಾರದ ತೀರ್ಮಾನವನ್ನು ಈ ಸಮಿತಿಗಳಿಗೇ ವಹಿಸಬೇಕೆಂಬುದಾಗಿ ಈ ಮಸೂದೆಯಲ್ಲಿ ತಿಳಿಸಿದೆ. ಆದರೆ ಈ ಗಡಿ ನಿರ್ಧಾರದ ತೀರ್ಮಾನವನ್ನು ಈ ಜೋನಲ್ ಕೌನ್ಸಿಲ್‌ಗಳಿಗೆ ವಹಿಸುವುದು ಸರಿಯಾದದ್ದಲ್ಲ. ಈ ಸಮಿತಿಗಳು ರಚನೆಯಾಗತಕ್ಕದ್ದು ಯಾವಾಗ? ಇವು ಆ ಗಡಿ ನಿರ್ಧಾರವನ್ನು ಮುಗಿಸುವುದೆಂದಿಗೆ? ಹೀಗೆಲ್ಲಾ ಮಾಡಿದರೆ ಇದು ಬಹಳ ನಿಧಾನವಾಗುತ್ತದೆ. ಇಷ್ಟೇ ಅಲ್ಲದೆ ನಮ್ಮ ಮೈಸೂರಿನವರು ಈ ಒಂದು ಪ್ರಾಂತ್ಯ ನಮಗೆ ಸೇರಬೇಕೆಂದರೆ—ಆಂಧ್ರದವರು ಇಲ್ಲ, ಅದು ನಮಗೆ ಸೇರಬೇಕು ಎಂದು ಅವರು ಹೇಳುತ್ತಾ ಕುಳಿತುಕೊಂಡರೆ, ಇತ್ತ ಕೇರಳದವರಿಗೂ ನಮ್ಮ ಮೈಸೂರಿನವರಿಗೂ ವಾದ ವಿವಾದಗಳು ಹುಟ್ಟಿದರೆ, ಈ ವಿವಾದಗಳಿಗೆ ಸಂಬಂಧಪಟ್ಟ ಪಾರ್ಟಿಗಳ ಮಧ್ಯದಲ್ಲಿ ನ್ಯಾಯವಾದ ಮತ್ತು ಶೀಘ್ರವಾದ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ. ಹೀಗೆ ಇಂಥ ವಿಚಾರಗಳಲ್ಲಿ ಆಸಕ್ತಿಯುಳ್ಳಂಥ ಪಾರ್ಟಿಗಳು ಈ ತೀರ್ಪನ್ನು ಕೊಡತಕ್ಕಂಥ ಸಮಿತಿಗಳಲ್ಲಿ ಭಾಗವಹಿಸಬಾರದು. ಆದಕಾರಣ ಈ ಗಡಿ ನಿರ್ಧಾರದ ತೀರ್ಮಾನವನ್ನು ಈ ಜೋನಲ್ ಕೌನ್ಸಿಲ್‌ಗಳಿಗೆ ವಹಿಸದೆ ಇದನ್ನು ಗಡಿ ನಿರ್ಧಾರದ ಸಮಿತಿಗೇ

ವಹಿಸಬೇಕೆಂದು ಸಲಹೆ ಮಾಡುತ್ತೇನೆ. S.R.C. ವರದಿಯಲ್ಲಿ ಕಂಡುಬಂದಿದ್ದಂಥ ಕೆಲವು ಲೋಪ ದೋಷಗಳನ್ನು ಈ ಮಸೂದೆಯಲ್ಲಿ ತಿದ್ದುಪಡಿ ಮಾಡಿ ಇದನ್ನು ಎಲ್ಲರಿಗೂ ಒಂದು ಸಮರ್ಪಕವಾಗಿರ ತಕ್ಕ ರೀತಿಯಲ್ಲಿ ತಯಾರಿಸಿದ್ದಾರೆ. ಆದುದರಿಂದ ಈಗ ನಾವೆಲ್ಲರೂ ಈ S.R.C. ಮಸೂದೆಯನ್ನು ಒಂದೇ ಮನಸ್ಸಿನಿಂದ ಸ್ವಾಗತಿಸೋಣ ಎಂದು ಹೇಳುತ್ತೇನೆ. ಈಗ ಹೊಸದಾಗಿ ಒಂದು ನಮ್ಮೊಡನೆ ಸೇರತಕ್ಕ ಜನರೊಂದಿಗೆ ನಾವು ಒಮ್ಮನಸ್ಸಿನಿಂದ ಕೂಡಿಕೊಂಡು ಎಲ್ಲರೂ ಸುಖದಿಂದ ಬಾಳಿ ಬದುಕೋಣ. ಎಷ್ಟೋ ವರ್ಷಗಳಿಂದ ಹೀಗೆ ಒಂದಾಗಿರಬೇಕಾಗಿದ್ದ ರಾಜ್ಯ ಒಡೆದು ಛಿದ್ರ ಛಿದ್ರವಾಗಿ ಅನೇಕ ಪಾಳೇಗಾರರ ಮತ್ತು ರಾಜ-ಮಹಾರಾಜರವರ ಆಡಳಿತಕ್ಕೆ ಸಿಕ್ಕಿ ಕಷ್ಟಕ್ಕೆ ಈಡಾಗಿತ್ತು. ಈ ದಿವಸ ಈ ಭಾಗ ಗಳೆಲ್ಲವೂ ಮಹಾತ್ಮಾ ಗಾಂಧಿಯವರ ಅನುಗ್ರಹ ದಿಂದ ಒಂದು ಆಡಳಿತಕ್ಕೆ ಸಿಕ್ಕುವಂತೆ ಅವಕಾಶ ಉಂಟಾಗಿದೆ. ಇದು ನಮ್ಮೆಲ್ಲರ ಪುಣ್ಯ. ಆದಕಾರಣ ಈಗ ನಮ್ಮ ಮುಂದೆ ಬಂದಿರತಕ್ಕ ಬಿಲ್ಲನ್ನು ಎಲ್ಲರೂ ಒಂದೇ ಮನಸ್ಸಿನಿಂದ ಸ್ವಾಗತಿಸಿ ತನ್ಮೂಲಕ ಒಂದು ವಿಶಾಲ ಕನ್ನಡ ರಾಜ್ಯವನ್ನು ಕಟ್ಟೋಣ. ಮುಂದೆ ಸಾಧ್ಯವಾಗುವುದಾದರೆ ದಕ್ಷಿಣ ಪ್ರದೇಶ ಅಥವಾ ದ್ವಿಭಾಷಾ, ಬಹುಭಾಷಾರಾಜ್ಯಗಳ ವಿಚಾರ ಮಾಡೋಣ. ಆದರೆ ಈಗ ಸದ್ಯದಲ್ಲಿ ನಾವು ಭಾರತದ ಭದ್ರತೆ ಮತ್ತು ಐಕಮತ್ಯಗಳನ್ನು ನಮ್ಮೆಲ್ಲರ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಮುಂದಿರುವ S.R. ಮಸೂದೆಯನ್ನು ಸ್ವಾಗತಿಸೋಣವೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಈ ದೇಶದ ಪುನರ್ವಿಂಗಡಣೆಯ ಸಂಬಂಧದಲ್ಲಿ ದೇಶದಾದ್ಯಂತ ವಾದ ವಿವಾದಗಳು ನಡೆದುವು. ಅನೇಕ ಸಭೆ ಗಳು ಸಹ ನಡೆದವು. ನಮ್ಮ ನ್ಯಾಯಕರುಗಳೂ ಸಹ ತಮ್ಮ ಬುದ್ಧಿಯನ್ನು ಇದಕ್ಕೆ ಪೂರ್ಣವಾಗಿ ವಿನಿಯೋ ಗಿಸಿ ಅಂತ್ಯವಾಗಿ, ಈ ದಿವಸ ಈ ಬಿಲ್ಲು ನಮ್ಮ ಮುಂದೆ ಬಂದಿದೆ. ನಮ್ಮ ಮೈಸೂರು ಸಂಸ್ಥಾನದಲ್ಲೂ ಸಹ ಈ ಸಂಸ್ಥಾನ ಪುನರ್ ವಿಂಗಡಣೆಯ ವಿಚಾರದಲ್ಲಿ ಅನೇಕ ವಾದ ವಿವಾದಗಳು ಎದ್ದು, ಅನೇಕ ತರ್ಕಗಳು ನಡೆದುವು; ಅನೇಕ ವಿಷಯಗಳು ನಮ್ಮ ಮುಂದೆ ಬಂದು ಹಾದು ಹೋಗಿವೆ. ಇದರಲ್ಲಿ ಮೈಸೂರು ಸಂಸ್ಥಾನವು ಮೈಸೂರು ಸಂಸ್ಥಾನವಾಗಿಯೇ ಮುಂದೆಯೂ ಉಳಿಯಬೇಕು ಎಂದು ವಾದ ಮಾಡಿದ ಮಿತ್ರರಲ್ಲಿ ನಾನೂ ಒಬ್ಬನಾಗಿದ್ದೇನೆ. ಆ ದೃಷ್ಟಿ ಯಿಂದ ಆ ಕಾರ್ಯ ಸಾಧನೆಗಾಗಿ ನಮ್ಮ ಮಿತ್ರ ರೆಲ್ಲರೂ ಒಮ್ಮೆ ಮಂಡ್ಯದಲ್ಲಿ ಸೇರಿ ಒಂದು ದೊಡ್ಡ ಕಾನ್ಫರೆನ್ಸನ್ನೂ ಸಹ ಮಾಡಿದೆವು. ಆ ಕಾನ್ ಫರೆನ್ಸ್‌ನಲ್ಲಿ ನೆರೆದಿದ್ದಂಥ ಜನಗಳಲ್ಲಿ ನಮ್ಮ ಮೈಸೂರನ್ನು ಮೈಸೂರಾಗಿಯೇ ಉಳಿಸಿಕೊಳ್ಳ ಬೇಕೆಂಬ ಉತ್ಸಾಹ, ಹುಮ್ಮಸ್ಸು, ಮನೋಭಾವನೆ ಎಲ್ಲರಲ್ಲೂ ತಾಂಡವವಾಡುತ್ತಿತ್ತು. ಆ ಗುರಿ ಸಾಧನೆ ಗಾಗಿ ಏನು ಬೇಕಾದರೂ ತ್ಯಾಗಮಾಡುವುದಕ್ಕೆ ಸಹ ಜನಗಳು ಸಿದ್ಧವಾಗಿದ್ದರು. ಅಂಥ ಸನ್ನಿವೇಶವನ್ನು ನಾವು ಉಪಯೋಗಿಸಿಕೊಂಡು ಬೊಂಬಾಯಿಯಲ್ಲಿ ಮತ್ತು ಒರಿಸ್ಸಾದಲ್ಲಿ ನಡೆದಂಥ ಘೋರಕೃತ್ಯಗಳನ್ನು ಇಲ್ಲೂ ನಡೆಸುವುದಕ್ಕೆ ನಮಗೆ ಅವಕಾಶವಿತ್ತು. ಆದರೆ ಅಂಥ ಕೃತ್ಯಗಳನ್ನು ನಡೆಸುವುದರಿಂದ—ಅದು ರಾಷ್ಟ್ರ ಘಾತಕವಾಗುತ್ತದೆ, ನಮ್ಮ ರಾಷ್ಟ್ರದ ಐಕ್ಯತೆಗೆ ಧಕ್ಕೆ ಬರುತ್ತದೆ, ನಮ್ಮ ಜನರಲ್ಲಿರತಕ್ಕ ಸದ್ಭಾವನೆಯನ್ನು ಕಲಕುವ ಸನ್ನಿವೇಶ ಬರಬಹುದು, ನಮ್ಮ ರಾಷ್ಟ್ರದ ಆಸ್ತಿಪಾಸ್ತಿಗಳು ನಷ್ಟವಾಗಬಹುದು, ಆ ಮಾರ್ಗವನ್ನು ಹಿಡಿಯತಕ್ಕಂಥಾದ್ದು ಸೂಕ್ತವಲ್ಲ ಎಂಬ ಸಧ್ಭಾವನೆ ಯಿಂದ ನಾವು ಬೇರೆ ರೀತಿಯಾದ ಮಾರ್ಗವನ್ನನು ಸರಿಸಿ ಈ ವಿಚಾರದಲ್ಲಿ ಯಾವ ಮಾರ್ಗವನ್ನು ಹಿಡಿಯ ತಕ್ಕದ್ದು ಸೂಕ್ತ ಎಂಬುದನ್ನು ಯೋಚನೆಮಾಡಿ ಆ ರೀತಿ ನಾವು ನಡೆದುಕೊಂಡು ಬರುತ್ತಾ ಇದ್ದೇವೆ. ಈ ಮಧ್ಯೆ ದೇಶದಲ್ಲಿ ಅನೇಕ ವಿಷಯಗಳು ಮುಂದೆ ಬಂದಿವೆ ಮತ್ತು ಸನ್ನಿವೇಶಗಳೂ ಸಹ ನಮ್ಮ ಮುಂದೆ ಬಂದು ನಿಂತಿವೆ. ಇದರಲ್ಲಿ ಬಹು ಮುಖ್ಯವಾದದ್ದು ನಮ್ಮ ನೆರೆ ಪ್ರಾಂತ್ಯವಾದ ಪಾಕೀಸ್ತಾನದಲ್ಲಿ ನಡೆ ಯುತ್ತಾಯಿರತಕ್ಕ ಘಟನೆ. ಪಾಕೀಸ್ತಾನ, ನಮ್ಮ ನೆರೆಯಪ್ರಾಂತ್ಯದ ಸರ್ಕಾರ, ಬಾಗ್‌ದಾದ್ ಪ್ಯಾಕ್ಟ್, ಸೀಟೋ ಪ್ಯಾಕ್ಟ್ ಮೊದಲಾದ ಪ್ಯಾಕ್ಟುಗಳನ್ನು ಮಾಡಿಕೊಂಡಿದ್ದಾರೆ ; ಮತ್ತು ಅದರ ಜೊತೆಗೆ ಅಮೆ ರಿಕಾ ದೇಶದವರೂ ಸಹ ಅನೇಕ ಯುದ್ಧದ ಸಾಮುಗ್ರಿ ಗಳನ್ನು ಸರಬರಾಯಿ ಮಾಡಿ ಅವರಿಗೆ ಬೆಂಬಲವನ್ನು ನೀಡುತ್ತಾ ಇದ್ದಾರೆ. ಅದರ ಧೈರ್ಯದಿಂದಲೋ, ಬಲದಿಂದಲೋ ಅವರು ಗಡಿಗಳಲ್ಲಿ ಅನೇಕ ಕಿರುಕುಳ ಗಳನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇಪ್ಪ ಪದೇ ಪದೇ ನಡೆಯುತ್ತಾ ಇವೆ. ಈ ಸನ್ನಿವೇಶ ಈ ದಿವಸ ನಮ್ಮ ಮುಂದೆ ಇದೆ. ಜೊತೆಗೆ ಈಗ್ಗೆ ಕೆಲವು ದಿವಸಗಳ ಹಿಂದೆ ಅಮೃತಸರದಲ್ಲಿ ನಮ್ಮ ದೇಶದ ನಾಯ ಕರುಗಳು, ಕಾಂಗ್ರೆಸ್ ಮುಂದಾಳುಗಳು, ಕಾಂಗ್ರೆಸ್ ಕೆಲಸಗಾರರು ಎಲ್ಲರೂ ಸೇರಿ, ಈ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಆ ನಿರ್ಧಾರದ ಪ್ರಕಾರ ಅವರು ಈಗ ಯಾವ ಎಸ್.ಆರ್.ಸಿ. ವರದಿಯ ಪ್ರಕಾರ ದೇಶವನ್ನು ವಿಂಗಡಣೆ ಮಾಡಬೇಕೆಂದು ಇದ್ದಾರೋ ಇದಕ್ಕಿಂತಲೂ ವಿಶಾಲವಾದ ಪ್ರಾಂತ್ಯಗಳನ್ನು ಮಾಡ ತಕ್ಕದ್ದು ಸೂಕ್ತ ಎಂಬ ಅಭಿಪ್ರಾಯಕ್ಕೆ ಬಂದು ಆ ಸಂಬಂಧದಲ್ಲಿ ಒಂದು ನಿರ್ಣಯವನ್ನೂ ಸಹ ಮಾಡಿ ದ್ದಾರೆ. ಇವುಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ನಾವು ಯಾವ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂಬ ಒಂದು ಧ್ಯೇಯವನ್ನು ಇಟ್ಟುಕೊಂಡಿ ದ್ದೇವೆಯೋ ಅದನ್ನು ಸ್ವಲ್ಪಮಟ್ಟಿಗೆ ಈಗ ಬದ ಲಾಯಿಸಬೇಕಾದ ಪ್ರಮೇಯ ಮತ್ತು ಪರಿಸ್ಥಿತಿಯು ನಮ್ಮ ಮುಂದೆ ಬಂದಿದೆ. ಈ ಎಸ್. ಆರ್. ಸಿ. ವರದಿಯನ್ನು ನಮ್ಮ ಕೇಂದ್ರ ಸರ್ಕಾರದ ಮುಂದೆ ಇಡುವಾಗಲೂ ಸಹ ಅಮೃತಸರದಲ್ಲಿ ಯಾವ ನಿರ್ಧಾರವನ್ನು ತೆಗೆದುಕೊಂಡಿದ್ದಾರೆಯೋ ಅದನ್ನು ಹಿನ್ನಲೆಯಾಗಿಟ್ಟುಕೊಂಡೇ ಅವರು ಈ ಬಿಲ್ಲನ್ನು ತಯಾರುಮಾಡಿ ನಮ್ಮ ಮುಂದೆ ಇಟ್ಟಿದ್ದಾರೆ. ಅವರು ಯಾವ ದೊಡ್ಡ ಪ್ರಾಂತ್ಯವನ್ನು ಮಾಡಬೇಕೆಂಬ ಒಂದು ನಿರ್ಧಾರವನ್ನು ಅಮೃತಸರದಲ್ಲಿ ತೆಗೆದುಕೊಂಡರೋ ಆ ಉದ್ದೇಶ ಸಾಧನೆಗಾಗಿ ಅದರ ಒಂದು ಅಂಗವಾಗಿ ಈ ದಿವಸ ಈ ಬಿಲ್ಲು ನಮ್ಮ ಮುಂದೆ ಇದೆ ಎಂದರೆ ಖಂಡಿ ತವಾಗಿಯೂ ತಪ್ಪಾಗಲಾರದು. ಸಂಸ್ಥಾನಗಳನ್ನು ಈ ರೀತಿ ಪುನರ್ವಿಂಗಡಣೆ ಮಾಡಬೇಕೆಂಬ ವಿಚಾರ ದೇಶದ ಮುಂದೆ ಬಹು ದಿವಸ ಇದ್ದು, ಜನಗಳಿಗೆ ಸಾಕಾದಷ್ಟು ಅವಕಾಶವನ್ನು ಕೊಟ್ಟು ಈ ವಿಚಾರ ದಲ್ಲಿ ಅವರಿಗೆ ದೀರ್ಘವಾಗಿ ಯೋಚನೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು, ಸಾಕಾದಷ್ಟು ಅನು ಕೂಲತೆಗಳನ್ನು ಸಹ ಕಲ್ಪಿಸಿಕೊಟ್ಟು ತದನಂತರ ಈ ತೀರ್ಮಾನಕ್ಕೆ ಬಂದರು. ಇದೇ ರೀತಿ ಈಗ ಹೊಸ ದಾಗಿ ಯಾವ ದೊಡ್ಡ ಪ್ರಾಂತ್ಯಗಳನ್ನು ಮಾಡ ಬೇಕೆಂಬ ಅಭಿಪ್ರಾಯವನ್ನು ದೇಶದ ಮುಂದೆ ಇಟ್ಟಿ ದ್ದಾರೋ ಅದಕ್ಕೂ ಸಹ ಸಾಕಾದಷ್ಟು ಕಾಲಾವಕಾಶ

(ಶ್ರೀ ಕೆ. ಲಕ್ಕಪ್ಪ.)

ವನ್ನು ಕೊಡಬೇಕು ಎನ್ನತಕ್ಕ ಉದ್ದೇಶದಿಂದ, ಆ ಉದ್ದೇಶವನ್ನು ಕೂಡಲೇ ಜಾರಿಗೆ ತರುವುದಕ್ಕೆ ಹೋಗದೆ, ಪ್ರಥಮ ಹಂತವಾಗಿ ಅವರು ಈ ಬಿಲ್ಲನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಬಿಲ್ಲಿನ ಪ್ರಕಾರ ದೇಶದಲ್ಲಿ ಎಷ್ಟುಮಟ್ಟಿಗೆ ದೊಡ್ಡ ಪ್ರಾಂತ್ಯವನ್ನು ಮಾಡುವುದಕ್ಕೆ ಸಾಧ್ಯವೋ ಅಷ್ಟಾಗಲಿ, ಅದಾದನಂತರ ನೀವು ಯಾವ ಇನ್ನೂ ದೊಡ್ಡ ಪ್ರಾಂತ್ಯಗಳನ್ನು ಮಾಡಬೇಕೆಂಬ ಗುರಿಯನ್ನಿಟ್ಟುಕೊಂಡಿದ್ದೀರೋ ಅದನ್ನು ಮುಂದೆ ಸಾಧನೆ ಮಾಡುವುದಕ್ಕೆ ಅವಕಾಶವಿದೆ ಎನ್ನತಕ್ಕ ಒಂದು ದೃಷ್ಟಿಯಿಂದಲೇ ಈ ಬಿಲ್ಲನ್ನು ನಮ್ಮ ಮುಂದೆ ಇಟ್ಟಿದ್ದಾರೆ ಎಂದು ನನಗೆನ್ನಿಸುತ್ತಾ ಇದೆ. ಮತ್ತು ನಮ್ಮ ಕಾಂಗ್ರೆಸ್ ಸಂಸ್ಥೆಯಿಂದ ಬಂದಿರತಕ್ಕ ಸರ್ಕ್ಯುಲರನ್ನು ಓದಿದರೂ ಸಹ ಈ ಅಭಿಪ್ರಾಯವೇ ಎದ್ದು ಕಾಣುತ್ತದೆ. ಈ ಸನ್ನಿವೇಶ ನಮ್ಮ ಮುಂದೆ ಇರುವುದರಿಂದ ನಾವು ಈ ಬಿಲ್ಲಿನ ವಿಚಾರವಾಗಿ ಸ್ವಲ್ಪ ವಿಶಾಲ ಮನಸ್ಸಿನಿಂದ, ದೇಶದ ಹಿತದೃಷ್ಟಿಯಿಂದ, ದೇಶದ ರಕ್ಷಣೆ ದೃಷ್ಟಿಯಿಂದ, ದೇಶದ ಐಕ್ಯತೆ ದೃಷ್ಟಿಯಿಂದ ಇದರ ವಿಷಯದಲ್ಲಿ ವಿಚಾರಮಾಡಬೇಕಾಗಿದೆ. ಹೀಗೆ ನಾವು ವಿಚಾರ ವಿನಿಮಯ ಮಾಡುವ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಗಮನದಲ್ಲಿಟ್ಟು ಅದನ್ನು ಕಾರ್ಯಗತ ಮಾಡುವುದಕ್ಕೆ ಈ ಸಭೆಯಲ್ಲಿ ಎಲ್ಲ ಸದಸ್ಯರೂ ಪ್ರಯತ್ನಮಾಡಬೇಕು. ನಾವು ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ವಾದ ಮಾಡುವ ಕಾಲದಲ್ಲಿ ಬಹು ಮುಖ್ಯವಾದ ಒಂದು ಕಾರಣಕ್ಕೆ ಆ ರೀತಿ ಹೇಳುತ್ತಾ ಇದ್ದೆವು. ಅದೇನೆಂದರೆ: ನಮ್ಮ ಮೈಸೂರು ದೇಶ ಎಲ್ಲ ಕ್ಷೇತ್ರಗಳಲ್ಲೂ, ಎಲ್ಲ ರಂಗದಲ್ಲೂ ಮುಂದೆ ಬಂದಿದೆ, ನಮ್ಮನ್ನು ಸೇರಲಿರುವ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳು ನಮಗಿಂತ ಆರ್ಥಿಕ ಸ್ಥಿತಿಯಲ್ಲಿ ಮತ್ತು ಇತರ ಕ್ಷೇತ್ರಗಳಲ್ಲಿ ಹಿಂದೆ ಬಿದ್ದಿವೆ, ಆದುದರಿಂದ ನಮ್ಮ ಪ್ರಗತಿಗೆ ಧಕ್ಕೆ ಬಂದೀತು, ಅದಕ್ಕೆ ಅವಕಾಶವಾಗದ ರೀತಿಯಲ್ಲಿ ನಾವು ಇರಬೇಕು, ಈಗ ನಾವು ಪ್ರಗತಿಮಾರ್ಗದಲ್ಲಿ ಯಾವ ವೇಗದಲ್ಲಿ ಹೋಗುತ್ತಾ ಇದ್ದೇವೆಯೋ ಅದೇ ವೇಗವನ್ನು ಉಳಿಸಿಕೊಳ್ಳಬೇಕು ಎಂಬ ನನ್ನ ವಾದಕ್ಕೆ ಯಾರೂ ವಿರೋಧಿಗಳಾಗಿಲ್ಲ ಎಂದು ನಾನು ತಿಳಿದಿದ್ದೇನೆ. ನಮ್ಮ ಆಶೆಯಾದರೋ ನಮ್ಮ ಪ್ರಗತಿ ಕುಂಠಿತವಾಗಬಾರದು ಎಂಬುದೇ. ಈ ಬಿಲ್ಲನ್ನು ನಾವು ಒಪ್ಪಿಕೊಳ್ಳುವಾಗಲೂ ಸಹ ನಮ್ಮ ಪ್ರಗತಿಗೆ ಧಕ್ಕೆತರದ ರೀತಿಯಲ್ಲಿ ನಾವು ಅದನ್ನು ಸಾಧಿಸಿಕೊಳ್ಳಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಅದರಲ್ಲೂ ಮುಖ್ಯವಾಗಿ ನಾವು ಯಾವ ಮೈಸೂರು ದೇಶದ ಜನಗಳ ಪ್ರತಿನಿಧಿಗಳಾಗಿ ಬಂದಿದ್ದೇವೆಯೋ ಆ ಜನಗಳ ಹಿತದೃಷ್ಟಿಯಿಂದ ಅದನ್ನು ನಾವು ಸಾಧಿಸಲೇ ಬೇಕಾಗಿದೆ. ಆ ದೃಷ್ಟಿಯಿಂದ ನಮ್ಮ ಮೈಸೂರು ಸಂಸ್ಥಾನದಲ್ಲಿ ಯಾವ ರಾಷ್ಟ್ರ ನಿರ್ಮಾಣ ಕಾರ್ಯಗಳು ನಡೆಯುತ್ತಾ ಇವೆಯೋ ಅವೆಲ್ಲವನ್ನೂ ಮುಂದೆಯೂ ಉಳಿಸಿಕೊಳ್ಳಬೇಕಾಗಿದೆ; ಮತ್ತು ನಾವು ಯಾವ ಒಂದು ವೇಗದಲ್ಲಿ ಹೋಗುತ್ತಾ ಇದ್ದೇವೆಯೋ ಅದೇ ವೇಗದಲ್ಲಿ ಹೋಗುವುದಕ್ಕೂ ಸಹ ರಕ್ಷಣೆಗಳನ್ನು ಇಟ್ಟುಕೊಳ್ಳಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಹೀಗೆ ಹೇಳುವಾಗ ನಮ್ಮ ಜೊತೆಗೆ ಬಂದು ಸೇರಿಕೊಳ್ಳತಕ್ಕ ಪ್ರಾಂತದ ಜನರಿಗೆ ಅಡಚಣೆಯಾಗದ ರೀತಿಯಲ್ಲಿ ಹೋಗತಕ್ಕದ್ದು ನಮ್ಮ ಕರ್ತವ್ಯ ಮತ್ತು ಅವರೂ ಸಹ ನಮ್ಮಂತೆಯೇ ಅಭಿವೃದ್ಧಿಗೆ ಬರಲು ಯಾವ ಯಾವ ಸಹಾಯ ಸಹಕಾರಗಳನ್ನು ನೀಡಬೇಕಾಗಿದೆಯೋ ಆ ಸಹಾಯ ಸಹಕಾರಗಳನ್ನೂ ಸಹ ನೀಡಬೇಕಾದದ್ದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ನಮ್ಮೊಡನೆ ಬಂದು ಸೇರತಕ್ಕ ಪ್ರಾಂತ್ಯಗಳ ಜನರ ಆರ್ಥಿಕ ಸ್ಥಿತಿ ಮತ್ತು ಅವರ ಇತರ ಕೆಲಸಕಾರ್ಯಗಳು ನಮ್ಮ ಸರಿಸಮಾನಕ್ಕೆ ಬರಲು ಅಲ್ಲಿಗೆ ಸಹ ಹೇರಳವಾಗಿ ಹಣವನ್ನು ಖರ್ಚು ಮಾಡಬೇಕಾಗಿದೆ. ಈ ಹಣವನ್ನು ನಾವು ಕೇಂದ್ರ ಸರ್ಕಾರದವರಿಂದ ಪಡೆದು ಅವರಿಗೂ ಸಹ ನಮ್ಮ ಜೊತೆಯಲ್ಲೇ ಮುಂದುವರಿಯುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕಾಗಿದೆ. ಇದನ್ನು ನಮ್ಮ ಮಿತ್ರರೆಲ್ಲರೂ ಒಪ್ಪುತ್ತಾರೆ ಎಂದು ನಂಬಿದ್ದೇನೆ. ನಮ್ಮ ಪ್ರಗತಿಗೆ ಕುಂದಕ ಬರದ ರೀತಿಯಲ್ಲಿ ಅವರ ಪ್ರಗತಿಯೂ ಸಹ ಮುಂದುವರಿಯುವುದಕ್ಕೆ ಕೇಂದ್ರ ಸರ್ಕಾರದ ಮೇಲೆ ನಮ್ಮ ಸರ್ಕಾರ ಮತ್ತು ನಾವುಗಳೆಲ್ಲರೂ ಒತ್ತಾಯ ಹಾಕಿ ಕೇಂದ್ರದಿಂದ ಹೆಚ್ಚು ಹಣವನ್ನು ಪಡೆದು ನಾವೆಲ್ಲರೂ ಸರ್ವತೋಮುಖವಾಗಿ ಅಭಿವೃದ್ಧಿಗೆ ಬರುವುದಕ್ಕೆ ಸದವಕಾಶವನ್ನು ಕಲ್ಪಿಸಿಕೊಳ್ಳಬೇಕಾಗಿದೆ. ಅದಕ್ಕೆ ನಾವೆಲ್ಲರೂ ಪ್ರಯತ್ನ ಮಾಡೋಣ ಎಂದು ಹೇಳಿ ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

3 P.M.

ಈ ದೊಡ್ಡ ಪ್ರಾಂತವಾಗಬೇಕು ಎಂದು ನಮ್ಮ ನಾಯಕರು ಹೇಳುವಾಗ ನಾವು ಸಹ ಯೋಚನೆ ಮಾಡಿದರೆ ದಕ್ಷಿಣ ಪ್ರದೇಶವಾಗಬೇಕು ಎಂದು ನಮಗೆಲ್ಲರಿಗೂ ಎನ್ನಿಸುತ್ತದೆ. ದಕ್ಷಿಣ ಪ್ರದೇಶವೆನ್ನುವಾಗ ಕೇರಳದ ಪ್ರಶ್ನೆ ಸಹ ನಮ್ಮ ಮುಂದೆ ಬರುತ್ತದೆ. ಆ ಕೇರಳ ಪ್ರದೇಶ ಮದರಾಸಿನೊಡನೆ, ಅಥವಾ ಮೈಸೂರಿನೊಡನೆ ಸೇರಬೇಕೇ ಅಥವಾ ಕೇರಳ, ಮದರಾಸು, ಮೈಸೂರು, ಆಂಧ್ರ ಮತ್ತು ಇವೆಲ್ಲವನ್ನೂ ಸೇರಿಸಿ ಒಂದು ಪ್ರಾಂತ ಮಾಡಬೇಕೇ ಎಂಬ ವಾದ ವಿವಾದಗಳು ನಮ್ಮ ಮುಂದೆ ಇವೆ. ಕೇರಳದ ಹೆಸರು ಬಂದಾಗ ಅನೇಕರು ಕೇರಳ ಪ್ರಾಂತವನ್ನು ನಮ್ಮ ಜೊತೆಯಲ್ಲಿ ಸೇರಿಸಿಕೊಳ್ಳುವುದು ಸೂಕ್ತವೇ ಎಂದು ಯೋಚನೆ ಮಾಡುತ್ತಾರೆ. ಕೇರಳದ ಪ್ರಶ್ನೆ ಬಂದಾಗ ನನಗೂ ಹಾಗೆಯೇ ಅನ್ನಿಸುತ್ತದೆ. ಇಡೀ ಇಂಡಿಯಾ ದೇಶದ ಅಭ್ಯುದಯ ದೃಷ್ಟಿಯಿಂದ, ಇಡೀ ಇಂಡಿಯಾ ದೇಶದ ರಕ್ಷಣೆಯ ದೃಷ್ಟಿಯಿಂದ, ಇಂಡಿಯಾ ದೇಶದ ಐಕ್ಯತೆಯ ದೃಷ್ಟಿಯಿಂದ ಈಗ ಕೇರಳದಲ್ಲಿ ಉದ್ಭವಿಸಿರತಕ್ಕ ಕಷ್ಟಪರಿಸ್ಥಿತಿಯನ್ನು ಇಂಡಿಯಾ ದೇಶದ ಪ್ರಜೆಗಳಾದ ನಾವೆಲ್ಲರೂ ಪರಿಶೀಲಿಸಿ ಪರಿಹಾರ ಮಾಡಬೇಕಾದದ್ದು ನಮ್ಮ ಕರ್ತವ್ಯ. ನಾವು ಈ ವಿಷಯದಲ್ಲಿ ಮನಸ್ಸು ಕೊಡಬೇಕು ಎಂದು ನನಗನ್ನಿಸುತ್ತದೆ. ಕೇರಳದಲ್ಲಿ ಪರಿಸ್ಥಿತಿ ಬಹಳ ಉಲ್ಬಣಿಸಿದೆ. ಅಲ್ಲಿ ಯಾವ ಭದ್ರವಾದ ಸರ್ಕಾರವೂ ಸಹ ಉಳಿಯುವುದಕ್ಕೆ ಈಗಿನ ಪರಿಸ್ಥಿತಿಯಲ್ಲಿ ಅವಕಾಶವಿಲ್ಲ. ಅಲ್ಲಿ ಭದ್ರವಾದ ಸರ್ಕಾರ ಉಳಿಯುವುದಕ್ಕೆ ಅವಕಾಶವಿಲ್ಲದೆ ಆರು ತಿಂಗಳಿಗೊಂದು ಸಲ, ವರ್ಷಕ್ಕೊಂದು ಸಲ ಸರ್ಕಾರ ಬದಲಾಣೆಯಾಗುತ್ತ ಇರುವುದು ನಮಗೆ ಗೊತ್ತಿದೆ. ಅದರ ಪರಿಣಾಮವಾಗಿ ಈಗ ಕೇಂದ್ರ ಸರ್ಕಾರದವರು ಪೂರ್ಣಾಡಳಿತವನ್ನು ತಮ್ಮ ಕೈಯ್ಯಲ್ಲಿಟ್ಟುಕೊಂಡು ಸರ್ಕಾರವನ್ನು ನಡೆಸಬೇಕಾದ ಪರಿಸ್ಥಿತಿ ಬಂದಿದೆ. ಅದರಲ್ಲಿಯೂ ಅಲ್ಲಿ ಕಮ್ಯೂನಿಸ್ಟ್ ಜನರ ಪ್ರಭಾವ ಹೆಚ್ಚಾಗಿದೆ ಎಂಬುದು ನಮಗೆಲ್ಲ ಗೊತ್ತಿದೆ. ಕಾಂಗ್ರೆಸ್ ಪಕ್ಷದವರಿಗಾಗಲಿ, ಇತರ ಪಕ್ಷಗಳಿಗಾಗಲಿ, ಪ್ರಜಾ ಸೋಷಿಯಲಿಸ್ಟ್, ಮುಂತಾದ ಪಕ್ಷಗಳಿಗಾಗಲಿ, ಕಮ್ಯೂನಿಸಂನಲ್ಲಿ ನಂಬಿಕೆ ಇಲ್ಲ. ನಮ್ಮ ಪ್ರದೇಶದಲ್ಲಿ ಕಮ್ಯೂನಿಸಂ ಪ್ರಬಲವಾಗುತ್ತಿರುವುದನ್ನು ತಡೆಗಟ್ಟಬೇಕಾದದ್ದು

ಎಲ್ಲರ ಜವಾಬ್ದಾರಿಯಾಗಿದೆ. ಹೀಗಿರುವಾಗ ಕೇರಳವನ್ನು ಮೈಸೂರು ದೇಶದಲ್ಲಿ ಸೇರಿಸಿಕೊಳ್ಳೋಣವೆಂದು ಯೋಚನೆಮಾಡುವಾಗ ಅನೇಕರಿಗೆ ಸ್ವಲ್ಪ ಶಂಕೆ ಉದ್ಭವಿಸುತ್ತದೆ. ಆ ಶಂಕೆ ನನಗೂ ಸ್ವಲ್ಪಮಟ್ಟಿಗಿದೆ. ಒಂದು ಪಕ್ಷ ಕೇರಳವನ್ನು ನಮ್ಮ ಮೈಸೂರು ದೇಶಕ್ಕೆ ಆ ಸೇರಿಸಿಕೊಂಡರೆ, ಕಮ್ಯೂನಿಸ್ಟ್ ಪ್ರಭಾವವಿರತಕ್ಕ ದೇಶವನ್ನು ಸೇರಿಸಿಕೊಂಡರೆ, ನಮ್ಮಲ್ಲಿಯೂ Communism ಪ್ರಬಲವಾಗಿ ದೇಶದ ಹಿತಕ್ಕೆ ಧಕ್ಕೆ ಬಂದೀತು ಎಂದು ನನ್ನ ಮಿತ್ರರನೇಕರಲ್ಲಿ ಶಂಕೆ ತೋರುತ್ತಿದೆ. ನನಗಾದರೂ ಹಾಗೆಯೇ ಅನ್ನಿಸುತ್ತದೆ. ಒಂದು ಪಕ್ಷ ಇಡೀ ಕೇರಳವನ್ನು ನಮ್ಮ ಮೈಸೂರು ದೇಶಕ್ಕೆ ಸೇರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದೆ ಹೋದರೂ ಅದನ್ನು ವಿಭಾಗ ಮಾಡಿ ನಮ್ಮ ಮೈಸೂರಿಗೆ ಸಮೀಪದಲ್ಲಿರತಕ್ಕ ಅರ್ಧ ಭಾಗವನ್ನು ಮೈಸೂರಿಗೆ ಸೇರಿಸಿಕೊಂಡು ಇನ್ನರ್ಧ ಭಾಗವನ್ನು ಮದರಾಸಿಗೆ ಸೇರಿಸಿಕೊಂಡು ಅಲ್ಲಿನ ಪರಿಸ್ಥಿತಿಯನ್ನು ಪರಿಹಾರಮಾಡಿ ಅದರಿಂದ ಇಡೀ ದೇಶದ ರಕ್ಷಣೆಗೆ ಅವಕಾಶವಾಗುವ ರೀತಿಯಲ್ಲಿ ಒಂದಲ್ಲ ಒಂದು ವಿಧದಲ್ಲಿ ಇದನ್ನು ಬಗೆಹರಿಸುವ ಕಾರ್ಯ ನಮ್ಮ ಮುಂದೆ ಇದೆ ಎಂದು ಹೇಳುತ್ತಿದ್ದೇನೆ. ನಾವು ದಕ್ಷಿಣ ಪ್ರದೇಶವೆಂಬ ಪ್ರಶ್ನೆಯನ್ನು ಯೋಚನೆ ಮಾಡುವಾಗ ಇದೆಲ್ಲವನ್ನೂ ಮುಂದಿಟ್ಟುಕೊಂಡು ನಾವುಗಳು ಆಲೋಚಿಸಬೇಕಾಗಿದೆ. ಈ ದೃಷ್ಟಿಯಿಂದಲೂ ಸಹ ನಮ್ಮ ನಾಯಕರುಗಳು ವಿಶಾಲ ದೇಶವಾಗಬೇಕು ಎಂಬುದಾಗಿ ಅಭಿಪ್ರಾಯಪಡುತ್ತಿದ್ದಾರೆಂದು ನನಗನ್ನಿಸುತ್ತದೆ. ಅದರಲ್ಲಿಯೂ ನಾನು ಮೇಲೆ ಹೇಳಿದಹಾಗೆ ನಮ್ಮ ನೆರೆಯ ರಾಷ್ಟ್ರವಾದ ಪಾಕಿಸ್ತಾನವು (Unitary States) ದೊಡ್ಡ ಸಂಸ್ಥಾನಗಳನ್ನು ಮಾಡಿಕೊಂಡು ಒಂದು ರೀತಿಯಲ್ಲಿ ಹೋಗುತ್ತಿರುವಾಗ ನಾವೂ ಸಹ ಇಲ್ಲಿಯೂ ದೊಡ್ಡ ದೊಡ್ಡ ಪ್ರಾಂತಗಳನ್ನು ಮಾಡಿಕೊಂಡು ನಮ್ಮ ರಾಷ್ಟ್ರವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಡಬೇಕು. ಈ ದೃಷ್ಟಿಯಿಂದಲೂ ಮತ್ತು ನಮ್ಮ ಮಿತ್ರರಾದ ಶ್ರೀಮಾನ್ ವೀರಣ್ಣಗೌಡರು ಹೇಳಿದ ಹಾಗೆ ದೇಶದ ಮುಂದೆ ಇರತಕ್ಕ ದೊಡ್ಡ ದೊಡ್ಡ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯಗತ ಮಾಡುವ ದೃಷ್ಟಿಯಿಂದಲೂ ಸಹ ದೊಡ್ಡ ಪ್ರಾಂತಗಳನ್ನು ಮಾಡಬೇಕಾದದ್ದು ಅಗತ್ಯವೆಂದು ನಮ್ಮೆಲ್ಲರಿಗೂ ಸಹ ಅನ್ನಿಸುತ್ತದೆ.

ಈ S. R. ಬಿಲ್ಲನ್ನು ನಮ್ಮ ಮುಂದೆ ಇಡುವಾಗಲೂ ಕೂಡ ಕೇಂದ್ರ ಸರ್ಕಾರದವರು Zonal Councils ಮಾಡಬೇಕು ಎಂದು ಯೋಚನೆ ಮಾಡಿ ಅದನ್ನು ಇದರಲ್ಲಿ ಅಳವಡಿಸಿದ್ದಾರೆ. ಅವರು Zonal Counci s ಮಾಡತಕ್ಕ ಉದ್ದೇಶವಾದರೂ ಯಾವ ದೊಡ್ಡ ಪ್ರಾಂತಗಳನ್ನು ಮಾಡಬೇಕೆಂಬ ಅವಸರದ ನಿರ್ಧಾರವನ್ನು ಅವರು ತೆಗೆದುಕೊಂಡಿದ್ದರೋ ಅದನ್ನು ಮುಂದೆ ಕಾರ್ಯಗತ ಮಾಡುವುದಕ್ಕೆ ಈವಾಗ ಈ ರೀತಿಯ ತಳಹದಿಯನ್ನು ಹಾಕಿಕೊಂಡಿದ್ದಾರೆ ಎಂದು ನನಗನ್ನಿಸುತ್ತದೆ.

ನಮ್ಮ ಮುಖ್ಯ ಮಂತ್ರಿಗಳೂ ಸಹ ಈ Zonal Council ವಿಚಾರದಲ್ಲಿ ಮಾತನಾಡವಾಗ ಎಲ್ಲ ಅಧಿಕಾರವೂ ಕೇಂದ್ರದಲ್ಲಿ ಕೇಂದ್ರೀಕೃತವಾಗುತ್ತಿದೆ, ಅದು ಆ ರೀತಿ ಕೇಂದ್ರೀಕೃತವಾಗದೆ ಸಂಸ್ಥಾನಕ್ಕೂ ಸಹ ಹೆಚ್ಚಿನ ಅಧಿಕಾರ ಬರಬೇಕು, ಈ ದೃಷ್ಟಿಯಿಂದ Regional Councils ಗೆ ಹೆಚ್ಚು executive power ಕೊಡಬೇಕೆಂದು ತಮ್ಮ ಭಾಷಣದಲ್ಲಿ ವಾದ ಮಾಡಿದ್ದಾರೆ. ಅದು ನ್ಯಾಯವೆಂದು ನನಗನ್ನಿಸುತ್ತದೆ. ಆ ರೀತಿ ಈ Regional Councils ಗಳಿಗೆ ಹೆಚ್ಚು executive power ಕೊಟ್ಟರೆ ಸ್ವಲ್ಪ ಹೆಚ್ಚು ಕಡಿಮೆ ಅದೇ ಒಂದು ರೀತಿಯಾದ ಸರ್ಕಾರವಾಗುತ್ತದೆ. ಅದನ್ನು ನಾವು ದೊಡ್ಡ ಸರ್ಕಾರವೆನ್ನುವ ರೀತಿಯಲ್ಲಿ ಪರಿವರ್ತನೆ ಮಾಡಿಕೊಳ್ಳಬೇಕಾದರೆ ಅದಕ್ಕೆ ಇನ್ನೂ ಹೆಚ್ಚು ಅಧಿಕಾರವನ್ನು ಕೊಟ್ಟು ಇಡೀ ದಕ್ಷಿಣ ಪ್ರದೇಶಕ್ಕೆಲ್ಲ ಒಂದು ಸರ್ಕಾರವನ್ನು ಮಾಡಿಕೊಂಡು, ಒಂದು legislature ಮಾಡಿಕೊಂಡರೆ ಅದೇ ದಕ್ಷಿಣ ಪ್ರದೇಶವೆನ್ನಿಸಿಕೊಳ್ಳಬಹುದು. ಈ ರೀತಿಯಾಗಿ ಮುಂದೆ ದೊಡ್ಡ ಪ್ರಾಂತವನ್ನು ಮಾಡಬೇಕೆಂಬ ಉದ್ದೇಶದಿಂದಲೇ ಈ ರೀತಿ ಬಿಲ್ಲಿನಲ್ಲಿ ಅಳವಡಿಸಿಕೊಂಡಿದ್ದಾರೆನ್ನಿಸುತ್ತದೆ. ಈ ರೀತಿ ಮುಂದೆ ದೊಡ್ಡ ಪ್ರಾಂತವಾಗುವುದಕ್ಕೆ ಈ ಕೌನ್ಸಿಲ್‌ಗಳು ಸಹಕಾರಿಯಾಗಲಿ ಎಂದು ಈ ಸಂದರ್ಭದಲ್ಲಿ ನಾನು ಅಭಿಪ್ರಾಯಪಡುತ್ತೇನೆ.

ಮತ್ತು S. R. ಬಿಲ್ ಪ್ರಕಾರ ವಿಧಾನಪರಿಷತ್ತು ಮತ್ತು ವಿಧಾನಸಭೆ ಇವೆರಡೂ ಇರಬೇಕೆಂಬ ಅಭಿಪ್ರಾಯವಿದೆ. ಎರಡೂ ಇರಬೇಕೇ ಒಂದು ಮಾತ್ರವಿರಬೇಕೇ ಎಂಬ ವಿಷಯದಲ್ಲಿ ವಾದ ವಿವಾದಗಳು ನಮ್ಮಲ್ಲಿ ನಡೆದಿವೆ. ಆದರೆ ಈ ಬಿಲ್ಲಿನಲ್ಲಿ ಎರಡೂ ಇರತಕ್ಕದ್ದು ಸೂಕ್ತವೆಂದು ಅಭಿಪ್ರಾಯಪಟ್ಟಿದ್ದಾರೆ. ಇಂಡಿಯಾ ದೇಶದ ಒಂದು ಪ್ರಾಂತ ವಿನಾ ಉಳಿದೆಲ್ಲ ಪ್ರಾಂತಗಳಲ್ಲೂ ಎರಡು ಮನೆಗಳು (Houses) ಇರುವುದಕ್ಕೆ ಈ ಬಿಲ್ಲಿನಲ್ಲಿ ಅವಕಾಶವನ್ನು ಕೊಟ್ಟಿದ್ದಾರೆ. ಅದೇ ರೀತಿ ನಮ್ಮ ಮೈಸೂರು ದೇಶಕ್ಕೂ ಸಹ ಅವಕಾಶವನ್ನು ಕೊಟ್ಟಿದ್ದಾರೆ. ಹೀಗೆ ಕೊಟ್ಟಿರುವ ಅವಕಾಶವನ್ನು ನಾವು ಕಳೆದುಕೊಳ್ಳದೆ ಅದನ್ನು ಉಪಯೋಗಿಸಿಕೊಂಡು ಮುಂದೆ hasty legislations ಆಗುವುದಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಈ ಎರಡು ಸಭೆಗಳನ್ನೂ ಸಹ ಉಳಿಸಿಕೊಂಡು ಅವುಗಳನ್ನು ನಡೆಸಿಕೊಂಡು ಹೋಗತಕ್ಕದ್ದು ಸೂಕ್ತವೆಂದು ನನಗನ್ನಿಸುತ್ತದೆ. ಜೊತೆಗೆ ಮುಂದೆ ಈಗಿರುವ ಪ್ರಾಂತಕ್ಕಿಂತಲೂ ಇನ್ನೂ ದೊಡ್ಡದಾದ ಪ್ರಾಂತವಾಗುವ ಸಂದರ್ಭದಲ್ಲಿ ಈ ಎರಡು ಸಭೆಗಳೂ ಅತ್ಯಗತ್ಯವಾಗಿ ಬೇಕಾಗುತ್ತವೆ. ಆ ದೃಷ್ಟಿಯಿಂದಲೂ ಸಹ ನಾವು ಈ ಎರಡು ಸಭೆಗಳನ್ನೂ ಉಳಿಸಿಕೊಂಡು ಹೋಗಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

The House adjourned for Lunch at Ten Minutes past Three of the Clock and reassembled at Forty-five Minutes past Three of the Clock.

[MR. SPEAKER in the Chair]

Sri Mulka GOVINDA REDDY (Chitaldrug).—I would like to know till what time the House is going to sit today, because there are any number of members desirous of speaking on the Bill. I suggest that this general discussion may be continued tomorrow also.

Mr. SPEAKER.—We shall see.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ರಾಜ್ಯಗಳ ಪುನರ್ವಿಂಗಡಣೆಗೆ ಸಂಬಂಧಪಟ್ಟ ಹಾಗೆ ಪಾರ್ಲಿಮೆಂಟಿನ ಮುಂದೆ ಚರ್ಚೆಯಾಗುತ್ತಿರುವ ಈ ಮಸೂದೆಯನ್ನು ಈ ಸಭೆ ಚರ್ಚಿಸುತ್ತಿದೆ. ಪ್ರಾಂತಗಳ ಪುನರ್ವಿಂಗಡಣೆ ಕಳೆದ ಅರ್ಧ ಶತಮಾನದಿಂದ ಇಂಡಿಯಾ ದೇಶದ ಜನತೆಯ ಮನಸ್ಸಿನಲ್ಲಿದ್ದಂಥ ಮಹಾ ಸಮಸ್ಯೆಗಳಲ್ಲಿ ಒಂದು. ಈ ಬಗ್ಗೆ ಸಾಕಷ್ಟು ವಾದ ವಿವಾದಗಳು, ಚರ್ಚೆ, ಹೋರಾಟ ಮತ್ತು ತ್ಯಾಗ ಅನೇಕವಾಗಿ ನಡೆದವು. ಇದಾದಮೇಲೆ ಹತ್ಯಾಕಾಂಡವೂ ಕೂಡ ನಡೆಯಿತು. ನಡೆದು ಈದಿನ ಈ ಸಮಸ್ಯೆ ಒಂದು ಮಸೂದೆಯ ರೂಪವನ್ನು ತಾಳಿ ಪುನಃ ಈ ನಮ್ಮ ಸಭೆಯ ಮುಂದೆ ಬಂದಿದೆ. ನಾನು ಈ ಮಸೂದೆಯಲ್ಲಿ ಒಳಗೊಂಡಿರತಕ್ಕಂಥ ಅಂಶಗಳನ್ನು ಸೂಚಿಸುವ ಮೊದಲು ಈ ಮಸೂದೆಯ ಹಿನ್ನೆಲೆಯಲ್ಲಿ ಮತ್ತು ಪ್ರಾಂತ ಪುನರ್ವಿಂಗಡಣೆಯ ಆಯೋಗದವರು ವರದಿಯನ್ನು ಸಲ್ಲಿಸಿದನಂತರ ನಮ್ಮ ದೇಶದಲ್ಲುಂಟಾದ ಒಂದು ಗೊಂದಲ ಪರಿಸ್ಥಿತಿಯ ಬಗ್ಗೆ ಒಂದೆರಡು ವಿಷಯಗಳನ್ನು ಮಾತನಾಡಿ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಕಳೆದ ಅಕ್ಟೋಬರ್ ಹತ್ತನೆಯ ತಾರೀಖು ಪ್ರಾಂತ ಪುನರ್ವಿಂಗಡಣಾ ಸಮಿತಿ ತನ್ನ ವರದಿಯನ್ನು ಒಪ್ಪಿಸಿತು. ಸಹಜವಾಗಿ ಪ್ರಾಂತ ಪುನರ್ವಿಂಗಡಣಾ ಸಮಿತಿ ಸಲಹೆಗಳ ಬಗ್ಗೆ ನಾನಾ ರೀತಿಯ ಪ್ರತಿಕ್ರಿಯೆಗಳು ದೇಶದಲ್ಲುಂಟಾಗಿವೆ. ಯಾವ ರೀತಿಯಲ್ಲಿ ಆ ಸಲಹೆಗಳನ್ನು ಕಾರ್ಯಗತ ಮಾಡಬೇಕೆಂಬ ಬಗ್ಗೆ ನಾನಾ ವಿವಾದಗಳೆದ್ದಿವೆ. ಅನೇಕರು ಈ ಪ್ರಾಂತ ಪುನರ್ವಿಂಗಡಣೆ ಈಗ ಹೊಸದು, ಅಕಾಲಿಕ, ಮುಂದೆ ಹಾಕತಕ್ಕದ್ದು ಸರಿಯಾದ ವಿವೇಚನಾಯುತವಾದ ಮಾರ್ಗ ಎಂದು ವಾದಿಸಿದರು. ಕೆಲವರು ಇದು ಆಗಲೇ ಬೇಕಾದುದು, ಬಹಳ ಮುಂಚೆಯೇ ಈ ಕೆಲಸ ನೆರವೇರ ಬೇಕಾಗಿತ್ತು, ತಡವಾಗಿದೆ, ತಕ್ಷಣ ಇದನ್ನು ಕಾರ್ಯಗತ ಮಾಡಬೇಕು ಎಂದು ಒತ್ತಾಯ ಪೂರ್ವಕವಾಗಿ ವಾದವನ್ನೂ ಕೂಡ ಮಾಡಿದರು. ಈ ಸಂದರ್ಭದಲ್ಲಿ ಈ ವರದಿಗಳನ್ನು ಕಾರ್ಯಗತ ಮಾಡತಕ್ಕ ಒಂದು ಗುರುತರವಾದ ಜವಾಬ್ದಾರಿಯನ್ನು ಹೊತ್ತಿದ್ದ ಭಾರತದ ಕೇಂದ್ರ ಸರ್ಕಾರ, ಮುಖ್ಯವಾಗಿ ಶ್ರೀ ನೆಹ್ರೂ ಅವರು ಈ ವಿಷಯದಲ್ಲಿ ಒಂದು ದೊಡ್ಡ ತಪ್ಪನ್ನು ಮಾಡಿದರೆಂದು ಹೇಳಬೇಕಾಗಿದೆ. ವಾದ ವಿವಾದಗಳಿಗೆ ಮತ್ತೊಂದು ಅರ್ಥವನ್ನು ಕಲ್ಪಿಸಿ ಕೆಲವು ತೀರ್ಮಾನಗಳನ್ನು ಜನತೆಯ ಅಭಿಪ್ರಾಯದ ವಿರುದ್ಧವಾಗಿ ಅವರು ಕೈಕೊಂಡರ . ಇಂತಹ ಒಂದು ತೀರ್ಮಾನವನ್ನು ಜನವರಿ 14ನೆಯ ತಾರೀಖು ಕೈಗೊಳ್ಳಲಾಯಿತು. ಆ ತೀರ್ಮಾನವನ್ನು ತೆಗೆದುಕೊಂಡ ಕ್ಷಣದಿಂದಲೇ ಮುಂಬಯಿನಲ್ಲಿ ಜನತೆ ಆಕ್ರೋಶದಿಂದ ಆ ರೀತಿಯ ತೀರ್ಮಾನದ ವಿರುದ್ಧವಾಗಿ ಪ್ರಶಾಂತವಾಗಿ ಪ್ರತಿಭಟನೆಯನ್ನು ತೋರಿಸಿತು. ಇಂತಹ ಒಂದು ಪ್ರತಿಭಟನೆಯಿಂದ ಶ್ರೀ ಮುರಾರ್ಜಿ ದೇಶಾಯಿಯವರ ಸರ್ಕಾರ ತಮ್ಮ ಲಾಠಿ, ಗುಂಡು, ಟಿಯರ್ ಗ್ಯಾಸ್ ಇತ್ಯಾದಿಗಳ ಪ್ರತಿಕ್ರಿಯೆಯನ್ನು 5-6 7ದಿವಸಗಳು ಅವ್ಯಾಹತವಾಗಿ ಹತ್ತಿಕ್ಕಿದ್ದ ಪರಿಣಾಮವಾಗಿ ಸುಮಾರು 77 ಜನ ಮೃತರಾದರು, 72 ಜನರಿಗೆ ಗುಂಡಿನ ಗಾಯಗಳಾದುವು, ಇಬ್ಬರು ಟಿಯರ್ ಗ್ಯಾಸ್ನಿಂದ, ಇಬ್ಬರು ಚೂರಿ ಇರಿತದಿಂದ ತೊಂದರೆಗೀಡಾದರು ; ಹೀಗೆ ಜನರ ಸಾವು ನೋವುಗಳುಂಟಾದುವು. ಹಾಗೆಯೇ ಬಿಹಾರದ ಪೂರಿಯಲ್ಲಿ ಕೂಡ ಘಟನೆಗಳು ನಡೆದವು. ಇಂತಹ ಒಂದು ಹತ್ಯಾಕಾಂಡ ದೇಶದಲ್ಲಿ ನಡೆಯುವುದಕ್ಕೆ—ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ—ಶ್ರೀ ನೆಹ್ರೂಅವರ ಮತ್ತು ಅವರ ಸಹೋದ್ಯೋಗಿಗಳು ಮತ್ತು ಅವರ ಸರ್ಕಾರದವರು ಹೊಣೆ ಎಂದು. ಶ್ರೀ ನೆಹ್ರೂಅವರು ಈಚೆಗೆ ತಮ್ಮ ಒಂದು ಭಾಷಣದಲ್ಲಿ ''ಈ ಘಟನೆ ನನಗೆ ವೈಯುಕ್ತಿಕವಾಗಿ ಕೆಲವೊಂದು ರೀತಿಯಲ್ಲಿ ಸೋಲಾದಂತಾಗಿದೆ; ಮತ್ತು ಇದು ನನ್ನ ಬಗ್ಗೆ ಒಂದು ಟ್ರಾಜೆಡಿ'' ಎಂದು ಕೂಡ ಹೇಳಿಕೊಂಡಿದ್ದಾರೆ. ಆ ಒಂದು ದೃಷ್ಟಿಯಿಂದ ಈ ದುರಂತಕ್ಕೆ ತಾವೇ ಕಾರಣವೆಂದು ಭಾವಿಸಿ ಈಗ ಬಹುಶಃ ಸ್ವಲ್ಪ ಮಟ್ಟಿಗೆ ಈವಿಚಾರದಲ್ಲಿ ಜಾಗ್ರತಿಯನ್ನು ವಹಿಸಿದ್ದಾರೆಂದು ಕಾಣುತ್ತದೆ.

ಇನ್ನೊಂದು ಮುಖ್ಯವಾದ ಅಂಶವೇನೆಂದರೆ, ಇಂಥ ದುರ್ಘಟಣೆಗಳು ನಡೆಯದಂತೆ ಅವರು ತಡೆಯಬಹುದಾಗಿತ್ತು. ಈ ವಿಷಯದಲ್ಲಿ ನಾನು ಈ ಹೊತ್ತೂ ಕೂಡ ಮುಂಬಯಿಯನ್ನು ಪ್ರತ್ಯೇಕ ಒಂದು ಪ್ರಾಂತವಾಗಿ ರಚನೆ ಮಾಡಬೇಕೆಂದು ಸಲಹೆ ಮಾಡಿರುವುದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ; ಮತ್ತು ಆ ಬಗ್ಗೆ ನನ್ನ ಪ್ರತಿಭಟನೆ ಕೂಡ ಇದೆ. ಮುಂಬಯಿ ಮಹಾರಾಷ್ಟ್ರದ ಒಂದು ಅಂಗ, ಮಹಾರಾಷ್ಟ್ರ ಪ್ರಾಂತ ಮುಂಬಯಿ ವಿನಾ ಆರ್ಥಿಕವಾಗಿ ಮತ್ತು ಇತರ ಎಲ್ಲ ವಿಧದಲ್ಲೂ ಮುಂದುವರಿಯಲು ಸಾಧ್ಯವಿಲ್ಲ. ಆದ್ದರಿಂದ ಮುಂಬಯಿಯನ್ನು ಬೇರೆ ಪ್ರಾಂತವಾಗಿ ಮಾಡುತ್ತೇವೆ, ಕೇಂದ್ರದ ಒಂದು ಪ್ರದೇಶವನ್ನಾಗಿ ಮಾಡಿ ಆಡಳಿತ ನಡೆಸಿಕೊಂಡು ಹೋಗುತ್ತೇವೆ ಎಂಬ ಭಾವನೆಯಿರುವುದು ತೀರ ತಪ್ಪು ಭಾವನೆ, ಪುನಃ ಜನತೆಯನ್ನು ಪ್ರತ್ಯೇಕಿಸುವುದಕ್ಕೆ ಅವಕಾಶ ಕೊಡುವಂಥಾದ್ದು. ಇದನ್ನು ಕೈಬಿಟ್ಟು ಮುಂಬಯಿಯನ್ನು ಒಳಗೊಂಡ ಮಹಾರಾಷ್ಟ್ರವನ್ನು ರಚಿಸುವುದು ಕೇವಲ ವಿವೇಕ ಮತ್ತು ನ್ಯಾಯವಾದದ್ದು ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಸ್ವಾಮಿ, ಈ ಮಸೂದೆಯಲ್ಲಿ ಅಡಕವಾಗಿರತಕ್ಕ ವಿಷಯಗಳಲ್ಲಿ ಎರಡು ಮುಖ್ಯವಾದ ವಿಷಯಗಳಿವೆ. ಮೊದಲನೆಯದು ಈಗಿರತಕ್ಕ ಪ್ರಾಂತಗಳನ್ನು ಪುನಃವಿಂಗಡಣೆ ಮಾಡಿ ನೂತನ ಪ್ರಾಂತಗಳನ್ನು ರಚನೆ ಮಾಡತಕ್ಕ ವಿಷಯ ; ಅದಕ್ಕೆ ಸಂಬಂಧಪಟ್ಟ ಹಾಗೆ ರಾಜ್ಯಾಂಗವನ್ನು ತಿದ್ದುಪಡಿ ಮಾಡತಕ್ಕ ವಿಷಯ ಎರಡನೆಯದು. ಈ ಎರಡು ಮುಖ್ಯ ವಿಷಯಗಳನ್ನು ಈ ಮಸೂದೆ ಒಳಗೊಂಡಿದೆ. ಪ್ರಾಂತ ಪುನರ್ವಿಂಗಡಣೆಗೆ ಸಂಬಂಧಪಟ್ಟ ಹಾಗೆ ಇಲ್ಲಿ ಮೊದಲನೆಯದಾಗಿ ಒಂದು ವಿಷಯವನ್ನು ನಾನು ಪ್ರಸ್ತಾಪಿಸಬೇಕೆಂದಿದ್ದೇನೆ. ಕೇಂದ್ರದವರು ಈಗ ಮುಖ್ಯವಾಗಿ ಪ್ರಾಂತಗಳಿಗಿದ್ದಂಥ ಒಳಭೇದ, A.B.C. ಭೇದವನ್ನು ತೊಡೆದುಹಾಕುವುದಕ್ಕೆ ಎಸ್. ಆರ್. ಸಿ. ಸಲಹೆಯಂತೆ ಈ ಮಸೂದೆಯಲ್ಲಿ ಪ್ರಯತ್ನ ಪಟ್ಟಿದ್ದಾರೆ. ಆದರೆ ಅದೇ ಸಂದರ್ಭದಲ್ಲಿ ಹಿಮಾಚಲ ಪ್ರದೇಶ, ಮುಂಬಯಿಗಳನ್ನು ಕೇಂದ್ರದ ಆಡಳಿತಕ್ಕೆ ವಹಿಸಿಕೊಳ್ಳುವುದಕ್ಕೆ ಅವನ್ನು ಯೂನಿಯನ್ ಟೆರಿಟರಿ ಎಂದು ಕರೆಯಲಾಗಿದೆ. ಈಗಾಗಲೆ ದೆಹಲಿಯನ್ನು ಮತ್ತು ತ್ರಿಪುರ ಮತ್ತು ಮಣಿಪುರಗಳನ್ನು ಆ ರೀತಿ ಕೇಂದ್ರದಿಂದ ಆಳುವ ಭಾಗಗಳಾಗಿ ಮಾಡಬೇಕೆಂದು ಇದರಲ್ಲಿ ತೀರ್ಮಾನ ಮಾಡಿದೆ. ಪ್ರಜಾಪ್ರಭುತ್ವದಲ್ಲಿ ಮೂಲತಃ ಒಂದು ಪ್ರದೇಶ ಮತ್ತು ಒಂದು ಜನಾಂಗ ಎಷ್ಟೇ ಚಿಕ್ಕದಿರಲಿ ಮತ್ತು ಅವರು ಎಷ್ಟೇ ಕಡಮೆ ಸಂಖ್ಯೆಯಲ್ಲಿರಲಿ, ಅವರಿಗೊಂದು ತಾವೇ ಆಳಿಕೊಳ್ಳುವ ಸರ್ಕಾರ ಕೊಡುವುದು ತೀರ ಕನಿಷ್ಠವಾದ ಅವರ ಬೇಡಿಕೆಯಾಗುತ್ತದೆ: ಮತ್ತು ಕನಿಷ್ಠವಾಗಿ ಪ್ರಜಾಪ್ರಭುತ್ವಕ್ಕೆ ಮಾಡಬಹುದಾದ ಒಂದು ನ್ಯಾಯವಾಗುತ್ತದೆ. ಆದ್ದರಿಂದ ಈಗಿರುವ ಮುಂಬಯಿಯಾಗಲಿ, ದೆಹಲಿ, ಹಿಮಾಚಲ

ಪ್ರದೇಶ, ಮಣಿಪುರ ಅಥವಾ ತ್ರಿಪುರವಾಗಲಿ ಅಥವಾ ಇತರ ಸಣ್ಣ ಪ್ರಾಂತವಾಗಲಿ ಅವನ್ನು ಕೇಂದ್ರದಿಂದ ಆಳಲ್ಪಡುವ ಯೂನಿಯನ್ ಟೆರಿಟರಿಗಳೆಂದು ತೀರ್ಮಾನ ಮಾಡುವುದು ಪ್ರಜಾಪ್ರಭುತ್ವಕ್ಕೆ ನಾವು ಮಾಡಬಹುದಾದ ಒಂದು ದೊಡ್ಡ ಅಪಚಾರ. ಇಂತಹ ಒಂದು ತೀರ್ಮಾನವನ್ನು ಮಾಡುವುದು ತೊಲಗಬೇಕು ಮತ್ತು ಮುಂಬಯಿ ಮಹಾರಾಷ್ಟ್ರದಲ್ಲಿ ಸೇರಬೇಕು. ಹಾಗೆಯೇ ಹಿಮಾಚಲ ಪ್ರದೇಶ, ಇಲ್ಲಿ ಸಲಹೆ ಮಾಡಿರುವಂತೆ, ಮುಂದೆ ಪಂಜಾಬಿನಲ್ಲಿ ಸೇರುವ ಪ್ರದೇಶವಾಗಿದೆ. ಉಳಿದಿರುವ ಪ್ರದೇಶಗಳಿಗೆ ಕೂಡ ನೇರವಾಗಿ ಒಂದು ಆಡಳಿತ ವ್ಯವಸ್ಥೆಯನ್ನು ಸರ್ಕಾರ ಕಲ್ಪಿಸುವುದಕ್ಕೆ ಈ ಮಸೂದೆಗೆ ತಿದ್ದುಪಡಿ ತರಬೇಕೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇನ್ನೂ ಅನೇಕ ವರ್ಷಗಳಿಂದ ನಾವು ಆಶಿಸಿದ್ದ ಕರ್ಣಾಟಕ ಪ್ರಾಂತ ಈ ದಿನ ರೂಪಿತವಾಗತಕ್ಕ ಕಾಲ ಸನ್ನಿಹಿತವಾಗಿದೆ. ಬರತಕ್ಕಂಥ ಅಕ್ಟೋಬರ್ ಒಂದನೆಯ ತಾರೀಖು ಈ ಮಸೂದೆ ಕಾನೂನಾಗಿ ಅಂದು ಕರ್ಣಾಟಕ ರಾಜ್ಯ ಅಸ್ತಿತ್ವಕ್ಕೆ ಬರಲಿದೆ. ಒಂದು ವಿಷಯವನ್ನು ನಾವು ಈ ಹೊತ್ತು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಈ ಕರ್ಣಾಟಕ ಪ್ರಾಂತದ ಒಂದು ಉದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಈ ನಾಡಿನಲ್ಲಿ ಯಾವ ಒಂದು ದುರಂತದ ಕಾರ್ಯವಾಗಲಿ ಯಾವ ರಕ್ತಪಾತವಾಗಲಿ ನಡೆಯದೆ ಇದ್ದುದು ಒಂದು ದೊಡ್ಡ ಆದರ್ಶದ ಮಾತಾಗಿದೆ. ಈ ದಿನ ಕರ್ಣಾಟಕ ರಾಜ್ಯ ಅಸ್ತಿತ್ವಕ್ಕೆ ಬರುತ್ತಿದ್ದರೂ ಕೂಡ ಈ ರಾಜ್ಯ ಅಪೂರ್ಣವಾಗಿ ನಮಗೆ ಇಂದು ಬರುತ್ತಿದೆಯೆಂದು ನಾವು ಹೇಳಬೇಕಾಗಿದೆ. ಏಕೆಂದರೆ ಸ್ಥೂಲವಾಗಿ, ಸಾಮಾನ್ಯವಾಗಿ ನಾವು ಈ ಹೊಸ ಪ್ರಾಂತಗಳನ್ನು ಭಾಷೆಯ ಆಧಾರದ ಮೇಲೆ ರಚಿಸುತ್ತಿದ್ದೇವೆ. ಸಂಪೂರ್ಣವಾಗಿ ಅಕ್ಷರಶಃ ಭಾಷೆಯನ್ನೇ ನಾವು ಆಧಾರವಾಗಿ ಇಟ್ಟುಕೊಳ್ಳದೆ ಹೋದಾಗ್ಯೂ ಕೂಡ ಭಾವನೆಯಲ್ಲಿ ಮತ್ತು ಸ್ಥೂಲವಾಗಿ ಭಾಷೆಯ ಆಧಾರದ ಮೇಲೆಯೇ ಈ ದಿವಸ ಎಲ್ಲ ಪ್ರಾಂತಗಳೂ ರೂಪುಗೊಂಡಿವೆಯೆಂದು ಹೇಳಿದರೆ ಅದರಲ್ಲಿ ಯಾವ ತಪ್ಪೂ ಇಲ್ಲ, ಉತ್ಪ್ರೇಕ್ಷೆಯೂ ಇಲ್ಲ ಎಂದು ತಿಳಿದಿದ್ದೇನೆ. ಮೊದಲಿನಿಂದಲೂ ಕನ್ನಡ ರಾಜ್ಯದಲ್ಲಿ ಸೇರಬೇಕೆಂದು ನಾನಾ ವಿಧವಾಗಿ ಅಪೇಕ್ಷೆಪಟ್ಟಿರತಕ್ಕ ಕನ್ನಡ-ಭಾಗಗಳನ್ನು ಈ ಮಸೂದೆಯಲ್ಲಿ ಕೈಬಿಟ್ಟಿರುವುದು ನ್ಯಾಯವಾದುದಲ್ಲ. ಆದ್ದರಿಂದ ಅಂತಹ ಪ್ರದೇಶಗಳನ್ನು ಈ ಮಸೂದೆಯಲ್ಲಿ ಅಡಕಮಾಡಿ ಮುಂದೆ ಅಸ್ತಿತ್ವಕ್ಕೆ ಬರತಕ್ಕ ಕರ್ಣಾಟಕ ರಾಜ್ಯದಲ್ಲಿ ಆ ಪ್ರದೇಶಗಳನ್ನು ಸೇರಿಸಿಕೊಳ್ಳಬೇಕು. ನನಗೆ ಯಾವೊಂದು ಅನುಮಾನವೂ ಇಲ್ಲದಿರುವ ಕೆಲವು ಕನ್ನಡ ಪ್ರದೇಶಗಳ ಉದಾಹರಣೆಯನ್ನು ಇಲ್ಲಿ ಹೇಳುತ್ತೇನೆ. ಇಂದು ಕಾಸರಗೋಡಿನಲ್ಲಿ ಚಂದ್ರಗಿರಿ ನದಿಯ ಪಶ್ಚಿಮಭಾಗಕ್ಕೆ ಬರುವ ಪ್ರದೇಶ, ದಕ್ಷಿಣ ಕನ್ನಡಕ್ಕೆ ಹತ್ತಿಕೊಂಡಿರುವ ಭಾಗ, ಉತ್ತರ ಕನ್ನಡ ಪ್ರದೇಶಕ್ಕೆ ಸೇರುವ ಭಾಗ, ತಾಳವಾಡಿ ಫಿರ್ಕಾ, ಹೊಸೂರು, ನೀಲಗಿರಿ ಮುಂತಾದ ಕಡೆ ಇರುವ ಕನ್ನಡ ಪ್ರದೇಶಗಳು ಈ ರಾಜ್ಯಕ್ಕೆ ಸೇರಬೇಕಾಗಿವೆ. ಮತ್ತೊಂದು ಎದ್ದು ಕಾಣತಕ್ಕ ಕನ್ನಡ ಭಾಗವಾದ ಮಡಕಸಿರಾ, ಅದಕ್ಕೆ ಒಂದು ಎನ್‌ಕ್ಲೇವ್ ರೀತಿಯಲ್ಲಿರುವ ಪ್ರದೇಶಗಳು ಇವೆ. ಅವನ್ನೂ ಕೂಡ ಕನ್ನಡ ರಾಜ್ಯದಲ್ಲೇ ಸೇರಿಸಬೇಕು. ಹೀಗೆ ಕೆಲವು ಕನ್ನಡ ದೇಶಕ್ಕೆ ಸೇರಬೇಕಾದ ರಾಜ್ಯಗಳು ಈ ದಿವಸ ಸೇರದಿರುವುದರಿಂದ ಅಷ್ಟರಮಟ್ಟಿಗೆ ಅದು ಅಪೂರ್ಣವಾಗಿದೆಯೆಂದು ಹೇಳಬೇಕಾಗಿದೆ.

ಇನ್ನೊಂದು ಅಂಶ ಹೆಸರಿನ ವಿಷಯದಲ್ಲಿ ಬಂದಿರತಕ್ಕ ಒಂದು ವಿವಾದಕ್ಕೆ ಸಂಬಂಧಪಟ್ಟಿದೆ. ಮೈಸೂರು ಹಾಗೆಯೇ ಉಳಿಯಬೇಕು, ಅದರಿಂದ ನಮಗೆ ಒಳಿತಾಗುತ್ತದೆ, ಆದ್ದರಿಂದಲೇ ಅದನ್ನು ನಾವು ಕೇಳತಕ್ಕದ್ದು, ಮೈಸೂರೇ ಬೇರೆಯಾಗಬೇಕು, ಮೈಸೂರಿನ ಹೆಸರು ಹೋಗಬಾರದು ಎಂದು ಬಹಳವಾಗಿ ಮೈಸೂರಿನ ಅಭಿಮಾನದಿಂದ ಮಾತನಾಡಿದ್ದಾರೆ.

4 P.M.

S. R. C. ವರದಿಯಲ್ಲಿ ಹೇಳಿದ್ದ ಪ್ರಕಾರ ಮುಂದೆ ಇಲ್ಲಿ ರಚನೆಯಾಗಿರತಕ್ಕ ಒಂದು ಹೊಸ ಪ್ರಾಂತ್ಯಕ್ಕೆ ಕರ್ಣಾಟಕ ಎಂದು ಹೆಸರಿಡಬೇಕೆಂದಿತ್ತು. ಆದರೆ ಈ ರೀತಿ ಒಂದು ಹೆಸರನ್ನಿಟ್ಟರೆ ಮೈಸೂರಿನಲ್ಲಿ ಒಂದು ದೊಡ್ಡ ಚಳವಳಿಯೇ ಪ್ರಾರಂಭವಾಗುತ್ತದೆ, ಅದನ್ನು ತಡೆಗಟ್ಟಬೇಕೆಂಬ ಪರಿಣಾಮಕ್ಕಾಗಿ ಈಗ ಆ ಹೊಸ ರಾಜ್ಯಕ್ಕೂ ಕೂಡ ಈ ಮೈಸೂರೆಂಬ ಹೆಸರೇ ಇರಲಿ ಎಂದು ಇದನ್ನು ಕೊಡಲಾಗಿದೆ. ಆದರೆ ಕೆಲವರು ಈ ಹೆಸರಿನಲ್ಲೇನಿದೆ ಎಂದು ಹೇಳುತ್ತಿದ್ದಾರೆ. ಇದರ ಹಾಗೆ ಯಾರು ಈ ಹೆಸರಿನಲ್ಲೇನಿದೆ ಎಂದು ಹೇಳುತ್ತಿದ್ದಾರೋ ಅಂಥವರು ಈ ಹೆಸರೇ ಇರಲಿ ಎಂದು ಹೇಳುವುದಕ್ಕೆ ಬದಲಾಗಿ, ನೂತನ ಪ್ರಾಂತ್ಯಕ್ಕೆ ಮೈಸೂರೆಂದು ಕರೆಯುವುದಕ್ಕೆ ಬದಲಾಗಿ—ಕರ್ಣಾಟಕ ಎಂದು ಹೆಸರಿಡುವುದಕ್ಕೆ ಅವರೇಕೆ ಒಪ್ಪುತ್ತಿಲ್ಲವೋ ಅದು ನನಗೆ ಅರ್ಥವಾಗುತ್ತಿಲ್ಲ. ಆದರೆ ಹೊರಗಡೆಯಿಂದ ಬರತಕ್ಕಂಥ ಜನರಿಗೆ ಈ ರೀತಿ ಮಾಡಿದ್ದರಿಂದ ಅವರಿಗೊಂದು ಅನುಮಾನಸ್ಸು ಉಂಟಾಗಿ ಅವರಿಗೆ ಮನಸ್ಸಿನಲ್ಲಿ ಒಂದು ಕಸಿವಿಸಿಯಾಗಿರುತ್ತದೆ. ಯಾರು ಈ ಹೊಸ ರಾಜ್ಯ ನಿರ್ಮಾಣದ ಬಗ್ಗೆ ತಮ್ಮ ಪೂರ್ಣ ವಿರೋಧವನ್ನು ಸೂಚಿಸಿದ್ದರೋ, ಅವರು ಮಾತ್ರ ಈಗ ಈ ಹೊಸ ರಾಜ್ಯಕ್ಕೆ ಮೈಸೂರೆಂದು ಹೆಸರಿಡಲು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಯಾವ ಅಭಿಪ್ರಾಯವೇನೇ ಇರಲಿ ಮುಂದೆ ರಚಿತವಾಗಲಿರುವ ನೂತನ ಕನ್ನಡ ಪ್ರಾಂತ್ಯಕ್ಕೆ 'ಕರ್ಣಾಟಕ' ಎಂದು ಹೆಸರಿಡತಕ್ಕದ್ದೇ ಸರಿಯೆಂದು ಎನ್ನುವುದು ನನ್ನ ಖಚಿತವಾದಂಥ ಅಭಿಪ್ರಾಯವಾಗಿದೆ. ಆದರೆ ಹೀಗೆ ಮುಂದೆ ನಿರ್ಮಾಣವಾಗಲಿರುವ ಒಂದು ಹೊಸ ರಾಜ್ಯಕ್ಕೆ 'ಮೈಸೂರು' ಎಂದು ಹೆಸರಿಡತಕ್ಕದ್ದರಿಂದಲೇ ಈ ಮೈಸೂರಿನ ಕೆಲವು ಜನರಿಗೆ ಬಹಳ ಸಂತೋಷವನ್ನು ಉಂಟುಮಾಡತಕ್ಕದ್ದಾಗಿದೆ ಎಂದು ಹೇಳುವ ಪಕ್ಷಕ್ಕೆ ನಾನು ಈ ಹೆಸರಿನ ಬಗ್ಗೆ ಅಂಥ ಒಂದು ಚಳವಳಿಯನ್ನಾಗಲಿ ಅಥವಾ ಹೋರಾಟವನ್ನಾಗಲಿ ನಡೆಸತಕ್ಕ ಪ್ರಯತ್ನಕ್ಕೆ ಹೋಗುವುದಿಲ್ಲ.

ಸ್ವಾಮಿ, ಇನ್ನು ಈ ಪ್ರದೇಶಗಳು ಮತ್ತು ಪ್ರದೇಶ ಪರಿಷತ್ತುಗಳ ವಿಷಯ ಬೇರೆ ಬಂದಿದೆ. ಆದರೆ ಈ ವಿಷಯ, ನನಗೆ ಗೊತ್ತಿರುವ ಹಾಗೆ, ಇದನ್ನು ಮೊಟ್ಟಮೊದಲನೆಯದಾಗಿ ವೇದಿಕೆಯ ಮೇಲೆ ನಿಂತು ಇಂಡಿಯಾ ದೇಶದಲ್ಲಿ ಮಾತನಾಡಿದವರೆಂದರೆ ಶ್ರೀ ಲೋಹಿಯಾರವರೆಂದು ತಿಳಿದಿದ್ದೇನೆ. ಅವರು ಒಂದು ಹೊಸ ಪಾರ್ಟಿಯನ್ನು ರಚನೆ ಮಾಡುವಾಗ ಈ ಇಂಡಿಯಾ ದೇಶವನ್ನು ಐದು ದೊಡ್ಡ ಪ್ರಾಂತ್ಯಗಳನ್ನಾಗಿ ಮಾಡಬೇಕೆಂದು ಹೇಳಿದ್ದ ಸಂದರ್ಭದಲ್ಲಿ ಈ ಜೋನಲ್ ಕೌನ್ಸಿಲ್‌ಗಳ ವಿಷಯವನ್ನೂ ಚರ್ಚೆ ಮಾಡಿ ಎಂದು ಹೇಳಿದ್ದರು. ಆಗಲೇ ಈ ದಕ್ಷಿಣ ಪ್ರದೇಶ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಪೂರ್ವ ಮತ್ತು ಪಶ್ಚಿಮ ಪ್ರದೇಶಗಳ ವಿಚಾರ ಈಚೆಗೆ

(ಶ್ರೀ ಎಸ್. ಗೋಪಾಲಗೌಡ.)

ಬಂದಿದ್ದು. ಈ ಹೊಸ ರಾಜ್ಯಗಳ ಅನುಕೂಲ ಪ್ರತಿಕೂಲಗಳನ್ನು ವಿಮರ್ಶೆ ಮಾಡಿ ಎಂದು ಹೇಳಿದ್ದರು. ಇಷ್ಟೆಲ್ಲಾ ಆದನಂತರ ಪಂಡಿತ ನೆಹರೂಅವರು ಈಗ ಹೇಳಿದ್ದಾರೆ. We are not going to take credit for ourselves. ಹೀಗೆ ಈ ವಿಚಾರವನ್ನು ಮೊದಲು ಯಾರು ವೇದಿಕೆಯ ಮೇಲೆ ನಿಂತು ಹೇಳಿದ್ದಾರೋ ಅವರಿಗಾಗಲಿ ಅಥವಾ ನೆಹರೂಅವರಿಗಾಗಲಿ ಈ ಜೋನಲ್ ಕೌನ್ಸಿಲ್ಸ್‌ಗಳೆಂದರೇನು ಎನ್ನುವುದು ಅವರಿಗೇ ಅಷ್ಟು ಖಚಿತವಾಗಿ ಅರ್ಥವಾಗಿರಲಿಲ್ಲವೆಂದು ಕಂಡುಬರುತ್ತದೆ. ಅದಕ್ಕೆ ಕಾರಣ ಅವರು ಈ ವಿಚಾರವನ್ನು ಮೊದಲು ಹೊರಪಡಿಸಿದಾಗ ಇದನ್ನು ಬಹಳ ವೇಗ್ ಆಗಿ ಹೇಳಿದ್ದರು. ಇದರ ರೂಪು ರೇಖೆಗಳೇನು, ಇದರ ಲಕ್ಷಣ ಹೇಗಿರಬೇಕು, ಇದರ ಕರ್ತವ್ಯವೇನು ಎಂಬತಕ್ಕ ವಿಚಾರಗಳೊಂದೂ ಗೊತ್ತಿರಲಿಲ್ಲ. ಈ ಬಗ್ಗೆ ಅನೇಕರು ಅನೇಕ ರೀತಿ ಹೇಳುವುದಕ್ಕೆ ಪ್ರಾರಂಭಿಸಿದರು. ಕೆಲವರು ಈ ಜೋನಲ್ ಕೌನ್ಸಿಲ್‌ಗಳೆಂದರೆ ಹೆಚ್ಚು ಕಡಮೆ ಈಗಿರತಕ್ಕ ಲೆಜಿಸ್ಲೇಟಿವ್ ಕೌನ್ಸಿಲ್‌ಗಳಿದ್ದ ಹಾಗೆ ಇರಬಹುದೆಂದು ಹೇಳುತ್ತಿದ್ದರು. ಆದರೆ ಹೀಗೆ ಇದೊಂದು ಬಹಳ ವೇಗ್ ಆಗಿ ಹುಟ್ಟಿದಂಥ ವಿಚಾರವೇ ಕಡೆ ಕಡೆಗೆ ಬರುತ್ತಾ ಎಲ್ಲರಲ್ಲೂ ಈ ಒಂದು ಭಾವನೆಯೇ ಗಟ್ಟಿಯಾಗಿ ನಿಲ್ಲುವುದಕ್ಕೆ ಪ್ರಾರಂಭವಾಯಿತು. ಕಡೆಗೆ ಈ ಜೋನಲ್ ಕೌನ್ಸಿಲ್ ಎಂದರೆ ಇಡೀ ದಕ್ಷಿಣ ಭಾಗಕ್ಕೆಲ್ಲಾ ಒಂದೇ ರಾಜ್ಯವಾಗಿ, ಅಲ್ಲಿ ಒಂದೇ ಶಾಸನ ಸಭೆ, ಅದಕ್ಕೆಲ್ಲಾ ಒಂದೇ ಮಂತ್ರಿಮಂಡಲ ಆಗಬೇಕೆಂದಿರುತ್ತದೆ ಎಂಬ ಅಭಿಪ್ರಾಯಗಳು ಹೊರಪಟ್ಟವು. ಆದರೆ ಇಂಥ ಒಂದು ಅಭಿಪ್ರಾಯವನ್ನು ಯಾರು ಬೆಳೆಸಿ, ಪೋಷಿಸಿ, ಸಲಹಿಕೊಂಡು ಬಂದಿದ್ದರೋ ಅಂಥವರ ಪ್ರಾಂತ್ಯಗಳಲ್ಲೇ ಏನೊಂದು ವಾತಾವರಣ ಮೂಡಿತು, ಅಲ್ಲಿ ಏನೇನು ನಡೆದುಹೋಯಿತು ಎನ್ನುವುದಕ್ಕೆ ಉದಾಹರಣೆಯಾಗಿ ಬೆಂಗಾಲ್ ಮತ್ತು ಬಿಹಾರ್‌ಗಳ ಸೇರುವಿಕೆಯಲ್ಲಿ ಅವರೇನು ಒಂದು ಆಶ್ವಾಸನ ಜನರಿಗೆ ಕೊಟ್ಟಿದ್ದರೋ ಅದು ಕೈಗೂಡಲಿಲ್ಲ. ಅದಕ್ಕೆ ವಿರುದ್ಧವಾಗಿ ಏನೇನು ಅಲ್ಲಿ ಪ್ರತಿಕ್ರಿಯೆಗಳುಂಟಾದವು ಎನ್ನುವುದು ಎಲ್ಲರಿಗೂ ತಿಳಿದೇ ಇದೆ. ಆದರೆ ಹೀಗೆ ಅದರ ಭವಿಷ್ಯವನ್ನು ಇನ್ನೂ ಸರಿಯಾಗಿ ಕಾಣದೆ ಇರುವಾಗಲೇ ಈ ಅಭಿಪ್ರಾಯ ಒಂದು ಅಸ್ತಿತ್ವಕ್ಕೆ ಬಂತು. ಆ ದಿವಸ ಅವರು ಇದನ್ನು ಯಾವರೀತಿ ಮಾಡಬೇಕೆಂದಿದ್ದಾರೆಂದು ಕೇಳಿದರೆ ಯಾರೂ ಸಹ ಹೀಗೆಯೇ ಮಾಡುತ್ತಾರೆ ಎಂದು ಸರಿಯಾಗಿ ಹೇಳುವ ಸ್ಥಿತಿಯಲ್ಲೇ ಇಲ್ಲ. ಈ ವಿಚಾರಗಳೇ ಒಬ್ಬರಿಗೂ ಸರಿಯಾಗಿ ಗೊತ್ತಿಲ್ಲ. ಹೀಗೆ ಒಂದು ದೊಡ್ಡಬಹು ಭಾಷಾ ಪ್ರದೇಶದ ರಚನೆಯನ್ನೇನೋ ಮಾಡಬಹುದು. ಆದರೆ ಮುಂದೆ ಅಲ್ಲಿ ಯಾವ ಕೆಲಸಗಳಾಗಬೇಕಾಗಿದ್ದರೂ ಬಹಳ ಕಷ್ಟವಾಗುತ್ತದೆ. ಒಂದು ಭಾಷೆಯಿರತಕ್ಕ ಕಡೆಯಲ್ಲೇ ಈ ರಾಜ್ಯಭಾರ ನಡೆಸುವುದಕ್ಕೆ ವಿಶೇಷ ಕಷ್ಟಗಳಿರುವಾಗ ಇನ್ನು ಆ ಮರಾಠಿ, ತಮಿಳು, ತೆಲುಗು, ಮಲೆಯಾಳಿ ಭಾಷೆಗಳ ಜನಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ಆಡಳಿತ ನಡೆಸೋಣ ಎಂದರೆ—ಒಬ್ಬರ ಮಾತು—ಒಬ್ಬರ ಭಾಷೆ ಇನ್ನೊಬ್ಬರಿಗೆ ಅರ್ಥವಾಗುವುದಿಲ್ಲ. ನಾಳೆ ಇವರು ಚುನಾವಣಾ ಪ್ರಚಾರ ನಡೆಸಬೇಕಾದರೆ ಜನರಿಗೆ ತಿಳಿಯದ ಭಾಷೆಯಲ್ಲಿ ಪ್ರಚಾರ ನಡೆಸಬೇಕಾಗುತ್ತದೆ. ಅಷ್ಟೇ ಅಲ್ಲದೆ ದಿನವಹಿ ನಡೆಸಬೇಕಾಗಿರುವ ಕಾಗದಪತ್ರಗಳ ವ್ಯವಹಾರ ಕೂಡ ಒಂದು ಸಹಕಾರ ಭಾವನೆಯಿಂದ ನಡೆಸಲು ಕಷ್ಟವಾಗುತ್ತದೆ. ಆದುದರಿಂದ ಈ ರೀತಿಯಾಗಿ ಬಹು ಭಾಷಾ ಇಲ್ಲವೇ ದ್ವಿಭಾಷೆಗಳನ್ನೊಳಗೊಂಡ ರಾಜ್ಯಗಳನ್ನು ಒಟ್ಟುಗೂಡಿಸುವಂತೆ ದೇಶವನ್ನು ಪುನರ್ವಿಂಗಡಣೆ ಮಾಡುವುದು ಖಂಡಿತ ಸರಿಯಾದದ್ದಲ್ಲ. ನಾವು ಇದೇ ಅಸೆಂಬ್ಲಿಯಲ್ಲಿ ಹಿಂದೆ ಪ್ರಾಂತಗಳ ಪುನರ್ವಿಂಗಡಣೆಯ ಬಗ್ಗೆ ಚರ್ಚೆ ನಡೆಸುತ್ತಿದ್ದಂಥ ಕಾಲದಲ್ಲಿ ಒಂದು ಭಾಷೆಯ ಒಂದೊಂದು ರಾಷ್ಟ್ರವಿರತಕ್ಕದ್ದು ಒಳ್ಳೆಯದೆಂದು ಒಂದು ಅಭಿಪ್ರಾಯಕ್ಕಾಗಲೇ ಬಂದಿದ್ದೇವೆ. ಮುಂದೆ ಆ ರೀತಿ ಒಂದು ಪ್ರದೇಶ ರಚನೆ ಯಾಗಬೇಕಾದರೆ ಒಂದಾನೊಂದು ಕಾಲದಲ್ಲಿ ಒಂದು ರಾಷ್ಟ್ರ—ಒಂದು ಭಾಷೆ ಎಂಬ ಭಾವನೆ ಇಲ್ಲದೆ ಇಂಗ್ಲೀಷ್ ಭಾಷೆಗೆ ಯಾವ ಒಂದು ಸ್ಥಾನಮಾನಗಳು ದೊರೆಯಲು ಅವಕಾಶವಾಗಿತ್ತೋ ಆ ರೀತಿ ಮುಂದೆ ಎಲ್ಲಾ ಜನಗಳಲ್ಲೂ ಒಂದೇ ರಾಷ್ಟ್ರ ಭಾವನೆ ಮೂಡಿ ಬಂದಮೇಲೆ ಹಾಗೂ ಜನರಲ್ಲಿ ಸ್ನೇಹಸೌಹಾರ್ದ ಭಾವನೆಗಳು ಬೆಳೆದುಕೊಂಡು ಬಂದಿರತಕ್ಕದ್ದು ಕಂಡು ಬಂದಮೇಲೆ, ಹಾಗೂ ಜನರು ದ್ವಿಭಾಷೆಗಳಲ್ಲಿ ಪರಿಣತೆ ಹೊಂದಿದ ಮೇಲೆ, ಬೇಕಾದರೆ ದ್ವಿಭಾಷಾ ರಾಜ್ಯಗಳ ರಚನೆಯನ್ನು ಆಲೋಚನೆಗೆ ತೆಗೆದುಕೊಳ್ಳಬಹುದು. ಆದರೆ ಈಗ ಸಧ್ಯಕ್ಕೆ ನಾನು ಈ ಪ್ರದೇಶಗಳು ಮತ್ತು ಪ್ರಾದೇಶಿಕ ಪರಿಷತ್ತುಗಳನ್ನು ಸಂಪೂರ್ಣವಾಗಿ ವಿರೋಧಿಸತಕ್ಕವನಾಗಿದ್ದೇನೆ. ಆದರೆ ಈ ದಿವಸ ಈ ಜೋನಲ್ ಕೌನ್ಸಿಲ್ ಎಂಬ ಸಭೆಯಲ್ಲಿ ಆಯಾಯಾ ಪ್ರಾಂತಕ್ಕೆ ಸಂಬಂಧಪಟ್ಟ ಹಾಗೆ ಕೇಂದ್ರದ ಇಬ್ಬರು ಮಂತ್ರಿಗಳೂ ಮತ್ತು ಆಯಾ ಪ್ರದೇಶದ ಮಂತ್ರಿಮಂಡಲದಲ್ಲಿರತಕ್ಕ ಯಾರಾದರೂ ಇಬ್ಬರು ಮಂತ್ರಿಗಳೂ ಇರಬೇಕೆಂದು ಹೇಳಲಾಗಿದೆ. ಹೀಗೆ ಈ ಜನರನ್ನು ಒಳಗೊಂಡ ಈ ಸಮಿತಿಗೆ ಗಡಿ ನಿರ್ಧಾರದ ಪ್ರಶ್ನೆಯನ್ನು ನಿರ್ವಿಕಲ್ಪ ಮನಸ್ಸಿನಿಂದ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರೆಲ್ಲರೂ ಈ ಗಡಿ ಸಂಬಂಧವಾದ ವಿಚಾರಕ್ಕೆ ಒಂದು ಪಾರ್ಟಿಯಾಗಿರುತ್ತಾರೆ. ಅವರಿಗೆ ಈ ವಿಚಾರಗಳನ್ನು ಚರ್ಚೆ ಮಾಡಿ ನ್ಯಾಯವಾದ ತೀರ್ಮಾನ ಕೈಗೊಳ್ಳಲು ಬಹಳ ಕಷ್ಟವಾಗುತ್ತದೆ.

ಆದರೆ ಇದೇ ಸಂದರ್ಭದಲ್ಲಿ ಶ್ರೀಯುತ ಕೆ. ಹನುಮಂತಯ್ಯನವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ, ಈ ಗಡಿ ಸಂಬಂಧವಾದ ಚರ್ಚೆಯನ್ನು ಈ ಸಮಿತಿಗಳಿಗೆ ವಹಿಸುವುದು ಸರಿಯಾದದ್ದಲ್ಲ, ಯಾವ ರೀತಿಯಲ್ಲೂ ವಿಹಿತವಾದದ್ದಲ್ಲ ಎಂದು ಹೇಳಿದ್ದಾರೆ. ನನ್ನ ಅಭಿಪ್ರಾಯವೂ ಕೂಡ ಹಾಗೆಯೇ ಇದೆ. ಈ ಗಡಿ ನಿರ್ಧಾರದ ವಿಷಯಗಳನ್ನು ಆ ಗಡಿ ನಿರ್ಧಾರ ಸಮಿತಿಗೆ ವಹಿಸುವುದರಿಂದ ಯಾರಿಗೂ ಯಾವ ಅಂಥ ಗಂಡಾಂತರವೂ ಆಗಲಾರದೆಂಬುದು ನನ್ನ ಖಚಿತವಾದ ಅಭಿಪ್ರಾಯ.

ಇನ್ನು ಈ ಲೆಜಿಸ್ಲೇಟಿವ್ ಕೌನ್ಸಿಲ್ ಸಭೆಯ ಬಗ್ಗೆ ಶ್ರೀ ಕೆ. ಪಟ್ಟಾಭಿರಾಮನ್ ಅವರು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ದಿವಸ ಇಂಡಿಯಾ ದೇಶದಲ್ಲಿ ಮಧ್ಯಪ್ರದೇಶವೊಂದನ್ನು ಕೈಬಿಟ್ಟರೆ ಇನ್ನುಳಿದ ಯಾವ ಭಾಗದಲ್ಲೇ ಆಗಲಿ ಲೆಜಿಸ್ಲೇಟಿವ್ ಕೌಸಿಲ್‌ಗಳು ಅಸ್ತಿತ್ವಕ್ಕೆ ಬರಲು ಅವಕಾಶವಿಲ್ಲ. ಅದಕ್ಕೆ ಕಾರಣವೇನೆಂದರೆ—ಈ ದಿವಸ ನಾವು ಮೇಲ್ಮನೆಗಳಿಗೆ ಹಣಕಾಸಿನ ಜವಾಬ್ದಾರಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಮೇಲಾಗಿ ಆ ಮನೆಗೆ ತಾನೇ ಸ್ವತಃ ಒಂದು ಬಿಲ್ಲನ್ನು ತಂದು ಅದನ್ನು ಪಾಸ್ ಮಾಡತಕ್ಕಂಥ ಅಧಿಕಾರವಿಲ್ಲ. ಯಾವ ಒಂದು ಬಿಲ್ಲಿನ ಕಡೆಯ ಒಪ್ಪಿಗೆಯೂ ಕೂಡ ಅಸೆಂಬ್ಲಿಯಿಂದಲೇ ಆಗಬೇಕಾಗಿದೆ. ಹೀಗೆ ಈ

ದಿವಸ ಅದೊಂದು ಯಾವ ಅಧಿಕಾರವೂ ಇಲ್ಲದಂಥ ಒಂದು ಬಾಡಿಯಾಗಿದೆ. ಆದರೆ ನಮ್ಮ ದೇಶದಲ್ಲಿ ಇಷ್ಟೊಂದು ಬಡತನವಿರುವಾಗ ಈ ರೀತಿ ಇಲ್ಲಿ ಎರಡು ಶಾಸನ ಸಭೆಗಳನ್ನು ಇಟ್ಟುಕೊಂಡಿರುವುದು ನ್ಯಾಯವಲ್ಲ. ಆದರೆ ದೇಶದ ನಾನಾ ಕಡೆಗಳಲ್ಲಿ ಹೀಗೆ ಬೈಕ್ಯಾಮರಲ್ ಲೆಜಿಸ್ಲೇಚರ್‌ಗಳಿವೆ. ಹೀಗೆ ಈ ಸಭೆಗಳಿರುವುದಕ್ಕೆ ಬೇರೆ ಯಾವ ಕಾರಣವೂ ಸಹ ಇರುವುದಿಲ್ಲ. ಇದು ಕೇವಲ ಒಂದು ರಾಜಕೀಯ ಕಾರಣಕ್ಕಾಗಿ ಎಂದು ಕಾಣಬರುತ್ತಿದೆ. ಕೆಲವರಿಗೆ ಈ ರಾಜಕೀಯ ವಲಯದಲ್ಲಿ ಸಂತೃಪ್ತಿ ಅಥವಾ ಸಂತೋಷಪಡಿಸಲು ಅವಕಾಶವಿಲ್ಲವೆಂದು ಹೇಳುವುದಕ್ಕೆ ಆಗದಂತೆ ಇರಲಿ ಎಂಬ ಒಂದು ಉದ್ದೇಶಕ್ಕೋಸ್ಕರವಾಗಿ ಈ ಸನ್ನಾಹಗಳನ್ನೆಲ್ಲಾ ಮಾಡಿಕೊಂಡಿದ್ದಾರೆಯೇ ವಿನಾ ಇದರಲ್ಲಿ ಮತ್ತೇನೂ ಇಲ್ಲ. ಈ ಮನೆಯೂ ಇರಲಿ, ಆ ಮನೆಯೂ ಇರಲಿ, ಈ ಮನೆಯಲ್ಲಿ ಎಷ್ಟು ಜನಕ್ಕೆ ಸೀಟ್ ಕೊಡುವುದಕ್ಕಾಗುತ್ತದೆ, ಇಲ್ಲಿ ಸಾಧ್ಯವಿಲ್ಲದೆ ಇದ್ದಾಗ ಮೇಲ್ಮನೆಯಲ್ಲಿ ಸೀಟ್ ಕೊಡೋಣ ಎನ್ನತಕ್ಕಂಥ ಒಂದೇ ಒಂದು ಉದ್ದೇಶದಿಂದ ಮೇಲ್ಮನೆಯನ್ನು ಇಟ್ಟುಕೊಳ್ಳಲಾಗಿದೆ. ಇಂಥ ಒಂದು ಮೇಲ್ಮನೆಯನ್ನು ಇಟ್ಟುಕೊಳ್ಳುವುದಕ್ಕೆ ಈ ದಿವಸ ಒಂದು ಅವಕಾಶವಿರುವುದಾದರೆ ಅದು ಮಧ್ಯಪ್ರದೇಶಕ್ಕೆ ಮಾತ್ರ ಇರುತ್ತದೆ. ಅದನ್ನು ಬಿಟ್ಟರೆ ಉಳಿದ ಯಾವ ಪ್ರದೇಶದಲ್ಲೂ ಇದಕ್ಕೆ ಅವಕಾಶ ಕಂಡುಬರುವುದಿಲ್ಲ. ಹೀಗೆ ಅವಕಾಶವಿಲ್ಲದಿರುವಂಥ ಮತ್ತು ಪ್ರಯೋಜನವಿಲ್ಲದೆ ಇರುವಂಥ ಮನೆಯನ್ನು ತೆಗೆದುಬಿಡುವುದು ಒಳ್ಳೆಯದು. ಇದಕ್ಕೆ ಸರಿಯಾಗಿ ಈಗಲೇ ಸೂಕ್ತ ತಿದ್ದುಪಡಿಯನ್ನು ಕೂಡ ರಾಜ್ಯಾಂಗದಲ್ಲಿ ಮಾಡತಕ್ಕದ್ದು ಉಚಿತವೆಂದು ಅಭಿಪ್ರಾಯಪಡುತ್ತೇನೆ.

ಇನ್ನು ಸರ್ವಿಸ್‌ಗಳ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕಾಗಿದೆ. I. P. S. ಮತ್ತು I.A.S. ಸರ್ವೀಸ್‌ಗಳು ಮತ್ತು ಇತರ ಸರ್ವೀಸುಗಳ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡುತ್ತ ಹೊರಗಡೆಯಿಂದ ಬರತಕ್ಕವರ ಮೇಲೆ ಇವರು ಒಂದು ಸವಾಲನ್ನೇ ಹಾಕಿದ್ದಾರೆ. ಏನೆಂದರೆ ಅವರು ಅವರ ಸಂಬಳದಲ್ಲಿ ಖೋತಾ ಮಾಡಿಕೊಳ್ಳಲು ಸಿದ್ಧರಾಗಿರಬೇಕಾಗುತ್ತದೆ ಎಂದು. ಈ ಹೇಳಿಕೆಯಲ್ಲಿ ಅಷ್ಟು ಬಲವಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಇದು ಮರ್ಜರ್ ಆಗತಕ್ಕ ಪ್ರದೇಶದವರಿಗೆ ಒಂದೂ ಅನಾನುಕೂಲವಾಗತಕ್ಕ ರೀತಿಯಲ್ಲಿರಬಾರದೆಂದು ಈ S.R. ಬಿಲ್ಲಿನಲ್ಲೇ ಹೇಳಿದ್ದಾರೆ.

> "Provided that the conditions of service applicable immediately before the appointed day to the case of any person who is required under this section to serve, as from that day, in connection with the affairs of any state shall not be varied to his disadvantage except with the previous approval of the Central Government."

ಈ ರೀತಿಯಾಗಿ ಹೇಳಿದ್ದಾರೆ. ಮುಖ್ಯಮಂತ್ರಿಗಳು ಹಾಗೆ ಹೇಳಿರತಕ್ಕದ್ದಾದರೂ ಏತಕ್ಕಾಗಿ ಎಂದರೆ, ನಮ್ಮ ಮೈಸೂರು ಸಂಸ್ಥಾನದಲ್ಲಿರುವ ನೌಕರರಿಗೂ ಕೂಡ ಹೊರಗಿನವರಿಗಿರುವಂತೆ ಹೆಚ್ಚಿನ ಸಂಬಳಸಾರಿಗೆಗಳನ್ನು ಕೊಡಬೇಕಾಗಿ ಬರಬಹುದೆಂಬ ಉದ್ದೇಶಕ್ಕಾಗಿ ಅವರು ಹಾಗೆ ಹೇಳಿರಬಹುದು. ಆದರೆ ಆಲ್ ಇಂಡಿಯಾ ಸರ್ವಿಸ್ಸುಗಳು ಇರಬೇಕೇ ಅಥವಾ ಬೇಡವೇ ಎಂದರೆ, ಇವು ಇರಲೇಬೇಕು. ಅದರೆ ಅವು ಈಗ ಇರತಕ್ಕ ರೀತಿಯಲ್ಲಿ ಸ್ವಲ್ಪ ತೊಡಕಿದೆ. ಹಿಂದೆ ಬ್ರಿಟಿಷ್‌ನವರ ಬ್ಯೂರಾಕ್ರೆಟಿಕ್ ಆಡಳಿತವಿದ್ದಂಥ ಕಾಲದಲ್ಲಿ ಅವರ ಆಡಳಿತವನ್ನು ಇಲ್ಲಿ ಭದ್ರಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಅದನ್ನು ರಚನೆ ಮಾಡಿದ್ದರು. ಆದರೆ ಈ ದಿವಸ ನಾವೂ ಕೂಡ ಅದೇ ಅನುಕರಣ ರೀತಿಯಲ್ಲಿ ಕೇಡರುಗಳನ್ನು ರಚನೆ ಮಾಡಬಾರದೆಂದು ಹೇಳುತ್ತೇನೆ. ಇದರಿಂದ ನೌಕರರಲ್ಲಿ ಹೆಚ್ಚು ಅಸಮಾಧಾನಗಳು ಮೂಡುವುದಕ್ಕೆ ಅವಕಾಶವಾಗುತ್ತದೆ. ಆದಕಾರಣ ಕೆಲವು ಅಧಿಕಾರಿಗಳಿಗೆ ಅವರ ಸ್ಥಾನಮಾನಗಳನ್ನು ಮಾತ್ರ ಭದ್ರಪಡಿಸಿ, ಇತರರ ಸ್ಥಾನಮಾನಗಳ ಬಗ್ಗೆ ಹಾಗೆ ಕೈಬಿಡುವುದು ಸರಿಯಲ್ಲ. ಇದರಿಂದ ನೌಕರರಲ್ಲೇ ಬಹಳ ಅಸಮಾಧಾನಗಳು ಉಂಟಾಗಿ ಅವರು ಉತ್ಸಾಹದಿಂದ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ನಾವಾಗಿಯೇ ಈ ಒಂದು ಅಡ್ಡಿ ಅಡಚಣೆಯನ್ನು ತಂದೊಡ್ಡಿದ ಹಾಗೆ ಆಗುತ್ತದೆ. ಅದಕ್ಕಾಗಿ ಈ ವಿಷಯವನ್ನು ಪುನಃ ಮತ್ತೊಮ್ಮೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇದೂ ಅಲ್ಲದೆ ಒಂದು ಪ್ರಾಂತ್ಯದಲ್ಲಿ ಒಂದೇ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ನೌಕರರಿಗೆಲ್ಲಾ ಒಂದು ವಿಧವಾದ ಮತ್ತು ಒಂದೇ ರೀತಿಯಾಗಿರತಕ್ಕಂಥ ಸಂಬಳ ಸಾರಿಗೆಗಳ ಗ್ರೇಡ್ ಇಲ್ಲದಿದ್ದರೆ ಅವರೆಲ್ಲರೂ ತುಂಬ ಅಸಮಾಧಾನ ಹೊಂದಲು ಅವಕಾಶವಾಗುತ್ತದೆ. ಒಂದು ಪ್ರಾಂತ್ಯದಲ್ಲಿ ಒಂದೇ ಇಲಾಖೆಯಲ್ಲಿ ನಾಲ್ಕಾರು ರೀತಿಯ ಸಂಬಳಸಾರಿಗೆಗಳು ಒಂದೇ ದರ್ಜೆಯ ನೌಕರರಿಗೆ ಇರುವುದು ಖಂಡಿತ ಸರಿಯಾದದ್ದಲ್ಲ. ಆದುದರಿಂದ ಸರ್ಕಾರದವರು ಇದೇ ಸಂದರ್ಭದಲ್ಲಿ ಈ ವಿಚಾರವನ್ನು ಕೂಡ ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡತಕ್ಕದ್ದು ಅತ್ಯಗತ್ಯವೆಂದು ನಾನು ಅಭಿಪ್ರಾಯಪಡತಕ್ಕವನಾಗಿದ್ದೇನೆ.

ಇನ್ನು ಈ ಅಧಿಕಾರ ವಿಕೇಂದ್ರೀಕರಣದ ವಿಷಯ. ಇದು ಬಹಳ ಮುಖ್ಯವಾದ ವಿಷಯ. ಆದರೆ ನಾವು ಈ ದಿವಸ ಈ ಪ್ರಾಂತ್ಯಗಳ ಪುನರ್ವಿಂಗಡಣೆಯನ್ನು ಮಾಡಬೇಕೆಂದು ಏಕೆ ಹೇಳುತ್ತಿದ್ದೇವೆಂದರೆ—ಇದರಲ್ಲಿ ಒಂದು ದೊಡ್ಡ ಉದ್ದೇಶವೇನು ಅಡಗಿದೆಯೆಂದರೆ—ಆಯಾ ಪ್ರದೇಶದ ಜನರು ಅವರವರ ಅನುಕೂಲಕ್ಕೆ ತಕ್ಕಹಾಗೆ ಆಡಳಿತ ನಡೆಸುವುದಕ್ಕೂ ಮತ್ತು ಅವರ ಆಡಳಿತವನ್ನು ಒಂದು ಆರ್ಥಿಕ ಸುಭದ್ರತೆಯ ಮೇಲೆ ಅವರು ನಡೆಸಿಕೊಂಡು ಹೋಗುವುದಕ್ಕೂ ಅವರಿಗೆ ಅನುಕೂಲವಿರುವಂಥ ಒಂದೊಂದು ರಾಜ್ಯವನ್ನು ಏರ್ಪಾಡು ಮಾಡಬೇಕೆಂಬುದೇ ಇದರ ಮುಖ್ಯ ಉದ್ದೇಶ. ಒಟ್ಟಿನಲ್ಲಿ ದೇಶದಲ್ಲೆಲ್ಲಾ ಒಂದು ಸಮಗ್ರವಾದಂಥ ಭದ್ರತೆ-ಐಕಮತ್ಯ ಮತ್ತು ದೇಶ ಬೆಳೆಯುವುದಕ್ಕೆ ಒಂದು ಸದವಕಾಶ ಇರುವಂತೆ ಮಾಡತಕ್ಕ ಹಾದಿಯಲ್ಲಿ ಹೆಚ್ಚು ಸಾಧಕ ಬಾಧಕಗಳು ಇಲ್ಲದ ಹಾಗೆ ರಾಜ್ಯಗಳ ನಿರ್ಮಾಣ ಮಾಡಬೇಕೆಂಬುದೇ ಸರ್ಕಾರದವರ ಮುಖ್ಯೋದ್ದೇಶ.

ಈ ಪ್ರಜಾಪ್ರಭುತ್ವ ಸಾರ್ಥಕವಾಗಬೇಕಾದರೆ, ಹೆಚ್ಚು ಹೆಚ್ಚಾಗಿ ಅಧಿಕಾರದ, ಹಣದ ಮತ್ತು ರಾಜಕೀಯ ಸತ್ತೆಯ ವಿಕೇಂದ್ರೀಕರಣವಾಗಬೇಕು. ಆದರೆ ಈ ದಿನ ಯೋಜನೆಗಳನ್ನು ರಚನೆಮಾಡಿ ಕೈಕೊಳ್ಳುವ ಒಂದು ನೆಪದಲ್ಲಿ ಮತ್ತು ಭಾರತದ ಭದ್ರತೆಯ ನೆಪದಲ್ಲಿ ಹೆಚ್ಚು ಹೆಚ್ಚಾಗಿ ಅಧಿಕಾರಗಳು ಕೇಂದ್ರದ ಕೈ ಸೇರುತ್ತಾ ಇವೆ. ಹಣಕಾಸಿನ ವಿಷಯದಲ್ಲಿ ಮತ್ತು

(ಶ್ರೀ ಎಸ್. ಗೋಪಾಲಗೌಡ.)

ರಾಜಕೀಯ ಸತ್ತಾತ್ಮಕ ಅಧಿಕಾರದ ವಿಚಾರದಲ್ಲಿ ಕೇಂದ್ರೀಕರಣ ಹೆಚ್ಚು ಹೆಚ್ಚಾಗಿ ಆಗುತ್ತಾ ಇದೆ. ಅದು ದಿನ ದಿನಕ್ಕೆ ಹೆಚ್ಚುತ್ತಾ ಇದೆ. ಇಂಥ ಒಂದು ಮನೋಭಾವ ಅಥವಾ ಇಂಥ ಒಂದು ರಾಜಕೀಯ ಕಾರ್ಯಕ್ರಮಗಳು ದೇಶದ ಶಕ್ತಿಯನ್ನು ಕುಂದು ಮಾಡುವುದಲ್ಲದೆ ಪ್ರಜಾ ಪ್ರಭುತ್ವವನ್ನೇ ಅಲ್ಲಗಳೆಯತಕ್ಕ ಕಾರ್ಯಗಳಾಗಿವೆ. ನಾವು ಸ್ವರಾಜ್ಯವನ್ನು, ಸರ್ವೋದಯದ ರಾಜ್ಯವನ್ನು ಮತ್ತು ಕೋ-ಆಪರೇಟಿವ್ ಕಾಮನ್‌ವೆಲ್ತ್ ಅನ್ನುವ ದೊಡ್ಡ ದೊಡ್ಡ ಉದ್ದೇಶವನ್ನು ಮತ್ತು ಸಮಾಜ ವಾದದ ಮಾದರಿಯ ಸಮಾಜವನ್ನು ಗುರಿಯಾಗಿಟ್ಟುಕೊಂಡಿದ್ದೇವೆ ಎಂದು ಸಾರುತ್ತಾ ಇರುವ ಜನ ಈ ದಿವಸ ಕ್ಷಣಕ್ಷಣದಲ್ಲೂ ಪ್ರಜಾಪ್ರಭುತ್ವಕ್ಕೆ ಮತ್ತು ಸಾಮಾನ್ಯ ಮನುಷ್ಯನಿಗೆ ದೊರೆಯಬಹುದಾದಂಥ, ಸಾಮಾನ್ಯ ಮನುಷ್ಯ ದಿನನಿತ್ಯದಲ್ಲಿ ಉಪಯೋಗಿಸಿಕೊಳ್ಳಬಹುದಾದಂಥ ಅಧಿಕಾರವನ್ನು ನಾವು ಕಿತ್ತುಕೊಳ್ಳುತ್ತಾ ಇದ್ದೇವೆ. ಒಂದು ಪಂಚಾಯಿತಿ ಆಗಲಿ, ಡಿಸ್ಟ್ರಿಕ್ಟ್ ಬೋರ್ಡಿಗಾಗಲಿ ಆಗಲಿ, ಇನ್ನಾವುದೇ ಒಂದು ಸಂಸ್ಥೆಗಾಗಲಿ ನಾಮಕರಣ ಮಾಡಿರತಕ್ಕ ಒಂದು ವೈಖರಿಯನ್ನು ನೋಡಿದರೂ ಕೂಡ ಇವೊತ್ತು ಆ ಮನೋಭಾವ ಎದ್ದು ಕಾಣುತ್ತಾ ಇದೆ. ಎಲ್ಲಿ ಜನತೆ ಅಧಿಕಾರವನ್ನು ತಾವೇ ನಿರ್ವಹಿಸಬಲ್ಲರೋ, ಎಲ್ಲಿ ತಮ್ಮ ಅಭಿವೃದ್ಧಿಯನ್ನು ತಾವೇ ಸಾಧಿಸಿಕೊಳ್ಳಬಲ್ಲರೋ ಅಲ್ಲಿ ಇವೊತ್ತು ಪ್ರಾಂತೀಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಕೈ ಹಾಕಿ ಅದನ್ನು ತನ್ನ ಕಡೆಗೆ ಎಳೆದುಕೊಳ್ಳತಕ್ಕಂಥ ಒಂದು ಮನೋಭಾವ ಎದ್ದುಕಾಣುತ್ತಾ ಇದೆ. ಆ ಮನೋಭಾವ ಸಂಪೂರ್ಣವಾಗಿ ಹೋಗಬೇಕು. ಜನತೆಯನ್ನು ನಂಬದೇ ಇರತಕ್ಕ ಸರ್ಕಾರಗಳು ಯಾವ ರೀತಿ ಜನತೆಗೆ ನೀತಿಯನ್ನು ಹೇಳಲು ಅರ್ಹತೆಯನ್ನು ಪಡೆಯುತ್ತವೆ ಎಂಬ ಒಂದು ದೊಡ್ಡ ಪ್ರಶ್ನೆ ಈ ಸಂದರ್ಭದಲ್ಲಿ ಉದ್ಭವಿಸುತ್ತದೆ. ಆದ್ದರಿಂದ ಇವೊತ್ತು ಹೆಚ್ಚು ಹೆಚ್ಚಾಗಿ ಗ್ರಾಮ ಪಂಚಾಯಿತಿಗಳು, ಜಿಲ್ಲಾ ಬೋರ್ಡುಗಳು, ಸಮಿತಿಗಳು ಮತ್ತು ಪ್ರಾಂತೀಯ ಸರ್ಕಾರಗಳು ದೃಢವಾಗಿ, ಅನಂತರದಲ್ಲಿ ಕೇಂದ್ರ ಸರ್ಕಾರ ಅವುಗಳೊಡನೆ ಕೋ-ಆರ್ಡಿನೇಟ್ ಮಾಡಿ, ಈ ಎಲ್ಲ ಕೆಲಸಗಳು ಸುಸೂತ್ರವಾಗಿ ನಡೆಯುವಂತೆ ಏರ್ಪಾಡು ಮಾಡಬೇಕು. ಪರದೇಶದ ಧಾಳಿಯನ್ನು ತಡೆಯುವುದಕ್ಕೆ ಡಿಫೆನ್ಸ್ ಇಲಾಖೆಯನ್ನೂ ಮತ್ತು ಅದೇ ರೀತಿ ಮುಖ್ಯವಾಗಿ ಬೇಕಾಗತಕ್ಕ ಕಮ್ಯೂನಿಕೇಷನ್ಸ್ ಇತ್ಯಾದಿಗಳನ್ನೂ ಕೇಂದ್ರ ಸರ್ಕಾರದವರು ಇಟ್ಟುಕೊಳ್ಳಬಹುದು. ಬೇರೆ ಎಲ್ಲ ಕೆಲಸಗಳನ್ನೂ ಹೆಚ್ಚು ಹೆಚ್ಚಾಗಿ ಪ್ರಾಂತ್ಯಗಳಿಗೆ ಕೊಡುವುದು ಬಹಳ ಸೂಕ್ತ ಮತ್ತು ಅದರಿಂದ ಹೆಚ್ಚು ಶೀಘ್ರವಾಗಿ ಆಯಾ ಪ್ರದೇಶಗಳು ಅಭಿವೃದ್ಧಿಯಾಗುವುದಕ್ಕೆ ಹೆಚ್ಚಿನ ಪ್ರಯೋಜನವಾಗ ತ್ತದೆ. ಆದ್ದರಿಂದ ಇದರಲ್ಲಿ ಅಡಕವಾಗಿರತಕ್ಕ ನಾಮಕರಣ ಪದ್ಧತಿಯನ್ನು ಅದು ಯಾವುದೇ ಸಭೆಗೆ ಆಗಿರಲಿ, ಸಣ್ಣ ಸಮಿತಿಗೇ ಆಗಿರಲಿ, ಅದನ್ನು ನಾವು ವಿರೋಧಮಾಡಬೇಕಾಗಿದೆ. ಅದನ್ನು ಕೈಬಿಡಬೇಕು ಮತ್ತು ಹೆಚ್ಚುಹೆಚ್ಚಾಗಿ ಪ್ರಾಂತ್ಯಗಳಿಗೆ ಆರ್ಥಿಕ ವಿಷಯದಲ್ಲಿ ಮತ್ತು ಆಡಳಿತ ವಿಷಯದಲ್ಲಿ ಅಧಿಕಾರವನ್ನು ಕೊಡುತ್ತಾ ಬರಬೇಕು. ಆಗ ಮಾತ್ರ ಈ ಆಡಳಿತೆ ಪರಿಪೂರ್ಣವಾಗುತ್ತದೆ ಮತ್ತು ಹೆಚ್ಚು ಹೆಚ್ಚು ಪರಿಪೋಷಿತವಾಗಿ ಬೆಳೆಯುವುದಕ್ಕೆ ಸಹಾಯಕವಾಗುತ್ತದೆ. ಜನತೆ ಆಗ ಸರ್ಕಾರದಲ್ಲಿ ಹೆಚ್ಚು ಹೆಚ್ಚು ಭರವಸೆಯನ್ನೂ, ನಂಬಿಕೆಯನ್ನೂ ಇಟ್ಟು ಸಹಕರಿಸುವುದಕ್ಕೆ ಅನುಕೂಲವಾಗುತ್ತದೆ. ಆಂಥ ವಿಧಿಗಳು ಈ ಮಸೂದೆಯಲ್ಲಿ ಅಡಕವಾಗುವ ರೀತಿಯಲ್ಲಿ ಈ ಕಾನೂನನ್ನು ಮಾಡಲು ನಾವು ಪ್ರಯತ್ನಪಡಬೇಕಾಗಿದೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ: ಬೌಂಡರಿ ಕಮಿಷನ್ ನೇಮಕ ಮಾಡಬೇಕು ಎನ್ನುವ ವಿಷಯ. ನಮ್ಮ ಪ್ರಾಂತ್ಯದಲ್ಲಿ ಕೆಲವು ವಿವಾದಾಸ್ಪದವಾದ ಸ್ಥಳಗಳು ಇವೆ. ಅವುಗಳನ್ನು ನೀವು ದೆಹಲಿಯಲ್ಲೋ, ಮೈಸೂರಿನಲ್ಲೋ ಕುಳಿತು ನಾಮಕರಣ ಮಾಡಿದಂಥ ಜನರು ತೀರ್ಮಾನ ಕೊಡುವುದು ಪ್ರಜಾ ಪ್ರಭುತ್ವ ಆಗುವುದಿಲ್ಲ, ಮತ್ತು ಆ ತೀರ್ಮಾನವನ್ನು ಜನತೆ ಆಹ್ವಾನಿಸಲಿ ಅಥವಾ ಒಪ್ಪಿಕೊಳ್ಳಲಿ ಎಂದು ನಿರೀಕ್ಷೆ ಮಾಡುವುದೂ ಕೂಡ ತಪ್ಪಾಗುತ್ತದೆ. ಆದ್ದರಿಂದ ಎಲ್ಲಿ ಸಂಪೂರ್ಣ ಸಂದೇಹ ಮತ್ತು ವಿವಾದ ಉಂಟಾಗಿತ್ತೋ ಅಂಥ ಪ್ರದೇಶದಲ್ಲಿ ಅಲ್ಲಿನವರನ್ನೇ ಒಳಗೊಂಡ ಒಂದು ಬೌಂಡರಿ ಕಮಿಷನ್ ರಚನೆಮಾಡಿ ಆ ಪ್ರದೇಶ ಒಂದು ತೀರ್ಮಾನವನ್ನು ಒಪ್ಪಿಸುವ ಕಾಲದಲ್ಲಿ ಅವರ ನಿರ್ಣಯಗಳನ್ನು ಕೊಡಬೇಕು. ಅವರ ನಿರ್ಣಯಗಳನ್ನು ನೋಡುತ್ತಲೇ ನಿಜವಾಗಿಯೂ ಒಪ್ಪಿಕೊಳ್ಳುವ ಒಂದು ತೀರ್ಮಾನವನ್ನು ನಾವು ತೆಗೆದುಕೊಳ್ಳಬೇಕು.

ಬಹುಶಃ ಈ ವಿಷಯದಲ್ಲಿ ಪುನಃ ನಮಗೆ ಹೆಚ್ಚಿನ ಅವಕಾಶ ದೊರೆಯುವುದಿಲ್ಲವೆಂದು ಕಾಣುತ್ತದೆ. ತಿದ್ದುಪಡಿಗಳ ಮೇಲೆ ಮಾತನಾಡುವಾಗ ಬಿಟ್ಟರೆ, ಬಹುಶಃ ಈಗ ಕೊನೆಯ ತೀರ್ಮಾನವನ್ನು ಕೈಕೊಳ್ಳುತ್ತಾ ಇದ್ದೇವೆ ಎಂದು ಕಾಣುತ್ತದೆ. ಈ ಸಭೆಯ ಕಾಲದಲ್ಲಿ ಈ ವಿಷಯ ಚರ್ಚೆಯಾಗಿ ಈ ರಾಜ್ಯ ಅಸ್ತಿತ್ವಕ್ಕೆ ಬರುವುದಕ್ಕೆ ನಮ್ಮ ಜವಾಬ್ದಾರಿಯನ್ನು ನಿರ್ವಹಿಸಿದ್ದೇವೆ ಎಂದು ಹೇಳಬಹುದು. ಆದರೂ ಈ ದಿನ ಒಂದು ಒಳ್ಳೆಯ ವಾತಾವರಣ ಬಂದಿದೆ. ಹಿಂದೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಇದ್ದಂಥ ಒಂದು ಕಹಿ ವಾತಾವರಣ ಇವೊತ್ತು ಇಲ್ಲ. ಹಿಂದಿನ ಸಲ ಈ ವಿಷಯದಲ್ಲಿ ಚರ್ಚೆ ನಡೆದಾಗ ಒಂದು ಉತ್ಕಟ ಪರಿಸ್ಥಿತಿ ನಮ್ಮ ದೇಶದಲ್ಲಿ ಉಂಟಾಗಿತ್ತು. ಅದು ಕನ್ನಡಿಗರಿಗೆ ಮಾತ್ರವಲ್ಲ, ಇಡೀ ದೇಶಕ್ಕೇ ಒಂದು ದೊಡ್ಡ ಕಠಿಣವಾದ ಸಮಸ್ಯೆ ಆಗಿತ್ತು. ಇವೊತ್ತು ಅಂಥ ಒಂದು ವಾತಾವರಣ ತಿಳಿಗೊಂಡಿದೆ. ಅದು ಒಂದು ಶುಭ ಸೂಚನೆ. ಮುಂದೆ ಬರತಕ್ಕ ಒಂದು ರಾಜ್ಯಕ್ಕೆ ಒಳ್ಳೆಯ ಒಂದು ಆಹ್ವಾನವನ್ನು ಕೊಡುತ್ತಾ ಇದ್ದೇವೆ ಎಂದು ನಾವು ಧೈರ್ಯವಾಗಿ ಹೇಳಬಹುದು. ಮುಖ್ಯವಾಗಿ ಹೊರಗಡೆ ಇರತಕ್ಕ ಕನ್ನಡ ಪ್ರದೇಶಗಳವರು ಒಂದು ದೊಡ್ಡ ವ್ಯಥೆಯಿಂದ ಇದ್ದಂತೆ ಆಗಿತ್ತು. ಕನ್ನಡದ ಇತರ ಪ್ರದೇಶಗಳವರು ಈ ರಾಜ್ಯಕ್ಕೆ ಬರುವ ಒಂದು ಸಂದರ್ಭ ಅಥವಾ ಒಂದು ಹೊಸ ರಾಜ್ಯ ಆಗತಕ್ಕ ಸಂದರ್ಭದಲ್ಲಿ ಎಲ್ಲರೂ ಸೇರಿ ಒಂದೇ ಮನೋಭಾವದಿಂದ ಎಲ್ಲರೂ ಈ ರಾಜ್ಯದ ಅಭಿವೃದ್ಧಿಗಾಗಿ ದುಡಿಯುವುದಕ್ಕೆ ಮನಸ್ಸನ್ನು ಮಾಡೋಣ ಎಂದು ಹೇಳಿ ಈ ಸಂದರ್ಭದಲ್ಲಿ ಎಲ್ಲರೂ ಆಶಿಸಬಹುದಾಗಿದೆ.

ಇನ್ನು ನನ್ನ ಮಿತ್ರರು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಹೇಳುತ್ತಾರೆ. ಅದು ಈ ಬಳ್ಳಾರಿ ಮತ್ತು ಕೋಲಾರದ ವಿಷಯ. ಅನೇಕರಿಗೆ ಇದು ಅಸಮಾಧಾನವನ್ನುಂಟುಮಾಡಿದೆ. ನಾನು ತಾತ್ವಿಕವಾಗಿ ಭಾಷಾವಾರು ಪುನರ್ ವಿಂಗಡನೆಗೆ ಬದ್ಧನಾಗಿದ್ದೇನೆ. ಆ ವಿವಾದ ನನಗೂ ಶ್ರೀ ನಾರಾಯಣರೆಡ್ಡಿಯವರಿಗೂ ಬಂದು, ನಮ್ಮಲ್ಲೇ ಅದು ತೀರ್ಮಾನವಾಗಿದೆ. ಕನ್ನಡದ ಯಾವುದೇ ಪ್ರದೇಶವಾಗಲಿ ಅದು ಕನ್ನಡದ ಭಾಗಕ್ಕೆ ಸೇರಲು ನನ್ನ ಅಭ್ಯಂತರವಿಲ್ಲ. ಈ ವಿಷಯದಲ್ಲಿ ಎಷ್ಟೋ ಜನ

ಯಾವ ಯಾವ ನಿಲುವನ್ನು ತೆಗೆದುಕೊಂಡಿದ್ದಾರೋ ಅವೆಲ್ಲವೂ ಸಮರ್ಥನೀಯ ಮತ್ತು ಅವುಗಳನ್ನು ಒಪ್ಪಿಕೊಳ್ಳಲೇಬೇಕು.

ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ನಿಮ್ಮಿಬ್ಬರ ಮಾತನ್ನು ಯಾರೂ ಕೇಳುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅದು ಬೇರೆ ವಿಷಯ. ಆದ್ದರಿಂದ ನಾವು ಯಾವ ರೀತಿ ಕನ್ನಡ ಪ್ರಾಂತ್ಯ ಆಗಬೇಕೆಂದು ಹೇಳುತ್ತೇವೆಯೋ ಹಾಗೆಯೇ ವಿಶಾಲಾಂಧ್ರ ಆಗಬೇಕು ಮತ್ತು ಇತರ ಭಾಷಾವಾರು ಪ್ರಾಂತ್ಯಗಳ ರಚನೆ ಆಗಬೇಕು ಎಂಬ ನಿಲುವನ್ನೂ ಅವರು ತೆಗೆದುಕೊಂಡರು. ಎಸ್. ಆರ್. ಸಿ. ಯವರು ತುಂಗಭದ್ರ ನೀರಿನ ಆಧಾರದ ಮೇಲೆ ಪುನಃ ಬಳ್ಳಾರಿ ಆಂಧ್ರಕ್ಕೆ ಹೋಗಬೇಕೆಂದರೂ ಕೂಡ ಇವತ್ತು ಆ ವಿಷಯದಲ್ಲಿ ಸರಿಯಾದ ಒಂದು ತೀರ್ಮಾನವನ್ನು ಕೊಟ್ಟು ಈ ಮಸೂದೆಯಲ್ಲಿ ಬಳ್ಳಾರಿ ಮೈಸೂರಿನಲ್ಲೇ ಇರಬೇಕೆಂಬ ತೀರ್ಮಾನವನ್ನು ಮಾಡಿದ್ದಾರೆ: ಅದು ಸ್ವಾಗತಾರ್ಹವಾದ ಒಂದು ನಿಲುವು. ಹಾಗೆಯೇ ನಮ್ಮ ರಾಜ್ಯದಲ್ಲಿರತಕ್ಕಂಥ ಹೆಚ್ಚಾಗಿ ತೆಲುಗು ಭಾಷೆಯಿಂದಲೇ ಆವರಿಸಿರತಕ್ಕ ಪ್ರದೇಶಗಳನ್ನು ಆಂಧ್ರಕ್ಕೆ ಸೇರಿಸತಕ್ಕದ್ದು ನ್ಯಾಯವಾಗಿದೆ ಎನ್ನುವುದು ನನ್ನ ಅಭಿಪ್ರಾಯ. ಇದಕ್ಕೆ ಪ್ಲೆಬಿಸೈಟ್ ಬೇಕಾದರೂ ತೆಗೆದುಕೊಂಡು ಆ ರೀತಿ ಹಂಚಿಕೆಯನ್ನು ಮಾಡಬಹುದು. ಆ ರೀತಿ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆ ಹೇಳುವುದರಿಂದ ನಾನು ತಾತ್ವಿಕವಾಗಿಯೂ ಕೂಡ ನನ್ನ ನಿಲುವನ್ನು ತೋರಿಸಿದ್ದೇನೆ ಎಂಬ ಒಂದು ಸಮಾಧಾನ ನನಗೆ ಉಂಟಾಗುತ್ತದೆ ಮತ್ತು ನಮ್ಮ ಶ್ರೀ ನಾರಾಯಣ ರೆಡ್ಡಿಯವರಿಗೂ ಸಹ ಉಂಟಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಈ ಮಸೂದೆಯಲ್ಲಿ ನಿಮ್ನವರ್ಗದವರಿಗೆ ಪ್ರಾತಿನಿಧ್ಯ ಕೊಡತಕ್ಕ ಬಗ್ಗೆ ಮತ್ತು ಅಲ್ಪ ಸಂಖ್ಯಾತರಿಗೆ ರಕ್ಷಣೆಯನ್ನು ಕೊಡತಕ್ಕ ಬಗ್ಗೆ ಮತ್ತು ಇನ್ನೂ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಅದನ್ನು ನಾನು ಸಾಮಾನ್ಯವಾಗಿ ಸ್ವಾಗತಿಸುತ್ತೇನೆ. ಒಟ್ಟಿನಲ್ಲಿ ಈ ಮಸೂದೆಯನ್ನು ಕಾರ್ಯಗತಮಾಡುವುದರಿಂದ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ—ಇವೊತ್ತು ಬರೀ ಮಾತಿನಲ್ಲಿ ಇದೆ—ಹೆಚ್ಚು ಕಾರ್ಯದಲ್ಲಿ ಬರುವುದಕ್ಕೆ ಶ್ರಮಿಸಬೇಕು ಮತ್ತು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿರತಕ್ಕ ವಿಧಿಗಳನ್ನೂ ಸಾಧ್ಯವಾದ ಮಟ್ಟಿಗೂ ನಾವು ತೊಡೆದುಹಾಕುವುದಕ್ಕೆ ಪ್ರಯತ್ನ ಪಡಬೇಕು. ಈ ಮಸೂದೆಯನ್ನು ಒಪ್ಪಿಕೊಳ್ಳುವುದೇ ಕೊನೆಯ ಗುರಿ ಅಲ್ಲ. ಹಾಗೇನಾದರೂ ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಈ ರಾಜ್ಯಗಳು ಅಸ್ತಿತ್ವಕ್ಕೆ ಬಂದ ಮಾರನೆ ಕ್ಷಣವೇ ಏನು ಬದಲಾವಣೆ ಆಗಬೇಕು ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಈ ಒಂದು ಆಧಾರದ ಮೇಲೆ ನಾವು ಮುಂದೆ ಸುಸೂತ್ರವಾಗಿ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಹೋಗತಕ್ಕ ಸಮಾನತೆಯ ರಾಜ್ಯಗಳನ್ನು ರಚಿಸಿಕೊಳ್ಳಬೇಕಾಗಿದೆ. ಅದಕ್ಕೆ ಇದು ತಳಹದಿಯೇ ಹೊರತು ಇದೇ ಕೊನೆಯ ಒಂದು ಗುರಿ ಅಲ್ಲ ಎಂಬುದನ್ನು ನಾವು ಗಮನದಲ್ಲಿಟ್ಟುಕೊಂಡು ಈ ಮಸೂದೆ ಇನ್ನಷ್ಟು ಹೆಚ್ಚು ಪರಿಪೂರ್ಣವಾದ ರೀತಿಯಲ್ಲಿ ಆಗಿ ಹೆಚ್ಚು ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಆಗಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಪ್ರಾಂತ ಪುನರ್‌ವಿಂಗಡಣೆಯ ವಿಷಯವಾಗಿ. . . .

Mr. SPEAKER.—We have taken a decision to close the general debate today and that tomorrow and the day after should be reserved for amendments. Once a decision is taken, you must stick to it, because it is taken with the agreement of the House. That ought not to be changed.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಈ ವಿಷಯದಲ್ಲಿ ಮಾತನಾಡುವುದಕ್ಕೆ ಇನ್ನೂ ಸ್ವಲ್ಪ ಕಾಲಾವಕಾಶ ಕೊಡಬೇಕು, ಸ್ವಾಮಿ.

Mr. SPEAKER.—Amendments are more important than general discussion.

Sri B. HUTCHE GOWDA.—After lunch, there will be only a few speakers.

Mr. SPEAKER.—I do not think other speakers will take up so much time. The House can sit for some time more today, if they like.

Sri M. PALANIYAPPAN (Ulsoor).—When the Hon'ble Members have opportunity to table amendments, they can speak on those amendments.

Mr. SPEAKER.—Members who are anxious will sit late and finish general discussion today.

(*Sri M. Linganna rose.*)

Mr. SPEAKER.—You should not change the programme often. Programme once decided upon must be adhered to.

Sri Mulka GOVINDA REDDY.—I think it can be changed with the consent of the members of the House.

ಶ್ರೀ ವಿ. ವೆಂಕಟಪ್ಪ.—ಪ್ರಾಂತ ಪುನರ್‌ವಿಂಗಡನೆಯ ವಿಷಯ ಬಂದ ಮೇಲೆ, ಅದರಲ್ಲೂ ಈ ಪುನರ್‌ವಿಂಗಡನೆ ಸಮಿತಿಯವರ ವರದಿ ಬಂದ ಮೇಲೆ, ಈ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದ ಹೇಳಿದವರ ಪೈಕಿ ನಾನೂ ಒಬ್ಬ. ಅದಕ್ಕೆ ನಾನು ಹೇಳಿದ ಕಾರಣಗಳು ಅನೇಕರಿಗೆ ಸರಿಹೋಗದೆ ಇದ್ದಿರಬಹುದು. ಆದರೆ ಬಹುಮಟ್ಟಿಗೆ ನನ್ನ ಮನಸ್ಸಿಗೆ ಮೈಸೂರು ವಿಶಾಲವಾಗುವುದರಿಂದ ಕೆಲವು ವಿಷಯಗಳಲ್ಲಿ ನಮ್ಮ ಜನರಿಗೆ ತೊಂದರೆಯಾಗುತ್ತದೆ ಎನ್ನುವ ಭಾವನೆ ಇದ್ದೇ ಇದೆ. ಈ ರೀತಿ ಮೈಸೂರು ಚಿಕ್ಕದಾಗಿ ಉಳಿಯಬೇಕು, ಈಗಿರುವ ರೀತಿಯಲ್ಲೇ ಇರಬೇಕು, ಆಡಳಿತ ದೃಷ್ಟಿಯಿಂದಲೂ ಕೂಡ ಇದು ಸರಿಯಾಗಿದೆ ಎಂದು ಹೇಳಿದಂಥ ನಮ್ಮಲ್ಲಿ ಕೆಲವರು ಈ ದಕ್ಷಿಣ ಪ್ರದೇಶ ಅಥವಾ ಬೈಲಿಂಗ್ವಲ್ ಅಥವಾ ಟ್ರೈಲಿಂಗ್ವಲ್ ಯಾವುದಾದರೂ ಸರಿಯೇ ಅಂಥ ಪ್ರಾಂತ ಆಗಬಹುದು ಎಂದು ಹೇಳಿದೆವು. ಅದರ ವಿಷಯದಲ್ಲಿ "ಏನಿದು, ವಿಚಿತ್ರವಾಗಿ ಕಾಣುತ್ತಿದೆಯಲ್ಲಾ, ಚಿಕ್ಕದಾಗಿರಲಿ ಎಂದು ಹೇಳಿದವರು ಕರ್ನಾಟಕ ಪ್ರಾಂತ್ಯವೇ ಆಗಬಾರದು ಎಂದು ಹೇಳಿದವರು ಅದಕ್ಕಿಂತಲೂ ದೊಡ್ಡ ಪ್ರಾಂತದ ವಿಲೀನ ಆಗಬಹುದು ಎಂದು ಹೇಳುತ್ತಾರೆಯಲ್ಲ, ಅವರ ಮನಸ್ಸಿನಲ್ಲಿ ಏನಿದೆಯೋ ಎಂಬುದನ್ನು ಮನಶ್ಶಾಸ್ತ್ರಜ್ಞರೇ ಕಂಡು

(ಶ್ರೀ ವಿ. ವೆಂಕಟಪ್ಪ.)

ಹಿಡಿಯಬೇಕು " ಎಂದು ಕೆಲವರು ಹೇಳಿದ್ದಾರೆ. ಮನಶ್ಶಾಸ್ತ್ರಜ್ಞರು ಏನು ಹೇಳುತ್ತಾರೆಯೋ ನನಗೆ ತಿಳಿಯದು. ನನಗೆ ಏನು ಕಾರಣ ತೋರಿತು ಎಂದರೆ, ಈ ಮೈಸೂರು ದೇಶ ಇರುವ ಹಾಗೆ ಇಲ್ಲದೆ, ಬದಲಾವಣೆ ಆಗುವುದರಲ್ಲಿ ಏನು ತೊಂದರೆಯಾಗುತ್ತದೆ ಎಂಬುದನ್ನು ಸ್ವಲ್ಪ ಮಟ್ಟಿಗೆ ನಾವು ಅರಿತಿದ್ದೇವೆ.

4-30 P.M.

ಈಗ ಬಳ್ಳಾರಿ ನಮ್ಮ ಜೊತೆಯಲ್ಲಿ ಸೇರಿತು. ಆದರೆ ಬಳ್ಳಾರಿಯ ಸ್ಥಿತಿ ಏನಾಗಿದೆ ಎಂಬ ವಿಷಯದಲ್ಲಿ ಅಲ್ಲಿನ ಮಾನ್ಯ ಸದಸ್ಯರು ಈ ಸಭೆಯಲ್ಲಿ ವಿಶದವಾಗಿ ಹೇಳಿದ್ದಾರೆ. ಅಲ್ಲಿ ಕೆಲವು ಮೈಸೂರು ಕಾನೂನುಗಳಿವೆ, ಕೆಲವು ಮದರಾಸಿನ ಕಾನೂನುಗಳಿವೆ. ಕೆಲವು ಅಧಿಕಾರಿಗಳು ಅಲ್ಲಿ ಯಾವ ರೀತಿ ವರ್ತನೆ ಮಾಡುತ್ತಿದ್ದಾರೆ, ನಮ್ಮ ದೇಶಕ್ಕೆ ಸೇರಿದ್ದರಿಂದ ಪೋಲೀಸಿನವರು ಅಲ್ಲಿ ಯಾವ ರೀತಿ ರಕ್ಷಣೆಯನ್ನು ನೋಡಿಕೊಂಡು ಆಡಳಿತವನ್ನು ನಡೆಸುತ್ತಿದ್ದಾರೆ ಎನ್ನುವುದನ್ನು ಬಳ್ಳಾರಿಯ ಮಿತ್ರರು ಬಹಳ ಚೆನ್ನಾಗಿ ತಿಳಿಸಿದ್ದಾರೆ. ಬಳ್ಳಾರಿ ನಮ್ಮ ಸಂಸ್ಥಾನಕ್ಕೆ ಸೇರಿದ ಮೇಲೆ ನಮ್ಮ ಜನರಿಗೆ ಹೇಗೆ ಕೆಲವು ತೊಂದರೆಗಳುಂಟಾಯಿತೆಂಬುದನ್ನು ನಾನು ಅನೇಕ ವೇಳೆ ಈ ಸಭೆಯಲ್ಲಿ ಹೇಳಿದ್ದೇನೆ. ಮೈಸೂರು ವಿಶಾಲವಾದರೆ, ಮುಂದೆ ಆ ರೀತಿ ಆಗುವುದಾದರೆ, ನಾವು, ನಮ್ಮ ದೇಶದ ಜನರು, ಸ್ವಲ್ಪಮಟ್ಟಿಗೆ ಹೆಚ್ಚು ಕಂದಾಯ ಕೊಡಬೇಕಾಗುತ್ತದೆ. ಮುಖ್ಯ ಮಂತ್ರಿಗಳೇನೋ ತಮ್ಮ ಭಾಷಣದಲ್ಲಿ ನಾವು ಕೊಟ್ಟಂಥ ಸಂಬಳವನ್ನು ನಮ್ಮಲ್ಲಿಗೆ ಬಂದು ಸೇರುವ ಅಧಿಕಾರಿಗಳು ತೆಗೆದುಕೊಳ್ಳಬೇಕು, ಹಾಗಿಲ್ಲದೆ ಇದ್ದರೆ ಕಷ್ಟವಾಗುತ್ತದೆ ಎಂದು ಹೇಳಿದರು. ಅಧಿಕಾರವಿರುವಾಗ ಸ್ವಲ್ಪ ಮಟ್ಟಿಗೆ ನಡೆಸಿದರೂ ನಡೆಸುವುದಕ್ಕಾಗುತ್ತದೆಯೋ ಏನೋ. ಆದರೆ ಮನುಷ್ಯನ ಸ್ವಭಾವವನ್ನು ಬದಲಾವಣೆ ಮಾಡುವುದು ಕಷ್ಟ. ನಮ್ಮಲ್ಲಿ ಅಷ್ಟರ ಮಟ್ಟಿನ ತ್ಯಾಗ ಬುದ್ಧಿ ಏನಾದರೂ ಇದ್ದು, ದೇಶದ ಸೇವೆ ಮಾಡುವುದಕ್ಕೋಸ್ಕರ ಈ ಕಾರ್ಯವನ್ನು ಒಪ್ಪಿಕೊಂಡಿದ್ದೇವೆ, ಅದನ್ನು ನಡೆಸಿಕೊಂಡು ಬರಬೇಕು ಎಂದು ಹೇಳತಕ್ಕ ಜನ ಬಹಳ ವಿರಳ. ಯಾರೂ ಇಲ್ಲವೇ ಇಲ್ಲವೆಂದು ಹೇಳಲಾರೆ; ಆದರೆ ಬಹಳ ವಿರಳವೆಂದು ಮಾತ್ರ ಹೇಳುತ್ತೇನೆ. ಆದುದರಿಂದ ಏನಾಗುತ್ತದೆಂದು ನಾವು ಊಹಿಸಬಹುದು. ಬಳ್ಳಾರಿಯ ಸ್ನೇಹಿತರು ಕೆಲವರು, ತಮ್ಮ ಸಂಬಳಗಳು ಕಡಿಮೆಯಾಯಿತೆಂದು ಪೋಲೀಸಿನವರು ಯಾವ ರೀತಿ ವರ್ತನೆ ಮಾಡುತ್ತಿದ್ದಾರೆಂದೂ, ಬೇರೆ ವಿಧದಲ್ಲಿ ಸಂಪಾದನೆ ಮಾಡುವುದಕ್ಕೆ ಸ್ವಲ್ಪವೂ ಭಯಪಡುವುದಿಲ್ಲವೆಂದೂ ಹೇಳಿದರು ಎಂಬುದಾಗಿ ಆಗಲೇ ತಿಳಿಸಿದ್ದೇನೆ. ಹಾಗೆ ಆ ವಿಧವಾದ ಮನೋಭಾವ ಅಧಿಕಾರಿಗಳಲ್ಲಿ ಬೆಳೆದರೆ ನಮ್ಮ ದೇಶದಲ್ಲಿ ಜನರಿಗೆ ಸೌಕರ್ಯ ಉಂಟಾಗುತ್ತದೆಂದು ಹೇಳುವುದಕ್ಕೆ ಸಾಧ್ಯವೇ ? ನಮ್ಮ ಮೈಸೂರಿನಲ್ಲಿ ಒಂದು ಕಟ್ಟಡದಲ್ಲಿರತಕ್ಕವರು ಕೆಲವು ಸಂಬಳಗಳನ್ನು ತೆಗೆದುಕೊಳ್ಳುತ್ತಾರೆ. ಇನ್ನೂಂದು ಕಡೆ ಇಲ್ಲಿ ಸೆಕ್ರೆಟೇರಿಯಟ್‌ನಲ್ಲಿ ಇರತಕ್ಕವರು ಅದಕ್ಕಿಂತ ಕಡಿಮೆ ಸಂಬಳ ತೆಗೆದುಕೊಳ್ಳುತ್ತಾರೆ. ಇದು ಯಾರಿಗಾದರೂ ಸರಿ ಎಂದು ತೋರುತ್ತದೆಯೇ ಎಂದು ಅನೇಕ ಜನರು ಕೇಳುತ್ತಾರೆ. ಇವರೇನೋ ಬೇರೆ ಬೇರೆ ಆಡಳಿತಕ್ಕೆ ಸೇರಿದವರು, ಆ ರೀತಿ ಇದೆ ಎಂದು ಹೇಳಬಹುದು. ಆದರೆ ಒಂದೇ ಆಡಳಿತಕ್ಕೆ ಸೇರಿ, ನಮ್ಮ ಮೈಸೂರಿನ ಸ್ಥಿತಿಯಲ್ಲಿ ಎಲ್ಲ ಅಧಿಕಾರಿಗಳೂ ಇರಬೇಕು, ನಾವೇನು ಸಂಬಳ ಕೊಡುತ್ತೇವೆಯೋ ಅದಕ್ಕೇ ಒಪ್ಪಿಕೊಳ್ಳಬೇಕೆಂದರೆ ವಿಧಿ ಇಲ್ಲದೆ ಒಪ್ಪಿಕೊಳ್ಳಬಹುದು. ಆದರೆ ನಮ್ಮ ಆಡಳಿತ ದೃಷ್ಟಿಯಿಂದ ಅದು ಸರಿಹೋಗುತ್ತದೆಯೇ, ಚೆನ್ನಾಗಿ ನಡೆಯುತ್ತದೆಯೇ, ಜನಗಳ ಕಷ್ಟವೇನಾಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಹೀಗೆ ಅನೇಕ ವಿಧವಾದ ತೊಂದರೆಗಳು ಬರುತ್ತವೆ. ಶ್ರೀಮಾನ್ ಲಕ್ಕಪ್ಪನವರು ಇವತ್ತಿನ ದಿವಸ ಏನು ಹೇಳಿದರೋ, ಆವಾಗ ನಾನಿರಲಿಲ್ಲ. ಅವರು ಮೈಸೂರು ವಿಲೀನ ವಿರೋಧ ಸಮ್ಮೇಳನದ ಅಧ್ಯಕ್ಷರಾಗಿ ಒಂದು ಭಾಷಣಮಾಡಿ, ವಿಷಯಸಂಗ್ರಹ - ವರದಿಯಲ್ಲಿರತಕ್ಕ ಅನೇಕ ವಿಷಯಗಳನ್ನು ಕ್ರೋಡೀಕರಿಸಿ, "ನಮ್ಮ ಮೈಸೂರು ದೇಶದಲ್ಲಿರತಕ್ಕ ನಾವುಗಳು ಇಲ್ಲಿ ರಸ್ತೆಗಳು ಕಡಿಮೆ ಎಂದು ಹೇಳುತ್ತೇವೆ. ನಮ್ಮ ಮೈಸೂರು ದೇಶದಲ್ಲಿ ಹತ್ತು ಸಾವಿರ ಚದರ ಮೈಲಿಗಳಿಗೆ ಎಷ್ಟು ರಸ್ತೆಗಳಿವೆಯೋ ಇತರ ಕಡೆಗಳಲ್ಲಿ, ಈಗ ನಮ್ಮ ದೇಶಕ್ಕೆ ಸೇರಬೇಕು ಎಂದು ಏನು ತೀರ್ಮಾನವಾಗಿದೆಯೋ ಆ ಪ್ರಾಂತಗಳಲ್ಲಿ, ಆ ರಸ್ತೆಗಳನ್ನು ನಮ್ಮ ದೇಶದ ಮಟ್ಟಕ್ಕೆ ತರಬೇಕಾಗುತ್ತದೆ. ಸಾಧಾರಣವಾಗಿ ಹಾಗೆ ಮಾಡಬೇಕಾದದ್ದು ಕರ್ತವ್ಯ. ಯಾವ ಸರ್ಕಾರವಾದರೂ ಮಾಡಲೇಬೇಕು. ಹಾಗೆ ಮಾಡಬೇಕಾದರೆ ಕಮಿಟಿಯವರು ಹೇಳಿರುವ ರೀತಿಯಲ್ಲಿ ಸುಮಾರು $12\frac{1}{2}$ ಕೋಟಿ ರೂಪಾಯಿಗಳು ಬೇಕಾಗುತ್ತವೆ " ಎಂದು ಹೇಳಿದ್ದಾರೆ. ಹೀಗೆ ಪ್ರತಿಯೊಂದು ವಿಷಯದಲ್ಲಿಯೂ ನಮ್ಮ ದೇಶಕ್ಕೆ ಸಮಾನವಾಗಿ ಆ ಪ್ರಾಂತಗಳನ್ನು ಮಾಡಬೇಕಾದರೆ ಹೆಚ್ಚು ಹಣಬೇಕಾಗುತ್ತದೆ ಎಂಬುದು ವ್ಯಕ್ತವಾಗಿದೆ. ಆ ಹಣವನ್ನು ಒದಗಿಸಬೇಕಾದರೆ ನಮ್ಮ ದೇಶದ ಜನರು ಇನ್ನೂ ಹೆಚ್ಚು ಕಂದಾಯ ಕಾಣಿಗೆಗಳನ್ನು ಕೊಡಬೇಕು. ಈ ಭಾರವನ್ನು ಹೊರತಕ್ಕ ಶಕ್ತಿ ನಮ್ಮ ಜನರಿಗಿಲ್ಲವೆಂಬುದನ್ನು ಅನೇಕ ವರ್ಷಗಳಿಂದ ಹೇಳಿಕೊಂಡು ಬಂದಿದ್ದೇವೆ. ಅದು ಈಗ ಹೆಚ್ಚಾಗತಕ್ಕದ್ದು ಸರಿಯಲ್ಲವೆಂದು ನನ್ನ ಮತ್ತು ನಮ್ಮಲ್ಲಿ ಕೆಲವರ ಅಭಿಪ್ರಾಯ. ಆದುದರಿಂದ ಈ ರೀತಿ ಆಗದೆ ಇದ್ದರೆ ಒಳ್ಳೆಯದು. ಅವರುಗಳು ಬೇರೆ ಒಂದು ಪ್ರಾಂತವನ್ನು ಮಾಡಿಕೊಳ್ಳುವುದರಲ್ಲಿ ಯಾವ ತೊಂದರೆಯೂ ಆಗಲಾರದು. ಆ ರೀತಿ ಮಾಡಿಕೊಳ್ಳಬೇಕು ಎಂದು ಸೂಚನೆ ಮಾಡಿದೆವು.

ದಕ್ಷಿಣಪ್ರಾಂತ ಅಥವಾ ಎರಡು ಮೂರು ಭಾಷೆಗಳನ್ನಾಡತಕ್ಕ ಪ್ರದೇಶಗಳು ಸೇರಿ ಪ್ರಾಂತಗಳಾಗಬೇಕು ಎಂದು ಸೂಚನೆ ಬಂದಾಗ, ಈಗ ದೊಡ್ಡ ಪ್ರಾಂತ ಮಾಡುವುದರಲ್ಲಿ ಸ್ವಲ್ಪ ಅಸಮಂಜಸವಾಗುತ್ತದೆ, ಕಷ್ಟವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೆ; ಹಾಗೆ ಆಗುವುದನ್ನು ಯಾವ ರೀತಿ ಒಪ್ಪುವುದಕ್ಕೆ ಸಾಧ್ಯವೆಂಬುದು ಹೊಳೆದಿರಲಿಲ್ಲ. ಶ್ರೀಮಾನ್ ವೀರಣ್ಣಗೌಡರು ಅವರ ಹೇಳಿಕೆಯನ್ನು ಕೊಟ್ಟಾಗಲೂ ಕೂಡ ನನಗೆ ಮನಸ್ಸಿನಲ್ಲಿ ಸ್ವಲ್ಪ ಮಟ್ಟಿನ ಶಂಕೆ ಇತ್ತು; ಇದನ್ನು ಒಪ್ಪಿಕೊಂಡರೆ ಸರಿ ಹೋಗುತ್ತದೆಯೋ ಇಲ್ಲವೋ ಎಂಬ ಶಂಕೆ ಇತ್ತು. ಆ ಮೇಲೆ ಯಾರಾರು ಈ ರೀತಿ ಎರಡೆರಡು ಸಂಸ್ಥಾನ ಅಥವಾ ಮೂರು ಸಂಸ್ಥಾನಗಳು ಆಗಬೇಕು ಎಂದು ಸೂಚನೆ ಮಾಡಿದ್ದರೋ ಅಂಥವರು ಒಂದು ಹೇಳಿಕೆಯನ್ನು ಕೊಟ್ಟರು. ಅದರಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ.

ಡಾಕ್ಟರ್ ಬಿ. ಸಿ. ರಾಯ್ ಅವರು ಹೀಗೆ ಹೇಳಿದ್ದಾರೆ:

" Dr. Roy added, that the land revenue system, tenancy laws, modes of taxation, raising of re-

venue and provision for social services might continue to be distinct in one State as against the other. Schemes for these had been framed on a particular basis and it would be unwise to interfere with them immediately, unless it be by common consent."

ಎಂದು ಹೇಳಿದ್ದಾರೆ. ಆದುದರಿಂದ ನಾನು ಈ ದೊಡ್ಡ ಪ್ರಾಂತವಾಗುವುದರಲ್ಲಿ ಏನು ತೊಂದರೆಯಾಗುತ್ತದೆ ಎಂದು ತಿಳಿದುಕೊಂಡಿದ್ದೇನೋ ಇದನ್ನು ಒಪ್ಪಿಕೊಳ್ಳುವುದಾದರೆ, ಅವರು ಹೇಳಿದ ರೀತಿಯಲ್ಲಿ ನಡೆಯುವುದಾದರೆ, 'ನಮಗೆ ಬಹುಮಟ್ಟಿಗೆ, ನಮ್ಮ taxation system-ನಮ್ಮ land revenue system ಅವೆಲ್ಲವೂ ಇರುವ ರೀತಿಯಲ್ಲಿ ಇನ್ನೂ ಕೆಲವು ಕಾಲ ಇರುವುದಕ್ಕೆ ಅವಕಾಶವಾಗುತ್ತದೆ. ಅದರಿಂದ ಏನೇನೂ ತೊಂದರೆಯಾಗಲಾರದು. ಆದುದರಿಂದ ಇದರಲ್ಲಿ ತಪ್ಪೇನೂ ಕಾಣುವುದಿಲ್ಲ ಎಂದು ನನಗೆ ತೋರಿತು. ಅವರು ಇನ್ನೂ ಮುಂದೆ ಹೋಗಿ

"Without it, no such union would be viable for there was no attempt on the part of one State to dominate over the other. He assured that in border areas two languages would be broadly encouraged; each State would continue its own life and have a common approach to major problems. He said that the development plans for each area of the two States and the Five-Year Plan proposed by each State and approved by the National Planning Commission would continue to be implemented in that area in future although future development may be the common objective of the two States."

ಎಂದು ಹೇಳಿದ್ದಾರೆ.

ಹೀಗೆ ಅವರು ಹೇಳಿರತಕ್ಕಂತೆ ಈ ಪ್ರಾಂತಗಳು ಬದಲಾವಣೆಯಾಗಿ ಆ ರೀತಿ ನಡೆಯುವುದಾದರೆ ನಾವು ಏನು ತೊಂದರೆಯಾಗುತ್ತದೆ ಎಂದು ತಿಳಿದುಕೊಂಡಿದ್ದೆವೋ ಆ ತೊಂದರೆ ಬಹುಮಟ್ಟಿಗೆ ಆಗಲಾರದು; ಆದುದರಿಂದ ಈ ರೀತಿಯಾಗತಕ್ಕದ್ದು ನ್ಯಾಯವೆಂದು ಹೇಳಿದೆವು. ಈಗಲೂ ಕೂಡ ಒಂದೇ ಒಂದು ಭಾಷೆಯನ್ನು ಆಡತಕ್ಕ ಆಧಾರದ ಮೇಲೆ ದೇಶಗಳ ವಿಂಗಡಣೆಯಾಗಬೇಕು ಎಂದು ಹೇಳತಕ್ಕ ತತ್ವ ಅಷ್ಟು ಸರಿ ಎಂದು ನನಗೆ ಮನವರಿಕೆಯಾಗಿಲ್ಲ. ಆ ವಿಷಯದಲ್ಲಿ ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಅದನ್ನು ಇಲ್ಲವೆನ್ನುವ ಹಾಗಿಲ್ಲ. ನಮ್ಮ ದೇಶದಲ್ಲಿ ಪ್ರಖ್ಯಾತರಾದ ವಿದ್ವಾಂಸರೂ, ರಾಜಕಾರಣಿಗಳೂ ಆದ ಶ್ರೀಮಾನ್ ಡಿ. ವಿ. ಗುಂಡಪ್ಪನವರು ಮದರಾಸು ವಿಶ್ವವಿದ್ಯಾನಿಲಯದಲ್ಲಿ ಪ್ರಕಟವಾಗತಕ್ಕ ಪತ್ರಿಕೆಗೆ ಒಂದು article ಬರೆದು ಈ ರೀತಿಯಾಗಿ ಹೇಳಿದಾರೆ;

"The variety of languages in a country is no more to be deplored than the variety of its soil, climate or in the *fauna* and *flora* or in its material resources. Each separate language produces a separate literature and promotes a separate culture and when many different languages live side by side, they react upon one another and develop a composite culture distinguished by many times of excellence of minds and intellect. If community of language makes for mass strength, diversity of languages makes for richness of content in culture. If each nation has to rise to its highest possible stature in the achievement of its intellect and imagination, it has to provide for the free growth and harmonious development of each of these several languages. Each linguistic group is thus a special nationality making its own contribution to the variegated tapestry of the whole nation's intellectual and artistic life."

ಆದುದರಿಂದ ನಾವೂ ಸಹ "ಮೈಸೂರು ದೇಶ composite State, ಅನೇಕ ಭಾಷೆಗಳನ್ನಾಡುವವರಿದ್ದಾರೆ, ನಾವು ಬರೀ ಭಾಷೆಯ ಆಧಾರದಮೇಲೆ ನಮ್ಮ ವಾದವನ್ನು ಹೂಡಿಲ್ಲ" ಎಂದು ಹೇಳುತ್ತಿದ್ದೇವೆ. ಹಾಗೆ ಆಗಬಹುದಾದ ಪಕ್ಷದಲ್ಲಿ, ಇತರ ಬೇರೆ ಭಾಷೆಯನ್ನಾಡುವ ಪ್ರಾಂತಗಳ ಜೊತೆಯಲ್ಲಿ ಸೇರುವುದರಲ್ಲಿ ಏನು ತೊಂದರೆ ಇದೆ ಎನ್ನುವುದನ್ನು ಹೇಳಿಲ್ಲ. ಸುಮ್ಮನೆ ಅವರು ಸ್ವಲ್ಪ, ಇವರು ಸ್ವಲ್ಪ ಬಂದರೆ ಬರಲಿ ಎಂದು ಹೇಳಬಹುದು. ಆದರೆ ದೊಡ್ಡ ದೊಡ್ಡ ಸಂಸ್ಥಾನಗಳು ಸೇರಿ ಇನ್ನೂ ಸ್ವಲ್ಪ ದೊಡ್ಡದಾಗಲಿ ಎಂದರೆ ಆವಾಗ ಅದಕ್ಕೆ ಆಗುವುದಿಲ್ಲವೆನ್ನುವುದು ನಮಗೆ ಅರ್ಥವಾಗದೆ ಇದೆ. ಇದನ್ನು ನಮ್ಮ ಮನಶ್ಶಾಸ್ತ್ರಜ್ಞರು ಕಂಡು ಹಿಡಿಯಬೇಕು ಎಂದು ಹೇಳುತ್ತೇನೆ. ಏತಕ್ಕೆ ಇದೆಲ್ಲ ಅರ್ಥವಾಗಲಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ಆದುದರಿಂದ ಈ ದೇಶದ ಒಗ್ಗಟ್ಟು ಮತ್ತು ಮೇಲ್ಮೆಯ ದೃಷ್ಟಿಯಿಂದ ಈ ರೀತಿಯಾಗಿ ಒಂದೆರಡು ಪ್ರದೇಶಗಳು ಕೂಡ ಒಟ್ಟಾಗತಕ್ಕದ್ದು ಒಳ್ಳೆಯದೆಂದು ಇತ್ತೀಚೆಗೆ ಅಮೃತಸರ ಕಾಂಗ್ರೆಸ್ ಅಧಿವೇಶನದಲ್ಲಿಯೂ ಕೂಡ ಹೇಳಿದ್ದಾರೆ. ಅದರಲ್ಲಿ ಬಹುಮಟ್ಟಿಗೆ ನಾವು ಒಪ್ಪದೆ ಇರತಕ್ಕ ವಿಷಯಗಳು ಯಾವುವು ಇವೆ ಎಂಬುದನ್ನು ಯಾರೂ ಹೇಳಿಲ್ಲ. ಮತ್ತೆ ಈಗ ಕನ್ನಡ ಪ್ರದೇಶವಾಗುವುದರಲ್ಲಿ ಒಂದು ವಿಷಯವನ್ನು ಶ್ರೀಮಾನ್ ವೀರಣ್ಣಗೌಡರು ಹೇಳಿದ್ದಾರೆ. ನಾವೆಲ್ಲರೂ ಒಗ್ಗಟ್ಟಿನಿಂದ, unanimous ಆಗಿ ಒಪ್ಪಿಕೊಂಡಿದ್ದೇವೆಂದು ಮುಖ್ಯಮಂತ್ರಿಗಳು ಹೇಳಿದರು. ಅದು ಸರಿಯಲ್ಲ. ಬಹುಮಟ್ಟಿನ ಜನರು ಅದಕ್ಕೆ ವಿರೋಧವಾದ ಅಭಿಪ್ರಾಯವನ್ನಿಟ್ಟುಕೊಂಡಿರತಕ್ಕ

(ಶ್ರೀ ವಿ. ವೆಂಕಟಪ್ಪ)

ವರಿದ್ದಾರೆಂದು ಶ್ರೀಮಾನ್ ವೀರಣ್ಣಗೌಡರು ಹೇಳಿದರು. ಆ ವಿಷಯವನ್ನು ಮುಖ್ಯಮಂತ್ರಿಗಳೇ ಈ ರೀತಿ ಹೇಳಿದ್ದಾರೆ :—" The people of Mysore are not happy in agreeing to the formation of Karnataka. Compelled by pressure, they have agreed." ಬಳ್ಳಾರಿಯ ಹತ್ತಿರ ಕಂಪಲಿಯಲ್ಲೋ ಏನೋ ಸಕ್ಕರೆ ಕಾರ್ಖಾನೆಯ ಪ್ರಾರಂಭೋತ್ಸವವನ್ನು ನೆರವೇರಿಸುವಾಗಲೂ ಹೇಳಿದ್ದಾರೆ. ಅವರು ಹೇಳಿರುವುದು ವಾಸ್ತವವಾದ ಅಂಶ; ಎಲ್ಲರಿಗೂ ಗೊತ್ತಿದೆ. ಯಾವ ಕಾರಣದಿಂದ ಅನೇಕರು ಓಟುಮಾಡುವುದಕ್ಕೆ ಸಾಧ್ಯವಾಗಲಿಲ್ಲ, ಎಜಿಟೇಷನ್ ಎಂದು ಹೇಳುವುದನ್ನು ಮಾಡುವುದಕ್ಕೆ ದೊಡ್ಡ ಕಾರ್ಯಕ್ರಮ ಹಾಕಲಿಲ್ಲ ಎಂಬುದು ಗೊತ್ತಿದೆ. ಸರ್ಕಾರದ ಅಭಿಪ್ರಾಯವನ್ನು ನಾವೆಲ್ಲಾ ಒಪ್ಪಿದೆವು ಎಂದು ಅವರೇನು ಹೇಳಿದರೋ ಏನೋ ಗೊತ್ತಿಲ್ಲ.

ಇನ್ನೊಂದು ವಿಷಯವನ್ನು ನಾನು ಪ್ರಸ್ತಾಪ ಮಾಡದೆ ವಿಧಿಯಿಲ್ಲ. ಶ್ರೀಮಾನ್ ಹನುಮಂತಯ್ಯನವರು ಗುಬ್ಬಿಯಲ್ಲಿ ಭಾಷಣಮಾಡುತ್ತಾ "ಶ್ರೀಮಾನ್ ವೆಂಕಟಪ್ಪನವರು ನಾನು ರಾಜಿನಾಮೆ ಕೊಡಬೇಕೆಂದು ಹೇಳಿದ್ದಾರೆ, ನನ್ನ ಕ್ಷೇತ್ರದಲ್ಲಿ ಆ ರೀತಿ ತೀರ್ಮಾನವನ್ನು ಮಾಡಿಸಿದ್ದಾರೆ, ಆದರೆ ಅಲ್ಲಿ ಹೇಗಿರುತ್ತದೆ ಎಂಬುದನ್ನು ನಾನು ಅಲ್ಲಿಗೆ ಹೋದಮೇಲೆ ಪರಿಶೀಲನೆ ಮಾಡುತ್ತೇನೆ, ಅಲ್ಲಿ ಜನ ಏನು ಹೇಳುತ್ತಾರೋ ನೋಡುತ್ತೇನೆ." ಎಂದು ಹೇಳಿದರು. ರಾಮನಗರಕ್ಕೆ ಬಂದು ಕೆಲವರನ್ನು ಕರೆಸಿಕೊಂಡು ಅವರು ಒಂದು ಭಾಷಣವನ್ನು ಮಾಡುತ್ತಾ, ಅಲ್ಲಿ ಮಾಡಿರತಕ್ಕದ್ದು ಸರಿ, ದೇಶದಲ್ಲಿ ಯಾರಿಗೆ ಏನೂ ಕೇಡಾಗುವುದಿಲ್ಲ ಎಂದು ವಾದ ಹೂಡುವುದಕ್ಕೆ ಬದಲಾಗಿ, "ಕೆಲವರು ಬಂದು ಪಿಸುಮಾತಿನಲ್ಲಿ ಒಕ್ಕಲಿಗರಿಗೆ ತೊಂದರೆಯಾಗುತ್ತದೆ, ಲಿಂಗಾಯಿತರು ಬಹುಮತದವರಾಗುತ್ತಾರೆ ಎಂದು ಕಿವಿಯಲ್ಲಿ ಹೇಳಿದರೆ ನಂಬಬೇಡಿ" ಎಂದು ಹೇಳಿದರು. ಇದು ಬಹಳ ವಿಷಾದದ ಸಂಗತಿ, ನಾವು ಯಾರಿಗೂ ಆ ರೀತಿ ಹೇಳತಕ್ಕವರಲ್ಲ. ನನ್ನ ವಿಷಯ ಶ್ರೀಮಾನ್ ಹನುಮಂತಯ್ಯನವರಿಗೆ ಗೊತ್ತಿದೆ. ಪಿಸುಮಾತಿನಲ್ಲಿ ಹೇಳತಕ್ಕ ಹೇಡಿಗಳೇನೂ ನಾವಲ್ಲ. ಆ ಭಾವನೆಯನ್ನಿಟ್ಟುಕೊಂಡು ನಾನಂತೂ ಇದುವರೆಗೆ ಯಾವ ಕಾರ್ಯವನ್ನೂ ಮಾಡಿಲ್ಲವೆಂದು ಎಲ್ಲರಿಗೂ ತಿಳಿದಿದೆ. ಶ್ರೀ ಹನುಮಂತಯ್ಯನವರೇನು ಈ ಹೊತ್ತಿನ ದಿವಸ ಜನರಲ್ ಹಾಸ್ಟಲಾಗಬೇಕು, ಎಲ್ಲ ಜಾತಿಯವರಿಗೂ ಒಂದೇ ಹಾಸ್ಟಲನ್ನು ಮಾಡಬೇಕು ಎಂದೇನು ಹೇಳುತ್ತಿದ್ದಾರೋ ಅದನ್ನು 1918ನೆಯ ಇಸವಿಯಿಂದ ನಾವು ನಡೆಸಿಕೊಂಡು ಬಂದಿದ್ದೇವೆ. ಇದು ಶ್ರೀ ಹನುಮಂತಯ್ಯನವರಿಗೂ ಗೊತ್ತಿದೆ. ಚನ್ನಪಟ್ಟಣದಲ್ಲಿ ಒಂದು ಒಕ್ಕಲಿಗರ ಹಾಸ್ಟಲನ್ನು ಸ್ಥಾಪನೆ ಮಾಡಿತು. ಆ ವಿದ್ಯಾರ್ಥಿನಿಲಯದಲ್ಲಿ ಇಲ್ಲಿರುವ ಕೆಲವು ಮಿತ್ರರೂ ಇದ್ದರು. ಆದ್ದರಿಂದ ಬರೀ ಮಾತಿಗಾಗಿ ನಾನು ಇದನ್ನು ಹೇಳುತ್ತಿಲ್ಲ. ಶ್ರೀ ಬಿ. ಎಸ್. ಬೋರಣ್ಣಗೌಡರು, ಶ್ರೀ ಕರಿಯಪ್ಪನವರು, ಶ್ರೀ ವೀರಣ್ಣಗೌಡರು ಮತ್ತು ಇನ್ನೂ ಕೆಲವರು ಮಿತ್ರರಿದ್ದಾರೆ, ಅವರಿಗೆ ವಿಷಯ ಚೆನ್ನಾಗಿ ಗೊತ್ತಿದೆ. ಆಗಿನ ಕಾಲದಲ್ಲಿ, ಯಾವ ಕಾಲದಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಎಂಬ ಹುರುಪು ಬಹಳ ಹೆಚ್ಚಿನಿಂದ ನಡೆಯುತ್ತಿತ್ತೋ ಅಂಥ ಕಾಲದಲ್ಲಿ ಯಾವ ವಿಧವಾದ ವ್ಯತ್ಯಾಸವೂ ಇಲ್ಲದೆ ಎಲ್ಲ ಜಾತಿಯವರೂ ಆ ಹಾಸ್ಟಲಿನಲ್ಲಿದ್ದರು. ಬೆಸ್ತರು, ಕುರುಬರು, ಕುಂಬಾರರು ಮೊದಲಾದ ಎಲ್ಲ ಜಾತಿಯವರೂ ಕೆಲವುಕಾಲ ನಮ್ಮಲ್ಲಿ ಊಟ ಮಾಡುತ್ತಿದ್ದರು. ನಮ್ಮ ಹಾಸ್ಟಲಿನಲ್ಲಿದ್ದ ಲಿಂಗಾಯಿತರು ಕೆಲವರು ಬೇರೆಕಡೆ ಊಟಮಾಡುತ್ತಿದ್ದರು. ನಾನು ರಾಜಕೀಯಕ್ಕೆ ಬಂದಮೇಲೆ ಯಾವಾಗಲೂ 'ಒಂದು ಕೋಮಿನವರು ಮುಂದುವರಿಯುತ್ತಿದ್ದಾರೆ, ನಾವು ಹಿಂದುಳಿದಿದ್ದೇವೆ, ನಮ್ಮನ್ನೂ ಹಾಗೆ ಮುಂದುವರಿಸಿ' ಎಂದು ಹೇಳಿದವನು ನಾನಲ್ಲ, ಆ ವಿಧವಾಗಿ ನಾನು ಮುಂದುವರಿದಿಲ್ಲ. ಇಂಥ ಅಪಾದನೆಯನ್ನು ಶ್ರೀಮಾನ್ ಹನುಮಂತಯ್ಯನವರೇಕೆ ಮಾಡಿದರೋ ಏನೋ ಗೊತ್ತಿಲ್ಲ. ಜನರನ್ನು ಉದ್ರೇಕಗೊಳಿಸಿ ಅವರನ್ನು ನಮ್ಮ ಮೇಲೆ ಎತ್ತಿ ಕಟ್ಟುವುದಕ್ಕೆ ಇಂಥ ಮಾತುಗಳನ್ನು ಆಡಿದ್ದಾರೆಂದು ನಾನು ಹೇಳದೆ ಬೇರೆ ವಿಧಿ ಇಲ್ಲ. ನಾವು ನಿಜವಾಗಿಯೂ ದೇಶದ ಹಿತದೃಷ್ಟಿಯಿಂದ ನಮ್ಮ ದೇಶದ ಜನಕ್ಕೆ ತೊಂದರೆಯಾಗುತ್ತದೆಯೋ ಏನೋ ಎನ್ನುವ ಭಾವನೆಯಿಂದ ಈ ಕರ್ನಾಟಕ ಪ್ರಾಂತರಚನೆಯನ್ನು ವಿರೋಧಿಸಿದೆವು.

Mr. SPEAKER.—Is that necessary on this Bill? Hon'ble Member can avoid some of them.

ಶ್ರೀ ವಿ ವೆಂಕಟಪ್ಪ.—ಸ್ವಾಮಿ, ಈ ರೀತಿ ತಪ್ಪು ಭಾವನೆಯನ್ನುಂಟುಮಾಡತಕ್ಕಂಥ ಪ್ರಯತ್ನ ಮಾಡಬಾರದು. ನಾವು ಮೈಸೂರು ಮೈಸೂರಾಗಿಯೇ ಉಳಿದರೆ ಚೆನ್ನಾಗಿರುತ್ತದೆಂದು ಇಟ್ಟುಕೊಂಡಿರುವ ಭಾವನೆ ಎಲ್ಲರ ಹಿತದೃಷ್ಟಿಯಿಂದ ಉಂಟಾದುದು. ನಾವು ಏನೊಂದು ಊಹೆಮಾಡಿಕೊಂಡಿದ್ದೇವೋ ಆ ಕಷ್ಟಗಳು ಮುಂದೆ ಬರುವುದಾದರೆ ಆಗ ನಮ್ಮ ಸ್ನೇಹಿತರು ನಾವು ನಿಜವಾಗಿ ದೇಶದ ಹಿತದೃಷ್ಟಿಯಿಂದ ಹೇಳಿದ್ದೇವೆಯೋ ಅಥವಾ ಅವರು ಹೇಳಿದ್ದರೇ ಎಂಬುದನ್ನು ಚೆನ್ನಾಗಿ ಅರಿತುಕೊಳ್ಳುತ್ತಾರೆ.

ಇನ್ನು ಈ ಬಿಲ್ಲಿನ ವಿಷಯದಲ್ಲಿ ನಾವು ಕೆಲವು ಸೂಚನೆಗಳನ್ನು ಹೇಳಿದ್ದೇವೆ. ಅವು ಬಹಳಮಟ್ಟಿಗೆ ಲೀಡರ್ ಅವರು ಒಪ್ಪಿಕೊಳ್ಳುವ ರೀತಿಯಲ್ಲಿರುವುದರಿಂದ ಆ ವಿಷಯದಲ್ಲಿ ಹೆಚ್ಚಾಗಿ ಏನನ್ನೂ ಹೇಳದೆ ಈಗ ಒಂದೇ ಭಾಷೆಯ ದೃಷ್ಟಿಯಿಂದ ವಾದಗಳನ್ನು ಮಾಡತಕ್ಕದ್ದು ಉತ್ತಮವಾಗಲಾರದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಕೊರಟಗೆರೆ-ಮಧುಗಿರಿ—ಅನುಸೂಚಿತ ಜಾತಿಗಳು).—ಅಧ್ಯಕ್ಷರೆ, ಈದಿನ ಎಸ್. ಆರ್. ಸಿ. ವರದಿಯಮೇಲೆ ತಯಾರಾಗಿರುವ ಡ್ರಾಫ್ಟ್ ಬಿಲ್ ನಮ್ಮ ಮುಂದೆ ಬಂದಿದೆ. ಈಗ ಅದರ ಮೇಲೆ ನಮ್ಮ ಸ್ನೇಹಿತರು ಕೆಲವರು ಭಾಷಣ ಮಾಡಿದ್ದಾರೆ. ಹಿಂದೆ ಈ ವಿಚಾರದಲ್ಲಿ ಈ ವರದಿ ನಮ್ಮ ಮುಂದೆ ಬಂದಾಗ್ಗೆ ಈ ಸಭೆಯಲ್ಲಿ ಚರ್ಚೆ ನಡೆಸತಕ್ಕ ಕಾಲದಲ್ಲಿ ಏನೊಂದು ತೀವ್ರ ವಾತಾವರಣವಿತ್ತೋ ಅದು ಈ ದಿವಸ ಕಂಡುಬರುತ್ತಿಲ್ಲ. ಇದು ಬಹಳ ಸುಜಾಗಿ ಕಾಣುತ್ತದೆ. ಉಭಯತ್ರರೂ ಇದಕ್ಕೆ ಕಾರಣರು. ಆ ಪರಿಸ್ಥಿತಿಯಲ್ಲಿ ಉಜ್ವಲವಾತಾವರಣವಿದ್ದು ಚರ್ಚೆ ಸಹ ಬಹಳ ತೀವ್ರವಾಗಿ ನಡೆಯಿತು. ಈ ದಿವಸ ಆ ಪರಿಸ್ಥಿತಿ ಬದಲಾಯಿಸಿ ಬಹಳ ಸೌಹಾರ್ದದಿಂದ ಈ ಬಿಲ್ಲನ್ನು ಎಲ್ಲರೂ ಒಪ್ಪತಕ್ಕ ಸಂದರ್ಭವಿದೆಯೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಈ ರೀತಿಯಾಗಿ ಸ್ವಲ್ಪ ದಿನಗಳ ಹಿಂದೆ ಭಾಷಾವಾರು ಆಧಾರದ ಮೇಲೆ ಪ್ರಾಂತಗಳನ್ನು ಕಟ್ಟುವುದಕ್ಕೆ ಬದಲಾಗಿ ಕೆಲವರ ಭಾಷೆಗಳು ಸೇರಿದ ಪ್ರಾಂತಗಳನ್ನು ಕಟ್ಟತಕ್ಕ ತೀರ್ಮಾನ,—ಅದರಲ್ಲೂ ದಕ್ಷಿಣ ಪ್ರಾಂತವೆಂಬ ಹೆಸರನ್ನೂ ಸಹ ಅನೇಕರು ಹೇಳಿದರು.—ಅದು ಬಂದಮೇಲೆ ಅನೇಕ ಮಿತ್ರರು ಈಗಿರತಕ್ಕ ಕರ್ನಾಟಕ ಪ್ರಾಂತವೆಂದೇನು ಮಾಡುತ್ತಿದ್ದಾರೋ ಅದಕ್ಕಿಂತಲೂ

ಇದು ಉತ್ತಮವಾದ ಸಲಹೆಯಿರಬಹುದು ; ಎಲ್ಲರೂ ಸೇರಿ ನಾನಾ ಭಾಷೆಯವರು ಸೇರಿ ಸೌಹಾರ್ದದಿಂದ ಕೂಡಿ ಒಂದು ದೊಡ್ಡ ದೇಶ ಮಾಡಿದರೆ ಅದು ಉತ್ತಮವಾಗಬಹುದು ಎಂದು ನಂಬಿಕೊಂಡು ಒಂದು ಉದಾರ ಧ್ಯೇಯದಿಂದ ಹೇಳುತ್ತಿದ್ದಾರೆ. ಅವರ ಮೇಲೆ ಅಪಾದನೆ ಮಾಡುವುದಿಲ್ಲ. ಇಂಡಿಯಾ ದೇಶದ ಭದ್ರತೆ ಈ ರೀತಿ ದಕ್ಷಿಣಪ್ರಾಂತ ಮಾಡುವುದರಿಂದ ಉಳಿಯುವುದಾದರೆ ಅದಕ್ಕೆ ಸ್ವಾಗತ ನೀಡುತ್ತೇವೆ ಎಂದು ಅನೇಕರು ನುಡಿದರು. ನನಗಾದರೂ ಅನ್ನಿಸುತ್ತದೆ, ಬಹಳ ವರ್ಷಗಳಿಂದ ನಾನಾ ಭಾಷೆಗಳಿಂದ ಕೂಡಿದ ಬೊಂಬಾಯಿ, ಮದರಾಸು ಈ ಎರಡು ಪ್ರಾಂತಗಳಲ್ಲಿ ಭಿನ್ನಭಿನ್ನ ಅಭಿಪ್ರಾಯ ಬಂದು ಪ್ರತ್ಯೇಕ ಪ್ರಾಂತವಾಗಬೇಕು, ಭಾಷಾ ಆಧಾರದ ಮೇಲೆ ಪ್ರತ್ಯೇಕ ಪ್ರಾಂತವಾಗಬೇಕು ಎಂದು ಅಲ್ಲಿ ಬಹಳ ವರ್ಷಗಳಿಂದಲೂ ಒತ್ತಾಯಮಾಡಿದರು. ಅದರ ಮೇಲೆ ಇತ್ತೀಚೆಗೆ ಎಸ್. ಆರ್. ಕಮಿಷನ್ ಬಂದ ಮೇಲೆ ವರದಿ ತಯಾರುಮಾಡಿ ಪ್ರತ್ಯೇಕ ಪ್ರಾಂತ ಮಾಡಬೇಕೆಂದು ಬಿಲ್ಲನ್ನು ತಯಾರಿಸಿದರು. ಈಚೆಗೆ ಅವು ಪುನಃ ಸೇರಬೇಕೆಂಬ ಅಭಿಪ್ರಾಯವಿದೆ. 150 ವರ್ಷಗಳಿಂದಲೂ ಅವರು ಜೊತೆಯಲ್ಲಿದ್ದು ಪ್ರತ್ಯೇಕವಾಗಬೇಕೆಂಬ ಭಾವನೆಯನ್ನು ಈಗಲೂ ಬಿಟ್ಟಿಲ್ಲ. ಪ್ರತ್ಯೇಕ ಪ್ರಾಂತ ಮಾಡಬೇಕೆಂಬ ದೊಡ್ಡ ಸಮಸ್ಯೆ ಇಡೀ ಇಂಡಿಯಾ ದೇಶದಲ್ಲಿ ಷುರುವಾಗಿ ಈ ದಿವಸ ನಮ್ಮ ಮುಂದಿದೆ. ಬಿಲ್ಲು ಬಂದು ಹಸ್ತಗತವಾಗಿದೆ. ಅದನ್ನು ಜಾರಿಗೆ ಕೊಡಬಹುದೇ, ಅದರ ಮೇಲೆ ಯಾವ ರೀತಿ ವಾತಾವರಣವಿದೆ ಎಂಬುದು ನಮ್ಮ ಅನುಭವಕ್ಕೆ ಬಂದಿಲ್ಲ. ಈ ಮಧ್ಯೆ ದಕ್ಷಿಣ ಪ್ರಾಂತ ಮಾಡಬೇಕು ಅಥವಾ ದ್ವಿಭಾಷಾ ಪ್ರಾಂತಮಾಡಬೇಕು ಎಂಬ ಸೂಚನೆಯಿದೆ. ಇದುವರೆಗಿನ ಅನುಭವದಂತೆ ಪ್ರತ್ಯೇಕ ರಾಜ್ಯ ಮಾಡಿದರೆ ಈ ದಿವಸ ನಾವು ಅನುಭವಿಸುವುದಕ್ಕೆ ಅವಕಾಶವಿಲ್ಲ. ದಕ್ಷಿಣಪ್ರಾಂತ ಮಾಡಿದರೆ ಅದರಿಂದ ಎಷ್ಟರಮಟ್ಟಿಗೆ ಸಹಾಯವಾಗುತ್ತದೆಂಬುದನ್ನು ನಾವು ಸ್ವಲ್ಪ ಪರಿಶೀಲಿಸಬೇಕಾಗುತ್ತದೆ.

5 P.M.

ಇದು ಒಳ್ಳೆಯ ಉದ್ದೇಶವೇ ಇರಬಹುದು. ಇದು ಇಂಡಿಯಾದೇಶದ ಭದ್ರತೆಗೆ ಅನುಕೂಲವಾಗಿಯೇ ಇರಬಹುದು. ಆದರೆ ಇದನ್ನು ಮಾಡದೆಯಿದ್ದರೆ ನಮ್ಮ ದೇಶದ ಭದ್ರತೆಯೇ ಇರುವುದಿಲ್ಲ, ಇರತಕ್ಕಂಥ ಭದ್ರತೆಯೆಲ್ಲಾ ಹೋಗಿ ಬಿಡುತ್ತದೆ ಎಂದು ಹೇಳುವುದಕ್ಕೆ ಯಾವ ಕಾರಣವೂ ಇಲ್ಲ. ಈಗ ಉತ್ತರ ಪ್ರದೇಶ, ದಕ್ಷಿಣ ಪ್ರದೇಶ ಅಥವಾ ಪ್ರಾಂತ್ಯಗಳು, ಮಧ್ಯಪ್ರದೇಶ ಹೀಗೆ ಬಲವಾದ ಪ್ರಾಂತ್ಯಗಳನ್ನು ಏರ್ಪಡಿಸುವುದರಿಂದ ಇಂಡಿಯಾ ದೇಶದ ಭದ್ರತೆ ಇನ್ನೂ ಹೆಚ್ಚಾಗುತ್ತದೆಂದು ತಾವು ಹೇಳುವುದಾದರೆ, ಇದರಿಂದ ನಾನಾ ಕಲಹಗಳೂ ಮತ್ತು ವ್ಯಾಜ್ಯಗಳೂ ಪುನಃ ಪ್ರಾರಂಭವಾಗಿ ನೀವು ಅಪೇಕ್ಷಿಸುತ್ತಿರುವಂಥ ಆ ಭದ್ರತೆಗೆ ಒಂದು ಸಂಚಕಾರ ಬರಬಹುದೆಂದು ನನಗೆ ಅನ್ನಿಸುತ್ತಿದೆ. ಈ ಒಂದು ಭದ್ರತೆಯ ಕಾರಣಕ್ಕಾಗಿಯೇ ತಾವು ಈ ಪ್ರದೇಶಗಳನ್ನು ಎಂದರೆ ಈ ದ್ರಾವಿಡಸ್ಥಾನವನ್ನು ಆ ಉತ್ತರ ಪ್ರದೇಶಕ್ಕೆ ಗಂಟು ಹಾಕಬೇಕೆಂದು ಹೇಳುವುದಾದರೆ, ಇದರಿಂದ ದೇಶಕ್ಕೆ ತುಂಬ ಧಕ್ಕೆ ಬರುತ್ತದೆಂದು ನನಗನಿಸುತ್ತದೆ. ಹಾಗೆ ದೇಶದ ಭದ್ರತೆಗಾಗಿಯೇ ಈ ರೀತಿ ದೊಡ್ಡ ದೊಡ್ಡ ಪ್ರಾಂತ್ಯಗಳನ್ನು ಕಟ್ಟಬೇಕೆಂದು ಹೇಳುವುದಾದರೆ ಯೂಪಿ, ಕೇರಳ, ತೆಲಗು ಪ್ರಾಂತ್ಯ, ತಮಿಳುನಾಡು ಈ ಪ್ರಾಂತ್ಯಗಳೂ ಒಂದಾಗಲಿ. ಬಹುಶಃ ಆ ಉತ್ತರ ಭಾಗದಲ್ಲೇನೋ ಹಿಂದಿ ಭಾಷೆಯನ್ನಾಡತಕ್ಕ ಜನರೇ ಜಾಸ್ತಿಯಾಗಿರಬಹುದು. ಈಗ ಅದೊಂದು ವೈಯಬಲ್‌ಸ್ಟೇಟ್ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ನಾನಾದರೂ ಕೇವಲ ಈ ಭಾಷೆ ಒಂದರಮೇಲೆಯೇ ರಾಜ್ಯಕಟ್ಟಬೇಕೆಂದು ಹೇಳುತ್ತಿಲ್ಲ. ಹೀಗೆ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡುವುದು ಕನ್ನಡ ಮಾತನಾಡತಕ್ಕ ಜನಗಳು ಎಲ್ಲೆಲ್ಲಿದ್ದಾರೋ ಅವರೆಲ್ಲರೂ ಒಂದು ಕಡೆ ಸೇರಿದರೆ ಒಬ್ಬೊಬ್ಬರಿಗೊಬ್ಬರು ಅವರ ವ್ಯವಹಾರಗಳನ್ನು ಒಂದು ಭಾಷೆಯಲ್ಲಿ ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ ಎನ್ನುವುದಕ್ಕೇ ಹೊರತು ಕೇವಲ ಈ ಭಾಷೆ ಆಧಾರದಮೇಲೆ ರಾಜ್ಯಗಳ ಪುನರ್ವಿಂಗಡಣೆ ಮಾಡುತ್ತಿಲ್ಲ. ಈ ದಿವಸ ನಮ್ಮ ಸ್ಟೇಟ್‌ನಲ್ಲಿ ಈ ಭಾಷೆ ಆಧಾರ ಒಂದನ್ನೇ ಇಟ್ಟುಕೊಂಡು ನಾವೇನೂ ಈ ಪ್ರಾಂತ್ಯಗಳ ವಿಂಗಡಣೆ ಮಾಡಿಲ್ಲ. ಈ ದಿವಸ ನಮ್ಮಲ್ಲಿ ತೆಲುಗು, ತಮಿಳು ಮಾತನಾಡತಕ್ಕಂಥ ಜನಗಳೂ ಇದ್ದಾರೆ. ಆದರೆ ಇಲ್ಲಿ ಇತರ ಎಲ್ಲ ಭಾಷೆಗಳಿಗಿಂತಲೂ ಕನ್ನಡ ಮಾತನಾಡತಕ್ಕಂಥ ಜನರು ಹೆಚ್ಚಾಗಿರುತ್ತಾರೆ. ಈ ದೇಶ ಒಂದು ಕಾಂಪೋಜಿಟ್ ಕ್ಯಾರಕ್ಟರ್ ಹೊಂದಿರತಕ್ಕದ್ದಾಗಿದೆ. ಹೀಗಿರುವಾಗ, ಬರಿ ಭಾಷೆಯೊಂದರ ಆಧಾರದಮೇಲೆ ರಾಜ್ಯ ಪುನರ್ವಿಂಗಡಣೆ ಮಾಡುತ್ತಿಲ್ಲವೆಂಬ ನೆಪದ ಮೇಲೆ ಇಲ್ಲಿ ನಾನಾ ಭಾಷೆಗಳ ಜನರನ್ನು ತಂದು ಹಾಕಿ ಒಬ್ಬೊಬ್ಬರಿಗೊಬ್ಬರಿಗೆ ವ್ಯಾಜ್ಯತಂದು ಹಾಕಬೇಕೆಂಬ ಇರಾದೆ ನನಗಿಲ್ಲ. ಕೋಲಾರ ಜಿಲ್ಲೆಯಲ್ಲಿ ತೆಲುಗು ಮಾತನಾಡತಕ್ಕ ಜನರೇ ಜಾಸ್ತಿಯಾಗಿದ್ದಾರೆ, ಕೆ. ಜಿ. ಎಫ್. ನಲ್ಲಿ ತಮಿಳು ಮಾತನಾಡತಕ್ಕವರು ಜಾಸ್ತಿ ಇರುತ್ತಾರೆ. ಆದರೆ ಈ ನಮ್ಮ ಬೆಂಗಳೂರಿನಲ್ಲಿ ತಮಿಳು, ತೆಲುಗು, ಕನ್ನಡ ಈ ಎಲ್ಲ ಭಾಷೆಗಳಲ್ಲೂ ಮಾತನಾಡತಕ್ಕ ಜನಗಳಿರುತ್ತಾರೆ, ಈಗಲೇ ಈ ಸ್ಟೇಟ್ ಒಂದು ಕಾಂಪೋಜಿಟ್ ಸ್ಟೇಟಾಗಿದೆ. ಆದುದರಿಂದ ಇದನ್ನು ಇನ್ನು ಹೆಚ್ಚಿಸುವುದು ಬೇಡ, ಈಗ ಇರತಕ್ಕ ಮೈಸೂರು ಹೀಗೆಯೇ ಮೈಸೂರಾಗಿರಲಿ ಎಂದು ಹೇಳುವುದಕ್ಕೆ ಬದಲಾಗಿ ಇದು ಇನ್ನೂ ಈ ಆಡಳಿತ ಸೌಕರ್ಯಕ್ಕಾಗಿ ವಿಶಾಲವಾಗಬೇಕಾದದ್ದು ಅಗತ್ಯವೆಂಬ ತೀರ್ಮಾನಕ್ಕೆ ಬಂದಿದ್ದೇವೆ. ಈಗ ನಮ್ಮ ಮುಂದಿರತಕ್ಕ ಪ್ರಶ್ನೆ ಈ ರಾಜ್ಯ ಹೀಗೆ ಎಲ್ಲಿಯವರೆಗೆ ವಿಸ್ತಾರವಾಗಬೇಕು ಎನ್ನುವುದೇ ಆಗಿದೆ. ಇದರಲ್ಲಿ ಈಗ ಕೆಲವರಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಮೂಡಿವೆ. ಕೆಲವರು ದಕ್ಷಿಣಕ್ಕೆಲ್ಲ ಒಂದೇ ಪ್ರದೇಶವಿರಬೇಕೆಂದು ಹೇಳುತ್ತಿದ್ದಾರೆ. ಮತ್ತೆ ಕೆಲವರು ಕನ್ಯಾಕುಮಾರಿಯಿಂದ ಹಿಡಿದು ಕಾಶಿಯವರೆಗೂ ಒಂದೇ ರಾಜ್ಯವಿರಲೆಂದು ಹೇಳಬಹುದು. ಆದರೆ ಇದೆಲ್ಲಾ ಆಗದಮಾತು. ಈಗ ಸದ್ಯಕ್ಕೆ, ಈ ಮೈಸೂರನ್ನೊಳಗೊಂಡ ಕನ್ನಡ ಪ್ರಾಂತ್ಯ ನಿರ್ಮಾಣವಾಗಲಿ ಎಂದು ಹೇಳಿದರೆ 'ಅದು ಬೇಡ ದಕ್ಷಿಣ ಕರ್ಣಾಟಕ, ಉತ್ತರ ಕರ್ಣಾಟಕ ಎಂಬ ಪ್ರಾಂತ್ಯಗಳು ಮೊದಲು ವಿಶಾಲವಾಗಲಿ ಅನಂತರ ಅದು ಯಾವ ರೀತಿ ಆಗುತ್ತದೆ ಎಂಬುದನ್ನು ಪರೀಕ್ಷೆ ಮಾಡಿ ನೋಡಿದ ಮೇಲೆ ಈ ರೀತಿ ಒಂದು ವಿಶಾಲ ಕನ್ನಡ ಪ್ರಾಂತ್ಯ ನಿರ್ಮಾಣ ಮಾಡೋಣವೆಂದು ಕೆಲವರು ಹೇಳುತ್ತಿದ್ದಾರೆ. ಆದರೆ ಏತಕ್ಕಾಗಿ ಹೀಗೆ ಹೇಳುತ್ತಿದ್ದಾರೆಂಬುದೇ ನನಗಿನ್ನೂ ಅರ್ಥವಾಗುವುದಿಲ್ಲ. ಅವರು ಹೇಳಿರತಕ್ಕದ್ದನ್ನು ನಾನು ತಪ್ಪೆಂದು ಹೇಳುವುದಿಲ್ಲ. ನಾವು ಒಂದೆರಡು ವರ್ಷ ಕಾದು ನೋಡೋಣ. ಈಗ ಸದ್ಯಕ್ಕೆ ನಮ್ಮ ಮುಂದೆ ಬಂದಿರತಕ್ಕ ಕನ್ನಡ ಪ್ರಾಂತ್ಯವನ್ನು ನಿರ್ಮಾಣಮಾಡೋಣ, ಅನಂತರ ಬೇಕಾದರೆ ಆಂಧ್ರ-ಕರ್ಣಾಟಕ ಅಥವಾ ಕರ್ಣಾಟಕ-

(ಶ್ರೀ ಆರ್. ಚೆನ್ನಿಗರಾಮಯ್ಯ.)

ಕೇರಳ ಪ್ರದೇಶಗಳ ವಿಚಾರವನ್ನು ಪ್ರತ್ಯೇಕವಾಗಿ ಪರಿಶೀಲನೆಗೆ ಇಟ್ಟುಕೊಳ್ಳೋಣ ಎಂದರೆ ಅವರಿಗೆ ನಾವು ಹೇಳುತ್ತಿರುವುದು ಸರಿಯಾಗಿ ಅರ್ಥವಾಗುತ್ತಿಲ್ಲ. ಆದರೆ ಅವರು ಹೇಳುತ್ತಿರುವುದೂ ಸಹ ನಮಗೆ ಇನ್ನೂ ಸರಿಯಾಗಿ ಅರ್ಥವಾಗಿಲ್ಲ. ಈ ದಿವಸ ನಮ್ಮ ಮುಂದೆ ಬಂದಿರತಕ್ಕ ಪ್ರಶ್ನೆ ಮೈಸೂರು ಮೈಸೂರಾಗಿಯೇ ಇರಲಿ ಎನ್ನುವುದಲ್ಲ. ಈ ಪ್ರಶ್ನೆಯೇನೂ ಈಗ ಚರ್ಚೆಗೆ ಬಂದಿಲ್ಲ. ಆದುದರಿಂದ ನಾವು ಈಗ ನಮ್ಮ ಚರ್ಚೆಯಲ್ಲಿ ಈ ವ್ಯತ್ಯಾಸವನ್ನು ಗ್ರಹಿಸದೆ ಚರ್ಚೆ ಮಾಡಿದ ಪಕ್ಷದಲ್ಲಿ ಅದು ಅನುಚಿತವಾಗಬಹುದೆಂದು ನನಗೆ ಅನಿಸುತ್ತಿದೆ. ಆದರೆ ಕೆಲವರು ಈ ದಿವಸ ಈ ರೀತಿಯಾಗಿ ಪ್ರಾಂತಗಳು ಪುನರ್ವಿಂಗಡಣೆಯಾದ ಪಕ್ಷದಲ್ಲಿ ಇಂಡಿಯಾದೇಶದ ಭದ್ರತೆಗೆ ಧಕ್ಕೆ ಬರುತ್ತದೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಭದ್ರತೆಗೆ ಅಂಥ ತೊಂದರೆಯೇನೂ ಬರುವುದಿಲ್ಲ. ಅವರ ಕೈಯಲ್ಲಿ ಮಿಲಿಟರಿ ಸಿಬ್ಬಂದಿಯಿದೆ. ಅವರ ಕೈಯಲ್ಲಿ ಹಣಕಾಸಿನ ಸ್ವಾತಂತ್ರ್ಯವಿದೆ. ಈ ದಿವಸ ಕೇರಳಕ್ಕೆ ಧಕ್ಕೆ ಬರುವುದಾಗಿದ್ದರೆ ಅದನ್ನು ನಾವು ತಪ್ಪಿಸಲು ಸಾಧ್ಯವಿಲ್ಲ. ಹಾಗೆ ಧಕ್ಕೆ ಬರುವುದಾಗಿದ್ದರೆ ಮುಂದೆ ದಕ್ಷಿಣ ಪ್ರದೇಶವಾದರೂ ಆ ಧಕ್ಕೆ ಇದ್ದೇ ಇರುತ್ತದೆ, ಆಗಲೂ ಬಂದೇ ಬರುತ್ತದೆ ಅಥವಾ ಕೇರಳ ಮೈಸೂರು ಸೇರಿದ್ದಾಗ್ಯೂ ಆ ಧಕ್ಕೆ ಆಗಲೂ ಬಂದೇ ಬರುತ್ತದೆ. ಹೀಗೆ ಧಕ್ಕೆ ತರುವುದೂ ಬಿಡುವುದೂ ಸಂಪೂರ್ಣವಾಗಿ ಅವರ ಕೈಲಿದೆ. ಹೀಗಿರುವಾಗ ದೇಶವನ್ನು ವಿಶಾಲ ಮಾಡುವುದರಿಂದ ಈ ಭದ್ರತೆ ಉಳಿಯುತ್ತದೆ ಇಲ್ಲದಿದ್ದರೆ ಇಲ್ಲ ಎಂದು ಹೇಳತಕ್ಕ ಮಾತಿನಲ್ಲಿ ಅರ್ಥವಿಲ್ಲ. ಈ ದಕ್ಷಿಣ ಪ್ರದೇಶವಾದರೇನೇ ನಮ್ಮ ದೇಶದ ಭದ್ರತೆ ಉಳಿಯುತ್ತದೆ, ಇಲ್ಲದಿದ್ದರೆ ಆ ಭದ್ರತೆ ಉಳಿಯುವುದಿಲ್ಲ ಎಂದು ಹೇಳತಕ್ಕ ಮಾತು ನನಗೇಕೋ ಅರ್ಥವೇ ಆಗುತ್ತಿಲ್ಲ. (ಸಭೆಯಲ್ಲಿ ಗದ್ದಲ). ಇಲ್ಲಿಯವರೆಗೂ ಈ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದ ವೇಳೆಯಲ್ಲಿ ಅವರು ಅವರ ಅಭಿಪ್ರಾಯವೇನಿದೆಯೋ ಅದನ್ನು ಹೇಳಲಿ ಎಂಬುದಾಗಿ ಒಂದು ವಿಶಾಲ ಮನೋಭಾವನೆಯನ್ನಿಟ್ಟುಕೊಂಡು ನಾನು ಸುಮ್ಮನೆ ಕುಳಿತಿದ್ದೆನು. ಆದರೆ ನಾನು ಮಾತನಾಡುವಾಗ ಅವರೂ ಸಹ ಅಷ್ಟೇ ವಿಶಾಲ ಭಾವನೆಯನ್ನಿಟ್ಟುಕೊಂಡು ಸುಮ್ಮನಿರಬೇಕೆಂಬ ಭಾವನೆ ಅವರಿಗಿರುವುದಿಲ್ಲ. ಆದರೆ ಈಗ ಇಬ್ಬರಿಗೂ ರ ಚಿಕರವಾಗಿರುವಂತೆ ಮಾತನಾಡೋಣ ಎಂತಲೇ ಈಗ ಈ ಬಿಲ್ಲು ನಮ್ಮ ಮುಂದೆ ಬಂದಿದೆ. ಈಗ ಇಲ್ಲಿ ಕೆಲವರಲ್ಲಿ ಮೂಡಿರತಕ್ಕಂಥ ಆ ಒಂದು ಜಿಜ್ಞಾಸೆ ಅವರಿಗೆ ಒಂದು ಸರಳವಾದ ಮನಸ್ಸು ಇಲ್ಲದಿರುವ ಕಾರಣ ಬಂದಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅವರು ಈ ದಿವಸ ನಮ್ಮ ಮುಂದೆ ಬಂದಿರತಕ್ಕ ಈ ಬಿಲ್ಲು ಸರಿಯಾಗಿಲ್ಲ ಎಂದು ಹೇಳುವುದಕ್ಕೆ ಕಾರಣಗಳೇನೂ ಇಲ್ಲ. ಅಷ್ಟೇ ಅಲ್ಲದೆ ನಾವು ಮುಂದೆ ಆಲೋಚನೆ ಮಾಡಬೇಕೆಂದಿರುವ ವಿಷಯ ಕೂಡ ಸರಿಯಾದದ್ದೆಂದು ಈಗಲೇ ಹೇಳುವುದಕ್ಕಾಗುವುದಿಲ್ಲ. ಆದರೆ ಈಗ ನಮ್ಮ ಮುಂದೆ ಬಂದಿರತಕ್ಕ ವಿಚಾರ ಯಾವರೀತಿ ಆಗುತ್ತದೆ ಎನ್ನುವುದನ್ನು ಮೊದಲು ನೋಡೋಣ. ನಮಗಿನ್ನೂ ಸರಿಯಾಗಿ ಇದೇ ಅರ್ಥವಾಗಿಲ್ಲ. ಹೀಗಿರುವಾಗ ಸುಮ್ಮನೆ ಕೆಲವರು ತಮ್ಮ ಮನಸ್ಸಿನಲ್ಲಿ ಯಾವುದೋ ಒಂದು ಭೀತಿಯನ್ನಿಟ್ಟುಕೊಂಡು ಹೀಗೆಲ್ಲಾ ವಾದ ಮಾಡುತ್ತಿರುವುದಕ್ಕೆ ಕಾರಣವಿಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ.—ಹೊರಗಡೆಯಿಂದ ಬರತಕ್ಕವರು ಬಹಳ ಚೆಲೋ ಮಂದಿ.

ಶ್ರೀ ಆರ್. ಚೆನ್ನಿಗರಾಮಯ್ಯ.—ಹೊರಗಡೆಯಿಂದ ಬರತಕ್ಕವರೆಲ್ಲ ಬಹಳ ಚೆಲೋ ಮಂದಿ ಎಂಬುದಾಗಿ ಶ್ರೀ ಜೆ. ಮಹಮ್ಮದ್ ಇಮಾಂ ಅವರು ಹೇಳುತ್ತಾರೆ. ನನಗೀಗ ಮುಖ್ಯವಾಗಿ ಬಂದಿರತಕ್ಕ ಒಂದು ಆಶ್ಚರ್ಯಕರವಾದಂಥ ವಿಚಾರ ಯಾವುದು ಎಂದರೆ—ಈ ದಕ್ಷಿಣ ಪ್ರದೇಶದ ವಿಚಾರ ಆಂಧ್ರದ ಲೆಜಿಸ್ಲೆಟಿವ್ ಅಸೆಂಬ್ಲಿಯಲ್ಲಿ ಚರ್ಚೆಗೆ ಬಂದಿಲ್ಲ. ಮದರಾಸಿನವರಿಗೆ ಈ ವಿಚಾರ ಬೇಕಾಗಿಲ್ಲ. ಕೇರಳದವರಿಗೆ ಇದು ಇಷ್ಟವಿಲ್ಲ. ಹೀಗೆ ಈ ದಿವಸ ಆ ಯಾರೊಬ್ಬರಿಗೂ ಬೇಕಿಲ್ಲದಂಥ ಭದ್ರತೆಯ ಪ್ರಶ್ನೆ ಈಗ ಕೇವಲ ನಮ್ಮೊಬ್ಬರ ತಲೆಯ ಮೇಲೆ ಬಿದ್ದಿರುವ ಹಾಗೆ ಕಾಣುತ್ತಿದೆ. ಆದರೆ ಇಂಡಿಯಾ ದೇಶದಲ್ಲಿ ಈ ಬೈಲಿಂಗ್ವಲ್ ಸ್ಟೇಟುಗಳನ್ನು ಮಾಡತಕ್ಕಂಥ ಜವಾಬ್ದಾರಿ ಎಲ್ಲರ ಮೇಲೂ ಬಿದ್ದಿದೆ. ಈ ರೀತಿ ಒಂದು ಬೈಲಿಂಗ್ವಲ್ ಸ್ಟೇಟನ್ನು ಮಾಡುವುದರಿಂದ ಮುಂದೆ ಆ ದೇಶದ ಆಡಳಿತ ಸುಲಲಿತವಾಗಿ ನಡೆಯುತ್ತದೆ ಎನ್ನುವ ವಿಚಾರದಲ್ಲಿ ಇಲ್ಲಿಯವರೆಗೆ ಯಾರೊಬ್ಬರೂ ತಮ್ಮ ಖಚಿತವಾದಂಥ ಅಭಿಪ್ರಾಯಗಳನ್ನು ಕೊಟ್ಟಿರುವುದಿಲ್ಲ. ಹಾಗೆ ಅವರಾರು ಈ ಬಗ್ಗೆ ಒಂದು ಖಚಿತಾಭಿಪ್ರಾಯವನ್ನು ವ್ಯಕ್ತಪಡಿಸದೆ ಇರುವಾಗ ನಾವೇ ಬಲವಂತದಿಂದ ಹೇಳುವುದಕ್ಕೆ ಹೋಗುವುದು ಹೇಗಾಗಿರುತ್ತದೆ, ಎಂದರೆ—ಹೆಣ್ಣು ಸ್ವರದ್ರೂಪಿ. ಆದುದರಿಂದ ನಾನು ಮದುವೆಯಾಗುತ್ತೇನೆಂದು ಹೇಳಿದರೆ, ಆಕೆ ಈತನ ಮುಖವನ್ನು ಸಹ ನಾನು ನೋಡುವುದಿಲ್ಲವೆಂದು ಹೇಳುತ್ತಿರುವ ಹಾಗೆ ಕಂಡು ಬರುತ್ತಿದೆ. ಆದರೆ ಈ ಪ್ರಶ್ನೆಯ ವಿಚಾರದಲ್ಲಿ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳವರೆಲ್ಲರೂ ಒಂದು ಸಹಕಾರ ಭಾವನೆಯಿಂದ ಸ್ನೇಹ ಸೌಹಾರ್ದಯುತವಾದ ಸನ್ನಿವೇಶಗಳನ್ನು ಉಂಟುಮಾಡಿದರೆ ಆಗ ನಾವೆಲ್ಲರೂ ಸೇರಿ ಈ ಪ್ರಶ್ನೆಯನ್ನು ಪರಿಶೀಲನೆ ಮಾಡಬಹುದು. ಆಗಲೂ ಕೂಡ ಶೇಕಡ 50 ಜನ ಒಪ್ಪಿದರೆ ಇನ್ನು ಉಳಿದ 50 ಜನರು ಇದಕ್ಕೆ ಒಪ್ಪದೆ ಇರಬಹುದು. ಈಗಾಗಲೇ ನಮ್ಮಲ್ಲಿ ಅನೇಕರು ಈ ಬೈಲಿಂಗ್ವಲ್ ಸ್ಟೇಟುಗಳು ಬೇಡ, ನಮಗೆ ಆ ದಕ್ಷಿಣ ಪ್ರದೇಶವೂ ಬೇಡ, ಮುಂದೆ ಬೇಕಾದರೆ ನೋಡೋಣ ಎಂದು ಹೇಳುತ್ತಿದ್ದಾರೆ. ಈ ದಿವಸ ನೀವು ಕೆಲವರು ಏನು ಇದನ್ನು ಒಂದು ಭೂತ ಎಂದು ತಿಳಿದುಕೊಂಡಿದ್ದೀರೋ ಆ ಮನೋಭಾವವನ್ನು ಬಿಡಿ ಎಂದು ಹೇಳುತ್ತೇನೆ. ನಾವು ನಮ್ಮ ಅಭಿಪ್ರಾಯಗಳನ್ನು ಕಾಲ ಬಂದ ಹಾಗೆ ಬೇಕಾದರೆ ಬದಲಾವಣೆ ಮಾಡಿಕೊಳ್ಳಬಹುದು.

ಶ್ರೀ ವಿ. ವೆಂಕಟಪ್ಪ.—ನಾವು ಈಗ ಹೊಸದಾಗಿ ಬರತಕ್ಕ ಜನರಿಗಾಗಿ ಹೆದರುತ್ತಿಲ್ಲ; ದೇಶದ ಭದ್ರತೆಗಾಗಿ ಕೆಲವು ವಿಷಯಗಳನ್ನು ಪರ್ಯಾಲೋಚನೆ ಮಾಡಬೇಕಾಗಿದೆ ಎಂದು ಹೇಳುತ್ತಿದ್ದೇವೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಆಧರೆ ತಾವು ಆ ಭದ್ರತೆಯೆನ್ನುವುದನ್ನು ಯಾವುದಕ್ಕೆ ಹೇಳುತ್ತಿದ್ದೀರಿ ಎನ್ನುವುದನ್ನು ಬಾಯಿ ಬಿಟ್ಟು ಸರಿಯಾಗಿ ಹೇಳುತ್ತಿಲ್ಲ. ಗುಂಭವಾಗಿಯೇ ಹೇಳುತ್ತಿದ್ದೀರಿ. ತಾವು ಹಾಗೆ ಗುಂಭವಾಗಿ ಹೇಳುತ್ತಿದ್ದರೆ ಅದು ನನಗೆ ಅರ್ಥವಾಗುತ್ತಿಲ್ಲ. ಆದರೆ ಈ ನಿಮ್ಮ ಗುಂಭಾರ್ಥ ಶ್ರೀ ಶಿವನಂಜೇಗೌಡರಿಗೆ ಅರ್ಥವಾದಷ್ಟು ಕೂಡ ನಮಗೆ ಅರ್ಥವಾಗುತ್ತಿಲ್ಲ. ಇದು ನಮ್ಮ ದುರದೃಷ್ಟ!

ಕೇರಳದ ವಿಚಾರದಲ್ಲಿ ಇವೊತ್ತಿನ ದಿನ ಅಲ್ಲಿರತಕ್ಕ ರಾಜಕೀಯ ಪರಿಸ್ಥಿತಿಯಲ್ಲಿ ಭದ್ರತೆ ಇಲ್ಲ, ಇವೊತ್ತು ಸುವ್ಯವಸ್ಥಿತವಾದ ಸರ್ಕಾರ ನಡೆಯುವುದಕ್ಕೆ ಅವಕಾಶವಿಲ್ಲ ಎಂದು ಹೇಳಿ ಅದು ಮದರಾಸಿಗಾಗಲಿ ಮೈಸೂರಿಗಾಗಲಿ ಸೇರಬೇಕೆಂದು ಹೇಳುತ್ತಾರೆ. ಒಟ್ಟಿನಲ್ಲಿ ತಿರುವಾಂಕೂರು-ಕೊಚ್ಚಿನ್ ಸಂಸ್ಥಾನ ಇಲ್ಲದ

ಹಾಗಾಯಿತು. ಈ ದೃಷ್ಟಿಯಿಂದ ಶ್ರೀ ಲಕ್ಕಪ್ಪನವರು ಬಹಳ ಒಳ್ಳೆಯ ಸೂಚನೆ ಕೊಟ್ಟರು. ತಿರುವಾಂಕೂರು-ಕೊಚ್ಚಿನ್‌ನಲ್ಲಿ ಸುವ್ಯವಸ್ಥಿತವಾದ ಸರ್ಕಾರ ಇಲ್ಲದೇ ಹೋದರೆ ಎಲ್ಲವನ್ನೂ ಮೈಸೂರಿಗೇ ಆಗಲಿ, ಮದರಾಸಿಗೇ ಆಗಲಿ ಸೇರಿಸುವುದಕ್ಕೆ ಬದಲಾಗಿ ಮೈಸೂರಿಗೆ ಅಕ್ಕಪಕ್ಕದಲ್ಲಿರುವ ಪ್ರಾಂತ್ಯ ಮೈಸೂರಿಗೆ ಸೇರಲಿ, ಮದರಾಸಿಗೆ ಅಕ್ಕಪಕ್ಕದಲ್ಲಿರುವ ಪ್ರಾಂತ್ಯ ಮದರಾಸಿಗೆ ಸೇರಲಿ. ಆ ರೀತಿ ಮಾಡಿದರೆ ಉದ್ದೇಶ ನೆರವೇರುತ್ತದೆ, ಭದ್ರತೆ ಬರುತ್ತದೆ ಎನ್ನುವುದಾದರೆ ಅವಕ್ಕೆ ನಮ್ಮ ತಕರಾರು ಏನೂ ಇಲ್ಲ, ಹೀಗೆ ಶ್ರೀ ಲಕ್ಕಪ್ಪನವರು ಹೇಳಿದಂತೆ ಛಿದ್ರಮಾಡಿ ಸೇರಿಸತಕ್ಕ ಅವಕಾಶ ಇದ್ದರೆ, ಅದರಿಂದ ದೇಶದ ಭದ್ರತೆಗೆ ಅನುಕೂಲವಾಗುತ್ತದೆ, ಒಳ್ಳೆಯದಾಗುತ್ತದೆ ಎಂದರೆ, ಅದಕ್ಕೆ ನನ್ನ ಪ್ರತಿಭಟನೆ ಏನೂ ಇಲ್ಲ.

ಈ ರೀತಿ ಇವೊತ್ತಿನ ಪರಿಸ್ಥಿತಿಗೆ ತಕ್ಕ ಹಾಗೆ ಈಗ ಬಂದಿರತಕ್ಕ ಬಿಲ್ಲನ್ನು ನಾವೆಲ್ಲರೂ ಒಂದೇ ಮನಸ್ಸಿನಿಂದ, ಸೌಹಾರ್ದದಿಂದ ಒಪ್ಪಿಕೊಳ್ಳೋಣ ; ಮುಂದೆ ಕೆಲವು ದಿನಗಳ ನಂತರ ಬದಲಾವಣೆಗಳಾಗಬೇಕಾಗಿ ಕಂಡುಬಂದರೆ, ನಮ್ಮ ಕೈಯಲ್ಲಿದೆ, ಯಾವ ರೀತಿ ಬೇಕಾದರೂ ಬದಲಾವಣೆ ಮಾಡಿಕೊಳ್ಳಬಹುದು. ಆದ್ದರಿಂದ ಎಲ್ಲರೂ ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ನಮ್ಮ ಮುಂದೆ ಇರತಕ್ಕಂಥ ಈ ಡ್ರಾಫ್ಟ್ ಎಸ್. ಆರ್. ಬಿಲ್ಲಿಗೆ ಜನ್ಮವನ್ನು ಕೊಟ್ಟಂಥ ಎಸ್ಸಾರ್ಸಿ ಕಮಿಷನ್ ವರದಿಯ ಮೇಲೆ ಮಾತನಾಡುವಾಗ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುವಾಗ ಈ ರೀತಿಯಾಗಿ ಹೇಳಿದ್ದೇನೆ :

> ". . . . the unity and safety of India would be adversely affected if the States in India are reorganised on the basis of language. I therefore oppose the recommendations of the S.R.C."

ಸ್ವಾಮಿ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕಂಥ ಈ ಬಿಲ್ಲೂ ಕೂಡ, ಶ್ರೀ ಗೋಪಾಲಗೌಡರು ಸಮರ್ಥನೆ ಮಾಡಿ ಹೇಳಿದ ಹಾಗೆ, ಭಾಷೆಯನ್ನೇ ಮುಖ್ಯ ಆಧಾರವಾಗಿಟ್ಟುಕೊಂಡು ದೇಶದ ಪುನರ್‌ವಿಂಗಡಣೆಯನ್ನು ಮಾಡಬೇಕೆಂದು ಹೇಳಿ ರೂಪಿಸಿರತಕ್ಕಂಥಾದ್ದು. ಈ ರೀತಿಯಾಗಿ ಭಾಷೆಯ ಆಧಾರದ ಮೇಲೆ ಇಂಡಿಯಾ ದೇಶವನ್ನು ಪುನರ್ವಿಂಗಡಣೆಮಾಡತಕ್ಕಂಥಾದ್ದು ಬಹುಶಃ ಇಂಡಿಯಾ ದೇಶದ ಇತಿಹಾಸದಲ್ಲಿ ಇದೇ ಪ್ರಥಮ ಬಾರಿ.

ಕೆಲವು ಸದಸ್ಯರು.—ಇಲ್ಲ, ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಸ್ವಲ್ಪ ಸೂಕ್ಷ್ಮವಾಗಿ ಇಂಡಿಯಾ ದೇಶದ ಎರಡು ಸಾವಿರ ಮೂರು ಸಾವಿರ ವರ್ಷದ ಚರಿತ್ರೆಯನ್ನೆಲ್ಲಾ ತೆಗೆದುಕೊಂಡರೂ ಕೂಡ ಯಾವ ಚಕ್ರಾಧಿಪತ್ಯದ ಕಾಲದಲ್ಲೂ ಭಾಷೆಯನ್ನೇ ಆಧಾರವಾಗಿಟ್ಟುಕೊಂಡು ನಮ್ಮ ದೇಶದ ವಿಂಗಡಣೆ ಆಗಿಲ್ಲ; ರಾಜ್ಯವನ್ನೂ ಕೂಡ ಯಾರೂ ಕಟ್ಟಿರಲಿಲ್ಲ.

ಒಬ್ಬ ಸದಸ್ಯರು.—ಆಗ ಈ ರೀತಿ ಪ್ರಜಾಪ್ರಭುತ್ವ ಇರಲೂ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಅಂಥ ಒಂದು ಪ್ರಯೋಗ ನಮ್ಮ ದೇಶದಲ್ಲಿ ಈಗ ನಡೆಯಬೇಕಾಗಿ ಬಂದಿದೆ. ನಾನು ಭಾಷೆಯ ಆಧಾರದ ಮೇಲೆ ರಾಜ್ಯವನ್ನು ಪುನರ್ವಿಂಗಡಣೆ ಮಾಡುವುದು ಸರಿಯಲ್ಲ ಎಂದು ಹೋದ ಸಾರಿ ಕೂಡ ಸಮರ್ಥನೆ ಮಾಡಿದೆ. ಅದರ ಜೊತೆಗೆ ಮೈಸೂರು ಪ್ರಾಂತ ಇದ್ದದ್ದು ಇದ್ದ ಹಾಗೆಯೇ ಇರುವುದು ಒಳ್ಳೆಯದು ಎಂದು ಏಕೆ ನಾನು ಸಮರ್ಥನೆ ಮಾಡುತ್ತೇನೆ ಎನ್ನುವುದನ್ನೂ ಕೂಡ ನನ್ನ ಭಾಷಣದಲ್ಲಿ ಹೇಳಿದ್ದೇನೆ. "Small State" ಅಥವಾ "Big State" ಎಂಬ ಒಂದು ವಾದ ಏನಿದೆ, ಆ ವಾದವನ್ನೇ ಆಧಾರವಾಗಿಟ್ಟುಕೊಂಡು ಇಂಡಿಯಾ ದೇಶವನ್ನು ಸಣ್ಣ ಸಣ್ಣ ಪ್ರಾಂತ್ಯಗಳಾಗಿ ಅಥವಾ ವೈಯಬಲ್ ಯೂನಿಟ್ಸ್ ಆಗಿ ವಿಂಗಡಣೆ ಮಾಡುವುದು ಸರಿಯಾದ ಕೆಲಸ. ಈ ಮೈಸೂರು ಪ್ರಾಂತ್ಯ ಆ ರೀತಿಯಾದ ಒಂದು ವೈಯಬಲ್ ಯೂನಿಟ್ ಆಗಿದೆ, ಒಂದು ಎಕನಾಮಿಕ್ ಯೂನಿಟ್ ಆಗಿ ಕೂಡ ಇದೆ. ಅನೇಕ ವರ್ಷಗಳಿಂದ ಈ ಪ್ರಾಂತ ಹೀಗೆಯೇ ನಡೆದು ಬಂದು ಬಹಳ ಅಭಿವೃದ್ಧಿಯನ್ನು ಕೂಡ ಹೊಂದಿದೆ. ಇದನ್ನೇ ಒಂದು ದೃಷ್ಟಾಂತವಾಗಿ ತೆಗೆದುಕೊಂಡು ಇದನ್ನೇ ಒಂದು ಮಾದರಿಯಾಗಿ ಇಟ್ಟುಕೊಂಡು ಇಂಡಿಯಾ ದೇಶದ ಇತರ ಪ್ರಾಂತ್ಯಗಳನ್ನು ಈ ಆಧಾರಕ್ಕೆ ಅನುಸರಿಸಿ ವಿಂಗಡಣೆ ಮಾಡುವುದನ್ನು ಒಪ್ಪಬೇಕು ಎಂದು ಹೇಳಿ ಪ್ರತಿಪಾದನೆ ಮಾಡಿದ್ದೆ. ಹಿಂದೆ ಸ್ಟೇಟ್ಸ್ ರೀ-ಆರ್ಗನೈಸೇಷನ್ ವರದಿಯಲ್ಲೂ ಕೂಡ, ಈ ವಿಚಾರವಾಗಿ ಒಂದು Chapter ನಲ್ಲಿ, ಇದನ್ನು ಪ್ರಸ್ತಾಪಿಸಿದ್ದಾರೆ. ಸಣ್ಣ ಪ್ರಾಂತ್ಯಗಳು ಅಂದರೆ ಹೇಗಿರಬೇಕು, ಅದರಿಂದ ಒಳ್ಳೆಯದೇನು, ಕೆಟ್ಟದ್ದೇನು, ದೊಡ್ಡ ಪ್ರಾಂತ್ಯ ಮಾಡುವುದರಿಂದ ಒಳ್ಳೆಯದೇನು ಕೆಟ್ಟದ್ದೇನು ಎಂಬ ಎಲ್ಲ ವಿಷಯಗಳನ್ನೂ ವಿಮರ್ಶೆಮಾಡಿ ರೀ-ಆರ್ಗನೈಸೇಷನ್ ಕಮಿಷನ್ನಿನವರು ದೊಡ್ಡ ಪ್ರಾಂತ್ಯ ಆಗುವುದೇ ಸರಿ ಎಂದು ಹೇಳಿ ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಅದೇ ಅಭಿಪ್ರಾಯವನ್ನು ಭಾರತದ ಪ್ರಧಾನ ಮಂತ್ರಿಗಳಾದ ಪಂಡಿತ ಜವಹರಲಾಲ್ ನೆಹರೂ ಅವರೂ ಕೂಡ ರಾಜ್ಯ ಸಭೆಯಲ್ಲಿ ಈ ಎಸ್. ಆರ್. ಸಿ. ವರದಿಯ ಮೇಲೆ ಚರ್ಚೆ ನಡೆದಂಥ ಕಾಲದಲ್ಲಿ ಆ ಚರ್ಚೆಗೆ ಉತ್ತರವಾಗಿ ಮಾತನಾಡುತ್ತಾ ಈ ರೀತಿಯಾಗಿ ಹೇಳಿರುತ್ತಾರೆ:—

> "My general approach towards the problem of States Reorganisation in the past has been rather in favour of small States; when I say a small State, I do not mean a small State with all the paraphernalia of the big State today because that would be quite impossible. A multitude of Governors, a multitude of High Courts, a multitude of public services, all over spread out—that would become quite impossible—but broadly speaking, my original approach was in favour of small States tied up together, a number of States in larger grouping. Now the more I have thought of this matter—and we have given obviously a great deal of thought to it, more especially since the

(ಶ್ರೀ ಡಿ. ದೇವರಾಜ ಅರಸ್.)

publication of this report—I confess that I have changed my opinion, and I have come converted to the idea of large States and, in fact, I am rather sorry that in this respect they have recommended some small States, and I say this for a variety of reasons.''

ಈ ರೀತಿಯಾಗಿ ತಾವು ಈ ವರದಿ ಬಂದ ಮೇಲೆ ಸಣ್ಣ ಪ್ರಾಂತ್ಯಗಳೇ ಇರುವುದು ಒಳ್ಳೆಯ ದು ಎನ್ನುವ ತಮ್ಮ ಹಿಂದಿನ ಅಭಿಪ್ರಾಯವನ್ನು ಈ ಕಾರಣಗಳಿಗಾಗಿ ವಾಪರ್ಾಡುಮಾಡಿಕೊಂಡೆ ಎಂದು ಹೇಳಿ 'I confess I have changed my opinion' ಎಂದು ಹೇಳುತ್ತಾ ಇದ್ದಾರೆ. ಹಾಗೆ ಇವೊತ್ತಿನ ದಿವಸ ಸಣ್ಣ ಪ್ರಾಂತ ಆಗುವುದಕ್ಕಿಂತ ದೊಡ್ಡ ದೊಡ್ಡ ಪ್ರಾಂತ್ಯ ಗಳೇ ಆಗಬೇಕೆಂದು ಹೇಳತಕ್ಕ ಒಂದು ವಾದಕ್ಕೆ ಇಂಡಿಯಾ ಸರ್ಕಾರವೇ ಪುರಸ್ಕಾರ ಕೊಟ್ಟು ಮತ್ತು ಇಂಡಿಯಾ ಸರ್ಕಾರವೇ ಅದನ್ನು ಒಂದು (policy) ಪಾಲಿಸಿ ಆಗಿ ಕೂಡ (adopt) ಅಡಾಪ್ಟ್ ಮಾಡಿ ಕೊಂಡಿದ್ದಾರೆ ಎನ್ನುವುದು ಈ ಬಿಲ್ಲನ್ನು ನಾವು ನೋಡಿದರೆ ಅರ್ಥವಾಗುತ್ತದೆ. ಆದಕಾರಣ ನಾನು ಹಿಂದೆ ಏನೇನು ವಾದಮಾಡಿದ್ದೆ, ಮೈಸೂರು ಸಂಸ್ಥಾನ ಸಣ್ಣ ಸಂಸ್ಥಾನವಾಗಿರುವುದು ಒಳ್ಳೆಯದು ಎಂದು ಅದನ್ನು ಈಗ ಬದಲಾಯಿಸಿಕೊಳ್ಳಬೇಕಾಗಿದೆ. I also find, Sir, that I have been converted and have to change my opinion in view of what has been stated by our beloved leader Pandit Jawaharlal Nehru.

Mr. SPEAKER.—Ideas are bound to change on account of experience.

A MEMBER.—Also on account of exigencies !

ಶ್ರೀ ಡಿ. ದೇವರಾಜ ಅರಸ್.—ದೊಡ್ಡ ಪ್ರಾಂತ ಗಳಾಗುವುದರಿಂದ ಹೇಗೆ ಒಳ್ಳೆಯದು ಎಂದು ಅವರು ಅನೇಕ ವಿಷಯಗಳನ್ನು ಉದಹರಿಸಿ ಹೇಳಿದ್ದಾರೆ. ದೇಶದಲ್ಲಿ ಹಿಂದೆ ನಾವು ರಾಜಕೀಯಕ್ಕಾಗಿ ಹೋರಾಟ ಮಾಡುತ್ತಿದ್ದೆವು. ಆ ಕಾಲ ಈಗ ಕಳೆದುಹೋಗಿದೆ. ಈಗ ಆರ್ಥಿಕವಾಗಿ, ಸಾಮಾಜಿಕವಾಗಿ, ಬದಲಾವಣೆ ಗಳನ್ನು ಮಾಡುವುದಕ್ಕೋಸ್ಕರವಾಗಿ ನಾವು ದುಡಿಯ ಬೇಕು ಎಂದು ಕೂಡ ಹೇಳಿದ್ದಾರೆ. ಅದೇ ರೀತಿಯಾಗಿ ನಮ್ಮ ದೇಶದಲ್ಲಿ ಈಗ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಿ ಅವುಗಳನ್ನೆಲ್ಲ ಕಾರ್ಯರೂಪಕ್ಕೆ ತರತಕ್ಕ ಒಂದು ಸನ್ನಿವೇಶದಲ್ಲಿ ನಾವಿದ್ದೇವೆ. ಈ ಎಲ್ಲ ದೃಷ್ಟಿ ಯಿಂದ ನೋಡುವುದಾದರೆ ದೊಡ್ಡ ಪ್ರಾಂತಗಳು ಇರುವುದು ಉತ್ತಮವೆಂದು ಬಹುಜನರ ಅಭಿಪ್ರಾಯ ವಾಗಿದೆ. ಇಂಡಿಯಾ ಸರ್ಕಾರದ ಒಂದು ನೀತಿ ಕೂಡ ಅದಕ್ಕೆ ಮನ್ನಣೆ ಕೊಟ್ಟಿದೆ. ಆದರೆ ಭಾಷೆಯ ಆಧಾ ರದ ಮೇಲೆ ಈ ರೀತಿಯಾಗಿ ಪ್ರಾಂತಗಳನ್ನು ಮಾಡು ವುದು ಸರಿಯೇ, ಸೂಕ್ತವೇ ಎಂದು ಕೇಳಿದರೆ, ಇವೊತ್ತು ಕೂಡ ನನ್ನ ಖಚಿತವಾದ ಅಭಿಪ್ರಾಯ ವೇನಿದೆ ಎಂದರೆ ಭಾಷೆಯ ಆಧಾರದಮೇಲೆ ದೇಶ ವನ್ನು ವಿಭಜನೆ ಮಾಡುವುದು ಖಂಡಿತ ಸೂಕ್ತವಲ್ಲ. ಭಾಷೆಯ ಆಧಾರದಮೇಲೆ ದೇಶವನ್ನು ವಿಂಗಡಣೆ ಮಾಡತಕ್ಕದ್ದು ಸೂಕ್ತವಲ್ಲವೆಂದು ನಾವು ಹೇಳುವಾಗ ಮಾನ್ಯ ಸ್ನೇಹಿತರಾದ ಶ್ರೀ ಚೆನ್ನಿಗರಾಮಯ್ಯ ನವರು ಅಂಥ ಪ್ರಬಲವಾದ ಕಾರಣಗಳೇನಿವೆ, ಇದ ರಿಂದ ಏನು ಕೆಡಕಾಗಿದೆ, ಇದನ್ನು ಯಾರೂ ಹೇಳಲಿಲ್ಲ, ಇತ್ಯಾದಿ ಇತ್ಯಾದಿ ಮಾತನಾಡಿದರು. ಸ್ವಾಮಿ, S.R.C. ವರದಿ ಹೊರಬಿದ್ದಮೇಲೆ ಅನೇಕ ಸಂಸ್ಥಾನ ಗಳಲ್ಲಿ ಚರ್ಚೆಯಾಗಿ, ಅದರಿಂದ ಉಂಟಾದ ಉದ್ರೇಕ ದಿಂದ ಅನೇಕ ಪ್ರದೇಶಗಳಲ್ಲಿ ಏನು ಅನಾಹುತ ವಾಯಿತು ಎಂಬುದನ್ನೆಲ್ಲ ಇಲ್ಲಿ ವಿವರಣೆ ಮಾಡ ಬೇಕಾದ ಅಗತ್ಯವಿಲ್ಲ. ನಮ್ಮ ದೇಶದಲ್ಲಿ ಕೆಲವು ದಿವಸಗಳ ಹಿಂದೆ ನಡೆದಂಥ ಅನಾಹುತಗಳನ್ನೂ ದುರ್ಘಟನೆಗಳನ್ನೂ ನಾವು ಯೋಚಿಸುವುದಾದರೆ ಭಾಷೆಯ ಆಧಾರದಮೇಲೆ ಪ್ರಾಂತಗಳನ್ನು ಪುನ ರ್ವಿಂಗಡಣೆ ಮಾಡುವುದು ಸೂಕ್ತವೇ, ಅಲ್ಲವೇ, ಎಂಬುದು ತಿಳಿಯುತ್ತದೆ. ಹಿಂದೆ ಯಾವ ಮಾನ್ಯ ಸ್ನೇಹಿತರು ಸರಿ ಎಂದು ವಾದಮಾಡಿದರೋ ಅವರು ಬದಲಾವಣೆ ಮಾಡಿಕೊಳ್ಳುವುದಕ್ಕೆ ಇದು ಸಕಾಲ ವೆಂದು ಅಂಥ ಸ್ನೇಹಿತರಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಭಾಷೆಯ ಆಧಾ ರದಮೇಲೆ ಬೊಂಬಾಯಿನಲ್ಲಿ ಗಲಭೆ ಆಗಲಿಲ್ಲ. ಬೊಂಬಾಯಿಯನ್ನು ಮಹಾರಾಷ್ಟ್ರಕ್ಕೇ ಸೇರಿಸ ಬೇಕು ಎನ್ನುವ ವಿಚಾರಕ್ಕಾಗಿ ಗಲಭೆಗಳಾದುವು.

ಶ್ರೀ ಡಿ. ದೇವರಾಜ ಅರಸ್.— ಬೊಂಬಾಯಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆನ್ನುವುದಕ್ಕೆ ಮೂಲಾ ಧಾರವೇನು ಎನ್ನುವುದನ್ನು ಶ್ರೀಮಾನ್ ಚೆನ್ನಿಗ ರಾಮಯ್ಯನವರು ನೋಡಬೇಕು. ಬೊಂಬಾಯಿ ಯಲ್ಲಿ ಮಹಾರಾಷ್ಟ್ರ ಭಾಷೆಯನ್ನು ಮಾತನಾಡತಕ್ಕ ಜನರು ಬಹು ಸಂಖ್ಯೆಯಲ್ಲಿದ್ದಾರೆ. ಭಾಷೆಯನ್ನೇ ಮುಖ್ಯಾಧಾರವಾಗಿಟ್ಟುಕೊಂಡು, ಬೊಂಬಾಯಿನಲ್ಲಿ ಮರಾಠಿ ಭಾಷೆಯನ್ನು ಮಾತನಾಡತಕ್ಕವರ ಸಂಖ್ಯೆ ಇತರ ಭಾಷೆಯನ್ನು ಮಾತನಾಡತಕ್ಕವರ ಸಂಖ್ಯೆಗಿಂತ ಹೆಚ್ಚಾಗಿದೆ, ಎಂಬ ಆಧಾರದಮೇಲೆ ಬೊಂಬಾಯಿ ಪಟ್ಟಣವನ್ನು ಮಹಾರಾಷ್ಟ್ರ ಪ್ರಾಂತಕ್ಕೆ ಸೇರಿಸ ಬೇಕು ಎಂದು ವಾದಮಾಡುತ್ತಿದ್ದಾರೆ. ಅನೇಕರು ಕಾಸರಗೋಡು ಪ್ರದೇಶವು ಕೇರಳದಲ್ಲಿರಬೇಕೇ, ಮೈಸೂರು ಪ್ರಾಂತಕ್ಕೆ ಸೇರಬೇಕೇ ಎಂದು ಹೇಳು ವಾಗ ಯಾವ ಆಧಾರದಮೇಲೆ ಹೇಳುತ್ತಾರೆ ಎಂದು ಪ್ರಶ್ನೆ ಮಾಡುತ್ತೇನೆ. ಇಡೀ ಇಂಡಿಯಾ ದೇಶದಲ್ಲಿ ಯಾವ ಪ್ರಾಂತ್ಯದವರೇ ಆಗಲಿ, ನಮ್ಮ ಪ್ರಾಂತ್ಯಕ್ಕೆ ಈ ಊರು ಬೇಕು, ಈ ಹಳ್ಳಿ ಬೇಕು, ಈ ರಸ್ತೆ ಬೇಕು, ಈ ತಾಲ್ಲೂಕು ಬೇಕು ಎಂದು ಕೇಳುವವರೆಲ್ಲರೂ, ತಮ್ಮ ತಮ್ಮ ಭಾಷೆಯನ್ನು ಮಾತನಾಡತಕ್ಕ ಜನರು ಈ ಭಾಗದಲ್ಲಿ ಹೆಚ್ಚಾಗಿದ್ದಾರೆ, ಈ ಊರಿನಲ್ಲಿ ಹೆಚ್ಚಾ ಗಿದ್ದಾರೆ, ಇದೆಲ್ಲವೂ ನಮಗೇ ಸೇರಬೇಕು ಎಂದು ಕೇಳುವುದೆಲ್ಲಾ ಭಾಷೆಯ ಆಧಾರದ ಮೇಲೆ ಮಾತ್ರ ಬೇರೆ ಯಾವ ಕಾರಣವೂ ಇಲ್ಲ. ಹೀಗೆ ಈ ಎಲ್ಲ ಕಾರಣಗಳಿಂದಲೂ ನಾವು ಭಾಷೆ ಯನ್ನೇ ಆಧಾರವಾಗಿಟ್ಟುಕೊಂಡು ಪ್ರಾಂತ ಗಳನ್ನು ಪುನರ್ವಿಂಗಡಣೆ ಮಾಡುವುದು ಸರಿಯಲ್ಲ ವೆಂದು ನಾನು ಹಿಂದೆ ಹೇಳಿದುದಕ್ಕಿಂತಲೂ ಹೆಚ್ಚು ಸಮರ್ಥನೆ ಮಾಡಿ ಹೇಳುವುದಕ್ಕೆ ಅವಕಾಶ ದೊರೆತಿದೆ. ಈ ಎಲ್ಲ ಸಂದರ್ಭಗಳನ್ನೂ ನೋಡಿ ಇದಕ್ಕೆ ಸರಿಯಾದ ಮಾರ್ಗವನ್ನು ಕಂಡು ಹಿಡಿಯಬೇಕೆಂದು ದೇಶದ ಮುಖಂಡರೆಲ್ಲ ಯೋಚನೆ ಮಾಡಿ,, ಪ್ರಥಮವಾಗಿ Zonal Councils ಮಾಡುವುದು ಸರಿ ಎಂದು ಆ ಅಭಿಪ್ರಾಯವನ್ನು ದೇಶದ ಮುಂದಿಟ್ಟರು. Zonal Councils ಮಾಡಬೇಕು ಎಂಬ ಅಭಿಪ್ರಾಯಕ್ಕೆ, ನನಗೆ

ತಿಳಿದಿರುವ ಮಟ್ಟಿಗೆ, ದೇಶಾದ್ಯಂತ ಎಲ್ಲ ಮೂಲೆಗಳಿಂದಲೂ ಸ್ವಾಗತ ದೊರೆಯಿತು. ಅದಾದಮೇಲೆ ಕೆಲವೇ ದಿವಸಗಳಲ್ಲಿ ದ್ವಿಭಾಷಾಪ್ರಾಂತ ಅಥವಾ ತ್ರಿಭಾಷಾಪ್ರಾಂತ ಎಂದರೆ ಒಂದು ಭಾಷೆಯನ್ನು ಮಾತನಾಡತಕ್ಕ ಎರಡು ಮೂರು ಪ್ರಾಂತಗಳನ್ನು ಸೇರಿಸಿ ಒಟ್ಟಿಗೆ ಒಂದು ಪ್ರಾಂತ ಮಾಡಬೇಕು ಎಂಬ ಅಭಿಪ್ರಾಯ ಹೊರಬಂತು. ಅದು ಯಾವ ಕಾರಣದಿಂದಲೋ ಈ ಅಭಿಪ್ರಾಯ ದೇಶದಲ್ಲಿ ಹೊರಬಿದ್ದಾಗ ಗಲಾಟೆಗಳೆಲ್ಲ ಒಂದೇ ಒಂದು ವಾರದಲ್ಲಿ ಸ್ವಲ್ಪ ಶಮನಕ್ಕೆ ಕೂಡ ಬಂದವು ಎಂದರೆ ತಪ್ಪಾಗಲಾರದು. ಇಥೇ ಅಭಿಪ್ರಾಯವನ್ನೇ ಅನುಸರಿಸಿ ಹೀಗೆ ಎರಡು ಅಥವಾ ಮೂರು ಬೇರೆ ಬೇರೆ ಭಾಷೆಯನ್ನು ಮಾತನಾಡತಕ್ಕ ಪ್ರಾಂತಗಳನ್ನು ಸೇರಿಸಿ ದಕ್ಷಿಣ ಪ್ರದೇಶವನ್ನು ಮಾಡಬೇಕು ಎನ್ನುವ ಅಭಿಪ್ರಾಯವೂ ಹೊರಬಂತು. ಇದೇ ಅಭಿಪ್ರಾಯವನ್ನು ಅಮೃತಸರದ ಕಾಂಗ್ರೆಸ್ ಅಧಿವೇಶನದಲ್ಲಿ ದಕ್ಷಿಣ ಪ್ರಾಂತವೆಂದಿಲ್ಲದೆ ಹೋಧರೂ ಕೂಡ ದ್ವಿಭಾಷಾ ಪ್ರಾಂತ (bilingual States) ಮಾಡಬೇಕು ಎನ್ನುವ ತತ್ವವನ್ನು ಅಳವಡಿಸಿ ಮಾಡಿದ ಠರಾವನ್ನು ಅನುಮೋದನೆ ಮಾಡಿದರು. ಆದರೆ ಇಂಥ ಎರಡು ಭಾಷೆಗಳನ್ನು ಮಾತನಾಡತಕ್ಕ ಪ್ರಾಂತಗಳನ್ನು ಸೇರಿಸಿ bilingual States ಮಾಡುವುದಕ್ಕೆ ನಮಗೆ ಬಂದಿರತಕ್ಕ ಪ್ರಮಾದವೇನು; ಇದಕ್ಕೆ ಇನ್ನೂ ಸ್ವಲ್ಪ ದಿವಸ ಕಾದುನೋಡೋಣ; ಈಗಾಗಲೆ ಯಾಕೆ ಮಾಡಬೇಕು ? ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಅವರು ಹೇಳುವುದರಲ್ಲಿ ತಿರುಳಿಲ್ಲ, ಈಗಲೇ ಮಾಡಿದರೆ ಸರಿ, ಇಲ್ಲದೆ ಹೋದರೆ ಅನಾಹುತವಾಗುತ್ತದೆಂದು ನಾನೂ ಸಹ ಅಭಿಪ್ರಾಯ ಪಡುವುದಿಲ್ಲ. ದ್ವಿಭಾಷಾ ಅಥವಾ bilingual States ಮಾಡುವುದಕ್ಕೆ ಅಭಿಪ್ರಾಯ ಯಾವರೀತಿ ಇದೆ ಎಂದರೆ ಕೆಲವರು ಈಗಾಗಲೇ ಆಗುವುದು ಸೂಕ್ತವೆಂದು ಹೇಳುತ್ತಾರೆ, ಮತ್ತೆ ಕೆಲವರು ಈಗ ಕೂಡದು, ಇನ್ನೂ ಕೊಂಚ ದಿವಸ ಕಾದುನೋಡೋಣವೆಂದು ಹೇಳುತ್ತಾರೆ. ಒಟ್ಟಿನಲ್ಲಿ ಒಂದು ವಿಚಾರವನ್ನು ಮುಖ್ಯವಾಗಿ ಅರಿಯಬೇಕಾದ್ದೇನೆಂದರೆ, ಇದು ಕೆಡಕು ಮಾಡತಕ್ಕದ್ದಲ್ಲ, ಇದರಿಂದ ಒಳ್ಳೆಯದಾಗುವುದು ಎನ್ನುವುದನ್ನು ಸರ್ವೇಸಾಧಾರಣವಾಗಿ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಒಪ್ಪಿದ ಹಾಗಾಯಿತು. ಈ ಅಭಿಪ್ರಾಯಕ್ಕೇನೋ ಎಲ್ಲರೂ ಮನ್ನಣೆ ಕೊಟ್ಟರು. ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರರು ಕೂಡ ಇದನ್ನು ಸ್ವಾಗತಿಸಿ ಒಂದು ಠರಾವನ್ನು ಪಾಸ್ ಮಾಡಿದ್ದಾರೆ. ಆದರೆ ಸಂಬಂಧಪಟ್ಟ ಪ್ರಾಂತಗಳು, ಶ್ರೀಮಾನ್ ಚೆನ್ನಿಗರಾಮಯ್ಯನವರು ವಿನೋದವಾಗಿ ಹೇಳಿದ ಹಾಗೆ 'ಗಂಡು ಬೇಕು ಎಂದರೆ ಹೆಣ್ಣು ಬೇಡವೆನ್ನುತ್ತದೆ' ಎಂಬಂತೆ, ಈಗ ಈ ಪ್ರದೇಶ ರಚನೆ ಬೇಡವೆಂದು ಹೇಳುತ್ತಿದ್ದಾರೆ. ಇದಕ್ಕೇನು ಮಾಡೋಣ ? ಸಂಬಂಧಪಟ್ಟ ಪ್ರಾಂತಗಳು ಕೆಲವರು ಇದನ್ನು ಒಪ್ಪಿದ್ದಾರೆ, ಯಾವ ಪ್ರಾಂತ್ಯದವರೂ ಕೂಡ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ ಇತ್ಯಾದಿ ಕಾರಣಗಳಿರುವುದರಿಂದ ನಾವು ಯಾಕೆ ಇದಕ್ಕೆ ಅಭಿಪ್ರಾಯ ಕೊಡಬೇಕಾದ್ದಿದೆ, ಇದರ ಅಗತ್ಯ ಏನಿದೆ ಎಂದು ಪ್ರಶ್ನೆ ಮಾಡಿದರು.

5-30 P.M.

ಈ ಪ್ರಶ್ನೆಗೆ ನನ್ನ ಉತ್ತರ ಇಷ್ಟೆ. ಯಾರಾದರೂ ಒಬ್ಬರು ಮುಂದೆ ಬಂದು ಈ ಅಭಿಪ್ರಾಯ ನೀಡಬೇಕು; somebody must bell the cat. ನೀನು ಹೇಳು, ನೀನು ಹೇಳು ಎಂದು ಮದುವೆಯ ಕಾಲದಲ್ಲಿ ಆರತಿ ಹಾಡು ಹಾಡುವಾಗ ಹೇಳುವಹಾಗೆ ಹೇಳಿದರೆ ಹೇಗೆ ? ಯಾರಾದರೂ ಒಬ್ಬರು ಷುರುಮಾಡಿ ಈ ಅಭಿಪ್ರಾಯಕ್ಕೆ ಮನ್ನಣೆ ಕೊಡಿ ಎಂದರೆ ಆ ಅವಕಾಶ ಮೈಸೂರು ಸಂಸ್ಥಾನಕ್ಕೆ, ನಮಗೆ, ಇದ್ದಪಕ್ಷದಲ್ಲಿ ನಾವೇಕೆ ಮೊದಲು ಅದನ್ನು ಮಾಡಬಾರದು ? ಒಂದು ವೇಳೆ ದ್ವಿಭಾಷಾಪ್ರಾಂತ ಮಾಡುತ್ತೇವೆಂದರೆ, ಪ್ರಾಂತಗಳು ಒಟ್ಟಿಗೆ ಸೇರಬೇಕೆಂದರೆ ಮೈಸೂರು ಕೂಡ ಆ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತದೆ, ಸ್ವಾಗತ ನೀಡುತ್ತದೆ ಎಂದು ಹೇಳಿದಾಕ್ಷಣ ತಪ್ಪೇನೂ ಆಗುವುದಿಲ್ಲ, ನಮ್ಮ ಮರ್ಯಾದೆಗೇನೂ ಕುಂದು ಬರುವುದಿಲ್ಲ. ಈ ಅಭಿಪ್ರಾಯ ಒಳ್ಳೆಯದು ಎಂದು ಎಲ್ಲರೂ ಹೇಳಿದರೆ ಅದಕ್ಕೆ ನಾವು ಈಗಲೇ ಸ್ವಾಗತ ನೀಡಬೇಕು. ಹಾಗೆ ಸ್ವಾಗತ ನೀಡಿದಾಕ್ಷಣ ಈ ಹೊತ್ತೇ ದಕ್ಷಿಣ ಪ್ರದೇಶ ಆಗುತ್ತದೆಂದು ದಿಗಿಲು ಪಡಬೇಕಾಗಿಲ್ಲ. ಅಥವಾ ಈ ಬಿಲ್ಲಿನಲ್ಲಿರುವ ಹೊಸ ಮೈಸೂರು ಪ್ರಾಂತ ಅಥವಾ ಕರ್ಣಾಟಕ ಪ್ರಾಂತ ಆಗಬಾರದೆಂದು ಹೇಳಿದಹಾಗೂ ಆಗುವುದಿಲ್ಲ. ದಕ್ಷಿಣ ಪ್ರದೇಶವಾಗಲಿ ಅಥವಾ ದ್ವಿಭಾಷಾ ಪ್ರಾಂತವಾಗಲಿ ಕೇರಳ ಮೈಸೂರು ಸೇರಿ ಹೊಸ ಪ್ರಾಂತವಾಗಲಿ ಇವು ಯಾವವಾಗಲಿ ಆಗಬೇಕಾದ ಪ್ರಮೇಯ ಬಂದರೂ, ಮೈಸೂರು ಈಗಿರುವ ರೀತಿಯಲ್ಲೇ ಉಳಿಯಲು ಸಾಧ್ಯವಿಲ್ಲ. ಅಲ್ಲದೆ ಕರ್ಣಾಟಕ ಪ್ರಾಂತ್ಯವಾಗುವುದನ್ನು ತಪ್ಪಿಸಲೂ ಸಾಧ್ಯವಿಲ್ಲ. ಹೊಸ ಮೈಸೂರು ಅಥವಾ ಕರ್ಣಾಟಕ ಪ್ರಾಂತ್ಯವನ್ನು ಮಾತ್ರ ದ್ವಿಭಾಷಾ ಪ್ರಾಂತ್ಯ ರಚನೆಗೆ ಸೇರಿಸಲು ಸಾಧ್ಯ. ಅಂದಮೇಲೆ ಈಗಿರುವ ಮೈಸೂರನ್ನೇ ದ್ವಿಭಾಷಾ ಪ್ರಾಂತ್ಯ ಮಾಡಲು ಸಾಧ್ಯವಿಲ್ಲ. ದಕ್ಷಿಣ ಅಥವಾ ದ್ವಿಭಾಷಾ ಪ್ರಾಂತ್ಯ ಕೂಡದು ಎಂದು ವಿರೋಧ ವ್ಯಕ್ತಪಡಿಸುವವರು ಈ ರೀತಿಯಾದ ಶಂಕೆಯಿಂದ ವಿರೋಧಿಸಬೇಕಾಗಿಲ್ಲ. ಆದ್ದರಿಂದ ಈ ಬಿಲ್ಲನಲ್ಲಿ ಅಡಕವಾಗಿರುವ ಮುಖ್ಯ ತತ್ವವನ್ನು, ದೊಡ್ಡ ದೊಡ್ಡ ಪ್ರಾಂತಗಳನ್ನು ನಿರ್ಮಾಣಮಾಡಬೇಕೆಂಬ ಒಂದು ತತ್ವವನ್ನು, ಇಂಡಿಯಾ ಸರ್ಕಾರದವರು ಒಂದಲ್ಲ ಒಂದು ರೀತಿಯಲ್ಲಿ ಅಡಾಪ್ಟ್ ಮಾಡಿಕೊಂಡಿರುವುದರಿಂದ, ಅನಿವಾರ್ಯವಾಗಿ ನಾವು ಅದನ್ನು ಒಪ್ಪಲೇಬೇಕಾಗಿ ಬಂದಿರುವುದರಿಂದ, ನಾನು ಅದನ್ನು ಒಪ್ಪುತ್ತೇನೆಂದು ಹೇಳುವಾಗ ಈ ಒಂದು ಹೊಸ ಅಭಿಪ್ರಾಯವೇನಿದೆ, ದಕ್ಷಿಣ ಪ್ರಾಂತವಾಗಲಿ ಅಥವಾ ಎರಡು ಬೇರೆ ಭಾಷೆ ಮಾತನಾಡುವ ಪ್ರಾಂತ ಸೇರಿ ಒಂದು ಪ್ರಾಂತವಾಗಲಿ ಎಂದು ಹೇಳುವ ಅಭಿಪ್ರಾಯವೇನಿದೆ ಅದಕ್ಕೆ ಮನ್ನಣೆಯನ್ನು ಕೂಡ ಕೊಡುವುದು ಸೂಕ್ತ, ಅದನ್ನ ನಾವು ಸ್ವಾಗತ ಮಾಡುವುದು ಸೂಕ್ತ ಎಂದು ಅಭಿಪ್ರಾಯ ಪಡುತ್ತೇನೆ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸತಕ್ಕ ಕಾಲದಲ್ಲಿ ಬಹಳ ಚೆನ್ನಾಗಿ ವಿವರಣೆ ಮಾಡಿ ಹೇಳಿದ್ದಾರೆ. ಮತ್ತು ಬೇರೆ ಪ್ರಾಂತದ ಜನರು ಇದಕ್ಕೆ ಒಪ್ಪದೆ ಇದ್ದು ಅಥವಾ ಯಾರೂ ಕೂಡ ಧೈರ್ಯಮಾಡಿ ಮುಂದೆ ಬಂದು ಈ ಅಭಿಪ್ರಾಯಕ್ಕೆ ಬೆಂಬಲಕೊಡುತ್ತೇವೆಂದು ಹೇಳದಿರುವಾಗ ನಮ್ಮ ಸಭಾನಾಯಕರಾದ ಮುಖ್ಯಮಂತ್ರಿಗಳು ಇದಕ್ಕೆ ಮನ್ನಣೆಕೊಟ್ಟು ಬಹು ಧೈರ್ಯತಾಳಿ, ದಕ್ಷಿಣ ಪ್ರದೇಶದ ರಚನೆಯ ವಿಚಾರವನ್ನು ಮೈಸೂರಿನವರು ಹೊರಪ್ರಾಂತ್ಯದ ಜನರು ಮುಂದೆ ಬರುತ್ತಾರೋ ಇಲ್ಲವೋ ಎಂದು ಕಾದು ನೋಡುವುದರ ಬದಲು ನೇರವಾಗಿ ಒಪ್ಪುವುದು ಸೂಕ್ತ ಎಂದು ಒಂದು ನಿಲುವನ್ನು ತೆಗೆದುಕೊಂಡಿರುವುದು ತುಂಬ ಸ್ವಾಗತಾರ್ಹವಾದ ವಿಚಾರ. ಇದಕ್ಕಾಗಿ ನಾನು

(ಶ್ರೀ ಡಿ. ದೇವರಾಜ ಅರಸ್.)

ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ಫಸ್ಲಾಲಿ ಕಮಿಷನ್‌ನವರ ವರದಿಯನ್ನು ಚರ್ಚಿಸುವ ಅವಕಾಶ ದೊರೆತಾಗ ನಾವು ನಮ್ಮ ಸಂತೋಷವನ್ನು ವ್ಯಕ್ತಪಡಿಸಿ ಒಂದೆರಡು ವಿಷಯಗಳಲ್ಲಿ ಮಾತ್ರ ಕಳವಳವನ್ನು ಸೂಚಿಸಿದ್ದೆವು. ಈಗ ಈ ಪ್ರಾಂತ ಪುನರ್ವಿಂಗಡಣೆ ಮಸೂದೆ ಕೇಂದ್ರ ಸರ್ಕಾರದಿಂದ ಬಂದು ನಮ್ಮ ಮುಂದೆ ಇರುವ ಸಂದರ್ಭದಲ್ಲಿ ನಾವು ಅದನ್ನು ಸಂತೋಷದಿಂದ ಸ್ವಾಗತಿಸಬೇಕಾಗಿದೆ. ಒಟ್ಟು 26 ಪ್ರಾಂತ ಸರ್ಕಾರಗಳಿಂದ ಆಳಲ್ಪಡುತ್ತಿರತಕ್ಕಂಥ ಭಾರತವನ್ನು 15 ರಾಜ್ಯ ಸರ್ಕಾರಗಳಾಗಿ ವಿಂಗಡಿಸಬೇಕು, 7 ಸಣ್ಣ ಸಣ್ಣ ಪ್ರದೇಶಗಳನ್ನು ಯೂನಿಯನ್ ಪ್ರದೇಶವಾಗಿ ವಿಂಗಡಿಸಬೇಕು ಎಂದು ಮಾಡಿರುವ ಮಸೂದೆ ಭಾರತಾದ್ಯಂತ ಬಹುಸಂಖ್ಯಾ ಜನರಿಗೆ ಒಂದು ಸಮಾಧಾನವನ್ನು ತಂದಿದೆಯೆಂದು ನಾವು ಧಾರಾಳವಾಗಿ ಹೇಳಬಹುದು. ಮೈಸೂರಿನವರ ಮಟ್ಟಿಗೆ ಹೇಳುವುದಾದರೆ ಫಸ್ಲಾಲಿ ಸಮಿತಿಯವರ ಶಿಫಾರ್ಸಿನ ಫಲವಾಗಿ ಬಳ್ಳಾರಿ ಮೈಸೂರಿನಿಂದ ಸಿಡಿದು ಹೋಗಬಹುದೆಂಬ ಭೀತಿ ಆವರಿಸಿತ್ತು. ಆ ಭೀತಿ ನಿವಾರಣೆಯಾಗಿ ಬಳ್ಳಾರಿ ಮೈಸೂರಿಗೆ ಸೇರಿದ ಪ್ರಾಂತ ಪುನಃ ಮೈಸೂರಿಗೇ ಕೊಡಲ್ಪಟ್ಟಿದೆ. ಇದು ಸಂತೋಷವನ್ನು ವ್ಯಕ್ತಪಡಿಸಬೇಕಾದ ವಿಚಾರ. ಹೀಗೆ ಇನ್ನೂ ಒಂದೆರಡು ಪ್ರದೇಶಗಳು ಈ ಹೊಸ ಪ್ರಾಂತದೊಳಗೆ, ಸಂಸ್ಥಾನದೊಳಗೆ ಬರುವಂಥ ಅವಕಾಶವಾಗಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಈಗಲಾವರೂ ಕೂಡ ಕಾಲ ಮಿಂಚಿಲ್ಲ. ಪಾರ್ಲಿಮೆಂಟ್ ಮುಂದೆ ಈ ಬಿಲ್ಲು ಚರ್ಚಿಸಲ್ಪಡುವಾಗ ಈ ವಿಷಯವನ್ನು ಗಮನದಲ್ಲಿಟ್ಟು ಆಲೋಚಿಸಬಹುದು. ಅಲ್ಲದೆ ಈ ವರದಿಯ ಪೀಠಿಕೆಯಲ್ಲಿ ನಮೂದಿಸಿದಂತೆ ಆಡಳಿತ ಸೌಕರ್ಯಕ್ಕಾಗಿ ಕೆಲವು ಸಣ್ಣಪುಟ್ಟ ಬದಲಾವಣೆ ಮಾಡುವ ಸಲುವಾಗಿ ಬೌಂಡರಿ ಕಮಿಷನ್ ಮಾಡುವ ಉದ್ದೇಶ ಕೂಡ ಸರ್ಕಾರಕ್ಕಿದೆಯೆಂದು ತಿಳಿದು ಬರುವುದರಿಂದ ಒಂದು ಆಶೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಹೊರಗಡೆಯಿಂದ ಬರಬೇಕಾದ ಪ್ರದೇಶಗಳಲ್ಲಿ ಕಾಸರಗೋಡಿನ ಕಡೆಗೆ ನಾನು ತಮ್ಮ ಗಮನವನ್ನು ಸೆಳೆಯುತ್ತೇನೆ. ಚಂದ್ರಗಿರಿ ನದಿಯ ಉತ್ತರ ಭಾಗದಲ್ಲಿ ಬಹುಮಂದಿ ಜನರು ಕನ್ನಡಿಗರು. ಅಲ್ಲಿರುವ 36 ಗ್ರಾಮಪಂಚಾಯಿತಿಗಳ ಪೈಕಿ 34 ಗ್ರಾಮ ಪಂಚಾಯಿತಿಗಳ ಜನರು ಕನ್ನಡ ನಾಡಿಗೇ ತಮ್ಮನ್ನು ಸೇರಿಸಬೇಕೆಂದು ಆಗಲೇ ಅರಿಕೆಯನ್ನು ಸಲ್ಲಿಸಿದ್ದಾರೆ; ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರು, ಅಲ್ಲಿನ ರಾಜಕೀಯ ಪಕ್ಷದ ನಾಯಕರು ಈ ರೀತಿ ತಮ್ಮ ಕೋರಿಕೆಯನ್ನು ಸಲ್ಲಿಸಿದ್ದಾರೆ. ಅಲ್ಲಿರುವ ಸುಮಾರು 144 ಶಾಲೆಗಳಲ್ಲಿ 124 ಶಾಲೆಗಳಲ್ಲಿ ಕನ್ನಡವೇ ಮಾಧ್ಯಮ ಭಾಷೆಯಾಗಿದೆ. ಅಲ್ಲದೆ ಮೊದಲಿನಿಂದಲೂ ಚಂದ್ರಗಿರಿಯ ದಕ್ಷಿಣ ಭಾಗ ಹೊಸದುರ್ಗ ಸಬ್ ತಾಲ್ಲೂಕು ಎಂಬ ಹೆಸರನ್ನು ಹೊಂದಿ ಮೊದಲಿನಿಂದ ಮಲೆಯಾಳಿ ಸಂಸ್ಕೃತಿ ಪ್ರಭಾವವುಳ್ಳದ್ದಾಗಿದೆ. ಉತ್ತರ ಭಾಗ ಮಾತ್ರ ಇಂಥ ಎಲ್ಲ ಸಂಪರ್ಕವನ್ನೂ ಬಿಟ್ಟಿದೆ. ಕಾಸರಗೋಡಿನ ಕಾಲೇಜುಗಳಿಂದ ಹೊರಬರುವವರಿಗೆ, ಕೇರಳದಲ್ಲಿ, ಬಹುಶಃ ಕೇರಳ ತನ್ನ ಭಾಷೆಯನ್ನೇ ಆಡಳಿತ ಭಾಷೆಯಾಗಿ ಸ್ವೀಕರಿಸಿದಾಗ, ಉದ್ಯೋಗವನ್ನು ಮಾಡುವುದಕ್ಕೆ ಅವಕಾಶ ಕೂಡ ಸಿಕ್ಕುವುದು ಕಷ್ಟವಾದೀತು. ಭಾಷೆ, ಆಡಳಿಕ ಸೌಕರ್ಯ, ಆರ್ಥಿಕ ಭದ್ರತೆ ಇವು ಮೂರನ್ನೂ ತಳಹದಿಯಾಗಿಟ್ಟುಕೊಂಡು ಈ ಪ್ರಾಂತವಿಂಗಡಣೆ ಕೆಲಸಕ್ಕೆ ಈ ದಿವಸ ನಾವು ಪ್ರಾಧಾನ್ಯತೆ ಕೊಡಲೇ ಬೇಕಾಗಿದೆ. ಭಾಷೆಗೆ ಪ್ರಾಧಾನ್ಯತೆ ಇಲ್ಲದೆ ಹೋದರೆ ನಾವು ಈ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಜನರಲ್ಲಿ ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆಯನ್ನುಂಟುಮಾಡಿ ರಾಷ್ಟ್ರ ಬೆಳೆಸಬೇಕೆಂದು ಹೇಳುವುದನ್ನು ಸಾಧಿಸುವುದಕ್ಕೆ ಖಂಡಿತ ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ಮೊದಲಿನಿಂದಲೂ ಒಂದು ಸಂಪ್ರದಾಯವಿದೆ. ಹೀರೋವರ್ಷಿಪ್ ಎನ್ನುವಂತೆ ಒಬ್ಬ ವ್ಯಕ್ತಿಯಲ್ಲಿ ಅಂಥ ಶ್ರದ್ಧೆಯಿಟ್ಟು ತಮ್ಮ ಹೊಣೆಗಾರಿಕೆಯನ್ನು ಇನ್ನೊಬ್ಬರ ಮೇಲೆ ಹಾಕಿ ನಿಶ್ಚಿಂತರಾಗಿ ಬಾಳುತ್ತಿರುವುದರಿಂದಲೇ ಈ ದಿವಸ ಈ ಸನ್ನಿವೇಶ ಬರುವುದಕ್ಕೆ ಕಾರಣವಾಗಿದೆ. ವ್ಯಷ್ಟಿಗೂ ಸಮಷ್ಟಿಗೂ ಸಮನ್ವಯ ಸರಿಯಾದ ಎಲ್ಲೆಯಲ್ಲಿ ಆಗಬೇಕಾದರೆ ಅದು ಭಾಷೆಯಿಂದ ಸಾಧ್ಯ. ಆದ್ದರಿಂದ ಮಿತವಾದ ಭಾಷಾಭಿಮಾನ ಗೌರವಯುತವಾಗಿದೆ, ಪೂಜನೀಯವಾಗಿದೆ, ಅಭಿಮಾನ ಪೂರ್ವಕವಾಗಿದೆ. ಇದು ಪ್ರತಿಯೊಬ್ಬರೂ ಒಪ್ಪತಕ್ಕ ವಿಚಾರ. ಭಾಷಾವಾರು ಪ್ರಾಂತವು ರಾಷ್ಟ್ರದ ಐಕ್ಯಮತ್ಯಕ್ಕೆ ಭಂಗತರುವುದೆಂಬ ಕಲ್ಪನೆ ನ್ಯಾಯವಲ್ಲ. ಅದು ಜನರಲ್ಲಿ ಅಗತ್ಯವಾಗಿ ಆಗಬೇಕಾದ ಒಂದು ಜಾಗ್ರತಿಯನ್ನು ಮೂಡಿಸುವುದಕ್ಕೆ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಬಂದಿದೆ. ಹಿಂದಿನ ಎಷ್ಟೋ ಸಂದರ್ಭಗಳಲ್ಲಿ ಕಾಂಗ್ರೆಸ್ಸು ಭಾಷಾವಾರು ಪ್ರಾಂತಕ್ಕೆ ಮನ್ನಣೆ ಕೊಟ್ಟಿತು. ದುರದೃಷ್ಟವಶಾತ್ ಬೊಂಬಾಯಿ ಘಟನೆಯಿಂದ ರಾಷ್ಟ್ರ ನಾಯಕರು ಮನನೊಂದು ಬೇಸತ್ತಿದ್ದಾರೆ. ಆದ್ದರಿಂದ ಅಮೃತಸರದ ಸಮ್ಮೇಳನದಲ್ಲಿ ಭಾಷಾವಾರು ತತ್ವಕ್ಕೆ ಬದಲಾಗಿ ಇನ್ನೊಂದು ಸಲಹೆಯನ್ನು ತಾತ್ಕಾಲಿಕವಾಗಿ ಚಿಕಿತ್ಸೆಯ ರೂಪದಲ್ಲಿ ನೀಡಿದರು. ಆದರೆ ಈಗ ಈ ದಕ್ಷಿಣ ಪ್ರದೇಶ ರಚನೆಗೆ ಬೆಂಬಲವಿದ್ದ ಹಾಗೆ ಖಂಡಿತ ಕಂಡುಬಂದಿಲ್ಲ. ಏನೇ ಆಗಲಿ ಈ ದ್ವಿಭಾಷಾ ಮತ್ತು ಬಹು ಭಾಷಾ ಪ್ರಾಂತ್ಯಗಳ ರಚನೆಗೆ ಬಂದಿರತಕ್ಕ ಸಲಹೆಗಳು ಖಂಡಿತವಾಗಿಯೂ ವ್ಯಾವಹಾರಿಕ ದೃಷ್ಟಿಯಿಂದ ಪ್ರಕೃತದಲ್ಲಿ ಯೋಗ್ಯವಾದವುಗಳಲ್ಲವೆಂದು ನನ್ನ ಅಭಿಪ್ರಾಯ. ಹಾಗೂ ಒಂದುವೇಳೆ ಈ ದ್ವಿಭಾಷಾ ಅಥವಾ ಬಹುಭಾಷಾರಾಜ್ಯಗಳನ್ನು ನಿರ್ಮಾಣಮಾಡಬೇಕೆಂಬ ಅಭಿಪ್ರಾಯವಿರುವುದಾದರೆ, ದಕ್ಷಿಣ ಭಾರತದಲ್ಲೆಲ್ಲಾ ರಾಷ್ಟ್ರಭಾಷಾ ಪ್ರಚಾರವು ಹೆಚ್ಚಿನ ಪ್ರಮಾಣದಲ್ಲಿ ನಡೆದು ಸಾರಿಗೆ ಸಾಧನೆಗಳು ಹೆಚ್ಚಿ ಎಲ್ಲ ಮೂಲೆಗಳಿಗೂ ರೈಲ್ವೆ ಸಂಪರ್ಕಗಳು ಏರ್ಪಟ್ಟ ನಂತರ ಪರಿಶೀಲಿಸಬಹುದಾದ ವಿಷಯ ಇದು. ನೂತನ ಮೈಸೂರು ಪ್ರಾಂತ್ಯ ನಿರ್ಮಾಣವಾಗಲಿರುವ ಈ ಸುಸಂದರ್ಭದಲ್ಲಿ ನಾವುಗಳೆಲ್ಲಾ ನಮ್ಮ ನಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಈ ಪ್ರಾಂತ್ಯಗಳನ್ನು ಸುಲಲಿತವಾದ ಹಾದಿಯಲ್ಲಿ ನಿರ್ಮಿಸಿಕೊಳ್ಳತಕ್ಕಂಥ ಒಂದು ದೊಡ್ಡ ಜವಾಬ್ದಾರಿ ನಮ್ಮೆಲ್ಲರಮೇಲೂ ಬಿದ್ದಿದೆ. ಯಾರು ಈ ಹಿಂದೆ ಈ ಮೈಸೂರು ಒಂದು ಪ್ರತ್ಯೇಕ ಪ್ರಾಂತ್ಯವಾಗಿರಬೇಕು ಎಂದು ಆಗ್ರಹಪೂರ್ವಕವಾದ ವಾದವನ್ನು ಹೂಡಿದ್ದರೋ ಅವರೆಲ್ಲರೂ ಸಹ ಈ ದಿವಸ ಬಹಳ ವಿಶಾಲ ಹೃದಯದಿಂದ ನಮ್ಮೆಲ್ಲರಿಗಿಂತಲೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ದೊಡ್ಡ ದೊಡ್ಡ ಪ್ರಾಂತ್ಯಗಳು ನಿರ್ಮಾಣವಾಗಬೇಕೆಂದು ಹೇಳಿರತಕ್ಕದ್ದು ಸಂತೋಷ ಮತ್ತು ಸೋಜಿಗವಾದಂಥ ವಿಚಾರ. ಈ ಹಿಂದೆ ಒಂದಾನೊಂದು ಕಾಲದಲ್ಲಿ ವಿದ್ಯಾರಣ್ಯರು ಈ ಕರ್ಣಾಟಕದಲ್ಲಿ ಸುವರ್ಣ ವೃಷ್ಟಿಯನ್ನೇ ಸುರಿಸಿದ್ದರೆಂದು ಹೇಳುತ್ತಿದ್ದರು. ನಿಜವಾಗಿಯೂ ಅವರು ಚಿನ್ನದ ಮಳೆಯನ್ನು ತರಿಸಿದ್ದರು

ಎಂದು ಅದರ ಅರ್ಥವಲ್ಲ. ಹಾಗೆ ಹೇಳುತ್ತಿದ್ದುದರ ಅರ್ಥ ಆ ದಿವಸ ಈ ಕರ್ಣಾಟಕ ನಾಡಿನಲ್ಲಿ ಅಷ್ಟು ಐಶ್ವರ್ಯ ಮತ್ತು ಸುಭಿಕ್ಷೆಗಳು ತುಂಬಿ ತುಳುಕುತ್ತಿದ್ದುವೆಂದು ಹೇಳುವುದಕ್ಕೆ ಆ ರೀತಿ ಹೇಳಿದ್ದಾರೆ. ಆದರೆ ಈ ದಿವಸ ನಮಗೆ ಮತ್ತೆ ಅಂಥ ಒಂದು ಸುದೈವದ ನಾಡನ್ನು ಕಾಣುವಂಥ ಅವಕಾಶ ಉಂಟಾಗಿದೆ. ಈ ಹೊಸ ಪ್ರಾಂತ್ಯದಲ್ಲಿ ತನ್ನದೇ ಆದ ಒಂದು ಸಂಸ್ಕೃತಿ, ಭಾಷೆ, ಕಲೆ ಇತ್ಯಾದಿಗಳೆಲ್ಲಾ ಮತ್ತೆ ಬೆಳೆದು, ಕೃಷಿ ಕೈಗಾರಿಕೆಗಳ ಅಭಿವೃದ್ಧಿಯಿಂದ ಕೂಡಿ ಈ ನಾಡು ಭಾರತಾಂಬೆಗೆ ತನ್ನ ಒಂದು ಹೆಚ್ಚಿನ ಸೇವೆಯನ್ನು ಸಲ್ಲಿಸತಕ್ಕಂಥ ಒಂದು ಮಹಾ ಸುದೈವವು ನಮಗೀಗ ದೊರೆತಿದೆ ಎಂದು ಭಾವಿಸಿ ನಾವೆಲ್ಲರೂ ಅನ್ಯೋನ್ಯತೆಯಿಂದ ಇದಕ್ಕಾಗಿ ಶ್ರಮಿಸೋಣ, ದುಡಿಯೋಣ. ಇಂಥ ಒಂದು ರಾಜ್ಯ ಬೇಗ ಉದಯವಾಗಲಿ ಎಂದು ಹಾರೈಸಿ ಈ ಮಸೂದೆಯನ್ನು ಸ್ವಾಗತಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri Mulka GOVINDA REDDY.—I oppose this Draft of the States Reorganisation Bill, 1956 and connected proposals for amendment of the Constitution. It is true that most of us wanted reorganisation of the States. As they are at present existing, they are not organised on any rational principle. What we have asked for has not been achieved under this Draft Bill. They have accepted one principle for certain areas and another principle for some other areas. Though there are some welcome provisions under this Bill, there are other provisions which are reactionary and retrograde We all wanted that the distinction of classification between States and States should go. They have accepted that principle and they have abolished Part A, Part-B and Part C States. While that is welcome, they have tried to introduce another distinction, namely, States and Union Territories. The provision regarding Union Territories is retrograde and reactionary for the simple reason that these 7, Union Territories, namely, Delhi, Bombay, Manipur, Tripura, Himachal Pradesh, Andaman and Nicobar Islands and Laccadives and other islands, these Union Territories are going to be ruled by the Centre, thereby denying the fundamental right of a citizen to be ruled by his own elected representatives. The Legislative Assemblies that were functioning in some of these areas are going to be wiped off and the Central Government is going to rule these territories through their Chief Commissioners. When we have sworn by the principle of democracy, how can we as true democrats accept this retrograde step of the Government of India? Bombay, it is recognised on all hands, is a progressive city. It has contributed to the culture and eminence of India and, as we all know, the citizens of Bombay were second to none in their sacrifices for achieving freedom for India. Is it not unfortunate that those people should today be denied an opportunity of getting themselves ruled through their elected representatives?

Under the Draft Bill, the institution of Rajpramukh has been abolished. We all demanded that that retrograde and anachronic institution should be done away with. It is good that the Government of India have accepted that demand and they have abolished that institution. At the same time I would urge that the privy purses allowed to the Rajpramukhs should also go. In the place of Rajpramukhs, Governors are going to be appointed. Their salaries are not going to be varied under this Bill. When we have accepted the socialistic pattern of society as our goal, is it not time that we should try to narrow down the gulf that is now existing between the incomes of these Governors and the ordinary citizens?

Sir, language is the main basis on which the States are going to be found under the provisions of this Bill, though in the Punjab they have not accepted that principle. I would say that language is the main criterion for Government carving out the State. While that is the case, may I know why the people of the Punjab who have all along fought with other Indians for the freedom of India, should be denied having a Punjab Sabha in the northern part of India? Similarly Bombay—it has been admitted by the Prime Minister himself as forming a geographical part of Maharashtra and it is not included in the new Maharashtra State. That shows that the Government of India have yielded to the pressure tactics of big bourgeoisies. All the happenings, that too all the unhappy incidents that emanated after the decision of the Government of India regarding Bombay were due because of this one discrimi-

(SRI MULKA GOVINDA REDDY.)

nating policy that was adopted by the Government of India. I told Sri Mariappa that I at any rate do not justify the unbridled violence that took place in Bombay and equally I do not justify the unbridled violence resorted to by Morarji's Policy in Bombay. Under this Bill they want to make Bombay, a predominantly Maharashtra city, a Centrally administered territory and Belgaum to be included in Karnataka. Some of my friends are clamouring for a place, for a firka whose name we have not heard or some other area like Kasargod; what right and what justification have we to fight for the continued inclusion of Belgaum in the Karnataka State? Similarly, when they have sworn by one simple criterion, namely, that language should be the basis for the formation of a State, why should 25 lakhs of people here speaking Telugu in areas where they are predominant and contiguous to the Andhra State, against their will, be asked to continue to stay in a unilingual State which they want to form?

A MEMBER.—It is a big question.

SRI MULKA GOVINDA REDDY.—The pleading that Mysore is a composite State and the bigger Mysore is going to be a composite State is only to hoodwink the gullible public. If we accept that language should be the criterion for the formation of a State, we should ask that those areas where the Telugu-speaking people are more than 51 per cent should be included in the Andhra State. Sir, the question of language fanaticism is a very deplorable one. The effect of language fanaticism is going to have very serious repercussions on the people and also on the unity and solidarity of India. Immediately after the publication of the S.R.C. Report, in the University of Mysore, where all cultured people are supposed to be an Assistant Professor was canvassing that in a particular department there were no Kannada speaking people as Professors and it was high time that the non-Kannada people who were occupying the places of professorship in that department should be asked to go out of the University. When that is the feeling in the mind of the so called educated people, what would be the feeling in the minds of the ordinary people, I shudder to think. It is possible that, if the present affairs were to continue, the linguistic minorities are going to be liquidated as the Jews were tried to be liquidated in the Hitler's Germany. Such will be the fanaticism of language.

While I was speaking on the Andhra State Bill, Sri Puttaswamy posed a pertinent question whether if this language fanaticism was adhered to or carried to a logical conclusion, people speaking a different language other than that of the majority of the people, would have to be transported to a State where the people speaking that language are in a predominantly majority position. I am afraid this language fanaticism may drive us to that pitch.

6 P.M.

There are some provisions in this Bill While I spoke on the S.R.C. Report, I had pleaded that there should be equal representation for all States in the Council of States. Now, on account of the S. R. Bill, we are not going to form States with similar area or population strength. There will be certain States with 6 or 7 crores of population and others with a crore and odd. While, I agree that there should be representation in the House of people according to the strength of the population, I am of the view that there should be equal representation for all the States in the Council of States. After the formation of these States, according to the Bill, the Council of States is not going to be reorganised or reconstituted. I feel that it should be reconstitued afresh. Otherwise, there may not be proper representation for the other States which are going to come into existence after 1st October 1956. I see no reason why, in a federal country like India, there should be bi-cameral legislatures in the States. Sri K. Pattabhi Raman, in his inimitable style and with all the emphasis at his command, has forcibly advanced the view that these Councils which do not serve any purpose should be done away with, and, that on the other hand,

the number of Members of the State Legislatures might be increased. At present, in Mysore, we have got 105 members. The ratio of the Members of the Assembly to that of the Members of Parliament that are sent from Mysore is 1 : 9 Under this Bill, after the new Mysore State is formed that ratio is reduced. It will be in the proportion of 1 : 7. For Assam, they have already allowed a ratio of 1 : 9 and when we have urged for the abolition of the Legislative Council which is more or less used for bringing in Government henchmen, it is but right that the number of people that are eligible to sit in the Assembly should be increased and 1 : 9 is a fair ratio which we should all accept. There is an additional basis for this plea, Sir. After the States are reorganised, the constituencies are going to be delimited. At present the constituencies in Mysore have already been delimited and the proportion is 1 : 9 and if we continue the same proportion there will not be any need for delimiting constituencies in the existing State of Mysore, and in the areas that are going to come into Mysore where there is already delimitation, by redelimiting these constituencies, we will not be lessening the strength. On the other hand, we will be increasing the number and decreasing the area of the constituencies which will be also welcomed by those persons from those areas. Regarding delimitation of constituencies, formerly the Commission was holding public sittings thereby giving opportunities to all concerned to express their grievances, to urge their arguments and to place their cards before the Commission. But such a vital method of consulting the people has been done away with under this Bill. Sir, I would urge that it should be revised so as to allow consultation with people and give an opportunity to them to express their views while re-delimitation of constituencies takes place.

Sir, Sri Gopala Gowda, Sri Pattabhi Raman and others and Sri Imam have time and again stressed and I have also stressed that we should not allow too much of concentration of power in the hands of the people at Delhi. I remember, Sir, that Pandit Jawaharlal Nehru had written an article in the "Modern Review" some years ago when I was a student wherein he had said that if proper checks are not placed, it is possible that Jawaharlal Nehru might become a dictator. Sir, today, what he said some years ago, I am afraid, has come true. He had warned us that we should be aware of the in roads that Jawaharlal would be making into the democratic rights of the people. We did not heed his warning and today if we do not put effective checks, this dictatorship will continue.

Sri T. MARIAPPA (Mysore City—North).—Is it the proper forum wherein the Centre is not represented to defend itself, to call them to account on certain matters, Sir?

Sri Mulka GOVINDA REDDY.—The Chief Minister and some others have repeatedly pointed out as to how for everything they will have to ask the Centre for assistance. It was clearly understood that the Centre should have control over defence, communications and external affairs.

Mr. SPEAKER.—What is the relevant clause in the Bill to which the Hon'ble Member is referring?

Sri Mulka GOVINDA REDDY.—Zonal Council which is proposed to be presided over by a Central Minister.

Mr. SPEAKER.—At that rate, the Hon'ble Member knows, anything can be said.

Sri T. MARIAPPA.—Sir, the proposal to form Zonal Councils is itself an attempt to limit the powers of the Centre.

Sri Mulka GOVINDA REDDY.—They have suggested certain amendments to the Constitution and therefore we must press our views.

Mr. SPEAKER.—You can suggest relevant amendments.

Sri Mulka GOVINDA REDDY.—Sir, I am suggesting that there should be decentralisation of powers. The local units should be given their powers. If the primary units or local units, like the Panchayats and the Municipal Councils or District Boards are given more statutory powers to function in the State, there may not be any room for many of the Members to go to the

(SRI MULKA GOVINDA REDDY.)

Government direct. Some of the local defects may be attended to; for instance, asking for a post office or a telephone centre and so on. Today even for such small things we have to look to Delhi, make petitions and representations and wait for months. I am of opinion that such a system should cease. All such powers could be delegated to the States.

Sir, Zonal Councils have been proposed—one for four States in the South. As it is, the present Zonal Council may not be of much use, because no powers have been given to it. If non-official members are associated in the Zonal Council, it would be more useful and the interests concerning the States of the South may be better solved.

Coming to the last point, Sir, many Hon'ble Members were supporting the formation of bilingual States. Some of them opposed the suggestion and quoted the instance of Madras. Madras was not a purely bilingual State as envisaged under the present scheme. There were Telugu people scattered in Mysore, Madhya Pradesh, Hyderabad and Madras, when there was Madras State including Andhra. Therefore, all the Telugu speaking people were not under one Government nor in one State. What has been proposed is that a bilingual State may be formed with all Telugu speaking and all Kannada speaking people joining together, and coming under one administration. For that bi-lingual State two languages may be recognised as official languages. The general administration may be carried on in the language of that particular region. In the Vishala Mysore or Greater Mysore, administration may be carried on through Kannada and in the Vishala Andhra, administration may be carried on through Telugu. For the purpose of Assembly, some may say that it will be difficult for some members to follow the speeches of other members. But, under the Parliamentary Democracy it is the party with programmes and policies that controls the destiny of the people. So, whatever small handicaps there might be, they are going to be set right by the political parties under the Parliamentary Democratic system. It is possible to find out a devise where there can be a common script for Telugu and Kannada. Sir, this bi-lingual State has been welcomed by the Chief Minister of Hyderabad Shri Burugala Ramakrishna Rao and Dr. Channa Reddy and several others. It is not as though that nobody outside Mysore has sponsored or welcomed this idea. I therefore urge that the formation of a bi-lingual State consisting of Vishala Andhra and Vishala Mysore is worth pursuing. By this, all the troubles that we are having today, the injustice that is done to the Telugu people in Mysore State, the injustice done to the people of Bellary, the common interest that we have between Andhra and Mysore could be easily solved. We are all aware that there is a 500 mile border line between Andhra and Mysore. There are so many river valley projects that will have to be taken jointly by these two States. For solving all these problems smoothly and in the interest of the people, we should welcome the formation of a bi-lingual State consisting of Vishala Andhra and Vishala Mysore with Bangalore and Hyderabad as capitals. Thank you, Sir.

MR. SPEAKER.—Now the House will rise and meet at 12 o'clock tomorrow and the general discussion on the S. R. Bill will continue for some time tomorrow also.

The House adjourned at Eighteen Minutes past Six of the Clock to meet at Twelve of the Clock on Tuesday, 3rd April 1956.

WD 2896—GPB—550—28-7-56

MYSORE LEGISLATIVE ASSEMBLY

TWENTY-EIGHTH DAY.

Tuesday, 3rd April 1956.

The House met in the Assembly Hall, Atara Kacheri, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Amruthmahal Kavals in Hassan District (Applications for Land grant pending).

Q.—25. SRI. B. N. BORANNA GOWDA (Belur).—

Will the Government be pleased to state :—

(*a*) the number of acres of Amruthmahal Kaval in Hassan District (with the names of Kavals) ;

(*b*) the number of acres of land that have been disposed of for cultivation ;

(*c*) the number of applications that are pending with the Government ?

A.—DR. R. NAGAN GOWDA (Minister for Agriculture).—

(*a*) *Acres.* 43,551 *Guntas.* 05

(For details *vide* Statement appended.)

(*b*) Nil.

(*c*) One.

Statement showing the Amruthmahal Kavals in Hassan District.

Sl. No.	Names of the Kavals			Area in possession of the Department at present	
	Kavals attached to Economic Cattle Farm, Habbanaghatta.				
				A.	G.
1	Boochenahalli	...	...	790	00
2	Athigudde	...	...	1,034	15
3	Habbanaghatta	...	...	1,000	00
4	Munjinahalli	...	...	4,297	20
5	Thirumaldevargudda	...	...	2,493	15
6	Kuri Kaval	...	...	1,491	23
7	Rayisandra	...	...	1,696	34
8	Yerebore	...	...	1,300	00
		Total	...	14,103	27

(DR. R. NAGAN GOWDA.)

Sl. No.	Names of the Kavals	Area in possession of the Department at present A.	G.
	Amani Kavals.		
1	Neelagiri	4,289	00
2	Mudodi	80	00
3	Seegegudda	2,062	08
4	Somana Halli	1,675	39
5	Kattaya	876	21
6	Koravangala	1,000	00
7	Hunchi Halli	324	27
8	Galipura Gudda	1,456	00
9	Kalladebore	600	00
10	Kallibore	517	02
11	Muddana Halli	518	06
12	Kutukmarti	786	16
13	Kalena Halli	1,008	14
14	Madelgere	1,000	00
	Total	16,194	13
	Kavals allotted to Co-operative Societies.		
1.	Belur-Kallahalli	1,028	32
2.	Ramedevarahalla	2,000	00
	Total ...	3,028	32
	Kavals allotted to Economic Farm and Aided Breeder.		
1.	Bidare	2,694	18
	Portions of Kavals attached to Aided Breeder and sold Amani.		
1.	Kanakatte	868	25
2.	Chowasandra-Kallahalli	2,126	36
	Total ...	2,995	21
	Portions of Kavals attached to Economic Farm and Aided Breeder and sold. Amani.		
1	Ranga Pura	4,534	14

ABSTRACT.

Economic Cattle Farm	14,103	27
Amani Kavals	16,194	13
Co-operative Societies	3,028	32
Breeder and Amani	2,995	21
Economic Farm and Breeder	2,694	18
Economic Farm, Breeder and Amani	4,534	14
Total ...	43,551	05

Sri B. N. BORANNA GOWDA.—You have said that the extent of Amruthmahal Kaval in Hassan district is 43551 acres. Were there no applications for disposal of the land for cultivation?

*Dr. R. NAGAN GOWDA.—There is one application and that is pending.

Sri B. N. BORANNA GOWDA.—Does it mean that other applications have been disposed of?

Dr. R. NAGAN GOWDA.—At present there are no applications pending other than that one.

Sri B. N. BORANNA GOWDA.—Are you aware that the people of Mudodi, Kattaya, Hunchi Halli and other Kavals applied a number of times for land? There must be a number of applications pending. I want to know whether those applications are pending in your office or in the office of the Amildar?

"That the States Reorganisation Bill, 1956, referred by the President under Article 3 of the Constitution be taken into consideration."

The motion was adopted.

Mr. SPEAKER.—Next item.

SPECIAL RESOLUTION ON STATES REORGANISATION.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಸ್ವಾಮಿ, ನಾನು ಈ ನಿರ್ಣಯವನ್ನು ಸಭೆಯ ಪರಿಶೀಲನೆಗೆ ಇಡುವುದಕ್ಕೆ ಅಪ್ಪಣೆ ಬೇಡುತ್ತೇನೆ.

"ಭಾರತದಲ್ಲಿರುವ ಈಗಿನ ಸನ್ನಿವೇಶಗಳಲ್ಲಿ, ಬೇರೆ ಬೇರೆ ಪ್ರದೇಶಗಳು ಶೀಘ್ರವಾಗಿ ಅಭಿವೃದ್ಧಿಗೆ ಬರುವುದಕ್ಕಾಗಿಯೂ ಮತ್ತು ಭಾರತದ ಐಕ್ಯತೆ ಮತ್ತು ಭದ್ರತೆಯನ್ನು ದೃಢಪಡಿಸಿಕೊಳ್ಳುವುದಕ್ಕಾಗಿಯೂ, ಎಲ್ಲೆಲ್ಲಿ ಮತ್ತು ಯಾವಾಗ ಸೂಕ್ತವೆಂದು ಕಂಡುಬರುತ್ತದೆಯೋ ಅಲ್ಲಲ್ಲಿ ಮತ್ತು ಆಗಾಗ ಪ್ರತಿಯೊಂದು ಭಾಷಾವಾರು ಪ್ರದೇಶಕ್ಕೂ ಪ್ರಾದೇಶಿಕ ಕೌನ್ಸಿಲ್ ಸಭೆಯನ್ನೊಳಗೊಂಡ ದ್ವಿಭಾಷಾ ರಾಜ್ಯಗಳನ್ನು ಏರ್ಪಡಿಸುವುದು ಸೂಕ್ತವೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

Sri J. MOHAMED IMAM (Jagalur).—Sir, I rise to a point of order. I submit that this Special Resolution is not admissible. In the first place, we are in the midst of the discussion of the S. R. Bill which was referred to us by the President of India for our opinion. We have not yet finished that work. We have still to consider a number of amendments and they are very important. If this Special Resolution is to be considered at all, it must be considered after we have finished and completed our deliberations on the S.R. Bill.

Secondly, Sir, this is called a Special Resolution. This Special Resolution is practically in the nature of a motion for adjournment so far as its admissibility is concerned. For a Special Resolution to be admitted, there must be special reasons and special circumstances. Sir, I submit there are no special reasons and the motion does not satisfy the conditions laid down for the admissibility of a resolution of a special nature under the Rules. Sir, I would like to know what are the special reasons the mover has urged for its being taken up so suddenly and in preference to the appointed business and without any previous notice. In the first place, Sir, this ought to have been included in the regular agenda so that members may have had enough time and opportunity to disuss this subject and study its *pros* and *cons*. The Leader of the House has taken us by surprise by suddenly bringing this subject in the form of a resolution. Sir, the idea of bi-lingual State or Dakshina Pradesh was in the air for the last two or three months. It was being disussed both on the platform and in the press and we have all expressed our opinion. So, it would have been more appropriate if the mover of the Resolution had brought this in regular agenda and given us sufficient notice. Notice of this Resolution was given to us only this morning. We were not in a position to study it in detail. We have no

time to send in amendments. Sir, the very idea of a special resolution is that the subject matter is something of recent occurrence and it must also be of public importance.

Sri K. HANUMANTHAIYA.—That is an adjournment motion.

Sri J. MOHAMED IMAM.—I know I can make a distinction between a special resolution and an adjournment motion. A special resolution is permitted to be moved only when the mover has had no sufficient time to bring up the subject matter in the ordinary way and if it is only of recent occurrence. Now this subject has been before the public for a very long time and there is no reason why it should be admitted as a special resolution.

Sir, another thing is that under the Rules a special resolution must be such that it should relate to a matter which is the concern of the Government. I draw the attention of the House to Rule 102 (*c*). The resolution must raise a definite issue and secondly, when the opinion of this House is placed before the Government, it must be the concern of the Government, and the Government must be in a position to implement it. Whatever issue is raised through the resolution, it must be within the competence of the Government to implement it. But here, Sir, the subject matter of this Resolution is not the concern of the Government of this State and is not within their competence. It concerns the Government of India. Let me read the resolution, Sir.

> "This Assembly is of opinion that in the circumstances existing in India, for the rapid development of various areas and for ensuring unity and security of India, it is desirable, wherever and whenever feasible, to form bilingual States with regional Council for each Linguistic area."

This will make it clear, Sir, that this House has been asked to consider a special resolution the subject matter of which affects not Mysore, but which concerns the whole of India. So, it is clearly beyond the jurisdiction of the State Government. This is a matter which can more appropriately be discussed by the Parliament. After all, what is it that we are doing here? We do not know what is the view of Madras or Hyderabad and can we legislate and lay down a rule or principle for the entire country? Are we competent to do it? Beyond this, Sir, such matters can be discussed by this House only when they are referred by the President of India. Matters affecting other States, matters affecting the entire country and matters concerning the reorganisation of the different States can be considered only when they are referred to us by the President of India. This matter has not been referred by the President of India and thereby we are trying to appropriate to ourselves a power to which we are not entitled. We cannot lay down a resolution which will affect other States also and it is beyond the purview and jurisdiction of this House. Hence this House is not competent to discuss this Resolution. Firstly, it is a matter concerning the Parliament as it comes under List I. Secondly, it is not a concern of this Government or this House to deliberate on an issue of this kind.

Next Sir, the Resolution as I said must raise a specific issue; it must be definite and it must give a clear idea of what we are expected to do. This Resolution is so vague and omnibus that I am afraid that we are going to lay down rules not only for ourselves, but for posterity. Let me read the Resolution again:

> "That this Assembly is of the opinion that in the circumstances existing in India, for the rapid development of various areas and for ensuring unity and security of India, it is desirable, wherever and whenever feasible, to form bilingual States with regional Council for each Linguistic area."

It does not raise any definite issue on which we are called upon to give our opinion. 'whenever and wherever feasible'.—It may be now or it may be a hundred years hence. It may be feasible here and it may not be feasible in Madras or Uttar Pradesh. In the first place, it is not a resolution at all.

(SRI J. MOHAMED IMAM.)

What is it we are going to resolve and on whose behalf are we going to resolve and for whose benefit are we going to resolve and lay down these things? On the other hand, if the Government have courage, let them bring forward a specific proposal. We will see what it is. Let them say that such and such areas will form a bi-lingual State. Sir, I have also a feeling that this Resolution if allowed or admitted and passed, will be a direct negation of the principle we have adopted just now. This principle we have adopted just now is specific and it says that uni-lingual and uni-composite State should be formed, *i e.*, a single State of uni-lingual or composite character should be formed. Immediately after that, the House is now asked to take a decision to consider the question of merging with other States to form one Pradesh. This position is directly inconsistent with the motion we have just adopted. This Resolution will have the effect of negativing that position. Under the Rules also, if the House takes a decision after sufficient deliberation on a motion another resolution which negatives it cannot be moved.

Sir, on these grounds I submit that this Special Resolution should not be allowed to be moved.

Another point I want to submit is that sufficient time has not been given to us. When copies of this Special Resolution were circulated to us this morning, I was under the impression that it would be taken up three or four days later and that we would have sufficient time to consider the subject and table amendments and form our own opinions. We are now asked to give our opinion on this subject without previous notice. Strictly speaking, even if it is admitted, we must get at least three or four days time. We must dispose of all amendments concerning the S.R. Bill and afterwards we can consider this Special Resolution should the Speaker be still pleased to hold that this Resolution is in order and worthy of being discussed in the light of my objections. What is the purpose of introducing this confusion in the midst of a Bill?

On these grounds—that it is not a subject which concerns the Mysore Government, but one which concerns the Government of India and that it ought to have been referred to us by the President of India, I submit, Sir, that this Resolution is inadmissible and should not be allowed to be discussed in this House.

SRI K. HANUMANTHAIYA—Sir, I shall answer all the points the Hon'ble Leader of the Opposition has raised. Firstly he said that he did not have sufficient notice of this Resolution and in the same breath he said that this idea of combining States has been before us for the last four or five months. One of his arguments cancels the other.

SRI J. MOHAMED IMAM.—My argument is that we had no time to study.

SRI K. HANUMANTHAIYA.—In fact, the speech that I made when I moved the Bill contained the ideas of the Government so far as this matter is concerned. Anyway Sir, if he pleads want of sufficient time, he has answered it himself.

This is a definite issue. I hope he will agree with that point of view. It is the concern of the Government because it is as Chief Minister I am moving this Resolution. As Leader of this House, it is not merely my business to voice my own opinion. It is my business also to voice the opinion of this House. Otherwise, there would be no meaning to the office I hold *i.e.*, the Leader of the House. Therefore, Sir, whether is technically right or wrong,—I do not know,—we have to catch the substance, as I have been often saying. If this House feels a particular resolution has to be passed in the interests of the country, that resolution ought to be placed before the House for normal consideration. I have no doubt, whatsoever, that the overwhelming majority of this House today feels that it is not only the concern of this Government but it is the concern of this House. Sir, he further said: if Government is not in a position to implement this idea, we cannot bring forward such a resolution. That argument applies to the whole Bill. We are not in a position to implement the Bill that we are now

considering. We have merely to furnish our opinion on the Bill. If it is strictly construed that whatever we are not in a position to implement we cannot discuss, then we cannot discuss the Bill at all. Therefore, Sir, this Resolution is in similar position as the Bill. If we can consider the Bill, we can also conder this Resolution.

Sir, in the Bill that has been sent to us, in the Introductory portion, page 3, para, 8, it reads as follows :—

> "In view of the proposal for the union of the two States which is now under active consideration, no provision has been made in the draft Bill in regard to territorial adjustments between the States of Bihar and West Bengal. A separate Bill will be introduced in due course to implement the decision which may be taken about these States."

Therefore, the idea of merging of two States has been definitely stated in the Bill that has been sent to us by the Government of India. It may be that it does not make a reference to Mysore or any of the South Indian States; but the idea is there. Just as the Leader of the Opposition is at liberty to move any amendment to a motion made, this House is in a position to suggest expansion, contraction, addition or alteration of the State. Therefore, this idea of two States joining together is *intra vires* of the motion I have moved. 'Wherever' and 'whenever' are certainly used. But, 'wherever' does not mean, it is in Europe or Africa. We are considering these problems as India. If that is also literally construed, what business have we to consider at this stage, problems relating to South Canara, Districts in Bombay State, Coorg and Hyderabad State which have got separate legislatures? We are considering here problems which are not strictly and legally within one jurisdiction, because the nature of the problem is such. We are called upon to make suggestions in the matter of reorganisation of the States in the whole of India in general, and with particular reference to us.

Then, Sir, the Leader of the Opposition says that this Resolntion negatives the decision that we have already taken. It does not. If it was so, I would be the last person to bring up any such resolution for the consideration of this House. I may categorically state for the statisfaction of my Hon'ble friend that I am one with him in doing the very best to bring into existence the new State of Mysore in a harmonious atmosphere. I want everybody in this House and in the State to feel happy when this State is brought into existence in the month of October. It is in order to fulfil the idea that has already been accepted by this House and by the Leader of the Opposition that I am moving this Resolution. There is no ulterior motive behind this. In fact, this Resolution is the fulfilment of the decision we have taken.

3 P.M.

Sir, he asked me the purpose of the Resolution. The purpose is more important and he has rightly put that question. The purpose is, in this House when the decision was taken on this question in the month of December last, the Leader of the Opposition saw substantial portion of this House remained neutral. It was after all with a bare majority of six or seven that we passed the resolution for the creation of a new State. The purpose today is that all of us should act unanimously, think unanimously and prosper unanimously, so far as the new State is concerned. It is with that high purpose I have brought this Resolution. In fact, I wanted to take the Leader of the Opposition and other prominent members of this House into confidence before I moved this Resolution and I sent them letters requesting them to attend the meeting at which we wanted to consider this Resolution. Unfortunately the letters might not have reached the Hon'ble Members in time. They therefore, see the utmost *bona fides* and consideration that I entertain for them and I have no wish whatever to take them by surprise. In the interest of good feeling and unanimity of approach to this big problem, I have tabled this

(SRI K. HANUMANTHAIYA.)

Resolution and I seek the co-operation and the goodwill of the Leader of the Opposition and his friends in this matter.

Mr. SPEAKER.—Now the House will rise for lunch and meet at 3-45.

The House rose for Lunch at Eight Minutes past Three of the Clock and reassembled at Forty-right Minutes past Three of the Clock.

[MR. SPEAKER in the Chair]

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸ್ವಾಮಿ, ಈ ನಿರ್ಣಯವನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳತಕ್ಕದ್ದು ಅವಶ್ಯಕ ಎಂಬ ವಿಚಾರದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಮೊಟ್ಟಮೊದಲನೆಯದಾಗಿ ತಾವು ಈ ನಿರ್ಣಯವನ್ನು ಚರ್ಚೆಗೆ ತೆಗೆದುಕೊಂಡರೆ ಮುಂದೆ ಈ ಸಭೆಯಲ್ಲಿ ಚರ್ಚೆ ಮಾಡಬೇಕಾಗಿರತಕ್ಕಂಥ ಅನೇಕ ವಿಚಾರಗಳೂ ಹಾಗೂ ಅನೇಕ ತಿದ್ದುಪಡಿಗಳೂ ಬಹಳ ಸುಲಲಿತವಾಗಿ ಇದರಿಂದ ತೀರ್ಮಾನವಾಗತಕ್ಕ ಅವಕಾಶವಿದೆ. ಆ ತಿದ್ದುಪಡಿಗಳ ಮೇಲೆ ಚರ್ಚೆ ನಡೆಸುವುದು ಇದರಿಂದ ಬಹಳ ಮಟ್ಟಿಗೆ ಕಡಮೆಯಾಗುತ್ತದೆ. ಮತ್ತು ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಯಾವ ನಿಯಮಗಳೂ ಕೂಡ ವಿರೋಧವಾಗಿರುವುದಿಲ್ಲ. ಆದುದರಿಂದ ಇದನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳುವುದು ಅನುಕೂಲವೆಂದು ನಾನು ಸಲಹೆ ಮಾಡುತ್ತೇನೆ.

Sri Mulka GOVINDA REDDY (Chitaldrug).—This Resolution is admissible for the following reasons. Generally, amendments are tabled to a Bill when it comes up for discussion before this Assembly, but regarding a special resolution; in effect it will be an amendment to a Bill, a special resolution was tabled for a particular Bill—that was in 1953; when we discussed the Andhra State Bill. A special resolution was tabled and it was allowed and now also a Special Resolution has been tabled. There is no reason why it should not be admitted when we have already created a precedent in this matter. This Special Resolution concerns Mysore State and other States of India. This Bill itself covers all States and we are entitled to comment upon the provisions of this Bill, though we may not evince much interest in provisions which do not concern Mysore State and this is important in that it is going to enunciate a principle which has already been accepted under some of the provisions of this Bill and therefore it is perfectly in order that this Special Resolution should be allowed.

Mr. SPEAKER.—Several points are raised by the Leader of the Opposition for not admitting this motion. Of course, the Hon'ble Members are aware that it is included in the List of Business and that List of Business was distributed to the Hon'ble Members in time yesterday according to the information available. But yesterday the Leader of the House approached me and asked for permission to suspend some of the rules, as was stated by the Leader of the House, just to have this Resolution passed in preference to the amendments so that the amendments that may be taken up may have a smooth passage. Therefore, I have suspended the procedure under rule 23 and have allowed this motion to be discussed.

Sri J. MOHAMED IMAM.—I bow to the ruling of the Chair, but to facilitate a healthy discussion, I would submit that this may be taken up a little late because, as I submitted, this Special Resolution came to our hands rather late and we have had no time to consult among ourselves and come to a conclusion. Till now both the Opposition and the Treasury Bench have treated this as a non-party matter and it is true that the Leader of the House took the Opposition into confidence in various vital matters. I am anxious to see that harmonious atmosphere is maintained. So I would submit that this question may be taken up after we dispose of the Bill, one or two days later, because, as I said, we want to consult among ourselves and we have had no time to do this. I would request that we may be given one or two days' time.

Sri K. HANUMANTHAIYA.—So far as his suggestion is concerned, if it is merely for the purpose of thinking over, I would readily agree to it. Let him not take too much time over it. For instance, we may

agree that the Resolution may be taken up tomorrow. He will have time almost a day and there are some amendments which we may discuss in the meanwhile, but the passing of this Resolution would create a very good atmosphere in this House and as several members have said, it would facilitate the unanimous acceptance of not only some amendments but also the Bill as a whole. No doubt he would take time, as he says, but the time may not be indefinite; it may be some time tomorrow; whatever time he suggests tomorrow, I have no objection to accept it.

Sri J. MOHAMED IMAM.—One o'clock.

Sri K. HANUMANTHAIYA.—I agree.

Sri S. SRINIVASA IYENGAR (T.-Narsipur).—After the question hour.

Sri K. HANUMANTHAIYA.—Yes.

Mr. SPEAKER.—I think this is agreeable to all the Hon'ble Members of this House.

Sri K. PATTABHIRAMAN (Kolar).—I am not a party to it. That is between the Leader of the House and the Leader of the Opposition.

STATES REORGANISATION BILL, 1956.

Clauses.

Mr. SPEAKER.—Now amendments. There are no amendments proposed with regard to clauses in Part I. Part II, Clause 3.

Sri B. V. NARAYANA REDDY (Bagepally-Gudibanda).—Sir, I move:

'In sub-clause (1)—

(1) after item (*d*), the following items (*e*) to (*i*) shall be added, namely—

"(*e*) Kolar District;

(*f*) parts of Devanahalli, Dodballapur, Hoskote taluks and the whole taluks of Anekal and Bangalore South of Bangalore District;

(*g*) whole of Pavagada taluk and eastern parts of Koratagere and Madhugiri taluks of Tumkur District;

(*h*) eastern parts of Molakalmuru, Challakere, Jagalur and Chitaldrug taluks of Chitaldrug District; and

(*i*) Bellary town and Moka and Rupangudi firkas of Bellary taluk of Bellary District;"

(2) in line 10, after the words 'existing State of Hyderabad', the words and comma "and Mysore, respectively" shall be inserted.'

ಸ್ವಾಮಿ, ಈಗ ನಾನು ಹೇಳತಕ್ಕದ್ದರಲ್ಲಿ ಹೊಸ ವಿಚಾರ ಯಾವುದೂ ಇಲ್ಲ. ಈ ವಿಚಾರದಮೇಲೆ ಈ ಹಿಂದೆ ಆಂಧ್ರ ಬಿಲ್ಲು ಬಂದಿದ್ದಾಗಲೂ ನಾನು ಮಾತನಾಡಿದ್ದೇನೆ. ಈ ದಿವಸ ಈ ಸ್ಟೇಟುಗಳನ್ನು ಯಾವ ಆಧಾರದಮೇಲೆ ರೀ ಆರ್ಗನೈಸ್ ಮಾಡಿದ್ದಾರೆ ಎಂಬುದನ್ನು ಮುಖ್ಯವಾಗಿ ನಾವು ನೋಡಬೇಕಾಗಿದೆ. ಇದನ್ನು ಗಮನಿಸಿ ನೋಡುವ ಪಕ್ಷಕ್ಕೆ ಈ ದಿವಸ ಇಲ್ಲಿ ಎಲ್ಲರೂ ಹೇಳುತ್ತಿರುವುದು, ಮನಸ್ಸಿನಲ್ಲಿ ಒಂದಿದ್ದರೆ ಬಾಯೊಳಗೆ ಬೇರೆ ಒಂದು ವಿಚಾರ ಹೇಳುತ್ತಿದ್ದಾರೆ. ಹೀಗೆ ಒಳಗೊಂದು ಹೊರಗೊಂದು ಇಟ್ಟುಕೊಂಡು ಮಾತನಾಡಿದ್ದಾರೆ. ಈ ದಿವಸ ದಕ್ಷಿಣ ಇಂಡಿಯಾದಲ್ಲಿ ರಾಜ್ಯಗಳ ಪುನರ್ವಿಂಗಡಣೆ ಮಾಡತಕ್ಕದ್ದು ಪ್ರಾಧಾನ್ಯವಾಗಿ ಈ ಭಾಷಾ ಆಧಾರವೊಂದರಮೇಲೆ ಅಲ್ಲದೆ ಅದು ಮತ್ತೆ ಯಾವ ರೀತಿಯಲ್ಲೂ ಆಗಿಲ್ಲ. ಈಗ ವಿಂಗಡಿಸಿರತಕ್ಕದ್ದಾದರೂ ಹೇಗೆ? ಆಂಧ್ರ, ತಮಿಳುನಾಡು, ಕೇರಳ, ಕರ್ಣಾಟಕ, ಮಹಾರಾಷ್ಟ್ರ ಹೀಗೆ ವಿಭಾಗ ಮಾಡಿದ್ದಾರೆ. ಇದರಲ್ಲಿ ಆ ಭಾಷಾಭಿಮಾನವಲ್ಲದೆ ಮತ್ತೇನಿದೆ? ಹೀಗಿರುವಾಗ ಈ ದಿವಸ ಈ ಪ್ರಾಂತ್ಯಗಳನ್ನು ಯಾವುದೋ ಒಂದು ರೂಪದಲ್ಲಿ ಮಾಡಿದ್ದೇವೆಂದು ಹೇಳುತ್ತಾ ಈಗ ಮತ್ತೆ ನಮಗೆ ಆ ಕಾಸರಗೋಡು ಬರಬೇಕು, ನೀಲಗಿರಿ ಬರಬೇಕು, ಬೊಂಬಾಯಿನಲ್ಲಿ ಅದು ಬರಬೇಕು, ಇದು ಬರಬೇಕು ಎಂದು ವಾದಕ್ಕೆ ಪ್ರಾರಂಭ ಮಾಡಿದ್ದಾರೆ. ಅದಕ್ಕೆ ಹೇಳುವಂಥ ಕಾರಣ ಏನೆಂದರೆ, ಆ ಪ್ರದೇಶಗಳಲ್ಲೆಲ್ಲಾ ಕನ್ನಡ ಮಾತನಾಡತಕ್ಕಂಥ ಜನರೇ ಜಾಸ್ತಿ ಇದ್ದಾರೆ, ಅದಕ್ಕಾಗಿ ಆ ಭಾಗಗಳನ್ನು ನಮಗೆ ಸೇರಿಸಿ ಕೊಡಿ, ಎಂದು ಹೇಳುತ್ತಿದ್ದಾರೆ. ಹೀಗೆ ಅವರ ಅಭಿಪ್ರಾಯವಿದ್ದಾಗ್ಯೂ ಇವರು ಮೈಸೂರನ್ನು ಒಂದು ಕಂಪೋಜಿಟ್ ಕ್ಯಾರೆಕ್ಟರಿನ ದೇಶ ಎಂದು ಕರೆಯುತ್ತಿದ್ದಾರೆ. ಆದರೆ ನಾನಾದರೂ ಈಗ ಇದರಲ್ಲಿ ಯಾವ ಭಾವನೆಯಿದೆಯೋ ಅದೇ ಭಾವನೆ ಇಟ್ಟುಕೊಂಡೇ ಈ ಪ್ರದೇಶಗಳನ್ನೆಲ್ಲಾ ಕೇಳಿದ್ದೇನೆ. ಈ ಪ್ರದೇಶದಲ್ಲಿ ಸುಮಾರು 18-20 ಲಕ್ಷ ಜನರು ತೆಲುಗು ಮಾತನಾಡತಕ್ಕವರಿದ್ದಾರೆ. ಆಂಧ್ರರು ಆಂಧ್ರವನ್ನು ಸೇರಬೇಕೆಂದು ಕೇಳಿದರೆ ಹೊಟ್ಟೆಕಿಚ್ಚು ಪಡುತ್ತಾರೆ. ಇವರಲ್ಲಿ ಏಕೆ ಇಂಥ ಒಂದು ಸಂಕುಚಿತ ಮನೋಭಾವವಿದೆಯೋ ಅದು ನನಗೆ ಗೊತ್ತಾಗುತ್ತಿಲ್ಲ. ಇವರು ಹೇಳುತ್ತಿರುವ ಹೇಳಿಕೆಗಳಲ್ಲಿ ಯಾವ ಒಂದು ಲಾಜಿಕ್ಕೂ ಇಲ್ಲ. ಆಂಧ್ರರು ಕೋಲಾರ ಕೇಳಿದರೆ ಅದನ್ನು ಕೇಳಬೇಡಿ ಎಂದು ಹೇಳುತ್ತಾರೆ. ಆದರೆ ಇವರಿಗೆ ಬಳ್ಳಾರಿ

(SRI B. V. NARAYANA REDDY)

ಮಾತ್ರ ಬರಬೇಕಂತೆ! ಇದು ಯಾವ ನ್ಯಾಯ? ಕೋಲಾರ ಮೈಸೂರಿನಲ್ಲೇ ಇರಬೇಕೆಂದರೆ ಆ ಬಳ್ಳಾರಿ ಆಂಧ್ರದಲ್ಲಿ ಏಕಿರಬಾರದು? ತಾವು ಚರಿತ್ರಿಕ ಹಿನ್ನೆಲೆಯನ್ನೇ ತೆಗೆದುಕೊಂಡು ನೋಡಿ. ಹೈದರಾಲಿ ಗೆದ್ದನಂತರ ಆ ಕೋಲಾರ ನಿಮ್ಮ ಮೈಸೂರಿಗೆ ಸೇರಿದ್ದು, ಅದಕ್ಕೆ ಮುಂಚೆ ನಿಮ್ಮ ಮೈಸೂರು ಈ ದಿವಸ ಇದ್ದಷ್ಟು ದೇಶ ಆಗ ಎಲ್ಲಿತ್ತು? ಈ ಬಗ್ಗೆ ಶ್ರೀ ಎಚ್. ಸಿದ್ದವೀರಪ್ಪನವರು 16ನೇ ಶತಮಾನದ ವಿಚಾರ ಬಹಳ ಚೆನ್ನಾಗಿ ಹೇಳಿದ್ದಾರೆ. ಆ 16ನೆಯ ಶತಮಾನದಲ್ಲಿ ಈ ನಿಮ್ಮ ಮೈಸೂರು ಎಂಬುದು ಈಗಿನ ಒಂದು ಜಿಲ್ಲೆಯಷ್ಟು ಕೂಡ ದೊಡ್ಡದಾಗಿರಲಿಲ್ಲ. 16ನೇ ಶತಮಾನದಲ್ಲಿ ಏನಿತ್ತು?

4 P.M.

ಮೈಸೂರು ಡಿಸ್ಟ್ರಿಕ್ಟು, ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಎಲ್ಲೋ ಸ್ವಲ್ಪ ಇತ್ತು. ಹೈದರಾಲಿ ನಮ್ಮ ಬೂದಿಕೋಟೆಯಲ್ಲಿ ಹುಟ್ಟಿದವನು, ಅವನು ಶೌರ್ಯದಿಂದ ರಾಜ್ಯಸಂಪಾದನೆಮಾಡಿ ಮೈಸೂರು ದೇಶವನ್ನು ವಿಶಾಲಗೊಳಿಸಿದ. ಹೈದರಾಲಿಯೂ ತೆಲುಗಿನವನೇ, ಕೋಲಾರಮಂಡಲ ಮೊದಲೇ ಇವೊತ್ತು. ಇತ್ತೀನದಲ್ಲ ನಾಲ್ಕನೇ ಶತಮಾನದಲ್ಲಿ ಇದೇ ಕೋಲಾರದವರು ಇಲ್ಲಿಂದ ಹೋಗಿ ಕಳಿಂಗದೇಶವನ್ನೂ, ಬಂಗಾಳಧವರನ್ನೂ ಗೆದ್ದು ಪೂರ್ವಗಂಗರೆಂದು ರಾಜ್ಯವಾಳಿದ್ದಾರೆ. ಹತ್ತನೆಯ ಶತಮಾನದಿಂದ ಗುಮ್ಮನಾಯ್ಕನಪಾಳ್ಯ ಮೊದಲಾದ ಪಾಳ್ಯಗಾರರೂ ತೆಲುಗರಾಗಿದ್ದರು. ಅದು ಕೂಡ ಚರಿತ್ರೆಯಲ್ಲಿದೆ. ಹೀಗಿರುವಾಗ ಕೋಲಾರದವರು ಮೈಸೂರಿನಲ್ಲೇ ಇರುವುದಕ್ಕೆ ಕಾರಣ ಏನಿದೆ? ಭಾಷಾವಾರು ಎಂದು ನಿರ್ಧಾರವಾದಮೇಲೆ ನಮ್ಮನ್ನು ನಮ್ಮ ಭಾಷೆಯಿರತಕ್ಕ ಪ್ರದೇಶಕ್ಕೆ ಹೋಗಲು ಏಕೆ ಬಿಟ್ಟುಕೊಡುವುದಿಲ್ಲ? ಆಂಧ್ರರು ನಮ್ಮನ್ನು ಬೇಡ ಎಂದು ಹೇಳುತ್ತ ಇದ್ದಾರೆಯೇ? ಇಲ್ಲ. ಕೋಲಾರದವರು ತೆಲುಗು ಮಾತನಾಡುವವರ ಜೊತೆಗೆ ಬರಬೇಕೆಂದೇ ಹೇಳುತ್ತಾ ಇದ್ದಾರೆ. ಇದರ ಜೊತೆಗೆ ಈ ರಾಜ್ಯದಲ್ಲಿ ನಮಗೆ ಇರುವ ಅನುಕೂಲವಾದರೂ ಏನು? 1799 ರಿಂದ ಇಲ್ಲಿ ಸೇರಿಕೊಂಡಿರುವುದೇ ಮುಖ್ಯ ವಿಷಯ. ನಮ್ಮ ಗ್ರಹಚಾರ ನೋಡಿ! ತೆಲುಗು ಬರೆಯುವುದಕ್ಕೆ ನನಗೆ ಬರುವುದಿಲ್ಲ. ಕಲಿಸುವುದಕ್ಕೆ ಈ ದೇಶದಲ್ಲಿರುವ ಆಡಳಿತಕ್ಕೆ ಯೋಗ್ಯತೆ ಇದೆಯೇ? ಯೋಗ್ಯತೆ ಇದ್ದಿದ್ದರೆ ಹೀಗೇಕಾಗುತ್ತಿತ್ತು? ಎಷ್ಟೋ ದಿವಸದಿಂದ ಹೇಳುತ್ತಾ ಇದ್ದೇವೆ ತೆಲುಗು ಪ್ರೈಮರೀ ಸ್ಕೂಲ್ ಪ್ರಾರಂಭ ಮಾಡಿಸಿ ಎಂದು; ಯಾರೂ ಕೇಳುವವರೇ ಇಲ್ಲ.

ಶ್ರೀ ಕೆ. ಹನುಮಂತಯ್ಯ.—ನೀವು ಪ್ರೈಮರಿ ಸ್ಕೂಲಿಗೆ ಹೋಗುವ ಹಾಗಿದ್ದರೆ ಹೇಳಿ, ಅಭ್ಯಂತರವಿಲ್ಲ ಕಳುಹಿಸುತ್ತೇವೆ. (ನಗು !)

ಶ್ರೀ ಬಿ. ವಿ. ನಾರಾಯಣರೆಡ್ಡಿ.—ನಿಮಗಿಂತ ಎಷ್ಟೋ ವಿಷಯ ಚೆನ್ನಾಗಿ ತಿಳಿದುಕೊಂಡಿದ್ದೇನೆ. ಆ ವಿಷಯ ಬೇರೆ. ಏನೇ ಆದರೂ ಕೂಡ ಯಾವತ್ತು ಇವರ ಕೈಗೆ ರಾಜ್ಯಾಡಳಿತ ಬಂತೋ ಅಂದಿನಿಂದ ಮೊಟ್ಟ ಮೊದಲು ರಾಜ್ಯಭಾಷೆ ಕನ್ನಡಭಾಷೆ ಎಂದು ಮಾಡಿದರು. ಆವೊತ್ತಿನಿಂದ ಈ ತೆಲುಗರ ಬಾಯನ್ನು ಕಟ್ಟಿ ಹಾಕುತ್ತಾ ಇದ್ದಾರೆ. ತೆಲುಗು ಭಾಷೆ ಏನಿದೆ ಅದನ್ನು ಆಷ್ಟಿಷ್ಟು ಕೆಳಮಟ್ಟದಲ್ಲಿಟ್ಟುಕೊಂಡು ವ್ಯವಹಾರಕ್ಕೆ ಉಪಯೋಗಿಸಿಕೊಂಡಿದ್ದಾರೆಯೇ ಹೊರತು ಬೇರೆ ಯಾವುದಕ್ಕೂ ಅದು ಸಹಾಯಕ್ಕೆ ಬರುವುದಿಲ್ಲ ತೆಲುಗು ಕಲಿತರೆ ಕೆಲಸಕೊಡುವ ಹಾಗಿಲ್ಲ. ಏಕೆ ಕಲಿಯಬೇಕು? ಕೊನೆಯಪಕ್ಷ ಪಟೇಲ್‌ಶ್ಯಾನುಭೋಗರ ಕೆಲಸಕ್ಕಾದರೂ ಇದನ್ನು ಕಲಿಯಬೇಕಾಗಿಲ್ಲ. ಅವರಾದರೂ ಎಷ್ಟು ಜನ ಇದ್ದಾರೆ? ಒಟ್ಟಿನಲ್ಲಿ ಶೇಕಡ 15 ಕೂಡ ಇಲ್ಲ. ಅಕ್ಷರಸ್ಥರು ಅವರಲ್ಲಿ ಎಷ್ಟು ಜನ ಇದ್ದಾರೆ ಅಂದರೆ ಬಹಳ ನೆಗ್ಲಿಜಿಬಲ್. ಅವರು ಮೈಸೂರುದೇಶಕ್ಕೆ ಸಂಬಂಧಪಟ್ಟವರೇ? ಅಲ್ಲ. ಅಲ್ಲಿರುವ ಸ್ವಲ್ಪ ಕನ್ನಡಿಗರೂ ಆಂಧ್ರಕ್ಕೆ ಹೋಗಲು ಇಷ್ಟ ಪಟ್ಟಿದ್ದಾರೆ. ಈ ಮೈಸೂರಿನ ಅಸೆಂಬ್ಲಿಯಲ್ಲಿ ಕೋಲಾರ ಡಿಸ್ಟ್ರಿಕ್ಟಿನಿಂದ ಬಂದಿರತಕ್ಕ ಸದಸ್ಯರು ಎಷ್ಟುಜನ ಕರ್ನಾಟಕದಲ್ಲಿರಬೇಕೆಂದು ಹೇಳಿದ್ದಾರೆ? ಪಟ್ಟಾಭಿರಾಮನ್ ಅವರು ಮತ್ತು ಸ್ವಾಮಿದೊರೈರವರು ಇವರ ವಿನಾ ಇನ್ನಾರೂ ಇಲ್ಲ. ಮಿಕ್ಕ M.L.A. ಗಳು ಈಗ ಆಂಧ್ರ ಕರ್ನಾಟಕ ಮಾಡೋಣ ಎಂದು ಹೇಳುತ್ತಾ ಇದ್ದಾರೆ. ನಾನು, ಆಂಜನೇಯರೆಡ್ಡಿ, ವಾರ್ನರ್, ತೆಲುಗು ಪ್ರದೇಶಗಳು ಆಂಧ್ರಕ್ಕೆ ಹೋಗಬೇಕೆಂದಿದ್ದೇವೆ. ನಾನು ಹೇಳುವುದೇನೆಂದರೆ, ಮುಂದೆ ಹೇಗಾದರೂ ಆಗಲಿ, ನಮಗೆ ಮೊಟ್ಟಮೊದಲು ಬೇಕಾಗಿರುವುದು ತೆಲುಗು ಮಾತನಾಡುವ ಪ್ರದೇಶ. ಎಲ್ಲೆಲ್ಲಿ ಶೇಕಡ 50ಕ್ಕಿಂತ ಜಾಸ್ತಿ ಇದೆಯೋ ಅದನ್ನೆಲ್ಲಾ ಆಂಧ್ರಕ್ಕೆ ಸೇರಿಸುವಂತೆ ತೀರ್ಮಾನಮಾಡಬೇಕೆಂದು ನನ್ನ ಒಂದು ಮನವಿ. ಆದಾದಮೇಲೆ ಬೇಕಾದರೆ ಆಂಧ್ರ ಶಾಸನಸಭೆ, ಮೈಸೂರು ಶಾಸನಸಭೆಯವರು ಸೇರಿಕೊಂಡು ಮುಂದೆ ಆಂಧ್ರ ಮತ್ತು ಕನ್ನಡ ಒಟ್ಟುಗೂಡಿಸುತ್ತೇವೆ ಎಂದರೆ ನಮ್ಮ ತಕರಾರು ಏನೂ ಇಲ್ಲ. ತಕರಾರು ಇದ್ದರೂ ಕೇಳುವವರೂ ಇಲ್ಲ. ಆದರೂ ಆಗಬಹುದು ಚಿಂತೆಯಿಲ್ಲ.

ಇನ್ನೊಂದು ವಿಷಯ ಯೋಚನೆ ಮಾಡಬೇಕಾಗಿರುವುದು ಏನೆಂದರೆ, ತಲೆಯಮೇಲೆ ದೊಡ್ಡ ಕಲ್ಲುಬಿದ್ದ ಹಾಗೆ ಬಂದಿದೆ, ಬಹಳ ತೀವ್ರವಾಗಿ ಯೋಚನೆಮಾಡಬೇಕಾಗಿದೆ. ಪಾಕೀಸ್ತಾನದವರು trouble create ಮಾಡುತ್ತಾ ಇದ್ದಾರೆ. ನಮ್ಮ ತನುಮನಧನಗಳನ್ನೆಲ್ಲಾ ಮೀಸಲಾಗಿಟ್ಟು ಹೊಡೆದಾಟ ಮಾಡಬೇಕಾದ ಪರಿಸ್ಥಿತಿ ಬರುತ್ತದೆಯೋ ಏನೋ ಎಂದು ಕಾಣುತ್ತಾ ಇದೆ. ನಡೆವಳಿಕೆಗಳನ್ನು ನೋಡಿದರೆ ಆ ರೀತಿ ಇದೆ, ಅದನ್ನು neglect ಮಾಡಿದರೆ ಬಹಳ ಕಷ್ಟಕ್ಕೆ ಬರುತ್ತದೆ. 1177ರಲ್ಲಿ ಮಹಮದ್ ಖಿಲ್ಜಿ ಎಂಬುವನು 200 ಸವಾರರೊಡನೆ ಬಿಹಾರ್ ಪ್ರಾಂತ ಗೆದ್ದನು ಮತ್ತು 18 ಜನ ಕುದುರೆ ಸವಾರರೊಡನೆ ಬಂಗಾಳದ ರಾಜಧಾನಿ ನಡಿಯಾವನ್ನು 1179ರಲ್ಲಿ ಗೆದ್ದನು ಎಂಬುದನ್ನು ನಾವು ಚರಿತ್ರೆಯಿಂದ ನೋಡಿ ಪಾಠ ಕಲಿತುಕೊಳ್ಳಬೇಕಾಗಿದೆ. ಅದಕ್ಕೆಲ್ಲಾ ಕಾರಣ ಬೇಹುಷಾರು ಮತ್ತು ಒಳಜಗಳಗಳನ್ನಿಟ್ಟುಕೊಂಡು ಮುಂದಾಲೋಚನೆ ಮಾಡದೆ ಇದ್ದುದು. ತಂಜಾವೂರಿನಲ್ಲಿ ಒಬ್ಬ ರಾಜ ಇದ್ದ; ಅವನ ಹೆಸರು ವಿಜಯರಾಘವ ನಾಯಕ ಎಂದು. ಅವನು ಯುದ್ಧಮಾಡಬೇಕಾದರೆ ತುಳಸಿದಳ ಪೂಜೆಮಾಡಿ ಮುಸಲ್ಮಾನರ ಮೇಲೆ ಹಾಕಿದರೆ ಭಸ್ಮವಾಗುತ್ತಾರೆ ಎಂದು ಯಾರೋ ಹೇಳಿದರಂತೆ. ಅದೇ ರೀತಿ ಅವನು ಮಾಡಿದನಂತೆ. ಭಸ್ಮವಾಗಲಿಲ್ಲ, ಬೂದಿಯೂ ಆಗಲಿಲ್ಲ. ಅಂಥ ಬುದ್ಧಿವಂತ ಅವನು. ಆ ರೀತಿ ಎಲ್ಲಾ ಮಾಡುವುದು ಬೇಡ. ಅದು ಸರಿಯಲ್ಲ. ಪಾಕಿಸ್ತಾನದ ಪರಿಸ್ಥಿತಿ ತೀವ್ರವಾದರೆ ಹತ್ತು ವರ್ಷ S.R. Bill postpone ಮಾಡಿ. ಒಟ್ಟಿನಲ್ಲಿ ನಾನು ಸೂಚನೆ ಮಾಡಿರತಕ್ಕ ತಿದ್ದುಪಡಿಯಂತೆ ಆ ಪ್ರದೇಶಗಳೆಲ್ಲವನ್ನೂ ಆಂಧ್ರಕ್ಕೆ ಸೇರಿಸಬೇಕೆಂದು ನನ್ನ ಕೋರಿಕೆ.

Mr. SPEAKER.—Amendment moved :

"In sub-clause (1)—

(1) after item (*d*), the following items (*e*) to (*i*) shall be added, namely :—

'(*e*) Kolar District ;

(*f*) parts of Devanahalli, Dodballapur, Hoskote taluk and the whole taluks of Anekal and Bangalore South of Bangalore District ;

(*g*) whole of Pavagada taluk and eastern parts of Koratagere and Madhugiri taluks of Tumkur District ;

(*h*) eastern parts of Molakalmuru, Challakere, Jagalur and Chitaldrug taluks of Chitaldrug district ; and

(*i*) Bellary town and Moka and Rupangudi firkas of Bellary taluks of Bellary District ; '

(2) in line 10, after the words 'existing State of Hyderabad' the words and comma 'and Mysore, respectively' shall be inserted."

*Sri Mulka GOVINDA REDDY.—Mr. Speaker, I support the amendment tabled by Sri Narayana Reddy. I would like to read clause 3.

"(1) As from the appointed day, there shall be added to the State of Andhra the territories comprised in :—

(*a*) the district of Hyderabad Medak, Nizamabad, Adilabad, Karimnagar, Warangal, Khammam, Nalgonda and Mahabubnagar ;

(*b*) Alampur and Gadwal taluks of Raichur district ;

(*c*) Kodangal and Tandur taluks of Gulbarga district ; and

(*d*) Narayankhed and Zahirabad taluks of Bidar district ;

and thereupon the said territories shall cease to form part of the existing State of Hyderabad and the State of Andhra shall be known as the State of Andhra-Telengana."

Sir, the amendment as tabled by Sri Narayana Reddy desires that the following areas, namely, Kolar District, parts of Devanahalli, Dodballapur, Hoskote taluks and the whole taluks of Anekal and Bangalore South of Bangalore District ; whole of Pavagada taluk and eastern parts of Koratagere and Madhugiri taluks of Tumkur District, the eastern parts of Molakalmuru, Challakere, Jagalur and Chitaldrug taluks of Chitaldrug District and Bellary town and Moka and Rupangudi firkas of Bellary taluk of Bellary District should be added on to the Andhra-Telengana State. We have made very extensive survey of this problem when we discussed the Andhra State Bill and the States Reorganisation Commission Report. We have adduced reasons which cannot be easily set aside or brushed aside as to why these areas should be joined to the Andhra-Telengana State. If we pass this Bill we will have accepted that on the basis of language the State is going to be created. On the basis of Kannada language Greater Mysore or Vishala Mysore is going to be created. When this is the criterion, it should be natural and reasonable for any one to say that areas, where other than Kannada is spoken by the majority of the people, should naturally be joined to a State where the language of the majority is spoken, if these areas are contiguous to that State. The areas that come under the amendment are all coutiguous to the Andhra State. In these areas more than 51 per cent of the population speak the language of Telugu. When our friends asked that Kasargod and other areas should come to Mysore State, they demanded the inclusion of these areas in Mysore State beacuse the majority of the people of these areas speak the Kannada Language. Similarly, and justifiably, we the Telugu-speaking people and members of this Assembly demand that these areas adumbrated under this amendment should go to Andhra. Whatever that be, language fanaticism will have an upper hand. Whatever pious hopes that may be held out by the rulers that all facilities for the improvement of the language,

(SRI MULKA GOVINDA REDDY.)

for the cultural growth of the people speaking that language will be afforded to, it will mostly remain on a piece of paper. The real benefit will not be enjoyed by the linguistic minority. After having seen what has happened in the Mysore State, after having known that there are only five Telugu Primary Schools for a population of 20 lakhs of Telugu-speaking people in the State which is said to be a composite State, what will be the future of the Telugu-speaking people of the greater Mysore when they will have been reduced in numbers by way of percentage, when an aggressive people from the other areas will have come into the Mysore State, I shudder to think. Sir, when all is said and done, when all people are asking for the formation of a State on the basis of language, there is no justification or right, there is no moral principle behind it in refusing that these people speaking the Telugu language should not go to Andhra. Historically speaking some of these areas were under the administration of Andhra Rajas. When there was Golconda Empire all these areas were under that administration. Not that I am anxious to build an Andhra Empire. The days of Empires have gone. We are trying to build a democratic State and therefore we should claim that all these areas should go to Andhra as they are contiguous and as the majority of the people speaking that language desire that these areas should go to Andhra. I therefore support the amendment that has been tabled by Sri B. V. Narayana Reddy wholeheartedly.

Regarding the Bellary area, I would like to make mention of certain facts. When the Andhra State Bill was discussed in this Assembly, we had discussed that great injustice was done to the people in Bellary particularly to Moka, Rupangudi firkas of Bellary Taluk of Bellary District. As these areas are contiguous to Andhra, majority of people speak that language and they want that it should go with Andhra. Justice Misra awarded that these areas should remain in Mysore State. The States Reorganisation Commission appointed by the Government had gone into this question thoroughly and they had explored all the ways of settling this matter amicably and after investigating into the causes and into the claims made by different groups and parties, they gave the well-considered decision that three taluks and Mallapuram sub-taluk should go to Andhra. They gave that verdict for reasons of administration and for the smooth running of the Thungabhadra Project, and what we ask for in this amendment is only the three firkas of the Bellary Taluk with Bellary Town where majority of people speak Telugu and the areas are contiguous to Andhra State should go to Andhra.

With these words, Sir, I commend these amendments to the acceptance of this Hon'ble House.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀ ಬಿ. ವಿ. ನಾರಾಯಣರೆಡ್ಡಿಯವರು ತಂದಿರತಕ್ಕ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ. ಮೂರನೆಯ ಕ್ಲಾಜಿನಲ್ಲಿ ತಿದ್ದುಪಡಿಯನ್ನು ಸೂಚಿಸಿ ಊರುಗಳ ಮತ್ತು ಜಿಲ್ಲೆಗಳ ಹೆಸರುಗಳನ್ನು ಕೊಟ್ಟು ಅವುಗಳನ್ನು ಆಂಧ್ರಕ್ಕೆ ಸೇರಿಸಬೇಕೆಂದು ಕೇಳಿದುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಕೋಲಾರ ಜಿಲ್ಲೆಯಲ್ಲಿ ಮತ್ತು ಇವರು ಹೇಳಿರತಕ್ಕ ಕೆಲವು ಕಡೆಗಳಲ್ಲಿ ತೆಲುಗು ಮಾತನಾಡತಕ್ಕವರು ಅಂದರೆ ಆಂಧ್ರ ಭಾಷೆಯನ್ನಾಡತಕ್ಕವರು ಕೆಲವರಿದ್ದಾರೆ. ಕೆಲವು ಗ್ರಾಮಗಳಲ್ಲಿ ಪೂರ್ತಿಯಾಗಿ ಅವರೇ ಇದ್ದಾರೆ. ಈ ಪ್ರದೇಶಗಳಲ್ಲಿ ಕನ್ನಡ ಮಾತನಾಡತಕ್ಕವರೂ, ತೆಲುಗು ಮಾತನಾಡತಕ್ಕವರೂ, ಇದ್ದಾರೆ. ಅಲ್ಲದೆ ಮಹಾರಾಷ್ಟ್ರ ಮತ್ತು ತಮಿಳು ಭಾಷೆಗಳನ್ನು ಮಾತನಾಡತಕ್ಕ ಜನರೂ ಇದ್ದಾರೆ. ಆದರೆ ಇವರು ಕೇಳುತ್ತಿರತಕ್ಕದ್ದರಲ್ಲಿ ಮೈಸೂರು ದೇಶವನ್ನು ಭಾಷೆಯ ಆಧಾರದ ಮೇಲೆ ಒಂದು ಪ್ರಾಂತವನ್ನಾಗಿ ರಚಿಸಿಕೊಳ್ಳುತ್ತಿದ್ದಾರೆ, ಅದಕ್ಕೋಸ್ಕರವಾಗಿ ಆಂಧ್ರರಿಗೆ ಇಲ್ಲಿ ಅವಕಾಶವಿಲ್ಲವೆಂಬ ಭಯದಿಂದ ಅವರು ಇದನ್ನು ಮಂಡಿಸಿರುವ ಹಾಗೆ ಕಾಣುತ್ತದೆ ಅವರು ಹಾಗೆ ಭಯಪಡಬೇಕಾಗಿಲ್ಲ. ನಮ್ಮ ಮುಖ್ಯಮಂತ್ರಿಗಳು ಹಿಂದೆ ಹೇಳಿರುವ ಹಾಗೆ ಮೈಸೂರು ದೇಶ ಭಾಷೆಯ ಆಧಾರದ ಮೇಲೆ ಸೃಷ್ಟಿಯಾಗುತ್ತಿಲ್ಲ. ಇದು ಎಲ್ಲ ಭಾಷೆಗಳಿಗೂ ಸಂಬಂಧಪಟ್ಟ ಒಂದು ಪ್ರಾಂತವಾಗುತ್ತದೆ, ಆದ್ದರಿಂದ ಯಾರೂ ಭಯಪಡಬೇಕಾಗಿಲ್ಲವೆಂದು ಹಿಂದೆ ಎಸ್. ಆರ್. ಸಿ. ವರದಿ ಬಂದಾಗಲೇ ಹೇಳಿರುವುದನ್ನು ನಾನು ಜ್ಞಾಪಕಮಾಡುತ್ತೇನೆ.

ಕೋಲಾರ ಜಿಲ್ಲೆಯಲ್ಲಿರತಕ್ಕ ಜನಗಳ ಪ್ರತಿನಿಧಿಗಳು ಈ ಸಭೆಯಲ್ಲೂ ಮತ್ತು ಮೇಲ್ಮನೆಯಲ್ಲೂ ಇದ್ದಾರೆ. ಇವರುಗಳ ಪೈಕಿ ಯಾರನ್ನು ಕೇಳಿದರೂ, ನಮ್ಮ ಶ್ರೀ ನಾರಾಯಣರೆಡ್ಡಿಯವರು ಮತ್ತು ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಇವರನ್ನು ಬಿಟ್ಟು, ಅವರು ಆಂಧ್ರಕ್ಕೆ ಸೇರಲು ಸಿದ್ಧರಾಗಿಲ್ಲ, ಮೈಸೂರನ್ನು ಬಿಟ್ಟು ಹೋಗುವುದಿಲ್ಲವೆಂದು ಖಚಿತವಾಗಿ ಹೇಳಿದ್ದಾರೆ.

ಅಲ್ಲಿಯ ಜನಗಳೂ ಸಹ ಅದೇ ಅಭಿಪ್ರಾಯವನ್ನು ಹೊಂದಿದ್ದಾರೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅಲ್ಲಿಯ ಜನರಿಗೆ ಆ ಅಭಿಪ್ರಾಯವಿಲ್ಲ. ಈ ವಿಷಯದ ಮೇಲೆ ಕೋಲಾರ ಜಿಲ್ಲೆಯಲ್ಲಿ ಚುನಾವಣೆಗೆ ಬೇಕಾದರೂ ನಿಲ್ಲಲಿ. ಆಗ ಗೊತ್ತಾಗುತ್ತದೆ. ನಾನು ಒಂದು challenge ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹೀಗೆ ಅಲ್ಲಿಯ ಜನರು ಮೈಸೂರು ದೇಶವನ್ನು ನಾವು ಖಂಡಿತವಾಗಿಯೂ ಬಿಟ್ಟು ಹೋಗುವುದಿಲ್ಲವೆಂದು ಎಲ್ಲೆಲ್ಲೂ ಹೇಳುತ್ತಿದ್ದಾರೆ. ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ಆನೆಕಲ್, ಬೆಂಗಳೂರು ದಕ್ಷಿಣ ತಾಲ್ಲೂಕು ಇವೆಲ್ಲವನ್ನೂ ಸೇರಿಸುವುದನ್ನು ನೋಡಿದರೆ ತಮಾಷೆಗೆ ಸೇರಿಸಿದ್ದಾರೆಯೋ ಏನೋ ಎನ್ನಿಸುತ್ತದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅವರಿಗೆ ಅಂಕಿ ಅಂಶಗಳು ಗೊತ್ತಿಲ್ಲವೆಂದು ಕಾಣುತ್ತದೆ. ಆನೆಕಲ್ ತಾಲ್ಲೂಕಿನ ಪ್ರಜಾಸಂಖ್ಯೆ, ಸೆನ್ಸಸ್ ರಿಪೋರ್ಟ್ ಪ್ರಕಾರ ಹೀಗಿದೆ. 22,630 ಕನ್ನಡಿಗರು ಮತ್ತು 32,080 ಜನ ಆಂಧ್ರರು ಇದ್ದಾರೆ. ಇವರಿಗೆ ಬಳ್ಳಾರಿ ವಿಷಯ ಮಾತ್ರ ಗೊತ್ತಿದೆ; ಬಾಕಿ ವಿಷಯ ಗೊತ್ತಿಲ್ಲವೆ?

ಶ್ರೀ ಆರ್. ಮುನಿಸ್ವಾಮಯ್ಯ.—ಶ್ರೀ ನಾರಾಯಣ ರೆಡ್ಡಿಯವರು ಹೇಳಿದ ಅಂಕಿ ಅಂಶಗಳು ನನಗೂ ಸಹ ಗೊತ್ತಿದೆ. ಆದರೆ ಆಂಧ್ರ ಭಾಷೆಯನ್ನು ಮಾತನಾಡತಕ್ಕವರು ನಾವು ಆಂಧ್ರಕ್ಕೆ ಹೋಗುವುದಿಲ್ಲವೆಂದು ಹೇಳುವಾಗ ಸುಮ್ಮನೆ ಅಂಕಿ ಅಂಶಗಳನ್ನಿಟ್ಟುಕೊಂಡು ಮಾತನಾಡುವುದರಲ್ಲಿ ಏನ ಅರ್ಥವಿದೆ? ನಾನು ದೊಡ್ಡಬಳ್ಳಾಪುರದಲ್ಲಿ ವಿಚಾರಿಸಿದ್ದೇನೆ. ಇವರ ತಿದ್ದುಪಡಿ ಬಂದನಂತರ ನಾನು ನನ್ನ ಕ್ಷೇತ್ರದಲ್ಲಿ ಒಂದು ಸುತ್ತು ಹೋಗಿ ಬಂದಿದ್ದೇನೆ. ತೆಲುಗು ಭಾಷೆ ನನಗೂ ಸಹ ಚೆನ್ನಾಗಿ ಬರುತ್ತದೆ. ನಾನು ಮಾತ್ರ ಖಂಡಿತ ಆಂಧ್ರಕ್ಕೆ ಹೋಗುವುದಿಲ್ಲ. ಆಂಧ್ರ ಪ್ರದೇಶದಿಂದ ಯಾರಾದರೂ ಬಂದ ಪಕ್ಷದಲ್ಲಿ ಖಂಡಿತವಾಗಿ ಸೇರಿಸಿಕೊಳ್ಳುತ್ತೇವೆ. ಅದಕ್ಕೋಸ್ಕರವೇ ನಾನೂ ಸಹ ಮೈಸೂರು ದೇಶವನ್ನೂ ಆಂಧ್ರ ದೇಶವನ್ನೂ ಸೇರಿಸಿ ಒಂದು ಪ್ರದೇಶ ಮಾಡೋಣ, ದ್ವಿಭಾಷಾ ಪ್ರಾಂತ ಮಾಡೋಣ, ಎರಡು ಭಾಷೆಗಳ ಲಿಪಿಗಳೂ ಬಹಳಮಟ್ಟಿಗೆ ಹೊಂದುತ್ತವೆ, ಇದನ್ನು ಯೋಚನೆಮಾಡೋಣವೆಂದು ಹೇಳಿದೆ. ಮಧುಗಿರಿ, ಕೊರಟಗೆರೆ ಮತ್ತು ಪಾವಗಡ ತಾಲ್ಲೂಕುಗಳಲ್ಲಿರುವ ಜನರು ಸಹ ಆಂಧ್ರಕೆ ಹೋಗುವುದಕ್ಕೆ ಸಿದ್ಧರಾಗಿಲ್ಲ. ಮೊಳಕಾಲ್ಮುರು, ಚಳ್ಳಕೆರೆ, ಜಗಳೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳ ಕೆಲವು ಭಾಗಗಳನ್ನು ಆಂಧ್ರಕ್ಕೆ ಸೇರಿಸಬೇಕೆಂದು ಹೇಳಿದ್ದಾರೆ. ಆದರೆ ಅಲ್ಲಿರುವ ಜನರಿಗೂ ಸಹ ಆಂಧ್ರಕ್ಕೆ ಸೇರುವ ಇಷ್ಟವಿಲ್ಲ. ಇದರಿಂದ ಅಲ್ಲಿಯ ಜನ ಸಾಮಾನ್ಯರಿಗೂ ಸಹ ವಿಷಾದವಾಗುತ್ತದೆ. ಬಳ್ಳಾರಿ ಟೌನ್, ಮೋಕ ಮತ್ತು ರೂಪನಗುಡಿ ಫಿರ್ಕಾ ಮೊದಲಾದುವನ್ನು ಆಂಧ್ರಕ್ಕೆ ಸೇರಿಸಬೇಕೆಂದು ಹೇಳಿದ್ದಾರೆ. ಯಾವ ಆಧಾರದ ಮೇಲೆ ಈ ತಿದ್ದುಪಡಿಯನ್ನು ತಯಾರು ಮಾಡಿದ್ದಾರೆಯೋ ಗೊತ್ತಿಲ್ಲ. ಇದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಆಂಧ್ರಕ್ಕೆ ಹೋಗುವುದಿಲ್ಲವೆಂದು ಹೇಳತಕ್ಕ ಜನರನ್ನು ಕಳುಹಿಸುವುದು ಸರಿಯಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಬಳ್ಳಾರಿ ಕ್ಷೇತ್ರದಿಂದ ಪ್ರತಿನಿಧಿಯಾಗಿ ಬಂದಿದ್ದ ಅಸೆಂಬ್ಲಿ ಸದಸ್ಯರು ಈ ಪ್ರಶ್ನೆಯ ಮೇಲೆಯೇ ರಾಜೀನಾಮೆ ಕೊಟ್ಟಿರುವುದು ತಮಗೇ ಗೊತ್ತಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ರಾಜೀನಾಮೆ ಕೊಟ್ಟಿರುವ ಸದಸ್ಯರು ಮಾತ್ರ ಹೋಗಬಹುದೇ ಹೊರತು ಅಲ್ಲಿಯ ಜನಗಳಿಗೆ ಹೋಗುವುದಕ್ಕೆ ಇಷ್ಟವಿಲ್ಲ. ಅವರ ರಾಜೀನಾಮೆಯಿಂದ ಬಹಳ ಸಂತೋಷವಾಗಿದೆಯೆಂದು ಕೇಳಿದ್ದೇನೆ.

ಹೊಸೂರು ಮತ್ತು ಕಾಸರಗೋಡು ಭಾಗಗಳನ್ನೂ ಸೇರಿಸಿಕೊಳ್ಳಬೇಕೆಂದು ಹೇಳುತ್ತಿದ್ದಾರೆ, ಇವುಗಳನ್ನು ಯಾಕೆ ಸೇರಿಸಿಕೊಳ್ಳಬೇಕು ಎಂದು ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಕೇಳಿದರು. ಕಾಸರಗೋಡಿನ ಜನರು ಅರ್ಜಿಗಳನ್ನು ಬರೆದುಕೊಂಡು, ನಿರ್ಣಯಗಳನ್ನು ಮಾಡಿ, ನಾವೆಲ್ಲರೂ ಮೈಸೂರಿನಲ್ಲಿ ಸೇರುತ್ತೇವೆಂದು ಹೇಳಿರುತ್ತಾರೆ. ಶ್ರೀ ಮುಲ್ಕ ಗೋವಿಂದ ರೆಡ್ಡಿಯವರಾದಿಯಾಗಿ ಎಲ್ಲ ಸದಸ್ಯರಿಗೂ ತಮ್ಮ ಕೋರಿಕೆಯನ್ನು ತಿಳಿಸಿದ್ದಾರೆ. ಆದುದರಿಂದ ಅದಕ್ಕೂ ಇದಕ್ಕೂ ಇರುವ ವ್ಯತ್ಯಾಸವನ್ನು ಅವರೇ ತಿಳಿದುಕೊಳ್ಳಬೇಕು.

ಇಷ್ಟು ಮಾತ್ರ ಹೇಳಿ ಈ ತಿದ್ದುಪಡಿಯನ್ನು ನಾನು ಪೂರ್ಣವಾಗಿ ವಿರೋಧಿಸುತ್ತೇನೆ.

Sri H. C. LINGA REDDY (Malur).—While opposing these amendments moved by my learned friend Sri B. V. Narayana Reddy, I would just say a word or two. Acceptance of these amendments would mean that we will be endorsing the creation of provinces or States purely on linguistic considerations. I already argued just a few minutes back that the States in India should not be formed merely on the basis of one single language and our Chief Minister has been time and again repeating that the composite character of our State should not be lost sight of and it is the administrative convenience that we have to keep in our mind uppermost rather than the creation of provinces on language. Certain areas mentioned in the amendment are no doubt very predominantly Andhra or Telugu areas. The constituency I represent is predominantly Kannada and the taluk in which I live is predominantly Kannada in Kolar District. There are taluks in the Kolar District which are predominantly Telugu also. There are areas such as from which my friend Sri Narayana Reddy hails, which are predominantly Telugu no doubt. I found my friend Sri Mulka yesterday arguing that no State should be created purely based on language.

Sri Mulka GOVINDA REDDY.—Sir, I agree with Sri Linga Reddy if no State is created on the basis of language. We do not want them. But if a

(SRI MULKA GOVINDA REDDY.)

State is created on the basis of the language of Karnataka, what right have you to prevent us from going over to Andhra ?

4-30 P.M.

SRI H. C. LINGA REDDY.—I know that Sri Narayana Reddy also will be satisfied if provinces are not carved out merely on the basis of language. Now, because it appears as though the provinces are being carved out on the basis of language, I think he is pleading that the predominantly Telugu areas may be left out and be added on to the Telugu State. That request is of course reasonable. But at the same time, as many Hon'ble Members have been saying, it is not advisable at this juncture in India that provinces should be created and based purely on language. Whatever might have been the justification for the amendments of this nature at the time of the discussion of the Report of the S.R.C. and earlier, we have now reached a stage when our leaders are thinking of no States based on language only, but from the point of view of administrative convenience and also with an idea to reduce the number of States in India. For these reasons, I request my friend to withdraw his amendment. From the point of view of economic and social planning, from the point of view of unity and security of the nation, it is very necessary that we should erase this linguistic craze from our mind and purely think of administrative convenience and the unity of the nation. Some of my friends were saying that if Dakshina Pradesh consisting of four States were to be formed or if two States in South India, consisting of Greater Mysore and Andhra, Tamil Nad and Kerala are formed, many of the ills from which the country is suffering would be cured. A few members of this House were arguing to retain Mysore as it is. It is rather narrowmindedness to say so. Some argued that we will have Karnataka and not Dakshina Pradesh either consisting of Andhra or Karnataka or Tamil Nad or Kerala. This would again amount to a certain amount of narrow outlook. When we are thinking of carving out only a few States, when language should not predominate at all and linguism has to be buried deep, it is necessary that we should not think of carving out linguistic provinces and take away Telugu areas and add them on to Telugu States. It would mean perpetuating the same old disease which has overtaken the country just a few months back. From this point of view, I oppose this amendment. At the same time, I wish to bring it to the notice of the Hon'ble friend who has sponsored this amendment the provision that has been made for safeguarding the linguistic minorities. If Andhra and Mysore were to form into one State, there would be absolutely no difficulty and I feel that Sri Narayana Reddy and Sri Mulka Govinda Reddy would agree to have Telugu areas in Mysore State itself. If that is not possible, then there is provision already made both in this Bill and also in one of the amendments suggested by the Government of India to article 350 (*a*). It reads as follows :

> "It shall be the endeavour of every State and of every local authority within the State to provide adequate facilities for instruction in the mother tongue at the primary stage of education to children belonging to linguistic minority groups; and the President may issue such directions to any State as he considers necessary or proper for securing the provision of such facilities."

Therefore, provision has been made to safeguard the interests of the linguistic minorities. With these remarks I oppose the amendment.

MR. SPEAKER.—There is no necessity for further discussion. The question is:

'In sub-clause (1)—

(1) after item (*d*), the following items (*e*) to (*i*) shall be added, namely :—

> "(*e*) Kolar district ;
>
> (*f*) parts of Devanahalli, Doddaballapur, Hoskote taluks and the whole taluks of Anekal

and Bangalore South of Bangalore District ;

(*g*) whole of Pavagada taluk and eastern parts Koratagere and Madhugiri taluks of Tumkur district ;

(*h*) eastern parts of Molakalmuru, Challakere, Jagalur and Chitaldrug taluks of Chitaldrug District : and

(*i*) Bellary town and Moka and Rupangudi firkas of Bellary taluk of Bellary District ; ''

(2) in line 10, after the words "existing State of Hyderabad" the words and comma "and Mysore, respectively" shall be inserted." '

The motion was negatived.

Mr. SPEAKER.—Clause 7. The other amendment to clause 7 is a consequential one to that which has been rejected by the House now. Therefore, it cannot be moved.

Next amendment is in the name of Sri U. M. Madappa.

Sri U. M. MADAPPA (Chamarajanagar).—Sir, I beg to move the following amendment.—

'In sub-clause 1 (*d*)—

(1) the words "Kasargod taluk and" shall be omitted.

(2) after the words "Kollegal taluk" the words "and Talavadi firka in Gopichetti Palyam taluk" shall be inserted.

In sub-clause 2—

for the word "Mandya" the word "Mysore" shall be substituted.'

ಸ್ವಾಮಿ, ಗೋಪಿಚೆಟ್ಟಿ ಪಾಳ್ಯಂ ತಾಲ್ಲೂಕಿನ ತಾಳವಾಡಿ ಫಿರ್ಕ ಕೊಳ್ಳೇಗಾಲ ತಾಲ್ಲೂಕಿಗೆ ಹೆಚ್ಚಿಗೆ ಸಂಬಂಧವನ್ನು ಪಡೆದಿರುವುದರಿಂದ ಕೊಯಮತ್ತೂರು ಜಿಲ್ಲೆಯಲ್ಲಿ ಉಳಿಯುವಂತೆ ಮಾಡಿರುವುದು ಅನ್ಯಾಯವಾಗಿದೆ ಎಂದು ಸಭೆಯ ಗಮನಕ್ಕೆ ತರುತ್ತೇನೆ. ಅದು ಸುಮಾರು 1910 ರಿಂದ 1914 ರವರೆಗೂ ಕೊಳ್ಳೇಗಾಲ ತಾಲ್ಲೂಕಿನಲ್ಲಿ ರೆವೆನ್ಯೂ ಸಂಬಂಧವಾಗಿತ್ತು. ಈಗಲೂ ಸಹ ಸಿವಿಲ್, ಕ್ರಿಮಿನಲ್ ಮತ್ತು ಪೋಲೀಸ್ ವಿಚಾರಗಳಲ್ಲಿ ಕೊಳ್ಳೇಗಾಲ ತಾಲ್ಲೂಕು ಆಡಳಿತಕ್ಕೆ ಒಳಪಟ್ಟಿದೆ. ಅಷ್ಟೇ ಅಲ್ಲದೆ ಈಗತಾನೇ ಹೊಸದಾಗಿ ಡೀಲಿಮಿಟೇಷನ್ ಕಮಿಟಿಯವರು ಕೊಳ್ಳೇಗಾಲ ತಾಲ್ಲೂಕು ಮತ್ತು ಈ ಫಿರ್ಕಾ ಎರಡೂ ಸೇರಿ ಒಂದು ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿ ಆಗಬೇಕೆಂದು ತೀರ್ಮಾನ ಸಹ ಮಾಡಿದ್ದಾರೆ. ಇದನ್ನು ನೋಡಿದರೆ ಕೊಳ್ಳೇಗಾಲ ತಾಲ್ಲೂಕಿಗೂ ತಾಳವಾಡಿ ಫಿರ್ಕಾಕ್ಕೂ ಇರುವ ಸಂಬಂಧ ಎಷ್ಟು ಹತ್ತಿರವಾಗಿದೆ ಎಂಬುದನ್ನು ಮತ್ತೆ ಹೊಸದಾಗಿ ಒತ್ತಿ ಹೇಳಬೇಕಾಗಿಲ್ಲ. ಇದಕ್ಕಿಂತ ಹೆಚ್ಚಾದ ಸಂಬಂಧವೆಂದರೆ ಐತಿಹಾಸಿಕವಾಗಿಯೂ ಸಹ ಈ ಫಿರ್ಕಾಕ್ಕೂ ಮೈಸೂರು ಸಂಸ್ಥಾನಕ್ಕೂ ಬಹಳ ಹತ್ತಿರ ಸಂಬಂಧವಿದೆ. ಈಗಲೂ ಸಹ ಮಾನ್ಯ ಸದಸ್ಯರು ಈ ಪ್ರದೇಶಕ್ಕೆ ಬಂದು ಟಿಪ್ಪೂಸುಲ್ತಾನ್ ರೋಡ್ ಎಂಬುದು ಚಾಮರಾಜನಗರ ತಾಲ್ಲೂಕಿನಿಂದ ಈ ಫಿರ್ಕಾದ ಮಧ್ಯಭಾಗದಲ್ಲಿ ಹಾದು ಹೋಗುತ್ತದೆ ಎಂಬುದನ್ನು ನೋಡಬಹುದು. ಆದ್ದರಿಂದ ಇದಕ್ಕೆ ಚಾರಿತ್ರಿಕವಾದ ಹಿನ್ನೆಲೆ ಇದೆ ಎಂದು ಹೇಳಬಹುದು. ಕೇಂದ್ರ ಸರ್ಕಾರ ತೆಗೆದುಕೊಂಡಿರುವ ತೀರ್ಮಾನ ನೋಡಿದ್ದೇ ಆದರೆ ಭಾಷಾವಾರು ಪ್ರಾಂತದ ಆಧಾರದ ಮೇಲೆ ಆಗಿದೆಯೆಂಬುದು ಕಂಡು ಬರುತ್ತದೆ. ಅಲ್ಲಿ ಸುಮಾರು 21 ಗ್ರಾಮಗಳಿವೆ. ಆ 21 ಗ್ರಾಮಗಳಲ್ಲಿ ಸುಮಾರು 22,505 ಪ್ರಜಾಸಂಖ್ಯೆಯಿದೆ. ಶೇಕಡ 85 ರಿಂದ ನೂರರ ವರೆಗೆ ಕನ್ನಡ ಮಾತನಾಡುವ ಜನರು ಅಲ್ಲಿದ್ದಾರೆ. ಚಾಮರಾಜನಗರ ಅದಕ್ಕೆ ಹತ್ತಿರದಲ್ಲಿದೆ, ಅಲ್ಲಿಂದ ಸುಮಾರು 12 ಮೈಲಿ ದೂರದಲ್ಲಿದೆ. ಮಾರ್ಗ ಸೌಕರ್ಯ, ಆಡಳಿತ ಸೌಕರ್ಯ ನೋಡಿದರೆ 12 ಮೈಲಿ ದೂರದಲ್ಲಿ ಚಾಮರಾಜನಗರದ ರೈಲ್ವೆ ಸ್ಟೇಷನ್ ಇದೆ. ಮತ್ತು ಚಾಮರಾಜನಗರಕ್ಕೆ ಸಂಬಂಧಪಟ್ಟಿರುವ ಪೋಸ್ಟಾಫೀಸಿನ ಡಿವಿಜನ್‌ನಿಂದ ಅವರಿಗೆ ಪತ್ರವ್ಯವಹಾರ ನಡೆಯಬೇಕಾಗಿದೆ. ಇಷ್ಟೆಲ್ಲಾ ಸಂಬಂಧವಿದ್ದರೂ ಯಾವುದೋ ಒಂದು ಪ್ರಿನ್ಸಿಪಲ್ ಅಡಾಪ್ಟ್ ಮಾಡಿದ್ದರಿಂದ ಕೈತಪ್ಪಿ ಹೋಗಿರಬಹುದು. ಈಗಲೂ ಸಹ ಇದಕ್ಕೆ ಅವಕಾಶವಿರುವುದರಿಂದ ಪಾರ್ಲಿಮೆಂಟಿನಲ್ಲಿ ಮುಂಡಿಸುವಾಗ ಇದನ್ನು ಸೇರಿಸಿ ಬದಲಾಯಿಸಬೇಕೆಂದು ಸಭೆಯ ಗಮನಕ್ಕೆ ತರಲು ಇಚ್ಛೆಪಡುತ್ತೇನೆ.

ಕಾಸರಗೋಡು ತಾಲ್ಲೂಕಿನ ವಿಷಯದಲ್ಲೂ ಸಹ ಅಜಿಟೇಷನ್ ಇದೆ, ಜನರ ದಸ್ತಗಿರಿಯಾಗುತ್ತಿದೆಯೆಂಬುದನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಈಗ ಮೈಸೂರಿಗೇ ಸೇರಬೇಕೆಂದು ಅಜಿಟೇಟ್ ಮಾಡುತ್ತಿದ್ದಾರೆ. ಈ ಅಜಿಟೇಷನ್ ಗಮನಿಸಿ ಕಾಸರಗೋಡನ್ನು ಮೈಸೂರು ಸಂಸ್ಥಾನಕ್ಕೇ ಸೇರಿಸಿಕೊಳ್ಳಬೇಕೆಂದು ಸಭೆಯ ಗಮನಕ್ಕೆ ತರಲು ಬಯಸುತ್ತೇನೆ.

ಅಷ್ಟೇ ಅಲ್ಲದೆ ಮಂಡ್ಯ ಮತ್ತು ಮೈಸೂರು ಎಂಬ ಪದಗಳ ವಿಷಯದಲ್ಲಿ ನಾನು ತಂದಿರತಕ್ಕ ತಿದ್ದುಪಡಿಯ ಉದ್ದೇಶ ಕೊಳ್ಳೇಗಾಲ ತಾಲ್ಲೂಕು ಈ ಪ್ರಾಂತಗಳ ಪುನರ್ವಿಂಗಡಣಾ ಮಸೂದೆ ಪ್ರಕಾರ ಮಂಡ್ಯ ಡಿಸ್ಟ್ರಿಕ್ಟಿಗೆ ಸೇರಲಿದೆ. ತಾಲ್ಲೂಕುಗಳನ್ನು ಮತ್ತೊಂದು ಕಡೆಗೆ ಬದಲಾಯಿಸುವುದಕ್ಕೆ ಮತ್ತು ಜಿಲ್ಲಾ ಬದಲಾಯಿಸುವುದಕ್ಕೆ ಸಂಸ್ಥಾನಗಳಿಗೆ ಅವಕಾಶವಿದೆಯೆಂದು ಈ ಬಿಲ್ಲಿನಲ್ಲಿ ಹೇಳಿದೆ. ವ್ಯಾಪಾರ ಮುಂತಾದವುಗಳ ಸಂಬಂಧ ನೋಡಿದರೆ ಕೊಳ್ಳೇಗಾಲ ತಾಲ್ಲೂಕಿಗೂ ಮೈಸೂರು ಜಿಲ್ಲೆಗೂ ಮಂಡ್ಯ ಜಿಲ್ಲೆಗಿಂತ ಹೆಚ್ಚಾದ ಸಂಬಂಧವಿದೆ ಎಂದು ಹೇಳಬಲ್ಲೆ. ಹೊಸ ಪ್ರಾಂತ ನಿರ್ಮಾಣವಾದ ಮೇಲೂ ಬದಲಾವಣೆಯಾಗುವ ಸಂಭವವಿದೆ. ಕೆಲವು ವರ್ಷಗಳ ಹಿಂದೆ ಮಂಡ್ಯ ಜಿಲ್ಲೆ ಮತ್ತು ಮೈಸೂರು ಜಿಲ್ಲೆ ಒಂದೇ ಜಿಲ್ಲೆಯಲ್ಲಿದ್ದುವು. ಇತ್ತೀಚೆಗೆ ಅವು ಪ್ರತ್ಯೇಕವಾದವು; ಮುಂದೆ ಇವು ಒಂದಾಗುವ ಸಂಭವವಿದೆ. ಈ ದೃಷ್ಟಿಯಿಂದ ಕೊಳ್ಳೇಗಾಲ ತಾಲ್ಲೂಕನ್ನು ಮಂಡ್ಯ ಜಿಲ್ಲೆಗೆ ಸೇರಿಸುವುದಕ್ಕೆ ಬದಲಾಗಿ ಮೈಸೂರು ಜಿಲ್ಲೆಗೆ ಸೇರಿಸಬೇಕೆಂದು ತಿದ್ದುಪಡಿ ಸೂಚಿಸಿದ್ದೇನೆ. ಈಗಲೇ

(Sri U. M. MADAPPA.)

ಇದನ್ನು ಮಾಡುವುದು ಉತ್ತಮ, ಮುಂದೆ ಇದಕ್ಕೇ ಒಂದು ಬಿಲ್ಲನ್ನು ತರುವ ಉದ್ದೇಶ ಬೇಡ. ಇವೆರಡನ್ನೂ ಸೇರಿಸಿ ಜಿಲ್ಲೆಯನ್ನು ದೊಡ್ಡದು ಮಾಡಬೇಕೆಂಬ ದೃಷ್ಟಿಯಿಂದ ಮೈಸೂರು ಜಿಲ್ಲೆಗೆ ಈಗಲೇ ಸೇರಿಸಿ ಜಿಲ್ಲೆಗಳನ್ನು ದೊಡ್ಡದು ಮಾಡುವ ಸೂಚನೆಯನ್ನು ತೋರಿಸಬೇಕೆಂದು ತಿದ್ದುಪಡಿ ತಂದಿದ್ದೇನೆ. ಇಷ್ಟು ಹೇಳಿ ಈ ತಿದ್ದುಪಡಿಗಳನ್ನು ಸಭೆಯವರು ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

MR. SPEAKER.—Amendment moved:

'In the sub-clause 1 (*d*)—

(1) the words "Kasaragod and" shall be omitted.

(2) after the words "Kollegal taluk" the words "and Talavadi firka in Gopichetti Palyam taluk." shall be inserted.

In sub-clause 2—

for the word "Mandya" the word "Mysore" shall be substituted.'

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಶ್ರೀ ಮಾದಪ್ಪನವರು ತಂದಿರುವ ತಿದ್ದುಪಡಿಯನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾಳವಾಡಿ ಫಿರ್ಕಾ, ಕೊಳ್ಳೇಗಾಲದ ಕೆಲವು ಭಾಗ ಮೈಸೂರಿಗೆ ಸೇರಬೇಕೆಂದು ಹೇಳಿದರು. ಮೊಟ್ಟಮೊದಲು ಭಾಷಾವಾರು ಆಧಾರದಮೇಲೆ ವಿಂಗಡಿಸಬಾರದು ಎಂದು ಈ ಸಭೆಯ ಬಹು ಜನರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಅವರು ಹೇಳುವ ಕೆಲವು ಭಾಗ ಸೇರಬೇಕೆಂಬುದು, ಒಂದು ಫಿರ್ಕಾ ಸೇರಬೇಕೆಂಬುದು ಸರಿಯಲ್ಲ. ಅದೂ ಭಾಷಾವಾರು ಆಧಾರದಮೇಲೆ ಪ್ರಾಂತ ವಿಂಗಡಿಸುವುದಾದರೆ ಅದಕ್ಕಿಂತ ಅನಾಹುತ ಇನ್ನೊಂದಿಲ್ಲ.

ಇನ್ನು ತಾಳವಾಡಿ ಫಿರ್ಕಾ ಸೇರಿ ಒಂದು ಕ್ಷೇತ್ರವಾಗುವುದಕ್ಕೆ ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯೆನ್ಸಿಯಾಗುವುದಕ್ಕೆ ಅವಕಾಶವಿದೆ, ಆ ರೀತಿ ವಿಂಗಡಿಸಿದ್ದಾರೆ ಎಂದು ಹೇಳಿದರು. ಹಿಂದೆ ಕ್ಷೇತ್ರ ವಿಭಜನೆ ಮಾಡಿದ ಆಧಾರದಮೇಲೆ ಈಗ ಮಾಡುವುದಕ್ಕೆ ಸಾಧ್ಯವಿಲ್ಲ ಮತ್ತು ಈ ಕ್ಷೇತ್ರಗಳನ್ನು ಪುನಃ ವಿಂಗಡಿಸುವುದಕ್ಕೆ ಅವಕಾಶವಿರುವುದರಿಂದ ಅದು ಅಷ್ಟು ಸಮರ್ಪಕವಾದುದಲ್ಲ.

ಆಮೇಲೆ ಟಿಪ್ಪೂಸುಲ್ತಾನ್ ಬೀದಿ ಎಂಬ ಹೆಸರಿದೆ, ಆದ್ದರಿಂದ ಚಾರಿತ್ರಿಕವಾದ ಸಂಬಂಧವಿದೆ ಎಂದು ಹೇಳಿದರು. ಹೀಗೆ ಎಷ್ಟೋ ಕಡೆ ನಮ್ಮ ಇಂಡಿಯಾ ದೇಶದ ಮಹನೀಯರ ಹೆಸರಿನಲ್ಲಿ ಬೇರೆ ಕಡೆಯೂ, ಬೇರೆ ದೇಶದವರ ಹೆಸರಿನಲ್ಲಿ ಈ ದೇಶದಲ್ಲೂ ಬೀದಿಗಳ ಹೆಸರಿವೆ. ಅದಮಾತ್ರಕ್ಕೆ ಆ ಹೆಸರಿನ ಕಾರಣದಿಂದ ನಮಗೇ ಅದು ಸೇರಬೇಕೆಂದು ಹೇಳುವುದೂ ಸರಿಯಲ್ಲ.

ಕೊಳ್ಳೇಗಾಲ ಮೈಸೂರು ಡಿಸ್ಟ್ರಿಕ್ಟಿಗೆ ಸೇರಬೇಕೆಂದು ವಾದಿಸಿದರು. ಕೊಳ್ಳೇಗಾಲದಲ್ಲಿ ಹೆಚ್ಚು ರೇಷ್ಮೆ ವ್ಯವಸಾಯಗಾರರಿದ್ದಾರೆ. ಅವರು ವ್ಯಾಪಾರಕ್ಕಾಗಿ ಹೋಗಿ ಬರುವ ಮುಖ್ಯವಾದ ಸ್ಥಳ ಬೆಂಗಳೂರು. ರೇಷ್ಮೆ ವ್ಯವಸಾಯಗಾರರಿಗೆ ಬೇಕಾದ ರೇಷ್ಮೆಗೂಡು ವಗೈರೆ ತರಬೇಕಾದರೆ ಮಳವಳ್ಳಿ ಮಾರ್ಗವಾಗಿ ಬೆಂಗಳೂರು ಕಡೆಗೆ ಬರಬೇಕು ಮತ್ತು ಕುಣಿಗಲು ಕಡೆ ಬರುವುದಕ್ಕೆ ಹೆಚ್ಚು ಸೌಕರ್ಯವಿದೆ. ಅಲ್ಲದೆ ಮಂಡ್ಯ ಡಿಸ್ಟ್ರಿಕ್ಟಿನ ಜನಸಂಖ್ಯೆ ಮತ್ತು ವಿಸ್ತೀರ್ಣ ಮೈಸೂರು ಡಿಸ್ಟ್ರಿಕ್ಟಿಗಿಂತ ಕಡಮೆಯಿದೆ. ಸಂಸ್ಥಾನದ ಜಿಲ್ಲೆಗಳು ಆದಷ್ಟು ಒಂದೇ ಪ್ರಮಾಣದವುಗಳಾಗಿರಬೇಕು. ಈ ಕಾರಣಗಳಿಂದ ಕೊಳ್ಳೇಗಾಲ ಮಂಡ್ಯಕ್ಕೇ ಸೇರುವುದು ಸೂಕ್ತ. ಆದ್ದರಿಂದ ಶ್ರೀ ಮಾದಪ್ಪನವರು ತಂದಿರುವ ಈ ತಿದ್ದುಪಡಿಯನ್ನು ಯಾವ ಕಾರಣದಿಂದಲೂ ಕೂಡ ಪುಷ್ಟೀಕರಿಸುವುದಕ್ಕೆ ಸಾಧ್ಯವಿಲ್ಲ, ಅದು ಮನ್ನಣೆಗೆ ಯೋಗ್ಯವಾಗಿಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ನಾನು ಈ ತಿದ್ದುಪಡಿಯನ್ನು ಏಕೆ ವಿರೋಧ ಮಾಡಬೇಕು ಎನ್ನುವುದಕ್ಕೆ ಕಾರಣ ಸ್ಪಷ್ಟವಾಗಿ ಕಾಣುತ್ತಿದೆ. ಆದಕಾರಣ ಇದರ ಬಗ್ಗೆ ಅಷ್ಟೇನೂ ಹೆಚ್ಚು ವಾದ ಮಾಡಬೇಕಾಗಿಲ್ಲ. ಪ್ರಾಂತಗಳ ಪುನರ್ವಿಂಗಡಣೆ ವಿಚಾರದಲ್ಲಿ ಭಾಷೆಯ ಆಧಾರ ಒಂದನ್ನೇ ಗಮನದಲ್ಲಿಟ್ಟುಕೊಂಡು ರಾಜ್ಯಗಳನ್ನು ವಿಂಗಡಣೆ ಮಾಡಬಾರದು ಎಂಬತಕ್ಕವರಲ್ಲಿ ನಾನೂ ಒಬ್ಬನಾಗಿದ್ದೇನೆ. ಆದರೆ ನಾನು ಗೋಪಿಚೆಟ್ಟಿಪಾಳ್ಯಂ ತಾಲ್ಲೂಕಿನ ತಾಳವಾಡಿ ಫಿರ್ಕಕ್ಕೆ ಆಡಳಿತ ದೃಷ್ಟಿಯಿಂದ ತುಂಬ ಅಡಚಣೆಯುಂಟಾಗಿದೆ ಎಂದು ತಿಳಿದಿದ್ದೇನೆ. ಆದಮಾತ್ರಕ್ಕೆ ನಾವು ಅನುಸರಿಸತಕ್ಕ ಯಾವ ಒಂದು ನೀತಿ ಅಥವಾ ಪಾಲಿಸಿ ಇದೆಯೋ ಅದಕ್ಕೆ ವಿರುದ್ಧವಾಗಿ, ಅಲ್ಲಿ ಹೆಚ್ಚಿಗೆ ಕನ್ನಡ ಮಾತನಾಡತಕ್ಕ ಜನರಿದ್ದಾರೆಂದು ಹೇಳಿ ಆ ಪ್ರದೇಶವನ್ನು ನಮಗೆ ಕೊಡಿ ಎಂದು ಹೇಳುವುದು ಸರಿಯಾದದ್ದಲ್ಲ. ಈ ವಿಚಾರಗಳೆಲ್ಲಾ ಆಯಾ ಕಾಲಕ್ಕೆ ತಕ್ಕಹಾಗೆ ಆಡಳಿತ ಅನುಕೂಲದ ದೃಷ್ಟಿಯಿಂದ ಸರಿಪಡಿಸಿಕೊಳ್ಳುವುದಕ್ಕೆ ನಮಗೆ ಸಾಕಷ್ಟು ಅವಕಾಶಗಳಿದ್ದೇ ಇವೆ. ಆದಕಾರಣ ಈಗ ಈ ತಿದ್ದುಪಡಿಯನ್ನು ತಂದಿರತಕ್ಕ ಮಾನ್ಯ ಸದಸ್ಯರು ಇದನ್ನು ಅಷ್ಟಾಗಿ ಒತ್ತಾಯಪಡಿಸಬಾರದೆಂದು ಹೇಳಲು ನಾನೀಗ ಎದ್ದು ನಿಂತಿದ್ದೇನೆ.

ಇನ್ನು ಕೊಳ್ಳೇಗಾಲವನ್ನು ಮಂಡ್ಯ ಜಿಲ್ಲೆಗೆ ಸೇರಿಸುವುದಕ್ಕೆ ಬದಲಾಗಿ ಮೈಸೂರು ಜಿಲ್ಲೆಗೆ ಸೇರಿಸಬೇಕೆಂದು ಒಂದು ವಿಚಾರ ಎತ್ತಿದ್ದಾರೆ. ಆದರೆ ಕೊಳ್ಳೇಗಾಲವನ್ನು ಮೈಸೂರಿಗೆ ಸೇರಿಸುವುದಕ್ಕಿಂತ ಮಂಡ್ಯ ಜಿಲ್ಲೆಗೆ ಸೇರಿಸಿರತಕ್ಕದ್ದೇ ಸರಿಯಾಗಿದೆ. ಇದು ಮಂಡ್ಯ ಜಿಲ್ಲೆಗೇ ಮೊದಲಿಂದಲೂ ಹೊಂದಾವಣಿಕೆಯಾಗಿ ಬಂದಿದೆ ಎಂಬುದನ್ನು ತಿಳಿಯಬೇಕಾಗಿದ್ದರೆ ಈಗಲೂ ಸಹ "ಕೊಳ್ಳೇಗಾಲಕ್ಕೆ ಹೋಗತಕ್ಕವರು—ಇಲ್ಲಿ ಇಳಿಯಿರಿ" ಎಂಬುದಾಗಿ ಮದ್ದೂರು ರೈಲ್ವೆ ಸ್ಟೇಷನ್ನಿನಲ್ಲಿ ಬೋರ್ಡು ಹಾಕಿರತಕ್ಕದ್ದನ್ನಾದರೂ ಮಾನ್ಯ ಸದಸ್ಯರು ಈಗಲೂ ನೋಡಬಹುದು. (ನಗು!) ಇಷ್ಟೇ ಅಲ್ಲದೆ ಮದ್ದೂರಿನಿಂದ ಕೊಳ್ಳೇಗಾಲದ ಮಾರ್ಗವಾಗಿ ಇನ್ನು ಮುಂದಕ್ಕೆ ಒಂದು ರೈಲ್ವೇ ಕೂಡ ಹಾಕಬೇಕೆಂಬ ಅಭಿಪ್ರಾಯ ಬೇರೆ ಇದೆ. ಅಲ್ಲದೆ ಈಗಾಗಲೇ ಮೈಸೂರು ಜಿಲ್ಲೆಯ ವಿಸ್ತೀರ್ಣ ಬಹಳ ಜಾಸ್ತಿಯಾಗಿದೆ. ಆದಕಾರಣ ಆ ಜಿಲ್ಲೆಯಲ್ಲಿರತಕ್ಕ ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳೆರಡನ್ನೂ ಮೈಸೂರಿಂದ ತೆಗೆದು ಕೊಡಗು ಜಿಲ್ಲೆಗೆ ಸೇರಿಸಬೇಕೆಂಬ ಅಭಿಪ್ರಾಯ ಕೂಡ ಇದೆ. ಕೊಳ್ಳೇಗಾಲದಿಂದ ಮಂಡ್ಯಕ್ಕೆ ನೇರವಾಗಿ ಬರಬಹುದು. ಇದನ್ನು ಮೈಸೂರಿಗೆ ಸೇರಿಸಿದರೆ ಬಹಳ ಸುತ್ತಾಗುತ್ತದೆ. ಕೊಳ್ಳೇಗಾಲದಿಂದ ಬೆಂಗಳೂರಿಗೆ ಬರ

ಬೇಕಾದರೆ ಮಂಡ್ಯ ಮೂಲಕದ ಮಾರ್ಗವೇ ನೇರ ಬಾದದ್ದು. ಆದರೆ ಮೈಸೂರು, ಕೊಡಗು ಇವೆಲ್ಲವನ್ನೂ ಸುತ್ತಿಕೊಂಡು ಬೇಕಾದರೂ ಬೆಂಗಳೂರಿಗೆ ಬರಬಹುದು, ಆಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಹತ್ತಿರವಾದ ದಾರಿ ಯಾವುದು ಎಂಬುದನ್ನು ನೋಡಬೇಕು. ಆದಕಾರಣ ಮಾನ್ಯ ಸದಸ್ಯರು ಈ ವಿಚಾರಗಳನ್ನೆಲ್ಲಾ ಅವರ ಗಮನಕ್ಕೆ ತೆಗೆದುಕೊಂಡು ತಮ್ಮ ತಿದ್ದುಪಡಿಯನ್ನು ಒತ್ತಾಯ ಮಾಡಬಾರದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

So far as Sri Srinivasa Iyengar's general observations are concerned, they are of very great importance and I am sure they will have the approval of the House. But I have made a slight alteration. I felt that to suggest that on the appointed day, namely, 1st October 1956 the Legislative Council of Mysore should go, would not be a very fair way of dealing with a very important matter. Therefore I thought and have merely made a happy compromise between the two views as it were. I have suggested that the present Legislative Council with such additions as we may have in the course of the next month might continue until the General Elections are over, and as part of one Legislature even as we began five years ago. That is also in accordance with the spirit of a resolution of this House. I understand that my friend

5 P.M.

Sri Mulka Govinda Reddy once before had brought forward a resolution before this House to the effect that the Legislative Council shall be abolished. As against that proposition, we made the suggestion, on that occasion, that the Legislative Council may be allowed to continue as long as the present Assembly continued and when the General Elections were held, this change may be effected. The present clause also may be treated in a similar manner. I have fully advanced my views and observations while speaking on the Bill. I also say that such additions to number as may be neces-

(SRI K. PATTABHIRAMAN.)

sary may be made to the Assembly in order to give adequate representation to the several areas, and the membership of the Assembly may be suitably enhanced. I have also made an amendment to that effect which will come before the House in due course. Subject to that, I say the Council may be continued till the General Elections; it need not be a permanent body as is sought to be made out in this Bill. Sri Srinivasa Iyengar might also give precedence to mine and I personally feel that my amendment may have better chances of acceptance in this House. As we began together, we will continue together and together we face the General Elections also. I oppose the idea of a Legislative Council being a permanent body. I generally accept the arguments, weighty and enlightened, which have been advanced by my very good friend form T.-Narasipur. I request that this amendment may kindly be accepted by this House.

Mr. SPEAKER.—Amendments moved:

'For sub-clause (1), the following sub-clause shall be substituted, namely :—

"(1) As from the appointed day but only until the next General Elections to the Legislative Assembly, there shall be a Legislative Council for the new State of Mysore."

"For sub-clause (2), the following sub-clause shall be substituted, namely :—

"(2) until the Legislative Assembly of the new State of Mysore has been duly reconstituted and summoned to meet for the first time thereafter, the said Council shall consist of :

(*a*) All the sitting members of the Legislative Council of existing State of Mysore;

(*b*) all the sitting members of the Legislative Councils of the existing States of Madras and Bombay as have been elected to represent the Constituencies within the area or areas as have been transferred to the new State of Mysore; and

(*c*) such other number of members to represent the territories not represented as before but comprised in the new State of Mysore in such manner as may be prescribed."

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ಈಗಿನ ಸಂದರ್ಭದಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ ಒಂದು ಭಾರವೆಂದು ಕಾಣಬರುತ್ತದೆ. ಹಿಂದೆ ರೆಪ್ರೆಸೆಂಟೇಟಿವ್ ಅಸೆಂಬ್ಲಿ ಇತ್ತು. ಅಲ್ಲಿ ಲೆಜಿಸ್ಲೇಟೀವ್ ಕಾರ್ಯಕ್ರಮ ತಗೆದುಕೊಳ್ಳುತ್ತಿರಲಿಲ್ಲ. ಅದೂ ಅಲ್ಲದೆ ಬಡ್ಜೆಟ್ ಮೇಲೆ ಅಷ್ಟಾಗಿ ಅಧಿಕಾರವಿರಲಿಲ್ಲ. ಅದಕ್ಕೋಸ್ಕರವಾಗಿ ಲೆಜಿಸ್ಲೆಟಿವ್ ಕೌನ್ಸಿಲ್ ಇತ್ತು. ಈಗ ಎಲ್ಲ ಅಧಿಕಾರವೂ ಕೂಡ ಈ ಲೆಜಿಸ್ಲೆಟಿವ್ ಅಸೆಂಬ್ಲಿಗೆ ಬಂದಿರುವುದರಿಂದ ಲೆಜಿಸ್ಲೆಟಿವ್ ಕೌನ್ಸಿಲ್ ಒಂದು superfluous body. ಇದೂ ಅಲ್ಲದೆ ಇದಕ್ಕೆ ನಾವು ಒಂದು ತಿದ್ದುಪಡಿಯನ್ನು ತಂದು ಒಂದು ಪಾರ್ಲಿಮೆಂಟರಿ ಸ್ಥಾನಕ್ಕೆ ಈಗಿರತಕ್ಕ 7 ಅಸೆಂಬ್ಲಿ ಸದಸ್ಯರ ಸ್ಥಾನವನ್ನು 8 ಅಥವಾ 9 ಮಾಡಬೇಕೆಂದು ಕಳುಹಿಸಿದ್ದೇವೆ. ಅದರಂತೆ, ಸದಸ್ಯರು ಈಗಿರುವ ಪದ್ಧತಿಗೆ ಬದಲಾಗಿ territorial basis ಪ್ರಕಾರ ಚುನಾವಣೆಗಳಲ್ಲಿ ಬಂದು ಈ ಅಸೆಂಬ್ಲಿಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಿದೆ. ಈ ಲೆಜಿಸ್ಲೇಟಿವ್ ಕೌನ್ಸಿಲ್ ಇರುವುದರಿಂದ ತಮಗೆ ಬೇಕಾದವರಿಗೆ ಸ್ಥಾನಗಳನ್ನು ಕೊಡಿಸಬೇಕು; ನಾಮಕರಣ ಪದ್ಧತಿಯನ್ನಿಟ್ಟುಕೊಳ್ಳಬೇಕು ಎನ್ನುವುದಕ್ಕೆ ಒಂದು ಅವಕಾಶವಾಗಿದೆಯೇ ಹೊರತು ಆ ಸಭೆಯಿಂದ ಎಳ್ಳಷ್ಟೂ ಪ್ರಯೋಜನವಿಲ್ಲ. ಈಗ ಎರಡು ಸಭೆಗಳಲ್ಲಿಯೂ ಚರ್ಚೆಗಳು ನಡೆಯುವುದು, ಮಂತ್ರಿಗಳು ಮತ್ತು ಸದಸ್ಯರ ಕಾಲಹರಣವಾಗುವುದು, ಮತ್ತು ಈಗ ಆ ಸಭೆಗಾಗಿ ಆಗುತ್ತಿರುವ ಖರ್ಚು ಕೂಡ ತಪ್ಪುವುದು ಎನ್ನುವುದಕ್ಕೋಸ್ಕರ ನಾನು ಈ ತಿದ್ದುಪಡಿಯನ್ನು ಸಮರ್ಥನೆ ಮಾಡುತ್ತೇನೆ.

*Sri Mulka GOVINDA REDDY.—I support the amendment tabled by Sri Pattabhiraman and others. Sir, I am glad that the idea that the Legislative Council in Mysore should be abolished is gaining ground among the Members of this Assembly. When we are launching upon the new State, there seems to be no reason why this institution which does not serve any useful purpose and which only costs the exchequer to the extent of three or four lakhs should find a place. For some Part A States, even now there are no Legislative Councils. I therefore feel that it is better that all the States under the re-organisation scheme, should have only unicameral legislatures and the Legislative Councils may be abolished. We know that it is more for the misuse that these Councils are there and more for bringing in

people who are otherwise not in a position to get into the Legislative Assemblies, that these Councils are constituted and continued. I very vehemently oppose the continuance of the Legislative Council under the new set-up.

Sri K. HANUMANTHAIYA.—Sir, since allegations have been made that the Ministry is likely to misuse the members of the Legislative Council, it has become almost impossible for me to accept the amendment. Hon'ble Members were asked to argue constitutional questions dispassionately. Many a time, they spoil their case by bad arguments. I wish they continue this tradition of bad arguments so that the Congress may be always in power. (*Laughter.*)

Sir, the question of Congress or Congress Ministry is not the issue now. Therefore, it would not be necessary for me to put forth any arguments in its support. Sir, this idea of whether or not the Legislative Council should be there is a debatable question. Honest differences can exist in regard to its existence. For the present, it is better that we continue the constitutional set-up as it is, in Mysore to-day. To think of its abolition would be doing something which is very hasty. Sir, the Legislative Assembly has, under the Constitution, power to abolish the Legislative Council. Therefore, it is far better that we leave this matter to the Legislative Assembly that is to be elected after the General Elections. Some of our friends are very fond of arguing that people must be consulted. So, my friend Sri B. Hutche Gowda and Sri Mulka Govinda Reddy can go to the country on that basis, get the verdict and if at all they come back, they can vote against the existence of the Council in that new Assembly. Therefore, I want to give them a fair chance . . . .

Sri Mulka GOVINDA REDDY.—I am sorry ; it is not the Chief Minister that gives a fair chance, but it is the constituency to both me and him.

Sri K. HANUMANTHAIYA.—Sir, I am unable to accept this amendment which is against the Constitution.

Mr. SPEAKER.—What does the Hon'ble Member propose to do with his amendment ?

Sri S. SRINIVASA IYENGAR.—I press it.

Mr. SPEAKER.—The question is:

"That in sub-clause (1), between the words 'shall' and 'be' the word 'not' shall be inserted."

The motion was negatived.

Mr. SPEAKER.—Now the amendment of Sri Pattabhiraman and Sri Hutche Gowda.

The question is :

"That for sub-clause (1), the following sub-clause shall be substituted, namely :

(1) As from the appointed day but only until the next General elections to the Legislative Assembly there shall be a Legislative Council for the new State of Mysore."

The motion was negatived.

Mr. SPEAKER.—I will put to vote Sri Srinivasa Iyengar's amendment. The question is :

"Sub-clause (2) shall be deleted."

The motion was negatived.

Sri K. HANUMANTHAIYA.—We may stop the proceedings at that. I will have to study Sri K. Pattabhiraman's amendments also. My amendments and his amendments go together. They may be taken up to-morrow.

Mr. SPEAKER.—All right. To-morrow, for the first hour after question time, the special resolution about the Cultural Development movement will be taken up and afterwards, amendments to the States Re-organisation Bill.

The House will now rise for the day and meet at 12 of the Clock to-morrow.

The House adjourned at Twelve Minutes past Five of the Clock to meet again at Twelve of the Clock on Thursday, 5th April 1956.

WD 2896—GPB—550—2-8-56

MYSORE LEGISLATIVE ASSEMBLY

THIRTIETH DAY.

Thursday, 5th April 1956.

The House met in the Assembly Hall, Atara Kacheri, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Electricity for Irrigation in Dogganahalli and other villages, Koratagere Taluk.

Q.—375. Sri MUDDURAMIAH (Koratagere—Madhugiri).—

Will the Government be pleased to state :—

(*a*) whether it is a fact that Dogganahalli, Mallekav and Bendone ryots in Koratagere Taluk have deposited money for the supply of electricity for irrigation purposes ;

(*b*) if so, the action taken so far for the supply of electricity ?

A.—Sri H. M. CHANNABASAPPA (Minister for Industries).—

(*a*) No.

(*b*) Does not arise in view of answer to (*a*) above.

ಶ್ರೀ ಮುದ್ದುರಾಮಯ್ಯ.—ದೊಗ್ಗನಹಳ್ಳಿ, ಮಲ್ಲೇಕಾವು ಮತ್ತು ಬೆಂಡೋಣೆ ಗ್ರಾಮಗಳಿಗೆ ಹಿಂದೆ ಅಂದಾಜು ತಯಾರಾಗಿತ್ತಲ್ಲವೇ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಡಿಪಾಜಿಟ್ ಮಾಡದಿದ್ದರೆ ಅಂದಾಜು ಮಾಡುವ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಮುದ್ದುರಾಮಯ್ಯ.—ಆ ಗ್ರಾಮಗಳವರು ಈಗ ಡಿಪಾಜಿಟ್ ಮಾಡಿದ್ದಾರೆ. ಅದನ್ನು ವಿಚಾರಿಸಿ ಆದಷ್ಟು ಜಾಗ್ರತೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಡಿಪಾಜಿಟ್ ಇಟ್ಟು ಅರ್ಜಿ ಹಾಕಿದರೆ ಯೋಚನೆ ಮಾಡಬಹುದು.

Cottage Industries in Corporation Area, Bangalore.

Q.—285. Sri P. R. RAMAIYA (Basavanagudi).—

Will the Government be pleased to state :—

(*a*) what are the small and cottage industries they are fostering in the area of the Corporation of the City of Bangalore ;

(*b*) if they have made any grants to any private institutions in the above area and if so, what is the amount and to which institution it is given ?

A.—Sri H. M. CHANNABASAPPA (Minister for Industries).—

(*a*) The Small-scale and Cottage Industries detailed in the Statement A appended below are being fostered in the area of the Corporation of the City of Bangalore by giving grants and loans under the State-aid to Industries Act.

(*b*) Grants-in-aid for Home Industries are being given monthly by the Department of Industries and Commerce to 19 local Samajas and Social Institutions in the area of the Corporation of the City of Bangalore. The total amount that is being given to the above institutions is Rs. 940, per month. Statement B showing the local Samajas and Social Institutions receiving grants from the Department of Industries and Commerce for Home Industries is appended.

---

*Asterisk indicates that the remarks or speeches have not been revised by the Member concerned.

(SRI H. M. CHANNABASAPPA.)

STATEMENT 'A'.

1 Stearic Acid.
2 Ink, Pomade and Brilliantine.
3 Pith Hats.
4 Agricultural Implements.
5 Metal Foundry.
6 Tooth Powder.
7 Leather Industries.
8 Powerloom weaving.
9 Silk Throwing.
10 Tailoring.
11 Dyeing, printing and painting.
12 Sandalwood and Ivory Carving.
13 Pottery.
14 Textile Bobbins.
15 Conduit pipes.
16 Toys making.
17 Woollen Druggets.
18 Silver Photos.
19 Optical lens.
20 Card Board making.
21 Cycle parts manufacturing.
22 Handloom weaving.
23 Manufacturing of Radio components.
24 Manufacturing of machines for Cottage Industries.
25 Manufacturing of Oriental Ornaments.
26 Manufacturing of Sewing thread.
27 Sericulture.
28 Printing Press.
29 Commercial Art Studio.
30 Engineering Works.
31 Electro-plating and Enamelling-Welding and preparing cycle parts
32 Handloom industry.
33 Manufacture of French polish.
34 For refining of scrip non-ferrous metals foundry and machine shop.
35 For the manufacture of Socks, Mufflur, Sweaters, etc.
36 Manufacture of Neon-Signs, Glosigns and Mercury Switcher, etc.

STATEMENT 'B'

Sl. No.	Name of the Institution	Grant-in-aid per month
1	Sree Sharada Samaj, Albert Victor Road, Chamarajpet, Bangalore.	65
2	Ladies Association, Malleswaram, Bangalore	40
3	Gosha Home Industries, Malleswaram, Bangalore ...	65
4	Stree Samaj, Seshadripuram	40
5	Seva Sadan, Malleswaram	60
6	Maharashtra Mahila Ashram, Basavangudi	55
7	Lalitha Kala Sala, Malleswaram	30
8	Association for Moral and Social Hygiene, Wilson Garden, Bangalore.	50
9	Abalashrama, Nagasandra Road, Bangalore	30
10	Shanthi Sadan, Mission Road, Bangalore	40
11	Akkana Balaga, Akkipet, Bangalore	30
12	Kasturba Mahila Co-operative Society, Limited, Chamarajpet, Bangalore.	35
13	Harijan Girls Hostel, Bannerghatta Road	25
14	Anatha Sishu Seva Ashram, Wilson Garden, Bangalore ...	25
15	Seva Ashram, Srirampuram, Bangalore	25
16	Asaktha Poshaka Sabha (Girls Orphanage), Visveswarapuram ...	25
17	Labourers Fellowship Settlement, Risaldar Street, Bangalore ...	25
18	Asaktha Poshaka Sabha (Boys Orphanage) Visveswarapuram ...	25
19	S.L.N. Charities, Bangalore	250
	Total ...	940 p.m.

ಶ್ರೀ ಪಿ. ಆರ್. ರಾಮಯ್ಯ.—(*a*) ಪ್ರಶ್ನೆಗೆ ಉತ್ತರವಾಗಿ 8ನೆಯ ಪುಟದಲ್ಲಿ ಒಂದು ತಃಖ್ತೆ ಕೊಟ್ಟು ಅದರಲ್ಲಿ 36 ಕೈಗಾರಿಕೆಗಳನ್ನು ನಮೂದಿಸಲಾಗಿದೆ. ಆ 36 ಕೈಗಾರಿಕೆಗಳೂ ಬೆಂಗಳೂರು ನಗರದಲ್ಲೇ ನಡೆಯುತ್ತಿವೆಯೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನಡೆಯುತ್ತಿರುವುದಕ್ಕೇ ನಾವು ಹಣ ಸಹಾಯ ಮಾಡಿರುವುದು.

ಶ್ರೀ ಪಿ. ಆರ್. ರಾಮಯ್ಯ.—ಆ 36 ಕೈಗಾರಿಕೆಗಳನ್ನೆಲ್ಲಾ ಸರ್ಕಾರದವರೇ ಸ್ವಂತವಾಗಿ ನಡೆಸುತ್ತಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಂತವಾಗಿ ನಡೆಸುತ್ತಿದ್ದೇವೆಂದು ನಾವು ಹೇಳಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಎಷ್ಟು ಸ್ವಂತ ? ಎಷ್ಟು ಖಾಸಗಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದನ್ನೂ ನಾವು ಸ್ವಂತವಾಗಿ ನಡೆಸುತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—" B " ತಃಖ್ತೆಯಲ್ಲಿ ನಮೂದಿಸಿರುವ 19 ಸಂಸ್ಥೆಗಳನ್ನು ಬಿಟ್ಟು ಬಾಕಿ ಯಾವ ಸಂಸ್ಥೆಗಳು ಗೃಹಕೈಗಾರಿಕೆ ನಡೆಸುತ್ತಿವೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಡೆಸುತ್ತಿರಬಹುದು ನಾವು ಸಹಾಯ ಮಾಡುತ್ತಿರುವ ಸಂಸ್ಥೆಗಳನ್ನು ಮಾತ್ರ ತಿಳಿಸಿದ್ದೇವೆ.

ಶ್ರೀ ಪಿ. ಆರ್. ರಾಮಯ್ಯ.—19 ಕೈಗಾರಿಕೆಗಳನ್ನು ಬಿಟ್ಟು ಬಾಕಿ ಯಾವ ಕೈಗಾರಿಕೆಗಳೂ ನಡೆಯುತ್ತಿಲ್ಲವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲವೆಂದು ಹೇಳಿಲ್ಲ, ಇರಬಹುದು.

ಶ್ರೀ ಪಿ. ಆರ್. ರಾಮಯ್ಯ.—ಅವು ಯಾವುವು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಅದನ್ನು ಕೇಳಿಲ್ಲ.

> " What are the small and cottage industries they are fostering in the area of the Corporation of the City of Bangalore ? "

ಎಂದು ತಾವು ಕೇಳಿದ್ದೀರಿ ಅದಕ್ಕೆ ನಾವು ಸ್ವಲ್ಪ ಸಹಾಯ ಕೊಟ್ಟು ಪ್ರೋತ್ಸಾಹ ನೀಡುವುದನ್ನು ಮಾತ್ರ ಹೇಳಿದ್ದೇವೆ.

ಶ್ರೀ ಪಿ. ಆರ್. ರಾಮಯ್ಯ.—ಅಂದರೆ ಸರ್ಕಾರದ ಸಹಾಯವಿಲ್ಲದೆ ನಡೆಯುತ್ತಿರುವ ಖಾಸಗಿ ಸಂಸ್ಥೆಗಳಿವೆಯೆಂದು ಹೇಳಿದ ಹಾಗಾಯಿತು, ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇರಬಹುದು ಎಂದು ಹೇಳಿದೆ.

ಶ್ರೀ ಪಿ. ಆರ್. ರಾಮಯ್ಯ.—ತಾವು ಪಟ್ಟಿ ಕೊಟ್ಟಿರುವುದರಿಂದ ಸಂದೇಹ ಉಂಟಾಗಿದೆ. 36ರ ಪಟ್ಟಿಯಿದೆ. 19 ವಿನಾ ಯಾವ ಗೃಹ ಕೈಗಾರಿಕೆಯೂ ನಡೆಯುತ್ತಿಲ್ಲವೆಂದು ನನಗೆ ಸಂದೇಹವಿದೆ. ಅದನ್ನು ಹೇಗೆ ಪರಿಹಾರ ಮಾಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಂದೇಹ ಪರಿಹಾರ ಮಾಡುವುದಕ್ಕೆ 36ರಲ್ಲಿ ಯಾರುಯಾರಿಗೆ ಯಾವತ್ತು ಎಷ್ಟು ಹಣ ಕೊಟ್ಟಿದೆ ಎಂದು ಕೇಳಿದರೆ ಹೇಳಬಹುದು.

ಶ್ರೀ ಪಿ. ಆರ್. ರಾಮಯ್ಯ.—ಯಾವುದು ನಡೆಯುತ್ತಿದೆಯೆಂದು ಕೇಳಿದರೆ ಉತ್ತರ ಹೇಳಲಿಲ್ಲ. ಈಗ ಬೆಂಗಳೂರು ನಗರದಲ್ಲಿ ಸುಧಾರಣೆ ಮಾಡಬೇಕು, ಗೃಹ ಕೈಗಾರಿಕೆ ಅಭಿವೃದ್ಧಿಪಡಿಸಬೇಕು ಎಂದು ಒಂದು ಸಾಧನಾಕ್ರಮವಿರುವುದರಿಂದ ತಾವು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬೆಂಗಳೂರು ನಗರದಲ್ಲಿ ಯಾವಯಾವ ಗೃಹಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ನಿರ್ಧಾರ ಮಾಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಯಾವುದನ್ನೂ ಕೂಡ ನೇರವಾಗಿ ಸ್ಥಾಪನೆಮಾಡುವುದಿಲ್ಲ, ಸ್ಥಾಪನೆ ಮಾಡುವುದಕ್ಕೆ ಸಹಾಯ ಮಾಡುತ್ತೇವೆ.

ಶ್ರೀ ಪಿ. ಆರ್. ರಾಮಯ್ಯ.—ಈಗ ಬೆಂಗಳೂರಿನಂಥ ದೊಡ್ಡ ನಗರದಲ್ಲಿ ನಿರುದ್ಯೋಗ ನಿವಾರಣೆ ಮಾಡುವುದಕ್ಕೆ ಗೃಹ ಕೈಗಾರಿಕೆಗಳನ್ನು ಏರ್ಪಾಡು ಮಾಡಬೇಕೆಂಬುದು ಸರ್ಕಾರದ ನೀತಿಯಾಗಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂಬುದೇ ಸರ್ಕಾರದ ನೀತಿಯಾಗಿದೆ. ಖಾದಿ ನೂಲನ್ನು ತೆಗೆಯುವ ಕೈಮಗ್ಗಗಳನ್ನು ಈಗತಾನೆ ಪ್ರಾರಂಭ ಮಾಡಿದ್ದೇವೆ.

ಶ್ರೀ ಪಿ. ಆರ್. ರಾಮಯ್ಯ.—ಸರ್ಕಾರದವರು ಗೃಹ ಕೈಗಾರಿಕೆ ವಿಷಯವಾಗಿ ನಗರ ಪ್ರದೇಶಗಳಲ್ಲಿ ಯಾವ ನೀತಿಯನ್ನನುಸರಿಸುತ್ತಾರೆಂದು ತಿಳಿದುಕೊಳ್ಳಲು ಮತ್ತು ಸಂಸ್ಥಾನದಲ್ಲಿ ಅನೇಕ ಮನೆಗಳಲ್ಲಿ ಗೃಹ ಕೈಗಾರಿಕೆ ನಡೆಸಬೇಕೆಂದು ಹೆಚ್ಚಾಗಿ ಉತ್ಸಾಹವಿರುವವರಿಗೆ ಸಹಾಯ ನೀಡುವುದಕ್ಕೆ ಏನು ಯೋಜನೆ ಮಾಡಲಾಗಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯೋಜನೆ ತಮಗೆ ಗೊತ್ತಿರಬೇಕು. ಎಲ್ಲೆಲ್ಲಿ ಸಾರ್ವಜನಿಕರು ಬಂದು ಸೇವೆ ಸಲ್ಲಿಸುತ್ತಾರೋ ಅಲ್ಲಿ ಅವರನ್ನು ಟ್ರೈನಿಂಗಿಗೆ ಕಳುಹಿಸಿ ನಿರ್ದಿಷ್ಟವಾದ ಸಂಬಳ ಕೊಟ್ಟು ಹಣ ಸಹಾಯ ಮುಂತಾದ್ದನ್ನು ಮಾಡುತ್ತೇವೆ. ಸಂಸ್ಥೆಗಳಿಗೆ ಸಹಾಯದ್ರವ್ಯ ಕೊಡುತ್ತೇವೆ. ಕೋ-ಆಪರೇಟಿವ್ ಸೊಸೈಟಿ ಮಾಡಿಕೊಂಡು ಹಣ ಸಹಾಯ ಬೇಕೆಂದು ಕೇಳಿದರೆ ಅದನ್ನು ನೀಡುತ್ತೇವೆ. ಹೀಗೆ ನಾನಾ ಯೋಜನೆಗಳಿವೆ.

ಶ್ರೀ ಪಿ. ಆರ್. ರಾಮಯ್ಯ.—ಈಗ ಸರ್ಕಾರದಲ್ಲಿ ಒಂದು ಗೊತ್ತಾದ ಕ್ರಮವಿಲ್ಲದಿರುವುದರಿಂದ ಖಾಸಗಿ ಸಂಸ್ಥೆಗಳವರು ಸಹಾಯಕ್ಕಾಗಿ ಹಾಕಿಕೊಂಡಿರುವ ಅನೇಕ ಅರ್ಜಿಗಳು ಪರಿಶೀಲನೆ ಇಲ್ಲದೆ ಹಾಗೆಯೇ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರ ಅಭಿಪ್ರಾಯ ತಪ್ಪು. ಗೊತ್ತಾದ ಕ್ರಮವಿದೆ. ಅದನ್ನರಿಯದೆ ಜನರು ಅರ್ಜಿ ಹಾಕಿದರೆ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈ ವಿಷಯದಲ್ಲಿ ಸರಿಯಾದ ತಿಳಿವಳಿಕೆ ಕೊಡುವುದು ಸರ್ಕಾರದ ಕರ್ತವ್ಯವಲ್ಲವೆ ? ಈ ರೀತಿ ಮಾಡಬೇಕೆಂದು ಸರ್ಕಾರ ತಿಳಿಸಬೇಡವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಂಬಂಧಪಟ್ಟ ಅಧಿಕಾರಿಗಳ ಬಳಿಗೆ ಹೋಗಿ ವಿವರ ಕೇಳಿದರೆ ಹೇಳುತ್ತಾರೆ.

Sri P. R. RAMAIYA.—I want to bring to the notice of the Minister that many applications which have been sent to the Government for consideration have not been considered. I would like the Minister to pay his personal attention to it.

Sri H. M. CHANNABASAPPA.—Some of those applications which are not in conformity with the rules and regulations cannot be considered.

ಶ್ರೀ ಎಂ. ಪಳನಿಯಪ್ಪನ್.—ಇಲ್ಲಿ "ಫ್ರೆಂಡ್ ಇನ್ ನೀಡ್" ಎಂಬ ಒಂದು ಸೊಸೈಟಿ ಇರತಕ್ಕ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ?

Sri H. M. CHANNABASAPPA.—Thank you for the information.

ಶ್ರೀ ಎಂ. ಪಳನಿಯಪ್ಪನ್.—ಈ ಸೊಸೈಟಿಗೆ ಸರ್ಕಾರದವರೇನಾದರೂ ಗ್ರ್ಯಾಂಟ್-ಇನ್-ಏಯ್ಡ್ ಕೊಡುತ್ತಿದ್ದರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೊಡುತ್ತಿದ್ದರೆ ಆ ವಿಚಾರವೂ ಕೂಡ ಈಗ ಈ ಪಟ್ಟಿಯಲ್ಲೇ ಬರುತ್ತಿತ್ತು.

ಶ್ರೀ ಎಂ. ಪಳನಿಯಪ್ಪನ್.—ಮೊದಲು ಹಾಗೆ ಈ ಸೊಸೈಟಿಗೆ ಕೊಡುತ್ತಿದ್ದ ಗ್ರ್ಯಾಂಟ್-ಇನ್-ಏಯ್ಡನ್ನು ಇತ್ತೀಚೆಗೆ ಹಠಾತ್ತನೆ ನಿಲ್ಲಿಸಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಆ ವಿಚಾರ ವೇನೂ ತಿಳಿಯದು.

ಶ್ರೀ ಎಂ. ಪಳನಿಯಪ್ಪನ್.—ಆ ವಿಚಾರವನ್ನು ತಾವು ಪುನಃ ಪರಿಶೀಲನೆ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ನಿಲ್ಲಿಸ ಬೇಕಾಗಿದ್ದರೆ ಅದಕ್ಕೇನೋ ಕಾರಣವಿರಬೇಕು, ಅದರಿಂದಲೇ ನಿಲ್ಲಿಸಿದ್ದಾರೆ.

ಶ್ರೀ ಎಂ. ಪಳನಿಯಪ್ಪನ್.—ಈ 'ಫ್ರೆಂಡ್-ಇನ್-ನೀಡ್" ಸೊಸೈಟಿಗೆ ಹಿಂದೆ ಸರ್ಕಾರದವರು ಕೊಡುತ್ತಿದ್ದ ಗ್ರ್ಯಾಂಟ್-ಇನ್-ಏಯ್ಡನ್ನು ಯಾವ ಕಾರಣವೂ ಇಲ್ಲದೆ ನಿಲ್ಲಿಸಿದ್ದಾರೆಂಬುದನ್ನು ತಾವು ಪರಿಶೀಲನೆ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಯಾವ ಕಾರಣವೂ ಇಲ್ಲದೆ ಯಾರೂ ನಿಲ್ಲಿಸುವುದಿಲ್ಲ.

ಶ್ರೀ ಎಂ. ಪಳನಿಯಪ್ಪನ್.—ಚಾಮರಾಜಪೇಟೆಯಲ್ಲಿರುವ ಕಸ್ತೂರಿ ಬಾ ಮಹಿಳಾ ಕೋ-ಆಪರೇಟಿವ್ ಸೊಸೈಟಿಗೆ ಸಹಾಯ ನೀಡುತ್ತಿದ್ದೀರಿ. ಈ ಸಂಸ್ಥೆ ಏನು ಕೆಲಸ ನಡೆಸುತ್ತಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಸಂಸ್ಥೆ ಹೆಂಗಸರಿಗೆ ಸಣ್ಣ ಪುಟ್ಟ ಕೈಗಾರಿಕೆಗಳಲ್ಲಿ ಶಿಕ್ಷಣ ಕೊಡಿಸಲು ಉತ್ತೇಜನಕಾರಿಯಾಗಿದೆ. ಗೃಹಕೈಗಾರಿಕೆಗಳಿಗೆ ಸಹಾಯ ನೀಡುತ್ತಿದೆ.

ಶ್ರೀ ಎಂ. ಪಳನಿಯಪ್ಪನ್.—ಈ ಸೊಸೈಟಿ ಕೋ-ಆಪರೇಟಿವ್ ಸೊಸೈಟಿಗಳ ಆಕ್ಟ್ ಪ್ರಕಾರ ರಿಜಿಸ್ಟರ್ ಆಗಿರುತ್ತದೆಯೇ?

Sri H. M. CHANNABASAPPA.—I have not got the details. Through the Apex Bank or through the other source.

ಶ್ರೀ ಎಂ. ಪಳನಿಯಪ್ಪನ್.—ಈ ಸೊಸೈಟಿಯಲ್ಲಿ ದೊರೆಯತಕ್ಕ ಸಹಾಯಕ್ಕಿಂತಲೂ ಹೆಚ್ಚಿನ ಸಹಾಯವನ್ನು ಈ ಏಪೆಕ್ಸ್ ಬ್ಯಾಂಕ್ ಅಥವಾ ಇತರ ಬ್ಯಾಂಕ್‌ಗಳಿಂದ ದೊರೆಯುವಂತೆ ಮಾಡಲು ಅವಕಾಶವಿದೆಯಲ್ಲವೇ?

Sri H. M. CHANNABASAPPA.—Co-operative Societies have certainly access to all the facilities that are available for the co-operative societies.

ಶ್ರೀ ಎಂ. ಪಳನಿಯಪ್ಪನ್.—ಈ ಸೊಸೈಟಿಗಳು ಕೊಡತಕ್ಕ ಸಹಾಯವೆಲ್ಲಾ 35 ರೂಪಾಯಿಗಳ ಒಳಗೆ ಇರುವುದರಿಂದ ಇದರಿಂದ ಅಷ್ಟೇನೂ ಪ್ರಯೋಜನವಾಗುತ್ತಿಲ್ಲ. ಆದುದರಿಂದ ಈ ಕಾರ್ಯವನ್ನು ಕೋಆಪರೇಟಿವ್ ಸಂಸ್ಥೆಗಳ ಮೂಲಕ ನಡೆಸಿದರೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಾಯ ದೊರೆಯಲು ಅವಕಾಶವಿದೆಯಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ತಮ್ಮ ಅಭಿಪ್ರಾಯದ ಮಾತು.

ಶ್ರೀ ಡಿ. ಎಂ. ಗೋವಿಂದರಾಜು.—ಈ ಯೋಜನೆಯನ್ನು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಹರಡಬೇಕಾದುದು ಸರ್ಕಾರದವರ ಒಂದು ನೀತಿಯಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಎಂ. ರಾಜಶೇಖರಮೂರ್ತಿ.—'ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್' ಇವರು ಏನು ಕೆಲಸ ಮಾಡುತ್ತಿದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಸೂತಿ ಕೆಲಸಗಳು, ಹೊಲಿಗೆ ಕೆಲಸಗಳು, ಸಣ್ಣಪುಟ್ಟ ಉಡುಪುಗಳನ್ನು ತಯಾರಿಸುವುದು, ಚಾಪೆಹೆಣೆಯುವುದು, ಇತ್ಯಾದಿ ಕೈಗಾರಿಕೆಗಳನ್ನು ಮಾಡಿ ತಮ್ಮ ದುಡಿಮೆ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಎಂ. ರಾಜಶೇಖರಮೂರ್ತಿ.—ಈ ಸಂಸ್ಥೆಗಳಿಂದ ತಾವು ಆಗಿಂದಾಗ್ಗೆ ಕ್ರಮವಾಗಿ ರಿಪೋರ್ಟುಗಳನ್ನು ತರಿಸಿಕೊಳ್ಳುತ್ತಿದ್ದೀರಾ?

Sri H. M. CHANNABASAPPA.—Yes.

Sri M. LINGANNA.—May I know what small scale and cottage industries are being undertaken by S. L. N. Charities, Bangalore, shown as Sl. No. 19 in Statement 'B'?

Sri H. M. CHANNABASAPPA.—S. L. N. Charities are encouraging cottage industries and they have also been training people to take up cottage industries and giving them such help as is necessary.

Sri M. LINGANNA.—Is this amount an outright grant by the Government?

Sri H. M. CHANNABASAPPA.—This is separate. We have got a separate head 'Aid to cottage industries and institutions of this kind.—Grant-in-aid.'

Sri M. LINGANNA.—What is the agency by means of which the Government have arranged to look into the proper utilisation of the grant given by the Government?

Sri H. M. CHANNABASAPPA.—We have an Inspector. He will go round all the institutions, inspect their working and submit a report and also give them suggestions.

ಶ್ರೀ ಆರ್. ಅನಂತರಾಮನ್.—ಈಗ ಬೆಂಗಳೂರು ನಗರದಲ್ಲಿ ಉದ್ಯೋಗವಿಲ್ಲದ ವಿದ್ಯಾವಂತರಾದ ಜನರು ಬಹಳವಾಗಿದ್ದಾರೆ. ಇಂಥವರೆಲ್ಲಾ ಸೇರಿಕೊಂಡು ಒಂದು ಸೊಸೈಟಿ ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೆ ಸರ್ಕಾರದವರೇನಾದರೂ ಸಹಾಯ ನೀಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಅವರು ಮೊದಲು ಅದನ್ನು ಸ್ಥಾಪನೆ ಮಾಡಿಕೊಳ್ಳಲಿ; ಅನಂತರ ಅವರ ಧ್ಯೇಯವೇನೆಂಬುದನ್ನು ತಿಳಿಸಲಿ; ಅನಂತರ ನೋಡೋಣ. ಆದರೆ ಇಂಥಾದ್ದನ್ನೆಲ್ಲಾ ಖಾಸಗಿಯವರೇ ನಡೆಸಿಕೊಂಡು ಹೋಗುವುದು ಒಳ್ಳೆಯದು.

ಶ್ರೀ ಜಿ. ಶಿವಪ್ಪ.—ಈ ಅನೇಕ ಸಂಸ್ಥೆಗಳು ಯಾವತ್ತು ಈ ಗೃಹಕೈಗಾರಿಕೆಗೆ ಪರಿವರ್ತನೆ ಮಾಡಿಕೊಂಡವು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅನೇಕ ದಿವಸಗಳ ಹಿಂದಿನಿಂದಲೂ ಈ ಸಣ್ಣಪುಟ್ಟ ಕೈಗಾರಿಕೆಗಳನ್ನು ನಡೆಸಿಕೊಂಡು ಅವುಗಳ ಮೂಲಕ ತಮ್ಮ ದುಡಿಮೆಯನ್ನು ಜನರು ಮಾಡಿಕೊಳ್ಳಲು ಸಹಾಯ ನೀಡುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಕೆಲವು ಸಂಸ್ಥೆಗಳಿಗೆ 250 ರೂಪಾಯಿಗಳವರೆಗೂ ಗ್ರ್ಯಾಂಟನ್ನು ಕೊಟ್ಟು ಇನ್ನು ಕೆಲವು ಸಂಸ್ಥೆಗಳಿಗೆ ತೀರ ಕಡಮೆ ಮೊಬಲಗನ್ನು ಎಂದರೆ ಕೇವಲ 25 ರೂಪಾಯಿಗಳನ್ನು ಕೊಟ್ಟಿದ್ದೀರಿ. ಹೀಗೆ ವ್ಯತ್ಯಾಸ ಮಾಡಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಕೈಗಾರಿಕೆಯ ಪ್ರಮಾಣದ ಮೇಲೆ ಇದು ಹೋಗತಕ್ಕದ್ದಾಗಿದೆ.

ಶ್ರೀ ವಿ. ಆರ್. ನಾಯ್ಡು.—ತಾವು ಹೀಗೆ ಮೊಬಲಗನ್ನು ಕೊಡಬೇಕಾಗಿದ್ದರೆ ಆಯಾ ಸಮಾಜದ ಸೇವಕರನ್ನು ನೋಡಿ ಈ ಸಹಾಯ ನೀಡುತ್ತಿದ್ದೀರೋ ಅಥವಾ ಆ ಸಂಸ್ಥೆಯ ಕೆಲಸ ಕಾರ್ಯಗಳನ್ನು ನೋಡಿ ಸಹಾಯ ನೀಡುತ್ತಿದ್ದೀರೋ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ.

ಶ್ರೀ ವಿ. ಆರ್. ನಾಯ್ಡು.—ಆ ಶ್ರೀಮತಿ ಫಾರ್ವತಮ್ಮನವರು ಬಹಳ ಉತ್ತಮವಾದ ಸಮಾಜ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ನೂರಾರು ಅನಾಥ ಶಿಶುಗಳನ್ನು ಕಾಪಾಡುತ್ತಿದ್ದಾರೆ. ಅಂಥ ಉತ್ತಮ ಸೇವೆ ಸಲ್ಲಿಸತಕ್ಕ ಸಂಸ್ಥೆಗೆ ಈ 25 ರೂಪಾಯಿಗಳ ಸಹಾಯ ಬಹಳ ಕಡಮೆ ಆಗಲಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಯಾರೆಂಬುದೇ ನನಗೆ ಗೊತ್ತಿಲ್ಲ.

ಶ್ರೀ ವಿ. ಆರ್. ನಾಯ್ಡು.—ತಮ್ಮ ಅಪೆಂಡಿಕ್ಸ್‌ನಲ್ಲಿರುವ 14ನೇ ಜಂಜರ್ ನಂಬರಿನಲ್ಲಿ ಸೂಚಿಸಿರತಕ್ಕ Anatha Sishu Seva Ashrama, Wilson Gardens, Bangalore, ಈ ಸಂಸ್ಥೆಗೆ ಈಗ ತಾವು ಕೊಡುತ್ತಿರುವ 25 ರೂಪಾಯಿಗಳ ದ್ರವ್ಯ ಸಹಾಯ ಬಹಳ ಕಡಮೆಯಾಗಲಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ತಮ್ಮ ಅಭಿಪ್ರಾಯದ ಮಾತು.

ಶ್ರೀ ಜಿ. ಬಸಪ್ಪ.—ಸಂಸ್ಥಾನದಲ್ಲಿ ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಗೃಹಕೈಗಾರಿಕೆಗಳಿಗೆ ಉತ್ತೇಜನ ಕೊಡಲು ಅವಕಾಶವಿರುತ್ತದೆಂಬುದನ್ನು ತಿಳಿದುಕೊಳ್ಳಲು ತಾವು ಏನಾದರೂ ಸರ್ವೆ ನಡೆಸಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಬಗ್ಗೆ ಎಲ್ಲ ಅಂಕಿ ಅಂಶಗಳನ್ನೂ ಶೇಖರಣೆ ಮಾಡುತ್ತಿದ್ದೇವೆಂದು ಆಗಲೇ ತಿಳಿಸಿದ್ದೇನೆ.

New Sugar Factories.

Q.—493. Sri T. N. MUDALAGIRI GOWDA (Kunigal).—

Will the Government be pleased to state:—

(*a*) the places where they have thought of opening new sugar factories;

(*b*) whether they have considered opening a sugar factory in Kunigal or in Kunigal Taluk and whether it has been examined;

(*c*) whether nearly about twenty thousand acres are not being cultivated under Kunigal, Begur, Kothagere, Markonahalli, Amruthur, Deepambudhikere and other big tanks and also under the big tanks of Tumkur South Taluk;

(*d*) whether sugarcane is not being grown already in about two thousand acres of the above lands;

(*e*) whether they are aware that the raiyats in these parts are suffering heavy losses due to their not getting proper price from sugarcane cultivation?

A.—Sri H. M. CHANNABASAPPA (Minister for Industries).—

(*a*) The following places are under consideration:—

1 Gauribidanur.
2 Harihar.
3 Kodaganur—Chitaldrug District.
4 Tarikere—Bhadravati area.

(*b*) Yes.

(*c*) About 16,500 acres under big tanks and about 2,000 acres under minor tanks are stated to be under cultivation.

(*d*) In about 1,200 acres.

(*e*) No.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ತಾವು ಉತ್ತರ ಕೊಟ್ಟಿರತಕ್ಕದ್ದನ್ನು ನೋಡಿದರೆ ಈ (ಎ) ಮತ್ತು (ಬಿ) ಪ್ರಶ್ನೆಗಳೆರಡಕ್ಕೂ (ಎ) ಪ್ರಶ್ನೆಯ ಉತ್ತರವನ್ನೇ ಕೊಡಬಹುದಾಗಿತ್ತು. ಆ ರೀತಿ ತಾವು ಈ ಎರಡನ್ನೂ ಏಕೆ ಸೇರಿಸಲಿಲ್ಲ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ (ಎ) ಪ್ರಶ್ನೆ "ಎಲ್ಲೆಲ್ಲಿ ಪ್ರಾರಂಭಿಸಲು ಆಲೋಚಿಸುತ್ತಿದ್ದೀರಿ" ಎಂದಿರುವುದಕ್ಕೆ ಅದಕ್ಕೆ ತಕ್ಕ ಉತ್ತರವನ್ನು (ಎ)ಗೆ ಒದಗಿಸಿದೆ. ಇನ್ನು (ಬಿ) ಭಾಗದ ಪ್ರಶ್ನೆ ಇರುವುದು

(ಶ್ರೀ ಎಚ್. ಎಂ. ಚನ್ನಬಸಪ್ಪ.)

"ಕುಣಿಗಲಲ್ಲಿ ಒಂದು ಸರ್ಕಾರದ ಕಾರ್ಖಾನೆ ತೆರೆಯುವ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡಿದ್ದಾರೆಯೇ" ಎಂದು ಕೇಳಿರುವುದಕ್ಕೆ 'ಮಾಡಿದೆ' ಎಂಬ ಉತ್ತರ ಕೊಟ್ಟಿದೆ.

ಶ್ರೀ ಟಿ. ಎನ್. ಮುದಲಗಿರಿಗೌಡ.—(ಎ) ಪ್ರಶ್ನೆಗೆ ನಾಲ್ಕು ಸ್ಥಳಗಳನ್ನು ಹೇಳಿದ್ದಾರೆ. ಆದರೆ (ಬಿ) ಪ್ರಶ್ನೆಗೂ ಸಹ 'Yes' ಎಂದು ಹೇಳಿದ್ದಾರೆ. ಇದರಲ್ಲೇನು ವ್ಯತ್ಯಾಸವಿದೆ ಈ ಎರಡು ಉತ್ತರಕ್ಕೂ?

Mr. SPEAKER.—'Yes' means they have considered that matter.

ಶ್ರೀ ಟಿ. ಎನ್. ಮುದಲಗಿರಿಗೌಡ.—ಒಂದು ಪ್ರದೇಶದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬೇಕಾಗಿದ್ದರೆ ಸಾಮಾನ್ಯವಾಗಿ ಎಷ್ಟು ಎಕರೆಗಳಲ್ಲಿ ಅಲ್ಲಿ ಕಬ್ಬಿನ ಬೆಳೆ ಬೆಳೆಯಬೇಕಾಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ 15-16 ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಕಬ್ಬಿನ ಬೆಳೆ ಇರಬೇಕಾಗುತ್ತದೆ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಕಬ್ಬನ್ನು ಕ್ರಷ್ ಮಾಡತಕ್ಕ ಯಂತ್ರಗಳಲ್ಲಿ ದೊಡ್ಡ ಪ್ಲಾಂಟ್ ಮತ್ತು ಚಿಕ್ಕ ಪ್ಲಾಂಟ್ಸ್ ಎಂದು ಇದೆಯಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡೂ ಇವೆ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಬೊಂಬಾಯಿ ಪ್ರಾಂತ್ಯದಲ್ಲಿ ಇಂಥ ಚಿಕ್ಕ ಚಿಕ್ಕ ಪ್ಲಾಂಟುಗಳನ್ನೇ ಹಾಕುತ್ತಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇರಬಹುದು. ಅದು ಅವರವರ ಇಷ್ಟಕ್ಕೆ ಸಂಬಂಧಪಟ್ಟ ವಿಷಯ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಈ ಚಿಕ್ಕ ಪ್ಲಾಂಟುಗಳು ಕ್ರಷ್ ಮಾಡತಕ್ಕ ಕಬ್ಬಿನ ಪ್ರಮಾಣವೆಷ್ಟು?

ಶ್ರೀ ಎಚ್. ಎಂ. ಚನ್ನಬಸಪ್ಪ.—500-600 ಟನ್ ಇರಬಹುದು.

ಶ್ರೀ ಟಿ. ಎಂ. ಮುದಲಗಿರಿಗೌಡ.—ಇಷ್ಟಕ್ಕೆ ಕಬ್ಬು ಬೆಳೆಯುವ ಪ್ರದೇಶ ಮೂರು-ನಾಲ್ಕು ಸಾವಿರ ಎಕರೆಗಳಾದರೆ ಸಾಲದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಷ್ಟು ಕಡಮೆ ಪ್ರಮಾಣದಲ್ಲಿ ಬೆಳೆಯತಕ್ಕವರೆಲ್ಲಾ ಹಂಗಾಮಿ ಸಾಗುವಳಿದಾರರಾಗಿರುತ್ತಾರೆ. ಆದರೆ 15-16 ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಕಬ್ಬನ್ನು ಬೆಳೆಯಬೇಕಾದದ್ದು ಅಗತ್ಯವೆಂದು ಪರಿಣಿತರ ಅಭಿಪ್ರಾಯ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಕುಣಿಗಲು ತಾಲ್ಲೂಕಿನಲ್ಲಿ ಕಬ್ಬಿನ ಬೆಳೆ ಆಗುತ್ತಿರುವ ಪ್ರದೇಶವೆಲ್ಲಾ ಕೇವಲ 16 ಸಾವಿರ ಎಕರೆಗಳು ಎಂದು ಹೇಳಿದ್ದೀರಿ. ಈ ತಾಲ್ಲೂಕಿನಲ್ಲಿ ಅನೇಕ ದೊಡ್ಡ ದೊಡ್ಡ ಕೆರೆಗಳಿರುತ್ತವೆ. ಆ ಮಾರ್ಕೋನಹಳ್ಳಿ ಕೆರೆ ಹಿಂದೆ ಒಂದು ಕಡೆಯಲ್ಲೇ ಸುಮಾರು 15-16 ಸಾವಿರ ಎಕರೆಗಳಲ್ಲಿ ಕಬ್ಬನ್ನು ಬೆಳೆಯುತ್ತಿದ್ದಾರೆ. ಆದುದರಿಂದ ಈ ತಮ್ಮ ಅಂಕಿ ಅಂಶಗಳು ಸರಿಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಅಂಕಿ ಅಂಶಗಳನ್ನೆಲ್ಲಾ ನಾವು ಸರಿಯಾಗಿ ಲಿಸ್ಟ್ ಮಾಡಿ ಇಟ್ಟುಕೊಂಡಿದ್ದೇವೆ. ನಮಗೆ ನಮ್ಮಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಮೈನರ್ ಕೆರೆಗಳಿವೆ, ಎಷ್ಟೆಷ್ಟು ಮೇಜರ್ ಕೆರೆಗಳಿವೆ, ಏನೇನು ಬೆಳೆ ಬೆಳೆಯುತ್ತಾರೆಂಬ ವಿವರಗಳೆಲ್ಲಾ ಇವೆ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಈ ತುಮಕೂರು-ಬೆಂಗಳೂರು ಪ್ರಾಂತ್ಯಕ್ಕೆಲ್ಲ ಆ ಕುಣಿಗಲೇ ಬೆಲ್ಲಕ್ಕೆ ಪ್ರಸಿದ್ಧಿ ಹೊಂದಿದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇರಬಹುದು.

ಶ್ರೀ ಟಿ. ಎನ್. ಮುದಲಗಿರಿಗೌಡ.—ಆ ಕಬ್ಬಿನ ಬೆಳೆಯನ್ನು ಯಾರು ಈ ದಿವಸ ಕುಣಿಗಲ್ ತಾಲ್ಲೂಕಿನಲ್ಲಿ ವಿಶೇಷವಾಗಿ ಬೆಳೆಯುತ್ತಿದ್ದಾರೋ ಅವರಿಗೀಗ ವಿಶೇಷ ನಷ್ಟವಾಗುತ್ತಿರುವುದೂ ಸರಿಯಾದ ಧಾರಣೆ ಸಿಕ್ಕದೆ ಇರುವುದೂ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಥ ಲುಕ್ಸಾನಾಗತಕ್ಕ ಬೆಳೆಯನ್ನು ಅವರು ಬಿಟ್ಟು ಬಿಡಲಿ. ಯಾರೂ ಅವರಿಗೆ ನಿರ್ಬಂಧ ಮಾಡಿಲ್ಲ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಅವರಿಗೆ ಸರಿಯಾದ ಧಾರಣೆ ಸಿಕ್ಕದೆ ಲುಕ್ಸಾನಾದರೆ ತಾವೇನಾದರೂ ಕೊಡಿಸಿ ಕೊಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನಾಗಲೇ ಉತ್ತರ ಹೇಳಿದ್ದೇನೆ. ಆ ರೀತಿ ಲುಕ್ಸಾನನ್ನು ಕೊಡಿಸಿ ಕೊಡಲು ನಮ್ಮಲ್ಲಿ ಯಾವ ಕಾನೂನೂ ಜಾರಿಯಲ್ಲಿಲ್ಲ. ಅವರಿಗೆ ಹಾಗೆ ನಷ್ಟ ಉಂಟಾಗುವ ಪಕ್ಷಕ್ಕೆ ಅವರು ಆ ಬೆಳೆಯನ್ನು ಕೈಬಿಟ್ಟುಬಿಡಲಿ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಆ ಪ್ರದೇಶದಲ್ಲಿ ಜನರು ಭತ್ತದ ಬೆಳೆಯನ್ನು ಬೆಳೆಯುತ್ತಿದ್ದಾರೆ, ಕಬ್ಬಿನ ಬೆಳೆಯನ್ನು ಬೆಳೆಯುತ್ತಿದ್ದಾರೆ. ಆದರೆ ಹಾಗೆ ರೈತರು ಆಸೆಪಟ್ಟು ಬೆಳೆಯತಕ್ಕಂಥ ಬೆಳೆಯನ್ನು ಯಾರೇ ಆಗಲಿ ತುಂಡು ಮಾಡುವುದಕ್ಕಾಗುವುದಿಲ್ಲ. ಅಲ್ಲವೇ?

Sri H. M. CHANNABASAPPA.—I wish to submit that in that area for the 16,500 acres, water is available only for paddy cultivation and for sugar cultivation there has got to be perennial water supply and perennial water supply is not available. Otherwise, Government will be happy to think of starting a sugar factory there.

ಶ್ರೀ ಟಿ. ಎನ್. ಮುದಲಗಿರಿಗೌಡ.—ಅಲ್ಲಿ ಯಾವತ್ತೂ ಈ ಬೆಳೆಗಳು ಒಣಗಿಲ್ಲ. ಹಾಗೆ ಯಾವಾಗಲಾದರೂ ನೀರು ಸಾಲದೆ ಬೆಳೆಗಳು ಒಣಗಿಹೋಗಿರುತ್ತವೆ ಏನು ಎಂಬ ವಿಚಾರದಲ್ಲಿ ತಾವು ಏನಾದರೂ ಪರಿಶೀಲನೆ ಮಾಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದ್ದೇವೆ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಹಾಗಾದರೆ ಅಲ್ಲಿ ಯಾವ ವರ್ಷದಲ್ಲಾಗಲಿ ಹಾಗೆ ಬೆಳೆಗಳೇನಾದರೂ ಒಣಗಿರುತ್ತವೆಂಬ ವಿಚಾರ ವರದಿಯಾಗಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ. ಹಾಗೆ ನೂರಾರು ವರ್ಷಗಳತನಕ ನೀರನ್ನು ಒದಗಿಸತಕ್ಕಂಥ ಸೌಲಭ್ಯ ಅಲ್ಲಿರುವುದಿಲ್ಲವೆಂದು ತಿಳಿದುಬಂದಿದೆ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಕಬ್ಬಿನ ಬೆಳೆಗೆ ಹೆಚ್ಚು ನೀರು ಬೇಕೋ, ಬತ್ತದ ಬೆಳೆಗೆ ಹೆಚ್ಚು ನೀರು ಬೇಕೋ ಸ್ವಾಮಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನೀರಿನ ಪ್ರಮಾಣದ ಮೇಲೆ ಹೋಗುವುದಿಲ್ಲ. ನೀರು 12 ತಿಂಗಳೂ ಕೂಡ available ಆಗಿರಬೇಕು, ಅದರ ಮೇಲೆ ಹೋಗುತ್ತದೆ.

ಶ್ರೀ ಟಿ. ಎಲ್. ಮೂಡಲಗಿರಿಗೌಡ.—ಕಬ್ಬನ್ನು ಬೆಳೆಯುವುದಕ್ಕಾಗಿ ರೈತರಿಗೆ ಜಮೀನನ್ನು ಕೊಟ್ಟಿದ್ದೀರಿ. ಹೆಚ್ಚು ಪ್ರಯೋಜನವಿಲ್ಲ. ಸರಿಯಾದ ರಿಟರ್ನ್ಸ್ ಬರುತ್ತಾ ಇಲ್ಲ. ಅದಕ್ಕೋಸ್ಕರವೇ ಹೆಚ್ಚಾಗಿ ಕಬ್ಬನ್ನು ಹಾಕುತ್ತ ಇಲ್ಲ. 10–15 ಸಾವಿರ ಎಕರೆ ಕಬ್ಬನ್ನು ಹಾಕತಕ್ಕ ರೈತರು ಇದ್ದಾರೆ. ಅದಕ್ಕೇ ಒಂದು small sugar plantನ ಸೌಲಭ್ಯ ಕಲ್ಪಿಸುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡು-ಮೂರು ಸಾವಿರ ಎಕರೆಗಳಲ್ಲಿ ಬೆಳೆಯತಕ್ಕ ರೈತರೂ ಇದ್ದಾರೆ. ಒಂದು ಕೈಗಾರಿಕಾ ಪ್ಲಾಂಟನ್ನು ಹಾಕಬೇಕಾದ್ದರೆ ಅದಕ್ಕೆ ತಕ್ಕ ರಿಟರ್ನ್ಸ್ ಬರುವುದಿಲ್ಲ. ಅದೂ ಅಲ್ಲದೆ ಅಲ್ಲಿನ ಜನಗಳೂ ಸಹ ಅದಕ್ಕೆ ಮುಂದೆ ಬರುವುದಿಲ್ಲ.

ಶ್ರೀ ಟಿ. ಎಲ್. ಮೂಡಲಗಿರಿಗೌಡ.—ಈ ಸಂಬಂಧದಲ್ಲಿ ತಾವು ಒಂದು ಸರ್ವೇ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಕಮಿಟಿಯನ್ನು ಏರ್ಪಾಡು ಮಾಡಿ ತಮ್ಮ ಪ್ರಶ್ನೆಯನ್ನು ಕೂಡ ಕೂಲಂಕಷವಾಗಿ ಪರಿಶೀಲನೆ ಮಾಡಿದ್ದೇವೆ. ಒಂದು ವೇಳೆ ತಾವು ಹೇಳುವ ಹಾಗೆ 15 ಸಾವಿರ ಎಕರೆಗಳಿಗೂ ನೀರು ಸರಬರಾಯಿ ಆಗಿ ಹೆಚ್ಚು ಉತ್ಪನ್ನ ಆಗಿ, ಸಹಾಯವಾಗುತ್ತದೆ ಎಂದು ಕಂಡುಬಂದರೆ ಆಗತ್ಯವಾಗಿ ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಎಲ್. ಮೂಡಲಗಿರಿಗೌಡ.—ತಾವು ಪರಿಶೀಲನೆ ಮಾಡಿದ್ದು ಸಾರ್ವಜನಿಕರು ಯಾರಿಗೂ ಗೊತ್ತಿಲ್ಲ ಎಂದು ಹೇಳುತ್ತೇನೆ. ಅದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರ ಮಾಡತಕ್ಕ ಎಲ್ಲ ವಿಷಯವೂ ಕೂಡ ಸಾರ್ವಜನಿಕರಿಗೆ ಗೊತ್ತಾಗುವುದಿಲ್ಲ.

ಶ್ರೀ ಟಿ. ಎಲ್. ಮೂಡಲಗಿರಿಗೌಡ.—ಇಂಥ ಪ್ರಾಮುಖ್ಯವಾದ ವಿಷಯವನ್ನು ಸಾರ್ವಜನಿಕರನ್ನಿಟ್ಟುಕೊಂಡು ತನಿಖೆ ಮಾಡಬೇಕಾದದ್ದು ಮುಖ್ಯವಲ್ಲವೇ ?

Mr. SPEAKER.—The Hon'ble Member must give chance to the Hon'ble Member for Huliyurdurga.

ಶ್ರೀ ಎಲ್. ಹುಚ್ಚಮಾಸ್ತಿಗೌಡ.—ಒಟ್ಟು ಈ ಪ್ರಶ್ನೆಯನ್ನೇ ಎಂದರೆ ಷುಗರ್ ಪ್ಲಾಂಟ್ ಹಾಕುವುದಕ್ಕೆ ಎಷ್ಟು ಎಕರೆ ಇದೆ, ಅಷ್ಟು ಎಕರೆಗೂ ನೀರು ಒದಗಿಸುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡಿಸುತ್ತೀರಾ ?

Sri H. M. CHANNABASAPPA.—Absolutely no objection to go into the matter again and if it is revealed from facts that there is a possibility of starting a sugar factory Government would be too happy.

ಶ್ರೀ ಎಲ್. ಹುಚ್ಚಮಾಸ್ತಿಗೌಡ.—ಈ ಬೆಳೆ, ಆದಾಯದಾಯಕವಾಗಿಲ್ಲದೇ ಇದ್ದರೆ, ಇದನ್ನು ಬಿಟ್ಟೇಬಿಡಬೇಕೆಂದು ಮಾನ್ಯ ಮಂತ್ರಿಗಳು ಹೇಳಿದರು. ಹಾಗಾದರೆ ಬಡ್ಜೆಟ್ ಡಿಫಿಸಿಟ್ ಆದಾಗ ವರ್ಷವೆಲ್ಲಾ ಸಂಬಳ ತೆಗೆದುಕೊಳ್ಳುವುದನ್ನು ಅವರು ಬಿಟ್ಟುಬಿಡುತ್ತಾರೆಯೋ ?

(No answer.)

Sri M. LINGANNA.—May I know whether the people of Nanjangud Taluk and round about approached the Minister for Industries during his tour that a sugar factory be established there ?

Sri H. M. CHANNABASAPPA.—It has been ruled out already.

Sri M. LINGANNA.—May I know the reasons ?

Sri H. M. CHANNABASAPPA.—For some reason.

Sri M. LINGANNA.—Has it come to the notice of the Government that Nugu will supply water for 22,000 acres ?

Sri H. M. CHANNABASAPPA.—Even Nugu water will be supplied during the seasons only.

Sri M. LINGANNA.—Will the water from Kabini reservoir be made use of ?

Sri H. M. CHANNABASAPPA.—It is meant for a different purpose and so we cannot make use of it.

Sri M. LINGANNA.—If Shimsha is not going to be taken up, the reservoir of Kabini can be made use of for this purpose ?

(No answer).

ಶ್ರೀ ಬಿ. ರಾಚಯ್ಯ.—ಟಿ. ನರಸೀಪುರ ತಾಲ್ಲೂಕು ಬನ್ನೂರು ಹೋಬಳಿಯ ರೈತರು ಅಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಮನವಿ ಮಾಡಿಕೊಂಡಿದ್ದಾರೆಯೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮನವಿ ಮಾಡಿಕೊಂಡಿದ್ದರು. ಅದನ್ನು ಕೂಡ ಪರಿಶೀಲನೆ ಮಾಡಿ, ಅದೂ ಕೂಡ ಸಾಧ್ಯವಿಲ್ಲ ಎಂದು rule out ಮಾಡಿದ್ದಾರೆ. ಅದನ್ನು ಕೂಡ ಮಂಡ್ಯ ಫ್ಯಾಕ್ಟರಿಗೇ ಸೇರಿಸಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ.

Sri M. PALANIYAPPAN.—What is the total amount of sugar consumption in the State ?

Sri H. M. CHANNABASAPPA.—Figures are not before me.

Sri M. PALANIYAPPAN.—I would like to know from the Government the number of licences issued and the total amount of sugar that is produced in all these factories in the State ?

Sri H. M. CHANNABASAPPA.—We need not issue licence. The Licensing Committee issues licence.

Sri M. PALANIYAPPAN.—Is it the State Government or the Central Government that issues licence?

Sri H. M. CHANNABASAPPA.—There is a committee called Licensing Committee appointed by the Government of India and that committee issues licence. And Mysore also has its representative there.

Sri M. PALANIYAPPAN.—Are the Government willing to give private individuals licence to start sugar factory?

Sri H. M. CHANNABASAPPA.—If all the conditions set forth are fulfilled and if the place admits of development of sugar industry, we will consider.

Kembalalu and other Tanks (Restoration).

*Q.—494. Sri T. N. MUDALAGIRI GOWDA (Kunigal).—

Will the Government be pleased to state :—

(a) whether under tanks, bridges and road works provided for in the Budget for 1955-56, the restoration works of Kembalalu tank, Kanakuppe tank, Nagavalli Amani tank, Jodi Mullukunte tank, Jodi Hullenahalli tank of Tumkur Taluk are included to be taken up;

(b) the action taken in that behalf?

A.—Sri H. M. CHANNABASAPPA (Minister for Industries).—

(a) Yes.

(b) *Vide* statement 'A' appended.

STATEMENT 'A'

(a) (i) 1. *Kembalalu Tank.*—

An estimate for Rs. 50,000 for restoring the Tank by raising the waste weir by one foot is got up. The proposals involve submersion of valuable wet lands of Nagavalli Amanikere situated above. The project is being further examined.

2. *Kanakuppe Tank.*—

An estimate for Rs. 63,000 for the work is got up. A fresh enquiry is ordered to be held as per provisions of the Irrigation Act. Whether the lower tanks will be affected by increasing the capacity of this tank has also to be examined. This has been referred to the Assistant Engineers of Tumkur and Gubbi and reports are awaited thereon.

3. *Nagavalli Amanikere.*

The provision made in the budget is for the work of improving the distributary system of the tank in question for which an estimate for Rs. 27,000 has been sanctioned. Tenders for the work are accepted and work arranged to be started.

4. *Jodimullukunte Tank.*—

A project of Rs. 90,000 is prepared for restoring the tank. The estimate is under scrutiny.

5. *Jodi Hullenahally Tank.*

The project for Rs. 63,700 is prepared for restoring the tank. This has been returned to Superintending Engineer for forwarding the project in a complete manner with a fresh plan.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈ ಜೋಡಿ ಮುಳುಕುಂಟೆ ಕೆರೆಗೆ ಎಸ್ಟಿಮೇಟ್ ಆಗಿ ಅದು ಹದಿನೈದು ವರ್ಷಗಳಿಂದ ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಓಡಾಡುತ್ತಾ ಇದೆ, ಅದನ್ನು ಜಾಗ್ರತೆ ಕೈಕೊಳ್ಳುತ್ತೀರಾ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಈ ಕೆರೆಗಳ ವಿಷಯ ಅನೇಕ ಬಾರಿ ಪ್ರಸ್ತಾಪ ಮಾಡಿದ್ದೀರಿ. ಈ ಕೆರೆಗಳಿಗೆ ಅಗತ್ಯವಾದ ಕಾರ್ಯಕ್ರಮವನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತೇನೆ.

Sri B. MADHAVACHAR.—I will put the question No. 18, Sir.

Sri H. M. CHANNABASAPPA.—I would submit that this question may be taken up for answers tomorrow, Sir.

Mr. SPEAKER.—Yes. All right.

Kodihalli Plantation, Arasikere Taluk.

Q.—87. Sri B. CHIKKANNA (Javagal).—

Will the Government be pleased to state:—

(*a*) the area of the Government plantation situated near Kodihalli, Kellangere Firka, Kasaba Hobli, Arsikere Taluk;

(*b*) the expenditure incurred every year for growing the plants there and also the annual income;

(*c*) whether the landless ryots of the villages round about have asked for the grant of the said land for cultivation; if so, the decision arrived at by the Government in the matter?

A.—Dr. R. NAGAN GOWDA (Minister for Agriculture).—

(*a*) The total area of the Kodihalli plantation is 55 acres and 30 guntas.

(*b*)—

Expenditure

From 1947 to 1956 Rs. 180-0-0.

Annual Income

From 1915 to 1949 Rs. 3,358-1-6.

Year		Rs.	a.	p.
1915-16	...	56	0	0
1916-17	...	61	0	0
1917-18	...	90	0	0
1918-19	...	95	0	0
1919-20	...	95	0	0
1920-21	...	80	0	0
1921-22	...	217	6	6
1922-23	...	230	0	0
1923-24	...	190	0	0
1924-25	...	250	0	0
1925-26	...	nil		
1926-27	...	96	8	0
1927-28	...	22	0	0
1928-29	...	nil		
1929-30	...	90	0	0
1930-31	...	95	0	0
1931-32	...	86	4	0
1932-33	...	89	8	0
1933-34	...	67	8	0
1934-35	...	55	0	0
1935-36	...	40	0	0
1936-37	...	50	0	0
1937-38	...	48	8	0
1938-39	...	40	0	0
1939-40	...	48	0	0
1940-41	...	4	14	0
1941-42	...	97	0	0
1942-43	...	53	9	0
1943-44	...	203	0	0
			grass	
1945-46	...	125	0	0
1946-47	...	212	0	0
1947-48	...	250	0	0
1948-49	...	220	0	0
Total	...	3,358	1	6

(*c*) Since July 1953 no representations are received.

ಶ್ರೀ ಬಿ. ಚಿಕ್ಕಣ್ಣ.—ಈ ವರಮಾನ ಯಾವಯಾವ ಬಾಬಿನಲ್ಲಿ ಬಂದಿದೆ?

*ಡಾ॥ ಆರ್. ನಾಗನಗೌಡ.—ಈ ವರಮಾನ ಮುಖ್ಯವಾಗಿ ಕಡೆಯ ನಾಲ್ಕು ವರ್ಷಗಳಲ್ಲಿ ಕೊಟ್ಟಿರುವುದು ಗ್ರೇಸಿಂಗ್‌ನಿಂದ ಬಂದಿದೆ.

ಶ್ರೀ ಬಿ. ಚಿಕ್ಕಣ್ಣ.—1949 ರಿಂದ ವರಮಾನ ಇಲ್ಲ ಎಂದು ಇಲ್ಲಿ ಹೇಳಿದೆ, ಇದಕ್ಕೆ ಕಾರಣವೇನು?

ಡಾ॥ ಆರ್. ನಾಗನಗೌಡ.—1949 ರಲ್ಲಿ ಸ್ವಾತಂತ್ರ್ಯ ಬಂದು ದನಗಳನ್ನು ಮುಫತ್ತಾಗಿ ಮೇಯಿಸುವುದಕ್ಕೆ ಏರ್ಪಾಡು ಆಗಿದೆ. ಅದಕ್ಕೇ ವರಮಾನ ಬಂದಿಲ್ಲ.

ಶ್ರೀ ಬಿ. ಚಿಕ್ಕಣ್ಣ.—ಫಾರೆಸ್ಟ್ ಇಲಾಖೆಯವರು ಅಲ್ಲಿ ರಾಸಿಗೆ ಐದು ರೂಪಾಯಿಗಳಂತೆ ತೆಗೆದುಕೊಂಡು ಮೇಯಿಸುವುದಕ್ಕೆ ಅವಕಾಶ ಕೊಡುತ್ತಾ ಇದ್ದಾರೆಯಲ್ಲಾ ಅದಕ್ಕೆ ಕಾರಣವೇನು?

ಡಾ॥ ಆರ್. ನಾಗನಗೌಡ.—ಅಂಥಾದ್ದು ನಮ್ಮ ಗಮನಕ್ಕೆ ಬಂದಿಲ್ಲ. ಏನಾದರೂ ಗಮನಕ್ಕೆ ಬಂದರೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ. ಹಾಗೆ ವಸೂಲು ಮಾಡಕೂಡದು.

ಶ್ರೀ ಬಿ. ಚಿಕ್ಕಣ್ಣ.—ಕೋಡಿಹಳ್ಳಿಯಲ್ಲಿ 55 ಎಕರೆ ಪ್ಲಾಂಟೇಷನ್ ಇದೆ. ಅಲ್ಲಿ ದನಗಳನ್ನು ಹೇಗೆ ಮೇಯಿಸಬೇಕು ?

ಡಾ॥ ಆರ್. ನಾಗನಗೌಡ.—ಪ್ಲಾಂಟೇಷನ್‌ನಲ್ಲಿ ಮೇಯಿಸುವುದಕ್ಕೆ ಬಿಡುವುದಿಲ್ಲ.

ಶ್ರೀ ಬಿ. ಚಿಕ್ಕಣ್ಣ.—ಹಾಗಾದರೆ ಅಲ್ಲಿರುವ ಹುಲ್ಲು ಎಲ್ಲಾ ಏನಾಗುತ್ತದೆ ?

ಡಾ॥ ಆರ್. ನಾಗನಗೌಡ.—ಪ್ಲಾಂಟೇಷನ್‌ಅಲ್ಲಿ ಮೇಯಿಸುವುದಕ್ಕೆ ಬಿಟ್ಟರೆ ಪ್ಲಾಂಟೇಷನ್ ಕೆಟ್ಟು ಹೋಗುತ್ತದೆ. ಆ ಫಾರೆಸ್ಟಿನಲ್ಲಿ ಇನ್ನೂ ಇತರ ಭಾಗಗಳು ಇವೆ. ಅಲ್ಲಿ ದನಗಳನ್ನು ಮೇಯಿಸುವುದಕ್ಕೆ ಅವಕಾಶವಿದೆ.

ಶ್ರೀ ಬಿ. ಚಿಕ್ಕಣ್ಣ.—ಅಲ್ಲಿ ಈಗ ಒಂದು ವರ್ಷದಿಂದ ದುಡ್ಡು ತೆಗೆದುಕೊಂಡು ದನಗಳನ್ನು ಮೇಯಿಸುವುದಕ್ಕೆ ಬಿಡುತ್ತಾ ಇದ್ದಾರೆ. ನೀವು ಅಲ್ಲಿ ಮುಫತ್ತಾಗಿ ಮೇಯಿಸುವುದಕ್ಕೆ ಅವಕಾಶ ಕೊಟ್ಟಿದ್ದೆ ಎಂದು ಹೇಳುತ್ತಾ ಇದ್ದೀರಿ. ಇದರ ಜವಾಬ್ದಾರಿ ಯಾರದು ? ಇದನ್ನು ಸರಿಪಡಿಸುವುದು ಹೇಗೆ ?

ಡಾ॥ ಆರ್. ನಾಗನಗೌಡ.—ನಾನು ವಿಚಾರಿಸುತ್ತೇನೆ.

ಶ್ರೀ ಬಿ. ಚಿಕ್ಕಣ್ಣ.—ಆ ರೀತಿ ಮಾಡುತ್ತಾ ಇರುವುದನ್ನು ನಾನೇ ಕಣ್ಣಾರ ಕಂಡು ಹೇಳುತ್ತಾ ಇದ್ದೇನೆ ಸ್ವಾಮಿ.

ಡಾ॥ ಆರ್. ನಾಗನಗೌಡ.—ಆಗಲೂ ತಾವು ಹೇಳಿದ್ದೀರಿ. ನಾನು ಅದನ್ನೂ ವಿಚಾರಿಸುತ್ತೇನೆ.

ಶ್ರೀ ಬಿ. ಚಿಕ್ಕಣ್ಣ.—1953 ರಿಂದ ರೈತರು ಯಾವ ಮನವಿಯನ್ನು ಕಳುಹಿಸಿಲ್ಲ ಎಂದು ಹೇಳುತ್ತೀರಿ. ಕಳುಹಿಸಿದ್ದಾರೆ ಎಂದು ನಾನು ಹೇಳುತ್ತೇನೆ. ಅದಕ್ಕೆ ತಮ್ಮ ಉತ್ತರ ಏನು ?

ಡಾ॥ ಆರ್. ನಾಗನಗೌಡ.—ಸರ್ಕಾರದ ರೆಕಾರ್ಡಿನಲ್ಲಿ ಯಾವ ರೆಪ್ರೆಸೆಂಟೇಷನ್‌ನೂ ಇಲ್ಲವಲ್ಲ !

ಶ್ರೀ ಬಿ. ಚಿಕ್ಕಣ್ಣ.—ಹೋಗಲಿ, ಈಗ ನಾನು ಕೇಳುತ್ತೇನೆ. ಅದನ್ನು ರೈತರಿಗೆ ಕೊಡುವುದಕ್ಕೆ ತಯಾರಾಗಿದ್ದೀರಾ ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರ ಮಾಡೋಣ.

ಶ್ರೀ ಬಿ. ಚಿಕ್ಕಣ್ಣ.—ಈಗ ಅಲ್ಲಿ ಸುತ್ತಮುತ್ತ ಹಳ್ಳಿಯಲ್ಲಿ ಒಂದು ಎಕರೆ ಕೂಡ ಜಮೀನು ಇಲ್ಲದೇ ಇರತಕ್ಕ ಬಡ ರೈತರು ಇದ್ದಾರೆ. ಹಾಲಿ 55 ಎಕರೆ ಪ್ಲಾಂಟೇಷನ್ ಇಟ್ಟುಕೊಂಡು ಅದರಿಂದ ಯಾವ ಉತ್ಪತ್ತಿಯೂ ಸರ್ಕಾರಕ್ಕೆ ಬರುತ್ತಿಲ್ಲ. ಹೀಗಿರಬೇಕಾದರೆ ಬಡ ಬಗ್ಗರಿಗೆ ಅಲ್ಲಿ ಒಂದೊಂದು ಎಕರೆಯನ್ನಾದರೂ ಏಕೆ ಕೊಡಬಾರದು ?

ಅಧ್ಯಕ್ಷರು.—ಈಗ ಇನ್ನೂ ಪ್ಲಾಂಟೇಷನ್ ಹಾಕಿದ್ದಾರೆ. It will begin to give yield only after some years.

ಶ್ರೀ ಬಿ. ಚಿಕ್ಕಣ್ಣ.—ಲಾಂಟಾನ ಬೆಳೆದುಕೊಂಡು ಕೆಲಸಕ್ಕೆ ಬಾರದ ಹಾಗೆ ಆಗಿದೆ. ಅಷ್ಟೇ ಅಲ್ಲದೆ ಅಲ್ಲಿ ಕೋತಿಗಳು ಸೇರಿಕೊಂಡು ರೈತರ ಫಸಲನ್ನು ಹಾಳು ಮಾಡುತ್ತಿವೆ. ಇದರಿಂದ ಅವರಿಗೆ ಪ್ರಯೋಜನವಾದರೂ ಏನು ?

ಡಾ॥ ಆರ್. ನಾಗನಗೌಡ.—ಈಗ ಫಾರೆಸ್ಟ್ ರಿಲೀಸ್ ಮಾಡುವುದು, ಸರ್ಕಾರದ ಒಂದು ದೊಡ್ಡ ಪಾಲಿಸಿ ಆಗಿ ಅದರ ಮೇಲೆ ಅವಲಂಬಿಸಿದೆ. ಯಾವ ಫಾರೆಸ್ಟ್‌ನ್ನೂ ರಿಲೀಸ್ ಮಾಡಬೇಕೆಂದು ಅಂದುಕೊಂಡಿಲ್ಲ.

12-30 P.M.

ಶ್ರೀ ಬಿ. ಚಿಕ್ಕಣ್ಣ.—ಅರಣ್ಯವನ್ನು ಬೆಳೆಸಬೇಕಾದರೆ ಕಾಡುಗಳು ಎಲ್ಲೆಲ್ಲಿವೆಯೋ ಅಲ್ಲಿ ಬೆಳೆಸಿ ಅಭಿವೃದ್ಧಿ ಮಾಡಿ ಅದರಿಂದ ಬರತಕ್ಕ ಉಪಯೋಗವನ್ನು ಪಡೆಯುವುದು ಒಳ್ಳೆಯದೆ ಅಥವಾ ಹಳ್ಳಿಗಳ ಪಕ್ಕದಲ್ಲಿ ರೈತರಿಗೆ ಅನಾನುಕೂಲ ಮಾಡಿಕೊಂಡು, ಸರ್ಕಾರಕ್ಕೂ ಉಪಯೋಗವಿಲ್ಲದ ಕಾಡನ್ನು ಬೆಳೆಸುವುದು ಒಳ್ಳೆಯದೇ ?

ಡಾ॥ ಆರ್. ನಾಗನಗೌಡ.—ಮೈದಾನ ಪ್ರದೇಶದಲ್ಲಿ ಕಾಡುಗಳಿರಬೇಕೆಂಬುದು ನಮ್ಮ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ನೀತಿ. ಮಲೆನಾಡಿನಲ್ಲಿ ಕಾಡು ಇದ್ದಲ್ಲಿಯೇ ಅಭಿವೃದ್ಧಿ ಮಾಡಬೇಕೆಂದರೆ ಮೈದಾನದಲ್ಲಿ ಕಾಡು ಇಲ್ಲದೆ ಹೋಗುತ್ತದೆ. ಕಾಡುಗಳು ಎಲ್ಲ ಕಡೆಗಳಲ್ಲಿಯೂ ಬೇಕು. ಅದಕ್ಕೋಸ್ಕರವಾಗಿ ಈ ರೀತಿ ಕಾಡುಗಳನ್ನು ಬೆಳೆಸುತ್ತಿದ್ದೇವೆ.

ಶ್ರೀ ಬಿ. ಚಿಕ್ಕಣ್ಣ.—ಹಾಗಾದರೆ ಒಂದು ಮೈಲಿ ದೂರದಲ್ಲಿ ಒಂದು ದೊಡ್ಡ ಕಾಡು, ಎರಡು ಮೈಲಿ ದೂರದಲ್ಲಿ ಅಕ್ಕ ಪಕ್ಕದಲ್ಲಿ ದೊಡ್ಡ ಕಾಡುಗಳು ಇರುವುದರಿಂದ ಅಂಥವನ್ನು ಯಾಕೆ ತೆಗೆಯಬಾರದು ?

ಡಾ॥ ಆರ್. ನಾಗನಗೌಡ.—ತಮಗೆಲ್ಲ ಗೊತ್ತಿದ್ದ ಹಾಗೆ ಈ ಸಭೆಯಲ್ಲಿ ಈ ವಿಷಯ ಅನೇಕ ಸಲ ಚರ್ಚೆಯಾಗಿದೆ. ಈಗ ಪ್ಲಾಂಟೇಷನ್ ಫಾರೆಸ್ಟ್ ನಮ್ಮ ದೇಶದಲ್ಲಿ ಶೇಕಡ 14-15ರಷ್ಟು ಮಾತ್ರವಿದೆ. ಈಗ ಇರುವ ಪ್ಲಾಂಟೇಷನ್‌ಗಳನ್ನೂ ತೆಗೆದರೆ ಇವುಗಳ percentage ಇನ್ನೂ ಕಡಿಮೆಯಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ದೊಡ್ಡ ದೊಡ್ಡ ಅರಣ್ಯಗಳ ಪಕ್ಕದಲ್ಲೇ ಸಣ್ಣ ಸಣ್ಣ ಪ್ಲಾಂಟೇಷನ್‌ಗಳೂ ಇವೆಯೆಂದು ತಿಳಿಸಿದಿರಿ. ದೊಡ್ಡ ಅರಣ್ಯಗಳ ಪಕ್ಕದಲ್ಲಿ ಮರಿ ಪ್ಲಾಂಟೇಷನ್‌ಗಳು ಯಾಕೆ ?

Dr. R. NAGAN GOWDA.—It is to increase the area of the forest. He knows it.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ವರ್ಷೇವರ್ಷೇ ಖರ್ಚಾಗುವುದು ಎಷ್ಟು ಎಂದು ಕೇಳಿದ್ದಕ್ಕೆ 180 ರೂಪಾಯಿಗಳೆಂದು ಉತ್ತರದಲ್ಲಿ ಕೊಟ್ಟಿದೆ. ಇದು 1947 ರಿಂದ 1956ರ ವರೆಗೆ ಖರ್ಚಾಗಿರುವುದೇ ಅಥವ ವರ್ಷೇವರ್ಷೇ ಖರ್ಚು ಆಗುತ್ತಿರುವುದೇ ?

Dr. R. NAGAN GOWDA.—That is the expenditure incurred over two years, 1954-55 and 1955-56. From 1947 to 1954 there was no expenditure.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ 180 ರೂಪಾಯಿಗಳು ಯಾವಯಾವುದಕ್ಕೆ ಖರ್ಚಾಗಿವೆ ಎಂದು ವಿವರಗಳನ್ನು ಕೊಡುತ್ತೀರಾ ?

Dr. R. NAGAN GOWDA.—I am sorry I do not have that information. I can give it to him afterwards.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ವಾರ್ಷಿಕ ವರಮಾನ ತೋರಿಸುವ ಪಟ್ಟಿಯನ್ನು ಕೊಟ್ಟಿದ್ದೀರಿ. ಈ ವರಮಾನ ಯಾವ ಯಾವ ಬಾಬುಗಳಿಂದ ಬರುತ್ತದೆ ?

ಡಾ॥ ಆರ್. ನಾಗನಗೌಡ.—ಹುಲ್ಲಿನಿಂದ (grass) ಬರುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನೀವು ಹಾಕಿರುವ ಪ್ಲಾಂಟೇಷನ್ನಿನಿಂದ ಯಾವ ವರಮಾನವೂ ಬರುತಿಲ್ಲವೆ ?

ಡಾ|| ಆರ್. ನಾಗನಗೌಡ.—ಈಗ್ಗೆ ಏನೂ ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ಅರಣ್ಯಗಳನ್ನು ವೃದ್ಧಿಪಡಿಸುವುದಕ್ಕೆ ಏನಾದರೂ ಯೋಜನೆ ಮಾಡಿದ್ದೀರಾ ?

ಡಾ|| ಆರ್. ನಾಗನಗೌಡ.—ಅರಣ್ಯಗಳನ್ನು ಅಭಿವೃದ್ಧಿಮಾಡಬೇಕೆಂದು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ 75 ಸಾವಿರ ಎಕರೆಗಳಷ್ಟು afforestation ಮಾಡಬೇಕೆಂದಿದ್ದೇವೆ.

ಶ್ರೀ ಎಸ್. ಸಿದ್ದಪ್ಪ.—ಈಗ ಅರಣ್ಯಗಳನ್ನು ವೃದ್ಧಿಮಾಡದೇ ಹಾಗೆಯೇ ಇಟ್ಟಿರುವುದಕ್ಕೆ ಕಾರಣವೇನು ?

ಡಾ|| ಆರ್. ನಾಗನಗೌಡ.—ಅರಣ್ಯಗಳನ್ನು ವೃದ್ಧಿಮಾಡುತ್ತಲೇ ಇದ್ದೇವೆ.

Afforestation in Maidan Districts.

Q.—290. Sri V. M. MASCARENHAS (St. John's Hill).—

Will the Government be pleased to state :—

(*a*) the afforestation works now being done in Maidan Divisions ;

(*b*) the methods of raising plantations, with costs ;

(*c*) the areas afforested under barren areas ?

A.—Dr. R. NAGAN GOWDA (Minister for Agriculture).—

(*a*) The afforestation works that are now being done in Maidan Districts are as follows :—

Afforestation work done in 1954-55.	Fuel plantation 528 acres.
Afforestation work being done in 1955-56.	Fuel plantation 650 acres.

(*b*) The following methods are being adopted and costs therefor are shown against each :—

		Rs.
1.	Pitting and planting	40 per acre
2.	Trench Mound sowing	21-30 ,,
3.	Strip sowings	15 ,,

(*c*) The afforestation of barren areas is done by the Forest Department under Development Scheme 'Afforestation of Waste Lands' included in the First Five-Year Plan in several maidan areas during 1955-56 is as noted below :—

		1954-55	*1955-56*
		Ac.	*Ac.*
Bangalore District	...	315	578
Tumkur District	...	185	390
Kolar District	...	210	295
Hassan District	...	123	200
Chitaldrug District	...	160	461.5
Bellary District	...	100	172
Total	...	1,096	2,096.5

Sri V. M. MASCARENHAS.—Will the Government be pleased to explain why the afforestation work of 1954-55 and 1955-56 has considerably been reduced in the Maidan Divisions ?

*Dr. R. NAGAN GOWDA.—Sir, you will notice that there is another item called 'afforestation of waste lands' under (c) wherein we have done in 1954-55 over one thousand acres, in the following year we have done 2,000 acres.

Sri V. M. MASCARENHAS.—My question is very simple. Why is it that in the year 1954-55 and 1955-56, it has come down to nearly 50 per cent?

Dr. R. NAGAN GOWDA.—In this period there was a very great scarcity for fuel and so fuel plantations were taken up on a large scale. Later on, we have been concentrating our efforts on afforestation of barren lands.

Sri V. M. MASCARENHAS.—Is it the policy of the Government to give up fuel plantation now ?

Dr. R. NAGAN GOWDA.—No.

Sri V. M. MASCARENHAS.—The very fact that the acreage has been reduced makes me think that the Government is not very keen on fuel plantations but on afforestation of waste lands.

Dr. R. NAGAN GOWDA.—That is the main object of the Forest Department. It is much more important. As I said a little while ago, we are doing it on a very large scale. So far as fuel plantation is concerned, we are doing it to the extent necessary.

Sri V. M. MASCARENHAS.—Under (c), you say a thousand acres of land for the whole State have been afforested. Do you consider this a very remarkable performance of the Forest Department ?

Dr. R. NAGAN GOWDA.—As a matter of fact, in previous years, it was less and we have been increasing it gradually. We have done it to a considerable extent. For instance in 1954-55, it is 1,096 acres whereas in 1949-50 it is 679 acres, in 1950-51 it was 452 acres and in 1951-52, it was 372 acres. But now you will see in 1955-56, we have done, 2,096 acres. I think it is not a poor performance.

Sri V. M. MASCARENHAS.—You were just now pleased to say that you have an ambition of afforesting 75,000 acres of land. Shall I consider it a dream at the rate at which you are now proceeding ?

Dr. R. NAGAN GOWDA.—It is worthwhile to be dreamers once in a while.

Sri V. M. MASCARENHAS.—Unfortunately we are always so.

Dr. R. NAGAN GOWDA.—Sir, dreams sometimes come true also. We have got under the Second Five-Year Plan a large amount of money—about 54 lakhs of rupees and 31 lakhs of rupees set apart for this work. We have four or five lakhs acres of disafforested lands without enough tree-growth ; and it is our hope to afforest all this area in about 15 or 20 years. Now our object was to take up one lakh of acres during the Second Five-Year Plan. But we cannot afford all the money. So we have taken only 75,000 acres.

Sri V. M. MASCARENHAS.—I hope your dream will come true, Sir.

ಶ್ರೀ ವಿ. ಆರ್. ನಾಯ್ಡು.—ಇದರಲ್ಲಿ ನನಗೆ ಒಂದು ಅನುಮಾನ ಬಂದಿದೆ. ಕಾಡುಗಳನ್ನು ಬೆಳೆಸುತ್ತೀರಿ. ಹೀಗೆ ಕಾಡುಗಳನ್ನು ಬೆಳೆಸುವುದರಿಂದ ಕೊನೆಗೆ ಕಾಡು ಮೃಗಗಳಿಗೂ ಸುಖವಿಲ್ಲ, ಮನುಷ್ಯನಿಗೂ ಸುಖ ವಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಕಾಡುಗಳಿದ್ದರೆ ಜನ ರಿಗೆ ಸುಖವಾಗಿರುತ್ತದೆಯಾದುದರಿಂದ artificial ಕಾಡುಗಳನ್ನು ಬೆಳೆಸುವುದಕ್ಕೆ ಸಹಾಯ ಮಾಡು ತ್ತಿದ್ದೇವೆ.

ಶ್ರೀ ವಿ. ಆರ್. ನಾಯ್ಡು.—ಸುಂದರವಾಗಿ ಬೆಳೆ ಯುತ್ತಿರುವ ಕೆಲವು ಕಾಡುಗಳಲ್ಲಿ ಸುಂದರವಾಗಿ ಬೆಳೆ ಯುತ್ತಿದ್ದ ಕಾಡುಪ್ರಾಣಿಗಳಿದ್ದುವು. ಈಗ ಕಾಡನ್ನೆಲ್ಲ ಕಡಿದುಹಾಕುತ್ತಿರುವುದರಿಂದ ನಮಗೆ ಸ್ಥಳವಿಲ್ಲವೆಂದು ಕಾಡುಪ್ರಾಣಿಗಳೆಲ್ಲ ಸಂಬಂಧಪಟ್ಟ ಅರಣ್ಯ ಮಂತ್ರಿಗ ಳಲ್ಲಿ ನಿಯೋಗ ಬಂದಿರುವುದು ನಿಜವೆ ? (ನಗು)

ಶ್ರೀ ವಿ. ಆರ್. ನಾಯ್ಡು.—1954-55ನೇ ಸಾಲಿ ನಲ್ಲಿ 528 ಎಕರೆಗಳಲ್ಲಿ ಸೌದೆಗಿಡಗಳನ್ನೂ, 1955-56ನೇ ಇಸವಿಯಲ್ಲಿ 650 ಎಕರೆಗಳಲ್ಲಿ ಸೌದೆ ಗಿಡಗ ಳನ್ನೂ ಬೆಳೆಸಲಾಗಿದೆ ಎಂದು ಹೇಳಿದ್ದೀರಿ. ಈ ವರ್ಷ 100 ಎಕರೆಗಳ ಕಾಡನ್ನು ಜಾಸ್ತಿಯಾಗಿ ಬೆಳೆಸ ಲಾಗಿದೆಯೇ ?

ಅಧ್ಯಕ್ಷರು.—ಅದರಲ್ಲಿಯೇ ಕೊಟ್ಟಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಒಂದು ವರ್ಷಕ್ಕೆ ಎಷ್ಟು ಕಾಡು ಬೆಳೆಸಿದ ಹಾಗಾಯಿತು ಎಂಬುದನ್ನು ತಿಳಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ನಮಗೆ ಬೇಕಾ ದಷ್ಟು ಹೆಚ್ಚಿಗೆ ಅಲ್ಲಿ ಬೆಳೆಸಿಲ್ಲ. ಮುಂದಿನ ವರ್ಷ ಬಹಳ ಹೆಚ್ಚಿನ ಪ್ರಮಾಣದಲ್ಲಿ ಮಾಡಬೇಕೆಂದಿದ್ದೇವೆ.

Sri M. PALANIYAPPAN.—Sir, may I know the extent of sandalwood cultivation in the year 1954-55 and 1955-56 ?

Mr SPEAKER.—Sandalwood does not come under this.

Sri M. PALANIYAPPAN.—Sir, this question refers to forestation and plantation. It becomes part and parcel of the Forest Department.

Dr. R. NAGAN GOWDA.—All this Sir, is in maidan areas. But Sandalwood plantations are in malnad areas. I have not got figures relating to the sandalwood, Sir.

Sri M. PALANIYAPPAN.—Has it come to the notice of the Government that due to the callousness of the Government in improving the sandalwood afforestation, the Sandal Fa tory is to be closed ?

Dr. R. NAGAN GOWDA.—No. We have got adequate quantity of sandalwood to supply them for one year.

Sri M. PALANIYAPPAN.—May I know the quantity of sandalwood that would be supplied to them every year?

Dr. R. NAGAN GOWDA.—I have not got the exact figure ; but, this year we have twice the quantity they require.

Sri M. PALANIYAPPAN.—For how many years this is enough for the factory ?

Dr. R. NAGAN GOWDA.—Sir, Hon'ble Member is worried about the disease affecting the sandalwood trees. Not only this Government but the Madras Government is also worried about it and steps are taken to eradicate the disease.

ಶ್ರೀ ಆರ್. ಮುನಿಸ್ವಾಮಯ್ಯ.—1954-55 ಮತ್ತು 1955-56ನೆಯ ಸಾಲುಗಳಲ್ಲಿ ಸೌದೆ ಗಿಡ ನೆಡಿಸಿದ್ದೇವೆಂದು ಹೇಳುತ್ತೀರಿ. ಎಷ್ಟು ಎಕರೆಗಳಲ್ಲಿ ಸರಿಯಾಗಿ ಗಿಡ ಬೆಳೆದಿದೆಯೆಂದೇನಾದರೂ ಸರ್ವೆ ಮಾಡಿದ್ದೀರಾ ?

Dr. R. NAGAN GOWDA.—I cannot exactly say what percentage of plants are surveyed.

ಶ್ರೀ ಆರ್. ಮುನಿಸ್ವಾಮಯ್ಯ.—ರೆವಿನ್ಯೂ ಇಲಾಖೆಯವರನ್ನು ಜೊತೆಯಲ್ಲಿ ಕರೆದುಕೊಂಡು ಸರ್ವೆಮಾಡಬೇಡವೆ ?

ಡಾ|| ಆರ್. ನಾಗನಗೌಡ.—ಅವಶ್ಯಕತೆಯಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ರೆವಿನ್ಯೂ ಇಲಾಖೆಯವರನ್ನೂ ಫಾರೆಸ್ಟ್ ಇಲಾಖೆಯವರ ಜೊತೆಯಲ್ಲಿ ಕರೆದುಕೊಂಡು ಹೋದರೆ ಸರಿಯಾದ ಲೆಕ್ಕ, ಅಂಕಿಅಂಶ ಸಿಕ್ಕುವುದೂ ಅಲ್ಲದೆ ಫಾರೆಸ್ಟ್ ರಕ್ಷಣೆಗೂ ಅನುಕೂಲವಾಗಿ ದಕ್ಷತೆಯಿಂದ ಕೆಲಸ ನಡೆಯುವುದಿಲ್ಲವೆ ?

ಡಾ|| ಆರ್. ನಾಗನಗೌಡ.—ಈ ಕೆಲಸಗಳನ್ನೆಲ್ಲಾ ಫಾರೆಸ್ಟ್ ಆಫೀಸರೇ ಮಾಡುತ್ತಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗಿರುವ ಸಿಬ್ಬಂದಿಯಿಂದ ಈಗ ಬೆಳೆಸುತ್ತಿರುವ ಪ್ರಮಾಣಕ್ಕಿಂತ ಹೆಚ್ಚಾಗಿ ಹೆಚ್ಚು ಪ್ರದೇಶದಲ್ಲಿ ಕಾಡು ಬೆಳೆಸುವುದಕ್ಕೆ ಸಾಧ್ಯವಿಲ್ಲವೆ ?

ಡಾ|| ಆರ್. ನಾಗನಗೌಡ.—ಇಲ್ಲ, ಸಿಬ್ಬಂದಿ ಸ್ವಲ್ಪ ಹೆಚ್ಚು ಮಾಡಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚು ಫಾರೆಸ್ಟ್ ಬೆಳೆಸಲು ಅವಕಾಶ ಮಾಡಿದೆಯೆಂದು ಹೇಳಿದೆ. ಅದನ್ನು ಬೆಳೆಸುವುದಕ್ಕೆ ಎಷ್ಟು ಸಿಬ್ಬಂದಿಬೇಕು ? ಅದಕ್ಕೆ ಕಾರ್ಯಕ್ರಮ ಹಾಕಿದೆಯೆ ?

ಡಾ|| ಆರ್. ನಾಗನಗೌಡ.—ಯೋಜನೆಯಲ್ಲೇ ಅದನ್ನು ನಮೂದಿಸಿದೆ. ಅದರಂತೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅದನ್ನು ಬೆಳೆಸಲು ಎಷ್ಟು ದಿವಸಗಳಲ್ಲಿ ಸಿಬ್ಬಂದಿ ನೇಮಿಸಿ ಕೆಲಸ ಪ್ರಾರಂಭ ಮಾಡಲಾಗುವುದು ?

ಡಾ|| ಆರ್. ನಾಗನಗೌಡ.—ಜಾಗ್ರತೆಯಾಗಿ ಮಾಡುತ್ತೇವೆ.

Plantation of Krishnarajpura, Nelamangala Taluk.

Q.—490. Sri D. M. GOVINDARAJU (Nelamangala).—

Will the Government be pleased to state :—

(*a*) whether lands in the Plantation of Krishnarajpura, Thyamagondlu Hobli, Nelamangala Taluk, have been given to anybody during the past ten years ;

(*b*) if so, when and extent of lands and the purpose for which they were given ?

A.—Dr. R. NAGAN GOWDA (Minister for Agriculture).—

(*a*) Yes.

(*b*) 1. For cultivation purpose.

Extent ... ... 27 Acres 21 Guntas.

Date ... ... 2nd February 1950 and 26th November 1952.

2. For starting Cottage Industries for the benefit of Ex-Servicemen.

Extent ... ... 50 Acres.

Date ... ... 18th May 1951 and 26th July 1952.

ಶ್ರೀ ಡಿ. ಎಂ. ಗೋವಿಂದರಾಜು.—ಕೃಷ್ಣರಾಜಪುರ ಪ್ಲಾಂಟೇಷನ್ನಿನ ಒಟ್ಟು ವಿಸ್ತೀರ್ಣವೆಷ್ಟು ?

*ಡಾ|| ಆರ್. ನಾಗನಗೌಡ.—397 ಎಕರೆ 8 ಗುಂಟೆ.

ಶ್ರೀ ಡಿ. ಎಂ. ಗೋವಿಂದರಾಜು.—ವ್ಯವಸಾಯಕ್ಕಾಗಿ 27 ಎಕರೆ 21 ಗುಂಟೆಯನ್ನು ಯಾರು ಯಾರಿಗೆ ಕೊಟ್ಟಿದೆ ?

ಡಾ|| ಆರ್. ನಾಗನಗೌಡ.—ಶ್ರೀ ಎಚ್. ಲಿಂಗಯ್ಯ ಎಂಬವರಿಗೆ ನವೆಂಬರ್ 1952 ರಲ್ಲಿ ಕೊಟ್ಟಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಶ್ರೀ ಲಿಂಗಯ್ಯ ಎಂಬವರು ಯಾವ ಸ್ಥಳದವರು ?

Dr. R. NAGAN GOWDA.—I have not got that information.

ಶ್ರೀ ಡಿ. ಎಂ. ಗೋವಿಂದರಾಜು.—ಬೆಂಗಳೂರಿನವರೆಂದು ಹೇಳಿದರೆ ಒಪ್ಪುತ್ತೀರಾ ?

Dr. R. NAGAN GOWDA.—I take the information from the Hon'ble Member.

ಶ್ರೀ ಡಿ. ಎಂ. ಗೋವಿಂದರಾಜು.—ಅದನ್ನು ಸಾಗುವಳಿ ಮಾಡುತ್ತಿಲ್ಲ, ಬೇರೆಯವರಿಗೆ ಮಾಡಿದ್ದಾರೆ ಎಂಬುದು ತಮಗೆ ಗೊತ್ತೆ ?

ಡಾ|| ಆರ್. ನಾಗನಗೌಡ —ಮಾಡಿದ್ದಾರೆಂಧು ಕೇಳಿದ್ದೇನೆ.

ಶ್ರೀ ಡಿ. ಎಂ. ಗೋವಿಂದರಾಜು.—ನಾಲ್ಕೈದು ವರ್ಷಗಳ ಕೆಳಗೆ ಜಮೀನು ತೆಗೆದುಕೊಂಡು ಮಾಡುವುದಕ್ಕೆ ಅಧಿಕಾರವಿದೆಯೆ ? ಷರತ್ತೇನಿದೆ ?

Dr. R. NAGAN GOWDA.—I do not know the terms on which the land was sold to that gentleman.

ಶ್ರೀ ಡಿ. ಎಂ. ಗೋವಿಂದರಾಜು.—ರೂಲ್ಸ್ ಪ್ರಕಾರ ಮಾಡುವುದಕ್ಕೆ ಅಧಿಕಾರವಿಲ್ಲದೆ ಮಾಡಿದ್ದರೆ ಅದರಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆಯೆ ?

ಡಾ|| ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು.—ಗೃಹ ಕೈಗಾರಿಕೆಗಳಿಗಾಗಿ 50 ಎಕರೆ ಕೊಟ್ಟಿದೆ. ಈಗ ಯಾವ ಗೃಹ ಕೈಗಾರಿಕೆಗಳು ನಡೆಯುತ್ತಿವೆ ?

Dr. R. NAGAN GOWDA.—So far as I know, no cottage industry has been started at present.

ಶ್ರೀ ಡಿ. ಎಂ. ಗೋವಿಂದರಾಜು.—ಎಷ್ಟು ಜನರಿಗೆ ಈ 50 ಎಕರೆ ಕೊಟ್ಟಿದೆ ?

ಡಾ॥ ಆರ್. ನಾಗನಗೌಡ.—ಒಬ್ಬರಿಗೆ.

ಶ್ರೀ ಡಿ. ಎಂ. ಗೋವಿಂದರಾಜು.—ಅವರ ಹೆಸರೇನು ?

ಡಾ॥ ಆರ್. ನಾಗನಗೌಡ.—ಶ್ರೀ ಎಸ್. ಸೂರ್ಯನಾರಾಯಣರಾವ್.

ಶ್ರೀ ಡಿ. ಎಂ. ಗೋವಿಂದರಾಜು.—ಅವರು ಯಾವ ಪತ್ರಿಕೆಯ ಎಡಿಟರ್ ?

Dr. R. NAGAN GOWDA.—I have no information.

ಶ್ರೀ ಡಿ. ಎಂ. ಗೋವಿಂದರಾಜು.—ಅದಕ್ಕೆ ಕಂದಾಯ ದಾಖಲು ಮಾಡಿದೆಯೆ ?

Dr. R. NAGAN GOWDA.—Notice.

ಶ್ರೀ ಡಿ. ಎಂ. ಗೋವಿಂದರಾಜು.—ಆ ಜಮೀನಿಗೆ ಕಂದಾಯ ದಾಖಲು ಮಾಡಿಲ್ಲ, ಅದನ್ನು ಕೊಡುತ್ತಿಲ್ಲ. ಈಗ 50 ಎಕರೆ ಜಮೀನಿನಲ್ಲೇನು ಮಾಡುತ್ತಿದ್ದಾರೆ ?

Dr. R. NAGAN GOWDA.—On 35 acres cultivation is being done.

ಶ್ರೀ ಡಿ. ಎಂ. ಗೋವಿಂದರಾಜು.—ಕೊಟ್ಟಿರುವ ಉದ್ದೇಶ ನೆರವೇರುತ್ತಿಲ್ಲ, ಬೆಂಗಳೂರಿನವರೊಬ್ಬರು ಆ ಜಮೀನು ಸಾಗುವಳಿ ಮಾಡಿಸಿ ರಾಗಿ ವಗೈರೆ ಬೆಳೆಯುತ್ತಿದ್ದಾರೆ, ಇನ್ನೇನೂ ಮಾಡಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Dr. R. NAGAN GOWDA.—I have given information about that already.

ಶ್ರೀ ಡಿ. ಎಂ. ಗೋವಿಂದರಾಜು.—ಯಾವ ಷರತ್ತಿನಮೇಲೆ ಇಷ್ಟು ವರ್ಷ ಎಂದು ನಿಗದಿಮಾಡಿ ಲೀಸ್ ಮಾಡಿದೆ ?

Dr. R. NAGAN GOWDA.—I think it was for the purpose of starting cottage industries.

ಶ್ರೀ ಡಿ. ಎಂ. ಗೋವಿಂದರಾಜು.—ಲೀಸ್‌ಮೇಲೆ ಎಷ್ಟು ವರ್ಷಗಳಿಗೆ ಕೊಡಲಾಗಿದೆ ?

Dr. R. NAGAN GOWDA.—That was given in the year 1952; it was given for starting cottage industries. That is all the information I have got and I do not know any other condition that was imposed.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ತಾವು ಏನೇನು ಕಂಡೀಷನ್ ಹಾಕಿದ್ದೀರೋ ಅದರ ಪ್ರಕಾರ ನಡೆಯದಿದ್ದರೆ ಜಮೀನನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Dr. R. NAGAN GOWDA.—That question will be considered.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ಆ ಫಾರೆಸ್ಟ್ ಜಮೀನಿಗೆ ಸಾವಿರಾರು ಜನ ಜಮೀನಿಲ್ಲದಿರುವವರು ಅರ್ಜಿ ಹಾಕುತ್ತಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ ?

Dr. R. NAGAN GOWDA.—We receive any number of applications for forest lands as this House knows.

ಶ್ರೀ ಡಿ. ಎಂ. ಗೋವಿಂದರಾಜು.—ಫಾರೆಸ್ಟ್ ಜಮೀನನ್ನು ಜಮೀನಿಲ್ಲದವರಿಗೆ ಕೊಡಬೇಕೆಂದು ಹೇಳುವಾಗ ಒಬ್ಬರಿಗೆ 50 ಎಕರೆ ಕೊಡುವುದು ಸರ್ಕಾರದ ನೀತಿಯಾಗಿದೆಯೆ ?

Dr. R. NAGAN GOWDA.—Of course not. Hon'ble Member knows that it is not our policy.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ಸರ್ಕಾರದವರು ಕೊಟ್ಟಿರುವ ಜಮೀನನ್ನು ವಾಪಸು ತೆಗೆದುಕೊಂಡು ಅದನ್ನು ಜಮೀನಿಲ್ಲದಿರುವವರಿಗೆ ಕೊಡಲು ಪ್ರಯತ್ನ ಮಾಡುತ್ತೀರಾ ?

Dr. R. NAGAN GOWDA.—I have already stated that the question will be considered.

ಶ್ರೀ ಡಿ. ಎಂ. ಗೋವಿಂದರಾಜು.—ಐದು ವರ್ಷಗಳಿಂದ ಕಂದಾಯವಿಲ್ಲದೆ ಜಮೀನನ್ನು ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

Mr. SPEAKER.—It is noted.

ಶ್ರೀ ಕೆ. ಪ್ರಭಾಕರ್.—ಈ 50 ಎಕರೆಯಲ್ಲಿ ಮಾಡಬಹುದಾದ ಗೃಹ ಕೈಗಾರಿಕೆ ಯಾವುದೆಂದು ಸರ್ಕಾರಕ್ಕೆ ಗೊತ್ತಿರಲಿಲ್ಲವೆ ?

Dr. R. NAGAN GOWDA.—I have not got any information except to say that it was given by two orders, one in 1951 and another in 1952, for starting cottage industries.

ಶ್ರೀ ಕೆ. ಪ್ರಭಾಕರ್.—ಈಗ ಇಂಥ ಜಮೀನನ್ನು ಸಾಹುಕಾರರಿಗೆ ಕೈಗಾರಿಕೆ ನೆಪದಲ್ಲಿ ಕೊಡುವುದೂ ಬಡವರಿಗೆ ಇಲ್ಲವೆಂದು ಹೇಳುವುದೂ ನ್ಯಾಯವಲ್ಲ, ಅಲ್ಲವೆ ?

Mr. SPEAKER.—You must put that question to the Revenue Minister. (*Laughter.*)

ಶ್ರೀ ಎಸ್. ಸಿದ್ದಪ್ಪ.—ಸರ್ಕಾರದವರು ಈ ಬೆಂಗಳೂರಿನಂಥ ದೊಡ್ಡದೊಡ್ಡ ನಗರಗಳಲ್ಲಿ ವಾಸಮಾಡತಕ್ಕವರಿಗಾದರೆ 50-60 ಎಕರೆ ಜಮೀನು ಕೊಟ್ಟು ವ್ಯವಸಾಯ ಮಾಡತಕ್ಕ ರೈತನಿಗೆ ಜಮೀನಿಲ್ಲವೆಂದು ಹೇಳುತ್ತಿದ್ದರೆ ನಿಮ್ಮ ಆ ಉದ್ದೇಶವೇನಿದಿಯೋ ಅದು ನೆರವೇರಿದಂತಾಯಿತೇ ?

ಡಾ॥ ಆರ್. ನಾಗನಗೌಡ.—ನಾನಾಗಲೇ ಹೇಳಿದಹಾಗೆ, this land was given for starting Cottage Industries for the benefit of ex-Servicemen.

ಶ್ರೀ ಎಸ್. ಸಿದ್ದಪ್ಪ.—ಈಗ ಹೀಗೆಲ್ಲಾ ಕೊಡಲ್ಪಟ್ಟತಕ್ಕ ಜಮೀನುಗಳೆಲ್ಲಾ ತಾವು ಅಧಿಕಾರಕ್ಕೆ ಬರುವುದಕ್ಕೆ ಮೊದಲೇ ಕೊಡಲ್ಪಟ್ಟದ್ದೋ ಅಥವಾ ಇತ್ತೀಚೆಗೆ ಕೊಡಲ್ಪಟ್ಟವೋ ?

ಡಾ॥ ಆರ್. ನಾಗನಗೌಡ.—1951-52 ರಲ್ಲಿ ಕೊಡಲ್ಪಟ್ಟ ಜಮೀನುಗಳು, ಇವು.

ಶ್ರೀ ಎಸ್. ಸಿದ್ದಪ್ಪ.—ಬಡವರು 2 ಎಕರೆ ಜಮೀನು ಕೇಳಿದರೂ ಇಲ್ಲ ಎಂದು ಹೇಳಿ ಬೇರೆ ನಗರಗಳಲ್ಲಿರತಕ್ಕವರಿಗೆ 50-60 ಎಕರೆ ಜಮೀನು ಕೊಡತಕ್ಕಂಥ ಈ ನಿಮ್ಮ ಪಾಲಿಸಿಯನ್ನು ಈಗಲಾದರೂ ಮನ್ನಾಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಇತ್ತೀಚೆಗೆ ನಾವು ಯಾವ ಜಮೀನುಗಳನ್ನೂ ಕೊಟ್ಟೇ ಇಲ್ಲ.

Sandalwood Smuggling.

Q.—291. Sri V. M. MASCARENHAS t. John's Hill).—

Will the Government be pleased to ate :—

(*a*) if they are aware that sandal-ood is being smuggled from the rious areas ;

(*b*) the action taken by the Forest epartment in preventing the smuggl-ig of sandalwood in Maidan Districts ?

A.—Dr. R. NAGAN GOWDA (Minister or Agriculture).—

(*a*) It has come to notice.

(*b*) Special Forest and police staff as been put on the detection of Sandal-ood smuggling cases.

Sri V. M. MASCARENHAS.—To uestion (*a*) 'if they are aware that andalwood is being smuggled from the arious areas', you have said 'It has ome to notice.' Was a suggestion nade to Government that all sales be nade only through the Director of andal Oil Factories ?

*Dr. R. NAGAN GOWDA.—I am not aware of that. Probably it is true.

ಶ್ರೀ ಆರ್. ಮುನಿಸ್ವಾಮಯ್ಯ.—ಇಲ್ಲಿಯುವರೆಗೂ ಹೀಗೆ ಕಳ್ಳತನದಲ್ಲಿ ಸಾಗಿಸತಕ್ಕಂಥ ಲೈಸೆನ್ಸ್‌ದಾರರು ಯಾರುಯಾರೆಂಬುದನ್ನು ಕಂಡುಹಿಡಿಯುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಲಿಲ್ಲವೇ ?

Dr. R. NAGAN GOWDA.—We do not know whether they are licence-holders or not. ಹೀಗೆ ಕೆಲವರ ಮೇಲೆ ಪತ್ತೆ ಹಚ್ಚಿ ಚರ್ಯೆತೆಗೆದುಕೊಂಡಿದ್ದೇವೆ. ಕೇಸುಗಳನ್ನು ಹಾಕಿದ್ದೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಅಂಥವರು ಯಾರೆಂಬುದನ್ನು ತಿಳಿದುಕೊಂಡಿದ್ದೀರಾ ?

ಡಾ॥ ಆರ್. ನಾಗನಗೌಡ.—ನಾನಾಗಲೇ ಹೇಳಿದೆ. ಕಂಡುಹಿಡಿದು ಕೆಲವರಮೇಲೆ ಕೇಸುಗಳನ್ನು ಹಾಕಿದ್ದೇವೆ. ಆ ಪೈಕಿ ಕೆಲವು ಇನ್ನೂ ಕೋರ್ಟಿನಲ್ಲಿ ವಿಚಾರಣೆ ಆಗುತ್ತಿವೆ, ಮತ್ತೆ ಕೆಲವು ಕೇಸುಗಳಲ್ಲಿ ಶಿಕ್ಷೆಯಾಗಿದೆ. ಇನ್ನೂ ಕೆಲವು ಕೇಸುಗಳು ವಜಾ ಆಗಿವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹೀಗೆ ಕಳ್ಳತನದಿಂದ ಸಾಗಿಸುತ್ತಿರುವವರು ಲೈಸೆನ್ಸ್ಡ್ ಕಂಟ್ರಾಕ್ಟರರೇ ಅಥವಾ ಬೇರೆಯವರೇ ಎಂಬುದನ್ನು ಪರಿಶೋಧನೆ ನಡೆಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಅದನ್ನೆಲ್ಲಾ ನಡೆಸಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ದಿವಸ ಫಾರೆಸ್ಟ್ ಇಲಾಖೆಯವರು ಗಂಧದ ಮರಗಳನ್ನು ಖಾಸಗೀ ಜನರಿಗೆ ಮಾರಾಟಮಾಡುತ್ತಿರುವುದೇ ಹೀಗೆ ಸ್ಮಗ್ಲಿಂಗ್ ಆಗುವುದಕ್ಕೆ ಕಾರಣವಾಗಿದೆ ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

Dr. R. NAGAN GOWDA.—I cannot understand why the very fact that it is sold by the Forest Department should lead to smuggling. I do not see any connection between the two.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ಶ್ರೀಗಂಧದ ಮರಗಳನ್ನು ನೇರವಾಗಿ ಆ ಗಂಧ ಎಣ್ಣೆಯ ಕಾರ್ಖಾನೆಗೆ ಸರಬರಾಯಿ ಮಾಡದೆ, ಇದನ್ನು ಮಧ್ಯೆ ಖಾಸಗೀ ಜನರಿಗೆ ಫಾರೆಸ್ಟ್ ಇಲಾಖೆಯವರು ಮಾರಾಟಮಾಡುತ್ತಿರುವುದೇ ಹೀಗೆ ಸ್ಮಗ್ಲಿಂಗ್ ಆಗುವುದಕ್ಕೆ ಕಾರಣವಾಗಿರುತ್ತದೆ, ಹೀಗೆ ಖಾಸಗೀ ಜನರಿಗೆ ಇದನ್ನು ಮಾರಾಟ ಮಾಡದೆ ಇದ್ದ ಪಕ್ಷದಲ್ಲಿ ಹೀಗೆ ಸ್ಮಗ್ಲಿಂಗ್ ಆಗುತ್ತಿರಲಿಲ್ಲವೆಂಬುದು ತಮ್ಮ ಅವಗಾಹನೆಗೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಈಗ ಬಹುಭಾಗವೆಲ್ಲಾ ಆ ಆಯಿಲ್ ಫ್ಯಾಕ್ಟರಿಗೆ ಹೋಗುತ್ತಿದೆ. ಎಲ್ಲೋ ಅಲ್ಪ ಸ್ವಲ್ಪ ಭಾಗವನ್ನು ಮಾತ್ರ ಖಾಸಗೀ ಜನರಿಗೆ ಕೊಡಲಾಗುತ್ತಿದೆ. ಇವರಿಗಾದರೂ ರಿಲಿಜಿಯಸ್ ಇತ್ಯಾದಿ ಕಾರಣಗಳಿಗಾಗಿ ಕೊಡಲಾಗುತ್ತಿದೆ. Small quantity of wood is sold to private people. All over India there is demand for small quantities.

Mr. SPEAKER.—The Hon'ble Member's point is whether the selling of sandalwood through the Director of Sandal Oil Factories will not stop smuggling.

Dr. R. NAGAN GOWDA.—That will be examined.

ಶ್ರೀ ಆರ್. ಅನಂತರಾಮನ್.—ಕಳ್ಳತನದಲ್ಲಿ ಸಾಗಿಸತಕ್ಕವರಿಗೂ ಲೈಸೆನ್ಸ್ ಕೊಡುತ್ತಿದ್ದೀರಾ ?

(ನಗು !)

ಅಧ್ಯಕ್ಷರು.—ಲೈಸೆನ್ಸ್‌ದಾರರು ತಮಗೆ ಕೊಟ್ಟಿರತಕ್ಕ ಪ್ರಮಾಣಕ್ಕಿಂತ ಹೆಚ್ಚಾಗಿ ತೆಗೆದುಕೊಂಡು ಹೋಗುತ್ತಿರುವುದನ್ನು ಕುರಿತು ಹಾಗೆ ಹೇಳಿದ್ದಾರೆ.

ಶ್ರೀ ಕೆ. ಕೊಟ್ರಬಸವನಗೌಡ.—ಆ ಬಳ್ಳಾರಿ ಜಿಲ್ಲೆಯಲ್ಲೇದಾದರೂ ಈ ಗಂಧದ ಮರಗಳಿವೆಯೇ ?

ಡಾ॥ ಆರ್. ನಾಗನಗೌಡ.—ಅಲ್ಲಿಯೂ ಅಲ್ಪ ಸ್ವಲ್ಪ ಇವೆ.

ಶ್ರೀ ಕೆ. ಕೊಟ್ರಬಸವನಗೌಡ.—ಸಂಡೂರು ತಾಲ್ಲೂಕಿನಲ್ಲಿ ಖಾಸಗೀ ಅರಣ್ಯದಲ್ಲಿರತಕ್ಕ ಗಂಧದ ಮರಗಳನ್ನು ವಿಶೇಷವಾಗಿ ಕಳ್ಳತನದಲ್ಲಿ ಸಾಗಿಸುತ್ತಿರುವ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಆ ವಿಚಾರ ನಮ್ಮ ಗಮನಕ್ಕೂ ಬಂದಿದೆ. ಅಲ್ಲಿ ಸಹ ನಾವು ಈಗ ಚರ್ಯೆ ತೆಗೆದುಕೊಂಡು ಕೇಸುಗಳನ್ನು ಹಾಕಿದ್ದೇವೆ.

ಶ್ರೀ ಕೆ. ಕೊಟ್ರಬಸವನಗೌಡ.—ಅಲ್ಲಿ ಖಾಸಗೀಯವರ ಅರಣ್ಯ ಸರ್ಕಾರೀ ಅರಣ್ಯದ ಸುತ್ತಲೂ ಇರುವುದರಿಂದ ಹೀಗೆ ಕಳ್ಳತನದಲ್ಲಿ ಸಾಗಿಸುತ್ತಿರುವ ಗಂಧದ ಮರಗಳನ್ನು ಪತ್ತೆ ಹಚ್ಚುವುದಕ್ಕಾಗುವುದಿಲ್ಲವೆಂಬುದಾಗಿ ತಮಗೆ ಆ ಸ್ಥಳೀಯ ಅಧಿಕಾರಿಗಳಿಂದ ಏನಾದರೂ ರಿಪೋರ್ಟ್ ಬಂದಿದೆಯೇ ?

ಡಾ|| ಆರ್. ನಾಗನಗೌಡ.—ಖಾಸಗೀಯವರ ಹಿಡುವಳಿಯಲ್ಲಿರುವುದನ್ನು ಬಿಟ್ಟು ಪಬ್ಲಿಕ್ ಪ್ರಾಪರ್ಟಿಯಾಗಿರತಕ್ಕದ್ದರಲ್ಲಿ ಆ ರೀತಿ ಕಳ್ಳತನ ಆಗದಂತೆ ಅದನ್ನು ಚೆಕ್ ಮಾಡಲು ಸೂಕ್ತ ಕಾರ್ಯಕ್ರಮಗಳನ್ನು ಏರ್ಪಾಡು ಮಾಡಿದ್ದೇವೆ.

Trees in Sandoor Taluk (destruction on large scale).

Q.—521. Srimathi BELLARY SIDDAMMA (Davanagere).—

Will the Government be pleased to state :—

(*a*) whether it has come to their notice that the Government trees are being cut on a large scale in Sandoor Taluk ;

(*b*) the steps taken by them to prevent this ?

A.—Dr. R. NAGAN GOWDA (Minister for Agriculture).—

(*a*) No.

(*b*) Does not arise in view of reply to clause (*a*).

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಸಂಡೂರು ತಾಲ್ಲೂಕಿನಿಂದ ದಿನಂಪ್ರತಿ 20-30 ಸೌದೆ ಗಾಡಿಗಳು ಬಳ್ಳಾರಿಗೆ ಹೋಗುತ್ತವೆ. ಸರ್ಕಾರಿ ಮರಗಳನ್ನು ಕಡಿದು ಆ ರೀತಿಯಾಗಿ ಸಾಗಿಸುತ್ತಿದ್ದಾರೆಂದು ವರ್ತಮಾನವಿದೆ, ಅದನ್ನು ತಾವು ಪರಿಶೀಲನೆ ಮಾಡಿದ್ದೀರಾ ?

*ಡಾ|| ಆರ್. ನಾಗನಗೌಡ.—ಪರಿಶೀಲನೆ ಮಾಡಿದ್ದೇವೆ. ಕೆಲವು ತಿಂಗಳ ಕೆಳಗೆ ಸಂಡೂರಿನಿಂದ ಸೌದೆ ಗಾಡಿಗಳು ಬಳ್ಳಾರಿಗೆ ಹಾಗೆ ಬರುತ್ತಿದುದು ನಿಜ. ಆ ಸೌದೆಗೆಲ್ಲಾ ಆ ಸಂಡೂರು ರಾಜರಿಗೆ ಲೈಸೆನ್ಸ್ ಕೊಡಲಾಗಿತ್ತು. ಅವರು ಆಗ ಆ ರೀತಿ ಸೌದೆ ಸಾಗಿಸುತ್ತಿದ್ದುದು ನಿಜ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಅವರ ಲೈಸೆನ್ಸನ್ನು ತೋರಿಸಿ, ಬೇರೆ ಜನರು ಸರ್ಕಾರಿ ಮರಗಳನ್ನು ಕಡಿದು ಸಾಗಿಸುತ್ತಿದ್ದಾರೆಂಬ ವಿಷಯವನ್ನು ತಾವು ಪರಿಶೀಲನೆ ಮಾಡಿದ್ದೀರಾ ?

ಡಾ|| ಆರ್. ನಾಗನಗೌಡ.—ಆ ರೀತಿ ಆಗುವುದಕ್ಕೆಲ್ಲಾ ಅವಕಾಶವಿಲ್ಲ. ಅಲ್ಲಿ ನಮ್ಮ ಆಫೀಸರಗಳನ್ನಿಟ್ಟಿದ್ದೇವೆ. ಅವರು ಆ ರೀತಿ ಮರಗಳನ್ನು ಕಡಿಯಗೊಡುವುದಿಲ್ಲ. ಕಾವಲು ಕಾಯುತ್ತಿದ್ದಾರೆ.

ಶ್ರೀ ಕೆ. ಕೊಟ್ರಬಸವನಗೌಡ.—ಮಧ್ಯೆ ಸರ್ಕಾರಿ ಕಾಡಿದ್ದು ಸುತ್ತಲೂ ಸಂಡೂರು ರಾಜರ ಪ್ರೈವೇಟ್ ಕಾಡಿರುವುದರಿಂದ ಸರ್ಕಾರಿ ಅರಣ್ಯದಲ್ಲಿ ನಾಟಾ, ಇತ್ಯಾದಿಗಳ ಕಳ್ಳತನವನ್ನು ತಡೆಗಟ್ಟಲು ಸಾಧ್ಯವಾಗುತ್ತಿಲ್ಲವೆಂದು ಸ್ಥಳೀಯ ಅಧಿಕಾರಿಗಳು ತಮಗೆ ವರದಿ ಮಾಡಿಲ್ಲವೇ ?

ಡಾ|| ಆರ್. ನಾಗನಗೌಡ.—ತೊಂದರೆ ಇರಬಹುದು. ಇದ್ದರೂ ನಾವು ನಮ್ಮ ಕೆಲಸ ನಡೆಸಲೇಬೇಕು. ಆದರೆ ಸಂಡೂರು ಮಹಾರಾಜರಿಗೆ ಇಂಡಿಯಾ ಸರ್ಕಾರದವರು ಸನ್ನದು ಮೂಲಕ ಅಲ್ಲಿ ಕೆಲವು ಅರಣ್ಯ ಸಂಪತ್ತುಗಳನ್ನು ಬಿಟ್ಟುಕೊಟ್ಟಿದ್ದಾರೆ. ಅದನ್ನು ನಾವೀಗ ತಪ್ಪಿಸುವುದಕ್ಕೆ ಸಾಧ್ಯವಿಲ್ಲ.

Heggavadi State Forest (Release of land for grazing goats).

Q.—530. Sri H. K. SHIVARUDRAPPA (Gundlupet-Heggadadevankote).—

Will the Government be pleased to state :—

(*a*) whether a delegation of the villagers of Kunthakere and other villages in Gundlupet taluk had not waited on the Minister for Agriculture with a request to release some extent in Heggavadi State Forest for grazing goats ;

(*b*) whether the Forest Officers of the Mysore District have not inspected the spot in this connection ;

(*c*) whether they have received any report from the concerned officers ; if so, its details ;

(*d*) the steps taken by Government to relieve the people from this hardship ?

A.—Dr. R. NAGAN GOWDA (Minister for Agriculture).—

(*a*) Yes.

(*b*) The spot was inspected.

(*c*) A report was received by the Chief Conservator of Forests. Since the formation of State Forest in 1913 extensive areas had been released from nearby gomal lands for cultivation with the result that cultivation had extended right up to the demarcation line at the cost of grazing grounds. The release of lands in Heggavadi State Forest is unlikely to give adequate relief. In accordance with the National Forest Policy of India every acre under Forest has to be perpetuated in the national interests such as conservation of soil and supply of fuel, etc.

(*d*) Does not arise in view of reply to clause (*c*)

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಾವು (ಡಿ) ಭಾಗಕ್ಕೆ ಕೊಟ್ಟಿರತಕ್ಕ ಉತ್ತರದಿಂದ ಆ ಪ್ರದೇಶದ ಜನರ ಕಷ್ಟನಿವಾರಣೆ ಆದಂತಾಯಿತೇ ?

*ಡಾ॥ ಆರ್. ನಾಗನಗೌಡ.—ಆ ಪ್ರದೇಶದಲ್ಲಿ ಆ ರೀತಿ ಮೇಕೆಗಳನ್ನೂ ಕೂಡ ಬಿಟ್ಟು ಮೇಯಿಸಬಾರದೆಂದು ಅವರು ವರದಿಮಾಡಿದ್ದಾರೆ. ಅದಕ್ಕೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅಲ್ಲಿಗೆ ಆ ರೈತರ ಕಷ್ಟಪರಿಹಾರವಾಯಿತೇ ಎಂದು ಕೇಳುತ್ತಿದ್ದೇನೆ.

ಡಾ॥ ಆರ್. ನಾಗನಗೌಡ.—ಹಾಗೆ ನೋಡಿದರೆ ಆ ಉದ್ದೇಶಕ್ಕಾಗಿ ನಾವು ನಮ್ಮ ಫಾರೆಸ್ಟನ್ನು ಬಿಟ್ಟುಕೊಡಬೇಕಾಗುತ್ತದೆ. ಆ ರೀತಿ ಮಾಡಲು ಸಾಧ್ಯವಿಲ್ಲವೆಂಬುದಾಗಿ ಸರ್ಕಾರದವರ ಅಭಿಪ್ರಾಯವಿದೆ. ಹಾಗೆ ಅಲ್ಲಿ ಬಿಟ್ಟುಕೊಟ್ಟರೆ ಇನ್ನುಳಿದ ಫಾರೆಸ್ಟಿನ ಅಭಿವೃದ್ಧಿಗೂ ಕೂಡ ಬಹಳ ಧಕ್ಕೆ ಉಂಟಾಗುತ್ತದೆಂದು ವರದಿ ಬಂದಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆ ಪ್ರದೇಶವನ್ನು ಬಿಟ್ಟರೆ ಅಲ್ಲಿ ಈ ಗೋಮಾಳಕ್ಕೆ ಬೇರೆ ಯಾವ ಪ್ರದೇಶವೂ ಇರುವುದಿಲ್ಲವೆಂಬ ಅಂಶ ತಮಗೆ ಗೊತ್ತಿದೆಯೇ?

ಡಾ॥ ಆರ್. ನಾಗನಗೌಡ.—ಇಲ್ಲಿಯ ತನಕ ಅಲ್ಲಿದ್ದಂಥ ಗೋಮಾಳ ಪ್ರದೇಶವನ್ನೆಲ್ಲಾ ಸಾಗುವಳಿಗೋಸ್ಕರವಾಗಿ ಜನರು ಹಿಡುವಳಿ-ಪಟ್ಟಿಗಳನ್ನು ಮಾಡಿಸಿಕೊಂಡು ಬಿಟ್ಟಿದ್ದಾರೆ. ಈಗ ಫಾರೆಸ್ಟಿನಲ್ಲಿ ಪುನಃ ಗೋಮಾಳಕ್ಕೆ ಜಾಗ ಕೊಡಿ ಎಂದು ಕೇಳುತ್ತಿದ್ದಾರೆ. ಈ ರೀತಿ ಆದರೆ ಕೊನೆಗೆ ನಮ್ಮ ಅರಣ್ಯಗಳೊಂದೂ ಉಳಿಯುವುದೇ ಇಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗೆ ತಾವೇಕೆ ಮೊದಲು ಆ ಗೋಮಾಳ ಪ್ರದೇಶವನ್ನು ಸಾಗುವಳಿಗೆ ಬಿಟ್ಟುಕೊಟ್ಟಿರಿ?

ಡಾ॥ ಆರ್. ನಾಗನಗೌಡ.—ಸಾಗುವಳಿಗೆ ಜಮೀನು ಬೇಕೆಂದು ಕೇಳಿದರು. ಅದಕ್ಕಾಗಿ ಕೊಟ್ಟೆವು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಮ್ಮ ಬಳಿಗೆ ಬಂದಿದ್ದಂಥ ಆ ನಿಯೋಗ ತಮ್ಮನ್ನೇ ಆ ಸ್ಥಳಕ್ಕೆ ಖುದ್ದಾಗಿ ಬಂದು ಭೇಟಿಕೊಟ್ಟು ಸ್ಥಳದ ಪರಿಸ್ಥಿತಿಯನ್ನು ಪರಾಂಬರಿಸಬೇಕೆಂದು ಕೇಳಿಕೊಂಡಿರಲಿಲ್ಲವೇ?

ಡಾ॥ ಆರ್. ನಾಗನಗೌಡ.—ಹೌದು. ಆದರೆ ನನಗೆ ವೇಳೆ ಆಗದೆ ಬರಲಿಲ್ಲ. ಆದರೆ ಆ ಸ್ಥಳವನ್ನು ನಮ್ಮ ಅಧಿಕಾರಿಗಳು ಹೋಗಿ ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. ಆ ಪ್ರದೇಶದ ನಕ್ಷೆ, ಭೂಪಟಗಳೆಲ್ಲಾ ನನ್ನ ಬಳಿ ಈಗ ಇರುತ್ತವೆ. ಆದರೆ ಏನು ಮಾಡುವುದಕ್ಕೂ ಅವಕಾಶವಿಲ್ಲ.

Sri H. K. SHIVARUDRAPPA.—Will the Government consider this request at least now? Will the Hon'ble Minister inspect the forest?

Dr. R. NAGAN GOWDA.—It is not necessary. I think that would be understood from the sketches. If you go about and tour, there will be criticism in this House.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ತಾವು ಅಲ್ಲಿಗೆ ಬಂದು ಪರೀಕ್ಷೆ ಮಾಡುವುದಕ್ಕೆ ತಮಗೇನು ತೊಂದರೆಯಿದೆ?

ಡಾ॥ ಆರ್. ನಾಗನಗೌಡ.—ನಾವು ಹಾಗೆ ಟೂರ್ ಹೊರಟರೆ ಈ ಅಸೆಂಬ್ಲಿಯಲ್ಲಿ ತಾವೆಲ್ಲರೂ ಟಿ.ಎ. ಜಾಸ್ತಿ ಮಾಡುತ್ತೀರೆಂದು ಟೀಕೆ ಮಾಡುತ್ತಿದ್ದೀರಲ್ಲವೇ?

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅವಶ್ಯಕವಾದಂಥ ಟೂರ್ ಯಾವುದು ಅನಾವಶ್ಯಕವಾದಂಥ ಟೂರ್ ಯಾವುದು ಅನ್ನುವುದನ್ನು ನೋಡದೆ ಟೀಕೆ ಮಾಡುತ್ತಾರೆಯೇ?

ಡಾ॥ ಆರ್. ನಾಗನಗೌಡ.—ಟೂರ್ ಮಾಡಿದ್ದಕ್ಕೆಲ್ಲಾ ಟೀಕೆಗಳು ಬಂದೇ ಬರುತ್ತವೆ. ನೀವು ಮಾಡದಿದ್ದರೆ ಮತ್ತೊಬ್ಬರು ಮಾಡಬಹುದು. ಆದರೆ ಅದೆಲ್ಲಾ ಈಗ ಅನಾವಶ್ಯಕ. ಈಗಾಗಲೇ ನಾವು ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಆ ಸ್ಪಾಟ್ ಇನ್ಸ್ಪೆಕ್ಷನ್ ಮಾಡಿಕೊಂಡು ಬರಬೇಕೆಂದು ಹೇಳಿ ಕಳುಹಿಸಿದ್ದೆವು. The opinion of the departmental officers is not to release that land. I do not see any purpose will be served by my going and visiting that land. I can exactly understand the situation.

---

1 P.M.

Bridge across Suvarnavathi near Alur, Chamarajanagar Taluk.

Q.—51. Sri B. RACHIAH (Yelandur-Scheduled Castes).—

Will the Government be pleased to state :—

whether they have considered the several representations made both on the floor of this House and outside to construct a bridge across Suvarnavathi near Alur in Chamarajanagar Taluk at least out of the Central aid?

A.—Sri T. CHANNIAH (Minister for Public Health and Local Self-Government).—

Yes.

ಶ್ರೀ ಬಿ. ರಾಚಯ್ಯ.—ಈ ಸೇತುವೆಯ ಅಂದಾಜಿನ ಮೊಬಲಗು ಎಷ್ಟು, ಸ್ವಾಮಿ?

ಶ್ರೀ ಟಿ. ಚನ್ನಯ್ಯ.—1948 ನೇ ಇಸವಿಯಲ್ಲಿ 1 ಲಕ್ಷ 13 ಸಾವಿರ ರೂಪಾಯಿಗೆ ಅಂದಾಜಾಗಿದೆ.

ಶ್ರೀ ಬಿ. ರಾಚಯ್ಯ.—ಇದು ಸೇತುವೆಗೋ ಅಥವಾ ಕಾಸ್‌ವೇಗೋ ಯಾವುದಕ್ಕೆ?

ಶ್ರೀ ಟಿ. ಚನ್ನಯ್ಯ.—ಸೇತುವೆಗೆ 1 ಲಕ್ಷ 13 ಸಾವಿರ ರೂಪಾಯಿಗಳ ಅಂದಾಜು 1948 ನೇ ಇಸವಿಯಲ್ಲಿ ಆಗಿದೆ.

Mr. SPEAKER.—Now there is a short notice question by Sri H. C. Linga Reddy.

SHORT NOTICE QUESTION AND ANSWER.

Agreement on Rivers (Violation by Andhra Government),

Q.—7. Sri H. C. LINGA REDDY (Malur).—

Will the Government be pleased to state :—

(*a*) whether it has come to their notice that the Andhra Government have alleged violation of the 1892 Agreement on Rivers ;

(*b*) whether it is true that the Mysore Government have constructed new irrigation reservoirs in the zonal areas ;

(*c*) the action taken by them in this behalf ?

A.—Sri H. M. CHANNABASAPPA (Minister for Industries).—

(*a*) No ; but certain press reports of a statement said to have been made by the Deputy Chief Minister of Andhra on the subject in the Andhra State Assembly, have been brought to the notice of Government.

(*b*) No.

(*c*) Does not arise.

Sri H. C. LINGA REDDY.—Has the Andhra Government (second State Government) alleged violation of the 1892 agreement on Rivers ?

*Sri H. M. CHANNABASAPPA.—That Andhra Government has not made any violation.

Sri H. C. LINGA REDDY.—You have been pleased to say that certain press reports of a statement said to have been made by the Deputy Chief Minister of Andhra on the subject in the Andhra State Assembly have been brought to the notice of Government. Did the Government get this matter verified, whether the Andhra Deputy Chief Minister made such an allegation of violation of the 1892 agreement ?

Sri H. M. CHANNABASAPPA.—We do not take note of press reports as authenticated reports. But anyway we are seized of the matter.

Sri H. C. LINGA REDDY.—After you got yourself seized of the matter, may I know what action has been taken by the State Government ?

Sri H. M. CHANNABASAPPA.—Action will be taken as required under the agreement of 1892 if there is any evasion on the part of either Mysore or Andhra.

Sri H. C. LINGA REDDY.—Has it come to the notice of the Government that this false allegation of violation of the agreement is made with a view to prevent the restoration or repairs of tanks on the river basins ?

Sri H. M. CHANNABASAPPA.—What river basins ?

Sri H. C. LINGA REDDY.—Pennar, Palar and Chitravati Rivers.

Sri H. M. CHANNABASAPPA.—Mere allegations of that kind cannot take away the rights of parties under the agreement of 1892.

Sri H. C. LINGA REDDY.—Has it come to the notice of the Government that the Public Works Department has stopped the repairs of many of these tanks in the river basins on account of the allegations made by the Madras and the Andhra Governments ?

Sri H. M. CHANNABASAPPA.—The Mysore Government will certainly not stop any of the works that we may undertake under the agreement.

Sri H. C. LINGA REDDY.—Are the Mysore Government taking sufficient precautions to safeguard the interests of the atchkatdars in those river basins? with regard to the restoration and repairs of the tanks ?

Sri H. M. CHANNABASAPPA.—So long as it is well within the terms and conditions of the agreement, the Mysore Government will certainly proceed to safeguard the interests of the atchkatdars of the tanks in the basins of Palar and Pennar.

Sri B. V. NARAYANA REDDY.—Has it come to the notice of the Government that the Madras and Andhra Governments have violated the terms of the 1892 agreement ?

Sri H. M. CHANNABASAPPA.—Not that I know of.

Sri B. V. NARAYANA REDDY.—Is it not a fact that the project near Hindupur across Kumudavathi and Pennar is being built against the 1892 agreement ?

Sri H. M. CHANNABASAPPA.—'hey have built it in accordance with he 1892 agreement.

Sri B. V. NARAYANA REDDY.—Are he Government aware that for a revious question of the same kind the Iinister then in charge had said that hey had violated in several stages in everal ways ?

Sri H. M. CHANNABASAPPA.—The Government of Mysore have made no allegation at any time against the Andhra Government that they have violated the agreement. If there is any violation, there is the procedure laid down in the agreement.

Sri B. V. NARAYANA REDDY.—Are the Government aware that the Thirumane achkat, in respet of which amount has been sanctioned anp included in the First Five Year Plan, has been stopped for some reasons ? May I know what the reasons are ?

Sri H. M. CHANNABASAPPA.—Thirumane anecut across Chitravathi is an old anecut. It has got to be resuscitated and improved. It is an anecut which exists from a long time. A fresh estimate was therefore prepared to improve it, to replace it by putting sized stones, and also there is a proposal to open a right bank channel to supply water to some of the tanks. For that the concurrence of the Andhra Government is necessary according to the 1892 agreement. So we have sought the concurrence of the Andhra Government. After the concurrence is obtained, we will proceed.

Sri B. V. NARAYANA REDDY.—May I know at what stage it is ?

Sri H. M. CHANNABASAPPA.—They have asked for certain details regarding the height of the anecut, the storage, the extent of atchkat which the channel is going to have, the dependent atchkat and all other technical details. .

Sri B. V. NARAYANA REDDY.—May I know on what date you were asked to furnish them the details ?

Sri H. M. CHANNABASAPPA.—Though I cannot tell you the exact date on which we received it, the matter is being attended to.

Sri B. V. NARAYANA REDDY.—May I know when it is going to be concluded ?

Sri H. M. CHANNABASAPPA.—After obtaining the concurrence of the Andhra Government, as required under the agreement, we will proceed.

QUESTIONS FOR ANSWERS ON THE DAY

(But not taken up).

Electricity (provision for I.P. Sets in Bangalore District).

Q.—33. Sri A. V. NARASIMHA REDDY (Bangalore South).—

Will the Government be pleased to state :—

(*a*) the number and names of villages in each taluk in the District of Bangalore to which electricity was provided for the purpose of irrigation pump sets from 1952 to 1955 December ;

(*b*) the number of estimates for sanction of power for irrigation pump sets that are pending with them in each taluk in the District of Bangalore from 1952 to 1955 December;

(*c*) the reason for their pendency ?

A.—Sri H. M. CHANNABASAPPA (Minister for Industries).—

(*a*) *Vide* list 'A' appended.

(*b*) & (*c*) *Vide* list 'B' appended.

(SRI H. M. CHANNABASAPPA.)

LIST 'A'

Anekal Taluk.

1 Anekal
2 Banahalli
3 Neralur
4 Sarajapura
5 Yadavanahalli
6 Attible
7 Kudulu
8 Ramakrishnapura
9 Surujakanahalli
10 Bidaraguppa
11 Hebbahalli
12 Muthanallur
13 Besthamanahalli
14 Kammasandra
15 Kalturu Ramasagara

Bangalore North Taluk.

1 Abbegere
2 Alasandra
3 Anchepura
4 Bettahalsur
5 Byataràyanapura
6 Chokkasandra
7 Gejjalahalli
8 Hesaraghatta
9 Huralichickanahalli
10 Jakkoor
11 Jalahalli
12 Jaraganahalli
13 Lottegollanahalli
14 Macholhalli
15 Rajamahal
16 Seegehalli
17 Seevanahalli
18 Tavarekere
19 Tumkur road
20 Ulsoor
21 Yelahanka
22 Yerrapalya
23 Yeswantpur
24 Dhopanahalli
25 Banasavady
26 Kacherakanahalli
27 Mathadahally
28 Mathikere
29 Thindalu
30 Guddadahalli
31 Ganganahalli
32 Pallanahalli
33 Kempapura
34 Mallapura
35 Amruthahalli
36 Devasamudra
37 Jaraganahalli

Bangalore South Taluk.

1 Gavipura
2 Gottigere
3 Hulimavu
4 Kengeri
5 Kenchenahalli
6 Mylasandra
7 Mysore road
8 Ramohally
9 Sulikere
10 Thimmenahalli
11 Balegere
12 Chinnasandra
13 Harohalli
14 Immadahalli
15 Konena Agrara
16 Maistrypalya
17 Begur
18 Chikkabelandur
19 Dhoopanahalli
20 Kodihalli
21 Agaram
22 Kodihalli
23 Kathiriguppa
24 Yedur
25 Anchepalya
26 Sampegi Hobli
27 Settypalya
28 Kempapura Agrahara
29 Kenchanahalli
30 Sasukke
31 Sultanpalya
32 Srirampura
33 Kudugandhanahalli
34 Kaval Byrasandra
35 M. R. Palya

Channapatna Taluk

1 Bhokari
2 Brahmanipura
3 Byrapatna
4 Channapatna
5 Chikmalur
6 Chakkere
7 Dodda Mallur
8 Halasinamaradadoddi
9 Malurpatna
10 Mangappandoddi
11 Santhemuganahallidoddi
12 Tittamaranahalli
13 Ujjanahalli
14 Vandaraguppe
15 Valathope
16 Attihalli
17 Sivanahalli

18 Bandikuppe
19 Tavanahalli
20 Hosahalli
21 Santhemuganahalli
22 Nidigal
23 Thattekere
24 Chatra
25 Tungani
26 Venkatarayadoddi
27 Thigalarahosahalli
28 Rayasandra

Devanahalli Taluk

1 Avathi
2 Baichapura
3 Bommavara
4 Devanahalli
5 Hatchahalli
6 Maligenahalli
7 Mustur
8 Neeleri
9 Samethanahalli
10 Sadahalli
11 Sanganahalli
12 Seekyanahalli
13 Yeliyur
14 Baichapura
15 Palavanahalli
16 Doddakurubarahalli

Hoskote Taluk

1 Hoskote
2 Alapanahalli
3 Shikripura
4 Seegehalli
5 Sulebele
6 Gunjur
7 Attibele
8 Tirumanehalli
9 Lakundahalli
10 Bidrahallu
11 Kallugollahallu
12 Mutasundra
13 Sonnedevanahalli
14 Arasanahalli
15 Huskur
16 Jodidasarahalli
17 Bilisavalli
18 Ittasandra
19 Sommalipura

Kanakapura Taluk

1 Athurahalli
2 Chatra
3 Kanakapura
4 Melekote
5 Sathanur
6 Sivanahalli
7 Thimmasandra
8 Rayasandra
9 Thigalahosahalli
10 Kallahalli
11 Venkatarayanadoddi
12 Thungani

Magadi Taluk

1 Chandurayanahalli
2 Magadi
3 Iyandahalli
4 Kenchanahalli

Nelamangala Taluk.

1 Banavady
2 Nelamangala
3 Arasanakunte
4 Mallur
5 Mattanakochy
6 Makanakunte
7 Mallarabandvadi
8 Krishrajiyapalya
9 Sondekoppa

Ramanagaram Taluk.

1 Gungarahally
2 Lakshmipura
3 Malehalli
4 Mumanahally
5 Madapura
6 Thippegowdanadoddi
7 Hanumanthegowdanadoddi
8 Mayganahally
9 Goppahalli
10 Kolliganahally
11 Gollahalli
12 Achalu
13 Belagumba
14 Chickgodanahalli
15 Chickgodanadoddi
16 Hunasedoddi
17 Ittamadu
18 Kethohalli
19 Ramanagaram
20 Rangarayaradoddi

Doddaballapura Taluk.

1 Menasi
2 Aradeshanahalli
3 Melekote
4 Kodigenahalli

(SRI H. M. CHANNABASAPPA.)

LIST 'B'

Sl. No.	Name of Taluk	Number of Estimates	Reasons for pendency
1	Bangalore North Taluk ...	1	Not sanctioned since the parties have not paid the deposits.
2	Nelamangala Taluk ...	3	In the case of two estimates there is no provision in the current year's budget and in the third case, the estimate is still under scrutiny.
3	Kanakapura Taluk ...	1	Want of provision in the current year's budget.
4	Magadi Taluk ...	2	In one case there is no provision in the current year's budget and in the other case the estimate is under preparation.
5	Hoskote Taluk ...	1	Want of provision in the current year's budget.
6	Devanahalli Taluk ...	1	Do

Primary Schools granted in Chitaldrug District.

Q.—246. SRI A. BHEEMAPPA NAIK (Molakalmuru).—

Will the Government be pleased to state :—

the number of Primary Schools granted in Chitaldrug District from 1st April 1955; (talukwar figures may kindly be given) ?

A.—SRI A. G. RAMACHANDRA RAO (Minister for Law and Education).—40.

Molakalmuru	4
Davangere	6
Hiriyur	7
Chitaldrug	3
Jagalur	2
Harihar	7
Challakere	7
Holalkere	3
Hosadurga	1

Forest cases in Mysore District.

Q.—424. SRI M. CHIKKALINGIAH (Malavalli-Scheduled Castes).—

Will the Government be pleased to state :—

(a) the number of forest cases detected in Mysore Division from 1st January 1955 up-to-date, by the officers and by the subordinate staff, separately ;

(b) the number of cases convicted and the number compounded ;

(c) the amount realised thereby ?

A.—DR. R. NAGAN GOWDA (Minister for Agriculture).—

(a)—

By the officers ... 22

By the subordinate staff ... 532

(b) Convicted ... 8 cases.

Compounded ... 546 cases.

(c) Rs. 23,764-7-0.

Message from the Legislative Council *re* : Bills Passed.

Mr. SPEAKER.—I report to the House that a message has been received from the Legislative Council that the following Bills passed by the Assembly during the current session and transmitted to the Council have been passed by the Council without any amendments or recommendations.—

1. The Mysore (Personal and Miscellaneous). Inam Abolition (Amendment) Bill, 1956.
2. The Mysore Appropriation Bill, 1956.
3. The Mysore Alienated Villages (Protection of Tenants and Miscellaneons Provisions) Amendment Bill, 1956.
4. The Madras Village Panchayats (Mysore Amendment) Bill, 1956.
6. The Mysore Appropriation (No. 2) Bill, 1956.

Committee of Privileges.

Motion for Election.

Sri T. CHANNIAH (Minister for Local Self-Government and Public Health).—Sir, I beg to move ?

"That this Assembly do proceed to the election of four members to the Committee of Privileges in accordance with sub-rule (2) of rule 171 of the Rules of Procedure and Conduct of Business in the Mysore Legislative Assembly."

Mr. SPEAKER.—The question is :

"That this Assembly do proceed to the election of four members to the Committee of Privileges in accordance with sub-rule (2) of rule 171 of the Rules of Procedure and Conduct of Business in the Mysore Legislative Assembly."

The motion was adopted.

Mr. SPEAKER.—The Chair desires to inform the House that for the purpose of election of four members to the Committee of Privileges the Office of the Secretary will be open to receive notice of candidature up to 3 P.M. on Friday the 6th April 1956 and that the election, if necessary, will take place on Saturday the 7th April 1956 in the Assistant Secretary's room between the hours of 10 A.M. and 12 NOON. The election will be conducted as laid down in sub-rule (2) of rule 171 of the Rules of Procedure and Conduct of Business in the Mysore Legislative Assembly in accordance with the principle of proportional representation by means of the single transferable vote.

SPECIAL RESOLUTION.

Re : Discontinuance of Cultural Development Movement.

*Sri T. MARIAPPA (Mysore City-North).—Mr. Speaker, I beg to move the special resolution tabled by 58 members of this Assembly. It is as follows:—

"This Assembly is of the opinion that the cultural development movement be discontinued and the expenditure provided for the same in the Budget from 1956-57 be not incurred."

Sir, it is not necessary for me to make a very lengthy speech on this resolution. During the budget discussion and during interpellation hour, members of this House desired that the expenditure earmarked for this movement be not incurred. Their idea was that the money set apart for this activity should be better utilised for developmental purposes. To state briefly the background under which this resolution came to be tabled : on the day on which an interpellation regarding expenditure incurred in the Tumkur District was being questioned in this House, many Hon'ble Members here stated that the very objective for which this movement was undertaken unfortunately was not being fulfilled, that the purposes for which it was intended were not being fulfilled. It

(SRI T. MARIAPPA.)

was their desire that the Ministry should go into this question and respond to the opinions expressed here in a very generous manner. I hope that the Ministry would respond in a very generous manner and utilise the amount earmaked for this for developmental projects. With these few words, I commend the resolution for the acceptance of the House.

MR. SPEAKER.—Resolution moved :

"This Assembly is of the opinion that the cultural development movement be discontinued and the expenditure provided for the same in the Budget from 1956-57 be not incurred.''

*ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಅಧ್ಯಕ್ಷರೇ, ಶ್ರೀ ಮರಿಯಪ್ಪನವರು ಮತ್ತು ನಾವುಗಳು ಎಲ್ಲಾ ಒಟ್ಟು 58 ಜನರು ಸೇರಿ ತಂದಿರುವ ಈ ನಿರ್ಣಯವನ್ನು ನಾನು ಬಹಳ ಸಂಕಟದಿಂದ ಅನುಮೋದಿಸಿ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ಇಡುತ್ತೇನೆ. ನನಗೆ ಗೊತ್ತು, ಇದು ಚೀಫ್ ಮಿನಿಸ್ಟರವರ ಮತ್ತು ಸರ್ಕಾರದವರ ಒಂದು ತರಹದ ಮೋಹದ ಕೂಸು. ಸರ್ಕಾರದವರು ಬಹಳ ಸದುದ್ದೇಶದಿಂದ ದೇಶದಲ್ಲಿರುವ ಎಲ್ಲಾ ಜನಗಳ ಸಾಹಿತ್ಯ, ಸಂಸ್ಕೃತಿ, ಅವರ ನೀತಿ ಇವುಗಳೆಲ್ಲವನ್ನೂ ಒಂದು ತರಹ ಉನ್ನತ ಮಟ್ಟಕ್ಕೆ ತರಬೇಕೆಂಬ ಅಭಿಪ್ರಾಯದಿಂದ ಈ ಸಂಸ್ಕೃತಿ ಪ್ರಚಾರ ಕಾರ್ಯವನ್ನು ಕೈಕೊಂಡರು. ಇದು ಪ್ರಾರಂಭವಾದಾಗ, ನಮಗೆ ಗೊತ್ತು, ನಮ್ಮ ಸೀಮೆಯಲ್ಲಿ ಸಂಸ್ಕೃತಿ ಮತ್ತು ಸಾಹಿತ್ಯ, ನೀತಿ ಹೆಚ್ಚಾಗಬೇಕಾದದ್ದು ಅವಶ್ಯಕ ಎಂಬ ಅಂಶವನ್ನು ತಿಳಿದುಕೊಂಡೇ ನಮ್ಮ ಚೀಫ್ ಮಿನಿಸ್ಟರವರು ಅವರ ಛೇಂಬರ್ಸ್‌ನಲ್ಲಿ ಅನೇಕ ಜನ ಸಾಹಿತಿಗಳು ಅನೇಕಜನ ತಜ್ಞರು, ಪುಸ್ತಕ ಬರೆಯುವವರು, ಕಲಾಭಿಮಾನಿಗಳು ಇವರೆಲ್ಲರ ಒಂದು ಸಭೆಯನ್ನು ಸೇರಿಸಿದರು. ಸೇರಿಸಿ ಆಗ ಅವರ ಸಲಹೆಯನ್ನು ಪಡೆದರು. ನಿಮ್ಮಗಳ ಅಭಿಪ್ರಾಯ ಏನು ? ಹೀಗೆ ಸಂಸ್ಕೃತಿ ಪ್ರಚಾರ ಮಾಡಿ ಜನಗಳಲ್ಲಿ ಒಂದು ತರಹ ದೈವಭಕ್ತಿ, ದೇಶಭಕ್ತಿ ಉಂಟುಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ? ಎಂದು ಕೇಳಿದರು. ಅದರಲ್ಲಿ ಬಹಳ ದೊಡ್ಡ ದೊಡ್ಡ ವಿದ್ವಾಂಸರು ಇದ್ದರು. ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರು, ಟಿ. ಎಸ್. ಶ್ರೀಕಂಠಯ್ಯನವರು, ಗುಂಡಪ್ಪನವರು ಮತ್ತು ನಾನೂ ಕೂಡ ಇದ್ದೆ. ನಾವೆಲ್ಲರೂ ಸೇರಿದ್ದೆವು. ಅಲ್ಲಿ ಯಾವ ರೀತಿ ಮಾಡಬೇಕೆಂಬುದಾಗಿ ಚರ್ಚೆ ನಡೆಯಿತು.

ಅಲ್ಲಿ ಅನೇಕ ಸಲಹೆಗಳು ಕೊಡಲ್ಪಟ್ಟವು. ಒಟ್ಟಿನಲ್ಲಿ ಎರಡು ಅಭಿಪ್ರಾಯಗಳು ಬಂದವು. ಅವು ಯಾವುವೆಂದರೆ, ಈ ಸಂಸ್ಕೃತಿ ಪ್ರಚಾರ ಮುಂತಾದುವನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೇ ಅಥವಾ ಯಾವುದಾದರೂ ಒಂದು ಸಂಸ್ಥೆ ತೆಗೆದುಕೊಳ್ಳಬೇಕೇ ಎಂದು. ಇಂಥ ಸಂಸ್ಕೃತಿ ಪ್ರಚಾರವನ್ನು ತೆಗೆದುಕೊಳ್ಳುವುದು ಸರ್ಕಾರದವರ ಕೆಲಸವಲ್ಲ ; ಯಾವುದಾದರೂ ಸಂಸ್ಥೆ, ಕರ್ಣಾಟಕ ಸಾಹಿತ್ಯ ಪರಿಷತ್ತು ಮುಂತಾದ ಸಂಸ್ಥೆಗಳು ಆಸಕ್ತಿ ವಹಿಸಿ ಸರಿಯಾಗಿ ಕೆಲಸ ಮಾಡಿದರೆ ಸರ್ಕಾರದವರು ಗ್ರ್ಯಾಂಟ್ ರೂಪವಾಗಿ ಮಾತ್ರ ಸಹಾಯಮಾಡಬೇಕು ಎಂದು ನಮ್ಮ ಅಭಿಪ್ರಾಯವಾಗಿತ್ತು. ಆದರೆ ಅಲ್ಲಿ ಅನೇಕ ಜನ ಮಹನೀಯರು ಸರ್ಕಾರದವರೇ ನೇರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂಬ ಸಲಹೆ ಕೊಟ್ಟದ್ದರಿಂದ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಕಾರ್ಯವನ್ನು ಬಹಳ ಆಸಕ್ತಿಯಿಂದ ವಹಿಸಿಕೊಂಡರು.

ಮೊದಮೊದಲು ಇದಕ್ಕೆ ಹೆಚ್ಚಾಗಿ ಹಣ ಖರ್ಚಾಗುವುದಿಲ್ಲವೆಂದು ಪ್ರಾರಂಭಮಾಡಿದರ . ಆಗ ಶ್ರೀಮಾನ್ ಸಿ. ಕೆ. ವೆಂಕಟರಾಮಯ್ಯನವರನ್ನು ಸಂಸ್ಕೃತಿ ಪ್ರಚಾರ ಕಾರ್ಯಕ್ಕೆ ಡೈರೆಕ್ಟರ್ ಆಗಿ ನೇಮಕ ಮಾಡಿದರು. ಇವರ ಜೊತೆಗೆ ಇನ್ನೂ ಒಂದು ಸಮಿತಿಯನ್ನು ನೇಮಿಸಲಾಯಿತು. ಆ ಸಮಿತಿಗೆ ಮುಖ್ಯವಾಗಿ ಸಂಸ್ಕೃತಿ ಪ್ರಚಾರ ಮಾಡತಕ್ಕ ಗಮಕಿಗಳನ್ನು, ಉಪನ್ಯಾಸಕರನ್ನು ಮುಂತಾದವರನ್ನು ಆರಿಸುವ ಕೆಲಸವನ್ನು ವಹಿಸಿದರು. ಸಮಿತಿಯವರು ಈ ಭಾಗಗಳಲ್ಲಿ ಮುಖ್ಯರಾದವರನ್ನೂ ಲಾಯಕ್ಕಾದವರನ್ನೂ ಆರಿಸಬೇಕಾಗಿತ್ತು. ಇದರಲ್ಲಿ ನನಗೆ ಕೆಲವು ಭಿನ್ನಾಭಿಪ್ರಾಯಗಳೂ ಮತ್ತು ಸಂಶಯಗಳೂ ಬಂದದ್ದರಿಂದ ನಾನು ರಾಜಿನಾಮೆ ಕೊಟ್ಟೆ. ಸಂಸ್ಕೃತಿಪ್ರಚಾರದ ಉದ್ದೇಶ ಒಳ್ಳೆಯದಾದರೂ ಕಾರ್ಯತಃ ಇದರಿಂದ ದೇಶಕ್ಕೆ ಮತ್ತು ಜನರಿಗೆ ಹೆಚ್ಚು ಪ್ರಯೋಜನವಾಗುವುದಿಲ್ಲ ಭರೀ ಹಣ ಮಾತ್ರ ನಷ್ಟವಾಗುತ್ತದೆ ಎಂಬ ಕಾರಣದಿಂದ ನಾನು ರಾಜಿನಾಮೆ ಕೊಟ್ಟೆ. ಆಗಲೂ ನಮ್ಮ ವಿರೋಧಪಕ್ಷದವರು ಸದುದ್ದೇಶದಿಂದ ವಿರೋಧಿಸುತ್ತಿದ್ದರು. ಇದರಲ್ಲಿ ಒಂದು ಸಂತೋಷದ ಅಂಶವೇನಂದರೆ, ನಾವು ವಿರೋಧಿಸಬೇಕೆಂದು ವಿರೋಧಿಸುವುದಿಲ್ಲ, constructive opposition ಮಾತ್ರ ಮಾಡುತ್ತೇವೆಂಬುದು ಈ ನಿರ್ಣಯಕ್ಕೆ ಅನೇಕ ಜನ ಸದಸ್ಯರು ರುಜು ಹಾಕಿರುವುದರಿಂದ ವ್ಯಕ್ತವಾಗುತ್ತದೆ.

ಸಂಸ್ಕೃತಿ ಪ್ರಚಾರ ಕಾರ್ಯದಿಂದ ದೇಶಕ್ಕೆ ಕ್ಷೇಮವಾಗಿದೆಯೇ, ಪ್ರಜೆಗಳಿಗೆ ಒಳ್ಳೆಯದಾಗಿದೆಯೇ, ಸಂಸ್ಕೃತಿ ಹೆಚ್ಚಾಗಿದೆಯೇ ಎಂದು ನೋಡಬೇಕು. ಇವೆಲ್ಲವೂ ಆಗಿದ್ದರೆ ಇನ್ನೂ ಅಷ್ಟು ಹಣವನ್ನು ಒಟ್ಟು ಮಾಡುವುದಕ್ಕೆ ನಾನು ಹಿಂಜರಿಯುತ್ತಿರಲಿಲ್ಲ. ಮುಖ್ಯ ಮಂತ್ರಿಗಳಿಗೆ ಎಲ್ಲ ವಿಷಯಗಳೂ ತಿಳಿಯುವುದು ಕಷ್ಟ. ಸಂಸ್ಕೃತಿ ಪ್ರಚಾರ ಕಾರ್ಯ ಎಲ್ಲ ಕಡೆಗಳಲ್ಲಿಯೂ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ತಿಳಿದುಕೊಂಡಿರಬಹುದು. ಆದರೆ ವಾಸ್ತವಾಂಶಗಳನ್ನು ಸರ್ಕಾರದ ಮುಂದೆ ಇಡುವುದು ನಮ್ಮಗಳ ಕರ್ತವ್ಯ. ಈಗ ಏನಾಗಿದೆ ಎಂದರೆ, ಈ ಕಾರ್ಯಕ್ಕೆ ಒಬ್ಬರ ಡೈರೆಕ್ಟರ್, ಒಂದು ದೊಡ್ಡ ಸಿಬ್ಬಂದಿ ಇಷ್ಟೆಲ್ಲಾ ಇದ್ದು ಸರ್ಕಾರಕ್ಕೆ ಸುಮಾರು ನಾಲ್ಕೈದು ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಎಷ್ಟು ಹಣ ಖರ್ಚಾಗುತ್ತಿದೆಯೋ ಅದಕ್ಕೆ ತಕ್ಕಷ್ಟು ಪ್ರತಿಫಲ ದೊರೆಯುತ್ತಿಲ್ಲ. ಅನೇಕರಿಗೆ ಇದು ಒಂದು ತರಹ ಜೀವನಕ್ಕೆ ಮಾರ್ಗವಾಗಿದೆ. ಇದಕ್ಕೆ ಗಮಕಿಗಳು, ಹರಿಕಥೆದಾಸರು ಮೊದಲಾದವರೆಲ್ಲರೂ ಅರ್ಜಿಹಾಕುತ್ತಾರೆ. ಯಾರೋ ಒಬ್ಬ ಜೋತಿಷ್ಯ ನೋಡುವವರು, ಲಗ್ನಗಳನ್ನು ಕಟ್ಟಿಕೊಡುವವರು ನನ್ನಬಳಿ ಬಂದು ಸಂಸ್ಕೃತಿ ಪ್ರಚಾರಕ್ಕೆ ಹೋಗಬೇಕು, ಅರ್ಜಿ ಕೊಡುತ್ತೇನೆ, ಕಳುಹಿಸಿಕೊಡಿ ಎಂದು ಕೇಳಿದ್ದರು. ಇಂಥ ಅನುಭವಗಳು ಎಲ್ಲ ಸದಸ್ಯರಿಗೂ ಇರಬಹುದು. ಹೀಗೆ ಸದವಕಾಶಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಇರುವ ಸಂಭವ ಬಂದಿದೆ. ಈ ಕಾರ್ಯಕ್ಕೆ ಬರುವವರೆಲ್ಲರೂ

ಸಂಸ್ಕೃತಿಯನ್ನು ವೃದ್ಧಿಪಡಿಸಬೇಕು ಎಂಬ ಘನೋದ್ದೇಶದಿಂದ ಬರುತ್ತಿಲ್ಲ. ಅನೇಕರು ತಮ್ಮ ಉದರ ಪೋಷಣೆ ಮಾಡಿಕೊಳ್ಳುವುದಕ್ಕೆ ಇದೂ ಒಂದು ಕಸಬು ಎಂದು ಬರುತ್ತಿದ್ದಾರೆ. ಆದುದರಿಂದಲೇ ಈ ಕಾರ್ಯವು ಅಪಹಾಸ್ಯಕ್ಕೆ ಗುರಿಯಾಗಿದೆ. ಸಂಸ್ಕೃತಿ ಪ್ರಚಾರ ಕಾರ್ಯಕ್ಕೆ ಜನರನ್ನು ಆರಿಸುವ Selection Committee ಸರಿಯಾಗಿ ಸೆಲೆಕ್ಟ್ ಮಾಡಿಲ್ಲ. ಅಲ್ಲದೆ ಸಂಸ್ಕೃತಿ ಪ್ರಚಾರಮಾಡಲು ಯಾರಾದರೂ ಬಂದರೆ ಅವರು ಹೇಳುವುದನ್ನು ಕೇಳಲು ಜನರಿಗೆ ಆಸಕ್ತಿ ಇರುವುದಿಲ್ಲ. ಅನೇಕರು ಸಂಸ್ಕೃತಿ ಪ್ರಚಾರ ಮಾಡುತ್ತಾರೆ, ಭಾರತ ಓದುತ್ತಾರೆ. ಆದರೆ ಅದಕ್ಕೆ ಹೆಚ್ಚು response ಇರುವುದಿಲ್ಲ, ಜನಗಳು ಬರುವುದಿಲ್ಲ. ಎಷ್ಟೋ ಜನರು ಹೇಳುವುದರಲ್ಲಿ ತಿರುಳಿಲ್ಲ.

ಇನ್ನೊಂದು ಅಂಶವೇನೆಂದರೆ, ಜಗಳೂರಿನಲ್ಲಿ ಸಂಸ್ಕೃತಿ ಪ್ರಚಾರ ಮಾಡಬೇಕಾದರೆ ಮಾಲೂರಿನಿಂದ ಒಬ್ಬರು ಬಂದರು. ಅವರು ಏನು ಹೇಳುತ್ತಾರೆಂದು ನೋಡಿದರೆ ಗದುಗಿನ ನಾರಣಪ್ಪನವರ ಭಾರತವನ್ನು ಓದಲಿಲ್ಲ; ಯಾವುದೋ ಒಂದು prose, ವಚನ ಕಾವ್ಯದಿಂದ ಓದಿ ಕರ್ಣನು ತನ್ನ ಕುಂಡಲಗಳನ್ನು ಕೊಟ್ಟುಬಿಟ್ಟ ಮುಂತಾಗಿ ಹೇಳಿದರು. ನಮಗೆ ಗೊತ್ತಿಲ್ಲದೆ ಇರುವುದನ್ನು ಇದರಲ್ಲಿ ಏನು ಹೇಳಿದಹಾಗಾಯಿತು ? ಕೆಲವರು ಬಹಳ ಚೆನ್ನಾಗಿ ಓದಬಲ್ಲರು. ಇಂಥವರಿಗೆ ಟಿ. ಎ. ಮುಂತಾಗಿ ಕೊಡುತ್ತಿದ್ದಾರೆ. ಹರಿಕಥೆಯನ್ನು ಮಾಡುವ ದಾಸರಿಗೆ 75 ರೂಪಾಯಿ ಕೊಡುತ್ತಾರೆ. ಸಂಗೀತದವರಿಗೆ 150 ರೂಪಾಯಿ ಕೊಡುತ್ತಾರೆ. ಎಷ್ಟೋ ಸಲ ಸಂಗೀತಗಾರರಿಗಿಂತಲೂ ನಾನೇ ಬಹಳ ಚೆನ್ನಾಗಿ ಹಾಡಬಲ್ಲೆ ಎಂದೆನ್ನಿಸುತ್ತದೆ. ಇವರುಗಳಿಗೆ ಪ್ರಯಾಣದ ಖರ್ಚನ್ನೂ ಸಹ ಕೊಡಬೇಕು. ಈಗಿನ ವಿಧಾನದಿಂದ, ಇರತಕ್ಕ ಒಳ್ಳೆಯ ಅವಕಾಶಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಮತ್ತು ಕೆಲವರಿಗೆ ಹೊಟ್ಟೆತುಂಬಿಕೊಳ್ಳುವುದಕ್ಕೆ ಮಾರ್ಗವಾಗಿದೆ. ಈ ಬಾಬಿಗಾಗಿ ಸರ್ಕಾರಕ್ಕೆ ನಾಲ್ಕೈದು ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಈ ಹಣ ಸರಿಯಾಗಿ ಖರ್ಚಾಗದೆ ಇದೆ ಎಂಬ ವಿಷಯವನ್ನು ಸರ್ಕಾರದವರ ಗಮನಕ್ಕೆ ತರುವುದು ನಮ್ಮ ಕರ್ತವ್ಯ. ನಮ್ಮ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲದೆ ಇರುವಾಗ ಈ ಬಾಬಿನ ಮೇಲೆ ಇಷ್ಟು ಹಣ ವೆಚ್ಚಮಾಡುವುದು ಸರಿಯಲ್ಲ -- ಇದನ್ನು ತೆಗೆದುಬಿಟ್ಟರೆ ಬಹಳ ಕ್ಷೇಮ. ಇದೇ ಹಣವನ್ನು ಜನಗಳಿಗೆ ಅಭಿವೃದ್ಧಿಯಾಗುವ ರೀತಿಯಲ್ಲಿ ಖರ್ಚು ಮಾಡುವ ಮಾರ್ಗವಿದ್ದರೆ ಅದನ್ನು ಒಪ್ಪಿಕೊಳ್ಳುವುದು ನಮ್ಮ ಕರ್ತವ್ಯ. ಇಷ್ಟು ಮಾತ್ರ ಹೇಳಿ ಈ ನಿರ್ಣಯವನ್ನು ಅನುಮೋದಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಸಂಸ್ಕೃತಿ ದೇಶದ ದೊಡ್ಡ ಸಂಪತ್ತು. ಸಂಸ್ಕೃತಿಯು ನಮ್ಮ ದೇಶದಲ್ಲಿ ಮೊದಲಿನಿಂದಲೂ, ಆದಿಕಾಲದಿಂದಲೂ, ಅನೂಚಾನವಾಗಿ ನಡೆದುಕೊಂಡು ಬಂದಿದೆ. ಈಚೆಗೆ ಕಾರಣಾಂತರದಿಂದ ಈ ಸಂಸ್ಕೃತಿಯ ಪ್ರಭಾವ ದಿನೇ ದಿನೇ ಕುಂಠಿತವಾಗುತ್ತ ಬಂದದ್ದರಿಂದ ಮಾನ್ಯ ನಮ್ಮ ಸಭಾನಾಯಕರು ಈ ವಿಷಯವನ್ನು ನಮ್ಮ ಮುಂದೆ ತಂದು ಪಾಸ್ ಮಾಡಿಸಿ, ದೇಶಾದ್ಯಂತ ಸಂಸ್ಕೃತಿ ಪ್ರಚಾರ ವ್ಯವಸ್ಥೆಯನ್ನು ಮಾಡಿದರು. ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಿದಂತೆ ಒಂದೆರಡುಕಡೆ ಕೆಲವು ಅನಿವಾರ್ಯಗಳು ನಡೆದಿರಬಹುದು. ದೇಶದಲ್ಲಿ ಯಾವ ಕೆಲಸಕ್ಕೆ ಕೈ ಹಾಕಲಿ ಅನಿವಾರ್ಯಗಳು ಬರುವುದು ಸಹಜ. ಸಂಸ್ಕೃತಿ ಪ್ರಸಾರ ಕಾರ್ಯ ಮಾಡುವಾಗ ಮೊದಮೊದಲು ಒಂದು ಜಿಲ್ಲೆಯವರು ಇನ್ನೊಂದು ಜಿಲ್ಲೆಗೆ ಹೋಗಿ ವಿಶೇಷವಾದ ಪ್ರಯಾಣ ಖರ್ಚು ಮತ್ತು ಅವರ ಆ ದಿನದ ಕಾರ್ಯದ ರುಸುಮನ್ನು ಪಡೆಯುತ್ತಿದ್ದರು. ಈಚೆಗೆ ಮಾನ್ಯ ಮುಖ್ಯ ಮಂತ್ರಿಗಳು ಆಯಾ ತಾಲ್ಲೂಕುಗಳಲ್ಲಿ ಸಂಸ್ಕೃತಿ ಪ್ರಸಾರ ಕಾರ್ಯ ಆಯಾ ತಾಲ್ಲೂಕುಗಳಲ್ಲಿರುವವರಿಂದಲೇ ಮಾಡಿಸಬೇಕೆಂದು ಒಂದು ಆಜ್ಞೆ ಹೊರಡಿಸಿದರು. ಈಗ ಕಡಿಮೆ ವೆಚ್ಚದಲ್ಲಿ ಪ್ರತಿ ಹಳ್ಳಿಯಲ್ಲಿಯೂ, ಪ್ರತಿಹೋಬಳಿಯಲ್ಲಿಯೂ ಈ ಕಾರ್ಯವನ್ನು ನಡೆಸುತ್ತಿದ್ದೇವೆ. ಮಾಗಡಿ ತಾಲ್ಲೂಕು ತಿಪ್ಪಗೊಂಡನಹಳ್ಳಿಯಲ್ಲಿ ಸಂಸ್ಕೃತಿ ಪ್ರಚಾರ ಕಾರ್ಯವನ್ನು ಏರ್ಪಾಡು ಮಾಡಿದ್ದೆ. ಶ್ರೀಮಾನ್ ಎಂ. ಪಿ. ಎಲ್. ಶಾಸ್ತ್ರಿಗಳವರು ಬಂದು ಭಾಷಣ ಮಾಡಿದರು. ಆಗ ಸುಮಾರು ಮೂರು ಸಾವಿರ ಜನ ನೆರೆದಿದ್ದರು.

ನಮ್ಮ ಮಾನ್ಯ ಮಾಜಿ ಮಂತ್ರಿಗಳಾದ ಮರಿಯಪ್ಪನವರು ಸಂಸ್ಕೃತಿ ಪ್ರಚಾರಕ್ಕೆ ಕೊಡುವ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಿ ದೇಶಕ್ಕೆ ಅನುಕೂಲ ಮಾಡಬೇಕೆಂದು ಅಪ್ಪಣೆ ಕೊಡಿಸಿದರು. ಆದರೆ ಅವರಿಗೆ ದೇಶದಲ್ಲಿ ಸಂಸ್ಕೃತಿ ಹೆಚ್ಚಾಗಬೇಕು ಎಂಬ ಆಕಾಂಕ್ಷೆ ಇಲ್ಲವೆಂದಲ್ಲ. ಅವರಿಗೂ ಆಕಾಂಕ್ಷೆ ಇದೆ. ಮಾಜಿ ಮಂತ್ರಿಗಳಾಗಿದ್ದ ಶ್ರೀಮಾನ್ ಇಮಾಂ ಸಾಹೇಬರು ಕೂಡ ಈ ವಿಚಾರದಲ್ಲಿ ಮಾತನಾಡಿದರು. ಅವರನ್ನು ಕೂಡ ನಾನು ಮಾಗಡಿ ತಾಲ್ಲೂಕಿಗೆ ಕರೆದುಕೊಂಡು ಹೋಗಿದ್ದೆ; ಅಲ್ಲಿ ಒಂದು ಸಭೆಗೆ ನಾಲ್ಕೈದು ಸಾವಿರ ಜನ ಸೇರಿದ್ದರು.

ದೇಶದಲ್ಲಿ ಸಂಸ್ಕೃತಿ ಪ್ರಸಾರ ಕಾರ್ಯ ಫಲಕಾರಿಯಾಗಿದೆ. ಸಂಸ್ಕೃತಿ ಪ್ರಸಾರದ ಪ್ರಭಾವದಿಂದ ದೇಶದಲ್ಲಿ ಅಸಂಸ್ಕೃತರಾಗಿದ್ದ ಜನರು ಸುಸಂಸ್ಕೃತರಾಗಿ ಮುಂದುವರಿದು ಕಳ್ಳತನ, ಮೋಸ ಮುಂತಾದ್ದರಲ್ಲಿ ತೊಡಗಿದ್ದ ಜನರು ಉತ್ತಮಗೊಳ್ಳುವುದಕ್ಕೆ ಅನುಕೂಲವಾಯಿತೆಂದು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾರೋ ಒಬ್ಬರು, ಕುರುಡನಿಗೆ ದೀಪ ಬೇಡದೆ ಇದ್ದರೆ ಊರಿಗೇ ಬೆಂಕಿಕಡ್ಡಿ ಕೊಡಲಲ್ಲವೆಂದ ಹಾಗೆ ಇದೆ ಈ ಮಾತುಗಳು. ಸಂಸ್ಕೃತಿ ಪ್ರಸಾರ ಕಾರ್ಯ ನಡೆಯಬೇಕೇ ಅಥವಾ ಬೇಡವೇ ಎಂದು ದೇಶದಲ್ಲಿ ಮತವನ್ನು ತೆಗೆದುಕೊಂಡು, ನೇಕಡ 75 ರಷ್ಟು ಜನ ಇರಬೇಕು ಎಂದು ಹೇಳಿದರೆ ಆಗ ಏನು ಹೇಳುತ್ತೀರಿ ? ಹಣ ದುಂದು ವೆಚ್ಚವಾಗುತ್ತಿದೆ ಸರಿಯಾಗಿ ವೆಚ್ಚವಾಗುತ್ತಿಲ್ಲವೆಂದು ಹೇಳಿ ಸಂಸ್ಕೃತಿ ಪ್ರಸಾರ ಕಾರ್ಯವೇ ಬೇಡವೆಂದು ಅದನ್ನು ತಳ್ಳಿಹಾಕುವುದು ಸಾಧುವಾದದ್ದಲ್ಲ. ಈ ಕಾರ್ಯವು ಬಹಳ ಉನ್ನತವಾದ ರೀತಿಯಲ್ಲಿ ಮುಂದುವರಿಯುತ್ತಿದೆ. ಮತ್ತು ಸಾಹಿತ್ಯ ಮತ್ತು ಸಂಸ್ಕೃತಿ ಪ್ರಭಾವದಿಂದ ದೇಶ ಉನ್ನತ ಮಟ್ಟಕ್ಕೆ ಬರಲು ಅವಕಾಶವಾಗುತ್ತದೆ ಎನ್ನುವುದನ್ನು ಮರೆಯಬಾರದು. ತಾವುಗಳೆಲ್ಲ ದಯವಿಟ್ಟು ಈ ಸಂಸ್ಕೃತಿ ಪ್ರಚಾರ ಕಾರ್ಯವನ್ನು ಉಳಿಸಿಕೊಡಬೇಕು ಮತ್ತು ದೇಶದ ಅಭಿಪ್ರಾಯ ತಿಳಿಯಬೇಕು ಎಂದು ಸಭಾಸದರಲ್ಲಿ ನಾನು ಪ್ರಾರ್ಥಿಸುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಮಾನ್ಯ ಅಧ್ಯಕ್ಷರೇ, ಪ್ರಾಯಶಃ ನಾವುಗಳು ಯಾರೂ ಈ ನಿರ್ಣಯದ ಬಗ್ಗೆ ಮಾತನಾಡತಕ್ಕ ಪರಿಸ್ಥಿತಿ ಉಂಟಾಗುತ್ತದೆಂದು ತಿಳಿದಿರಲಿಲ್ಲ. ಆದರೆ ಶ್ರೀಮಾನ್ ಸಿದ್ದಪ್ಪನವರು ಇದನ್ನು ವಿರೋಧಿಸಿದ ಮೇಲೆ ನಾವು ಸುಮ್ಮನಿದ್ದರೆ ಒಂದು ಕರ್ತವ್ಯ ಲೋಪವಾಗುತ್ತದೆಂದು ನಿಂತಿದ್ದೇನೆ. ಶ್ರೀ ಸಿದ್ದಪ್ಪನವರು ಒಂದು ಸಲಹೆ ಮಾಡಿದರು. ದೇಶದ ಮುಂದೆ ಹೋಗಿ ಸಂಸ್ಕೃತಿ ಪ್ರಚಾರ ಕಾರ್ಯ ಬಹಳ ಜನಾನುರಾಗಿ

(ಶ್ರೀ ಎ. ವಿ. ನರಸಿಂಹರೆಡ್ಡಿ)

ಯಾಗಿದೆಯೋ, ಇಲ್ಲವೇ ಎಂದು ಓಟಿಗಿಡೋಣವೆಂದು ಹೇಳಿದರು. ಇದಕ್ಕಿಂತಲೂ ಪ್ರಥಮವಾಗಿ ಪ್ರಾಂತ ವಿಂಗಡಣೆ ವಿಷಯವಾಗಿ ಈ ತರಹ ಸಲಹೆಯನ್ನು ನಾವು ಮಾಡಿದಾಗ ಇವರು ತೀವ್ರವಾಗಿ ವಿರೋಧ ಮಾಡಿದರು. ಇವರು ಎಷ್ಟರಮಟ್ಟಿಗೆ ವಿಷಯಗಳನ್ನು ಪುಷ್ಟೀಕರಿಸುತ್ತಾರೆ, ವಾದಕ್ಕಾಗಿ ವಾದ ಮಾಡುತ್ತಾರೆಯೋ, ನಿಜವಾದ ಪರಿಸ್ಥಿತಿಯನ್ನು ಅರಿತುಕೊಂಡು ವಾದ ಮಾಡುತ್ತಾರೆಯೋ ಎನ್ನುವುದನ್ನು ಊಹಿಸಬಹುದೆಂದು ಭಾವಿಸುತ್ತೇನೆ. ನಮ್ಮ ಸಂಸ್ಥಾನದಲ್ಲಿ ಸಂಸ್ಕೃತಿ ಪ್ರಚಾರ ವಿಷಯ ಎಷ್ಟು ಮಟ್ಟಿಗೆ ಜನಾನುರಾಗಿಯಾಗಿದೆ, ಎಷ್ಟು ಮಟ್ಟಿಗೆ ಜನಗಳ ವಿಶ್ವಾಸವನ್ನು ಗಳಿಸಿದೆ ಎಂಬುದಕ್ಕೆ ಈ ಶಾಸನ ಸಭೆಯಲ್ಲಿ ನನಗೆ ತಿಳಿದಿರುವ ಮಟ್ಟಿಗೆ 105 ಜನ ಸದಸ್ಯರಲ್ಲಿ ಸುಮಾರು 80 ಜನರು ಸಂಸ್ಕೃತಿ ಪ್ರಚಾರ ಕಾರ್ಯಕ್ಕೆ ವಿರೋಧವಾಗಿದ್ದಾರೆಂದು ಹೇಳಬಹುದು. ಈಗ ಈ ನಿರ್ಣಯಕ್ಕೆ 58 ಜನ ರುಜು ಹಾಕಿ ಸಭೆಯ ಮುಂದೆ ಇಟ್ಟಿದ್ದಾರೆ. ಈ ನಿರ್ಣಯದ ಅಂಶಗಳನ್ನು ಇವರೆಲ್ಲ ಒಪ್ಪಿದ್ದಾರೆಂದು ಧಾರಾಳವಾಗಿ ಹೇಳಬಹುದು. ಹೀಗಿರುವಾಗ ದೇಶದಲ್ಲಿ ಜನಗಳು ಹೀಗೆ ಹೇಳುತ್ತಿಲ್ಲವೆನ್ನುವ ಸಲಹೆ ಖಂಡಿತವಾಗಿಯೂ ಒಪ್ಪತಕ್ಕದ್ದಲ್ಲ. ಶ್ರೀ ಸಿದ್ದಪ್ಪನವರು ಮಾತನಾಡುವುದಕ್ಕೆ ಮೊದಲು ಇದೆಲ್ಲವನ್ನೂ ಚೆನ್ನಾಗಿ ತಿಳಿದುಕೊಂಡಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನನಗನ್ನಿಸುತ್ತದೆ. ನಾನು ಈ ಬಗ್ಗೆ ಇನ್ನು ಹೆಚ್ಚು ಬೆಳೆಸುವುದಕ್ಕೆ ಹೋಗದೆ ಈ ಶಾಸನ ಸಭೆಯ ಎಲ್ಲ ಮಿತ್ರರೂ ಕೂಡ ನಮ್ಮ ಸಭಾ ನಾಯಕರು ಏನು ಹೇಳುತ್ತಾರೋ ಅದನ್ನು ಕೇಳಿ ಎಲ್ಲರೂ ತಮ್ಮ ತಮ್ಮ ಅಭಿಮತವನ್ನು ಕೊಡುತ್ತಾರೆಂದು ಭಾವಿಸುತ್ತೇನೆ.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಸ್ವಾಮಿ, ಈ ಮಾನ್ಯ ಸಭೆಯ ಸುಮಾರು 58 ಮಂದಿ ಸದಸ್ಯರು ಒಂದು ವಿಷಯದಲ್ಲಿ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ನಾನಾದರೂ ಬಹಳ ಮನಸ್ಸನ್ನು ಕೊಟ್ಟು ಗಹನವಾಗಿ ಯೋಚನೆ ಮಾಡಬೇಕಾದ ವಿಷಯ ಅದು. ಈ ಸಭೆಯ ಒಬ್ಬ ಸದಸ್ಯರಾದರೂ ಈ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯವನ್ನು ಇಟ್ಟುಕೊಳ್ಳದೆ ಹೋದರೆ ಅಷ್ಟರ ಮಟ್ಟಿಗೆ ಸಂಸ್ಕೃತಿ ಪ್ರಸಾರದ ಫಲ ಕಡಮೆಯಾಗುತ್ತದೆ. ಇದು ಒಂದು ಪಕ್ಷದ ಪ್ರಶ್ನೆಯಾಗಿ ಪ್ರಾರಂಭವಾಗಿಲ್ಲ. ಯಾರಿಗಾದರೂ ಜೀವನೋಪಾಯವನ್ನು ಕಲ್ಪಿಸುವ ಕಸುಬು ಎಂದು ಪ್ರಾರಂಭವಾಡಲಿಲ್ಲ. ಆರ್ಥಿಕ ಉನ್ನತಿ ದೇಶದಲ್ಲಿ ಎಷ್ಟು ಅವಶ್ಯಕವೋ ಹಾಗೆಯೇ ನೀತಿಯ ಉನ್ನತಿಯೂ ಕೂಡ ಅವಶ್ಯಕವೆನ್ನತಕ್ಕದ್ದು ಎಲ್ಲರೂ ಒಪ್ಪತಕ್ಕ ವಿಷಯ. ಮಾನ್ಯ ಸಭೆಯಲ್ಲಿರತಕ್ಕ ಸದಸ್ಯರೆಲ್ಲರೂ ಸುಸಂಸ್ಕೃತರೆಂದು ಮನ್ನಣೆ ಪಡೆದು ಚುನಾಯಿತರಾಗಿ ಬಂದಿದ್ದಾರೆ. ಈ ಸಭಾ ಸದಸ್ಯರು ಒಪ್ಪದೆ ಇರತಕ್ಕದ್ದನ್ನು ದೇಶವೂ ಕೂಡ ಒಪ್ಪುವುದಿಲ್ಲವೆನ್ನತಕ್ಕಂಥ ಆಧಾರದ ಮೇಲೆ ನಾವು ಈ ಪ್ರಜಾಪ್ರಭುತ್ವವನ್ನು ನಡೆಸುತ್ತಿರತಕ್ಕದ್ದು.

1-30 P.M.

ಮತ್ತೊಂದು ಪ್ರಶ್ನೆಯ ಪ್ರಸ್ತಾಪ ಬಂದಾಗ ಈ ಸಭೆಯಲ್ಲಿರತಕ್ಕವರು ಪ್ರಜೆಗಳ ಪರವಾಗಿ ಧರ್ಮದರ್ಶಿಗಳಾಗಿದ್ದಾರೆಯೇ ಹೊರತು ಓಟಿಂಗ್ ಏಜೆಂಟರಲ್ಲ ಎಂದು ಕೂಡ ಹೇಳಿದ್ದೇನೆ. ಈ ವಿಷಯದಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ಈ ಸಭೆ ಯಾವಯಾವುದನ್ನು ಒಪ್ಪುವುದಿಲ್ಲವೋ ಅದನ್ನು ಸ್ವಲ್ಪವೂ ಕೂಡ ಒಪ್ಪುವುದಿಲ್ಲವೆಂದು ಭಾವಿಸಲೇಬೇಕು. ಇಂದು ಪ್ರಶ್ನೆಗಳ ಮುಖಾಂತರ ಅಭಿಪ್ರಾಯ ವ್ಯಕ್ತಪಡಿಸುತ್ತಿದಯೆಂದು ಹೇಳಿ ಶ್ರೀ ಮರಿಯಪ್ಪನವರು ಏನನ್ನು ಪ್ರಸ್ತಾಪಿಸಿದರೆಂದರೆ, ಮುಖ್ಯವಾಗಿ ಉಪನ್ಯಾಸಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಸರಿಯಾಗಿ ಉಪದೇಶ ಮಾಡುತ್ತಿಲ್ಲ, ಸರಿಯಾಗಿ ಸಭೆಗಳು ಸೇರುತ್ತಿಲ್ಲ ಎಂದು. ಇದು ನನ್ನ ಗಮನಕ್ಕೆ ಬಂದಿದೆ, ಇಲ್ಲಿ ಮಾನ್ಯ ಸಭಾ ಸದಸ್ಯರಿಗೂ ಗೊತ್ತು; ಹಾಗೆ ಸರಿಯಾಗಿ ನಡೆಯದೇ ಇರತಕ್ಕಂಥ ಸಭೆಗಳು ಕೆಲವು ಇರಬಹುದು. ಮಾನ್ಯ ಸದಸ್ಯರು ಕಣ್ಣಾರೆ ಕಂಡಿದ್ದನ್ನು ಹೇಳುತ್ತಾರೆಯೇ ಹೊರತು ಉತ್ಪ್ರೇಕ್ಷೆ ಮಾಡಿ ಹೇಳುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಮಾನ್ಯ ಸದಸ್ಯರನೇಕರು ನೋಡಿದ್ದಾರೆ. ಮತ್ತೆ ಕೆಲವು ಕಡೆ ಐದು ಸಾವಿರದಿಂದ ಹತ್ತು ಸಾವಿರದವರೆಗೆ ಜನ ಸೇರಿ ಸಭೆಗಳು ನಡೆದಿವೆ. ಮತ್ತು ಅನೇಕ ಪ್ರತಿಭಾಶಾಲಿಗಳೂ ಕೂಡ ಉಪನ್ಯಾಸ ಮಾಡಿದ್ದಾರೆ. ಸಂಭಾವನೆ ಆಶೆಯನ್ನು ಕೂಡ ಕೆಲವು ಕಡೆ ಕೆಲವರಿಟ್ಟುಕೊಂಡು ಉಪನ್ಯಾಸ ಮಾಡಿರಬಹುದು. ಒಟ್ಟಿನಲ್ಲಿ ಈ ಸಭೆ ಒಪ್ಪದಿರತಕ್ಕಂಥ ಕೆಲಸವನ್ನು ನಾನಾದರೂ ಮಾಡುವುದಕ್ಕೆ ತಯಾರಾಗಿಲ್ಲ. ಇದು ನಮ್ಮ ಭಾಷೆಯಲ್ಲಿ ಸುಸಂಸ್ಕೃತಿಯಾಗಿದೆಯೆಂದು ಹೇಳಬಹುದು. ಇಂದು ನಾನು ಈ ಸಭೆಯಲ್ಲಿ ಅರಿಕೆಮಾಡಿಕೊಳ್ಳುವುದೇನೆಂದರೆ, ಎರಡು ಮೂರು ವರ್ಷಗಳಿಂದ ಶ್ರೀಮಾರ್ಕ್ ಇಮಾಂಸಾಹೇಬರು ಇಲ್ಲಿಯೇ ಇದ್ದು ಒಳ್ಳೆಯದೇನೂ ಕಾರ್ಯರೂಪಕ್ಕೆ ಬಂದು ಸರಿಯಾಗಿ ನಡೆಯುತ್ತಿಲ್ಲವೆಂದು ಹೇಳಿದ್ದಾರೆ. ಉದ್ದೇಶ ಒಳ್ಳೆಯದಾದರೂ ಕಾರ್ಯರೂಪಕ್ಕೆ ತರತಕ್ಕದ್ದು ಕಡುಕಷ್ಟವೆಂಬುದು ಅವರಿಗೆ ಗೊತ್ತು. ಪೈಗಂಬರರು ಒಳ್ಳೆಯ ಉದ್ದೇಶದಿಂದ ಇಸ್ಲಾಂ ಮತವನ್ನು ಸ್ಥಾಪಿಸಿದ್ದರೂ ಕೂಡ ಎಲ್ಲ ಮುಸ್ಲಿಮರೂ ಅವರ ನಿರೀಕ್ಷಣೆಗೆ ಬರುವಷ್ಟು ಮಟ್ಟಕ್ಕೆ ಬಂದಿಲ್ಲವೆಂದು ಅವರೇ ಒಪ್ಪಿಕೊಳ್ಳುತ್ತಾರೆ. ನಾವೂ ಕೂಡ ನಮ್ಮ ಮತ ಸ್ಥಾಪನಾಚಾರ್ಯರಾದ ಶಂಕರಾಚಾರ್ಯರು, ಮಧ್ವಾಚಾರ್ಯರು, ಭಗವದ್ಗೀತೆಯನ್ನು ಉಪದೇಶಮಾಡಿದ ಶ್ರೀ ಕೃಷ್ಣ, ಶ್ರೀ ರಾಮ ಮುಂತಾದವರು ಒಳ್ಳೆಯ ತತ್ವವನ್ನು ಪ್ರತಿಪಾದಿಸಿದ್ದರೂ ಅದನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಪಟ್ಟು ಅದಕ್ಕಾಗಿಯೇ ಅವರು ದುಡಿದಿದ್ದರೂ ಶೇಕಡ 90 ಮಂದಿ ಕೂಡ ಅವರ ಮಟ್ಟಕ್ಕೆ ಬಂದಿಲ್ಲ. ಆದರೆ ನೂರಕ್ಕೆ 90 ಮಂದಿ ಈ ನಿರೀಕ್ಷಣೆ ಮಟ್ಟಕ್ಕೆ ಬರಲಿಲ್ಲವೆಂದು ಯಾವ ಮತವನ್ನೂ ಕೂಡ ರದ್ದು ಮಾಡುವುದಕ್ಕಾಗುವುದಿಲ್ಲ. ಇದೊಂದು ಧ್ಯೇಯ. ಮನುಷ್ಯ ಯಾವಾಗಲೂ ಈ ಧ್ಯೇಯವನ್ನು ಮುಟ್ಟುವುದಕ್ಕೆ ಒದ್ದಾಡುತ್ತಾನೆ; ಇದು ಸತ್ಯಾಂಶ. ಸಂಸ್ಕೃತಿ ಪ್ರಚಾರದ ವಿಚಾರದಲ್ಲೂ ಕೂಡ ಉದ್ದೇಶ ಒಳ್ಳೆಯದೆಂದು ಎಲ್ಲರೂ ಒಪ್ಪಿಕೊಂಡರೂ ಅದರಲ್ಲಿ ನಿರತರಾಗಿರುವವರನೇಕರು ಆ ಮಟ್ಟಕ್ಕೆ ಬಂದಿಲ್ಲ. ನಾನೂ ಕೂಡ ಆ ಮಟ್ಟಕ್ಕೆ ಬಂದಿಲ್ಲ. ಅದಿಲ್ಲದಿರುವುದರಿಂದಲೇ ಆ ಮಟ್ಟವನ್ನು ಇಂದಾಗಲಿ ಹತ್ತು ವರ್ಷಗಳಿಗಾಗಲಿ ಹತ್ತು ಜನ್ಮಗಳಿಗಾಗಲಿ ಮುಟ್ಟೋಣ ಎಂಬ ಆಶೆಯಿಂದ ಒದ್ದಾಡುತ್ತಿದ್ದೇವೆ. ಈ ದಿವಸ ಪ್ರಚಾರ ಮಾಡತಕ್ಕವರೆಲ್ಲರೂ ಮತ ಸ್ಥಾಪನಾಚಾರ್ಯರಲ್ಲ, ಸದುದ್ದೇಶವನ್ನು ಬಿಟ್ಟಿರತಕ್ಕವರೂ ಅಲ್ಲ. ನಾವಾದರೂ ಮಾಡುವುದು ಯಾವಯಾವ ಮಹಾತ್ಮರು ಯಾವಯಾವ ಸಂದೇಶಗಳನ್ನು ಸಾರಿ ಹೋಗಿದ್ದಾರೋ ಆ ಸಂದೇಶಗಳನ್ನೂ ಅಭಿಪ್ರಾಯಗಳನ್ನೂ ಜನರ ಮುಂದೆ ಇಟ್ಟು ಇತರರು ಕೇಳುವ ಹಾಗೆ ಹೇಳತಕ್ಕದ್ದು. ಒಂದು ದೊಡ್ಡ ರಿಸರ್ವಾಯಿರ್‌ನಲ್ಲಿ ನೀರಿದ್ದರೆ ಅದನ್ನು ಗದ್ದೆಗೆ ಒಂದು ಕಬ್ಬಿಣದ

ಕೊಳಾಯಿ ಮೂಲಕ ಅಥವಾ ಬೊಂಬಿನ ಕೊಳಾಯಿ ಮೂಲಕ ಹಾಯಿಸುತ್ತೇವೆ. ನಾನಾದರೂ ಈ ದಿವಸ ತಿಳಿಯುವುದು ಸರ್ಕಾರಕ್ಕೆ ತಾವುಗಳೇ ಪ್ರಸಾರ ಮಾಡತಕ್ಕವರು ಎಂದು. ಬೊಂಬಿನ ಕೊಳಾಯಿ ಅಥವಾ ಕಟ್ಟಣದ ಕೊಳಾಯಿ ಮೂಲಕ ರಿಸರ್ವಾಯಿರ್ ನೀರನ್ನು ಉಪಯೋಗಿಸುವ ಹಾಗೆ ಈ ವಿಚಾರದಲ್ಲಿ ಸಹಾಯಮಾಡುವವರು ತಾವೇ. ಆ ಹೆಸರು ನನಗಿಲ್ಲ. ಹೋದ ಬಡ್ಜೆಟ್ ಭಾಷಣದಲ್ಲಿ ನಾನು ಇದನ್ನು ವಿವರಿಸಿದೆ. ಇದನ್ನು ಅನೇಕ ಸಾರಿ ಹೇಳಿದೇನೆ. ಮಹಾತ್ಮ ಗಾಂಧಿಯವರು 1948ನೆಯ ಇಸವಿ ಜನವರಿ ತಿಂಗಳಲ್ಲಿ ಒಬ್ಬರಿಂದ ಕೊಲ್ಲಲ್ಪಟ್ಟಾಗ ಆ ದಿವಸ ನಾನು ಸಭೆಗೆ ಹೋಗಿದ್ದೆ. ಅವರು ಪ್ರತಿನಿತ್ಯದ ಸಾಯಂಕಾಲ ಪ್ರಾರ್ಥನೆ ಮಾಡುವುದರಲ್ಲಿ ಒಂದು ಸಂಪ್ರದಾಯವಿತ್ತು. ಅಲ್ಲಿ ಪ್ರಾರ್ಥನೆ ಮಾಡುವಾಗ '' ಈಶ್ವರ ಅಲ್ಲಾ ತೇರೇ ನಾಂ ಸಬ್‌ಕೋ ಸನ್ಮತಿ ದೇ ಭಗವಾನ್ '' ಎಂದು ನಾಲ್ಕು ಮಾತುಗಳನ್ನು ಹೇಳುತ್ತಿದ್ದರು. ದೇವರು ಎಲ್ಲರಿಗೂ ಒಳ್ಳೆಯ ಬುದ್ಧಿಯನ್ನು ಕೊಡಲಿ ಎಂದು ಆ ಪ್ರಾರ್ಥನೆಯು ಹೇಳುತ್ತದೆ. ಎಲ್ಲರೂ ಸನ್ಮಾರ್ಗದಲ್ಲಿ ನಡೆಯಲಿ ಎಂಬುದೇ ಅದರ ಮೂಲತತ್ವವಾಗಿದೆ. ಸ್ವಾಮಿ ವಿವೇಕಾನಂದರು ಈ ವಿಚಾರದಲ್ಲೇನು ಹೇಳಿದ್ದಾರೆಂಬುದನ್ನು ಹೋದ ವರ್ಷದ ಬಡ್ಜೆಟ್ ಅಧಿವೇಶನದಲ್ಲಿ ಹೇಳಿದೆ. ನಾವೆಲ್ಲಾ ಈ ದಿವಸ ಸಂಸ್ಕೃತಿ ಪ್ರಚಾರ ಮಾಡಬೇಕೆಂದಿರುವ ಉದ್ದೇಶ ಸಮುದ್ದೇಶವಾಗಿರುವುದರಿಂದ ಅದನ್ನು ಕಾರ್ಯರೂಪಕ್ಕೆ ತರುವುದರಲ್ಲೂ ಕೂಡ ಅದಕ್ಕೆ ಭೂಷಣ ಬರುವ ಹಾಗೆ ಮಾಡಬೇಕು. ಹಲಸಿನ ಹಣ್ಣಿಗೆ ಮುಳ್ಳಿದೆ, ಅದನ್ನು ಕೊಯ್ದರೆ ಕೈಯೆಲ್ಲಾ ಅಂಟಾಗುತ್ತದೆ ಎಂದು ಅದನ್ನು ತ್ಯಾಜ್ಯಮಾಡಿ ಯಾರೂ ಬಿಸಾಡುವುದಿಲ್ಲ. ಅಧರ ವಾಸನೆ, ತೊಳೆಯ ರುಚಿಯ ಕಡೆಗೆ ಗಮನ ಕೊಡುತ್ತಾರೆ. ಹಾಗೆ ಸ್ವಲ್ಪ ಕಷ್ಟವಾದರೂ ಕೂಡ ಸಂಸ್ಕೃತಿ ಪ್ರಚಾರದಲ್ಲಿ ಲೋಪ ಕಂಡರೆ ಅದನ್ನೆಲ್ಲಾ ಪರಿಹಾರ ಮಾಡಬೇಕು, ಕೊನೆಗಾಣಿಸಬೇಕು. ಇದರಲ್ಲಿ ರುಚಿಯ ಪ್ರಶ್ನೆಯೇನಿದೆಯೋ ಅದನ್ನು ನಾವೆಲ್ಲಾ ಸವಿದು ಜನರೂ ಕೂಡ ಸವಿಯುವಂತೆ ಮಾಡಲು ನಾನಾ ರೀತಿಯಲ್ಲಿ ಪ್ರಯತ್ನ ಮಾಡಬೇಕು. ಶ್ರೀ ಮರಿಯಪ್ಪನವರು ಆಶಿಸಿರುವ ಹಾಗೆ ಈ ಸಭೆಯ ಅಭಿಪ್ರಾಯಕ್ಕೆ ನಾನು ತಲೆಬಾಗುತ್ತೇನೆ. ಯಾವ ಒಂದು ಕಾರ್ಯಕ್ರಮದಿಂದ ಮಾನ್ಯ ಸಭಾಸದಸ್ಯರಿಗೆ ಅಸಮಾಧಾನವುಂಟಾಗಿದೆಯೋ ಅದನ್ನು ಬದಲಾಯಿಸುವುದಕ್ಕೆ ಪ್ರಯತ್ನಿಸೋಣ. ಪ್ರಚಾರಕರ ದೊಡ್ಡ ಪಟ್ಟಿಯೇನಿದೆ ಅದರ ವಿಚಾರದಲ್ಲಿ ಮತ್ತು ಅವರಿಗೆ ಕೊಡುವ ಟಿ.ಎ., ಡಿ.ಎ. ವಿಚಾರದಲ್ಲಿ ಹೆಚ್ಚು ಅಸಮಾಧಾನ ಸಭಾಸದಸ್ಯರಿಗುಂಟಾಗಿದೆ. ಆದ್ದರಿಂದ ಆ ಪಟ್ಟಿಯನ್ನೂ ಮತ್ತು ಆ ರೀತಿ ಭತ್ಯ ಕೊಡುವ ಪದ್ಧತಿಯನ್ನೂ ನಾನು ರದ್ದು ಮಾಡುತ್ತೇನೆ.

ಇನ್ನು ಯಾರು ಈ ಕೆಲಸ ಮಾಡಬೇಕು ಎಂಬುದೇ ಪ್ರಶ್ನೆ. ಪ್ರಚಾರಕರು ಬೇಡ, ಭತ್ಯ ಬೇಡ ಎಂದು ಹೇಳಿದ ಮೇಲೆ ಯಾರು ಈ ಉದ್ದೇಶ ಸಾರ್ಥಕ ಮಾಡಬೇಕು ? ಅದಕ್ಕೆ, ಈ ಉದ್ದೇಶ ಸಾರ್ಥಕ ಮಾಡುವುದಕ್ಕೆ ಈ ಸಭಾ ಸದಸ್ಯರನ್ನು ಬಿಟ್ಟರೆ ಅವರಿಗಿಂತಲೂ ಮಿಗಿಲಾದವರು, ಉತ್ತಮರಾದವರು ಯಾರೆಂದು ತಿಳಿಯುವುದು ನನಗಂತೂ ಅಸಾಧ್ಯವಾಗಿದೆ. ಆದ್ದರಿಂದ ಈ ಮಾನ್ಯ ಸಭೆ ಸದಸ್ಯರನ್ನೊಳಗೊಂಡ ರೂರಲ್ ಡೆವಲಪ್‌ಮೆಂಟ್ ಕಮಿಟಿಯೇನಿದೆ ಅದಕ್ಕೆ ಜವಾಬ್ದಾರಿ ವಹಿಸೋಣ, ಆ ಸಮಿತಿಯವರು ಆ ಜವಾಬ್ದಾರಿಯನ್ನು ವಹಿಸಿಕೊಂಡು ತಮ್ಮ ನೇರವಾದ ಮೇಲ್ವಿಚಾರಣೆಯಲ್ಲಿ ಈ ಕೆಲಸ ಸಮರ್ಪಕವಾಗಿ ಮಾಡುವಂತೆ ಏರ್ಪಾಡು ಮಾಡುತ್ತಾರೆ ಎಂದು ನಾನು ನಂಬಿದ್ದೇನೆ. ಆದುದರಿಂದ ನಾಲ್ಕು ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿ ಅದರಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಸುಮಾರು 102 ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳೇನಿವೆಯೆಂದು ಲೆಕ್ಕವಿದೆಯೋ ಅವುಗಳಿಗೆ ಸರಿಸಮಾನವಾಗಿ ಹಂಚೋಣ, ಒಂದೊಂದು ಸಮಿತಿಗೂ ಸುಮಾರು ಎರಡು ಸಾವಿರ ರೂಪಾಯಿ ಸ್ವಲ್ಪ ಹೆಚ್ಚು ಕಡಮೆ ಬರಬಹುದು. ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಯವರು ತಮಗೆ ಯಾರು ಉತ್ತಮರೆಂದು ಕಾಣುತ್ತಾರೋ ಅವರ ಕೈಲ ಭಾಷಣ, ಪಠನೆ, ಭಜನೆ, ದೇವರ ಪ್ರಾರ್ಥನೆ ಮುಂತಾದವನ್ನು ಮಾಡಿಸಲಿ, ಅವರ ಮನಸ್ಸಿಗೆ ಹೊಳೆದರೆ ಜನಜೀವನದಲ್ಲಿ ಹೊಂದಿಕೊಂಡಿರುವ ಕಲೆಗಳೇನು ಗ್ರಾಮಾಂತರಗಳಲ್ಲಿವೆಯೋ ಅವುಗಳ ಬಗ್ಗೆ ಉತ್ತೇಜನ ಕೊಡುವುವಕ್ಕೆ ಈ ಹಣ ಉಪಯೋಗಿಸಲಿ. ಇವೆರಡೂ ಸರಿಹೋಗದಿದ್ದರೆ ಒಂದು ವಿಧದಲ್ಲಿ ಸಮಾಜ ಸೇವೆಗೆ ಈ ಹಣವನ್ನು ಉಪಯೋಗಿಸಲಿ. ಹೀಗೆ ಪ್ರತಿಯೊಂದು ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಯವರೂ ಕೂಡ ಈ ರೀತಿ ಕೊಡುವ ಹಣವನ್ನು ಅವರ ವಿವೇಚನೆಗನುಸಾರವಾಗಿ ಉಪಯೋಗಿಸತಕ್ಕ ತೀರ್ಮಾನವನ್ನು ಮಾಡೋಣ.

ಇನ್ನು ಮಹಾತ್ಮ ಗಾಂಧಿಯವರ ವಿಷಯವನ್ನು ನಾನು ಪ್ರಸ್ತಾಪ ಮಾಡಿದೆ. ಮಹಾತ್ಮ ಗಾಂಧಿಯವರು ಹೇಳಿರತಕ್ಕ ಬರೆದಿರತಕ್ಕ ಅನೇಕ ವಿಷಯಗಳಿವೆ. ಅವುಗಳನ್ನು ಅಚ್ಚುಹಾಕಿಸಿ ಅವು ಸುಲಭವಾಗಿ ಜನಸಾಮಾನ್ಯಕ್ಕೆ ದೊರೆಯುವ ಏರ್ಪಾಡನ್ನು ಮಾಡೋಣ. ಕನ್ನಡ ಎನ್‌ಸೈಕ್ಲೊಪೀಡಿಯಾ ಮಾಡುತ್ತಿದ್ದಾರೆ ಮತ್ತು ಆಧುನಿಕ ವಿಷಯಗಳನ್ನು ಜನಸಾಮಾನ್ಯರಿಗೆ ತಿಳಿಯುವ ಹಾಗೆ ಚಿಕ್ಕ ಪುಸ್ತಕಗಳಲ್ಲಿ ಮುದ್ರಿಸಿ ಹಂಚಬೇಕೆಂಬ ಒಂದು ಆಲೋಚನೆ ಕೂಡ ಇದೆ. ಈ ಪುಸ್ತಕಗಳ ಪ್ರಕಟಣೆಗೆ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡೋಣ. ಇನ್ನೂ ಅನೇಕ ಮೇಲ್ಪಾಡುಗಳನ್ನೂ ಈ ಹಾದಿಯಲ್ಲಿ ಮಾಡೋಣ.

ಕನ್ನಡ ಸಾಹಿತ್ಯಪರಿಷತ್ತು ಮತ್ತು ಅದರಂಥ ಕೆಲವು ಸಂಸ್ಥೆಗಳಿವೆ, ಅಂಥ ಸಂಸ್ಥೆಗಳಿಗೆ ಸಹಾಯ ಮಾಡಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಇಂಥ ಸಂಸ್ಥೆಗಳು ಸಾಹಿತ್ಯ ಸೇವೆ ಸಮರ್ಪಕವಾಗಿ ಮಾಡುತ್ತಿವೆಯೆಂಬುದು ಗೊತ್ತಿದೆ. ಈಗ ಇಂತಹ ಸೇವೆಯನ್ನು ಸಮರ್ಪಕವಾಗಿ ಮಾಡುತ್ತಿರುವ ಕನ್ನಡ ಸಾಹಿತ್ಯಪರಿಷತ್ತು ಇತ್ಯಾದಿ ಸಂಸ್ಥೆಗಳಿಗೆ ಗ್ರಾಂಟನ್ನು ಕೊಡಬೇಕಾಗಿ ಬಂದರೆ ಸ್ವಲ್ಪ ದುಡ್ಡನ್ನು ಅವಕ್ಕೂ ಕೊಡೋಣ.

ಇದೇ ವಿಷಯ ಹೋದ ವರ್ಷ ಪ್ರಸ್ತಾಪಿಸಲ್ಪಟ್ಟಾಗ ಈ ಹಣವನ್ನೆಲ್ಲಾ ಯಾವುದಕ್ಕೋ ಖರ್ಚು ಮಾಡುವುದಕ್ಕೆ ಬದಲಾಗಿ ಗದುಗಿನ ಭಾರತವನ್ನು ಮುದ್ರಿಸುವುದಕ್ಕೇಕೆ ವಿನಿಯೋಗಿಸಬಾರದು ಎಂದು ಶ್ರೀಮಾನ್ ಎಂ. ವಿ. ರಾಮರಾಯರು ಹೇಳಿದರು. ಅದಕ್ಕೆ ಈಗಾಗಲೆ ವ್ಯವಸ್ಥೆ ಮಾಡಿದೆ.

ಶ್ರೀ ಎಂ. ವಿ. ರಾಮರಾವ್ (ತುಮಕೂರು).—ಅದಲ್ಲ ನಾನು ಹೇಳಿದುದು. ಮುಮ್ಮಡಿ ಕೃಷ್ಣರಾಜ ಒಡೆಯರು ಬರೆದಿರುವ ವಾಣಿವಿಲಾಸ ಭಾರತದ ವಿಚಾರ ನಾನು ಹೇಳಿದ್ದು.

ಶ್ರೀ ಕೆ. ಹನುಮಂತಯ್ಯ.—ಆಗಲಿ, ತತ್ವವೆಲ್ಲಾ ಒಂದೇ. ವಿಮರ್ಶೆ ಮಾಡೋಣ. ಆದರೆ ಶ್ರೀಮಾನ್ ರುದ್ರಪ್ಪನವರು ಪಬ್ಲಿಷ್ ಮಾಡಿರುವುದನ್ನು ಹಿಂದೆಯೇ ನಾನು ಓದಿದ್ದೆ. ಅದರ ಭಾಷೆ ಬಹಳ ಹಿಂದಿನ

(ಶ್ರೀ ಕೆ. ಹನುಮಂತಯ್ಯ.)

ಭಾಷೆ. ಈಗ ಆಧುನಿಕ ಭಾಷೆಗೆ ಹೊಂದಿಕೊಳ್ಳುವುದಿಲ್ಲ. ಅದಕ್ಕೆ ಬದಲಾಗಿ ಭಾಷೆ ಚೆನ್ನಾಗಿದ್ದು ಆಧುನಿಕ ರೀತಿಯಲ್ಲಿರುವ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳು ಬರೆದಿರುವ ಗದ್ಯಭಾರತಕ್ಕಿಂತ ಉತ್ತಮವಾದ ಗ್ರಂಥ ಸಿಕ್ಕುವುದಿಲ್ಲ. ಅದು ಈಗಿನ ಸ್ಟ್ಯಾಂಡರ್ಡಿಗೆ ಸರಿಯಾಗಿದೆ. ಅದನ್ನು ಬೇಕಾದರೂ ತೆಗೆದುಕೊಳ್ಳೋಣ. ಈಗ ಗದುಗಿನ ಭಾರತ, ಜೈಮಿನಿ ಭಾರತ ಇವುಗಳ ಬಗ್ಗೆ ಮುಕ್ಕಾಲು ಕೆಲಸವಾಗಿದೆ. ಇದಕ್ಕೆ ಸ್ವಲ್ಪ ಹಣ ಬೇಕಾಗಿದೆ. ಹಾಗೆಯೇ ಭಗವದ್ಗೀತೆ ವಿಚಾರದಲ್ಲಿ ಶ್ರೀಮಾನ್ ಪುಟ್ಟಪ್ಪನವರು ಒಂದು ಪುಸ್ತಕ ಬರೆಯುವಂತೆ ಕೇಳಿದ್ದೇವೆ. ಅವರು ಬರೆದ ಮೇಲೆ ಅಚ್ಚು ಹಾಕಿಸಿ ಅದನ್ನು ಹಂಚಬೇಕೆಂಬ ಆಸೆಯಿದೆ. ಹೀಗೆ ಸಾಹಿತ್ಯ, ನೀತಿ ಮತ್ತು ಆಧುನಿಕ ವಿಜ್ಞಾನ ಈ ಮೂರು ವಿಷಯಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಅಚ್ಚು ಹಾಕಿಸಿ ಹಂಚುವುದಕ್ಕೆ ಅಥವಾ ಮಾರುವುದಕ್ಕೆ ವ್ಯವಸ್ಥೆಮಾಡಲು ಮಿಕ್ಕ ಹಣವನ್ನು ಉಪಯೋಗಿಸಬೇಕು. ಒಟ್ಟಿನಲ್ಲಿ ಈ ಸಭೆ ಯಾವ ಅಭಿಪ್ರಾಯವನ್ನು ಹಣದ ಹಂಚಿಕೆ ವಿಷಯದಲ್ಲಿ ಸೂಚಿಸಿದೆಯೋ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಾನಾದರೂ ಸಿದ್ಧವಾಗಿದ್ದೇನೆಂದು ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯ. ಶ್ರೀ ಇಮಾಂರವರು ಮೊಟ್ಟಮೊದಲು ಒಂದು ಸಮಾಲೋಚನಾ ಸಮಿತಿ ಸೇರಿಸೋಣವೆಂದು ಪ್ರಸ್ತಾಪಮಾಡಿದರು. ಅದಕ್ಕೆ ಕೆಲವು ಮಂದಿಯನ್ನು ನಾನು ಆಹ್ವಾನಿಸಿದ್ದೆ: ಅನಂತರ ಒಂದು ಸಮಿತಿ ಮಾಡಿದರು, ಅಡ್ವೈಸರಿ ಕಮಿಟಿಯೊಂದನ್ನು 20-30 ಜನರನ್ನೊಳಗೊಂಡಿರುವಂತೆ ಈ ಇಲಾಖೆಗೆ ಮಾಡಿದರು. ಶ್ರೀ ಇಮಾಂ ಮತ್ತು ಇತರ ಈ ಸಭೆಯ ಸದಸ್ಯರನ್ನು ಆಹ್ವಾನಿಸಿದರು. ಆ ಸಮಿತಿ ಸದಸ್ಯತ್ವ ಅವರು ಒಪ್ಪಲಿಲ್ಲ. ಯಾವ ಮಾನ್ಯ ಸಭಾಸದಸ್ಯರು ಆ ಸಮಿತಿ ಬೇಡ, ಅದರ ಸದಸ್ಯತ್ವ ಬೇಡ ಎಂದು ಹೇಳಿದರೋ ಆ ಸಮಿತಿಯನ್ನು ನಾನಾದರೂ ಮುಂದುವರಿಸುವುದು ಉಚಿತವಲ್ಲ. ಆದ್ದರಿಂದ ಸೆಂಟ್ರಲ್ ಅಡ್ವೈಸರಿ ಕಮಿಟಿಯೆಂದೇನಿದೆ ಅದನ್ನು ರದ್ದುಮಾಡುತ್ತೇನೆ. ಪುನಃ ತಾವೆಲ್ಲಾ ಆಲೋಚಿಸಿ ಪಬ್ಲಿಕೇಷನ್ನಿನ ಮೇಲ್ವಿಚಾರಣೆಗಾಗಿ ಒಂದು ಸಮಿತಿ ಆವಶ್ಯಕವೆಂದು ಕಂಡರೆ ಪುನಃ ರಚಿಸೋಣ; ಅನಾವಶ್ಯಕವೆಂದು ಹೇಳಿದರೆ ಅದು ಬೇಡ. ಇಷ್ಟು ಭರವಸೆಗಳನ್ನು ತಮಗೆ ಕೊಟ್ಟಿದ್ದೇನೆ. ಸಂಸ್ಕೃತಿ ಪ್ರಚಾರದ ಸುದುದ್ದೇಶವನ್ನು ತಾಲ್ಲೂಕು ರೂರಲ್ ಡೆವಲಪ್‌ಮೆಂಟ್ ಕಮಿಟಿ ವಹಿಸಿಕೊಂಡರೆ ಅದಕ್ಕೆ ಮತ್ತಷ್ಟು ಶಕ್ತಿ, ಕಳೆ, ಬೆಂಬಲ ದೊರಕುತ್ತದೆಂಬ ಆಶೆಯಿಂದ ಈ ಕಾರ್ಯಕ್ರಮವನ್ನು ಅನುಸರಿಸುವುದಾಗಿ ಭರವಸೆ ಕೊಟ್ಟಿರುವುದರಿಂದ ಈ ನಿರ್ಣಯವನ್ನು ಮಂಡಿಸಿರುವ ಶ್ರೀಮಾನ್ ಮರಿಯಪ್ಪನವರು ಅದನ್ನು ವಾಪಸು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

Sri K. PUTTASWAMY (Srirangapatna).—I want one information. ಈಗ ಈ ನಿರ್ಣಯ ಇರುವುದು ಸಂಸ್ಕೃತಿ ಪ್ರಚಾರ ಕಾರ್ಯಗಳನ್ನು ರದ್ದುಗೊಳಿಸಬೇಕು ಎಂಬುದಾಗಿ. ಈ ವಿಚಾರವಾಗಿ ಯಾವ ಹಣವನ್ನೂ ಖರ್ಚು ಮಾಡಕೂಡದೆಂಬುದೇ ಈ ನಿರ್ಣಯದ ಉದ್ದೇಶ. ಆದರೆ ಈಗತಾನೆ ಮಾನ್ಯ ಮಂತ್ರಿಗಳು ಈ ಬಾಬಿನಿಂದ ಆ ಸಾಹಿತ್ಯದ ಮುದ್ರಣ, ಪ್ರಕಟಣೆ ಇತ್ಯಾದಿ ಬಾಬಿಗೆ ಖರ್ಚು ಮಾಡುತ್ತೇವೆಂದು ಹೇಳಿದರು. ಆ ಬಗ್ಗೆ ಸ್ವಲ್ಪ ವಿವರಣೆ ಬೇಕಾಗಿತ್ತು.

Mr. SPEAKER.—Now the Hon'ble Member cannot make a speech.

Sri K. PUTTASWAMY.—I am asking for information.

Mr. SPEAKER.—Not necessary. In view of the reply given . . . .

Sri K. PUTTASWAMY.—In view of the resolution tabled and in view of the reply given, a doubt arises.

ಈಗ ಈ ಮೊಬಲಗನ್ನು ಆ ಡೆವಲಪ್‌ಮೆಂಟ್ ಸಮಿತಿಗಳಿಗೆ ಕೊಟ್ಟಮೇಲೆ ಪುನಃ ಅದರಲ್ಲಿರತಕ್ಕ ಹಣವನ್ನು ಈ ಬಾಬಿಗೆ ಖರ್ಚು ಮಾಡುತ್ತೇವೆಂದರೆ ಅದು ನಿರ್ಣಯಕ್ಕೆ ವಿರೋಧವಾಗುತ್ತದೆ. ಈ ಮೊಬಲಗನ್ನು ಖರ್ಚು ಮಾಡತಕ್ಕ ಸಂಪೂರ್ಣ ಜವಾಬ್ದಾರಿಯನ್ನು ಆ ಡೆವಲಪ್‌ಮೆಂಟ್ ಏಜೆನ್ಸಿಗೆ ವಹಿಸಿಕೊಡುತ್ತೇನೆಂದು ಇವರು ಹೇಳುತ್ತಿದ್ದಾರೆಯೇ ಏನು ಎಂಬ ಅಂಶವನ್ನೀಗ ನಾನು ತಿಳಿದುಕೊಳ್ಳಬೇಕಾಗಿದೆ. ಅದಕ್ಕಾಗಿ ಈ ವಿಷಯವನ್ನು ನಾನು ಕೇಳುತ್ತಿದ್ದೇನೆ.

Mr. SPEAKER.—What does Sri Mariappa say with regard to the withdrawal of the resolution ?

Sri T. MARIAPPA.—In view of the acceptance of the principle I beg leave of the House to withdraw the resolution.

Sri Mulka GOVINDA REDDY (Chitaldurg).—There are a few members who have signed that special resolution. We would like all the members to be consulted.

Mr. SPEAKER.—I want to know whether the Hon'ble Members are prepared to give leave for withdrawal.

The resolution was, by leave, withdrawn.

Sri Mulka GOVINDA REDDY.—It is not unanimous.

Mr. SPEAKER.—Then I will put it to the vote. The question is :

"This Assembly is of opinion that the Cultural Development Movement be discontinued and the expenditure provided for the same in the Budget for 1956-57 be not incurred."

motion was negatived.

STATES REORGANISATION BILL, 1956.

Clauses—(contd.)

Mr. SPEAKER.—Now amendments to clauses of the States Reorganisation Bill. There is an amendment in respect of clause 33

Sri S. SRINIVASA IYENGAR (T.-Narasipur).—Sri Pattabhiraman moved amedments to clauses 15 to 21 and Government wanted to reply.

Mr. SPEAKER.—We are in the middle of discussion with regard to clause 33. We shall finish this and then come to that.

*Sri K. HANUMANTHAIYA (Leader of the House).—Sir, I move:

'(1) In sub-clause (2)

(*i*) after item (*a*), the following item shall be inserted, namely :—

"(*aa*) the ten members of the Legislative Councils of the existing States of Bombay and Madras whose names were, on the 1st March, 1956, included in the electoral rolls of the Assembly constituencies of the States of Bombay and Madras transferred to the new State of Mysore and who, as from the appointed day, cease to be members of the Legislative Councils of Bombay and Madras, and"

(*ii*) In item (*b*), for the figures "29", the figures "19" shall be substituted and for the words, brackets and letters "clauses (*b*), (*c*), (*d*) and (*e*)" the words, brackets and letters "clauses (*c*) and (*e*)" shall be substituted.

(2) In sub-clause (3), for the figures "60", 20", "5", and "10", wherever they occur, the figures '69" '23', '6', and '11' shall respectively be substituted.'

In having moved this amendment to clause 33, I do not want to take another opportunity to speak. On examination I find it difficult to accept the amendments moved by my learned friend Sri Pattabhiraman and others. They contemplate the continuance of the Legislative Council until the Legislative Assembly of the new State of Mysore has been duly reconstituted, whereas the purpose of the Bill as also my purpose is to continue that House and there is no limit to its continuance. It is true the Legislative Assembly of the new State of Mysore when it meets for the first time can take a decision of its own but we are not prepared to give any opinion here and now. We shall leave it to the Legislative Assembly of the new State, whenever it meets, for a decision to be taken, if at all.

Mr. SPEAKER.—Amendment moved:

"(1) In sub-clause (2)

(*i*), after item (*a*), the following item shall be inserted, namely :—

"(*aa*) the ten members of the Legislative Councils of the existing States of Bombay and Madras whose names were, on the 1st March 1956, included in the electoral rolls of the Assembly constituencies of the States of Bombay and Madras transferred to the new State of Mysore and who, as from the appointed day, cease to be members of the Legislative Councils of Bombay and Madras, and"

21	Education Development Scheme 1(v) Janatha College ...	3,308
22	Grant for Scheme No. 4(b)	13,860
23	Intensive Cultivation Scheme of Transferred Territory ...	7,449
	Total ...	38,20,814

GOVERNMENT OF INDIA LOANS SANCTIONED DURING 1955-56.

Towards the Implementation of the Five-Year Plan.

		Rs.
1	Grow More Food Schemes	81,21,000
2	Development Loan for Capital Works for financing the expenditure on Irrigation and Hydro-Electric Works in the State (includes loans for unemployment Relief Scheme).	2,75,00,000
3	Thungabhadra Irrigation Works	25,00,000
4	Loan assistance for works of permanent improvement in Scarcity areas	1,50,00,000
5	Contour Bunding in Bellary District	50,000
6	Development of Village Oil Industry to be utilised for stocking oil seeds	1,04,560
7	Soil Conservation Scheme for Agricultural Lands in Cauvery and Tungabhadra and Bhadra Dam.	7,24,450
8	Soil Conservation by afforestation of Waste Lands in Mysore.	4,37,500

Schemes outside the Plan.

1	For the Community Development Project Programme ...	1,72,962
2	Loans to Mysore Government from Cess Funds for the Development of Hand-loom Industry.	5,57,375
3	National Extension Service	6,87,000
4	Loan for the subsidised Industrial Housing Scheme ...	77,420
5	Cost of Tractors allocated to Mysore State as loan under Technical Co-operation Agreement Plan.	5,109
6	Loan under the Low Income Group Housing Scheme ...	90,00,000
7	Implementation of the National Water Supply and Sanitation Scheme (Urban Water Supply and Drainage Scheme).	56,25,000
8	For Construction of Students' Hostels	5,30,000
	Total ...	7,10,92,376

ಶ್ರೀ ವಿ. ಆರ್. ನಾಯ್ಡು.—ಯಾವ ಯಾವ ಬಾಬತ್ತಿಗೆ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ?

ಶ್ರೀ ಕೆ. ಹನುಮಂತಯ್ಯ.—ನೋಟೀಸ್.

ಶ್ರೀ ವಿ. ಆರ್. ನಾಯ್ಡು.—ಕೈಮಗ್ಗದ ಅಭಿವೃದ್ಧಿಗಾಗಿ ಹಣವನ್ನು ಖರ್ಚುಮಾಡಲಾಗಿದೆ ಎಂದು ತಿಳಿಸಿದ್ದೀರಿ. ಮೈಸೂರು ಸಂಸ್ಥಾನದಲ್ಲಿ ಯಾವ ಯಾವ ಊರಿಗೆ ಎಷ್ಟೆಷ್ಟು ಹಣವನ್ನು ಖರ್ಚುಮಾಡಿರುತ್ತೀರಿ ಎಂಬುದನ್ನು ತಿಳಿಸಲು ಸಾಧ್ಯವೇ?

ಶ್ರೀ ಕೆ. ಹನುಮಂತಯ್ಯ.—ಆ ಹಣವನ್ನೇನೋ ಈಗ ಖರ್ಚುಮಾಡಿದ್ದೇವೆ. ಆದರೆ ತಾವು ಯಾವ ಯಾವ ಐಟಂಗಳಿಗೆಂದು ಪ್ರಶ್ನೆ ಕೇಳಿಲ್ಲ. ಆ ರೀತಿ ತಪಶೀಲು ಕೇಳಿದ್ದರೆ ಉತ್ತರ ಒದಗಿಸಬಹುದಾಗಿತ್ತು. ಆದಾಗ್ಯೂ ತಮಗೆ ಏನೇನು ತಪಶೀಲುಗಳು ಬೇಕೋ ಅವೆಲ್ಲವನ್ನೂ ತಾವು ಇದಕ್ಕೆ ಸಂಬಂಧಪಟ್ಟ ಸರ್ಕಾರದ ಸೆಕ್ರೆಟರಿಗಳವರಿಂದ ತಿಳಿದುಕೊಳ್ಳಬಹುದು. ತಮಗೆ ಈ ರೀತಿ ವಿಷಯಗಳನ್ನು ತಿಳಿಸಲು ನಾನು ಸಂಬಂಧಪಟ್ಟ ಸಕ್ರೆಟರಿಗಳಿಗೆ ತಿಳಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ತಾವು ಅಪೆಂಡಿಕ್ಸ್‌ನಲ್ಲಿ ಈ ವಿದ್ಯಾರ್ಥಿಗಳ ಹಾಸ್ಟಲುಗಳ ಕಟ್ಟಡಗಳಿಗಾಗಿ 5,30,000 ರೂಪಾಯಿಗಳನ್ನು ಖರ್ಚುಮಾಡಿರುವುದಾಗಿ ತಿಳಿಸಿದ್ದೀರಿ. ಈ ಮೊಬಲಗನ್ನು ತಾವು ಎಲ್ಲಿ, ಯಾವ ಹಾಸ್ಟಲು ಕಟ್ಟಡಕ್ಕಾಗಿ ಖರ್ಚುಮಾಡಿದ್ದೀರಿ?

*ಶ್ರೀ ಎ. ಜಿ. ರಾಮಚಂದ್ರರಾವ್.—ಯಾವ ಯಾವ ಹಾಸ್ಟಲುಗಳಿಗೆ ಕ್ರಮವಾಗಿ ಎಷ್ಟೆಷ್ಟು ಮೊಬಲಗು ಖರ್ಚಾಗಿರುತ್ತದೆಯೋ ಅದನ್ನು ಆಯಾ ಹಾಸ್ಟಲಿಗೆಖರ್ಚು ಹಾಕಿದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಗ್ರಾಂಟನ್ನು ತಾವು ಹೊಸದಾಗಿ ಕಟ್ಟತಕ್ಕ ಹಾಸ್ಟಲು ಕಟ್ಟಡಗಳಿಗೆ ಒದಗಿಸಿದ್ದೀರೋ, ಅಥವಾ ಹಳೆಯ ಹಾಸ್ಟಲುಗಳ ಕಟ್ಟಡಕ್ಕೆ ಒದಗಿಸಿದ್ದೀರೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೆಚ್ಚಿಗೆ ಮೊಬಲಗನ್ನು ಹೊಸ ಕಟ್ಟಡಗಳಿಗೆ ಕೊಡಲಾಗಿದೆ. ಒಂದೆರಡು ಹಳೆಯ ಕಟ್ಟಡಗಳಿಗೂ ಗ್ರಾಂಟ್ ಕೊಟ್ಟಿರಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರಿನಲ್ಲಿ ಯಾವುದಕ್ಕಾದರೂ ಈ ಗ್ರಾಂಟ್ ಕೊಟ್ಟಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಕೆ. ಹನುಮಂತಯ್ಯ.—ಈ ಗ್ರಾಂಟನ್ನು ಕೊಡತಕ್ಕ ಬಗ್ಗೆ ಕೆಲವು ನಿಬಂಧನೆಗಳೇನೋ ಇರಬೇಕು. ಸಾರ್ವಜನಿಕರು $\frac{1}{3}$ ಭಾಗದ ಹಣವನ್ನೋ ಅಥವಾ $\frac{1}{4}$ ಭಾಗದ ಹಣವನ್ನೊ ಮುಂಗಡವಾಗಿ ಕೊಟ್ಟರೆ ಬಾಕಿ ಮೊಬಲಗನ್ನು ಸರ್ಕಾರದವರು ಈ ಮೊಬಲಗಿನಿಂದ ಒದಗಿಸುತ್ತಾರೆ. ಹಾಗೆ ನಿಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾರ್ವಜನಿಕರು ಯಾರಾದರೂ ಮುಂದೆ ಬಂದು ಅವರು ಹತ್ತು ಸಾವಿರ ರೂಪಾಯಿಗಳನ್ನು ವಸೂಲ್ಮಾಡಿ ಹೀಗೆ ಜನರಲ್ ಹಾಸ್ಟಲ್ ಕಟ್ಟಡಬೇಕೆಂದು ಮುಂದೆ ಬರುವುದಾದರೆ ಸರ್ಕಾರದವರು ಮೂವತ್ತು ಸಾವಿರ ರೂಪಾಯಿಗಳನ್ನು ಈ ಫಂಡಿನಿಂದ ಗ್ರಾಂಟ್ ರೂಪವಾಗಿ ಒದಗಿಸಲು ಸಿದ್ಧರಾಗಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹಾಗಾದರೆ ನಾವೂ ಕೂಡ ಈ ಜನರಲ್ ಹಾಸ್ಟಲುಗಳನ್ನು ಕಟ್ಟಿಸುತ್ತೇವೆಂದರೆ ಹಣ ಕೊಡುತ್ತೀರಾ?

(ಉತ್ತರವಿಲ್ಲ)

Sri A. V. NARASIMHA REDDY.—You are in receipt of certain amounts. "(i) Subsidy for construction of irrigation wells. . . Rs. 1,87,500." What is the cash value of such subsidy on each well that is being paid?

Sri K. HANUMANTHAIYA.—That requires a detailed answer. The Hon'ble Member is requested to give separate notice.

Sri A. V. NARASIMHA REDDY.—That value is only Rs. 250 for each well. On a previous occasion the Hon'ble Members had pressed on the Government to correspond with the Government of India to increase the subsidy of Rs. 250 to Rs. 500, which would be more encouraging to the ryots to sink wells.

Mr. SPEAKER.—That is a different dquestion. You ought to have table that question.

ಶ್ರೀ ಬಿ. ಚಿಕ್ಕಣ್ಣ.—ತಾಲ್ಲೂಕಿನಲ್ಲಿರತಕ್ಕ ವ್ಯವಸಾಯದ ಇಲಾಖೆಯ ಅಧಿಕಾರಿಗಳು ಆಫೀಸಿಗೆ ಭೇಟಿ ಕೊಡತಕ್ಕ ಆಫೀಸರುಗಳೇ, ಕೆಲಸಮಾಡತಕ್ಕ ಆಫೀಸರುಗಳೇ?

*ಡಾ॥ ಆರ್. ನಾಗನಗೌಡ.—ಕೆಲಸ ಮಾಡುವುದಕ್ಕೆ ಇದ್ದಾರೆ.

ಶ್ರೀ ಬಿ. ಚಿಕ್ಕಣ್ಣ.—ಅವರಿಗೆ ಕೊಡುತ್ತಾ ಇರುವುದು ಸಂಬಳವೋ ಅಥವಾ ಪೆನ್ಷನ್ನೋ?

ಡಾ॥ ಆರ್. ನಾಗನಗೌಡ.—ಸಂಬಳ ಕೊಡುತ್ತಾ ಇದ್ದೇವೆ.

ಶ್ರೀ ಬಿ. ಚಿಕ್ಕಣ್ಣ.—ಸಂಬಳ ತೆಗೆದುಕೊಂಡು ಅವರು ಆಫೀಸಿನಲ್ಲಿ ಸಂಬಂಧಪಟ್ಟ ಕೆಲಸ ಮಾಡುವವರಾದ ಮೇಲೆ, ರೈತರಿಗೆ ಬೇಕಾದ ಟೈಂನಲ್ಲಿ ಎಂದರೆ ಉಳುವ ಕಾಲದಲ್ಲಿ ಗೊಬ್ಬರ ಹೇಗೆ ಹಾಕಬೇಕು, ನರ್ಸರಿ ಮಾಡುವ ಕಾಲದಲ್ಲಿ ನರ್ಸರಿ ಹೇಗೆ ಮಾಡಬೇಕು, ರೋಗ ರುಜಿನಗಳು ಬಂದರೆ ಅವನ್ನು ಯಾವ ರೀತಿ ಬಗೆ ಹರಿಸಬೇಕೆಂಬುದು ತಿಳಿಸಬೇಕಲ್ಲವೇ!

ಡಾ॥ ಆರ್. ನಾಗನಗೌಡ.—ಹೌದು. ಅದೇ ರೀತಿ ಕೆಲಸ ಮಾಡುವುದಕ್ಕೇ ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರುಗಳನ್ನು ಇಟ್ಟಿದ್ದೇವೆ.

ಶ್ರೀ ಬಿ. ಚಿಕ್ಕಣ್ಣ.—ದೇಶಾದ್ಯಂತ ಅವರು ಎಲ್ಲರೂ ಆ ತರಹ ಕೆಲಸ ಮಾಡುತ್ತಾ ಇದ್ದಾರೆಯೇ?

ಡಾ॥ ಆರ್. ನಾಗನಗೌಡ.—ಮಾಡುತ್ತಾ ಇದ್ದಾರೆ ಎಂದು ವರದಿ ಬಂದಿದೆ.

ಶ್ರೀ ಬಿ. ಚಿಕ್ಕಣ್ಣ.—ಕೆಲಸ ಮಾಡದೇ ಯಾವಾಗಲೂ ಆಫೀಸಿನಲ್ಲಿ ಕಾಲಕಳೆಯುತ್ತಾ ಇದ್ದಾರೆ. ವರ್ಷಕ್ಕೆ ಸುಮಾರು 60-70 ಲಕ್ಷ ರೂಪಾಯಿ ಖರ್ಚು ಮಾಡಿಯೂ, ಈ ಇಲಾಖೆಯಿಂದ ರೈತರಿಗೆ ಎಷ್ಟು ಮಟ್ಟಿಗೆ ಯಾವ ರೀತಿಯಲ್ಲಿ ಸಹಕಾರ ಸಿಕ್ಕಬೇಕೋ ಅದು ಸಿಕ್ಕುತ್ತಾ, ಇಲ್ಲವಲ್ಲಾ, ಅದಕ್ಕೆ ತಾವು ಏನು ಪರಿಹಾರ ಮಾಡುತ್ತೀರಿ?

ಡಾ॥ ಆರ್. ನಾಗನಗೌಡ.—ಈಗ ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಯಾರ ವಿಷಯವಾಗಿ ತಿಳಿದು ಬಂದಿತೋ ಅವರ ವಿಷಯದಲ್ಲಿ ಸರಿಯಾದ ಚರ್ಯೆ ತೆಗೆದುಕೊಂಡಿದ್ದೇವೆ.

* Asterisk indicates that the remarks or speeches have not been revised by the Member concerned

ಶ್ರೀ ಬಿ. ಚಿಕ್ಕಣ್ಣ.—ದೇಶಾದ್ಯಂತ ಇರತಕ್ಕ ಈ ಇಲಾಖೆಯಲ್ಲಿ ಅವರು ಯಾರೂ ಕೆಲಸ ಮಾಡುವುದಿಲ್ಲ. ಮಾನ್ಯ ಸದಸ್ಯರಲ್ಲಿ ಯಾವ ಸದಸ್ಯರನ್ನಾದರೂ ಕೇಳಿ, ಸರಿಯಾಗಿ ಕೆಲಸ ಮಾಡುತ್ತಾ ಇದ್ದಾರೆ ಎಂದು ಉತ್ತರ ಬಂದರೆ ಸರಿ.

ಅಧ್ಯಕ್ಷರು.—ಅದಕ್ಕೇ ತಾವು ಅದನ್ನು ರದ್ದು ಮಾಡಬೇಕೆಂದು ಕೇಳುತ್ತಾ ಇದ್ದೀರಾ ?

ಶ್ರೀ ಬಿ. ಚಿಕ್ಕಣ್ಣ.—ಹೌದು, ಅದನ್ನೇ ಕೇಳುತ್ತಾ ಇರುವುದು.

ಶ್ರೀ ಬಿ. ಎಸ್. ಬೋರಣ್ಣಗೌಡ.—ಈ ಟ್ರಾಕ್ಟರ್ಸ್ ನಿಂದ ಉಳುಮೆ ಮಾಡಿಸುವುದನ್ನು ಸೂಪರ್ ವೈಸ್ ಮಾಡುವವರು ಯಾರು ?

ಡಾ॥ ಆರ್. ನಾಗನಗೌಡ.—ಅಸಿಸ್ಟೆಂಟ್ ಡೈರೆಕ್ಟರು ಮತ್ತು ಇನ್ಸ್‌ಪೆಕ್ಟರುಗಳು ಇದ್ದಾರೆ. ಟ್ರ್ಯಾಕ್ಟರ್ಸ್ ಚೆನ್ನಾಗಿ ಕೆಲಸ ಮಾಡುತ್ತಿವೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದಕ್ಕೆ ಟ್ರ್ಯಾಕ್ಟರ್ ಇಂಜನಿಯರನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ದೇಶಕ್ಕೆಲ್ಲಾ ಒಬ್ಬರೇ ತಾನೆ ಇಂಜನಿಯರು ಇರುವುದು ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಬಿ. ಎಸ್. ಬೋರಣ್ಣಗೌಡ.—ತಾಲ್ಲೂಕಿನಲ್ಲಿ ಟ್ರ್ಯಾಕ್ಟರ್ ಉಳುಮೆ ಮಾಡುವಾಗ ಅದನ್ನು ಯಾರು ನೋಡಿಕೊಳ್ಳುತ್ತಾರೆ?

ಡಾ॥ ಆರ್. ನಾಗನಗೌಡ.—ತರಪೇತಾದ ಟ್ರ್ಯಾಕ್ಟರ್ ಡ್ರೈವರ್ಸ್ ಇರುತ್ತಾರೆ, ಏನಾದರೂ ತೊಂದರೆ ಉಂಟಾದರೆ ಅವರ ಜೊತೆಗೆ ಸಹಾಯಕ್ಕೆ ಯಾರನ್ನು ಬೇಕಾದರೂ ಕಳುಹಿಸುತ್ತೇವೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಟ್ರ್ಯಾಕ್ಟರುಗಳನ್ನು ಸರಿಯಾದ ಕಂಡಿಷನ್ನಲ್ಲಿ ಇಟ್ಟಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಿಕೊಳ್ಳುವವರು ಯಾರು?

ಡಾ॥ ಆರ್. ನಾಗನಗೌಡ.—ಅಸಿಸ್ಟೆಂಟ್ ಡೈರೆಕ್ಟರು ಅದನ್ನೆಲ್ಲಾ ಸೂಪರ್ ವೈಸ್ ಮಾಡುತ್ತಾರೆ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಅವು ಸರಿಯಾಗಿ ಉಳುತ್ತಿವೆಯೇ, ಇಲ್ಲವೇ ಎಂಬುದನ್ನು ನೋಡುತ್ತಾ ಇದ್ದಾರೆಯೋ ?

ಡಾ॥ ಆರ್. ನಾಗನಗೌಡ.—ಸಾಧಾರಣವಾಗಿ ನೋಡುತ್ತಾರೆ, ಒಂದು ಜಿಲ್ಲೆಯಲ್ಲಿ ಒಂದೆರಡು ಟ್ರ್ಯಾಕ್ಟರುಗಳು ಇರುತ್ತವೆ. ಅವು ಎಲ್ಲಾ ಹೇಗೆ ಕೆಲಸ ಮಾಡುತ್ತಿವೆ ಎಂದು continuous ಆಗಿ ನೋಡುಕ್ಕಾಗುವುದಿಲ್ಲ. ಅವರು ಟೂರ್ ಮಾಡುವಾಗ ನೋಡುತ್ತಾರೆ.

ಶ್ರೀ ವಿ. ಆರ್. ನಾಯ್ಡು.—ಈ ವ್ಯವಸಾಯದ ಇಲಾಖೆಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಮಾನ್ಯ ಸದಸ್ಯರು ಅಭಿಪ್ರಾಯಪಟ್ಟರು. ಈ ವ್ಯವಸಾಯದ ಇಲಾಖೆಯಲ್ಲಿ ಏನೇನು ಕೆಲಸ ನಡೆಯುತ್ತಾ ಇದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆಯೇ?

ಅಧ್ಯಕ್ಷರು.—ವ್ಯವಸಾಯದ ಇಲಾಖೆಯಲ್ಲಿ ನಡೆಯುತಕ್ಕ ಕೆಲಸಗಳನ್ನೆಲ್ಲಾ ಇಲ್ಲಿ ಹೇಳುವುದಕ್ಕಾಗುತ್ತದೆಯೇ?

ಶ್ರೀ ವಿ. ಆರ್. ನಾಯ್ಡು.—ವ್ಯವಸಾಯದ ಇಲಾಖೆಯವರು ಮಾಡುತ್ತಾಯಿರತಕ್ಕ ಕೆಲಸ ಕಾರ್ಯಗಳನ್ನು ಆಯಾ ಹಳ್ಳಿಯವರೇ ಮಾಡುವುದಾದರೆ, ಈ ವ್ಯವಸಾಯದ ಇಲಾಖೆಯವರಿಗೆ ಯಾವ ಯಾವ ಅಧಿಕಾರಗಳನ್ನು ಕೊಟ್ಟಿದ್ದೀರೋ ಆ ಅಧಿಕಾರಗಳನ್ನು ಆಯಾ ಹಳ್ಳಿಯವರಿಗೇ ಏಕೆ ಕೊಡಬಾರದು ?

ಡಾ॥ ಆರ್. ನಾಗನಗೌಡ.—ಹಳ್ಳಿಯವರೂ ವ್ಯವಸಾಯದ ಕೆಲಸ ಮಾಡುತ್ತಾರೆ. ಅದರಲ್ಲೂ ಅಭಿವೃದ್ಧಿ ಕೆಲಸಗಳು ಮುಂತಾದವುಗಳಲ್ಲಿ ಉತ್ತಮವಾಗಿ ಕೆಲಸ ಮಾಡುವುದಕ್ಕೆ ಕ್ರಮ ತೋರಿಸಿ ಕೊಡಲು ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರುಗಳು ಮುಂತಾದವರನ್ನು ಇಟ್ಟಿದ್ದೇವೆ. ಗ್ರಾಮದಲ್ಲಿ ಯಾವುದಾದರೂ ಒಂದು ಪೈರಿಗೆ ಏನಾದರೂ ರೋಗ ಬಂದರೆ ಅದಕ್ಕೆ ನಿವಾರಣೆ ಮಾಡಲು ಏನು ಮಾಡಬೇಕು ಎನ್ನುವುದನ್ನು ಹೇಳುವುದಕ್ಕೂ ಮತ್ತು ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೂ ವ್ಯವಸಾಯದ ಇಲಾಖೆಯ ಇನ್ಸ್‌ಪೆಕ್ಟರುಗಳನ್ನು ಇಟ್ಟಿದ್ದೇವೆ.

ಶ್ರೀ ವಿ. ಆರ್. ನಾಯ್ಡು.—ಹೊಸ ಡಾಕ್ಟರಿಗಿಂತ ಹಳೆಯ ರೋಗಿಯೇ ಮೇಲು ಎಂದು ಹೇಳಿದರೆ ತಮಗೆ ಅರ್ಥವಾಗುತ್ತದೆಯೇ ಸ್ವಾಮಿ ?

ಡಾ॥ ಆರ್. ನಾಗನಗೌಡ.—ಹಾಗಾದರೂ ಮೆಡಿಕಲ್ ಕಾಲೇಜಿಗೆ ಎಷ್ಟೋ ಅರ್ಜಿಗಳು ಬರುತ್ತಿವೆ ನೋಡಿ !

ಶ್ರೀ ಡಿ. ಎಂ. ಗೋವಿಂದರಾಜು.—ವ್ಯವಸಾಯದ ಇಲಾಖೆಯಿಂದ ರೈತರಿಗೆ ಇನ್ನೂ ಹೆಚ್ಚಿನ ಅನುಕೂಲವಾಗುವುದಕ್ಕೆ ಸರ್ಕಾರದವರು ಹೊಸದಾಗಿ ಏನಾದರೂ ಏರ್ಪಾಡು ಮಾಡುತ್ತಾ ಇದ್ದಾರೆಯೇ?

ಡಾ॥ ಆರ್. ನಾಗನಗೌಡ.—ಇಷ್ಟು ದಿವಸ ಇಂಪ್ಲಿಮೆಂಟ್ಸ್ ಮುಂತಾದವನ್ನು ಮಾರುವುದು, ಅವಕ್ಕೆ ಸಂಬಂಧಪಟ್ಟಂತೆ ಸ್ಟೋರ್ಸ್ ಇಟ್ಟುಕೊಂಡಿರುವುದು, ಇದೆಲ್ಲಾ ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರುಗಳ ವಶದಲ್ಲೇ ಇದ್ದು ಅವರಿಗೆ ಆಫೀಸಿನಲ್ಲಿ ಹೆಚ್ಚು ಕಾಲ ಬೇಕಾಗಿತ್ತು. ಈಗ ಸ್ಟೋರ್ಸ್ ಮುಂತಾದವನ್ನು ತೆಗೆದಿರುವುದರಿಂದ ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ರೈತರಿಗೆ ಸಲಹೆಗಳನ್ನು ಕೊಡಲು ಹೆಚ್ಚಿನ ಅನುಕೂಲವಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ವ್ಯವಸಾಯದ ಇಲಾಖೆಯಲ್ಲಿ ಇನ್ನೂ ಹೆಚ್ಚಿನ ಕೆಲಸ ಮಾಡುವುದಕ್ಕೆ ಸರಿಯಾದ ಸಿಬ್ಬಂದಿ ಮತ್ತು ಸಲಕರಣೆಗಳು ಇಲ್ಲ ಎಂದು ಇಲಾಖೆಯವರು ಹೇಳುತ್ತಾ ಇರುವುದು ತಮಗೆ ಗೊತ್ತೇ?

ಡಾ॥ ಆರ್. ನಾಗನಗೌಡ.—ಈಗ ಪ್ರತಿವರ್ಷವೂ ಹೆಚ್ಚು ಮಾಡಿಕೊಳ್ಳುತ್ತಲೇ ಇದ್ದೇವೆ ಮತ್ತು ಮುಂದಿನ ವರ್ಷಗಳಲ್ಲಿ—ಎಂದರೆ ಪಂಚವಾರ್ಷಿಕ ಯೋಜನೆಯಲ್ಲಿ ರಿಸರ್ಚ್ ಮುಂತಾದುವಕ್ಕೆ ಬಹಳ ದುಡ್ಡು ಒದಗಿಸಿದ್ದೇವೆ.

ಶ್ರೀ ಕೆ. ವಿ. ಬೈರೇಗೌಡ.—ಈ ಇಲಾಖೆಯಲ್ಲಿರತಕ್ಕ ಸೈನ್‌ಟಿಫಿಕ್ ಸೆಕ್ಷನ್ನಿನವರು ಇಂಡಿಪೆಂಡೆಂಟಾಗಿ ಕೆಲಸ ಮಾಡುವುದಕ್ಕೆ ಸಾಕಾದಷ್ಟು ವಾಹನಗಳ ವ್ಯವಸ್ಥೆ ಮಾಡಿಕೊಡುತ್ತೀರಾ ?

ಡಾ॥ ಆರ್. ನಾಗನಗೌಡ.—ಈ ಸೈನ್‌ಟಿಫಿಕ್ ಡಿಪಾರ್ಟ್‌ಮೆಂಟಿಗೆ ಏನು ಕಾರಣಕ್ಕಾಗಿ ವಾಹನಗಳು ಬೇಕು ?

ಶ್ರೀ ಕೆ. ವಿ. ಬೈರೇಗೌಡ.—ರೋಗ ರುಜಿನಗಳು ಹೆಚ್ಚಿದಾಗ ಅಂಥ ಸ್ಥಳಗಳಿಗೆ ಹೋಗಿ ಅದನ್ನು ಯಾವ ರೀತಿ ತಡೆಗಟ್ಟಬೇಕು ಎಂಬುದನ್ನು ಕಂಡುಹಿಡಿಯಲು ರಿಸರ್ಚ್ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ವಾಹನ ಸೌಕರ್ಯ ಮಾಡಿಕೊಡುತ್ತೀರಾ ?

ಡಾ॥ ಆರ್. ನಾಗನಗೌಡ.—ಸೈನ್‌ಟಿಫಿಕ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಎಂಟಮಾಲಜಿಸ್ಟ್ಸ್ ಮುಂತಾದವರಿಗೆ ಎಲ್ಲಾದರೂ ಹೋಗುವುದಕ್ಕೆ ಡೈರೆಕ್ಟರವರ ಆಫೀಸಿನಲ್ಲಿ ಈಗ ಒಂದು ವಾಹನ

ಇದೆ. ಈಗ ಅಸಿಸ್ಟೆಂಟ್ ಡೈರೆಕ್ಟರವರಿಗೇ ಇನ್ನೂ ವಾಹನ ಕೊಟ್ಟಿಲ್ಲ. ತಾವು ಹೇಳುವುದನ್ನು ಆಲೋಚನೆ ಮಾಡೋಣ.

ಶ್ರೀ ಎಚ್. ಕೆ. ಸಿದ್ದಯ್ಯ.—ಹಾಸನ ಜಿಲ್ಲೆಗೆ ಒಂದು ಬುಲ್‌ಡೋಜರ್ ಕೊಟ್ಟಿರುವುದು ಎಲ್ಲಿದೆ ?

ಅಧ್ಯಕ್ಷರು.—ಬುಲ್‌ಡೋಜರ್ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

Tractors in the Agricultural Department.

Q.—477. Sri G. BASAPPA (Hosadurga).—

Will the Government be pleased to state:—

(*a*) the number of Tractors in the Agricultural Department ;

(*b*) how many of them are in working condition ;

(*c*) the extent of land ploughed every year from the last three years ?

A.—Dr. R. NAGAN GOWDA (Minister for Agriculture).—

(*a*) 127.

(*b*) 20.

(*c*)

Year		*The area ploughed by Tractors* A. G.
1952-53	...	8,817—13
1953-54	...	6,769—19
1954-55	...	3,351—33

ಶ್ರೀ ಜಿ. ಬಸಪ್ಪ.—ಈ 107 ಟ್ರ್ಯಾಕ್ಟರುಗಳು ಎಷ್ಟು ವರ್ಷಗಳಿಂದ sick ಆಗಿವೆ ?

*ಡಾ॥ ಆರ್. ನಾಗನಗೌಡ.—ಈ ಟ್ರ್ಯಾಕ್ಟರುಗಳು 1945 ರಲ್ಲಿ ಖರೀದಿಮಾಡಿದವು. ಇವು 1951-52ರಿಂದ sick ಆಗಿವೆ.

ಶ್ರೀ ಜಿ. ಬಸಪ್ಪ.—ಅವನ್ನು ಇನ್ನುಮುಂದೆ ರಿಪೇರಿ ಮಾಡುವುದಕ್ಕೆ ಸಾಧ್ಯವಿಲ್ಲಎಂದು ತೀರ್ಮಾನವಾಗಿದೆಯೋ ಅಥವಾ ಅವುಗಳಲ್ಲಿ ಯಾವುದನ್ನಾದರೂ ರಿಪೇರಿ ಮಾಡಲಿಕ್ಕೆ ಸಾಧ್ಯವಿದೆಯೋ ?

ಡಾ॥ ಆರ್. ನಾಗನಗೌಡ.—ಈ ವರ್ಷ 20 ಟ್ರ್ಯಾಕ್ಟರುಗಳಿಗೆ ಸ್ಪೇರ್‌ಪಾರ್ಟ್ಸ್ ತೆಗೆದುಕೊಂಡು ರಿಪೇರಿ ಮಾಡುವುದಕ್ಕೆ ಏರ್ಪಾಡು ಮಾಡುತ್ತಾ ಇದ್ದೇವೆ.

ಶ್ರೀ ಜಿ. ಬಸಪ್ಪ.—ಈ ಟ್ರ್ಯಾಕ್ಟರುಗಳನ್ನು ರಿಪೇರಿ ಮಾಡಿ ಸರಿಯಾದ ಸ್ಥಿತಿಗೆ ತರುವಂತೆ ಮಾಡಲು ಸಾಕಾದಷ್ಟು ಸಿಬ್ಬಂದಿ ಇದೆಯೋ ?

ಡಾ॥ ಆರ್. ನಾಗನಗೌಡ.—ಇದೆ.

ಶ್ರೀ ಜಿ. ಬಸಪ್ಪ.—ಈಗ ಕೆಟ್ಟುಹೋಗಿರುವ 107 ಟ್ರ್ಯಾಕ್ಟರುಗಳ ಡ್ರೈವರುಗಳಿಗೆ ಏನು ಕೆಲಸ ಕೊಟ್ಟಿದ್ದೀರಿ ?

ಡಾ॥ ಆರ್. ನಾಗನಗೌಡ.—ಅವರನ್ನೆಲ್ಲ disband ಮಾಡಿದ್ದೇವೆ. ಟ್ರ್ಯಾಕ್ಟರುಗಳು ಕೆಲಸಮಾಡುವಾಗ ಮಾತ್ರ ಡ್ರೈವರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ. ಉಳಿದ ಕಾಲದಲ್ಲಿ ಇಲ್ಲ.

ಶ್ರೀ ಜಿ. ಬಸಪ್ಪ.—ಈ ಟ್ರ್ಯಾಕ್ಟರುಗಳಿಗೆ ಬೇಕಾದ spare parts ಯಾವರೀತಿ ಕೊಳ್ಳುತ್ತಿದ್ದೀರಿ ?

Dr. R. NAGAN GOWDA.—We are purchasing these spares through the Stores Purchase Committee, as per rules in force.

ಶ್ರೀ ಜಿ. ಬಸಪ್ಪ.—ಈಗ ಟ್ರ್ಯಾಕ್ಟರುಗಳನ್ನೆಲ್ಲ ಕೆಲವು ನಿರ್ದಿಷ್ಟವಾದ ಕಂಪೆನಿಗಳಿಂದ ತೆಗೆದುಕೊಳ್ಳುತ್ತಿರುವುದರಿಂದ ಆ ಟ್ರ್ಯಾಕ್ಟರುಗಳಿಗೆ ಬೇಕಾದ spare parts ಸಹ ಆಯಾ ಕಂಪೆನಿಗಳವರಿಂದಲೇ ಅಲ್ಲವೆ ಸಪ್ಲೈ ಆಗುವುದು ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಜಿ. ಬಸಪ್ಪ.—ಹಾಗಾದರೆ ಸ್ಟೋರ್ಸ್ ಪರ್ಚೇಸ್ ಕಮಿಟಿಗೆ ಟೆಂಡರುಗಳನ್ನು ಕರೆಯುವುದಕ್ಕೆ ಯಾಕೆ ಕೊಡಬೇಕು ?

Dr. R. NAGAN GOWDA.—These are the Rules in force. That is why we have done like that.

ಶ್ರೀ ಜಿ. ಬಸಪ್ಪ.—ಸ್ಟೋರ್ಸ್ ಪರ್ಚೇಸ್ ಕಮಿಟಿ ಮುಖಾಂತರ ಸ್ಪೇರ್‌ಪಾರ್ಟ್ಸ್ ಪಡೆಯತಕ್ಕ ವಿಚಾರದಲ್ಲಿ ಆ ವ್ಯವಸಾಯದ ಇಲಾಖೆ ಡೈರೆಕ್ಟರ್‌ಅವರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ?

Dr. R. NAGAN GOWDA.—I do not now know what particular point he has got in mind.

ಶ್ರೀ ಜಿ ಬಸಪ್ಪ.—ಆಯಾ ತಯಾರಿಕೆಗಳಿಗೆ (make) ಸಂಬಂಧಪಟ್ಟ ಸ್ಪೇರ್ ಪಾರ್ಟ್‌ಗಳನ್ನು ನೇರವಾಗಿ ಆ ಕಂಪೆನಿಗಳಿಂದಲೇ ತರಿಸಿಕೊಳ್ಳುವುದಕ್ಕೆ ಬದಲಾಗಿ ಸ್ಟೋರ್ಸ್ ಪರ್ಚೇಸ್ ಕಮಿಟಿಗೆ ಬರೆದು ಅವರು ಟೆಂಡರ್‌ಗಳನ್ನು ಕರೆದು ತರಿಸಿಕೊಡಲು ನಿಧಾನವಾಗುತ್ತದೆ, ಆದುದರಿಂದ ನೇರವಾಗಿ ತರಿಸಿಕೊಂಡರೆ ಕೆಲಸ ಶೀಘ್ರವಾಗಿ ನಡೆಯುತ್ತದೆಂದು ಸರ್ಕಾರಕ್ಕೆ ತಿಳಿಸಿಲ್ಲವೆ ?

ಡಾ॥ ಆರ್. ನಾಗನಗೌಡ.—ಅದನ್ನು ನಾನು ವಿಚಾರಿಸುತ್ತೇನೆ.

ಶ್ರೀ ಜಿ. ಬಸಪ್ಪ.—ಇದನ್ನು ಎಷ್ಟು ದಿವಸಗಳಿಂದ ವಿಚಾರ ಮಾಡುತ್ತಿದ್ದೀರಿ ?

ಡಾ॥ ಆರ್. ನಾಗನಗೌಡ.—ಈಗ ತಾನೇ ನನ್ನ ಗಮನಕ್ಕೆ ತಂದಿದ್ದೀರಿ. ಅದನ್ನು ವಿಚಾರಿಸುತ್ತೇನೆ.

Sri M. PALANIYAPPAN.—May I know the makes of theses tractors ?

Dr. R. NAGAN GOWDA.—There are Fordsons and there are some International Harvesters type and others Harris.

Sri M. PALANIYAPPAN.—How many of each make ?

Dr. R. NAGAN GOWDA.—Some time ago, I gave that list. Cater-pillar tractors 10 ; Allis Charm 16, Farmall tractors 3, Fordsons 14, Harris 9, like that.

Sri M. PALANIYAPPAN.—Have these all been purchased through the Stores Purchase Committee ?

Dr. R. NAGAN GOWDA.— They were all purchased from 1945 onwards.

Sri M. PALANIYAPPAN.—Is it through the Stores Purchase Commitee or otherwise ?

Dr. R. NAGAN GOWDA.—I have no information.

Sri M. PALANIYAPPAN.—While making purchases, have they not taken technical opinion as to which make they should purchase and which they should not ?

Dr. R. NAGAN GOWDA.—I believe they were technically advised to purchase these things. They were purchased in 1948-49. I am sure the Agricultural Director and the Agricultural Engineer must have been consulted in this matter.

Sri M. PALANIYAPPAN.—Is it not evident that the technical opinion on which the purchase has been based, has now proved a failure ?

Dr. R. NAGAN GOWDA.—That is a matter of opinion.

Sri M. PALANIYAPPAN.—Sir, is it not a criminal waste of public money in purchasing these tractors and in keeping them idle like this ?

Mr. SPEAKER.—That is a matter of opinion.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವ್ಯವಸಾಯದ ಇಲಾಖೆಯಲ್ಲಿ 127 ಟ್ರ್ಯಾಕ್ಟರುಗಳಿರದ್ದು ಅವುಗಳಲ್ಲಿ 20 ಮಾತ್ರ ಕೆಲಸ ಮಾಡುತ್ತಿದ್ದು ಉಳಿದ 107 ಟ್ರ್ಯಾಕ್ಟರುಗಳು ಹಾಗೆಯೇ ಇರಬೇಕಾದರೆ, ಲಕ್ಷಾಂತರ ರೂಪಾಯಿಗಳಷ್ಟು ಬಡರೈತರ ಹಣವನ್ನು ಕೆಲಸ ಮಾಡದೆ ಇರುವ ಟ್ರ್ಯಾಕ್ಟರುಗಳಮೇಲೆ ಹಾಕಿರುವುದನ್ನು ನೋಡಿದರೆ, ವ್ಯವಸಾಯ ಇಲಾಖೆಯು ಇದೆಯೇ, ಅದು ಸರಿಯಾಗಿ ಕೆಲಸ ಮಾಡುತ್ತಿದೆಯೇ ಎಂಬ ಬಗ್ಗೆ ವಿವರಗಳನ್ನು ತಿಳಿಸುತ್ತೀರಾ ?

ಅಧ್ಯಕ್ಷರು.—ಈಗ comments ಬೇಕಾಗಿಲ್ಲ. ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ಡಿಮ್ಯಾಂಡ್ ಬಂದಾಗ ತಾವು ಇದನ್ನೆಲ್ಲ ಹೇಳಬಹುದಾಗಿತ್ತು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ 107 ಟ್ರ್ಯಾಕ್ಟರುಗಳು 'sick' ಅಂದರೆ ಕಾಯಿಲೆ ಇವೆ ಎಂದು ಹೇಳಿದ್ದೀರಿ. ಇವುಗಳು ಹುಷಾರಾಗುವುದಕ್ಕೆ ಎಷ್ಟು ವರ್ಷಗಳಾಗುತ್ತವೆ ?

Dr. R. NAGAN GOWDA.—46 of them were purchased in 1947-48, 81 were purchased in 1948-49. Now they are 7 to 8 years old. We are not purchasing new ones now. We are trying to bring them into working order.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವ್ಯವಸಾಯದ ಇಲಾಖೆಗೆ ಈ ಬಾಬಿಗಾಗಿ ಕೊಡತಕ್ಕ ಖರ್ಚನ್ನು ನಿಲ್ಲಿಸಿ, ಟ್ರ್ಯಾಕ್ಟರುಗಳನ್ನು ಮಾರಿ, ಸಂಸ್ಥಾನದಲ್ಲಿ ಟ್ರ್ಯಾಕ್ಟರ್ ಕೆಲಸವನ್ನು ನಿಲ್ಲಿಸಬೇಕೆಂಬುದನ್ನು ಯೋಚನೆ ಮಾಡುತ್ತೀರಾ ?

ಡಾ|| ಆರ್. ನಾಗನಗೌಡ.—ಈ ವಿಷಯದಲ್ಲಿ ನಾನು ಏನು ಹೇಳಬೇಕೆಂದರೆ ಟ್ರ್ಯಾಕ್ಟರುಗಳು ಬೇಕೆಂದು ರೈತರಿಂದ ವಿಶೇಷವಾದ ಡಿಮ್ಯಾಂಡ್ ಬರುತ್ತಿರುವುದರಿಂದ, ಈ ಟ್ರ್ಯಾಕ್ಟರುಗಳು self-supporting ಆಗಿ ಕೆಲಸ ಮಾಡಬೇಕೆಂದು ಇತ್ತೀಚೆಗೆ ಒಂದು ಎಕರೆ ಜಮೀನು ಉಳುವುದಕ್ಕೆ 25 ರೂಪಾಯಿಗಳವರೆಗೂ ಹೆಚ್ಚು ಮಾಡಿದ್ದೇವೆ. ಆದರೂ ಇನ್ನೂ ಡಿಮ್ಯಾಂಡ್ ಇದೆ. ಹಳೆಯದರ ಪೈಕಿ 20 ಟ್ರ್ಯಾಕ್ಟರುಗಳನ್ನು ರಿಪೇರಿ ಮಾಡುತ್ತಿದ್ದೇವೆ. ಡಿಮ್ಯಾಂಡ್ ಇರುವುದರಿಂದ, we are trying to make it self-sufficient.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಚೆಗೆ ಸರ್ಕಾರದವರು ಸದರಿ ಕಂಪೆನಿಗಳಿಂದ ಟ್ರ್ಯಾಕ್ಟರ್ ರಿಪೇರಿ ಮಾಡಿಕೊಡುವುದಕ್ಕೆ ಒಬ್ಬರು ಸ್ಪೆಷಲ್ ಇಂಜಿನಿಯರನ್ನು, ಕರೆಸಿದ್ದುದು ನಿಜವೆ ?

Dr. R. NAGAN GOWDA.—Not in these three years that I know of.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಾಲ್ಕೈದು ತಿಂಗಳ ಹಿಂದೆ ಕರೆಸಿದ್ದುದು ತಮಗೆ ಗೊತ್ತಿದೆಯೇ ?

Dr. R. NAGAN GOWDA.—No, we have not had any special Engineers like that. We have our own Tractor Engineer and his assistant. They have been attending to this.

Sri S. SRINIVASA IYENGAR.—Will the Government be pleased to state how many of these 107 tractors can be serviced ?

Dr. R. NAGAN GOWDA.—The information that I have now from the Tractor Engineer is that he will be able to put into condition 20 of them at present. But it does not mean to say that among others which are sick, there are not any which cannot be rigged up. Probably there are a few more which could be put into condition.

Sri S. SRINIVASA IYENGAR.—What is the trouble for the Government to ascertain exactly how many can be serviced and how many of them have to be scrapped ?

Dr. R. NAGAN GOWDA.—We have tried to get the opinion and suggestions from technical men representing those firms who were here. They demanded huge amount of money for this. Since we have our own Tractor Engineer, we are trying to put as many of them as possible into condition.

Sri S. SRINIVASA IYENGAR.—All of them ?

Dr. R. NAGAN GOWDA.—It may not be possible to put all of them into condition. As many of them as possible with the spare parts that are available, we will put them into condition.

12-30 P.M.

Sri S. SRINIVASA IYENGAR.—What was the total amount incurred by Government for the purchase of these 107 tractors ?

Dr. R. NAGAN GOWDA.—I am afraid, I would not be able to give that information to-day. I have given that information at some other time.

ಶ್ರೀ ಬಿ. ಹುಚ್ಚೇಗೌಡ.—ಹಿಂದೆ ಒಂದು ಎಕರೆ ಉಳುವುದಕ್ಕೆ ಎಂಟು ರೂಪಾಯಿಗ ಛಾರ್ಜಿತ್ತಲ್ಲವೆ ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಹಾಗಿದ್ದುದನ್ನು ಎಂಟು ರೂಪಾಯಿಗಳಿಂದ 25 ರೂಪಾಯಿಗಳಿಗೆ ಏರಿಸಿದರೆ ರೈತರಿಗೆ ತೊಂದರೆಯಾಗುವುದಿಲ್ಲವೇ ! ಎಣ್ಣೆ ಖರ್ಚು ಎಷ್ಟಾಗುತ್ತದೆಯೆಂದು ನೋಡಿ ಆ ಲೆಕ್ಕದ ಮೇಲೆ ದರ ನಿಗದಿ ಮಾಡಬೇಕಾದ್ದು ಸೂಕ್ತವಲ್ಲವೆ ?

ಡಾ॥ ಆರ್. ನಾಗನಗೌಡ.—ಮಾನ್ಯ ಸಭೆಯವರು ಟ್ರ್ಯಾಕ್ಟರುಗಳ ಖರ್ಚು ವಿಶೇಷವಾಗಿ ಆಗುತ್ತಿದೆ ಯೆಂದು ಆಗಾಗ್ಗೆ ಹೇಳಿದಮೇಲೆ ಸೆಲ್ಫ್ ಸಪೋರ್ಟಿಂಗ್ ಮಾಡಬೇಕೆಂದು ಡಿಪ್ರೀಸಿಯೇಷನ್ ಮುಂತಾದ ಎಲ್ಲಾ ಖರ್ಚನ್ನೂ ಸೇರಿಸಿ ಇಷ್ಟು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. Still there is a demand.

ಶ್ರೀ ಬಿ. ಹುಚ್ಚೇಗೌಡ.—ರೈತರು 20-30 ಸಾವಿರ ರೂಪಾಯಿಗಳನ್ನು ಕೊಟ್ಟು ಟ್ರ್ಯಾಕ್ಟರನ್ನು ಕೊಳ್ಳು ವುದಕ್ಕೆ ಸಾಧ್ಯವಿಲ್ಲದಿರುವುದಕ್ಕೆ ತಾನೆ ಡಿಮ್ಯಾಂಡ್ ಇರುವುದು ? ಡಿಮ್ಯಾಂಡ್ ಇದೆಯೆಂದು ತಾವು ಹೆಚ್ಚಿಸ ಬಹುದೆ ? ಒಂದು ಎಕರೆಗೆ ಎಷ್ಟು ರೂಪಾಯಿ ಖರ್ಚಾಗುವುದು ?

ಡಾ॥ ಆರ್. ನಾಗನಗೌಡ.—ಆ ತಪಶೀಲು ಈಗ ಹೇಳುವುದಕ್ಕಾಗುವುದಿಲ್ಲ. ಎಣ್ಣೆವಗೈರೆಗೆ ವಾಸ್ತವ ವಾಗಿ ಖರ್ಚಾಗುವುದನ್ನು ಲೆಕ್ಕಹಾಕಿಯೇ ನಿಗದಿ ಮಾಡಿರುವುದು.

ಶ್ರೀ ಬಿ. ಹುಚ್ಚೇಗೌಡ.—ಅದೆಲ್ಲಾ ಸೇರಿ ಆರು ರೂಪಾಯಿಗಳಮೇಲೆ ಖರ್ಚಾಗುವುದಿಲ್ಲವೆಂದು ಹೇಳಿ ದರೆ ಒಪ್ಪುತ್ತೀರಾ ?

ಡಾ॥ ಆರ್. ನಾಗನಗೌಡ.—ಒಪ್ಪುವುದಕ್ಕಾಗುವು ದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ರಿಪೇರಿ ಖರ್ಚು ವಗೈರೆ ಸೇರಿಸಿ ಈಗ ನಿಗದಿ ಮಾಡಿರುವ ದರ ಹೆಚ್ಚಲ್ಲವೆ ?

Dr. R. NAGAN GOWDA.—That is a matter of opinion.

ಶ್ರೀ ಬಿ. ಎನ್. ಬೋರಣ್ಣಗೌಡ.—1952-53ನೆಯ ಸಾಲಿನಲ್ಲಿ 8,817 ಎಕರೆ 13 ಗುಂಟೆ, 1953-54 ನೆಯ ಸಾಲಿನಲ್ಲಿ 6,769 ಎಕರೆ 19 ಗುಂಟೆ, 1954-55ನೆಯ ಸಾಲಿನಲ್ಲಿ 3,351 ಎಕರೆ 33 ಗುಂಟೆ ಹೀಗೆ ಉಳುಮೆ ವರ್ಷೇವರ್ಷ ಕಡಮೆಯಾಗಿರುವುದಕ್ಕೆ ಕಾರಣವೇನು ?

Dr. R. NAGAN GOWDA.—It will be seen that the number of tractors is not given ; the area that has been ploughed is given. ಆ ವರ್ಷ ಕಡಮೆ ಟ್ರ್ಯಾಕ್ಟರುಗಳು ಕೆಲಸ ಮಾಡಿರಬೇಕು.

ಶ್ರೀ ಬಿ. ಎನ್. ಬೋರಣ್ಣಗೌಡ.—ಒಂದು ಟ್ರ್ಯಾಕ್ಟರು ಒಂದು ವರ್ಷದಲ್ಲಿ ಎಷ್ಟು ಎಕರೆ ಉಳ ಬೇಕೆಂದು ನಿಗದಿ ಮಾಡಿದ್ದೀರಿ ?

ಡಾ॥ ಆರ್. ನಾಗನಗೌಡ.—ಬಹಳ ಚೆನ್ನಾಗಿ ಕೆಲಸ ಮಾಡಿದರೆ ಎರಡು ಸಾವಿರ ಗಂಟೆಗಳ ಕೆಲಸ ಮಾಡಬೇಕೆಂಬುದು ಒಂದು ಶಾಸ್ತ್ರ.

ಶ್ರೀ ಬಿ. ಎನ್. ಬೋರಣ್ಣಗೌಡ.—ಎರಡು ಸಾವಿರ ಗಂಟೆಗಳಿಗೆ ಎಷ್ಟು ಎಕರೆ ಉಳಬಹುದು ?

ಡಾ॥ ಆರ್. ನಾಗನಗೌಡ.—ನಾನು ಹೇಳಿರು ವುದು ಪರಮಾವಧಿ. ಉಳುವ ಪ್ರದೇಶ, ಟ್ರ್ಯಾಕ್ಟರ್ ಸೈಜ್ ಮತ್ತು ಮೇಕ್‌ಮೇಲೆ ಹೋಗುತ್ತದೆ. 400-500 ಎಕರೆಗಳನ್ನಾದರೂ ಉಳಬಹುದು.

ಶ್ರೀ ಬಿ. ಎನ್. ಬೋರಣ್ಣಗೌಡ.—ಮೂರು ಸಾವಿರ ಚಿಲ್ಲರೆ ಎಕರೆಗಳನ್ನು 20 ಟ್ರ್ಯಾಕ್ಟರುಗಳು ಉಳುಮೆ ಮಾಡಿರುವುದು ಸರಿಯೆ ?

ಡಾ॥ ಆರ್. ನಾಗನಗೌಡ.—ಮಳೆ ಬಂದಾಗ, ಬಿಸಿಲಿನಲ್ಲಿ ಭೂಮಿ ಗಟ್ಟಿಯಿರುವಾಗ, ಹೀಗೆ ವರ್ಷದಲ್ಲಿ ಕೆಲವು ಕಾಲ ಕೆಲಸವಿರುವುದಿಲ್ಲ, ಕೆಲವು ಕಾಲ ಮಾತ್ರ ಕೆಲಸ ಮಾಡುತ್ತವೆ, ವರ್ಷಪೂರ್ತಿ ಕೆಲಸ ಮಾಡುವು ದಿಲ್ಲ.

ಶ್ರೀ ಬಿ. ಎನ್. ಬೋರಣ್ಣಗೌಡ.—ಇಷ್ಟು ಎಕರೆ ಉತ್ತರೆ ಇಷ್ಟು ಹಣ ಕೊಡಬೇಕೆಂದು ವಿಧಾಯಕ ಮಾಡುವವರು ಯಾರು ?

ಡಾ॥ ಆರ್. ನಾಗನಗೌಡ.—ಅಸಿಸ್ಟೆಂಟ್ ಡೈರೆಕ್ಟರು.

ಶ್ರೀ ಬಿ. ಟಿ. ಕೆಂಪರಾಜ್.—ಒಂದು ಟ್ರ್ಯಾಕ್ಟರಿನ ಒಟ್ಟು ಅವಧಿಯೆಷ್ಟು ? ಅದು ಎಷ್ಟು ವರ್ಷ ಕೆಲಸ ಮಾಡಬಲ್ಲದು ?

ಶ್ರೀ ಡಾ॥ ಆರ್. ನಾಗನಗೌಡ.—ಅದನ್ನು ಆಗಲೇ ಹೇಳಿದ್ದೇನೆ.

ಶ್ರೀ ವಿ. ಆರ್. ನಾಯ್ಡು.—ಈ ಟ್ರ್ಯಾಕ್ಟರುಗಳನ್ನು ಯಾವ ವರ್ಷದಲ್ಲಿ ಕೊಂಡುಕೊಳ್ಳಲಾಯಿತು ?

ಅಧ್ಯಕ್ಷರು.—ಅದನ್ನು ಹೇಳಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಮಾನ್ಯಮಂತ್ರಿಗಳು ರಜಾ ತೆಗೆದುಕೊಂಡು 107 ಟ್ರ್ಯಾಕ್ಟರುಗಳ ರಿಪೇರಿ ಯನ್ನು ಮುಗಿಸುವುದಕ್ಕೆ ಸಾಧ್ಯವೆ ?

(ಉತ್ತರವಿಲ್ಲ).

Sri H. C. LINGA REDDY.—Is this tractor scheme working satisfactorily ?

Dr. R. NAGAN GOWDA.—Sir, under the conditions, we are getting the best out of these tractors. After all, Hon'ble Members know that these tractors are old and some of them are as old as 8 to 10 years. Besides, they are working under varying conditions of soil and climate.

Sri H. C. LINGA REDDY.—What are the difficulties in the way of Government getting these tractors overhauled and repaired ?

Dr. R. NAGAN GOWDA.—Want of spare parts; some of the parts are so worn out that it is not worthwhile to replace them.

ಶ್ರೀ ಕೆ. ವಿ. ಬೈರೇಗೌಡ.—ಈಗ ದರ ಹೆಚ್ಚಿಸಿ 25 ರೂಪಾಯಿ ಮಾಡಿರುವಾಗ ಉಳುಮೆ ಮಾಡುವ ಕೆಲಸವನ್ನು ಫರ್ಮುಗಳಿಗೆ ವಹಿಸುವುದಕ್ಕೆ ಸಾಧ್ಯವಿಲ್ಲವೆ?

ಡಾ॥ ಆರ್. ನಾಗನಗೌಡ.—ಖಾಸಗೀ ಫರ್ಮ್‌ಗಳನ್ನು ಉಪಯೋಗಿಸಿಕೊಂಡು ಉಳುಮೆ ಮಾಡಿಸುತ್ತೇವೆಂದು ಹೇಳಿದರೆ ಅದಕ್ಕೆ ಆಕ್ಷೇಪಣೆಯಿಲ್ಲ. ಸಾಧಾರಣವಾಗಿ ಫರ್ಮಿನವರು ಒಪ್ಪುವುದಿಲ್ಲ, ಒಪ್ಪಿದರೆ ನಮಗಿಂತ ಹೆಚ್ಚಾಗಿ ಛಾರ್ಜ್‌ಮಾಡುತ್ತಾರೆ. ಬಳ್ಳಾರಿಯಲ್ಲಿ 35 ರೂಪಾಯಿಗಳನ್ನು ಛಾರ್ಜ್ ಮಾಡುತ್ತಿದ್ದಾರೆ. ಹೀಗೆ ಛಾರ್ಜ್ ಜಾಸ್ತಿಯಾದರೂ ಪರವಾಗಿಲ್ಲ, ಅವರು ಈ ಕೆಲಸಮಾಡಲಿ ಎಂದು ಒಪ್ಪುವುದಾದರೆ ವಿಚಾರ ಮಾಡಬಹುದು.

ಶ್ರೀ ಕೆ. ವಿ. ಬೈರೇಗೌಡ.—ಈ ವಿಚಾರದಲ್ಲಿ ಪತ್ರ ವ್ಯವಹಾರ ನಡೆಸಿ ಫರ್ಮ್‌ನವರ ಅಭಿಪ್ರಾಯ ತಿಳಿದಿದ್ದೀರಾ?

ಡಾ॥ ಆರ್. ನಾಗನಗೌಡ.—ಒಂದು ಕಂಪೆನಿಯವರನ್ನು ಕರೆಸಿ ರಿಪೇರಿಮಾಡಿ ಎಂದು ಹೇಳಿದಾಗ ಅವರು ಡಿಮ್ಯಾಂಡ್ ಮಾಡಿದ್ದು ಹೆಚ್ಚಾಯಿತು, ಅದನ್ನು ಒಪ್ಪಲಿಲ್ಲ. ಬೇರೆ ಕೆಲವರನ್ನು ವಿಚಾರ ಮಾಡಿದ್ದರಲ್ಲೂ ಅನುಕೂಲ ಕಂಡುಬಂದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಟ್ರ್ಯಾಕ್ಟರ್ ಸ್ಕೀಂ ಷುರುವಾಗಿ ಎಷ್ಟು ವರ್ಷಗಳಾದುವು?

Dr. R. NAGAN GOWDA.—Somewhere about 1945.

ಶ್ರೀ ಡಿ. ಎಂ. ಗೋವಿಂದರಾಜು.—ಅದು ಷುರುವಾದ ಮೇಲೆ ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ?

Dr. R. NAGAN GOWDA.—That has not been compiled; I am not able to give that information.

ಶ್ರೀ ಡಿ. ಎಂ. ಗೋವಿಂದರಾಜು.—ಟ್ರ್ಯಾಕ್ಟರ್ ಸ್ಕೀಂ ಲಾಭದಾಯಕವಾಗಿಲ್ಲ, ಕೈಬಿಡಬೇಕು ಎಂದು ಸರ್ಕಾರದವರು ಯೋಚನೆ ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—ಒಮ್ಮೆ ಯೋಚನೆ ಮಾಡಿದ್ದರು.

Regulated Market at Davangere.

Q.—525. Srimathi Bellary SIDDAMMA (Davanagere).—

Will the Government be pleased to state:—

(*a*) whether complaints regarding the injustice and trouble to the raiyats caused in the Regulated Market at Davangere have come to their notice;

(*b*) whether they would enquire into this matter and take suitable steps to obviate the above?

A.—Dr. R. NAGAN GOWDA (Minister for Agriculture).—

(*a*) No.

(*b*) Does not arise in view of reply to (*a*).

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ದಾವಣಗೆರೆ ರೆಗ್ಯುಲೇಟೆಡ್ ಮಾರ್ಕೆಟ್ ವಿಚಾರದಲ್ಲಿ ತಮಗೆ ಇದುವರೆಗೆ ಅರ್ಜಿ ಬಂದಿಲ್ಲವೆ?

* ಡಾ॥ ಆರ್. ನಾಗನಗೌಡ.—ಡೈರೆಕ್ಟಾಗಿ ಬಂದಿಲ್ಲ. ಅಲ್ಲಿರುವ ಸೆಕ್ರೆಟರಿಗಳು ಮತ್ತು ಪ್ರೆಸಿಡೆಂಟರು ಅಲ್ಲಿರುವ ತೊಂದರೆಗಳನ್ನು ಆಗಾಗ್ಗೆ ನಿವಾರಣೆ ಮಾಡುತ್ತಿದ್ದಾರೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ತಾವು ರೈತರಿಗೆ ಹಿತವನ್ನು ಮಾಡಬೇಕೆಂಬ ಉದ್ದೇಶದಿಂದ ತಾನೆ ಇದನ್ನೆಲ್ಲಾ ಮಾಡಿದ್ದು?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈಗ ಈ ಅನುಕೂಲವನ್ನು ತಾವು ಅಲ್ಲಿ ಕಲ್ಪಿಸದಿರುವುದರಿಂದ ಏನೇನು ತೊಂದರೆಗಳಾಗುತ್ತಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಕೆಲವು ಅನಾನುಕೂಲಗಳಿರುತ್ತವೆಂಬ ವಿಚಾರ ನಮ್ಮ ಗಮನಕ್ಕೂ ಬಂದಿದೆ. ಹರಾಜನ್ನು ಮಧ್ಯಾಹ್ನ ಮೂರು ಘಂಟೆಗೇ ನಿಲ್ಲಿಸಿಬಿಡುತ್ತಾರೆ, ಮಳೆ ಬಂದಾಗ ರೈತರು ಮಾರ್ಕೆಟ್ಟಿಗೆ ತಂದ ಸಾಮಾನುಗಳನ್ನಿಟ್ಟುಕೊಳ್ಳಲು ಅವಕಾಶವಿರುವುದಿಲ್ಲ ಎಂದು ಕೆಲವು ದೂರುಗಳು ಬಂದಿವೆ. ಆದರೆ ಅಲ್ಲಿ ಒಂದು ಸಮಿತಿ ಈ ಬಗ್ಗೆ ಈಗಾಗಲೇ ಕೆಲಸ ಮಾಡುತ್ತಿದೆ. ಆ ತೊಂದರೆಗಳನ್ನೆಲ್ಲಾ ಅವರು ನಿವಾರಣೆ ಮಾಡುತ್ತಾರೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಅಲ್ಲಿಗೆ ಸಾಮಾನುಗಳನ್ನು ತೆಗೆದುಕೊಂಡು ಬರತಕ್ಕಂಥ ರೈತರಿಗೆ ನಿಲ್ಲಲು ಕೂಡಲೂ ಸಹ ಇಷ್ಟೂ ಸ್ಥಳವಿಲ್ಲ. ಆದುದರಿಂದ ಅಲ್ಲಿ ಈಗ ಸದ್ಯಕ್ಕೆ ಒಂದು ಷೆಡ್ಡನ್ನಾದರೂ ಹಾಕಿಸಿಕೊಡುತ್ತೀರಾ? ಇಷ್ಟನ್ನಾದರೂ ಮಾಡಿಸಿಕೊಡುತ್ತೀರಾ?

ಡಾ॥ ಆರ್. ನಾಗನಗೌಡ.—ಈಗ ಅಲ್ಲಿ ವರ್ತಕರೆಲ್ಲಾ ತಮ್ಮ ತಮ್ಮ ಗೋಡೌನುಗಳನ್ನು ಮಾಡಿಕೊಂಡಿರುತ್ತಾರೆ. ಮಾರ್ಕೆಟಿಂಗ್ ಸೊಸೈಟಿಯವರ ಗೋಡೌನ್ ಬೇರೆ ಇದೆ. ಅಲ್ಲಿಗೆ ಈ ವೇರ್‌ಹೌಸ್ ಆಕ್ಟ್ ಜಾರಿಗೆ ಬಂದಮೇಲೆ ತಾವು ಈಗ ಕೇಳುತ್ತಿರುವ ಅನುಕೂಲಗಳನ್ನೆಲ್ಲಾ ಕಲ್ಪಿಸಿಕೊಡಲಾಗುತ್ತದೆ.

Iron and Steel Control (Difficulties to raiyats)

Q.—526. Srimathi Bellary SIDDAMMA (Davanagere).—

Will the Government be pleased to state:—

whether it has come to their notice that since the control on iron and steel has been brought into force again and orders have been passed that they should be supplied only on permits

the raiyats and the public who require them in small quantities are put to hardship?

A.—Dr. R. NAGAN GOWDA (Minister for Agriculture).—

It has come to notice that there is scarcity of agricultural implements. A special quota of 1,500 tons of iron and steel for cart-tyres, axles and country plough points has now been secured from the Iron and Steel Controller, Calcutta and a further allotment of 1,500 tons of iron is awaited. The Commissioner for Food Production distributes the agricultural quota to the Co-operative Societies registered to trade in these materials. Agriculturists in areas of N.E.S. Blocks will have to approach the Village Level Workers and in other areas the Revenue Inspectors and Agricultural Inspectors and obtain their requirements. In view of the above facts there will be no difficulty for agriculturists to obtain their small quantities of steel without any inconvenience.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈ ಅಧಿಕಾರಿಗಳಿಂದ ಲೈಸೆನ್ಸ್ ಪಡೆದು ಕಬ್ಬಿಣದ ಸಾಮಾನುಗಳನ್ನು ಕೊಳ್ಳಬೇಕೆಂದು ತಿಳಿಸಿದ್ದೀರಿ. ಈ ಪದ್ಧತಿಯನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲವೇ ಎಂದು ಕೇಳುತ್ತೇನೆ?

*ಡಾ॥ ಆರ್. ನಾಗನಗೌಡ.—ಈಗ ಸಣ್ಣ ಪ್ರಮಾಣದಲ್ಲಿ ಕಬ್ಬಿಣ ಕೊಳ್ಳತಕ್ಕವರಿಗೆ ಸರಿಯಾದ ವ್ಯವಸ್ಥೆ ಏರ್ಪಾಡು ಮಾಡಿದ್ದೇವೆ. ಅಂಥ ತೊಂದರೆ ಏನೂ ಇರಲಾರದು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ತಾವು ಮೂರು ಸಾವಿರ ಟನ್ ಕಬ್ಬಿಣ ಬೇಕೆಂದು ಕೇಳಿದ್ದಕ್ಕೆ ಕೇಂದ್ರ ಸರ್ಕಾರದವರು 190 ಟನ್ ಮಾತ್ರ ಕೊಟ್ಟರು. ಅದಕ್ಕಾಗಿ ಈಗ ಕಂಟ್ರೋಲ್ ಪದ್ಧತಿಯನ್ನು ಜಾರಿಗೆ ತರಬೇಕಾಗಿ ಬಂತು ಎಂದು ಹೇಳಿದ್ದೀರಿ. ಅವರಿಂದ ಜಾಸ್ತಿ ಕೋಟಾ ತರಿಸಿಕೊಂಡು ಕಂಟ್ರೋಲ್ ಪದ್ಧತಿಯನ್ನು ವಜಾ ಮಾಡಲು ಸಾಧ್ಯವಿಲ್ಲವೇ?

ಡಾ॥ ಆರ್. ನಾಗನಗೌಡ.—ಅದೆಲ್ಲಾ ಹೋದ ವರ್ಷದ ಮಾತಾಯಿತು. ಈ ವರ್ಷ ಈಗಾಗಲೇ ಕಬ್ಬಿಣದ ಕಂಟ್ರೋಲ್‌ರವರಿಂದ ನಮ್ಮ ಸಂಸ್ಥಾನಕ್ಕೆ ವಿಶೇಷ ಕೋಟಾ ಪರಿಮಾಣ ಬಂದಿದೆ. 15 ನೂರು ಟನ್ ಕಬ್ಬಿಣವನ್ನು ಗಾಡಿ ಪಟ್ಟೆ, ಅಚ್ಚು, ನೇಗಿಲು, ಗುಳ, ಗುದ್ದಲಿ, ಇತ್ಯಾದಿಗಳ ಬಗ್ಗೆ ಸರಬರಾಯಿ ಮಾಡಿದ್ದಾರೆ. ಇನ್ನೂ 15 ನೂರು ಟನ್ ಬರುವುದಿದೆ. ಆದರೆ ಈ ಹಿಂದೆ ಕಬ್ಬಿಣಕ್ಕೆ ಸ್ವಲ್ಪ ಕೊರತೆ ಬಂದಿತ್ತು, ಅದಕ್ಕೋಸ್ಕರವಾಗಿ ಕೇಂದ್ರ ಸರ್ಕಾರದವರು ಇದನ್ನು ಕಂಟ್ರೋಲ್ ಮಾಡಿ ಮಾರಾಟ ಮಾಡಬೇಕೆಂದು ಹೇಳಿದ್ದರು. ಆದರೆ ಈ ವರ್ಷ ಬೇಕಾದಷ್ಟು ಕಬ್ಬಿಣ ಬಂದಿದೆ. 75 ಸೊಸೈಟಿಗಳಿಗೆ ಈಗಾಗಲೇ ಹಂಚಿದ್ದೇವೆ. ಇನ್ನು ಬಾಕಿ ಸೊಸೈಟಿಗಳವರಿಗೆ ಅವರವರ ಕೋಟಾ ತೆಗೆದುಕೊಂಡು ಹೋಗಬೇಕೆಂದು ನಾವೇ ಒತ್ತಾಯ ಪಡಿಸುತ್ತಿದ್ದೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈ ಅಧಿಕಾರಿಗಳ ಹತ್ತಿರಕ್ಕೆ ರೈತರು ಅಲೆದಾಡತಕ್ಕದ್ದನ್ನು ತಪ್ಪಿಸುತ್ತೀರಾ ಎಂದು ಕೇಳುತ್ತಿದ್ದೇನೆ.

ಡಾ॥ ಆರ್. ನಾಗನಗೌಡ.—ಅದಕ್ಕೂ ಕಾಲ ಬರಬೇಕು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈಗ ತಾವು ಯಾವ ರೀತಿ ಸಿಮೆಂಟನ್ನು ಅಂಗಂಗಡಿಯಲ್ಲೂ ಇಟ್ಟು ಮಾರಾಟ ಮಾಡಿಸುತ್ತಿದ್ದೀರೋ ಆ ರೀತಿ ಈ ಕಬ್ಬಿಣದ ಮಾರಾಟಕ್ಕೂ ಏಕೆ ಒಂದು ವ್ಯವಸ್ಥೆ ಮಾಡಬಾರದು?

ಡಾ॥ ಆರ್. ನಾಗನಗೌಡ.—ಸಿಮೆಂಟ್ ಸರಬರಾಯಿಗೆ ಯಾವ ತಾಪತ್ರಯವೂ ಇಲ್ಲ. ಅದರಿಂದ ಅದನ್ನು ಹಾಗೆ ಪರ್ಮಿಟ್ ಇಲ್ಲದೆ ಮಾರಾಟ ಮಾಡಲಾಗುತ್ತದೆ. ಆದರೆ ಕಬ್ಬಿಣಕ್ಕೆ ಇದರ ಸರಬರಾಯಿ ಸ್ವಲ್ಪ ಕಡಮೆಯಾಗಿದೆ. ಅದಕ್ಕೋಸ್ಕರವಾಗಿ ಇದನ್ನು ಪರ್ಮಿಟ್‌ಮೇಲೆ ಮಾರುತ್ತಿದ್ದೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ವ್ಯವಸಾಯಗಾರರಿಗೆ ಆಫೀಸರುಗಳ ಬಳಿಗೆ ಅಲೆದಾಡಬೇಕಾಗಿದ್ದರೆ ನಾಲ್ಕು-ಐದು ದಿನಗಳು ಬೇಕಾಗುತ್ತವೆ. ಅದಕ್ಕೆ ಸಾಗುವಳಿ ಕಾಲದಲ್ಲಿ ಅವರಿಗೆ ವ್ಯವಧಾನವಿಲ್ಲ. ಆದಕಾರಣ ಅವರಿಗೆ ನೇರವಾಗಿ ಈ ಸಾಮಾನುಗಳು ದೊರೆಯುವಂತೆ ತಾವು ಒಂದು ವ್ಯವಸ್ಥೆ ಮಾಡುವುದಕ್ಕಾಗುವುದಿಲ್ಲವೇ?

ಡಾ॥ ಆರ್. ನಾಗನಗೌಡ.—ಈಗಾದರೂ ನಾವು ಗಾಡಿ ಅಚ್ಚು, ಪಟ್ಟಿ ಅಳಿ, ಇತ್ಯಾದಿಗಳಿಗೆಲ್ಲಾ ಪರ್ಮಿಟ್ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಇನ್ನು ಈ ರೈತಾಪಿ ಜನರಿಗೆ ವ್ಯವಸಾಯದ ಸಣ್ಣ ಪುಟ್ಟ ಸಾಮಾನುಗಳನ್ನು ಮಾರಾಟ ಮಾಡಲು ರಿಜಿಸ್ಟರ್ಡ್ ಕೋ-ಆಪರೇಟಿವ್ ಸೊಸೈಟಿಗಳನ್ನು ಮಾಡಿದ್ದೇವೆ. ಆದರೆ ಅನೇಕರು ವ್ಯವಸಾಯಗಾರರಲ್ಲದವರೂ ಕೂಡ ನಾವೂ ವ್ಯವಸಾಯಗಾರರೇ ಎಂದು ಕಬ್ಬಿಣ ಕೊಳ್ಳಲು ಬಂದರೆ ನಮಗೆ ಎಷ್ಟು ಕಷ್ಟವಾಗುತ್ತದೆಂಬುದನ್ನು ತಾವೂ ಆಲೋಚಿಸಬೇಕು. ಇದಕ್ಕಾಗಿ ಕಂಟ್ರೋಲ್ ಪದ್ಧತಿಯನ್ನು ಜಾರಿಯಲ್ಲಿಟ್ಟುಕೊಂಡಿದ್ದೇವೆ. ಈ ಸಾಮಾನುಗಳು ಸರಾಗವಾಗಿ ರೈತರಿಗೆ ದೊರೆಯುವಂತೆ ಮಾಡಲು ರೆವಿನ್ಯೂ ಇನ್‌ಸ್ಪೆಕ್ಟರುಗಳೂ ಮತ್ತು ವ್ಯವಸಾಯದ ಇಲಾಖಾ ಇನ್‌ಸ್ಪೆಕ್ಟರುಗಳೂ ಇದ್ದಾರೆ. ಇದರ ಜೊತೆಗೆ ಕೋ-ಆಪರೇಟೀವ್ ಸೊಸೈಟಿಗಳನ್ನು ಬೇರೆ ತೆರೆಯಲಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ತಾವು ಆ ಸಾಮಾನುಗಳ ಮಾರಾಟದ ವ್ಯವಸ್ಥೆಯನ್ನೆಲ್ಲಾ ಆ ಸೊಸೈಟಿಗಳಿಗೇ ಕೊಟ್ಟುಬಿಡಿ ಎಂದು ಅವರೀಗ ಕೇಳುತ್ತಿದ್ದಾರೆ.

ಡಾ॥ ಆರ್. ನಾಗನಗೌಡ.—ಈಗಾಗಲೇ 75 ಸೊಸೈಟಿಗಳವರಿಗೆ ಹಂಚಿದ್ದೇವೆ. ಇನ್ನುಳಿದ ಸೊಸೈಟಿಯವರು ಅವರೇ ಬಂದಿಲ್ಲ. ನಾವು ಅವರನ್ನು ಒತ್ತಾಯಪಡಿಸಿ ನಿಮ್ಮ ನಿಮ್ಮ ಕೋಟಾ ತೆಗೆದುಕೊಂಡು ಹೋಗಿ ಎಂದು ಒತ್ತಾಯಪಡಿಸುತ್ತಿದ್ದಾಗ್ಯೂ ಅವರೇ ಇನ್ನೂ ಬಂದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ತಾವು ರೈತರಿಗೆ ಅತ್ಯಗತ್ಯವಾಗಿ ಬೇಕಾದಂಥ ಗುಳ-ಗುದ್ದಲ, ಹಾರೆ, ಇತ್ಯಾದಿ ಸಾಮಾನುಗಳನ್ನು ಒದಗಿಸುವುದಕ್ಕಾಗಿ ಅಲ್ಲವೇ ಈ ಮಲ್ಟಿ ಪರ್ಪಸ್ ಸೊಸೈಟಿಗಳನ್ನು ತೆರೆದ ಉದ್ದೇಶ?

ಡಾ॥ ಆರ್. ನಾಗನಗೌಡ.—ಈಗಾಗಲೇ ಈ ತಾಲ್ಲೂಕುಗಳಲ್ಲಿರುವ 41 ಮಲ್ಟಿಪರ್ಪಸ್ ಸೊಸೈಟಿಗಳವರು ತಮ್ಮ ಕೋಟಾ ತೆಗೆದುಕೊಂಡಿದ್ದಾರೆ. ಇನ್ನು ಬಾಕಿಯುವರು ಅವರೇ ಬಂದಿಲ್ಲ. ನಾವು ಒತ್ತಾಯ ಮಾಡುತ್ತಿದ್ದೇವೆ. ಇನ್ನು ಬಾಕಿ ಸಂಸ್ಥೆಗಳವರೊಂದುವೇಳೆ ಬಂದು ಕೇಳಿದರೂ ನಾವು ಕೊಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ರೈತರಿಗೆ ಬೇಕಾದ ಸಾಮಾನುಗಳೇ ಇಲ್ಲ ಎಂದು ಹೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೋ ?

ಡಾ॥ ಆರ್. ನಾಗನ ಗೌಡ.—ನಾವು ಅವರಿಗೆ ಕೂಡಲೇ ಬಂದು ನಿಮ್ಮ ಕೋಟಾ ತೆಗೆದುಕೊಂಡು ಹೋಗಬೇಕೆಂದು ಒತ್ತಾಯ ಪಡಿಸುತ್ತಿರುವುದೇ ಅಲ್ಲದೆ ಈ ಬಗ್ಗೆ ಒಂದು ಸ್ಪೆಷಲ್ ಸರ್ಕ್ಯುಲರನ್ನೇ ಹೊರಡಿಸಿದ್ದೇವೆ. ಇಂಥಿಂಥಾ ಸೊಸೈಟಿಯವರಿಗೆ ಇಷ್ಟೇ ಕೋಟಾ ಕೊಟ್ಟಿದ್ದೇವೆ, ನೀವು ಕೂಡಲೇ ಬಂದು ಡೆಲವರಿ ತೆಗದುಕೊಳ್ಳಬೇಕು ಎಂಬುದಾಗಿ ತಿಳಿಸಿದ್ದೇವೆ. ಆ ಬಗ್ಗೆ ನನ್ನಲ್ಲಿ ಒಂದು ಪಟ್ಟಿ ಸಹ ಇರುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಾವು ಈ ಸೊಸೈಟಿಗಳಿಗೆ ಅಲಾಟ್ ಮಾಡಿರುವುದನ್ನು ಅವರು ತೆಗೆದುಕೊಳ್ಳದೆ ಹೋದರೆ ಆಗ ತಾವು ಮುಂದೇನು ಮಾಡುತ್ತೀರಿ ?

ಡಾ॥ ಆರ್. ನಾಗನ ಗೌಡ.—ಡಿಪೋದಲ್ಲಿ ಮಾರಾಟಕ್ಕೆ ಇಡುತ್ತೇವೆ.

ಶ್ರೀ ಕೆ. ವಿ. ಬೈರೇಗೌಡ.—ತಾವು ತಾಲ್ಲೂಕು ಮಲ್ಟಿಪರ್ಪಸ್ ಸೊಸೈಟಿಗಳವರಿಗೆ ಕೊಟ್ಟ ಹಾಗೆ ಸರ್ಕಲ್ ಸೊಸೈಟಿಗಳಿಗೇ ಕೊಡುವುದಿಲ್ಲ ?

ಡಾ॥ ಆರ್. ನಾಗನ ಗೌಡ.—ಅವರಿಗೂ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಶಿವನಂಜೇಗೌಡ.—ಈ ಮಲ್ಟಿಪರ್ಪಸ್ ಸೊಸೈಟಿಗಳಲ್ಲಿ ಕೆಲವು ಷೇರ್ ದುಡ್ಡನ್ನೆಲ್ಲಾ ತಿಂದು ಹಾಕಿ ಗೋತ ಹೊಡೆದಿರುತ್ತವಲ್ಲಾ, ಅವಕ್ಕೆಲ್ಲಾ ಏನು ಮಾಡುತ್ತೀರಿ ? (ನಗು !)

ಡಾ॥ ಆರ್. ನಾಗನ ಗೌಡ.—ಆಗಲೇ ಹೇಳಿದ ಹಾಗೆ ಡಿಪೋಗಗಳಲ್ಲಿ ಮಾರಾಟ ಮಾಡಿಸುತ್ತೇವೆ.

Assistant Directors in the Bangalore Government Press.

Q.—220. Sri R. ANANTARAMAN (Chamarajpet).—

Will the Government be pleased to state :—

(*a*) the number of Gazetted posts of Assistant Directors that have been sanctioned in the Government Press, Bangalore ;

(*b*) the number of posts that are filled up by Probationers and the number by Departmental men ;

(*c*) whether any posts are kept unfilled and if so, how many and from how long ?

A.—Dr. R. NAGAN GOWDA (Minister for Agriculture).—

(*a*) 4.

(*b*) Probationers : One.

Departmental men : Three (as an interim measure).

(*c*) Nil.

ಶ್ರೀ ಆರ್. ಅನಂತರಾಮನ್.—ತಾವು (ಬಿ)ಗೆ ಉತ್ತರವಾಗಿ ತಾತ್ಕಾಲಿಕವಾಗಿ ಮೂರು ಮಂದಿಯನ್ನು ಅಸಿಸ್ಟೆಂಟ್ ಡೈರೆಕ್ಟರ್‌ಗಳನ್ನಾಗಿ ನೇಮಕ ಮಾಡಿದೆಯೆಂದು ತಿಳಿಸಿದ್ದೀರಿ. ಯಾವ ಆಧಾರದ ಮೇಲೆ ಇವರನ್ನು ನೇಮಕ ಮಾಡಿದ್ದೀರಿ ?

*ಡಾ॥ ಆರ್. ನಾಗನ ಗೌಡ.—ಹಂಗಾಮಿ ಅರೇಂಜ್‌ಮೆಂಟಿನ ಬಗ್ಗೆ ಮೂರು ತಿಂಗಳಿಗೆ ನೇಮಕ ಮಾಡಿದೆ.

ಶ್ರೀ ಆರ್. ಅನಂತರಾಮನ್.—ಇವರಲ್ಲಿ ಗ್ರಾಜುಯೇಟುಗಳು ಎಷ್ಟು ಜನ, ಟೆಕ್ನಿಕಲ್ ಪೀಪಲ್ ಎಷ್ಟು ಜನ ?

ಡಾ॥ ಆರ್. ನಾಗನಗೌಡ.—ಈಗ ನಾವು ಮಾಡಿರುವುದೆಲ್ಲಾ ಕೇವಲ ಹಂಗಾಮಿ ಏರ್ಪಾಡು. These are temporary appointments merely as a stop-gap arrangement. ಪಬ್ಲಿಕ್ ಸರ್ವಿಸ್ ಕಮಿಷನರವರು ನಾಳೆ ಸರಿಯಾದ ಏರ್ಪಾಡು ಮಾಡಿದಮೇಲೆ ಅದನ್ನೆಲ್ಲಾ ಸರಿಪಡಿಸಲಾಗುತ್ತದೆ.

ಶ್ರೀ ಆರ್. ಅನಂತರಾಮನ್.—ಇವರನ್ನು ತಾವು ಈಗ ಯಾವ ತತ್ವದ ಮೇಲೆ ನೇಮಕ ಮಾಡಿದ್ದೀರಿ ?

Dr. R. NAGAN GOWDA.—They are the seniormost officers. Two of them have been Supervisors. One has been a Manager. I think two of them are graduates.

ಶ್ರೀ ಆರ್. ಅನಂತರಾಮನ್.—ಆ ಪಬ್ಲಿಕ್ ಸರ್ವಿಸ್ ಕಮಿಷನರವರು ಹೇಗೆ ನೇಮಕ ಮಾಡುತ್ತಾರೆಂಬ ವಿಚಾರದಲ್ಲಿ ಒಂದು ಸರ್ಕಾರಿ ಹುಕುಮೇ ಇದೆ. ಅದನ್ನು ಸ್ವಲ್ಪ ತಿಳಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ಎರಡು ಸ್ಥಾನಗಳನ್ನು ನೇರವಾಗಿ ಭರ್ತಿ ಮಾಡಿದರೆ ಮೂರನೆಯ ಸ್ಥಾನವನ್ನು ಪ್ರಮೋಷನ್ ಮೂಲಕ ಭರ್ತಿಮಾಡಬೇಕೆಂಬ ನಿಯಮವಿದೆ. I will give a copy of that. It would take time if I read it here.

ಶ್ರೀ ಆರ್. ಅನಂತರಾಮನ್.—ಈಗ ಈ ತಾತ್ಕಾಲಿಕವಾಗಿ ನೇಮಕ ಮಾಡಿರತಕ್ಕವರನ್ನು ಸಂಬಳ ಜಾಸ್ತಿ ಬರುತ್ತಿದೆ ಎಂಬ ಆಧಾರದ ಮೇಲೆ ಪ್ರಮೋಷನ್ ಮಾಡಿದ್ದೀರೊ ಅಥವಾ ಅವರ ಸರ್ವಿಸ್ ಮೇಲೆ ಪ್ರಮೋಷನ್ ಮಾಡಿದ್ದೀರೊ ?

Dr. R. NAGAN GOWDA.—These are the seniormost men in the department. They have put in long service. Two of them are graduates. One is a technical man. The Order states : "This proportion of two direct recruitment to one promotion to the gazetted rank of the Assistant Director in the Printing Department is approved." That is the proportion.

ಶ್ರೀ ಆರ್. ಅನಂತರಾಮನ್.—ಪ್ರಮೋಷನ್ ಮಾಡಿದ್ದೀರಲ್ಲಾ ಅದು ಸರ್ವೀಸ್ ಮೇಲೆ ಮಾಡಿಲ್ಲ. ಸಂಬಳ ಹೆಚ್ಚಾಗಿ ಬರುವುದರಿಂದ ಮಾಡಿದ್ದೀರಿ ಅಲ್ಲವೇ ?

ಡಾ|| ಆರ್. ನಾಗನಗೌಡ.—ಪ್ರಮೋಷನ್ ಮಾಡಿಲ್ಲವಲ್ಲಾ. It is stop-gap arrangement that we have made and that cannot be considered as promotion. Promotion can be done only with the consent of the Public Service Commission.

ಶ್ರೀ ಬಿ. ಹುಚ್ಚೇಗೌಡ.—ಸಿನಿಯಾರಿಟಿ ಮೇಲೆ ಪ್ರಮೋಷನ್ ಕೊಟ್ಟಿದ್ದವರ ಪೈಕಿ ಕೆಲವರು 1-1½ ವರ್ಷ ಕೆಲಸ ಮಾಡಿದಮೇಲೆ ಪುನಃ ಅವರನ್ನು ಹಿಂದಕ್ಕೆ ಹಾಕಿದ್ದೀರಿ ಅಲ್ಲವೇ ?

Dr. R. NAGAN GOWDA.—Now applications have been called for for making permanent arrangements. This is an arrangement that we have made so that work can go on smoothly.

Assistant Directors of Bangalore Government Press (Officiating Arrangements.)

Q.—222. Sri R. ANANTARAMAN (Chamarajpet).—

Will the Government be pleased to state :—

(*a*) whether any officiating arrangements are proposed by the Director of Printing in certain gazetted posts for the conduct of work ;

(*b*) if so, when they were proposed and why they have not issued orders so far ;

(*c*) whether the delay in approving the officiating arrangements has not dislocated the work of the Press and therefore several items of work pending in the department ;

(*d*) whether the Director of Printing has not made several reports about the matter and issued reminders times without number to Government to approve at least officiating arrangements for the conduct of work ;

(*e*) the action taken by Government in the matter so far ?

A.—Dr. R. NAGAN GOWDA (Minister for Agriculture).—

(*a*) Yes.

(*b*) In March 1954.

Orders have been issued by Government.

(*c*) No.

(*d*) Some reminders have been received.

(*e*) Government have issued orders fixing the ratio of filling up the posts of Assistant Directors by direct recruitment and by promotion in Government Order No. M. 11741-42—P. & S. 58-52-4, dated 9th September 1954. Orders to recruit probationers have been issued. In-charge arrangements for the conduct of work have also been made, as an interim measure.

Sri R. ANANTARAMAN.—There has been a long delay in promoting these Assistant Directors. Why ?

Dr. R. NAGAN GOWDA.—The question of promotion and the method of recruitment have to be decided. How many should be recruited directly and how many should be promoted — for that we had to consult the Public Service Commission and so all this has taken about two years and a half.

Depressed Classes (Acquisition cases).

Q.—428. Sri M. CHIKKALINGIAH (Malavalli-Scheduled Castes).—

Will the Government be pleased to state :—

(*a*) the number of acquisition cases of Depressed Classes that have been sanctioned for the last three years up to 31st December 1955 and sites allotted ;

(*b*) the number of cases still pending on 1st January 1956 and the duration of pendency (talukwar figures to be furnished) ;

(*c*) the number of cases wherein stay orders from Government have been issued while taking possession of acquired lands for distribution among Depressed Classes (talukwar figures to be furnished) ?

A.—SRI T. CHANNIAH (Minister for Public Health and Local Self-Government)].—

(*a*) Number of acquisition cases sanctioned. 643
No. of sites allotted ... 13,016

(*b*) 505

Talukwar information: *Vide* Statement I appended.

(*c*) 11.

Talukwar information : *Vide* Statement II appended.

STATEMENT I

Statement showing the cases pending as on 1st January 1956 and the duration of pendency.

....	Within one year	More than one year	More than two years	More than three years	Total
I. Hassan District—					
1. Hassan Taluk ...	2	...	..	...	...
2. Alur ...	5	..	...	...	...
3. Belur ...	4	...	...	...	...
4. Sakalespur ...	2	...	...	...	...
5. Arasikere ...	1	...	...	..	...
6. Channarayapatna ...	...	1	...	...	...
7. Holenarasipur ...	2	...	...	...	...
Total	16	1			...
II. Kolar District.—					
1. Kolar Taluk ...	8	...	...	...	...
2. Bangarpet ...	5	2	1	...	...
3. Malur ..	4	1	...	1	...
4. Mulbagal ...	1	...	...	...	...
5. Srinivasapur ...	2	2	...	1	...
6. Chintamani ...	1	4	..	...	...
7. Sidlaghatta ...	2	...	...	...	...
8. Chickballapur ...	2	...	...	...	...
9. Gauribidanur ...	6	3	...	...	...
10. Bagepalli ...	...	1	...	1	...
11. Gudibanda ...	...	...	...	...	...
Total	31	13	1	3	...
III. Bellary District.—					
1. Bellary Taluk ...	4	1	...	...	5
2. Siruguppa ...	5	2	...	...	7
3. Hospet ...	...	6	...	...	6
4. Hadagalli ...	...	1	...	...	1
5. Harapanahalli ...	...	3	...	...	3
6. Kudligi ...	...	1	...	...	1
7. Sandur ...	...	4	...	...	4
8. Mallapura Sub-Taluk ..	...	...	...	...	...
Total	9	18	...	...	27

....	Within one year	More than one year	More than two years	More than three years	Total
IV. Bangalore District.—					
1. Bangalore North ...	4	5	1	3	13
2. Bangalore South ...	4	3	1	6	14
3. Doddaballapur ..	5	2	...	...	7
4. Devanahalli ...	1	...	...	...	1
5. Hosakote ...	...	3	3	...	6
6. Nelamangala ...	6	3	...	19	28
7. Ramanagaram ...	1	2	...	2	5
8. Magadi ...	11	9	2	...	22
9. Anekal (Not furnished)	...	...	...	...	...
10. Channapatna ...	5	8	1	1	15
11. Kanakapura ...	19	5	...	...	24
Total	56	40	8	31	135
V. Chitaldrug District.—					
1. Chitaldrug Taluk ...	9	...	...	...	9
2. Hosadurga ...	...	...	2	1	3
3. Harihar ...	2	...	...	...	2
4. Holalkere ...	1	1	1	..	3
5. Jagalur ...	2	...	1	2	5
6. Molakalmuru ...	...	...	1	2	3
7. Challakere ...	...	...	7	...	7
8. Davanagere ...	...	...	1	1	2
9. Hiriyur ...	4	3	3	2	12
Total ...	18	4	16	8	46
VI. Chickmagalur District.—					
1. Chickmagalur ...	...	...	2	...	2
2. Kadur ...	...	...	...	2	2
3. Tarikere ...	4	...	...	1	5
4. Koppa ...	...	...	1	...	1
5. Mudigere ...	...	...	1	...	1
6. Narasimharajapura ...	...	...	...	...	...
Total ...	4	...	4	3	11
VII. Shimoga District.—					
1. Shimoga Taluk ...	13	...	...	...	13
2. Bhadravati ...	8	...	...	...	8
3. Channagiri ...	...	6	...	...	6
Total ...	21	6	...	...	27

(SRI T. CHANNIAH.)

...	Within one year	More than one year	More than two years	More than three years	Total
VIII. Tumkur District.—					
1. Tumkur Taluk ...	10	20	5	3	38
2. Gubbi ...	...	1	2	8	11
3 Kunigal Taluk ...	1	3	2	1	7
4. Tiptur ...	...	6	5	3	14
5. Turuvekere ...	1	5	2	...	8
6. Chicknaikanahalli ...	...	1	1	1	3
7. Madhugiri ...	5	...	...	...	5
8. Pavagada ...	[illegible]	...	...	...	3
9. Koratagere ...	...	8	3	4	15
10. Sira ...	...	1	1	1	3
Total ...	20	45	21	21	107
IX. Mandya District.—					
1. Mandya Taluk	2	...	...	...	2
2. Maddur ...	18	...	...	...	18
3. Malavalli ...	19	...	...	...	19
4. Pandavapura ...	3	...	...	...	3
5. Srirangapatna ...	3	2	1	2	8
6. Nagamangala ...	8	5	...	2	15
7. Krishnarajapet ...	...	2	...	10	12
Total ...	53	9	1	14	77

STATEMENT II.

				No. of Cases.
1. *Bangalore District.—*				
Bangalore North	...	...	...	1
Anekal	...	...	...	1
Magadi	...	...	...	1
Channapatna	...	...	...	1
Kanakapura	...	...	...	1
			Total ...	5
2. *Tumkur District.—*				
Kunigal	...	...	...	1
Turuvekere	...	...	...	1
Koratagere	...	...	...	1
			Total ...	3
3. *Mandya District.—*				
Maddur	...	...	...	2
Malavalli	...	...	...	1
			Total ...	3

ಶ್ರೀ ಎಂ. ಚಿಕ್ಕಲಿಂಗಯ್ಯ.—643 ಕೇಸುಗಳು ಮಂಜೂರಾಗಿವೆಯಲ್ಲಾ ಈ ಪೈಕಿ ಪ್ರತಿ ವರ್ಷದಲ್ಲೂ ಮಂಜೂರಾಗಿರುವುದು ಎಷ್ಟು ಎಂಬುದನ್ನು ಹೇಳು ವುದಕ್ಕಾಗುತ್ತದೆಯೇ ?

*ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಂಡ್ಯ ಡಿಸ್ಟ್ರಿಕ್ಟ್‌ನ ಮಳವಳ್ಳಿ-ಮದ್ದೂರು ಸೇರಿ ಮೂರು ಕೇಸುಗಳಲ್ಲಿ ಸ್ಟೇ ಆರ್ಡರ್ ಆಗಿದೆಯಲ್ಲಾ ಅದು ಯಾವುದು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರಿ ಟಿ. ಚನ್ನಯ್ಯ.—ಈಗ ಹೇಳಲಿಕ್ಕೆಸಾಧ್ಯವಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—11 ಕೇಸುಗಳಲ್ಲಿ ಸ್ಟೇ ಆರ್ಡರ್ ಆದಾಗ, ರೈತರಿಂದ ದೂರು ಬಂದು ತಾನೆ ಸ್ಟೇ ಆರ್ಡರ್ ಇಷ್ಯೂ ಆಗಿರುವುದು ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿಯಾರ್ಯಾರಿಗೆ ತೊಂದರೆ ಆಗಿದೆಯೋ ಅಂಥವರು ಅಪೀಲು ಬಂದು ಅಂಥ ಕೇಸುಗಳಲ್ಲಿ ಸ್ಟೇ ಆರ್ಡರ್ ಇಷ್ಯು ಆಗಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಪ್ರಶ್ನೆ ಕಳುಹಿಸಿದ ಮೇಲೆ ಆ 11ರ ಪೈಕಿ ಯಾವುದಾದರೂ ಸ್ಟೇ ಆರ್ಡರ್ ವೆಕೇಟ್ ಮಾಡಿದ್ದೀರಾ ?

(*No answer*)

ಶ್ರೀ ಬಿ. ರಾಚಯ್ಯ.—ಮೈಸೂರು ಜಿಲ್ಲೆಯಲ್ಲಿ ಯಾವುದೂ ಪೆಂಡಿಂಗ್ ಇಲ್ಲ ಎಂದು ಹೇಳಿದ್ದೀರಿ, ಇದು ನಿಜವೇ ?

ಶ್ರೀ ಟಿ. ಚನ್ನಯ್ಯ.—ಮೈಸೂರು ಜಿಲ್ಲೆಯ ವಿವರ ಬಂದಿಲ್ಲ ಎಂದು ಇಲ್ಲಿ ತಿಳಿಸಿದ್ದಾರೆ.

ಶ್ರೀ ಬಿ. ರಾಚಯ್ಯ.—ವಿವರ ಬಂದ ಮೇಲೆ ಈ ಪ್ರಶ್ನೆ ಮತ್ತೆ ಕೇಳಬಹುದೇ ?

ಅಧ್ಯಕ್ಷರು.—ಈಗಲೆ ಏನಾದರೂ ಇದ್ದರೆ ಕೇಳಿ.

ಶ್ರೀ ಬಿ. ರಾಚಯ್ಯ.—ಪೂರ್ತಿ ಸಮಾಚಾರ ಕೊಟ್ಟರೆ ತಾನೆ ಸ್ವಾಮಿ ಕೇಳುವುದು ?

ಶ್ರೀ ಟಿ. ಚನ್ನಯ್ಯ.—ನಿಮಗೆ ಏನುಸಮಾಚಾರ ಬೇಕೋ ಕೇಳಿ.

ಶ್ರೀ ಬಿ. ರಾಚಯ್ಯ.—ಈ 11 ಕೇಸುಗಳ ಪೈಕಿ ಯಾವುದಾದರೂ ಕೇಸಿನಲ್ಲಿ ಹೈಕೋರ್ಟಿಗೆ ರಿಟ್ ಹೋಗಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದನ್ನು ಹೇಳುವುದಕ್ಕಾಗು ವುದಿಲ್ಲ.

ಶ್ರೀ ಬಿ. ರಾಚಯ್ಯ.—ಸೆಂಟ್ರಲ್ ಡಿಪ್ರೆಸ್ಡ್ ಕ್ಲಾಸ್ ಪಾಲಿಸಿ ಕಮಿಟಿಯವರ ಶಿಫಾರಸಿನ ಮೇಲೆ ಇನ್ನು ಒಂದು ವರ್ಷದೊಳಗೆ ಪೆಂಡಿಂಗ್ ಆಗಿರತಕ್ಕ ಕೇಸು ಗಳನ್ನು ಪೂರ್ತಿಯಾಗಿ ಫೈಸಲು ಮಾಡುತ್ತೇವೆ ಎಂದು ಸರ್ಕಾರದವರು ಹೇಳಿದ್ದು ನಿಜವೇ ?

ಶ್ರೀ ಟಿ. ಚನ್ನಯ್ಯ.—ಸಾಧ್ಯವಾದಷ್ಟು ಜಾಗ್ರತೆ ಜಾಗ್ರತೆಯಾಗಿ ತೀರ್ಮಾನ ಮಾಡಬೇಕೆಂತಲೇ ಖಚಿತ ವಾಗಿ ಸೂಚನೆ ಕೊಟ್ಟಿದ್ದೇವೆ. ಕೆಲವು ಸಂದರ್ಭಗಳಲ್ಲಿ ಯಾರ ಜಮೀನು ಅಕ್ವೈರ್ ಮಾಡಿರುತ್ತಾರೆಯೋ ಅವರು ಮಾಡಕೂಡದು ಎಂದು ಅಪೀಲು ಹಾಕುತ್ತಾರೆ, ಮತ್ತೆ ಕೆಲವು ಸಂದರ್ಭಗಳಲ್ಲಿ ಯಾವ ಜಮೀನು ಅಕ್ವೈರ್ ಮಾಡಬೇಕೆಂದು ಇರುತ್ತದೆಯೋ ಅದು ವಾಸಕ್ಕೆ ಅಷ್ಟು ಅನುಕೂಲವಾಗಿರುವುದಿಲ್ಲ. ಹೀಗಾಗಿ ನಿಧಾನವಾಗುತ್ತದೆ.

ಶ್ರೀ ಬಿ. ರಾಚಯ್ಯ.—ತಾವು ಬಂದ ಮೇಲೆ ಹಿಂದೆ ಅಕ್ವೈರ್ ಆಗಿ ಸೈಟುಗಳನ್ನು ವಿಂಗಡಿಸಿದ ಮೇಲೆ ಎಷ್ಟು ಕೇಸುಗಳನ್ನು ವಜಾ ಮಾಡಿದ್ದೀರಿ ಎಂಬುದ ನ್ನಾದರೂ ಹೇಳುವುದಕ್ಕಾಗುತ್ತದೆಯೇ ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಬಿ. ರಾಚಯ್ಯ.—ಆ ರೀತಿ ಅಕ್ವಿಸಿಷನ್ ಆಗಿ ಒಂದು ಸಾರಿ ಪೊಜಿಷನಿಗೆ ಕೊಟ್ಟ ಮೇಲೆ ವಜಾ ಮಾಡುವುದಕ್ಕೆ ಸರ್ಕಾರದವರಿಗೆ ಅಧಿಕಾರವಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದು circumstances of the case ಮೇಲೆ depend ಆಗುತ್ತದೆ. Exceptional cases ನಲ್ಲಿ ಮಾಡಿರಬಹುದೇ ಹೊರತು ಸಾಮಾನ್ಯವಾಗಿ ಮಾಡುವುದಿಲ್ಲ.

ಶ್ರೀ ಬಿ. ರಾಚಯ್ಯ.—ಪೊಜಿಷನಿಗೆ ಕೊಟ್ಟ ಮೇಲೆ ನ್ಯಾಯವಾದ ಕಂಪೆನ್ಸೇಷನ್ ಕೊಟ್ಟು ವಾಪಸು ತೆಗೆದುಕೊಳ್ಳಬೇಕಲ್ಲವೆ ?

ಅಧ್ಯಕ್ಷರು.—ಕಾನೂನು ಹೇಗೆ ಇದೆಯೋ ಆ ರೀತಿ ಪ್ರೊಸೀಡ್ ಆಗಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ಈಗ ಕಾನೂನಿನಲ್ಲಿ ಅವ ಕಾಶವಿಲ್ಲದೇ ಇರುವುದನ್ನು ಮಾಡುತ್ತಾ ಇದ್ದಾರೆ ಅಲ್ಲವೇ ?

ಅಧ್ಯಕ್ಷರು.—ಕಾನೂನಿನಲ್ಲಿ ಅವಕಾಶವಿಲ್ಲದೆ ಇರು ವುದನ್ನು ಮಾಡಿದರೆ ತಪ್ಪಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಮೈಸೂರು ಜಿಲ್ಲೆಯ ವಿಷಯದಲ್ಲಿ ಈ ಪ್ರಶ್ನೆ ಕಳುಹಿಸಿ ಎರಡು ತಿಂಗಳಾ ದರೂ ಕೂಡ ಏನೂ ವಿವರ ಕೊಟ್ಟಿಲ್ಲ. ಆ ರೀತಿ ಕೊಡದೇ ಇರಲಿಕ್ಕೆ ಏನು ಕಾರಣ ?

ಶ್ರೀ ಟಿ. ಚನ್ನಯ್ಯ.—ವಿವರ ಕಳುಹಿಸಿದ್ದಾರೆ. ಆದರೆ ಪೂರ್ಣ ವಿವರ ಕಳುಹಿಸಿಲ್ಲ. ಆಕ್ವಿಸಿಷನ್ ಕೇಸುಗಳು ಪೆಂಡಿಂಗ್ ಇರುವುದು 31-12-55 ರವರೆಗೆ ಮೈಸೂರು 16, ಕೃಷ್ಣರಾಜನಗರ 6, ಪಿರಿಯಾಪಟ್ಟಣ 3, ಹುಣಸೂರು 2, ಹೆಗ್ಗಡದೇವನ ಕೋಟೆ 3, ಗುಂಡಲುಪೇಟೆ 11, ಚಾಮರಾಜ ನಗರ 10, ಟಿ. ನರಸೀಪುರ 17, ಯಳಂದೂರು 3, ಈ ರೀತಿ ಕೊಟ್ಟಿದ್ದಾರೆ.

ಶ್ರೀ ಯು. ಎಂ. ಮಾದಪ್ಪ.—ಅಕ್ವಿಸಿಷನ್ ಆಗಿ ದ್ದರೂ ಸಹ ಅಲಾಟ್‌ಮೆಂಟ್ ಆಗುವುದು ಕಷ್ಟ, ನಿಧಾನವಾಗುತ್ತ ಇದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ನಮ್ಮ ಗಮನಕ್ಕೆ ಬಂದಿಲ್ಲ. ಎಲ್ಲೆಲ್ಲಿ ನಿಧಾನವಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದತಕ್ಷಣ ಅಲಾಟ್‌ಮೆಂಟ್ ಮಾಡ ಬೇಕೆಂದು ತಿಳಿವಳಿಕೆ ಕೊಡಲಾಗುತ್ತದೆ.

ಶ್ರೀ ಎಸ್. ಸಿದ್ದಪ್ಪ.—ಈ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ವರ್ಷದ ಪ್ರಾರಂಭದಿಂದ ವರ್ಷದ ಆಖೈರಿ ನೊಳಗೆ ಪೂರೈಸಬೇಕು ಎಂದು ಹೇಳಿ ಹಾಗೇನಾ ದರೂ ಒಂದು ನಿರ್ದಿಷ್ಟವಾದ ಕ್ರಮವನ್ನು ಕೈಗೊಳ್ಳು ವುದಕ್ಕೆ ಸಾಧ್ಯವಾಗುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅದಕ್ಕೆ ಒಂದು ವರ್ಷ ಬೇಕಾಗಿಲ್ಲ. 6 ತಿಂಗಳಿನಲ್ಲಿ ಮಾಡಬಹುದು, ಎರಡು ತಿಂಗಳಿನಲ್ಲಿ ಬೇಕಾದರೂ ಮಾಡಬಹುದು. ಇರತಕ್ಕ ಕಷ್ಟ ಏನೆಂದರೆ ಅಕ್ವೈರ್ ಮಾಡಿಕೊಂಡಾಗ ಆ ಜಮೀನ್‌ದಾರರು ಅಕ್ವೈರ್ ಮಾಡಕೂಡದು ಎಂದು ಅಪೀಲು ಹಾಕುತ್ತಾರೆ. ಅದರಿಂದ ನಿಧಾನವಾಗು ತ್ತದೆ.

1 P. M.

ಶ್ರೀ ಎಸ್. ಸಿದ್ದಪ್ಪ.—ಅಕ್ವಿಸಿಷನ್ ವಿಚಾರದಲ್ಲಿ ಬಹುಕಾಲದಿಂದ ಸರ್ಕಾರಕ್ಕೆ ಇಂಥ ದೂರುಗಳು ಬರು ತ್ತಲೇ ಇವೆಯಲ್ಲವೆ ?

ಶ್ರೀ ಟಿ. ಚನ್ನಯ್ಯ.—ಸರ್ಕಾರಕ್ಕೆ ಅಪೀಲುಗಳು ಬರುತ್ತವೆ.

Mud Purchase by Corporation to Widen Roads

Q.—567. **Sri M. PALANIYAPPAN** (Ulsoor).—

Will the Government be pleased to state:—

(*a*) the quantity of mud purchased by the Corporation of Bangalore from Vidhana Soudha to broaden the roads in Bangalore;

(*b*) the amount of money paid by the Corporation or money adjusted by the Corporation with the Government or Public Works Department for the same;

(*c*) the names of roads that have been so widened by the Corporation using this earth?

A.—**Sri T. CHANNIAH** (Minister for Public Health and Local Self-Government).—

(*a*) A total quantity of 1,22,577 cubic yards of mud was supplied by the Vidhana Soudha Division up to end of January 1956 for widening the following roads in Bangalore City Corporation area:

Kumara Park Road
Sydney Road
Residency Park Road
Vasanthanagar
Miller Town
Bellary Road
Race Course Road
Queen's Road
New Corporation Offices

(*b*) Nil.

(*c*) *Vide* answer to (*a*).

Sri M. PALANIYAPPAN.—Has the Government charged any money for this?

Sri T. CHANNIAH.—Yes.

ಶ್ರೀ ಎಂ. ಪಳನಿಯಪ್ಪನ್.—ವಾಟರ್ ಸಪ್ಲೈ ಮಾಡುವುದಕ್ಕೋಸ್ಕರ ಅಡ್ಜಸ್ಟ್‌ಮೆಂಟ್ ಮಾಡಬೇಕೆಂದು ಕೇಳಿದ್ದಾರೆಯೇ?

Sri T. CHANNIAH.—They requested for waiving the charges due to their meagre finances.

Sri M. PALANIYAPPAN.—What is the opinion of the Government? Are they going to waive it?

Sri T. CHANNIAH.—It is still under the consideration of the Government.

Sri M. PALANIYAPPAN.—Has it come to the notice of the Government that there is a great demand from the public that they offer more money? In view of that, will not the Government consider reducing the cost of the mud and giving more facilities to the people?

Sri T. CHANNIAH.—It will be examined.

Unauthorised cultivation in Bangalore North and South Taluks.

Q.—332. **Sri B. T. KEMPARAJ** (Bangalore South–Scheduled Castes).—

Will the Government be pleased to state:—

(*a*) whether it has come to their notice that in Bangalore North and Bangalore South Taluks a large number of areas are being cultivated unauthorisedly;

(*b*) the action taken against the unauthorised cultivators?

A.—**Sri A. G. RAMACHANDRA RAO** (Minister for Law and Education).—

(*a*) No.

(*b*) Appropriate action under section 59, L.R.C. is being taken against unauthorised cultivators.

ಶ್ರೀ ಬಿ. ಟಿ. ಕೆಂಪರಾಜ್.—ಬಗರ್‌ಹುಕುಂ ಸಾಗುವಳಿ ಮಾಡುವವರ ಮೇಲೆ 59ನೆ ಸೆಕ್ಷನ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ಹೇಳಿದ್ದೀರಿ. ಎಷ್ಟು ಕೇಸುಗಳಲ್ಲಿ ಕ್ರಮ ಕೈಕೊಂಡಿದ್ದೀರಿ?

Sri A. G. RAMACHANDRA RAO.—In Bangalore North Taluk the unauthorised cultivation of six acres is proposed to be confirmed. In seven cases, encroachment has been got cleared. In 11 cases, eviction orders have been sent for execution. In two cases, eviction orders were not executed because the parties preferred appeals and they are pending before the Board of Revenue.

Harijan Teachers in Government Middle Schools in Bangalore City (Transfers).

Q.—334. **Sri B. T. KEMPARAJ** (Bangalore South—Scheduled Castes).—

Will the Government be pleased to state :—

(*a*) the number of teachers working in the Government Middle Schools in Bangalore City ;

(*b*) the number of Harijan teachers working in the Government Middle Schools in the City ;

(*c*) the number of teachers in the Government Middle Schools in the City that are working for more than 20 years, 15 years, 10 years and 5 years ;

(*d*) the number of Harijan teachers in the Government Middle Schools in the City working for more than 20 years, 15 years, 10 years and 5 years ;

(*e*) why the Harijan Teachers are transferred to outside the City though they have put in shorter service in the City Area ?

A.—**Sri A. G. RAMACHANDRA RAO** (Minister for Law and Education).—

(*a*) 318.

(*b*) 5.

		Teachers.
(*c*) 20 years	...	6
15 ,,	...	6
10 ,,	...	18
5 ,,	...	108
Less than 5 years	..	175
(*d*) 20 years	...	Nil
15 ,,	...	Nil
10 ,,	...	Nil
5 ,,	...	1 teacher
Less than 5 years	...	4 teachers

(*e*) Transfers are made in public interest and they are not based on communal considerations.

ಶ್ರೀ ಬಿ. ಟಿ. ಕೆಂಪರಾಜ್.—ಬೆಂಗಳೂರಿನಿಂದ ಬೇರೆ ಕಡೆಗೆ ಎಷ್ಟು ಮಂದಿ ಹರಿಜನ ಉಪಾಧ್ಯಾಯರುಗಳನ್ನು ಇತ್ತೀಚೆಗೆ ವರ್ಗ ಮಾಡಿದ್ದೀರಿ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರ ಮಾಡಿ ಹೇಳಬೇಕು.

ಶ್ರೀ ಬಿ. ಟಿ. ಕೆಂಪರಾಜ್.—Academic Year ಅಂದರೆ ಜನವರಿ ತಿಂಗಳಲ್ಲಿ ಎಷ್ಟು ಜನರನ್ನು ವರ್ಗ ಮಾಡಿದ್ದೀರಿ ?

Sri A. G. RAMACHANDRA RAO.—I want notice for that.

ಶ್ರೀ ಆರ್. ಮುನಿಸ್ವಾಮಯ್ಯ.—Transfers are made in public interest ಎಂದು ಹೇಳಿದ್ದೀರಿ. ಹರಿಜನರನ್ನು ವರ್ಗ ಮಾಡುವುದರಿಂದ public interest safeguard ಆಗುತ್ತದೆಯಲ್ಲವೆ ?

Sri A. G. RAMACHANDRA RAO.—The transfers are governed by that principle.

ಶ್ರೀ ಆರ್. ಮುನಿಸ್ವಾಮಯ್ಯ.—ಆದರೆ ಬೇರೆಯವರಿಗೆ ಇದೇ ರೂಲ್ ಅಪ್ಲೈ ಮಾಡುವುದಿಲ್ಲವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲರಿಗೂ apply ಮಾಡುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹರಿಜನರಿಗೆ ಅನ್ಯಾಯವಾಗಿದ್ದರೆ ಪರಿಶೀಲಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನ್ಯಾಯವಾಗಿರುವುದನ್ನು ಸ್ಪಷ್ಟಪಡಿಸಿದರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—(*e*) ಪ್ರಶ್ನೆಗೆ ಉತ್ತರವಾಗಿ ಸರ್ಕಾರಿ ಕೆಲಸಗಳ ಸೌಕರ್ಯಕ್ಕಾಗಿ ವರ್ಗಾವಣೆಗಳನ್ನು ಮಾಡಲಾಗಿದೆಯಲ್ಲದೆ ಕೋಮುವಾರು ಗಣನೆಯ ಮೇಲೆ ಮಾಡಿಲ್ಲವೆಂದು ಹೇಳಿದ್ದೀರಿ. ವರ್ಗ ಮಾಡಬೇಕಾಗಿದ್ದರೆ 20 ವರ್ಷ, 15 ವರ್ಷ, 10 ವರ್ಷ ಮತ್ತು 5 ವರ್ಷಗಳಿಗೆ ಮೇಲ್ಪಟ್ಟು ಇರುವವರನ್ನು ವರ್ಗ ಮಾಡದೆ ಒಂದೆರಡು ಮೂರು ವರ್ಷವಾಗಿರುವವರನ್ನು ಮಾತ್ರ ವರ್ಗಮಾಡುವುದಕ್ಕೆ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—Public interest ಮೇಲೆ ವರ್ಗಮಾಡಲಾಗಿದೆ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಬಿ. ರಾಚಯ್ಯ.—ಇವರ ಮೇಲೆ ದೂರುಗಳೇನಾದರೂ ಬಂದಿದ್ದವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೇನೂ ಬಂದಿಲ್ಲ.

Mr. SPEAKER.—Sri Madhavachar is permitted to put Q. No. 18 in the previous set of questions taken up yesterday.

Kagehalla Project.

Q.—18. **Sri B. MADHAVACHAR** (Bhadravati).—

Will the Government be pleased to state :—

(*a*) whether it is a fact that contribution and water rate are being demanded on lands which were stated to have come under the command of Kagehalla Project in Bhadravathi Taluk which was abandoned without completion ;

(*b*) the extent of land on which the contribution and water rate were being levied in this area ;

(*c*) the amount collected so far on this account, if any ?

A.—Sri H. M. CHANNABASAPPA (Minister for Industries) [On behalf of (Sri A. G. Ramachandra Rao (Minister for Law and Education)].—

(*a*) and (*b*). Only contribution and water rate were demanded on an extent of 590 acres and 38 guntas.

(*c*) No amount has been collected.

ಶ್ರೀ ಬಿ. ಮಾಧವಾಚಾರ್.—ಕಾಗೇಹಳ್ಳಿ ಪ್ರಾಜೆಕ್ಟನ್ನು ಪೂರ್ತಿ ಮಾಡದೆ ಬಿಡುವುದಕ್ಕೆ ಕಾರಣ ವೇನು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾಗೇಹಳ್ಳದ ಫೀಡರ್ ಚಾನಲ್ ಮತ್ತು Bhadra Right Bank Channel ಇವೆರಡೂ ಜೊತೆಯಾಗಿ ಹೋಗುವುದರಿಂದ ಈ ಪ್ರಾಜೆಕ್ಟ್ ಅನಾವಶ್ಯಕವೆಂದು ಬಿಡಲಾಗಿದೆ.

ಶ್ರೀ ಬಿ. ಮಾಧವಾಚಾರ್.—ಎಷ್ಟು ಲಕ್ಷ ರೂಪಾಯಿ ಖರ್ಚಾಗಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಐದು ಲಕ್ಷ ಎರಡು ಸಾವಿರ ರೂಪಾಯಿ ಖರ್ಚಾಗಿದೆ.

ಶ್ರೀ ಬಿ. ಮಾಧವಾಚಾರ್.—ಇದು sheer waste of public funds ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಕಾಲದಲ್ಲಿ, ಈ ಪ್ರಾಜೆಕ್ಟನ್ನು ಮಾಡಿದಾಗ ಈ ರೀತಿಯಾಗುತ್ತದೆಂಬು ದನ್ನು ಮನಗಂಡಿರಲಿಲ್ಲ.

ಶ್ರೀ ಬಿ. ಮಾಧವಾಚಾರ್.—ಈಗ ಅಚ್ಚುಕಟ್ಟಿಗೆ ನೀರು ಬರದೆ ಇರುವುದರಿಂದ ಅಚ್ಚುಕಟ್ಟಿನ ಮೇಲೆ ಸೆಸ್ಸು ಹಾಕಿರುವುದು ದುಬಾರಿಯಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೆಸ್ ಹಾಕಿಲ್ಲ.

ಶ್ರೀ ಬಿ. ಮಾಧವಾಚಾರ್.—ಡಿಮ್ಯಾಂಡ್ ಮಾಡಿದ್ದೇವೆಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಇದನ್ನು ವಸೂಲ್ಮಾಡಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ದಯವಿಟ್ಟು ಉತ್ತರವನ್ನು ಓದಿನೋಡಿ. We have not levied any cess.

Sri B. MADHAVACHAR.—I will bring to the notice of the Government that it has been levied every year and the raiyats. . . .

Sri H. M. CHANNABASAPPA.—The Hon'ble Member must make a difference between water rate and irrigation cess. We have levied water rate and contribution.

ಶ್ರೀ ಬಿ. ಮಾಧವಾಚಾರ್.—ಅದನ್ನು ಈಗ ಲಾದರೂ waive ಮಾಡುತ್ತೀರಾ ?

Sri H. M. CHANNABASAPPA.—The feeder channel was serviced in 1951 and people have had the benefit of the feeder channel during these years. But the question of collecting water rate and contribution for the period during which the feeder channel has given them service is being examined.

Sri S. SRINIVASA IYENGAR.—Will the Government be pleased to state whether it is not obligatory on their part to manage the irrigation works when they collect contribution ?

Sri H. M. CHANNABASAPPA.—The question is that this feeder channel running parallel from Kagehalla to the Bhadra Right Bank Channel has now been rendered useless. People are urging that the contribution and water-rate may be waived.

QUESTIONS FOR ANSWERS ON THE DAY

(But not taken up)

Agricultural Department (Abolition).

Q.—91. Sri B. CHICKANNA (Javagal).—

Will the Government be pleased to state :—

whether they have contemplated the abolition of the Agricultural Department ?

A.—Dr. R. NAGAN GOWDA (Minister for Agriculture).—

No.

Agricultural Implements (non-availability).

Q.—166. Sri Mulka GOVINDA REDDY (Chitaldrug).—

Will the Government be pleased to state :—

(*a*) whether it has come to their notice that the agricultural implements are not easily available to the raiyats ;

(*b*) what steps they propose to overcome the shortage and make them easily available to the raiyats ?

A.—Dr. R. NAGAN GOWDA (Minister for Agriculture).—

(*a*) It has come to notice that there is scarcity of Agricultural Implements.

(b) As a result of pressing our demands at Delhi, a special quota of 1,500 tons of Iron and Steel for cart-tyres, axles and country plough points has now been secured from the Iron and Steel Controller, Calcutta and a further allotment of 1,500 tons of Iron and Steel has been ordered by the Government of India to be supplied, which is awaited.

Amrit Mahal Kaval in Arasikere Taluk.

Q.—441. Sri K. PANCHAKSHARIAH (Arasikere).—

Will the Government be pleased to state:—

(a) the names of Amrit Mahal Kavals in Arasikere Taluk;

(b) whether it is under their contemplation to grant any of them for cultivation;

(c) the names of kavals out of them in which Amrit Mahal cattle are being grazed and the number of days of such grazing in each Kaval during the year?

A.—Dr. R. NAGANGOWDA (Minister for Agriculture).—

(a) Hebbannghatta, Attigudda, Boochenahalli, Munjenahalli, Rangapur, Kanakatte, Musodi and Neelagiri.

(b) No.

(c).—

Name of the Kaval		*No. of days during the year*
(i) Boochenahalli	...	24
(ii) Attigudda	...	36
(iii) Munjenahalli	...	54
(iv) Belagumba (part of Rangapur).	...	75
(v) Hebbanaghatta	...	throughout the year

Name of the Kaval		*No. of Cattle grazed*
(i) Boochenahalli	...	396
(ii) Attigudda	...	429
(iii) Munjenahalli	..	452
(iv) Belagumba (part of Rangapur).	...	449
(v) Hebbanaghatta	...	430

State Land Mortgage Bank (Loans issued).

Q.—455. Sri A. MUNIYAPPA (Sidlaghatta-Chikballapur—Scheduled Castes).—

Will the Government be pleased to state:—

(a) the number of loan applications pending undisposed of till now since the last four years in the Land Mortgage Bank of the State (talukwar figures to be furnished);

(b) the reasons for not disposing them since the last so many days (talukwar details to be given)?

A.—Dr. R. NAGAN GOWDA Minister for Agriculture).—

(a) 254. (*Vide* list appended).

(b) The pendency is due to non-furnishing of required information by the primary Land Mortgage Co-operative Societies and by the loan applicants.

(DR. R. NAGAN GOWDA.)

Statement of loan applications relating to each Society (yearwar) pending disposal as on 16th February 1956.

Sl. No.	Name of L. M. Society	1952-53	1953-54	1954-55	1955-56	Total
1	Bangalore Taluk ...	...	...	...	1	1
2	Hosakote ...	...	...	...	1	1
3	Ramnagar ...	...	...	...	1	1
4	Anekal ...	...	...	...	3	3
5	Nelamangala ...	...	...	...	2	2
6	Dodballapur ...	...	...	...	3	3
7	Tumkur Taluk ...	...	...	...	2	2
8	Kunigal ...	...	...	...	3	3
9	Gubbi ...	...	...	...	2	2
10	Madhugiri ...	...	...	...	7	7
11	Tiptur ...	1	...	1	10	12
12	Turuvekere ...	...	4	1	16	21
13	Pavagada ...	...	...	2	6	8
14	Kolar Taluk ...	...	...	1	5	6
15	Chintamani ...	...	...	...	4	4
16	Mulbagal ...	...	...	1	5	6
17	Chikballapur ...	...	...	...	1	1
18	Gauribidanur ...	...	...	...	3	3
19	Sidlaghatta ...	...	...	...	1	1
20	Malur ...	...	1	...	1	2
21	Hassan Taluk ...	...	...	3	14	17
22	Arsikere ...	...	...	...	9	9
23	Saklespur ...	...	...	1	3	4
24	Holenarasipur ...	...	...	3	4	7
25	Channarayapatna ...	...	...	...	1	1
26	Arkalgud ...	...	...	...	5	5
27	Alur ...	...	2	...	5	7
28	Kadur Taluk ...	...	...	...	2	2
29	Koppa ...	...	...	...	1	1
30	Karimane ...	...	...	...	1	1
31	Tarikere ...	...	...	...	3	3
32	Sagar Taluk ...	...	...	...	7	7
33	Bhimanakone ...	...	...	...	1	1
34	Honnali ...	...	...	...	3	3
35	Sorab ...	...	...	1	1	2
36	Shikaripur ...	...	...	...	1	1
37	Mysore Taluk ...	...	...	1	...	1
38	Nanjangud ...	...	...	1	2	3
39	Chamarajanagar ...	...	...	...	4	4
40	Krishnarajanagar ...	...	...	...	7	7
41	Gundlupet ...	...	...	...	7	7
42	Hunsur ...	...	...	...	1	1
43	Periyapatna ...	...	...	...	1	1
44	Maddur Taluk ...	...	...	...	3	3
45	Srirangapatna ...	...	...	...	2	2
46	Nagamangala ...	...	...	...	3	3

Sl. No.	Name of L. M. Society	1952-53	1953-54	1954-55	1955-56	Total
47	Krishnarajpet ...	...	...	...	6	6
48	Chitaldrug Taluk ...	...	...	1	13	14
49	Davangere ...	...	...	...	2	2
50	Holalkere ...	...	...	...	6	6
51	Hiriyur ...	...	...	...	17	17
52	Hosadurga ...	...	...	...	12	12
53	Jagalur ...	...	...	...	1	1
54	Bellary ...	...	...	1	2	3
55	Hospet ...	...	...	...	1	1
	Total ...	1	7	18	228	254

ESTIMATES COMMITTEE.

Election results.

Mr. SPEAKER.—The Chair desires to announce that in connection with the election to the Estimates Committee, as the number of candidates is equal to the number of places to be filled up, the following members are declared elected :

Sriyuths :—

1. B. P. Nagarajamurthy
2. B. Srinivasa Iyengar
3. B. V. Narayana Reddy
4. V. Venkatappa
5. B. C. Nanjundaiya
6. A. V. Narasimha Reddy
7. K. Kotra Basavan Gowda
8. D. Devaraj Urs
9. M. Palaniyappan
10. G. Basappa
11. K. Lakkappa
12. T. Hanumiah

Under sub-rule (6) of Rule 137 of the Rules of Procedure, I appoint Sri V. Venkatappa as the Chairman of the Committee.

PAPERS LAID ON THE TABLE.

Sri A. G. RAMACHANDRA RAO (Minister for Law and Education).—Sir, I beg to lay on the table Notification No. T. 9668—R. T. 240-55-3, dated 28th March 1956 issued under the Motor Vehicles Act, 1939.

Sri H. M. CHANNABASAPPA (Minister for Industries).—Sir, I beg to lay on the Table Notification No. Fl. 4573-S. T. 9-55-6, dated 14th March 1956 issued under the Mysore Sales-Tax Act, 1948.

Sri R. CHENNIGARAMIAH (Chairman of House Committee).—Sir, I beg to lay on the Table the recommendations of the House Committee and action taken thereon.

MYSORE UNIVERSITY BILL, 1955.

Motion to extend time for presentation of J. S. C. Report.

Sri A. G. RAMACHANDRA RAO (Minister for Law and Education).—Sir, I beg to move :

That the time appointed for the presentation of the report of the Joint Select Committee on the Mysore University Bill, 1955, be extended and that the report be presented before the close of the next Session of the Assembly.

Mr. SPEAKER.—The question is :

"That the time appointed for the presentation of the report of the Joint Select Committee on the Mysore University Bill, 1955, be extended and that the report be presented before the close of the next Session of the Assembly."

The motion was adopted.

MYSORE MINES (AMENDMENT) BILL, 1955.

Motion to extend time for presentation of S. C. Report.

Sri A. G. RAMACHANDRA RAO.—Sir, I beg to move:

"That the time appointed for the presentation of the report of the Select Committee on the Mysore Mines (Amendment) Bill, 1955 be extended and that the report be presented before the close of the next Session of the Assembly."

Mr. SPEAKER.—The question is:

"That the time appointed for the presentation of the report of the Select Committee on the Mysore Mines (Amendment) Bill 1955 be extended and that the report be presented before the close of the next Session of the Assembly."

The motion was adopted.

SECOND FIVE YEAR PLAN.

Mr. SPEAKER.—Now the House will take up the discussion on the Second Five-Year Plan. I have decided to fix a time limit of 15 minutes for speeches.

Sri V. M. MASCARENHAS (St. John's Hill).—Sir, this is an age of plans and planning and therefore there is no surprise that we in Mysore have also had a Second Five Year Plan. It was hoped Sir, that when this Planning Board was appointed in the State, great things would come out of it. I am rather disappointed. What could their recommendations have been if the 242 crores schemes which they had thought of, had been put into print ? It would have been perhaps an interesting document. But the glaring fact remains that this Plan has now been cut down to 82 crores, and we have naturally to speak on what is mentioned in this booklet. It was said that in the First Five Year Plan, the emphasis was on agriculture and in the Second Five Year Plan, the emphasis would be on industries. But I fail to find that it is so. Out of a total sum of 82 crores, hardly a sum of about 8 crores, nearly 14 per cent, is on industries, while agriculture continues to get 30 crores or nearly 40 per cent. Of course, when you go from one plan to another, it cannot be in water-tight compartments and expenditure which naturally belonged to the First Five Year Plan, would get unconsciously into the Second Five-Year Plan. That is what has happened in our case in Mysore. On Bhadra we have spent 5 to 6 crores and we have planned to spend 11 to 12 crores more in the Second Five Year Plan. Similarly, Nugu, Thunga and some other projects which were incomplete at the end of the First Five Year Plan have got to be completed and they take up a certain sum of money under the Second Five Year Plan, so much so, that 30 crores of rupees which we have borrowed at fairly high rates of interest are going to be spent in the Second Five Year Plan solely for irrigation and agricultural purposes. What returns they will bring at the end of 1960, I have already mentioned, and I have my own doubts if even in 1965 any one of these schemes will be in a paying condition.

With these general remarks, Sir, I come to the Department of Agriculture which seems to play a very important part in our economy. The heading says 'Agricultural Production' and we have been told about their plans for the remaining five years. The Department of Agriculture, as we know in Mysore, has been in existence for over 40 years and has done wonderful work specially during the early days of Dr. Coleman. I am therefore surprised to see in this Report that this Department is now thinking of starting new lines of research work, to supply us with the latest information, which was being done as early as 1915 to 1920. Why that important section of Research in the Department of Agriculture was discontinued is not made known to this House. Now, they are again asking for a sum of 80 lakhs of rupees to revive this department. Then, this scheme of giving irrigation pumps will bring under cultivation an extra acreage of

20,000 acres yielding two thousand tons of grain. The production of compost will be intensified and that will bring a production of 5,000 tons of grain. Irrigation wells numbering about 5,000 will bring a yield of 5,000 tons of grain. Fertilisers more intensified will bring an yield of 37,500 tons. Improved type of seeds and better variety seeds will bring in 75,000 pallas of paddy.

Sir, all this is being achieved by a total expenditure of only 130 lakhs under the following heads :

Bulldozers	27.5 lakhs
Improved seeds	25 ,,
Fertilizers	14 ,,
Wells	27.5 ,,
Diesel Pump sets	25 ,,
Compost	10 ,,
Japanese method	2.5 ,,

Here is a practical example, if these figures could be relied upon, as to how with a bare sum of 130 lakhs spread over five years we will be able to produce 89,000 tons of extra foodgrains. I would like to ask whether they hope to achieve half this result by their Tunga Anicut or Nugu Anicut over which they have spent over 5·2 crores. I have been telling repeatedly that if the State's economy, specially in the field of agriculture, is to improve, more attention should be paid to improve minor tanks, small projects, improved seeds, better method of farming, extra quantities of fertilisers; these are the things that count more than big projects costing crores of rupees. This is a kind of economy that spreads over every village in the State, which brings a new life into every village. Therefore, I recommend that in future Government should take small projects more and more rather than the big projects which cost us crores, and merely have a spectacular effect.

Sir, the Agricultural Department has no doubt, given out a beautiful resume in this Booklet about the work during the next five years. But the doubt remains whether they will achieve what they have planned. We know the story of tractors and bulldozers. These tractors are not only lame ducks of Government of Mysore but they are the sickliest of ducks.

SRI J. MOHAMED IMAM (Jagalur).—They are dead.

SRI V. M. MASCARENHAS.—My friend says: they are dead. Here, Government are again thinking of spending 27 lakhs on tractors. I only hope that the old story will not repeat.

A MEMBER.—There is no doubt about it. (*Laughter.*)

SRI V. M. MASCARENHAS.—In that case, let these 27 lakhs be kept in the treasury.

Sir, I now come to the next great activity of the State,—Industries and the Industrial Developmemt in the State. As I have already remarked, the most disappointing feature is that not one single new industry is going to be started in Mysore under the Second Five Year Plan. The then Industries Minister, Sri Siddaveerappa, in his speech during the last budget, was saying that the Second Five Year Plan is an industrial plan and crores and crores of rupees would be spent for industrial development in Mysore. Actual figures are given here and the major part of it goes to the rural industrialisation scheme, a scheme which brings the Government into almost disrepute, as I have said on a previous occasion. Then there is the expansion of the Electric Factory, the expansion of the Porcelain Factory, expansion of Soap Factory. Sir, these are mere expansions and not starting of new industries. They should have been included in the First Five Year Plan itself. It is unfortunate that three good years have been wasted by the Government in not giving a concrete shape to the decisions taken about the development of these factories.

Now, I come to the Rural Industrialisation Scheme. Sir, this is a scheme of which Hon'ble Members in the past and even to-day have made the most critical observations. This is a department where money is spent without either any audit or any check. Anyway, I would suggest that in future we should not be guided by the brilliant figures where we have been

(SRI V. M. MASCARENHAS.)

told that 16,750 industries have been started annually, the share amount is 17 lakhs and, the value of gross production is 7 crores. It is normally difficult for me to believe these. I have been an industrialist for the last few years. It is very difficult to rely on these figures. More than 55 lakhs goes towards the establishment expenditure. If industrial wealth in a country is to be produced by a Governmental agency by employing men, nothing could be more foolish. There will be nothing but creating some posts like Supervisors, etc. in the District Headquarters; it will not be industrial development.

Sir, after this, I come to forest. Here again, a very ambitious scheme has been thought of. Just yesterday, my friend Sri Hutchmasti Gowda was pointing out that there was the scheme for afforestation of 75,000 acres which meant at the rate of 43 acres a day. By seeing the rate of afforestation that has been done in the past in the State, is it possible to believe that in the next five years there will be afforestation work to an extent of 75,000 acres? If the Government could do it, I shall be the first to congratulate them. As I said yesterday, this is only a dream. Dreams sometimes may come true; very often they do not. (*Laughter.*) Sir, it is rather unfortunate that Government are not taking enouhg care in the scheme of afforestation. In the good old days there was a rule that every Forest Officer should show at the end of every year a minimum acreage of afforestation. If they did not do it, there was a black-mark and they would either be degraded or transferred. Can this Government tell me whether during the last five or ten years, this rule has strictly been adhered to? I can emphatically say, the answer is 'no'. Government do not take any serious notice to know whether the Forest Officers are really keen about afforestation. I must say they are keen only to destroy the forest. Our forest wealth was 17·2 per cent and now it has come down to 14 per cent. If you go at this rate, the curse that came to Middle East will come to our State, because a State which has no forest will become a desert. I am glad to see that the present Minister for Agriculture has realised it and he is vigorously opposing any attempt to give forest areas for cultivation. That is not enough; more forest must be grown. This will not only prevent soil erosion but will improve the fuel position in the country.

SRI L. SIDDAPPA (Chennagiri).—What is your reply to Sri T. Hanumiah?

SRI V. M. MASCARENHAS.—He must go elsewhere to get lands for cultivation and not claim forest lands. We, as responsible members of this House, could never subscribe to a policy of that kind. There are thousands of acres of land ready to be released for cultivation. The eyes of some seem to be only on forest lands; I do not understand that peculiar mentality.

Sir, I now come to the Department of Sericulture. This is a very vital industry in our State. If sericulture is not improved, our State would suffer a lot. In these days of competition with rayon silk and artificial silk, our silk industry is really handicapped. Government must see that thousands of families that are mainly depending on this industry exist and the industry flourishes. I know Sri Siddaveerappa who holds the sericulture portfolio, is very much interested in the industry. My only request to him is, when he considers the question of reviving spun silk industry, he will keep in mind not only the interest of the industry as such but also the interest of the State.

1-30 P.M.

As regards fisheries, we have a very rosy picture in the booklet, but when I go to the market and cannot buy two pounds of good fish, all this becomes futile. Let the Minister do what he likes. If he can dump 10,000 pounds in a day in Bangalore market, that day I will publicly thank him and say that the department is doing good work and until such a day comes, the fishery scheme of the Government of Mysore is all a farce and there is no possible good coming to the State.

Coming to medicine and public health, this booklet contemplates that in future the Medical Department will be reorganised, that experts with various degrees will be sent regularly to foreign countries for special training and that hospitals will be equipped on first class lines. About 30-40 years ago, the hospitals in Mysore and Bangalore were comparable to any in the whole of India. It is sad to see from this booklet that to-day they are not in that state. Why their standards should have deteriorated, why they could not have been kept in first class condition which they enjoyed 30 years ago, is difficult for me to understand. After all, one or two premier hospitals in a State not only bring honour to the State but bring relief to the citizens of that State and if to-day we see that qualified men are not to be found in the State and that the Government should envisage a scheme of sending young men for taking these degrees, either there has been some kind of lacuna in the rules or there has been some kind of grave negligence to see that year after year young men with the brilliance and qualifications were not being deputed regularly to various foreign countries for training which was the feature in the good days.

With regard to public health, I must admit very good work is being done in malnad and other parts—work which has brought really tangible results. I wish them the best of luck in the remaining five years. Now that the Director of Public Health and the Director of Medicine are becoming one, I fondly hope that in the next five years these two departments will work with greater co-ordination and the interests of the State will thereby be served further.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಸ್ವಾಮಿ, ಈಗ ನಮ್ಮ ಮುಂದಿರತಕ್ಕ ಈ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿರತಕ್ಕಂಥ ಯೋಜನೆಗಳೆಲ್ಲಾ ನಾಳೆ ಬರಲಿರುವ ಏಪ್ರಿಲ್ ಒಂದನೆಯ ತಾರೀಖಿನಿಂದ ಜಾರಿಗೆ ಬರುತ್ತವೆ. ಅದಕ್ಕಾಗಿ ನಮ್ಮ ಸರ್ಕಾರ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಆದರೆ ಈಗಾಗಲೇ ಕೆಲವು ಸಂಸ್ಥಾನಗಳು ಈ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಂಡು ಕೆಲಸವನ್ನು ಪ್ರಾರಂಭಿಸಿಬಿಟ್ಟಿರುತ್ತವೆ. ಆದರೆ ನಮ್ಮ ಮೈಸೂರು ಸರ್ಕಾರದವರು ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಬಗ್ಗೆ ಇತರೇ ಪ್ರಾಂತ್ಯಗಳ ಹಾಗೆ ಅಷ್ಟೊಂದು ಉತ್ಸಾಹವನ್ನು ತಾಳಿ ಈ ಯೋಜನೆಯಿಂದ ದೇಶಕ್ಕೆ ಲಭಿಸುವಂಥ ಎಲ್ಲಾ ಸೌಲಭ್ಯಗಳನ್ನೂ ಪೂರ್ತಿಯಾಗಿ ಪಡೆದುಕೊಂಡು ನಮ್ಮ ದೇಶಕ್ಕೆ ಒಂದು ಕಲ್ಯಾಣವನ್ನುಂಟುಮಾಡಬೇಕೆಂಬ ವಿಚಾರದಲ್ಲಿ ಇವರು ನಿಧಾನವಾಗಿ ಮುಂದುವರಿಯುತ್ತಿರುವುದನ್ನು ನೋಡಿ ನನಗಂತೂ ಇದು ಬಹಳ ಶೋಚನೀಯವಾಗಿ ಕಾಣುತ್ತದೆ. ಆದರೆ ಈಗಲಾದರೂ ನಮ್ಮ ಸರ್ಕಾರದವರು ಈ ಪಾಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿರತಕ್ಕ ಕಾರ್ಯಗಳನ್ನು ಬಹಳ ತ್ವರಿತವಾಗಿ ಕೈಗೊಂಡು ದೇಶಾಭಿವೃದ್ಧಿಗೆ ತಮ್ಮ ತೀವ್ರ ಗಮನ ಕೊಡುತ್ತಾರೆಂದು ನಾನು ನಂಬಿದ್ದೇನೆ.

ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್.

ನಾನು ಮೊಟ್ಟಮೊದಲನೆಯದಾಗಿ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟಿನ ವಿಚಾರವನ್ನು ಪ್ರಸ್ತಾಪಮಾಡಲಿಚ್ಛಿಸುತ್ತೇನೆ. ಈ ದಿವಸ ಈ ಇಲಾಖೆಯಲ್ಲಿ ಏನಾಗಿದೆ ಎಂದರೆ ಮೂರು ರೀತಿಯಲ್ಲಿ ಜನರಿಗೆ ಸಾಲವನ್ನು ಎಂದರೆ—ವಿಶೇಷ ಕಾಲಾವಧಿಯ ಸಾಲಗಳು, ಅಲ್ಪಕಾಲಾವಧಿಯ ಸಾಲಗಳು ಮತ್ತು ಮಧ್ಯಮ ರೀತಿಯ ಕಾಲಾವಧಿಯ ಸಾಲಗಳೆಂಬುದಾಗಿ ಒದಗಿಸುತ್ತಿದ್ದಾರೆ. ಆದರೆ ಹೀಗೆ ಸರ್ಕಾರದವರು ಸಹಕಾರ ಸಂಘಗಳಿಗೆ ಹಣವನ್ನೊದಗಿಸಿದ ಮಾತ್ರಕ್ಕೆ ಏನೂ ಆಗುವುದಿಲ್ಲ. ಈ ಸೊಸೈಟಿಗಳಿಂದ ಎಷ್ಟು ಕೆಲಸ ನಡೆಯಬೇಕಾಗಿತ್ತು, ಆಯಾ ವರ್ಷದಲ್ಲಿ ಪ್ರತಿಯೊಂದು ಸೊಸೈಟಿಯೂ ಎಷ್ಟೆಷ್ಟು ಕೆಲಸ ನಡೆಸಿದೆ, ಈ ಸಂಘಗಳೆಲ್ಲಾ ಸರಿಯಾಗಿ ಕೆಲಸ ನಡೆಸುತ್ತಿವೆಯೋ ಎಂಬುದನ್ನು ಪರಿಶೀಲನೆಮಾಡಬೇಕಾದದ್ದು ಅತಿ ಮುಖ್ಯವಾದ ವಿಚಾರ. ಹೀಗೆ ಮಾಡದೆ ಕೇವಲ ಹಣವನ್ನೊದಗಿಸಿದರಿಂದಲೇ ಏನೂ ಅಷ್ಟು ಪ್ರಯೋಜನವಾಗಲಾರದೆಂದು ನನ್ನ ಭಾವನೆ. ಈಗ ಈ ಪಾಂಚವಾರ್ಷಿಕ ಯೋಜನೆಯಲ್ಲಿ ಲ್ಯಾಂಡ್ ಮಾರ್ಗೇಜ್ ಬ್ಯಾಂಕಿನ ಮೂಲಕ ಐದು ವರ್ಷಗಳ ಅವಧಿಯಲ್ಲಿ ಈ ವ್ಯವಸಾಯಗಾರರಿಗೆ ದೊರೆಯುವಂಥ ಸಹಾಯ ದ್ರವ್ಯ 830 ಲಕ್ಷ ರೂಪಾಯಿಗಳೆಂಬು ಹೇಳಿ ಈ ಮೊಬಲಗನ್ನು ಮುಂದಿನ ಐದು ವರ್ಷಗಳಲ್ಲಿ ವರ್ಷಂಪ್ರತಿ 50 ಲಕ್ಷ ರೂಪಾಯಿಗಳ ಪ್ರಕಾರ ಒದಗಿಸಬೇಕೆಂದು ಹೇಳಿರುವುದನ್ನು ನೋಡಿದರೆ ನನಗಂತೂ ಬಹಳ ಆಶ್ಚರ್ಯವಾಗಿ ಕಾಣುತ್ತಿದೆ. ಆದರೆ ಈಗಾಗಲೇ ದೇಶದಲ್ಲಿರತಕ್ಕಂಥ ರೈತರ ಋಣಬಾಧೆ ಎಂಬುದು 44 ಕೋಟಿಗೆ ಏರಿರುವುದಾಗಿ ಗೊತ್ತಾಗಿದೆ. ಆದರೆ ನಮ್ಮ ಮೈಸೂರು ಸೆಂಟ್ರಲ್ ಕೋ-ಆಪರೇಟೀವ್ ಲ್ಯಾಂಡ್ ಮಾರ್ಗೇಜ್ ಬ್ಯಾಂಕಿನವರು ಈ ಬ್ಯಾಂಕ್ ಸ್ಥಾಪನೆಯಾದಲಾಗಾಯ್ತಿನಿಂದ ಇಲ್ಲಿಯವರೆಗೆ ಮಂಜೂರು ಮಾಡತಕ್ಕಂಥ ಸಾಲದ ಮೊಬಲಗು ಕೇವಲ ಎರಡು ಕೋಟಿ ರೂಪಾಯಿಗಳು ಮಾತ್ರ. ಈ ರೀತಿಯಲ್ಲಿ ಈ ಸಂಸ್ಥೆ ರೈತರ ಋಣಬಾಧೆಯನ್ನು ಪರಿಹಾರ ಮಾಡಬೇಕಾಗಿದ್ದರೆ ಕನಿಷ್ಠ ಪಕ್ಷ ಇನ್ನೂ 30-40 ವರ್ಷಗಳ ಮೇಲೆ ಹಿಡಿಯುತ್ತದೆ. ಇಷ್ಟು ದೀರ್ಘಕಾಲದಲ್ಲಿ ಈ ಸಂಸ್ಥೆ ಒಂದು ಕಡೆಯಿಂದ ಈ ಋಣಬಾಧೆಯನ್ನು ಪರಿಹರಿಸುತ್ತಾ ಹೋಗುವಷ್ಟರಲ್ಲಿ ಮತ್ತೊಂದು ಕಡೆಯಿಂದ ಪುನಃ ಆ ರೈತರು ಯಥಾಪ್ರಕಾರ ಇಷ್ಟೇ ಋಣಬಾಧೆಯಲ್ಲಿ ಸಿಕ್ಕಿ ನರಳಬೇಕಾಗಿ ಬರುತ್ತದೆ. ಈ ಮಾರ್ಗದಿಂದ ನಾವು ರೈತರ ಋಣಬಾಧೆಯನ್ನು ಖಂಡಿತ ವಿಮೋಚನೆ ಮಾಡಲು ಸಾಧ್ಯವಿಲ್ಲ. ಈ ಹೊತ್ತು ಈ ಪ್ಲಾನಿನಲ್ಲಿ ಹೇಳಿರತಕ್ಕ

(ಶ್ರೀ ಆರ್. ಅನಂತರಾಮನ್.)

ರೀತಿಯಲ್ಲಿ ದೀರ್ಘಕಾಲಾವಧಿಯ ಬಗ್ಗೆ ಸುಮಾರು 4½ ಕೋಟಿ ರೂಪಾಯಿಗಳನ್ನು ಸಾಲಕೊಡಬೇಕೆಂದು ಹೇಳಿದ್ದಾರೆ. ಅಲ್ಪಕಾಲಾವಧಿಯ ಸಾಲದ ಬಗ್ಗೆ ಐದು ವರ್ಷಗಳ ಕಾಲ ಪ್ರತಿ ಪ್ರತಿವರ್ಷವೂ ಐದು ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಹೇಳಿದ್ದಾರೆ. ಇನ್ನು ಈ ಮೊಬಲಗಿನ ಜೊತೆಗೆ ಕೊಂಚ ಸಬ್‌ಸಿಡಿ ಕೂಡ ಕೊಡುವುದಾಗಿ ತಿಳಿಸಿದ್ದಾರೆ. ಆದರೆ ಈ ದಿವಸ ನಮ್ಮ ಸಂಸ್ಥಾನದಲ್ಲಿ ಒಟ್ಟು ಎಷ್ಟು ಸಹಕಾರ ಸಂಘಗಳು ಕೆಲಸ ಮಾಡುತ್ತಿವೆಯೆಂಬುದನ್ನು ನೋಡುವುದಾದರೆ ಅವುಗಳ ಸಂಖ್ಯೆ ಸುಮಾರು 5883 ಇದೆಯೆಂದು ಗೊತ್ತಾಗಿದೆ. ಈ ಪೈಕಿ ಸುಮಾರು 80-83 ಪ್ರೈಮರಿ ಲ್ಯಾಂಡ್ ಮಾರ್ಗೇಜ್ ಸೊಸೈಟಿಗಳಿವೆ. ಈ ಸೊಸೈಟಿಗಳ ಮೂಲಕ ರೈತರಿಗೆ ಸಾಲ ದೊರೆಯುವಂತೆ ಮಾಡಬೇಕೆಂದು ಆಲೋಚಿಸಲಾಗಿದೆ. ಅಂದರೆ ಈ 80 ಸೊಸೈಟಿಗಳಿಗೂ ಮೊದಲನೆಯ ವರ್ಷದ ಯೋಜನೆಯಲ್ಲಿ 80 ಲಕ್ಷ ರೂಪಾಯಿಗಳ ಸಾಲ ನೀಡಲು ನಿರ್ಧರಿಸಿದ್ದಾರೆ. ಅಲ್ಲಿಗೆ ಪ್ರತಿಯೊಂದು ಸೊಸೈಟಿಗೂ ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಹಂಚಿದಂತಾಗುತ್ತದೆ. ಈ ಒಂದು ಲಕ್ಷ ರೂಪಾಯಿಗಳನ್ನು ಪ್ರತಿ ವರ್ಷವೂ ಪ್ರತಿಯೊಂದು ಸೊಸೈಟಿಯೂ ಸಾಲ ಕೊಡಬೇಕೆಂದು ಹೇಳಿರತಕ್ಕ ವಿಚಾರದಲ್ಲಿ ಎಷ್ಟು ಜವಾಬ್ದಾರಿಯಿದೆ, ಎಷ್ಟು ಕಷ್ಟವಿದೆ? ಈಗಾಗಲೇ ಈ ಸಾಲ ಸಕಾಲದಲ್ಲಿ ರೈತರಿಗೆ ದೊರೆಯುತ್ತಿಲ್ಲ ಎಂಬ ಬಗ್ಗೆ ನನ್ನ ಕೆಲವು ಮಾನ್ಯ ಸ್ನೇಹಿತರು ಅವರ ಬಡ್ಜೆಟ್ ಭಾಷಣಕಾಲದಲ್ಲೂ ಮತ್ತು ಇತರ ಸಂದರ್ಭಗಳಲ್ಲೂ ವಿವರವಾಗಿ ತಿಳಿಸಿರುತ್ತಾರೆ. ಆದರೆ ಈ ದಿವಸ ಈ ತಾಲ್ಲೂಕಾಮಳೆ ಇರತಕ್ಕಂಥ ಲ್ಯಾಂಡ್ ಮಾರ್ಗೇಜ್ ಬ್ಯಾಂಕಿನ ರೂರಲ್ ಕೋ-ಆಪರೇಟೀವ್ ಸೊಸೈಟಿಗಳಿಗೆ, ಆಯಾ ತಾಲ್ಲೂಕಿನ ಅಮಲ್ದಾರರು ಅಧ್ಯಕ್ಷರಾಗಿಯೂ ಆ ತಾಲ್ಲೂಕ್ ಸಬ್-ರಿಜಿಸ್ಟ್ರಾರ್ ಅವರು ಕಾರ್ಯದರ್ಶಿಗಳಾಗಿಯೂ ಇರುತ್ತಾರೆ. ಈ ದಿವಸ ಅಮಲ್ದಾರರಿಗೆ ಅವರ ರೆವಿನ್ಯೂ ಬಾಬತ್ತು ಕೆಲಸಗಳೇ ಜಾಸ್ತಿಯಾಗಿರುತ್ತವೆ. ಅವರಿಗೆ ಈ ಸೊಸೈಟಿಯ ವಿಷಯಗಳಿಗೆ ಅಷ್ಟಾಗಿ ಗಮನ ಕೊಡಲು ವೇಳೆಯಿರುವುದಿಲ್ಲ. ಅಂತೂ ಈ ದಿವಸ ಅಮಲ್ದಾರರುಗಳಿಗೆ ಅಷ್ಟೊಂದು ಕೆಲಸಗಳು ಜಾಸ್ತಿಯಾಗಿರುವುದರಿಂದ ಸಾಲಗಳು ಬೇಗ ರೈತರಿಗೆ ಮಂಜೂರಾಗಲು ಬಹಳ ಕಷ್ಟ ಬಂದಿದೆ. ತಿಂಗಳಿಗೊಂದಾದರೂ ಮೀಟಿಂಗುಗಳು ನಡೆಯುವುದಿಲ್ಲ. ವರ್ಷಕ್ಕೆ ಸರಿಯಾಗಿ ಜನರಲ್ ಬಾಡಿ ಮೀಟಿಂಗುಗಳೂ ಸಹ ನಡೆಯುತ್ತಿಲ್ಲ. ತಾಲ್ಲೂಕು ಕಛೇರಿಯಲ್ಲಿರತಕ್ಕ 2–3 ಜನ ಗುಮಾಸ್ತೆಯರನ್ನು ಮತ್ತು ಒಬ್ಬಿಬ್ಬರು ಜವಾನರುಗಳನ್ನು ಪಾರ್ಟ್‌ಟೈಂ ಕೆಲಸಗಾರರನ್ನಾಗಿ ಈ ಸೊಸೈಟಿ ಕೆಲಸಗಳಿಗೆ ನೇಮಕಮಾಡಿರುತ್ತಾರೆ. ಅವರಿಗೆ 3–4 ರೂಪಾಯಿಗಳನ್ನು ತಿಂಗಳಿಗೆ ಇವರು ಒಂದು ಅಲೋಯನ್ಸ್ ರೂಪದಲ್ಲಿ ಕೊಡುತ್ತಿದ್ದಾರೆ. ಈ ನಾನಾ ಕಾರಣಗಳಿಂದ ಈ ದಿವಸ ಈ ಸೊಸೈಟಿಗಳ ಕೆಲಸ ಅಷ್ಟು ಚುರುಕಾಗಿ ನಡೆಯುತ್ತಿಲ್ಲ. ಇನ್ನು ಅಮಲ್ದಾರರೂ ಮತ್ತು ಕಾರ್ಯದರ್ಶಿಗಳೂ ಆನರೆರಿ ವರ್ಕ್ ಮಾಡಬೇಕಾಗಿದೆ. ಆದಕಾರಣ ಈ ಸೊಸೈಟಿಗಳು ಸಮರ್ಪಕವಾಗಿ ಕೆಲಸ ನಡೆಸಿಕೊಂಡು ಹೋಗಬೇಕಾಗಿದ್ದರೆ ಇವುಗಳಿಗೆ ಖಾಸಗೀ ಅಧ್ಯಕ್ಷರಿರಬೇಕಾದದ್ದು ಅತ್ಯಗತ್ಯ. ಅಷ್ಟೇ ಅಲ್ಲದೆ ಸೊಸೈಟಿಯ ಕೆಲಸ ಕಾರ್ಯಗಳನ್ನು ಪಾರ್ಟ್‌ಟೈಂ ಕೆಲಸಗಾರರಿಂದ ನಡೆಸಿಕೊಂಡು ಹೋಗಲು ಸಾಧ್ಯವಿಲ್ಲ. ಇದಕ್ಕೆ ಫುಲ್‌ಟೈಂ ವರ್ಕರುಗಳನ್ನೇ ಗುಮಾಸ್ತರನ್ನಾಗಿ ನೇಮಿಸಿಕೊಳ್ಳಬೇಕು. ಈ ಗುಮಾಸ್ತರುಗಳಿಗೆ ಮಾಹೆಯಾನ 30 ರೂಪಾಯಿಗಳ ತಲಬನ್ನಾದರೂ ಕೊಡುವಂತೆ ಒಂದು ಏರ್ಪಾಡು ಮಾಡಿದರೆ ಆಗ ಸೊಸೈಟಿಗಳ ಕೆಲಸ ಕಾರ್ಯಗಳು ಬಹಳ ಚುರುಕಾಗಿ ನಡೆಯಲು ಅವಕಾಶವಾಗುತ್ತದೆ.

ಇನ್ನು ಎರಡನೆಯದಾಗಿ ಈ ದಿವಸ ನಮ್ಮ ಸರ್ಕಾರದವರು ರೈತರಿಗೆ ಮಂಜೂರು ಮಾಡುವ ಸಾಲದ ಬಗ್ಗೆ ಬಡ್ಡಿಯನ್ನು ಜಾಸ್ತಿ ಹಾಕುತ್ತಿದ್ದಾರೆ. ಆದರೆ ನಾವು ಸಬ್-ವೆನ್ಷನ್, ರಿಬೇಟ್ ಇತ್ಯಾದಿಗಳನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಮದ್ರಾಸಿಗೆ ಹೋಗಿದ್ದಾಗ ಅಲ್ಲಿ ನಾನು ನೋಡಿದ್ದರಲ್ಲಿ ಈ ಸಹಕಾರ ಸಂಸ್ಥೆಗಳು ಬಹಳ ಸಮರ್ಪಕವಾದ ರೀತಿಯಲ್ಲಿ ಕೆಲಸ ನಡೆಸುವಂತೆ ವ್ಯವಸ್ಥೆ ಮಾಡಿದ್ದಾರೆ, ಅಲ್ಲಿನ ಸರ್ಕಾರದವರು. ಸಾಲ ಮಂಜೂರು ಮಾಡುವುದು—ಕಂತುಗಳ ವಸೂಲಿ ಇತ್ಯಾದಿ ಕಾರ್ಯಗಳೆಲ್ಲಾ ಬಹಳ ಸುಲಲಿತವಾಗಿ ನಡೆಯುತ್ತಿವೆ. ಒಂದು ಅಥವಾ ಎರಡು ಕೋ-ಆಪರೇಟೀವ್ ಸೊಸೈಟಿಗಳಿಗೆ ಒಬ್ಬೊಬ್ಬ ಸಬ್-ರಿಜಿಸ್ಟ್ರಾರ್ ಅವರನ್ನು ನೇಮಕ ಮಾಡಿದ್ದಾರೆ. 25 ಸೊಸೈಟಿಗಳ ಒಂದು ಸರ್ಕಲ್ಲಿಗೆ ಒಬ್ಬೊಬ್ಬ ಡೆಪ್ಯುಟಿ ರಿಜಿಸ್ಟ್ರಾರ್ ಇದ್ದಾರೆ. ಇವರೆಲ್ಲರ ಸಂಬಳ ಸಾರಿಗೆಗಳನ್ನು ಸರ್ಕಾರದವರೇ ಕೊಡುತ್ತಿದ್ದಾರೆ. ಇಂಥ ಒಂದು ಒಳ್ಳೆಯ ವ್ಯವಸ್ಥೆಯನ್ನು ಅಲ್ಲಿ ಮಾಡಿದ್ದಾರೆ. ಸುಮಾರು ವರ್ಷಂಪ್ರತಿ 50-60 ಲಕ್ಷ ರೂಪಾಗಳವರೆಗೆ ವ್ಯವಹಾರ ನಡೆಯುತ್ತಿದೆ. ಶೇಕಡ ಮೂರರ ಪ್ರಕಾರ ಸಾಲಕ್ಕೆ ಬಡ್ಡಿ ಹಾಕುತ್ತಿದ್ದಾರೆ. ಇದರಿಂದ ಅಲ್ಲಿಯ ರೈತರಿಗೆ ಋಣ ವಿಮೋಚನೆ ಮಾಡಿಕೊಳ್ಳಲು ಬಹಳ ಅನುಕೂಲವಾಗಿದೆ. ಅಲ್ಲಿ ಹೀಗೆ ಒಂದೊಂದು ಸರ್ಕಲ್ ಮಾಡಿ ಅದಕ್ಕೊಬ್ಬರು ಡೆಪ್ಯುಟಿ ರಿಜಿಸ್ಟ್ರಾರ್ ಅವರನ್ನು ಅಲ್ಲಿ ನೇಮಕ ಮಾಡಿರುವುದರಿಂದ ಅಲ್ಲಿ ಕೆಲಸ ಕಾರ್ಯಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಇದಾದರೋ ಒಂದು ಡೆವಲಪ್‌ಮೆಂಟ್ ಇಲಾಖೆ. ನಮ್ಮಲ್ಲಿ ಹೆಚ್ಚಿನ ಆದಾಯ ತರುತ್ತಿದ್ದಂಥ ಬಾಬುಗಳನ್ನೆಲ್ಲಾ ಆ ಕೇಂದ್ರ ಸರ್ಕಾರದವರು ತೆಗೆದುಕೊಂಡುಬಿಟ್ಟರು. ಇನ್ನು ನಾವೀಗ ದೇಶದಲ್ಲಿ ಪುನಃ ಎಲ್ಲೆಲ್ಲಿ ಯಾವ ಯಾವ ಬಾಬಿನಲ್ಲಿ ಏನೇನು ವರಮಾನ ಹೆಚ್ಚಿಸಿಕೊಳ್ಳಬೇಕೆಂಬ ವಿಚಾರಕ್ಕೆ ಹೆಚ್ಚಿನ ಗಮನ ಕೊಡಬೇಕಾಗಿದೆ. ನಮಗೆ ಈಗ ನಮ್ಮ ಸರ್ಕಾರದ ವರಮಾನವನ್ನು ಹೆಚ್ಚಿಸಿಕೊಳ್ಳಬೇಕಾಗಿದ್ದರೆ ಈ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳಿಂದಲೂ ಮತ್ತು ವ್ಯವಸಾಯೋತ್ಪನ್ನಗಳಿಂದಲೂ ಇದನ್ನು ಮಾಡಿಕೊಳ್ಳಬೇಕಾಗಿದೆ. ಆದರೆ ಈ ದಿವಸ ಸರ್ಕಾರದವರು ರೈತರಿಗೆ ಸಾಲಕೊಡತಕ್ಕ ಬಗ್ಗೆ ದೀರ್ಘಾವಧಿಸಾಲಕ್ಕೆಂದು ನಾಲ್ಕು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದಾರೆ. ಹೀಗೆ ಕೇವಲ ಹಣವನ್ನು ತೆಗೆದಿಟ್ಟ ಮಾತ್ರಕ್ಕೆ ದೇಶಕ್ಕೇನೂ ಅಷ್ಟು ಪ್ರಯೋಜನವಾಗಲಿಲ್ಲ. ಆದರೆ! ಈ ಸೊಸೈಟಿಗಳು ಎಷ್ಟರಮಟ್ಟಿಗೆ ಕೆಲಸ ನಡೆಸುತ್ತಿವೆ, ಇವು ಸರಿಯಾದ ರೀತಿಯಲ್ಲಿ ರೈತರಿಗೆ ಸಾಲ ಮಂಜೂರು ಮಾಡುತ್ತಿವೆಯೋ ಎಂಬುದನ್ನು ಸರ್ಕಾರದವರು ಆಗಾಗ್ಗೆ ಪರಿಶೀಲನೆ ಮಾಡುತ್ತಿದ್ದರೆ ಒಳ್ಳೆಯದು. ಆದರೆ ಈಗೇನೋ ಸರ್ಕಾರದವರು ಮತ್ತೊಂದು ಹತ್ತು ಸಾವಿರ ರೂಪಾಯಿಗಳನ್ನು ಸಬ್‌ವೆನ್ಷನ್ ರೂಪವಾಗಿ ಸಹಕಾರ ಸಂಸ್ಥೆಗಳ ಸಿಬ್ಬಂದಿಯ ನೇಮಕದ ಬಗ್ಗೆ ಕೊಡುವುದಾಗಿ ತಿಳಿಸಿದ್ದಾರೆ. ಈ ದಿವಸ ಕೇವಲ ನಾಲ್ಕು ಜನ ಕೋ-ಆಪರೇಟೀವ್ ಸೊಸೈಟಿಗಳ ಇನ್ಸ್‌ಪೆಕ್ಟರುಗಳಿರುತ್ತಾರೆ. ಇವರಿಂದ ಏನೇನೂ ಕೆಲಸ

ಆಗುವುದಿಲ್ಲ. ಆದಕಾರಣ ತಾವು ಇನ್ಸ್‌ಪೆಕ್ಟರುಗಳನ್ನು ಕನಿಷ್ಟಪಕ್ಷ ಒಂದೊಂದು ಜಿಲ್ಲೆಗೆ ಒಬ್ಬರಂತೆಯಾದರೂ ನೇಮಕ ಮಾಡಿದರೆ ಆಗೇನಾದರೂ ಸ್ವಲ್ಪಮಟ್ಟಿಗೆ ಅನುಕೂಲವಾಗಬಹುದು. ಆದಕಾರಣ ಹತ್ತು ಜನ ಇನ್ಸ್‌ಪೆಕ್ಟರುಗಳನ್ನಾದರೂ ನೇಮಕ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಆದರೆ ಈ ದಿವಸ ನಾನು ನೋಡಿರುವ ಹಾಗೆ, ನಮ್ಮ ಸಂಸ್ಥಾನದಲ್ಲಿರುವ ಸೊಸೈಟಿಗಳು ಆ ಮದರಾಸ್ ಪ್ರಾಂತ್ಯದಲ್ಲಿರುವ ಸೊಸೈಟಿಗಳ ಮಾದರಿಯಲ್ಲಿ ಅಷ್ಟು ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ನಮ್ಮ ಸಂಸ್ಥಾನದಲ್ಲೂ ಅದೇ ರೀತಿಯಾಗಿ ಈ ಸಂಸ್ಥೆಗಳು ಕೆಲಸ ನಡೆಸುವಂತೆ ಮಾಡಬೇಕಾಗಿದ್ದರೆ ಇದರ ಕಡೆಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಇವುಗಳನ್ನು ಹೊಸ ರೀತಿಯಲ್ಲಿ ಜೀರ್ಣೋದ್ಧಾರ ಮಾಡಬೇಕು.

ಮೇಜರ್ ಮತ್ತು ಮೈನರ್ ಕೆರೆಗಳ ಜೀರ್ಣೋದ್ಧಾರ ಕಾರ್ಯ.

ಇನ್ನು ಚಿಕ್ಕಪುಟ್ಟ ಮತ್ತು ದೊಡ್ಡ ಇರಿಗೇಷನ್ ಕಾಮಗಾರಿಗಳ ಬಗ್ಗೆ ಪ್ರಸ್ತಾಪ ಮಾಡುತ್ತ ಶ್ರೀ ಮ್ಯಾಸ್ಕರ್‌ನ್ಹ್ಯಾಸ್‌ಅವರು ಈ ಅಣೆಕಟ್ಟು ಕೆರೆ ಇತ್ಯಾದಿಗಳಿಂದ ನಮಗೆ ಅಷ್ಟರಮಟ್ಟಿಗೆ ಹೆಚ್ಚಿನ ಪ್ರತಿಫಲ ಬರಲಾರದೆಂದು ಹೇಳಿದರು. ಆದರೆ ನಾನು ಇದನ್ನು ಅನುಮೋದಿಸಲಾರೆ. ನಮ್ಮಲ್ಲಿ ಅಂಥ ದೊಡ್ಡ ನೀರಾವರಿ ಕಾಮಗಾರಿಗಳು ನಡೆಯದೆ ಇದ್ದುದರಿಂದ ದೇಶದಲ್ಲಿ ಆಹಾರಕ್ಕೆ ಬಹಳ ಕ್ಷಾಮ ಬಂದು ನಾವು ಬ್ರೆಜಿಲ್ ದೇಶದಿಂದ ಅಕ್ಕಿ ತರಿಸಿ ಇಲ್ಲಿ ರೂಪಾಯಿಗೆ ಒಂದು ಸೇರಿನಂತೆ ಮಾರಾಟ ಮಾಡಬೇಕಾಗಿ ಬಂತು. ಆದುದರಿಂದ ಈ ದಿವಸ ನಮ್ಮ ಈ ಆಹಾರದ . . .

Sri V. M. MASCARENHAS.—You have not understood me. I said "Take up minor irrigation works, instead of major irrigation works."

ಶ್ರೀ ಆರ್. ಅನಂತರಾಮನ್.—ನಮಗೆ ಮೈನರ್ ಇರಿಗೇಷನ್ ಪ್ರಾಜೆಕ್ಟುಗಳೂ ಬೇಕು, ಮೇಜರ್ ಇರಿಗೇಷನ್ ಪ್ರಾಜೆಕ್ಟುಗಳೂ ಬೇಕು. ಕೇವಲ ಚಿಕ್ಕಪುಟ್ಟ ಪ್ರಾಜೆಕ್ಟುಗಳಿಂದ ಅಷ್ಟೇನೂ ಪ್ರಯೋಜನವಾಗಲಾರದು ಎಂದು ಹೇಳಿರತಕ್ಕದ್ದನ್ನು ನಾನು ಒಪ್ಪಲಾರೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಶಾಖೆಯ ಮಂತ್ರಿಗಳು).—ಎಷ್ಟು ಇರುವೆಗಳನ್ನು ಹಾಕಿದರೆ ಒಂದು ಆನೆಗೆ ಸಮನಾದೀತು ಎಂದು ಹೇಳುತ್ತಿದ್ದಾರೆ.

ಶ್ರೀ ಆರ್. ಅನಂತರಾಮನ್.—ನಮ್ಮ ದೇಶದ ವ್ಯವಸಾಯಗಾರರಿಗೆ ಅನುಕೂಲವಾಗಬೇಕಾಗಿದ್ದರೆ ನಾವು ಕೇವಲ ದೊಡ್ಡ ದೊಡ್ಡ ಪ್ರಾಜೆಕ್ಟುಗಳ ಕಡೆಗೆ ಲಕ್ಷ್ಯ ಕೊಟ್ಟರೆ ಸಾಲದು. ಈ ಸಣ್ಣ ಪುಟ್ಟ ಕೆರೆಗಳ-ಅಣೆಗಳ ಕಡೆಗೂ ತಕ್ಕಷ್ಟು ಗಮನ ಕೊಡಬೇಕೆಂದು ಮಾತ್ರ ನಾನು ತಿಳಿಸುತ್ತೇನೆ.

ಫಾರೆಸ್ಟ್ ಇಲಾಖೆಯ ವಿಚಾರ.

ಇನ್ನು ನಮ್ಮ ದೇಶದ ಅರಣ್ಯ ಸಂಪತ್ತಿನ ಬಗ್ಗೆ ಎರಡು ಮಾತುಗಳನ್ನು ಹೇಳ ಬಯಸುತ್ತೇನೆ. ಈ ಬಗ್ಗೆ ಶ್ರೀ ಮ್ಯಾಸ್ಕರ್‌ನ್ಹ್ಯಾಸ್‌ಅವರು ಹೇಳಿರತಕ್ಕದ್ದೆಲ್ಲಾ ನಿಜ. ಶಿವಮೊಗ್ಗಾ ಜಿಲ್ಲೆಯಲ್ಲಿದ್ದಂಥ ದೊಡ್ಡ ಕಾಡೆಲ್ಲಾ ಈ ದಿವಸ ಮಾಯವಾಗಿ ಹೋಗಿ ಎಲ್ಲಿ ನೋಡಿದರೂ ದೊಡ್ಡ ಮೈದಾನಗಳೇ ಕಂಡು ಬರುತ್ತಿವೆ. ಈ ದಿವಸ ಆ ಪ್ರಾಂತ್ಯದಲ್ಲಿ ಸಹ ಮಳೆ ಸರಿಯಾಗಿ ಬೀಳುತ್ತಿಲ್ಲ. ನಮ್ಮ ಅರಣ್ಯ ಸಂಪತ್ತನ್ನೆಲ್ಲಾ ಈ ದಿವಸ ಆ ಭದ್ರಾವತಿ ಉಕ್ಕಿನ ಮತ್ತು ಕಬ್ಬಿಣದ ಕಾರ್ಖಾನೆಗೂ ಮತ್ತು ಬೆಂಗಳೂರು ಮತ್ತು ಮೈಸೂರುಗಳಂಥ ದೊಡ್ಡ ದೊಡ್ಡ ನಗರಗಳಲ್ಲಿರತಕ್ಕ ಜನರಿಗೆ ಸೌದೆ ಸರಬರಾಯಿಗೋಸ್ಕರವಾಗಿಯೂ ಕತ್ತರಿಸಿ ಹಾಕಿರುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಲ್ಲ. ಭದ್ರಾವತಿಗೆ ಸರಬರಾಯಿ ಆಗತಕ್ಕ ಸೌದೆಗೆ ಎಷ್ಟುಮೊಬಲಗಾಗುತ್ತದೆಯೋ ಅಷ್ಟನ್ನೂ ಅಲ್ಲಿ ಫಾರೆಸ್ಟನ್ನು ಮತ್ತೆ ಹೊಸದಾಗಿ ಬೆಳೆಸಲು ಆ ಫಾರೆಸ್ಟ್ ಇಲಾಖೆಗೆ ಕೊಡಲಾಗುತ್ತಿದೆ. ಈ ಅಂಶವನ್ನು ಯಾರೂ ಮರೆಯಬಾರದು.

ಶ್ರೀ ಆರ್. ಅನಂತರಾಮನ್.—ಆದರೆ ಆ ಕಬ್ಬಿಣದ ಕಾರ್ಖಾನೆಗಾಗಿ ಅರಣ್ಯವನ್ನು ಕಡಿದು ಹಾಳು ಮಾಡುವುದು ಸರಿಯಲ್ಲ. ಹೀಗೆ ಕಾಡನ್ನು ನಾಶಮಾಡುವುದಕ್ಕೆ ಬದಲಾಗಿ ಕಾರ್ಖಾನೆಯ ಕೆಲಸವನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಸುವಂತೆ ಏರ್ಪಾಡು ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಇಂಥ ಒಂದು ಯೋಜನೆಯನ್ನು ಸರ್ಕಾರ ತಯಾರಿಸಬೇಕು. ಅಡಿಗೆಗೂ ಸಹ ದೊಡ್ಡ ದೊಡ್ಡ ನಗರಗಳಲ್ಲಿ ಈ ಸೌದೆಯನ್ನು ಉಪಯೋಗಿಸುವುದಕ್ಕೆ ಬದಲಾಗಿ ಕರೆಂಟಿನಿಂದಲೇ ಆಗುವಂತೆ ಮಾಡತಕ್ಕದ್ದು ಅತ್ಯಗತ್ಯ. ಈ ಬೆಂಗಳೂರು ನಗರಕ್ಕೆ ಇಂಥ ಒಂದು ನೂತನ ವ್ಯವಸ್ಥೆ ಮಾಡಬೇಕೆಂಬ ಉದ್ದೇಶದಿಂದ ಮೈಸೂರು ರೋಡಿನಲ್ಲಿ ಒಂದು ಥರ್ಮಲ್ ಸ್ಟೇಷನ್ನನ್ನು ಸ್ಥಾಪನೆ ಮಾಡಲಾಗಿದ್ದಿತು. ಅದರಿಂದ ಒಂದು ರೀತಿಯ ಗ್ಯಾಸನ್ನು ಸರಬರಾಯಿ ಮಾಡುತ್ತೇವೆಂದು ಹೇಳಿದ್ದರು. ಅದನ್ನಾದರೂ ಮಾಡಿದ್ದರೆ ಈ ಮರಗಳನ್ನು ಸೌದೆಗಾಗಿ ಕತ್ತರಿಸುತ್ತಿದ್ದುದು ಎಷ್ಟೋ ಕಡಮೆಯಾಗುತ್ತಿತ್ತು. ಆದರೆ ಇದುವರೆಗೂ ಸರ್ಕಾರದವರು ಈ ವಿಚಾರದ ಕಡೆಗೆ ಅವರ ಗಮನವನ್ನೇ ಕೊಟ್ಟಿಲ್ಲ. ಈಗ್ಗೆ ನಾಲ್ಕಾರು ದಿವಸಗಳ ಹಿಂದೆ ಈ ಬೆಂಗಳೂರು ನಗರದಲ್ಲಿ ಒಂದು ದಿವಸ ವಿದ್ಯುಚ್ಛಕ್ತಿಯು ನಿಂತುಹೋಗಿದ್ದಂಥ ಕಾಲದಲ್ಲಿ ಹೋಟಲುಗಳಲ್ಲಿ ಎಷ್ಟು ಸೌದೆಗೆ ಡಿಮ್ಯಾಂಡ್ ಹೆಚ್ಚಾಯಿತು, ಎಂಥ ಕಷ್ಟ ಆ ದಿವಸ ಬಂದಿತ್ತು, ಆ ದಿವಸ ಎಷ್ಟು ಕಟ್ಟಿಗೆ ಖರ್ಚಾಯಿತು ಎಂಬುದನ್ನು ಹೇಳಲು ಸಾಧ್ಯವೇ ಇಲ್ಲ. ಹೀಗಾಗಿ ಈ ದಿವಸ ಈ ನಗರದಲ್ಲಿ ಸೌದೆಗೂ ಕೂಡ ತುಂಬ ಅಭಾವ ಬಂದು ಹೋಗಿದೆ. ಅದು ಸರಿಯಾಗಿ ಸರಬರಾಯಿ ಆಗುತ್ತಿಲ್ಲ, ಆಗುತ್ತಿರುವ ಸರಬರಾಯಿ ತೀರ ಕಡಮೆ. ಒಂದು ರೂಪಾಯಿಗೆ $2\frac{1}{2}$ ಮಣ ಸೌದೆ ಸಹ ದೊರೆಯದಂತಾಗಿದೆ. ಆದರೆ ಹೀಗೆ ಪಟ್ಟಣದವರೇ ಆಗಲಿ ಹಳ್ಳಿಯವರೇ ಆಗಲಿ ಹೊಂದಾವಣೆ ಆಗದೆ ಮುಂದುವರಿಯಲು ಸಾಧ್ಯವಿಲ್ಲ. ಹಳ್ಳಿ ಪಟ್ಟಣಗಳೆರಡೂ ಹೊಂದಾವಣೆಯಿಂದ ಹೋಗಬೇಕಾಗಿದೆ.

ಆದ್ದರಿಂದ ಹಳ್ಳಿಯವರು ಪಟ್ಟಣದವರಿಗೆ ಸಹಾಯ ಮಾಡಬೇಕು ; ಪಟ್ಟಣದವರು ಹಳ್ಳಿಯವರಿಗೆ ಸಹಾಯ ಮಾಡಬೇಕು. ಹಳ್ಳಿಯವರು ಬೆಳೆಯುವ ಆಹಾರ ಪದಾರ್ಥಗಳಿಗೆ ಸಹಕಾರಿಯಾಗುವಂತೆ ಆದಷ್ಟುಮಟ್ಟಿಗೆ ಅವರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವುದಕ್ಕೆ ಪ್ರಯತ್ನಮಾಡಬೇಕು. ಅದೇರೀತಿ ಬೆಂಗಳೂರು ನಗರದಲ್ಲಿ ಪ್ರತಿಯೊಂದು ಮನೆಗೂ ಅಡಿಗೆಮಾಡುವುದಕ್ಕೆ ವಿದ್ಯುಚ್ಛಕ್ತಿ ಒದಗಿಸಬೇಕು. ಬೆಂಗಳೂರಿನಲ್ಲಿ ನೂರಾರು ಹೋಟೆಲುಗಳಿವೆ. ಈ ಹೋಟೆಲುಗಳಿಗೆ ಲಾರಿಗಟ್ಟಲೆ ಸೌದೆ ಬರುತ್ತದೆ,

(ಶ್ರೀ ಆರ್. ಅನಂತರಾಮನ್)

ಬೇಕಾದಷ್ಟು ಹಣ ಖರ್ಚು ಮಾಡುತ್ತಾರೆ, ಹೆಚ್ಚುಬೆಲೆ ಆದರೂ ಚಿಂತೆಯಿಲ್ಲ ಕೊಂಡುಕೊಳ್ಳುತ್ತಾರೆ, ಸೌದೆ ಉಪಯೋಗಿಸುತ್ತಾರೆ. ಇದರಿಂದ ನಮ್ಮ ಕಾಡು ನಿರ್ನಾಮವಾಗುತ್ತಾ ಇದೆ. ಇದನ್ನು ಆದಷ್ಟು ಮಟ್ಟಿಗೆ ತಪ್ಪಿಸಬೇಕಾದದ್ದು ಬಹಳ ಮುಖ್ಯ. ಬೆಂಗಳೂರು ನಗರದಲ್ಲಿ ಆದಷ್ಟುಮಟ್ಟಿಗೆ ಒಂದು ಯೋಜನೆ ಹಾಕಿಕೊಂಡು ಎಷ್ಟುಮಟ್ಟಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಬಹುದೋ ಅಷ್ಟುಮಟ್ಟಿಗೆ ಮಾಡಲು ತಕ್ಕ ವ್ಯವಸ್ಥೆಮಾಡಬೇಕು. ನೀವೇನೂ ಸುಮ್ಮನೆ ನಷ್ಟತ್ರಿ ಮಾಡಬೇಕಾಗಿಲ್ಲ. ಎಷ್ಟು ಖರ್ಚಾಗುತ್ತದೆ ಅಷ್ಟನ್ನೂ ಅವರಮೇಲೆ ಹಾಕಬಹುದು. ಅನೇಕ ಯೋಜನೆಗಳು ನಮ್ಮ ಮುಂದೆ ಇವೆ. ನನ್ನ ಇಚ್ಛೆ ಏನೆಂದರೆ ಈ ಯೋಜನೆಗಳು ಬೇಗಬೇಗ ನಡೆಯಬೇಕು, ಉತ್ಸಾಹದಿಂದ ನಡೆಯಬೇಕು. ಮಧ್ಯಪ್ರದೇಶದಲ್ಲಿ ಎಂದು ಕಾಣುತ್ತದೆ, ಒಂದನೇ ತಾರೀಖಿನಿಂದ ಈ ಯೋಜನೆಗಳ ಪ್ರಾರಂಭೋತ್ಸವವನ್ನು ಬಹಳ ಕುತೂಹಲದಿಂದ ಪ್ರಾರಂಭಿಸಿದ್ದಾರೆ.

ಮದ್ಯಪಾನ ನಿರೋಧದ ವಿಚಾರ.

ಈ ಐದು ವರ್ಷಗಳಲ್ಲಿ ನಾವು ಮದ್ಯಪಾನ ನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತರಬೇಕು. ಅಗರ್‌ವಾಲ್ ಸಮಿತಿಯವರು 1958ರಲ್ಲೇ ಸಂಪೂರ್ಣ ಪಾನನಿರೋಧ ದೇಶದಲ್ಲಿ ಜಾರಿಗೆ ಬರಬೇಕೆಂದು ಶಿಫಾರಸು ಮಾಡಿದ್ದಾರೆ. ಮೊದಲಿನಿಂದಲೂ ಕೂಡ ಹಿಂದಿನ ಸರ್ಕಾರದವರು ಸುಮಾರು ಎರಡು-ಮೂರು ಡಿಸ್ಟ್ರಿಕ್ಟುಗಳಲ್ಲಿ ಪಾನ ನಿರೋಧವನ್ನು ಜಾರಿಗೆ ತಂದಿದ್ದರು. ಹೊಸ ಸರ್ಕಾರ ಬಂದಮೇಲೆ ಇನ್ನು ಎರಡು-ಮೂರು ತಾಲ್ಲೂಕುಗಳಲ್ಲಿ ಜಾರಿಗೆ ತಂದರು. ಆಗ ಈ ಐದು ವರ್ಷಗಳಲ್ಲಿ ಹೆಚ್ಚುಕಡಮೆ ಮೈಸೂರು ದೇಶದಲ್ಲೆಲ್ಲಾ ಪಾನನಿರೋಧ ಜಾರಿಗೆ ತರುತ್ತೇವೆ ಎಂದು ಸ್ಪಷ್ಟವಾಗಿ ಹೇಳಿ ಈಗ ಹಣದ ದುಸ್ಥಿತಿಯಿಂದ ಸಂಪೂರ್ಣ ಪಾನನಿರೋಧ ಜಾರಿಗೆ ತರಲು ಆಗಲಿಲ್ಲ, ಬಹಳ ಕಷ್ಟವಾಯಿತು ಎಂದು ಹೇಳುತ್ತಾರೆ. ಕೊಡಗಿನಲ್ಲಿ ಏಪ್ರಿಲ್ 1ರಿಂದ ಪಾನನಿರೋಧ ಜಾರಿಗೆ ತಂದಿದ್ದಾರೆ. ಆದಷ್ಟು ಬೇಗ ಪಾನ ನಿರೋಧವನ್ನು ಜಾರಿಗೆ ತಂದು ಜನರಿಗೆ ಕಲ್ಯಾಣವನ್ನು ಮಾಡಬೇಕೆಂದು ಮನಸ್ಸು ಮಾಡಿದ್ದಾರೆ. ನಮ್ಮ ಸರ್ಕಾರದವರೂ ಕೂಡ ಮನಸ್ಸು ಮಾಡಿದ್ದರೆ ಆ ರೀತಿ ಮಾಡಬಹುದಾಗಿತ್ತು, ಕಷ್ಟವಾಗುತ್ತಾ ಇರಲಿಲ್ಲ. ಮೂರು-ನಾಲ್ಕು ಕೋಟಿ ರೂಪಾಯಿ ಡಿಫಿಸಿಟ್ ಆಗಿರುವಾಗ ಸುಮಾರು ಒಂದು ಕೋಟಿ 60 ಲಕ್ಷ ರೂಪಾಯಿ ಈ ಹೆಂಡದ ಬಾಬಿನಿಂದ ಬರುತ್ತಾ ಇದ್ದುದು ಕಮ್ಮಿ ಆಗುತ್ತದೆ ಎನ್ನುವುದೇನೂ ಅಂಥ ಹೆಚ್ಚಿನ ಕಾರಣವಲ್ಲ. ಸ್ವಲ್ಪ ಡಿಫಿಸಿಟ್ ಆದರೂ ಚಿಂತೆಯಿಲ್ಲ, ಅದರಿಂದ ದೇಶಕ್ಕೆ ಕಲ್ಯಾಣವಾಗುತ್ತದೆ, ಜನತೆಗೆ ಅನುಕೂಲವಾಗುತ್ತದೆ ಎಂದು ಜನರಿಗೆ ಹೇಳಬಹುದಾಗಿತ್ತು. ಪಾನನಿರೋಧ ಜಾರಿಗೆ ಬಾರದೇ ಇದ್ದುದು ಎಲ್ಲರಿಗೂ ಬಹಳವಾಗಿ ವ್ಯಸನವನ್ನುಂಟುಮಾಡಿದೆ. ಈ ವರ್ಷವಾದರೂ ಏಪ್ರಿಲ್ ಒಂದನೇ ತಾರೀಖಿನಿಂದ ಒಂದೆರಡು ಜಿಲ್ಲೆಗಳಲ್ಲಿ ಪಾನನಿರೋಧವನ್ನು ನಮ್ಮ ಸರ್ಕಾರದವರು ಜಾರಿಗೆ ತರುತ್ತೀರಿ ಎಂದು ಯೋಚನೆ ಮಾಡಿದ್ದೆವು. ಆ ರೀತಿ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಆದರೂ ಚಿಂತೆಯಿಲ್ಲ. ಕೊನೆಯ ವರ್ಷ ಮುಂದಿನ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾದರೂ ಮೈಸೂರು ಸಂಸ್ಥಾನದಲ್ಲಿ ಪೂರ್ಣ ಪಾನನಿರೋಧವನ್ನು ಜಾರಿಗೆ ತರಬೇಕು. ಇಲ್ಲದೇ ಇದ್ದರೆ ಜನರಿಗೆ ಬಹಳ ಅನ್ಯಾಯವಾಗುತ್ತದೆ. ಈಗಾಗಲೇ ನಮಗೆ ಅನುಭವವಿರುವಂತೆ ಬೇರೆ ವಿಧದಲ್ಲಿ ಹಣ ಕೂಡಿಸಿಕೊಳ್ಳುವುದಕ್ಕೆ ಯಾವ ಮಾರ್ಗವಿದೆಯೋ ಅದನ್ನು ಅನುಸರಿಸಿ ಹೆಚ್ಚು ಹಣ ಖರ್ಚಾಗುವುದನ್ನು ಕಡಿಮೆಮಾಡಿ ಜನತೆಗೆ ಒಳ್ಳೆಯದಾಗುವುದನ್ನು ಮಾಡೋಣ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮುಡಲಗಿರಿಗೌಡ (ಕುಣಿಗಲ್).—ಸ್ವಾಮಿ ಅಧ್ಯಕ್ಷರೇ, ನಾವು ಎರಡನೇ ಪಂಚವಾರ್ಷಿಕ ಯೋಜನೆಯ ನಿಘಂಟನ್ನು ಚರ್ಚೆ ಮಾಡುತ್ತಾ ಇದ್ದೇವೆ. ಚರ್ಚೆಮಾಡುವಾಗ ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಪಡೆದ ಅನುಭವವನ್ನು ಕೂಡ ನಾವು ನಿರೂಪಿಸಬೇಕಾದದ್ದು ಸಹಜ ಎಂದು ನಾನು ತಿಳಿದುಕೊಂಡಿದ್ದೇನೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ 36 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಹೀಗೆ ಖರ್ಚು ಮಾಡುವಾಗ ಅನೇಕ ಲೋಪದೋಷಗಳಾಗಿವೆ ಎಂಬುದನ್ನು ಕೂಡ ನಾವು ಅರಿಯಬೇಕಾದದ್ದು ಧರ್ಮ. ಈ ಎನ್.ಇ.ಎಸ್. ಬ್ಲಾಕ್ಸ್, ಕಮ್ಯೂನಿಟಿ ಪ್ರಾಜೆಕ್ಟು ಎಂದು ಹೇಳಿ ದೇಶದ ಕಲ್ಯಾಣಕ್ಕೆ ಹೊಸ ಯೋಜನೆಗಳನ್ನು ಇಂಡಿಯಾ ಸರ್ಕಾರದವರು ಏನೇನು ಮಾಡಿದ್ದಾರೋ ಅವು ಈ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಇಡೀ ಭಾರತಾದ್ಯಂತವೇ ಅಲ್ಲದೇ ಇಡೀ ಸಂಸ್ಥಾನಾದ್ಯಂತವೂ ಕೂಡ ವ್ಯಾಪಕವಾಗಬೇಕು, ತನ್ಮೂಲಕ ಜನಜೀವನದ ಮಟ್ಟ ಹೆಚ್ಚಬೇಕು, ಸುಖಸೌಲಭ್ಯ ಹೆಚ್ಚಬೇಕು, ಎನ್ನುವುದನ್ನು ಇದರಲ್ಲಿ ನಿರೂಪಿಸಿದ್ದಾರೆ. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಂಡಿರತಕ್ಕ ಎನ್. ಇ. ಎಸ್. ಏರಿಯಾದಲ್ಲಿ ಎಷ್ಟುಮಟ್ಟಿಗೆ ಸುಖಸಂಪತ್ತು ಹೆಚ್ಚಿದೆ ಎಂಬುದನ್ನೂ ಸ್ವಲ್ಪ ಪ್ರಸ್ತಾಪ ಮಾಡಬೇಕಾಗಿದೆ. ಹೀಗೆ ಪ್ರಸ್ತಾಪ ಮಾಡುವಾಗ, ಸರ್ಕಾರದವರು ಹಣವನ್ನು ಖರ್ಚುಮಾಡಬೇಕೆಂಬ ಒಂದು ಉದ್ದೇಶವನ್ನಿಟ್ಟು ಹಣ ಖರ್ಚು ಮಾಡುತ್ತಾ ಇದ್ದಾರೆಯೇ, ಇದರಿಂದ ಎಷ್ಟರಮಟ್ಟಿಗೆ ಜನಗಳ ಜೀವನ ಮಟ್ಟ ಹೆಚ್ಚಿದೆ, ಇದರಿಂದ ಶಾಶ್ವತವಾಗಿ ಜೀವನಮಟ್ಟ ಹೆಚ್ಚಾಗಿದೆಯೇ, ತಾತ್ಕಾಲಿಕವಾದಂಥ ಜೀವನದ ಅಂತಸ್ತು ಹೆಚ್ಚಿದೆಯೇ ಎಂಬುದನ್ನು ಕೂಡ ನಾವು ಆಲೋಚನೆ ಮಾಡಬೇಕು. ಎನ್.ಇ.ಎಸ್.ನಲ್ಲಿ ಖರ್ಚುಮಾಡತಕ್ಕಂಥ ಹಣ ಇದುವರೆಗೂ ನಾವು ನೋಡಿರತಕ್ಕದ್ದರಲ್ಲಿ ಒಂದು ಬ್ಲಾಕಿಗೆ 7-7½ ಲಕ್ಷ ರೂಪಾಯಿಗಳಷ್ಟು ಹಣಕೊಟ್ಟರೆ, ಅದರಲ್ಲಿ 1½ ಲಕ್ಷ ರೂಪಾಯಿಗಳನ್ನು ಆ ಬ್ಲಾಕಿನ ಅಭಿವೃದ್ಧಿ ಕಾರ್ಯಗಳಿಗೆ ಎಂತಲೂ, ಇನ್ನೂ 2½—3 ಲಕ್ಷ ರೂಪಾಯಿಗಳನ್ನು ಎಸ್ಟಾಬ್ಲಿಷ್‌ಮೆಂಟಿಗೆ ಎಂತಲೂ ಇಟ್ಟಿದ್ದಾರೆ. ಇನ್ನು ಬಾಕಿಯದೆಲ್ಲಾ ರೈತರುಗಳಿಗೆ ಕೊಡತಕ್ಕ ಸಾಲ ಮತ್ತೊಂದು ಮಗದೊಂದು ಬಾಬುಗಳಿಗೆ ಎಂದು ಹೇಳಿ ಹಣವನ್ನು ತೆಗೆದಿಟ್ಟಿದ್ದಾರೆ. ಇದರಲ್ಲಿ ರೈತರಿಗೆ ಕೊಡತಕ್ಕ ಸಾಲದ ಹಣ ಸರಿಯಾಗಿ ವಿನಿಯೋಗವಾಗುವುದಾದರೆ ಅದರಿಂದಲೇ ಕೊಂಚ ಪ್ರಯೋಜನವಾಗುವುದು ಎಂಬುದು ಎಲ್ಲರಿಗೂ ಗೊತ್ತು. ಈ ಅಭಿವೃದ್ಧಿ ಯೋಜನೆಗಳಿಗೆ ತೆಗೆದಿಟ್ಟಿರತಕ್ಕ ಹಣವನ್ನು ಸಾಧಾರಣವಾಗಿ ನಾವು ಮಾಮೂಲಾಗಿ ಮೊದಲಿನಿಂದಲೂ ಯಾವರೀತಿಯಲ್ಲಿ ಖರ್ಚು ಮಾಡಿಕೊಂಡು ಬಂದಿದ್ದೇವೊ, ಡೆವಲಪ್‌ಮೆಂಟ್ ಕಮಿಟಿ ಮತ್ತು ಡೆವಲಪ್‌ಮೆಂಟ್ ಯೋಜನೆಗಳು ಎಂದು ಇಟ್ಟುಕೊಂಡು ಕೆಲಸ ಮಾಡಿಕೊಂಡು ಬಂದಿದ್ದೇವೋ, ಆ ರೀತಿಯಲ್ಲೇ ಖರ್ಚಾಗುತ್ತಾ ಇದೆ. ಇದರಲ್ಲಿ

ಸಾಧಾರಣವಾಗಿ ಇಂಡಿಯಾ ಸರ್ಕಾರದವರು ಯಾವ ರೂಪುರೇಖೆಗಳನ್ನು ಕೊಟ್ಟು ಈ ಯೋಜನೆಗಳನ್ನು ಯಶಸ್ವಿಯಾಗಿ ಮಾಡಿ ಜೀವನದ ಅಂತಸ್ತನ್ನು ಹೆಚ್ಚು ಮಾಡಬೇಕೆಂದು ಯೋಚನೆ ಮಾಡಿದ್ದಾರೋ ಅದು ಕಾರ್ಯರೂಪಕ್ಕೆ ಬರುವಾಗ ಅಷ್ಟೇ ಯಶಸ್ವಿಯಾಗಿ ಜನಗಳು ಆದರಣೆಯಿಂದ ಇದು ನಮಗೆ ಮುಂದೆ ಪ್ರಯೋಜನವಾಗುತ್ತದೆ ಇದನ್ನು ನಾವು ನಡೆಸಿ ಕೊಂಡು ಹೋಗಬೇಕು ಎನ್ನತಕ್ಕ ರೀತಿಯಲ್ಲಿ, ಅವರಿಗೆ ಮನವರಿಕೆ ಆಗತಕ್ಕ ಮಟ್ಟದಲ್ಲಿ, ಇವೊತ್ತಿನ ದಿವಸ ಇದನ್ನು ಕಾರ್ಯರೂಪಕ್ಕೆ ತೆಗೆದುಕೊಂಡು ಹೋಗತಾ ಇಲ್ಲ. ಇದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಸ್ವಲ್ಪ ಲೋಪಗಳು ಇವೆ. ಅನನ್ನು ಸರಿಪಡಿಸಿಕೊಳ್ಳಬೇಕು ಎಂದು ನಾನು ಸರ್ಕಾರದವರಿಗೆ ಖಚಿತವಾಗಿ ಹೇಳುತ್ತಾ ಇದ್ದೇನೆ. ಹಾಗೆ ಸರಿಪಡಿಸಿಕೊಳ್ಳದೆ ಹೋದರೆ, ಆಗಿಂದಾಗ್ಗೆ ಈ ಪಂಚವಾರ್ಷಿಕ ಯೋಜನೆ ಈ ವರ್ಷದಿಂದ ಪ್ರಾರಂಭವಾದದ್ದು ಇನ್ನೂ 61ನೇ ಇಸವಿ ಮುಗಿಯುವುದರೊಳಗೆ ಅಲ್ಲಿಯವರೆಗೂ ಆಯಾ ವರ್ಷಗಳಲ್ಲಿ ಯಾವಯಾವ ಭಾಗದಲ್ಲಿ ತಪ್ಪು ಮಾಡಿದ್ದೇವೆ, ಎಷ್ಟು ಸಹಾಯವಾಗಿದೆ, ಎಷ್ಟು ಸಹಾಯವಾಗಿಲ್ಲ ಎಂಬುದನ್ನು ನಾವು ನೋಡದೆ ಹೋದರೆ ಕಡೆ ಭಾಗದಲ್ಲಿ ಎಂದರೆ ಅಂತ್ಯದಲ್ಲಿ ನಾವು ಮಾಡಿದಂಥ ಪ್ರಯತ್ನಗಳೆಲ್ಲವೂ ವ್ಯರ್ಥವಾಗುತ್ತವೆ. ಹಣ ಖರ್ಚಾಯಿತು ಎಂದು ಆಗುತ್ತದೆಯೇ ಹೊರತು ಇನ್ನೇನೂ ಇಲ್ಲ. ಸಾಮಾನ್ಯವಾಗಿ ನಾವು ಜನಗಳ ಹತ್ತಿರಹೋಗಿ ನಮ್ಮ ಜನಗಳನ್ನು ಈ ಯೋಜನೆಗಳು (ಎನ್. ಇ. ಎಸ್. ಮುಂತಾದುವು) ಬಂದದ್ದರಿಂದ ನಿಮಗೆ ಏನು ಪ್ರಯೋಜನವಾಯಿತು ಎಂದು ಕೇಳಿದರೆ ನನಗೆ ಇಂಥ ಪ್ರಯೋಜನವಾಯಿತು, ನಾನು ಇಷ್ಟು ಬಡತನದಲ್ಲಿ ಇದ್ದೆ, ನನ್ನ ಅಂತಸ್ತು ಜೀವನದ ಮಟ್ಟ ಇಷ್ಟರಮಟ್ಟಿಗೆ ಏರಿಕೆಯಾಯಿತು, ನಾನು ಸುಖವಾಗಿ ಜೀವನ ಮಾಡುತ್ತಾ ಇದ್ದೇನೆ ಎಂದು ಹೇಳಿ ಆ ಹಳ್ಳಿಗಳಲ್ಲಿ ವಾಸಮಾಡತಕ್ಕ ಜನ, ರೈತ ಯಾವನಿದ್ದಾನೆ ಅವನು ಹೇಳಿದರೆ ಆಗ ಈ ಪಂಚವಾರ್ಷಿಕ ಯೋಜನೆಗೆ ಖರ್ಚು ಮಾಡಿದಂಥ ಹಣ ಸಫಲವಾಗಿದೆ, ಸಾರ್ಥಕವಾಗಿದೆ ಎಂದು ವ್ಯಕ್ತವಾಗುತ್ತದೆ. ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಸಿಬ್ಬಂದಿಗಾಗಿ ಇಷ್ಟು ಹಣ ಖರ್ಚುಮಾಡಿದ್ದೇವೆ, ರಸ್ತೆ ಮಾಡಿಸಿದ್ದೇವೆ, ಪ್ರಾಜೆಕ್ಟುಗಳನ್ನು ಕಟ್ಟಿಸಿದ್ದೇವೆ, ಎಂದರೆ ಅದೊಂದೂ ಕೂಡ ಅವರ ಮನಸ್ಸಿನಮೇಲೆ ಪರಿಣಾಮವಾಗುವುದಿಲ್ಲ. ಅವನ ಜೀವನದ ಮಟ್ಟ, ಅವನ ಸುಖಸಂಪತ್ತು ಹೆಚ್ಚಾದ ಹಾಗೆಲ್ಲಾ ಅದರ ಜೊತೆಗೇ ಅವನ ಅಜ್ಞಾನ ಹೋಗಿ ಅವನು ವಿಚಾರಪರನಾದರೆ ಆಗ ಮಾತ್ರ ಈ ಯೋಜನೆಗಳಿಂದ ಪ್ರಯೋಜನವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಖಂಡಿತವಾಗಿಯೂ ಆಗುವುದಿಲ್ಲ. ಅಷ್ಟಾಗಬೇಕಾಗಿದ್ದರೆ ವಿದ್ಯಾಭ್ಯಾಸ, ನಮ್ಮ ಜನಗಳಲ್ಲಿರತಕ್ಕ ತಿಳಿವಳಿಕೆಯ ಮಟ್ಟ ಹೆಚ್ಚಬೇಕು. ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಲು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಬೇಕಾದಷ್ಟು ಹಣವನ್ನು ತೆಗೆದಿಟ್ಟಿದ್ದೇವೆ. ಬೇಸಿಕ್ ಸ್ಕೂಲು, ಮತ್ತೊಂದು ಮಗದೊಂದು ಹೀಗೆ ಹೊಸ ಹೊಸ ಯೋಜನೆಗಳಿಗೆ ಹೊಸ ಹೊಸ ರೂಪಗಳನ್ನು ಕೊಡುವುದಕ್ಕೆ ಇಷ್ಟು ವಿಶೇಷವಾದ ಹಣವನ್ನು ತೆಗೆದಿಟ್ಟಿದ್ದೇವೆ. ಜನತೆಗೆ ಇವೊತ್ತಿನ ದಿವಸ ಕೊಡಬೇಕಾದದ್ದು, ಸರ್ವತೋಮುಖವಾದ ವಿದ್ಯಾಭ್ಯಾಸವನ್ನು ಕೊಡಬೇಕು. ಯಾವುದೇ ಒಂದು ಹಳ್ಳಿಗೆ ಹೋಗಿ ಈ ಯೋಜನೆಯನ್ನು ಹರಡತಕ್ಕಂಥ ಅಧಿಕಾರಿಗಳು ಈ ಯೋಜನೆಯ ಗುರಿ, ಉದ್ದೇಶ ಏನು ಎಂಬುದನ್ನು ಹೇಳುವಂಥ ಕಾಲದಲ್ಲಿ ಅದನ್ನು ಗ್ರಹಿಸಿ ನಾನು ಇದನ್ನು ಕಾರ್ಯರೂಪಕ್ಕೆ ತರಬೇಕು ಎಂದು ತಿಳಿದುಕೊಳ್ಳತಕ್ಕ ನಾಲ್ಕು ಜನ ಆ ಊರಿನಲ್ಲಿರಬೇಕು. ಆ ರೀತಿ ತಿಳಿದುಕೊಳ್ಳಬೇಕಾದರೆ ಅವನಲ್ಲಿ ಜ್ಞಾನ ಇರಬೇಕು. ಜ್ಞಾನಾರ್ಜನೆ ಮಾಡಿದಂಥ ವಿದ್ಯಾವಂತರ ಸಂಖ್ಯೆ ಹೆಚ್ಚಿನ ಸಂಖ್ಯೆಯಲ್ಲಿರಬೇಕು. ಇಲ್ಲದೆ ಇದ್ದರೆ ನಾವು ಈ ಯೋಜನೆಗಳನ್ನು ತಂದು ಇಷ್ಟಿಷ್ಟು ಹಣವನ್ನು ಖರ್ಚುಮಾಡುತ್ತೇವೆ ಎಂದರೆ ಅದೆಲ್ಲಾ ನಿಷ್ಪ್ರಯೋಜನವಾಗುತ್ತದೆ. ಜನಗಳು ಮೂಲ ಶಿಕ್ಷಣವನ್ನು ಹೆಚ್ಚಾಗಿ ಪಡೆಯಬೇಕು. ಹಣವನ್ನು ಖರ್ಚುಮಾಡುವುದರ ಜೊತೆಗೆ ಎಷ್ಟು ಪರ್ಸೆಂಟ್ ವಿದ್ಯಾವಂತರ ಸಂಖ್ಯೆ ಹೆಚ್ಚಬೇಕು ಎನ್ನುವುದು ಬಹಳ ಮುಖ್ಯವಾದ ವಿಚಾರ. ನೀವು ಯಾವ ಸಾಲಗಳನ್ನೇ ಕೊಡಿ, ಯಾವ ಅಭಿವೃದ್ಧಿ ಕಾರ್ಯಗಳನ್ನೇ ಮಾಡಿ, ನೀವು ಖರ್ಚು ಮಾಡತಕ್ಕ ಹಣವನ್ನು ಸದುಪಯೋಗಪಡಿಸಿ ತನ್ನ ಜೀವನದ ಮಟ್ಟವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಅತ್ಯವಶ್ಯಕವಾದ ತಿಳಿವಳಿಕೆಯನ್ನು ಹೊಂದುವಂತೆ ಮಾಡದಿದ್ದರೆ, ಅವನನ್ನು ವಿದ್ಯಾವಂತನನ್ನಾಗಿ ಮಾಡದಿದ್ದರೆ, ಜ್ಞಾನವಂತನನ್ನಾಗಿ ಮಾಡದಿದ್ದರೆ ಅವೆಲ್ಲವೂ ಕೂಡ ನಿಷ್ಪ್ರಯೋಜನವಾಗುತ್ತವೆ. ಮೊದಲನೆ ಪಾಂಚವಾರ್ಷಿಕ ಯೋಜನೆಯಲ್ಲಿ ಇಷ್ಟು ಹಣ ಖರ್ಚುಮಾಡಿ ವಿಶೇಷವಾದಂಥ ಪ್ರಗತಿಯನ್ನು ಪಡೆದಿದ್ದೇವೆ ಎಂದು ತಾವು ಹೇಳುತ್ತೀರಿ.

2 P.M.

ಅವನು ಮೊದಲಿನಿಂದ ಬಂದ ಅಭ್ಯಾಸವೇನಿದೆಯೋ ಅದಕ್ಕೇ ಒಂದು ಜಪಾನ್ ಮಾದರಿ ವ್ಯವಸಾಯವೆಂದು ಹೊಸ ರೂಪವನ್ನು ಕೊಟ್ಟು, ರೈತನಿಗೆ ಅದರ ಬಗ್ಗೆ ಸ್ವಲ್ಪ ತಿಳಿವಳಿಕೆಯನ್ನು ಕೊಟ್ಟು ಅದನ್ನು ಅನುಸರಿಸಿದ್ದರಿಂದ ಮತ್ತು ಒಂದು ಕಡೆ ಮಾದರಿಯಾಗಿ ತೋರಿಸಿದಂಥ ವಿಷಯವನ್ನು ತಿಳಿದುಕೊಂಡು ಅದರಂತೆ ಅನುಸರಿಸುತ್ತಿರುವುದರಿಂದ ಹೆಚ್ಚು ಉತ್ಪತ್ತಿಯನ್ನು ತೆಗೆಯುವುದಕ್ಕೆ ಸಾಧ್ಯವಾಯಿತು. ಅವನಿಗೆ ವ್ಯವಸಾಯದಲ್ಲಿರತಕ್ಕ ಜ್ಞಾನವೇನಿದೆ ಅದನ್ನು ವಿಸ್ತರಿಸಿಕೊಟ್ಟದ್ದರಿಂದ ಇವೊತ್ತಿನ ದಿವಸ ವ್ಯವಸಾಯದ ಇಲಾಖೆಯವರು ಇಂಥ ದೊಡ್ಡ ಯೋಜನೆಯನ್ನು ಮಾಡಿ ವ್ಯವಸಾಯದಲ್ಲಿ ಅಭಿವೃದ್ಧಿಯನ್ನು ಪಡೆದಿದ್ದೇವೆ, ಇಷ್ಟು achievement ಮಾಡಿದ್ದೇವೆಂದು ಹೇಳುವುದಕ್ಕೆ ಸಾಧಕವಾಯಿತು.

ಕೈಗಾರಿಕೆಗಳ ವಿಷಯವನ್ನು ತೆಗೆದುಕೊಂಡರೆ ಗೃಹಕೈಗಾರಿಕೆಗಳನ್ನು ಪ್ರತಿಯೊಂದು ಹಳ್ಳಿಯಲ್ಲೂ ಮನೆ ಮನೆಯಲ್ಲೂ ಅಭಿವೃದ್ಧಿಮಾಡಬೇಕು ಎಂದು ಬೇಕಾದಷ್ಟು ಹಣವನ್ನು ತೆಗೆದಿಟ್ಟಿದ್ದಾರೆ. ಈಗಾಗಲೇ ಈ ಕಾರ್ಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ಹಳ್ಳಿಯ ಜನರು ಮೊದಲು ಯಾವುದಾದರೂ ಕೈಗಾರಿಕೆಗಳಲ್ಲಿ ತಮ್ಮ ತಿಳಿವಳಿಕೆಯನ್ನು ಉಪಯೋಗಿಸಿಕೊಂಡು ಅದನ್ನು ನಡೆಸಿಕೊಂಡು ಹೋಗುತ್ತಿದ್ದ ಬಗ್ಗೆ ಏನು ಅವರಿಗೆ ಕೊಡತಕ್ಕ ತಿಳಿವಳಿಕೆ ಯಾವ ರೀತಿ ಇರಬೇಕು, ಗೃಹಕೈಗಾರಿಕೆ ಯೋಜನೆ ಏನು ಎನ್ನುವುದನ್ನು ನಾವು ಅರಿತುಕೊಂಡು ಅವರಿಗೆ ತಿಳಿವಳಿಕೆ ಹೆಚ್ಚಾಗಬೇಕಾದರೆ ಯಾವ ರೀತಿ ಅವರ ಕೈಗಾರಿಕಾ ಜ್ಞಾನಕ್ಕೆ ಆಧುನಿಕ ಜ್ಞಾನವನ್ನು ಕೊಡಬೇಕು ಎನ್ನುವುದನ್ನು ತಿಳಿದುಕೊಂಡು ಆ ಮಾರ್ಗವನ್ನನುಸರಿಸಿ ನಮ್ಮ ಯೋಜನೆಯನ್ನು ವ್ಯಾಪ್ತಿಗೊಳಿಸತಕ್ಕ ಮಾರ್ಗವನ್ನು ಅನುಸರಿಸಬೇಕು. ಈಗ ಏನಾಗಿದೆ ಎಂದರೆ

(ಶ್ರೀ ಟಿ. ಎನ್. ಮುಡಲಗಿರಿಗೌಡ.)

ನಮ್ಮ ಜನರಲ್ಲಿ ತಮಗೆ ಸ್ವಾಭಾವಿಕವಾಗಿ ಏನು ಬೆಳೆದು ಬಂದಿದೆಯೋ ಅದನ್ನು ಬದಲಾಯಿಸಿ ಕೊಂಡು ಈ ಯೋಜನೆಗಳ ತತ್ವವನ್ನು ಅಂಗೀಕರಿಸಿ ಅವನ್ನು ಮುಂದುವರಿಸಿಕೊಂಡು ಹೋಗುವುದು ಬಹಳ ಕಡಿಮೆಯಾಗಿದೆ. ಇದರಿಂದ ಯೋಜನೆಗಳು ಬಹಳವಾಗಿ failure ಆಗುತ್ತಿವೆ. ಅದಕ್ಕೋಸ್ಕರ ಗೃಹ ಕೈಗಾರಿಕೆ ಬರುವುದಕ್ಕೆ ಮುಂಚಿತವಾಗಿ ಗೃಹ ಕೈಗಾರಿಕೆ ನಮಗೆ ಬೇಕು, ಗೃಹ ಕೈಗಾರಿಕೆಯಿಂದ ಜನರ ಜೀವನ ಮಟ್ಟ ಹೆಚ್ಚಾಗುತ್ತದೆ ಎಂದು ಹೇಳುತ್ತಿದ್ದರು. ಆ ಯೋಜನೆಯನ್ನು ಕಾರ್ಯರೂಪಕ್ಕೆ ತಂದ ಕಾಲದಲ್ಲಿ ಅದು ಬರೀ ಸಾಲವನ್ನು ಕೊಡತಕ್ಕ ಗೃಹ ಕೈಗಾರಿಕೆ ಯೋಜನೆಯಾಗಿದೆಯೇ ಹೊರತು ಗೃಹ ಕೈಗಾರಿಕೆಯನ್ನು ಹೆಚ್ಚು ಮಾಡತಕ್ಕ ಅದನ್ನು effective ಆಗಿ, ಪ್ರಯೋಜನಕಾರಿಯಾಗಿ ಮಾಡತಕ್ಕ ಯೋಜನೆಯಾಗಲಿಲ್ಲವೆನ್ನುವುದು ದೇಶಾದ್ಯಂತವಿರತಕ್ಕ ಕೂಗು. ಅವನಿಗೆ ನ್ಯಾಯವಾಗಿ ಸರಿಯಾಗಿ ಗೃಹ ಕೈಗಾರಿಕೆಗಳನ್ನು ಹೆಚ್ಚು ಮಾಡುವ ಅವನ ಜೀವನ ಮಟ್ಟ ಹೆಚ್ಚು ಮಾಡುವ ಮಾರ್ಗವನ್ನು ತೋರಿಸಬೇಕು. ಬರೀ ಹಣವನ್ನು ಸಾಲವಾಗಿ ಕೊಟ್ಟು, ಅವನು ಮೊದಲಿನಿಂದಲೂ ಮಾಡಿಕೊಂಡು ಬರುತ್ತಿದ್ದ ಪ್ರಕಾರ ಅದೇ ತತ್ವವನ್ನನುಸರಿಕೊಂಡು ಹೋಗಿ ಕಚ್ಚಾ ಪದಾರ್ಥಗಳನ್ನು ಕೊಂಡುಕೊಂಡು ಕೆಲಸ ನಡೆಸುವುದರಿಂದ ಗೃಹ ಕೈಗಾರಿಕೆಯನ್ನು ಹೆಚ್ಚಿಸಿದಂತಾಗುವುದಿಲ್ಲ. ಅವನ್ನು ಸರಿಯಾಗಿ, ತೃಪ್ತಿಕರವಾಗಿ ನಡೆಸಿಕೊಂಡು ಬಂದು ಒಂದು ಕಾರ್ಯ ರೂಪಕ್ಕೆ ಬರಬೇಕಾಗಿದ್ದರೆ ಅದಕ್ಕೆ ಸರಿಯಾದ technical advice ಇರಬೇಕು. ಇಂಡಿಯಾ ಸರ್ಕಾರದವರು ಯಾವ ರೀತಿಯಲ್ಲಿ ಗೃಹ ಕೈಗಾರಿಕೆಗಳನ್ನು ನಡೆಸಬೇಕೆಂದು ಯೋಚನೆ ಮಾಡಿದ್ದಾರೆಯೋ, ಸಂಸ್ಥಾನ ಸರ್ಕಾರದವರೂ ಕೂಡ ಅದಕ್ಕೆ ಹೊಂದಿಕೆಯಾಗುವ ರೀತಿಯಲ್ಲಿ ನಡೆಸಬೇಕೇ ಹೊರತು, ಇಂಡಿಯಾ ಸರ್ಕಾರದ ದಾರಿಯೇ ಬೇರೆ, ಸಂಸ್ಥಾನ ಸರ್ಕಾರದ ದಾರಿಯೇ ಬೇರೆ ಎಂಬಂತೆ, ಬೇರೆ ಬೇರೆ ರೀತಿಯಲ್ಲಿ ಹೋಗುವುದಾದರೆ, ಗೃಹ ಕೈಗಾರಿಕೆಗಳು ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಒಂದೇ ರೀತಿಯಲ್ಲಿ ಇದನ್ನು ಕಾರ್ಯರೂಪಕ್ಕೆ ತರುವ ಮಾರ್ಗವನ್ನನುಸರಿಸಬೇಕು.

ಮೈನರ್ ಇರಿಗೇಷನ್ ವಿಚಾರದಲ್ಲಿ ಒಂದು ವಿಷಯವನ್ನು ಹೇಳುತ್ತೇನೆ. ಈಗ ಸಂಸ್ಥಾನದಲ್ಲಿ ಸಣ್ಣ ಸಣ್ಣ ಕೆರೆಗಳನ್ನು ಕಟ್ಟುವುದಕ್ಕೆ ಅವಕಾಶವಿಲ್ಲ. ಇರತಕ್ಕ sources ಎಲ್ಲವನ್ನೂ ಪೂರ್ತಿಯಾಗಿ ಮುಗಿಸಿಕೊಂಡು ಬಂದಿದ್ದಾರೆ. ಈಗ ಭೂಮಿಯಲ್ಲಿರತಕ್ಕ sourceನಿಂದ ನಾವು ನೀರನ್ನು ಮೇಲಕ್ಕೆ ತೆಗೆಯುವ ವ್ಯವಸ್ಥೆ ಮಾಡಿ ಜನಗಳಿಗೆ ನೀರನ್ನು ಒದಗಿಸಿ ಅದರಿಂದ ಹೆಚ್ಚಿನ ಪ್ರಯೋಜನವನ್ನು ಹೊಂದಬೇಕಾದ ಪರಿಸ್ಥಿತಿ ಬಂದಿದೆ. ಇದನ್ನು ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಭೂಮಿಯಲ್ಲಿರುವ ನೀರನ್ನು ತೆಗೆಯುವುದಕ್ಕೆ ಒಂದು ಸ್ಕೀಂ ಹಾಕಬೇಕು. ಮೈನರ್ ಅಥವ ಮೇಜರ್ ಇರಿಗೇಷನ್ ಯಾವುದಾದರೂ ತೆಗೆದುಕೊಳ್ಳಿ. ಎಲ್ಲಿ ನೀರು ಇದೆಯೋ ಅಲ್ಲಿ ಅದನ್ನು ಶೇಖರಿಸಿ ಖುಷ್ಕಿ ಜಮೀನಿಗೆ ನೀರನ್ನೊದಗಿಸಿ ವ್ಯವಸಾಯಕ್ಕೆ ಅನುಕೂಲ ಮಾಡುತ್ತಿದ್ದೀರಿ. ಅಂತೆಯೇ ಭೂಮಿಯಿಂದಲೂ ನೀರನ್ನು ಮೇಲಕ್ಕೆ ತಂದು ಖುಷ್ಕಿ ಜಮೀನಿನ ವ್ಯವಸಾಯಕ್ಕೋಸ್ಕರ ಉಪಯೋಗಿಸತಕ್ಕ ಒಂದು ಯೋಜನೆಯನ್ನು ಮಾಡಿ, ಸಣ್ಣ ಕೆರೆ ಕಟ್ಟೆ ಪ್ರಾಜೆಕ್ಟ್ ಇತ್ಯಾದಿಗಳನ್ನು ಕಟ್ಟಿದರೆ ಯಾವ ರೀತಿಯಲ್ಲಿ ಪ್ರತಿಫಲವನ್ನು ನಿರೀಕ್ಷಣೆ ಮಾಡುತ್ತೀರೋ ಅದೇ ರೀತಿಯಲ್ಲಿ ಇದನ್ನೂ ಮಾಡಿ ರೈತನಿಗೆ ಪ್ರಯೋಜನವಾಗತಕ್ಕ ಒಂದು ಅನುಕೂಲವನ್ನು ಮಾಡಿಕೊಡಬೇಕು. ಹಾಗಿಲ್ಲದೆ ಪ್ರತಿಫಲ (returns) ಬರುವುದಿಲ್ಲ, ಸರಿಯಾಗಿ ನೀರು ಬರುವುದಿಲ್ಲವೆಂದು ಎಷ್ಟು ಕಾಲ ಹೇಳಿಕೊಂಡು ಬಂದರೂ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಈ ಯೋಜನೆಯನ್ನು ನಾವು ಕೈಗೊಂಡು ಭೂಮಿಯಲ್ಲಿರತಕ್ಕ ನೀರನ್ನು ಮೇಲಕ್ಕೆ ತೆಗೆದು ರೈತರಿಗೆ ಉಪಯೋಗಕ್ಕೆ ಬರುವಂತೆ ಏರ್ಪಾಡು ಮಾಡಿದ ಹೊರತು ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತೇನೆ. ಸರ್ಕಾರದವರು ಈ ವಿಷಯದಲ್ಲಿ ಯೋಚನೆ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಎಚ್. ಸಿದ್ದವೀರಪ್ಪ.—ನಾವು ಹೇಳುವುದೂ ಜಮೀನುಗಳಲ್ಲಿ ಬಾವಿಗಳನ್ನು ತೆಗೆಯಬೇಕು ಎಂದೇ.

ಶ್ರೀ ಟಿ. ಎನ್. ಮುಡಲಗಿರಿಗೌಡ.—ಯಾವ ಯಾವ ಕ್ಷೇತ್ರಗಳಲ್ಲಿ ನೀರಿದೆಯೋ ಅಲ್ಲೆಲ್ಲ ಬಾವಿಗಳನ್ನು ಸರ್ಕಾರದವರೇ ತೆಗೆಸಬೇಕು. ಹೀಗೆ ಭಾವಿಗಳನ್ನು ತೆಗೆಸಿದ ಮೇಲೆ ವಿದ್ಯುಚ್ಛಕ್ತಿಯನ್ನು ಒದಗಿಸಿ, ನೀರನ್ನು ಸರಬರಾಜು ಮಾಡುವ ವ್ಯವಸ್ಥೆಯನ್ನು ಸರ್ಕಾರದವರೇ ಮಾಡಬೇಕು. ಈ ರೀತಿ ಮಾಡುವುದರಿಂದ ಎಷ್ಟು ಪ್ರತಿಫಲ (return) ಬರುತ್ತದೆಂದು ನೋಡಿಕೊಂಡು ಅದನ್ನು ರೈತನಿಂದ ವಸೂಲ್ಮಾಡಿ. ಈ ರೀತಿಯಾಗಿ ಪ್ಲಾನ್ ಮಾಡಿ ಸಹಾಯವನ್ನು ಒದಗಿಸದೆ ಹೋದರೆ ರೈತರಿಗೆ ಏನೂ ಪ್ರಯೋಜನವನ್ನು ದೊರಕಿಸಿ ಕೊಟ್ಟ ಹಾಗಾಗುವುದಿಲ್ಲ

ವಿದ್ಯುಚ್ಛಕ್ತಿಯ ವಿಷಯದಲ್ಲಿ ಹೇಳಲು ನಮಗೆ ಬಹಳ ವ್ಯಸನವಾಗುತ್ತದೆ. ಇದರ ವಿಷಯವನ್ನು ಪ್ರತಿ ವರ್ಷವೂ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ನಮಗೆ ದೊರೆಯುವ statistics, statement ವಗೈರೆಗಳಿಂದ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಒದಗಿಸಿರುವುದನ್ನು ನೋಡಿದರೆ/ಅದು ಬಹಳ ಕಡಿಮೆಯಾಗಿದೆ. ಸಾಧಾರಣವಾಗಿ / materials ಇಲ್ಲವೆನ್ನತಕ್ಕ ಕಾರಣವನ್ನು ಮುಂದೊಡ್ಡುತ್ತಾರೆ. ಆದರೆ ಪಟ್ಟಣಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಮಾತ್ರ ಯಾವ ತೊಂದರೆಯೂ ಇರುವುದಿಲ್ಲ. ಹೀಗೆ ಹೇಳಿದರೆ ಪಟ್ಟಣಗಳಿಗೆ ಒದಗಿಸಬಾರದೆಂದು ಹೇಳುತ್ತೇನೆಂದು ತಿಳಿದುಕೊಳ್ಳಬಾರದು. ಪಟ್ಟಣಗಳ ವಿಚಾರದಲ್ಲಿ ಎಸ್ಟಿಮೇಟುಗಳನ್ನು ಇವೊತ್ತು ಮಂಜೂರ್ಮಾಡಿ, ನಾಳೆಯೇ ಕೆಲಸವನ್ನು ತೆಗೆದುಕೊಂಡು ಮುಂದುವರಿಸುವುದು—ಹೀಗೆ ಮಾಡುತ್ತಿದ್ದೀರಿ. ಅದೇ ರೀತಿಯಾಗಿ ನಮ್ಮ ಸಂಸ್ಥಾನದಲ್ಲಿರುವ 17 ಸಾವಿರ ಹಳ್ಳಿಗಳೂ ಉಳಿಯಬೇಕು, ಅವುಗಳನ್ನು ಮುಂದಕ್ಕೆ ತರಬೇಕು ಎಂದು ಪ್ರತಿಯೊಂದು ಹಳ್ಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿ, ವಿದ್ಯುಚ್ಛಕ್ತಿಯ ಸಹಾಯದಿಂದ ವ್ಯವಸಾಯ ಮಾಡುವುದಕ್ಕೆ, ಕೈಗಾರಿಕೆಗಳನ್ನು ನಡೆಸುವುದಕ್ಕೆ ತಕ್ಕ ಏರ್ಪಾಡುಮಾಡಿ ಹಳ್ಳಿಗಳನ್ನು ಅಭಿವೃದ್ಧಿ ಪಡಿಸತಕ್ಕ ವ್ಯವಸ್ಥೆಯನ್ನು ಮಾಡದೆ ಹೋದರೆ ಸರ್ಕಾರದವರು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲದೆ ಎಷ್ಟೇ ಪಾಂಚವಾರ್ಷಿಕ ಯೋಜನೆಗಳನ್ನು ಹಾಕಿದರೂ ಸಹ ಮೂರು ಕಾಸಿನ ಕೆಲಸ ರೈತನಿಗಾಗಿ ಮಾಡಿದಂತಾಗುವುದಿಲ್ಲ. ನೀವು ಎಷ್ಟೇ ಹಣವನ್ನು ಖರ್ಚು ಮಾಡಿದರೂ ಚಿಂತೆ ಇಲ್ಲ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಬೇಕು. ವಿದ್ಯುಚ್ಛಕ್ತಿಯನ್ನು ಒದಗಿಸಿದ ಹೊರತು ಗ್ರಾಮಾಂತರ ಪ್ರದೇಶಗಳು ಅಭಿವೃದ್ಧಿಯಾಗುವುದಕ್ಕೆ ಸಾಧ್ಯವೇ ಇಲ್ಲ. ಪಟ್ಟಣಗಳಿಗೆ ಒದಗಿಸತಕ್ಕ ವಿದ್ಯುಚ್ಛಕ್ತಿಯನ್ನು ಯಾವ

source ನಿಂದಲಾದರೂ ಒದಗಿಸಿಕೊಳ್ಳಿ. ಆದರೆ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಒಂದು ಯೋಜನೆಯನ್ನು ತಯಾರ್‍ಮಾಡಿ, ಯಾವುದಾದರೂ ಒಂದು ರೀತಿಯ ಏರ್ಪಾಡನ್ನು ಮಾಡಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಈಗಿರತಕ್ಕ ಸಂಸ್ಥಾನದ ಪ್ರತಿಯೊಂದು ಹಳ್ಳಿಯಲ್ಲೂ ವಿದ್ಯುಚ್ಛಕ್ತಿ ಹರಿಯಲು ಒಂದು ಏರ್ಪಾಡನ್ನು ಮಾಡದೆ ಹೋದರೆ ನೀವು ಯಾವ ಪ್ರಯೋಜನವನ್ನೂ ಮಾಡಿದ ಹಾಗಾಗುವುದಿಲ್ಲ. ವಿದ್ಯುಚ್ಛಕ್ತಿಯಿಂದ ವ್ಯವಸಾಯ ಮಾಡತಕ್ಕವನು ವರ್ಷಕ್ಕೆ ಮೂರು ಸಾವಿರ ರೂಪಾಯಿ, ನಾಲ್ಕು ಸಾವಿರ ರೂಪಾಯಿ ಉತ್ಪತ್ತಿ ಮಾಡಿದರೆ, ಅವನು ಎಷ್ಟು ಎಕನಾಮಿಕ್ ಆಗಿ ವ್ಯವಸಾಯ ಮಾಡಿದರೂ ಕೂಡ ಅವನಿಗೆ ತಾನು ಮಾಡಿರುವ ಖರ್ಚಿನ ಮೇಲೆ ಶೇಕಡ 3-4 ಗಿಟ್ಟುವುದಿಲ್ಲ, ಜೀವನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ವ್ಯವಸಾಯ ಮಾಡುವವನಿಗೆ return ಎಷ್ಟು ಬಂತು ಅದು ಅವನ ಜೀವನಕ್ಕೆ ಸಾಕಾಗುತ್ತದೆಯೋ ಎಂದು ಯೋಚನೆ ಮಾಡಬೇಕು. ವ್ಯವಸಾಯವನ್ನು ಕಪಿಲೆ ಅಥವಾ ಏತದಿಂದ ಮಾಡುವವನಿಗೆ ಶೇಕಡ 2-3 ಕೂಡ ಉತ್ಪತ್ತಿ ಬರುವುದಿಲ್ಲ. ಹೀಗಾಗಿ ಅವನ economic condition ಎಷ್ಟೋ deteriorate ಆಗಿದೆ, ಅವನು ಎಷ್ಟೋ ಹಿಂದೆ ಬಿದ್ದಿದ್ದಾನೆ. ಆದುದರಿಂದ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಟ್ಟಲ್ಲಿ ಮಾತ್ರ ರೈತನು ಮುಂದೆ ಬರುವುದಕ್ಕೆ ಸಾಧ್ಯವೆಂದು ಹೇಳುತ್ತೇನೆ.

ವಿದ್ಯಾಭ್ಯಾಸದ ವಿಷಯದಲ್ಲಿ ಹೇಳತಕ್ಕದ್ದೇನೆಂದರೆ, ಎಲ್ಲ ಪಾಠಶಾಲೆಗಳನ್ನೂ basic school ಆಗಿ convert ಮಾಡಿ, ಕಾಲಕ್ರಮೇಣ multi-purpose schools ಮಾಡಿ ಎರಡನೆ ಪಾಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಮಕ್ಕಳಿಗೆ ವಿದ್ಯಾಭ್ಯಾಸ ದೊರೆಯುವುದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು. ಏಕೆಂದರೆ ಸ್ಕೂಲು ಕಟ್ಟಡವನ್ನು ಕೊಡದೆ ಇರುವುದರಿಂದ ನಿಮ್ಮ ಗ್ರಾಮಕ್ಕೆ ಶಾಲೆಯನ್ನು ಕೊಟ್ಟಿಲ್ಲ, ಉಪಾಧ್ಯಾಯರಿಗೆ ವಾಸಕ್ಕೆ ಮನೆ ಕೊಟ್ಟಿಲ್ಲವಾದ್ದರಿಂದ ನಿಮಗೆ ಶಾಲೆಯನ್ನು ಕೊಟ್ಟಿಲ್ಲವೆಂದು ಹೇಳುವಂತಿರಬಾರದು. ಸರ್ಕಾರದವರು ನಾಗರಿಕತೆ ಇರುವ ಕಡೆಗಳಲ್ಲಿ ಹೆಚ್ಚಿನ ಗಮನಕೊಟ್ಟು, ಮನಸ್ಸು ಮಾಡಿ ಅಲ್ಲಿ ಶಾಲೆಗಳನ್ನು ತೆರೆಯುತ್ತಿದ್ದಾರೆ. ಅಶಕ್ತರನ್ನು ಶಕ್ತಿವಂತರನ್ನಾಗಿ ಮಾಡತಕ್ಕದ್ದು, ಅನಾಗರಿಕರನ್ನು ನಾಗರಿಕರನ್ನಾಗಿ ಮಾಡತಕ್ಕದ್ದು ಪಾಂಚವಾರ್ಷಿಕ ಯೋಜನೆಗಳ ಗುರಿ. ಈ ಯೋಜನೆಗಳು ನಾಗರಿಕರನ್ನು ಮೊದಲನೆಯ ದರ್ಜೆಗೆ ಏರಿಸುವುದಕ್ಕೆ ಮಾತ್ರವಲ್ಲ. ಆದುದರಿಂದ ನಾವು ಈ ಯೋಜನೆಯಿಂದ ಮುಂದೆ ಸಾರ್ಥಕವಾಗಬೇಕು, ದೇಶದಲ್ಲಿರತಕ್ಕ ಪ್ರತಿಯೊಂದು ಮಗುವೂ ಕೂಡ ವಿದ್ಯಾಭ್ಯಾಸ ಹೊಂದುವಂತಾಗಬೇಕು. ಇದಕ್ಕಾಗಿ ಒಂದು ಊರಿಗೆ ಒಂದು ಸ್ಕೂಲು, ಒಂದು ಕಟ್ಟಡ, ಒಬ್ಬ ಉಪಾಧ್ಯಾಯರು ಹೀಗೆ ಮಾಡಿ. ಅದರಿಂದ ಎಷ್ಟು ಖರ್ಚಾಗುತ್ತದೆಯೋ ನೋಡೋಣ. ಇದರಿಂದಾಗ ತಕ್ಕ ಸಾಲವನ್ನೂ ರೈತರು ಹೊರುವುದಕ್ಕೆ ಸಿದ್ಧರಾಗಿದ್ದಾರೆ. ಅದು ಬಿಟ್ಟು ರೈತನಿಗೆ ನೇರವಾದ ಯಾವ ಪ್ರಯೋಜನವೂ ಆಗದೆ ಇರತಕ್ಕ ಕೆಲಸಗಳಿಗಾಗಿ ಸಾಲಮಾಡಿ ಅವನ ಮೇಲೆ ಸಾಲದ ಹೊರೆಯನ್ನು ಹೊರಿಸುತ್ತೇವೆಂದರೆ ಅದನ್ನು ಹೊರುವುದಕ್ಕೆ ಅವನು ಸಿದ್ಧನಾಗಿಲ್ಲ. ಅವನಿಗೆ ವಿದ್ಯಾಭ್ಯಾಸ ಒದಗಬೇಕು, ವ್ಯವಸಾಯದ ಸೌಕರ್ಯಗಳು ಒದಗಬೇಕು, ಮತ್ತು ಗೃಹಕೈಗಾರಿಕೆಗಳ (cottage industries) ಪ್ರಯೋಜನ ಅವನಿಗೆ ಒದಗಬೇಕು. ಹೀಗಾದರೆ ಮಾತ್ರ ಹಳ್ಳಿಗಳ ಉದ್ಧಾರ ಸಾಧ್ಯವೇ ಹೊರತು ಇಲ್ಲದೆ ಇದ್ದರೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ಇಷ್ಟನ್ನು ಹೇಳಿ, ಇದೇ ಸಂಬಂಧದಲ್ಲಿ ಮಾತನಾಡಲು ಅನೇಕ ಮಾನ್ಯ ಸದಸ್ಯರು ಕಾತರರಾಗಿರುವುದರಿಂದ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಮೊದಲನೆ ಪಾಂಚವಾರ್ಷಿಕ ಯೋಜನೆಯಲ್ಲಿ, ಬಳ್ಳಾರಿಯೂ ಸೇರಿ 48 ಕೋಟಿ ರೂಪಾಯಿಗಳವರೆಗೂ ಖರ್ಚಾಗಿದೆ. ಹೀಗೆ ಮಾತುವಾಗ ನಮ್ಮ ರಾಷ್ಟ್ರದ ವರಮಾನ ಸುಮಾರು ಶೇಕಡ 18ರಷ್ಟು ಹೆಚ್ಚಿದೆ ಎಂದು ನಮ್ಮ ಮಂತ್ರಿಗಳು ಹೇಳಿದ್ದಾರೆ. ಆದರೆ ನಿಜವಾಗಿ ನೋಡುವುದಾದರೆ ನಾವು ಎಲ್ಲಿದ್ದೆವೋ ಅಲ್ಲಿಯೇ ಇದ್ದೇವೆ. ಈಗ ಮುಖ್ಯವಾಗಿ ಯಾವುದೇ ಉದ್ಯಮವಾಗಲಿ ಅದನ್ನು ಸರ್ಕಾರದವರೇ ಆಗಲಿ ಅಥವ ಇತರರು ಯಾರೇ ಆಗಲಿ ಒಂದು ಯೋಜನೆ ಇಲ್ಲದೆ ಆ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಆ ಯೋಜನೆಯನ್ನು ನಡೆಸಬೇಕಾದರೆ ಸಾಧ್ಯವಾದಮಟ್ಟಿಗೆ ಎಷ್ಟು ವರ್ಕಬಲ್ಲೋ (workable), ಯಾವ ವಿಧದಲ್ಲಿ ದುಡ್ಡು ಲೋಪವಾಗುವುದಿಲ್ಲವೋ, ಯಾವುದು ಅವಶ್ಯಕವೋ ಅದಕ್ಕೆ ನಾವು ಹಣವನ್ನು ಖರ್ಚು ಮಾಡಬೇಕಾದದ್ದು ನ್ಯಾಯ. ನಮ್ಮ ದೇಶ ಬಡ ದೇಶ. ಈ ಯೋಜನೆಗಳಲ್ಲಿ ಒದಗಿಸಿರುವ ಹಣ ಎಷ್ಟೇ ದೊಡ್ಡದಾಗಿ ಕಂಡರೂ ಕೂಡ ನಮಗೆ ಕೊಡತಕ್ಕ ಹಣ ಬಹಳ ಅಲ್ಪವೆಂದು ಕಾಣುತ್ತದೆ. ನಮ್ಮ ಸರ್ಕಾರದವರು ಕಳುಹಿಸಿದ್ದ 250 ಕೋಟಿ ರೂಪಾಯಿಗಳ ಯೋಜನೆ 85 ಕೋಟಿ ರೂಪಾಯಿಗಳಿಗೆ ಇಳಿಯಿತು. ಇದು ನಮ್ಮ ಅವಶ್ಯಕತೆಗಳಿಗೆ ಸಾಕಾದಷ್ಟಿಲ್ಲ. ನಮ್ಮಲ್ಲಿರತಕ್ಕ ಬಡ ಜೀವನ ಮಟ್ಟವನ್ನು ಸಾಧ್ಯವಾದಮಟ್ಟಿಗೆ, ನಿತ್ಯ ಜೀವನಕ್ಕೆ ಒದಗಿಸಿಕೊಳ್ಳುವಮಟ್ಟಿಗೆ ಹೆಚ್ಚಿಸಬೇಕಾಗಿದ್ದರೆ, ಇದರ ನಾಲ್ಕಾರರಷ್ಟು ಹಣ ಆಗಬೇಕಾಗಿದೆ. ನಮ್ಮಲ್ಲಿ ಮೊದಲನಿಂದ ಒಂದು ಕೋರಿಕೆ ಇದ್ದೇ ಇದೆ. ಉತ್ತರ ದೇಶದಲ್ಲಿ ದೊರೆಯುವ ಸೌಲಭ್ಯ ದಕ್ಷಿಣ ದೇಶದಲ್ಲಿ ದೊರೆಯುವುದಿಲ್ಲ. ದಕ್ಷಿಣ ದೇಶದಲ್ಲಿ ಮೈಸೂರು ಹಿಂದೆ ಬಿದ್ದಿರುವುದು ನಮ್ಮ ದುರದೃಷ್ಟ. ರೈತರಿಗೆ ಸೌಲಭ್ಯ ಒದಗಿಸಬೇಕಾದದ್ದು ಆವಶ್ಯಕ, ಶೇಕಡ 80 ಮಂದಿ ಗ್ರಾಮಾಂತರಗಳಲ್ಲಿ ವಾಸಮಾಡುತ್ತಾರೆ. ಹಳ್ಳಿಯಿಂದ ಡಿಳ್ಳಿ ಎಂದು ಹೇಳುತ್ತಾರೆ. ಹಳ್ಳಿಗಳ ಪುರೋಭಿವೃದ್ಧಿಯಾದರೆ ಡಿಳ್ಳಿ ಉಳಿಯುತ್ತದೆ. ಈಗ ಹಾಗಾಗುತ್ತಿಲ್ಲ. ಹಳ್ಳಿಯನ್ನು ದೋಚಿಕೊಂಡು ಹೋಗಿ ಡಿಳ್ಳಿ ಕಟ್ಟುತ್ತಿದ್ದಾರೆ. ಹೀಗೆ ಎಷ್ಟು ದಿನ ಮಾಡಲು ಸಾಧ್ಯ ! ಈಗ ಹಳ್ಳಿಯವರ ಜೀವನ ಮಟ್ಟ ಹೇಗಿದೆ ಯೆಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು; ಹಳ್ಳಿಯವರ ವಿಚಾರದಲ್ಲಿ ನನಗೆ ಬಹಳ ಆದರಣೆಯಿದೆ, ಪಟ್ಟಣದಲ್ಲಿರತಕ್ಕ ಕೈಗಾರಿಕೋದ್ಯಮದವರಿಗೆ ಹೆಚ್ಚು ಆದಾಯವಿದೆ, ಅದರಂತೆ ಹಳ್ಳಿಯವರಿಗಿಲ್ಲ ಮತ್ತು ನೌಕರರಿಗೆ ಇರುವ ಸೌಲಭ್ಯಗಳು ಕೂಡ ಅವರಿಗಿಲ್ಲ ಎಂದು ಹೇಳಿದರು. ಈ ವಿಚಾರದಲ್ಲಿ ನನಗೂ ಕೂಡ ಅನುಭವ ಕಡಮೆಯಾಗಿಲ್ಲ; ಗ್ರಾಮಾಂತರಗಳ ತೊಂದರೆ ಮತ್ತು ಕಷ್ಟ, ಅಲ್ಲಿನವರ ಜೀವನ ಮಟ್ಟ ನನಗೆ ಚೆನ್ನಾಗಿ ಗೊತ್ತಿದೆ ಎಂದು ಖಂಡಿತವಾಗಿ ಹೇಳುತ್ತೇನೆ. ಏಕೆಂದರೆ ನಾನೂ ಒಬ್ಬ ಹಳ್ಳಿಯ ಪ್ರಜೆ, ಹಳ್ಳಿಯಿಂದ ಚುನಾಯಿತನಾಗಿ ಬಂದಿರುವವನು. ನನಗೆ ನಿಜವಾಗಿ ಹಳ್ಳಿಗರ ಕಷ್ಟಸುಖ ಗೊತ್ತಿದೆ. ಈಗ ಹಳ್ಳಿಯವರನ್ನು ಗಮನದಲ್ಲಿಟ್ಟು ಈ ಪಾಂಚ

(ಶ್ರೀ ಬಿ. ಹುಚ್ಚೇಗೌಡ.)

ವಾರ್ಷಿಕ ಯೋಜನೆಯನ್ನು ಪರಿಶೀಲಿಸೋಣ. ಕನಿಷ್ಠ ಪಕ್ಷ ನೂರು ರೂಪಾಯಿ ಆದಾಯ ಎಲ್ಲರಿಗೂ ಬರಬೇಕೆಂದು ಯೋಜನೆ ಮಾಡಿದ್ದಾರೆ. ಕೈಗಾರಿಕಾ ಉದ್ಯಮ ಮಾಡುವವರಿಗೆ ನೂರಾರು ರೂಪಾಯಿ ಕೊಡುತ್ತಾರೆ. ಅವರಿಗೆ ಮನೆ ಸೌಕರ್ಯವಿದೆ, ವಿದ್ಯಾ ಸೌಕರ್ಯವಿದೆ, ವೈದ್ಯ ಸೌಕರ್ಯವಿದೆ, ಕೈಗಾರಿಕೆಗಳಲ್ಲಿ ದುಡಿಯುವವರು ಮಾತ್ರವಲ್ಲದೆ ಅವರ ಕುಟುಂಬದವರೂ ಸಂಪಾದನೆ ಮಾಡಬಹುದು. ಅದೇ ಹಳ್ಳಿಗಳಲ್ಲಿ ಕುಡಿಯುವ ನೀರೇ ಇಲ್ಲ, ವೈದ್ಯ ಸಹಾಯ ಹತ್ತು ಮೈಲಿ ಹೋದರೂ ಸಿಕ್ಕುವುದಿಲ್ಲ. ಸಿಕ್ಕಿದರೂ ಒದಗಿಸಿಕೊಳ್ಳುವುದಕ್ಕೆ ಕೂಡ ಶಕ್ತಿಯಿಲ್ಲ. ಇಷ್ಟು ದಿವಸ ಉದಾಸೀನ ಮಾಡಿರುವಾಗ ಮುಂದಾದರೂ ಉದ್ಧಾರ ಮಾಡದಿದ್ದರೆ ದೇಶ ಮುಂದುವರಿಯುವುದಿಲ್ಲ. ಇಂಥ ವಿಚಾರದಲ್ಲಿ ನಾವು ಸರ್ಕಾರಕ್ಕೆ ಎಲ್ಲಾ ವಿಧದಲ್ಲೂ ಸಹಕಾರ ನೀಡುವುದಕ್ಕೆ ಸಿದ್ಧವಾಗಿದ್ದೇವೆ. ಸಂಬಳ ಸಾರಿಗೆ ವಿಚಾರದಲ್ಲಿ ಕನಿಷ್ಠ ಪಕ್ಷ ಜೀವನಕ್ಕಾಗುವಷ್ಟಾದರೂ ಕನಿಷ್ಠ ದರ್ಜೆಯವನ ಸಂಬಳ ಇರಬೇಕೆಂದು ಒತ್ತಾಯ ಮಾಡಿ ಹೇಳಿದ್ದೇನೆ. ಒಂದು ಸಾವಿರ ರೂಪಾಯಿಗಳಿಗೆ ಜಾಸ್ತಿಯಾಗಿ ಸಂಬಳ ಯಾರಿಗೂ ಕೊಡಕೂಡದೆಂದು ಈ ಸಭೆಯಲ್ಲಿ ಒಂದು ಒಮ್ಮತವಾದ ಅಭಿಪ್ರಾಯ ಸೂಚಿಸಿದೆವು. ಕನಿಷ್ಠ ಪರಿಮಿತಿ ವಿಚಾರ ಚರ್ಚೆ ಮಾಡಿದೆವು, ಒಂದು ನಿರ್ಣಯ ಮಾಡಲಾಯಿತು.

ಆಮೇಲೆ ಒಂದು ಸಮಿತಿ ಮಾಡಿದರು. ಆದರೆ ಆ ಸಮಿತಿಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 1,400 ರೂಪಾಯಿಗಳ ಸಂಬಳ ಶಿಫಾರಸ್ಸು ಮಾಡಿದ್ದಾರೆ. ಇದಕ್ಕೆ ಜವಾಬ್ದಾರರು ಯಾರು? ಇದಕ್ಕೆ ನಾವು ಹೊಣೆಯೆ? ಕನಿಷ್ಠ ಮಿತಿಯನ್ನು ನಿರ್ಧಾರ ಮಾಡಬೇಕು, ರೈತರಿಗೆ ಜೀವನ ನಡೆಸುವುದಕ್ಕೆ ಸಾಕಾದಷ್ಟು ದೊರೆಯಬೇಕು, ರೈತ ಮತ್ತು ಅವನ ಹೆಂಡತಿ ಮಕ್ಕಳು ಸುಖವಾಗಿ ಸಂಸಾರ ಮಾಡುವುದಕ್ಕೆ, ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕೆ, ಔಷಧೋಪಚಾರಗಳಿಗೆ, ಕಷ್ಟಗಳ ಪರಿಹಾರಕ್ಕೆ, ಅಗತ್ಯವಾಗಿ ಬೇಕಾದ್ದಕ್ಕೆ ತಕ್ಷಣ ಗ್ಯಾರಂಟಿ ಕೊಡಬೇಕು ಎಂದು ತಿಳಿಸಲು ಇಷ್ಟೆಲ್ಲಾ ಹೇಳುತ್ತಿದ್ದೇನೆಯೇ ಹೊರತು ಮತ್ತೆ ಬೇರೆ ಅಲ್ಲ. ಹೆಚ್ಚು ಸಂಬಳ ಪಡೆಯುವವರ ವಿಚಾರ ನಾನು ಹೇಳುವುದಿಲ್ಲ, ಅದು ಸರ್ಕಾರದವರ ಜವಾಬ್ದಾರಿ. ಇಲ್ಲಿಂದ ಮೈಸೂರಿಗೆ ಕಾರು ತೆಗೆದುಕೊಂಡು ಅಧಿಕಾರಿಗಳು ಹೋಗುವುದು, ಇತರರನ್ನು ಹಿಂದೆ ಓಡಿ ಎಂದು ಹೇಳುವುದು ಸರಿಯಲ್ಲ. ಇತರರಿಗೂ ಕಾರು ಕೊಟ್ಟು ರೇಸ್‌ಗೆ ಬಿಡಲಿ, ಆಗ ನೋಡೋಣ. ಆ ಅವಕಾಶ ಒದಗಿಸದೆ ಕೇಳುವುದು ಯಾವ ಧರ್ಮ? ಇಂಥ ಸನ್ನಿವೇಶ ತಪ್ಪಿಸಬೇಕು. ಮುಖ್ಯವಾಗಿ ನೀರಾವರಿ ಸೌಕರ್ಯ ಮಾಡಿಕೊಡಬೇಕು. ಮಳೆ ನಂಬಿ ಅದು 12 ತಿಂಗಳ ಮೇಲೆ ಬಂದರೆ ಏನೂ ಉಳಿಯುವುದಿಲ್ಲ. ಕೈಗಾರಿಕೆಗಳಲ್ಲಿ ಬಂಡವಾಳವಿಲ್ಲದೆ ಸಂಬಳ ತೆಗೆದುಕೊಳ್ಳುತ್ತಾರೆ. ರೈತನಾದರೋ ಬಂಡವಾಳ ಹಾಕಿ, ಭೂಮಿಯನ್ನುತ್ತು ಗೊಬ್ಬರ ಗೋಡು ಎಲ್ಲಾ ಹಾಕಿ ಬೆಳೆ ನಷ್ಟವಾದರೆ ಲುಕ್ಸಾನು ಹೊಂದಬೇಕಾಗುತ್ತದೆ. ಆದ್ದರಿಂದ ರೈತನ ಕಷ್ಟ ಪರಿಹಾರ ಮಾಡದಿದ್ದರೆ ಅವನು ಉಳಿಯುವುದಾದರೂ ಹೇಗೆ?

ಶ್ರೀ ಮ್ಯಾಸ್ಕರ್ನೆಸ್‌ರವರು ದೇಶ ಮುಂದುವರಿಯಬೇಕಾದರೆ ಕೈಗಾರಿಕೆಗಳು ಮುಂದುವರಿಯಬೇಕು, ದೊಡ್ಡ ದೊಡ್ಡ ನೀರಾವರಿ ಪ್ರಾಜೆಕ್ಟುಗಳಾಗಬೇಕು, ಸಣ್ಣ ಸಣ್ಣ ನೀರಾವರಿ ಕಾಂಗಾರಿಗಳಲ್ಲಿ ಉತ್ಪತ್ತಿ ಕಡಮೆ ಎಂದು ಹೇಳಿದರು, ನಿಜ, ಅದನ್ನು ಒಪ್ಪಿಕೊಳ್ಳೋಣ. ಮೈಸೂರು ಬಹಳ ಹಿಂದುಳಿದಿದೆ. ಉದಾಹರಣೆಗೆ ಆಂಧ್ರ ನೋಡೋಣ. ಅಲ್ಲಿ ತುಂಗಭದ್ರ ಪ್ರಾಜೆಕ್ಟ್—18 ಕೋಟಿ 96 ಲಕ್ಷ ರೂಪಾಯಿ, ನಂದಿಕೊಂಡ ಪ್ರಾಜೆಕ್ಟ್ 122 ಕೋಟಿ ರೂಪಾಯಿ—ಹೀಗೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಮಾಡಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ನಾವು ಎಲ್ಲವನ್ನೂ ಟ್ಯಾಪ್ ಮಾಡಿದ್ದೇವೆ. ಅವರು ಈಗ ಶುರು ಮಾಡಿದರೆ ಅದಕ್ಕೆ ನಾವು ಜವಾಬ್ದಾರರೇನು?

Sri V. M. MASCARENHAS.—May I bring it to the notice of the Hon'ble Member that he forgets that the Finance Minister of Government of India has asked the Reserve Bank to stop honouring the over-drafts of Andhra Government.

ಶ್ರೀ ಬಿ. ಹುಚ್ಚೇಗೌಡ.—ವಿದ್ಯುಚ್ಛಕ್ತಿ ಮುಖ್ಯವಾದುದೆಂದು ಹೇಳಿದರು. 1946ನೆಯ ಇಸವಿಯಲ್ಲಿ ತೆಗೆದುಕೊಂಡ ಕೆಲಸ ಹತ್ತು ವರ್ಷಗಳಾದರೂ ಇನ್ನೂ ಆಗಿಲ್ಲ. ವಿದ್ಯುಚ್ಛಕ್ತಿ ವಿಚಾರದಲ್ಲಿ ಆಂಧ್ರದಲ್ಲಿ ಸಾಧಿಸಿರುವಷ್ಟು ನಮ್ಮಲ್ಲಿ ಸಾಧಿಸಿಲ್ಲ. 1901ನೆಯ ಇಸವಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಬಳಕೆಗೆ ಬಂತು; 1906ನೆಯ ಇಸವಿಯಲ್ಲಿ ಅದು ಬೆಂಗಳೂರಿಗೆ ಬಂತು. ನಮ್ಮಲ್ಲಿ ಇದುವರೆಗೆ 800 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ, ಶೇಕಡ ಐದು ಗ್ರಾಮಗಳಿಗೆ ಕೂಡ ಒದಗಿಸಿಲ್ಲ. 50 ವರ್ಷಗಳಾದರೂ ಶೇಕಡ ಐದು ಗ್ರಾಮಗಳಿಗೆ ಒದಗಿಸದಿದ್ದರೆ ಹೇಗೆ? ಆಂಧ್ರದವರು ಸುಮಾರು ಎರಡು ಮೂರು ವರ್ಷಗಳಲ್ಲಿ ಶೇಕಡ 25 ಗ್ರಾಮಗಳಿಗೆ ಒದಗಿಸಿದ್ದಾರೆ. ಆಮೇಲೆ ಪಂಪಿಂಗ್ ಸೆಟ್ಸ್ ಇದುವರೆಗೆ ಸುಮಾರು ಏಳು ಸಾವಿರ ಕೊಟ್ಟಿದ್ದಾರೆ. ದೇಶದಲ್ಲಿ 12 ಲಕ್ಷ ಜನ ರೈತರಿರುವಾಗ ಏಳು ಸಾವಿರ ಪಂಪುಗಳು ಯಾವ ಮೂಲೆಗೆ ಆಗುತ್ತವೆ? ಕೆಲವು ದಿನಗಳಲ್ಲಿ ದರ ಅರ್ಧಾಣೆಯಿರುವುದನ್ನು ಒಂದಾಣೆ ಮಾಡುತ್ತಾರೆ. ಹೀಗೆ ಕಡಮೆ ಮಾಡುವುದು, ಹೆಚ್ಚಿಸುವುದು ಇದ್ದೇ ಇದೆ. ಈ ರೀತಿಯಾಗಿ ನಮ್ಮ ದೇಶದಲ್ಲಿ ಮುಂದುವರಿದ ಒಂದು ತತ್ವವನ್ನು ಅನುಸರಿಸುವಾಗ ರೈತರಿಗೆ ಉಪಕಾರ ಮಾಡೋಣವೆಂಬ ಮನಸ್ಸಿಲ್ಲ.

ಎರಡನೆಯದು ರೈತರು ಮುಂದುವರಿಯುವುದಕ್ಕೆ ಮುಖ್ಯವಾಗಿ ಬೇಕಾದದ್ದು ವಿದ್ಯಾಭ್ಯಾಸ. ಶ್ರೀ ಮೂಡಲಗಿರಿಗೌಡರು ಆ ವಿಚಾರ ಹೇಳಿದ್ದಾರೆ. ಯೋಜನೆಯಲ್ಲಿ 4,250 ಸ್ಕೂಲುಗಳಾಗಬೇಕೆಂದು ಹೇಳಿದ್ದಾರೆ. ಮೊದಲಿನಿಂದಲೂ ಇದನ್ನು ನಾನು ಹೇಳುತ್ತಿದ್ದೇನೆ. 2,250 ಸ್ಕೂಲುಗಳನ್ನು ಮಾತ್ರ ಈಗ ಕೊಡಬೇಕೆಂದಿದ್ದಾರೆ. ನಿನ್ನೆ ಮದರಾಸಿನಲ್ಲಿ ಹಣಕಾಸಿನ ಸಚಿವರು ಹೇಳಿದ ರೀತಿಯಲ್ಲಿ ಒತ್ತಾಯ ಶಿಕ್ಷಣ ಜಾರಿಗೆ ತರಲು ನಾಲ್ಕು ವರ್ಷ ಅವಕಾಶವಿದೆ. ಹತ್ತು ವರ್ಷಗಳಲ್ಲಿ ಈ ಕೆಲಸವಾಗಬೇಕಾದ್ದರಿಂದ ಹೆಚ್ಚು ವೇಗದಲ್ಲಿ ಕೆಲಸ ನಡೆಯಬೇಕು. ಇನ್ನು ನಾಲ್ಕು ವರ್ಷಗಳಲ್ಲಿ ಪ್ರತಿಯೊಬ್ಬ ಹುಡುಗನೂ ಶಾಲೆಗೆ ಹೋಗುವುದಕ್ಕೆ ಅವಕಾಶ ಮಾಡಬೇಕು. ಏಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದರಲ್ಲಿ 45 ಲಕ್ಷ ರೂಪಾಯಿಗಳನ್ನು ಕೊಟ್ಟರೆ 4,250 ಸ್ಕೂಲುಗಳನ್ನು ತೆರೆಯಬಹುದು. ಅದಕ್ಕೇಕೆ ಒದ್ದಾಡುವುದು? ಯಾರು ಹೆಚ್ಚಾಗಿ ಓದುತ್ತಾರೋ ಅವರಿಗೇ ಏಳು ಕೋಟಿ ಚಿಲ್ಲರೆ ರೂಪಾಯಿಗಳಲ್ಲಿ ಬಹುಭಾಗ ಖರ್ಚಾಗುತ್ತಿದೆ, ಓನಾಮ ಕಲಿಸುವುದಕೆ

ಅಷ್ಟಾಗಿ ಖರ್ಚಾಗುತ್ತಿಲ್ಲ. ಆಮೇಲೆ ಬೇಸಿಕ್ ಟ್ರೈನಿಂಗ್ ಬೇಕಾದರೆ ಕೊಡಬಹುದು. ಅದಕ್ಕೆ ಯಾವ ತರಹ ಇರಬೇಕೆಂಬುದನ್ನು ಯೋಚನೆ ಮಾಡಬಹುದು. ಒಂದು ಟೆಸ್ಟ್ ಇಟ್ಟು ಮೆರಿಟ್ ಮೇಲೆ ಕಾಲೇಜಿಗೆ ಹೋಗಬೇಕು, ಕೈಗಾರಿಕೆಗೆ ಹೋಗಬೇಕು ಎಂದು ಹೇಳುತ್ತಾರಂತೆ. ಹೀಗೆ ಮಾಡಿ ಕೆಲವರಿಗೆ ಶಿಕ್ಷಣ ಕೊಟ್ಟು ಬಾಕಿಯವರಿಗೆ ಬೇಡವೆಂದು ಹೇಳಿದರೆ ಹೇಗೆ? ರೂರಲ್ ಕಾಲೇಜಸ್ ಮಾಡಬೇಕು. ಯಾರಿಗೆ ಹಳ್ಳಿಗಳಲ್ಲಿ ವಿದ್ಯಾಭ್ಯಾಸ ಸೌಕರ್ಯ ಸಿಕ್ಕಿಲ್ಲವೋ ಅವರ ಮನೆ ಬಾಗಿಲಿಗೆ ಹೋಗಿ ವಿದ್ಯಾಭ್ಯಾಸ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಹಳ್ಳಿಯವರ ಹಣ ತಂದು ವಿದ್ಯಾಭ್ಯಾಸ ಮಾಡಿರುವವರು ಹೋಗಿ ಬಾಕಿಯವರಿಗೆ ಪಾಠ ಕಲಿಸಬೇಕು. ಇದು ನ್ಯಾಯವಾದ ಬೇಡಿಕೆ, ಇದಕ್ಕೆ ಸರ್ವರೂ ಬೆಂಬಲ ಕೊಡುತ್ತಾರೆ. ವಿದ್ಯಾಭ್ಯಾಸ ಮಾಡಲು ಸರ್ವರಿಗೂ ಅವಕಾಶವಿರಬೇಕು.

ಮಣ್ಣು ಸವೆದು ಹೋಗುವುದರಿಂದ ಬಹಳ ಮಟ್ಟಿಗೆ ಭೂಮಿಸಾರ ಕೊಚ್ಚಿಹೋಗುತ್ತದೆ ಎಂದು ಪ್ರವೀಣರು ಹೇಳಿದ್ದಾರೆ. 30 ವರ್ಷಗಳಲ್ಲಿ ಏಳು ಇಂಚು ಮಣ್ಣು ಕೊಚ್ಚಿ ಹೋಗಿದೆ. ಇದರಿಂದ ದಕ್ಷಿಣ ಪ್ರದೇಶದಲ್ಲಿ ಯಾವ ಬೆಳೆಯನ್ನೂ ಲಾಭಕರವಾಗಿ ಬೆಳೆಯುವುದಕ್ಕಾಗುವುದಿಲ್ಲ. ಸಾಧ್ಯವಾದಷ್ಟು ಮಣ್ಣು ಕೊಚ್ಚಿ ಹೋಗುವುದನ್ನು ತಡೆಗಟ್ಟುವುದಕ್ಕೆ ಖರ್ಚು ಮಾಡಬೇಕು. ಈಗ ಒದಗಿಸಿರುವ ಸುಮಾರು 13 ಲಕ್ಷ ರೂಪಾಯಿಗಳು ಏನೇನೂ ಸಾಲದು ; ಸಾಕಷ್ಟು ಒದಗಿಸಬೇಕು.

ಫಾರೆಸ್ಟ್ ಇಲಾಖೆ ವಿಚಾರ ಹೇಳುವಾಗ ಫಾರೆಸ್ಟ್ ಆಫೀಸರು ಮಾಡತಕ್ಕ ಕೆಲಸವನ್ನು ಶ್ರೀ ಮಾಸ್ಕರನ್ ಹ್ಯಾಸ್‌ರವರು ಸರಿಯಾಗಿ ಹೇಳಿದ್ದಾರೆ. ಈಗ ಭದ್ರಾವತಿಗೆ ಸೌದೆ ಸರಭರಾಯಿ ಮಾಡುತ್ತಿದ್ದಾರೆ. ಅಲ್ಲಿಗೆ ಎಂಟು ಲಕ್ಷ ರೂಪಾಯಿಗಳ ಸೌದೆ ಸರಬರಾಯಿ ಮಾಡಿದೆಯೆಂದು ಲೆಕ್ಕ ಕೊಡುವುದಕ್ಕೆ ಫಾರೆಸ್ಟ್ ಇಲಾಖೆಯಿರಬೇಕೆ? ಹತ್ತು ಮರ ಕಡಿದರೆ ಇಪ್ಪತ್ತು ಮರ ಬೆಳೆಸಬೇಕು, ಕಡಿದುದಕ್ಕೆ ತಕ್ಕಂತೆ ಬೆಳೆಸಬೇಕು. ಹಿಂದೆ ಪ್ರತಿಯೊಬ್ಬ ಆಫೀಸರೂ ಇಷ್ಟು ಮರ ಬೆಳೆಸಬೇಕೆಂಬ ಕಡ್ಡಾಯವಿತ್ತು. ಯೂರೋಪಿಯನ್ ಆಫೀಸರುಗಳಿದ್ದಾಗ ಕೆಲಸ ಚೆನ್ನಾಗಿ ಮಾಡುತ್ತಿದ್ದರು.

2-30 P.M.

ಆಗಲೆ ಶ್ರೀ ಟಿ. ಹನುಮಯ್ಯನವರು ಹೇಳಿರತಕ್ಕದ್ದರಲ್ಲಿ ತಪ್ಪೇನಿದೆ? ಯಾರ್‍ಯಾರಿಗೆ ಈ ದಿವಸ ಉಳುವುದಕ್ಕೆ ಭೂಮಿಯಿಲ್ಲವೋ ಅಂಥವರಿಗೆ ಈ ಫಾರೆಸ್ಟ್ ಲ್ಯಾಂಡ್‌ನಲ್ಲಿ ಜಮೀನು ಕೊಡಬೇಕೆಂದು ಹೇಳಿದ್ದಾರೆ. ಆ ರೀತಿ ರೈತರಿಗೆ ಈ ಜಮೀನನ್ನು ಸಾಗುವಳಿಗೆ ಬಿಟ್ಟುಕೊಟ್ಟರೆ ಆ ಜಮೀನೂ ಫಲವತ್ತಾಗುತ್ತದೆ. ಆ ರೈತನಿಗೂ ಸ್ವಲ್ಪ ಅನುಕೂಲವಾಗುತ್ತದೆ. ಸರ್ಕಾರಕ್ಕೆ ಕಂದಾಯ ಬರುತ್ತದೆ. ಫಾರೆಸ್ಟ್ ಇಲಾಖೆಯವರು ಈ ದಿವಸ ಮರಗಳನ್ನು ಬೆಳೆಸತಕ್ಕ ಕೆಲಸವನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಅದಕ್ಕಾಗಿ ತಾವು ಎಲ್ಲೆಲ್ಲಿ ಮರಗಳಿಲ್ಲದೆ ಬೈಲು ಪ್ರದೇಶವಾಗಿದ್ದು ಅಂಥ ಜಮೀನು ನಿರರ್ಥಕವಾಗಿ ಅರಣ್ಯ ಇಲಾಖೆಯವರ ವಶದಲ್ಲಿ ಹಾಳು ಬಿದ್ದಿರುವುದಕ್ಕೆ ಬದಲಾಗಿ ಅಂಥ ಪ್ರದೇಶದಲ್ಲಿ ರೈತನಿಗೆ ಸಾಗುವಳಿ ಮಾಡಲು ಅಲ್ಲಿ ಜಮೀನು ಕೊಟ್ಟ ಪಕ್ಷದಲ್ಲಿ ಆತನಾದರೂ ತನ್ನ ವರ್ಷದ ವೆಚ್ಚಕ್ಕೆ ಸರಿಹೋಗುವಷ್ಟು ಆದಾಯ ಪಡೆಯಲು ಮಾವಿನ ಮರಗಳನ್ನೋ, ಹುಣಿಸೆ ಮರಗಳು, ಹೊಂಗೆ ಅಥವಾ ಇನ್ನಾವುದಾದರೂ ಜಾತಿಯ ಮರಗಳನ್ನೋ ತನ್ನ ನೆರಳಿಗೂ ಮತ್ತು ಆ ಸಂಪಾದನೆ ದೃಷ್ಟಿಯಿಂದಲಾದರೂ ಬೆಳೆಸುತ್ತಾನೆ. ಅಷ್ಟಕ್ಕಾದರೂ ತಾವು ಈ ದಿವಸ ಅನುಕೂಲ ಮಾಡಿಕೊಡುತ್ತಿಲ್ಲ. ತಾವು ವರ್ಷಕ್ಕೆ ಎಷ್ಟು ಮರಗಳನ್ನು ಕಡಿಯುತ್ತೀರೋ ಅದಕ್ಕೆ ಎರಡರಷ್ಟು ಮರಗಳನ್ನಾದರೂ ಬೆಳಸದಿದ್ದರೆ ಖಂಡಿತ ನಮ್ಮ ಈ ವನಸಂಪತ್ತು ಉಳಿಯುವುದಿಲ್ಲ. ನೂರಾರು ವರ್ಷಗಳಿಂದ ಸುಮ್ಮನೆ ಆ ಲಾಂಟಾನಾ ಗಿಡಗಳು ವಿನಾ ಮತ್ತೇನೂ ಬೆಳೆಯದಿದ್ದಾಗ್ಯೂ ಅದನ್ನೂ ಸಹ ಒಂದು ಅರಣ್ಯವೆಂದು ತಾವು ಹೇಳುತ್ತೀರಿ. ಇಂಥ ನಿರರ್ಥಕ ಪ್ರದೇಶವನ್ನು ಜಮೀನಿಲ್ಲದ ರೈತನಿಗೆ ವ್ಯವಸಾಯಕ್ಕಾದರೂ ಕೊಡಿ ಎಂದು ಕೇಳಿದರೆ ಅದು ತಪ್ಪೇನು? ತಾವು ಕಾಡನ್ನು ಬೆಳಸಬೇಡಿ ಎಂದು ಯಾರೂ ಹೇಳುವುದಿಲ್ಲ. ಆದರೆ ತಾವು ಈ ದಿವಸ ನೀವು ಮರಗಳನ್ನು ಬೆಳೆಸದೆ, ಆ ಭೂಮಿಯನ್ನು ರೈತನಿಗೂ ಕೊಡದೆ, ಹಾಗೇಯೇ ಪಾಳು ಬಿದ್ದಿರುವುದಕ್ಕೆ ಮಾತ್ರ ಅವಕಾಶ ನೀಡಬೇಡಿ ಎಂದು ಹೇಳುತ್ತೇನೆ. ಆದರೆ ತಾವು ರೈತನಿಗೆ ಈ ಪಾಳು ಭೂಮಿಯನ್ನು ಉಚಿತವಾಗಿ ಕೊಡುತ್ತೇವೆಂಬ ಒಂದು ಭರವಸೆ ಕೊಡುವುದಾದರೆ ತಾವು ಈ ದಿವಸ ಆ ಒಂದು ಎಕರೆ ಪ್ರದೇಶದಲ್ಲಿ ಈ ಮರಗಳನ್ನು ಬೆಳೆಸಲು 50 ರೂಪಾಯಿಗಳ ಪ್ರಕಾರ ಖರ್ಚು ಮಾಡುತ್ತಿರುವುದೇ ಬೇಡ ಆತನೇ ಫ್ರೀಯಾಗಿ ಮರಗಳನ್ನು ಬೆಳಸಿ ಕೊಡುತ್ತಾನೆ. ಈ ದಿವಸ ಅನೇಕ ಕಡೆ ಹಾಗೆ ಜಮೀನನ್ನು ಉಚಿತವಾಗಿ ಕೊಟ್ಟಿದ್ದರಿಂದ ಅನೇಕ ಕಡೆ ಆ ಗುಂಡು ತೋಪುಗಳು ಇರುವುದಕ್ಕೆ ಕಾರಣವಾಯಿತು. ತಾವು ಕಾಡು ಬೆಳಸಿ—ಇಲ್ಲವೆ ರೈತರಿಗೆ ಸಾಗುವಳಿಗಾದರೂ ಕೊಡಿ, ಹಾಗೆ ಪಾಳು ಬಿದ್ದಿರಲು ಮಾತ್ರ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ.

ವೈದ್ಯಬಾಬು:

ಇನ್ನು ತಾವು ಈ ವೈದ್ಯ ಬಾಬಿನಲ್ಲಿ ಆಯುರ್ವೇದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ವಿದ್ಯಾಭ್ಯಾಸ :

ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಅವಿದ್ಯಾವಂತ ಜನಾಂಗವನ್ನು ಪೂರ್ಣ ವಿದ್ಯಾವಂತರನ್ನಾಗಿ ಮಾಡತಕ್ಕಂಥ ಭರವಸೆಯನ್ನು ನೀವೀಗ ದೇಶಕ್ಕೆ ಉಂಟುಮಾಡಬೇಕು.

ಕೈಗಾರಿಕೆಗಳು :

ಈ ದಿವಸ ಕೇಂದ್ರ ಸರ್ಕಾರ ಈ ಗೃಹಕೈಗಾರಿಕೆಗಳಿಗೆಂದು ಲಕ್ಷಾಂತರ ರೂಪಾಯಿಗಳನ್ನು ಹಾಳುಮಾಡುತ್ತಿದೆ. ಈ ಕೈಗಾರಿಕೆಗಳ ಅಭಿವೃದ್ಧಿಗೆ ಪ್ರಚಾರಕರನ್ನಿಟ್ಟು ಅವರಿಗೆ ತಿಂಗಳೊಂದಕ್ಕೆ 100-125 ರೂಪಾಯಿಗಳ ಪ್ರಕಾರ ಸಂಬಳ ಸಾರಿಗೆಗಳನ್ನು ಕೊಡುತ್ತಿದ್ದಾರೆ. ಜನರಿಗೆ ಈ ಬಾಬಿನಲ್ಲಿ ವಿಶೇಷ ಹಣವನ್ನು ಸಾಲದ ರೂಪವಲ್ಲಿ ಕೊಟ್ಟಿದ್ದಾರೆ. ಆದರೆ ಹೀಗೆ ಸಾಲವನ್ನು ಯಾವ ಉದ್ದೇಶದಿಂದ ಕೊಟ್ಟಿದ್ದಾರೆ ಎನ್ನುವುದೇ ಗೊತ್ತಾಗುತ್ತಿಲ್ಲ. ಆ ಕೇಂದ್ರ ಸರ್ಕಾರದವರು ಹೀಗೆ ಎಷ್ಟೋ ಹಣವನ್ನು ಈ ಸಂಸ್ಥಾನದಲ್ಲೇ ಅನೇಕರಿಗೆ ನಮ್ಮ ಸರ್ಕಾರಕ್ಕೂ ಕೂಡ ಗೊತ್ತಿಲ್ಲದ ಹಾಗೆ ಸಾಲ ಮಂಜೂರು ಮಾಡಿದ್ದಾರೆ. ಆದರೆ ಈ ರೀತಿ ಸ್ಟೇಟ್ ಗೌರ್ನ್‌ಮೆಂಟಿಗೆ ತಿಳಿಸದಂತೆ ಕೇಂದ್ರದವರು ನೇರವಾಗಿ ಸಾಲ ಮಂಜೂರು ಮಾಡತಕ್ಕಂಥ ಪದ್ಧತಿ ಸರಿಯಲ್ಲ. ಇದನ್ನ ತಪ್ಪಿಸಬೇಕೆಂದು ಹೇಳುತ್ತೇನೆ.

(ಶ್ರೀ ಬಿ. ಹುಚ್ಚೇಗೌಡ.)

ಕೆರೆ-ಕಟ್ಟೆಗಳ ಯೋಜನೆಗಳು :

ದೊಡ್ಡ ದೊಡ್ಡ ಜಲಾಶಯಗಳನ್ನು ದೇಶದಲ್ಲಿ ಇನ್ನೂ ಹೆಚ್ಚು ಮಾಡಬೇಕು. ರೈತನಿಗೆ ಪೆರಿನಿಯಲ್ ಸಪ್ಲೆ ಆಫ್ ವಾಟರ್ ಇರುವಂತೆ ಯಾವ ತರದ ಏರ್ಪಾಟುಗಳನ್ನು ಮಾಡಬೇಕೆಂಬ ಬಗ್ಗೆ ಸರ್ಕಾರದವರು ತೀವ್ರ ಗಮನ ಕೊಡಬೇಕು. ನದಿಗಳಲ್ಲಿ ನೀರು ಉಪಯೋಗವಿಲ್ಲದ ಹಾಗೆಯೇ ಹರಿದು ಹೋಗುತ್ತಿರುವಂಥ ಕಡೆಗಳಲ್ಲಿ ಈ ಕೆರೆಗಳನ್ನು ಕಟ್ಟಿಸತಕ್ಕ ಕಾರ್ಯ ಕೈಗೊಳ್ಳಲೇಬೇಕು. ಆದರೆ ಈ ದಿವಸ ಈ ಯೋಜನೆಯಲ್ಲಿ ಸರ್ಕಾರದವರು ಕಪಿಲಾ ನದಿಗೆ ಅಡ್ಡಗಟ್ಟಿ ಹಾಕತಕ್ಕಂಥ ಒಂದು ಯೋಜನೆಯನ್ನು ಮಾತ್ರ ಕೈಗೊಂಡಿದ್ದಾರೆ. ಇದು ಸಾಲದು. ಹೇಮಾವತಿ ನದಿಗೂ ಅಡ್ಡಗಟ್ಟಿ ಹಾಕತಕ್ಕ ಯೋಜನೆಯನ್ನು ಸೇರಿಸಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ ಮತ್ತು ಒತ್ತಾಯಪಡಿಸುತ್ತೇನೆ.

ಗಣಿ ಕೈಗಾರಿಕೆಗಳ ವಿಚಾರ.—ಈ ಗಣಿ ಮತ್ತು ಕೈಗಾರಿಕೆಗಳ ವಿಚಾರದಲ್ಲಿ ಎರಡು ಮಾತುಗಳನ್ನಾಡಬಯಸುತ್ತೇನೆ. ಈ ದಿವಸ ನಮ್ಮಲ್ಲಿ ಸಿಮೆಂಟಿಗೆ ಬಹಳ ತಾಪತ್ರಯವಿದೆ. ಈ ದಿವಸ ನಾವು ಈ ಸಿಮೆಂಟನ್ನು ದಕ್ಷಿಣ ಅಮೇರಿಕಾದಿಂದ ತರಿಸಿಕೊಳ್ಳುತ್ತಿದ್ದೇವೆ. ಆದುದರಿಂದ ನಾವು ಇನ್ನಾದರೂ ಆ ಪರದೇಶಗಳ ಸಹಾಯದ ಮೇಲೆ ನಿಲ್ಲಲು ಆಸೆಪಡತಕ್ಕದ್ದನ್ನು ಕೈಬಿಟ್ಟು ಇಲ್ಲೇ ಈ ಸಿಮೆಂಟನ್ನು ತಯಾರಿಸಲು ಕೂಡಲೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಸರ್ಕಾರದವರು ಒಂದು ಸಮಿತಿಯನ್ನು ನೇಮಕಮಾಡುವುದಾಗಿ ತಿಳಿಸಿದ್ದರು. ಆದರೆ ಇಲ್ಲಿಯವರೆಗೂ ಯಾವ ಒಂದು ಸಮಿತಿಯನ್ನು ಮಾಡಿಲ್ಲ. ಈಗಲಾದರೂ ಕೂಡಲೇ ಇಲ್ಲಿ ಒಂದು ಸಿಮೆಂಟ್ ಕಾರ್ಖಾನೆಯನ್ನು ತೆರಯಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಈ ರಿಫ್ರಾಕ್ಟರಿ ಬ್ರಿಕ್ಸನ್ನು ತಯಾರಿಸಲು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಬೇಕು. ಇಂಪ್ರೂವ್ಡ್ ಫರ್ನೇಸ್‌ಗಳನ್ನು ತಯಾರಿಸಲು ಕಾರ್ಯಕ್ರಮ ಕೈಗೊಳ್ಳಬೇಕಾಗಿದೆ. ಈ ಬೆನಿಫಿಸಿಯೇಷನ್ ಆಫ್ ಮ್ಯಾಂಗನೀಸ್ ಓರ್ಸ್ ಎಕ್ಸ್ಪೆರಿಮೆಂಟನ್ನು ಮಾಡಬೇಕೆಂದು ಹೇಳುತ್ತೇನೆ. ಇಂಡಿಯಾ ದೇಶದಲ್ಲಿ ಈ ಬಗ್ಗೆ ಎಲ್ಲಿಯೂ ದೊಡ್ಡ ಕೈಗಾರಿಕೆಗಳಿಲ್ಲ. ನಮ್ಮಲ್ಲಿ ಈ ಡೀಹೈಡ್ರೇಟೆಡ್ ಲೈಮ್, ಗ್ಲಾಸ್‌ಷೀಟ್ಸ್, ಮತ್ತು ಸಿಲಿಕಾ ಇಂಡಸ್ಟ್ರಿ, ಗ್ಲಾಸ್ ಇಂಡಸ್ಟ್ರಿ ಇತ್ಯಾದಿ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶವಿದೆ. ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಈ ಯೋಜನೆಯಲ್ಲಿ ಸೇರಿಸಿಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಒಂದು ಸ್ಟೋನ್‌ವೇರ್ ಪಾಟರೀಸ್ ಕೈಗಾರಿಕೆಯನ್ನು ತೆರೆಯಲು ಪ್ರಾರಂಭಿಸಿದ್ದು ಈಚೆಗೆ ಹಾಗೆಯೇ ನಿಂತು ಹೋಯಿತು. ಆ ತಾಲ್ಲೂಕಿನಲ್ಲಿ ಅನೇಕ ತರಹ ಮೆಟಲುಗಳು ದೊರೆಯುತ್ತವೆ. ಅನೇಕ ಯೋಜನೆಗಳನ್ನು ಅಲ್ಲಿ ಪ್ರಾರಂಭಿಸಲು ಅವಕಾಶವಿದೆಯೆಂದು ನಾನು ಕೇಳುತ್ತೇನೆ. ಸರ್ಕಾರದವರು ಈ ಗಣಿಗಳ ವಿಚಾರದಲ್ಲಿ ತೀವ್ರಗಮನ ಕೊಡಬೇಕೆಂದು ಒತ್ತಾಯಪಡಿಸುತ್ತೇನೆ.

ಅಮೃತಮಹಲ್ ಇಲಾಖೆ.—ಇನ್ನು ನಮ್ಮಲ್ಲಿ ಅಮೃತಮಹಲ್ ಇಲಾಖೆಯಲ್ಲಿ ಅನೇಕ ಉತ್ತಮ ತಳಿ ರಾಸುಗಳಿವೆ. ಆದರೆ ಅವುಗಳ ಮೇಲಿನ ಬಗ್ಗೆ ಒಂದು ಸಾಧಾರಣೆಯನ್ನೂ ಈ ವರೆಗೆ ನಡೆಸಿಲ್ಲ. ಈ ರಾಸುಗಳಿಗೆ ಕಾನ್ಸೆಂಟ್ರೇಟೆಡ್ ಫುಡ್ಡನ್ನು ತಯಾರಿಸತಕ್ಕ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಸ್ಕೀಮನ್ನು ತಯಾರಿಸಿ—ಆ ಬಗ್ಗೆ ಹಣವನ್ನು ಕೂಡ ಒದಗಿಸಿದ್ದರು. ಆ ಬಗ್ಗೆ ಇತ್ತೀಚೆಗೆ ಏನಾಯಿತೆಂಬುದೇ ತಿಳಿಯಲಿಲ್ಲ. ಈ ಯೋಜನೆಯನ್ನೂ ಕೂಡ ಈ ಪ್ಲಾನ್ ಪೀರಿಯೆಡ್ಡಿನಲ್ಲಿ ಕಾರ್ಯರೂಪಕ್ಕೆ ತರಬೇಕೆಂದು ಹೇಳಿ ಈ ದಿವಸ ನಮ್ಮ ದೇಶದಲ್ಲಿ ಅಭಿವೃದ್ಧಿಯಾಗಬೇಕಾಗಿರತಕ್ಕ ವಿದ್ಯಾಭ್ಯಾಸ ಮತ್ತು ವ್ಯವಸಾಯಾಭಿವೃದ್ಧಿಗಾಗಿ ಹೆಚ್ಚು ಗಮನಕೊಟ್ಟು ಈ ಯೋಜನೆಯನ್ನು ಬೇಗ ಜಾರಿಗೆ ತರಬೇಕೆಂದು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ, ಅಧ್ಯಕ್ಷರೇ ನಾನು ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಬಗ್ಗೆ ಎರಡು ಉದ್ದೇಶಗಳನ್ನು ತಿಳಿಸಬೇಕೆಂದು ಇಷ್ಟಪಡುತ್ತೇನೆ.

ಎನ್. ಇ. ಎಸ್. ಡೆವಲಪ್‌ಮೆಂಟ್ ಬ್ಲಾಕ್ಸ್.—ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ನಮ್ಮ ದಾವಣಗೆರೆ ತಾಲ್ಲೂಕಿಗೆ ಈ ಎನ್. ಇ. ಎಸ್. ಡೆವಲಪ್‌ಮೆಂಟ್ ಬ್ಲಾಕುಗಳನ್ನು ಕೊಟ್ಟಿದ್ದಾರೆ. ಅಲ್ಲಿ ಈಗ ಕೆಲಸ ನಡೆಯುತ್ತಿದೆ. ಆದರೆ ಇವುಗಳ ಕೆಲಸ ಇನ್ನೂ ಹೆಚ್ಚಾಗಿ ಮುಂದುವರಿಯಬೇಕು. ಅಲ್ಲಿ ಇನ್ನೂ ಅನೇಕ ಹಳ್ಳಿಗಳಿಗೆ ಈ ಯೋಜನೆಯನ್ನು ವಿಸ್ತರಿಸಬೇಕಾಗಿದೆ. ಈ ದಿವಸ ಹರಿಹರದ ರೈಲ್ವೆ ಲೈನಿನ ಒಂದು ಭಾಗದ ಕೆಲವು ಗ್ರಾಮಗಳಿಗೆ ಇದನ್ನು ಕೊಟ್ಟಿರುವುದರಿಂದ ಇನ್ನೊಂದು ಭಾಗದ ರೈಲ್ವೆ ಲೈನಿನವರೂ ತಮಗೂ ಈ ಬ್ಲಾಕುಗಳನ್ನು ಕೊಡಿಸಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಒಂದು ಭಾಗದವರಿಗೆ ಕೊಡಿಸಿ ಮತ್ತೊಂದು ಭಾಗದವರಿಗೆ ಕೈಬಿಟ್ಟಿದ್ದೀರಿ, ಹೀಗೆ ಮಾಡಲು ನಿಮಗೆ ನಾವೇನು ಮಾಡಿದ್ದೇವು? ಎಂದು ಕೇಳುತ್ತಿದ್ದಾರೆ. ಆದ ಪ್ರಯುಕ್ತ ತಾವು ಈ ದ್ವಿತೀಯ ಯೋಜನೆಯಲ್ಲಿ ಆ ಪ್ರಾಂತ್ಯಕ್ಕೆ ಈ ಯೋಜನೆಯನ್ನು ವಿಸ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮೆರಿಟ್ ಮೇಲೆ ನೌಕರಿಗಳನ್ನು ಹಂಚುವುದು.—ಈ ದಿವಸ ಮಾತೆತ್ತಿದರೆ ಈ ಸರ್ಕಾರಿ ನೌಕರಿಗಳನ್ನು ಮೆರಿಟ್ ಮೇಲೆ ಕೊಡುತ್ತಿದ್ದೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ತಾವು ಎಲ್ಲಾ ಸಂದರ್ಭಗಳಲ್ಲೂ ಈ ನೌಕರಿಗಳನ್ನು ವಿದ್ಯಾವಂತರೆಂದು ಪರಿಗಣಿಸದೆ ಅವರ ಮೆರಿಟ್ ನೋಡಿಯೇ ನೌಕರಿಗಳನ್ನು ಕೊಡುತ್ತೇವೆಂದರೆ ಇದರಿಂದ ಬಹಳ ಅಪಾಯವಾಗುತ್ತದೆ. ನಮ್ಮ ದೇಶವೇ ದಡ್ಡ ಜನರು ಇರತಕ್ಕಂಥ ದೇಶ ಎಂದು ಹೆಸರಾಗಿದೆ. ಈಗೀಗ ಜನರು ವಿದ್ಯೆ ಕಲಿಯಲಿಕ್ಕೆ ಪ್ರಾರಂಭ ಮಾಡಿದ್ದಾರೆ. ನಮ್ಮ ದೇಶದಲ್ಲಿ ವಿದ್ಯಾವಂತರೂ ದಕ್ಷರೂ ಆದಂಥ ಜನ ಜಾಸ್ತಿ ಆಗಬೇಕಾಗಿದ್ದರೆ ಇನ್ನೂ 20-25 ವರ್ಷಗಳು ಕಳೆಯಬೇಕು. ನಾವೀಗ ನಮ್ಮ ಜನರೆಲ್ಲರನ್ನೂ ದೊಡ್ಡ ವಿದ್ಯಾವಂತರನ್ನಾಗಿ ಮಾಡಬೇಕು, ನಾವು ದೊಡ್ಡ ರಾಜ್ಯ ಕಟ್ಟಬೇಕು. ಇದಕ್ಕಾಗಿ ದೇಶದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಪ್ರಾರಂಭಿಸಬೇಕೆಂದಿರುವ ತಾರುಣ್ಯದಲ್ಲೇ ಹೀಗೆ ಕೇವಲ ಮೆರಿಟ್ ಮೆರಿಟ್ ಎಂದು ಹೇಳಿ ಯಾರು ಕೆಲವರು ಹೆಚ್ಚು ವಿದ್ಯಾವಂತರಾಗಿದ್ದಾರೋ ಅಂಥವರಿಗೇ ಈ ನೌಕರಿಗಳೆಲ್ಲಾ ದೊರೆತು ಬಾಕಿ ಸಾಮಾನ್ಯ ವಿದ್ಯಾವಂತರುಗಳಿಗೆ ಯಾವ ಉದ್ಯೋಗವೂ ದೊರೆಯದಂತಾಗಿ ಅವರಿಗೆ ತುಂಬ ಅನಾನುಕೂಲವಾಗುವುದರ ಜೊತೆಗೆ ದೇಶದಲ್ಲಿ ಈ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚುತ್ತದೆ. ಇದೇನೂ ಅಂಥ ಆಶ್ಚರ್ಯಕರವಾದ ವಿಚಾರವಲ್ಲ. ಇದಕ್ಕಾಗಿ

ತಾವು ಈ ಸಣ್ಣ ಪುಟ್ಟ ಶಾಲೆಗಳಿಂದ ಹಿಡಿದು ದೊಡ್ಡ ಕಾಲೇಜಿನವರೆಗೂ ಸರಿಯಾದ ಉಪಾಧ್ಯಾಯರನ್ನು ನೇಮಿಸಿ, ಸರ್ವರಿಗೂ ವಿದ್ಯಾಭ್ಯಾಸ ಕೈಗೊಳ್ಳಲು ಅವಕಾಶದೊರೆಯುವಂತೆ ಈ ಯೋಜನೆಯಲ್ಲಿ ಅವಕಾಶ ವನ್ನುಂಟುಮಾಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಗೃಹಕೈಗಾರಿಕೆಗಳು.—ಈಗ ಈ ಬೆಂಗಳೂರು ಒಂದ ರಲ್ಲೇ ಅನೇಕ ರೀತಿಯ ಕೈಗಾರಿಕೆಗಳ ಮೇಲೆ ಕೋಟ್ಯಂತರ ರೂಪಾಯಿಗಳನ್ನು ಹಾಕಿದ್ದೀರಿ. ಈ ಪೈಕಿ ದೊಡ್ಡ ಕೈಗಾರಿಕೆಗಳೂ ಇವೆ, ಮತ್ತು ಸಣ್ಣ ಕೈಗಾರಿಕೆಗಳೂ ಇವೆ. ಕೇಂದ್ರ ಸರ್ಕಾರದವರು ಬೇರೆ ಈ ಬೆಂಗಳೂರಿನಲ್ಲೇ ಅನೇಕ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದಾರೆ. ಈ ದಿವಸ ಈ ಕೈಗಾರಿಕೆಗಳಿರುವುದೆಲ್ಲಾ ಈ ಬೆಂಗಳೂರು ನಗರ ಮತ್ತು ಆ ಮೈಸೂರು ಪಟ್ಟಣದಲ್ಲಿ ಇವೆರಡನ್ನೂ ಬಿಟ್ಟರೆ ಇನ್ನುಳಿದ ಬಾಕಿ ಜಿಲ್ಲಾ ಕಸಬೆಗಳಲ್ಲಿ ಕೂಡ ಯಾವ ಒಂದು ಕೈಗಾರಿಕೆಯನ್ನೂ ಕೂಡ ಸರ್ಕಾರದ ವರು ಸ್ಥಾಪನೆಮಾಡಿಲ್ಲ. ಆದರೆ ಈ ಕಾರ್ಖಾನೆ ಗಳನ್ನು ಸ್ಥಾಪಿಸಲು ಅತ್ಯಗತ್ಯವಾಗಿ ಬೇಕಾಗಿರ ತಕ್ಕಂಥ ನೀರಿನ ಸೌಕರ್ಯ ಮತ್ತು ಇತರ ರಾಮೆಟೀರಿ ಯಲ್ಸ್‌ಗಳು ದೊರೆಯತಕ್ಕಂಥ ಪ್ರದೇಶಗಳಲ್ಲಿ ಕೂಡ ಇವರು ಯಾವ ಒಂದು ಕೈಗಾರಿಕೆಯನ್ನೂ ಹಾಕಿರು ವುದಿಲ್ಲ. ಆದರೆ ಒಂದೇ ಸ್ಥಳದಲ್ಲಿ ಸರ್ಕಾರದವರು ಹೀಗೆ ಕೈಗಾರಿಕೆಗಳನ್ನು ಕೇಂದ್ರೀಕೃತ ಮಾಡಿದರೆ ಮುಂದೆ ಇದರಿಂದ ತುಂಬಾ ಅನಾನುಕೂಲಗಳಾಗು ತ್ತವೆ. ನಿರುದ್ಯೋಗ ನಿವಾರಣೆ ಆಗುವುದಿಲ್ಲ. ಆದ ಕಾರಣ ತಾವು ಆದಷ್ಟು ಈ ಕೈಗಾರಿಕೆಗಳನ್ನು ವಿಕೇಂದ್ರೀಕರಣಮಾಡಬೇಕು. ನಮ್ಮ ದಾವಣಗೆರೆ-ಹರಿಹರ ಪ್ರಾಂತ್ಯದಲ್ಲಿ ಯಾವುದಾದರೂ ದೊಡ್ಡ ಕೈಗಾ ರಿಕೆಗಳನ್ನು ಹಾಕುವಂತೆ ತಾವು ಕೇಂದ್ರ ಸರ್ಕಾರಕ್ಕೆ ಶಿಫಾರ್ಸು ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಸರ್ಕಾರದವರು ಈಗ ಬಳೆಗಳ ಮೇಲೆ ನಹಿತ ಟ್ಯಾಕ್ಸ್ ಹಾಕಿದ್ದಾರೆ. . . .

ಅಧ್ಯಕ್ಷರು.—ಈ ಸಂದರ್ಭದಲ್ಲಿ ಆ ಟ್ಯಾಕ್ಸ್ ವಿಚಾರವನ್ನು ತಾವು ಮಾತನಾಡುವಂತಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಆದರೆ ಈ ದಿವಸ ಹೊಳಲ್ಕೆರೆಯಲ್ಲಿ ಈ ಬಳೆಯ ಕಾರ್ಖಾನೆ ಬಂದಿದೆ. ಅದು ಸರಿಯಾಗಿ ನಡೆಯುತ್ತಿಲ್ಲ. ಷೇರ್‌ದಾರರೆಲ್ಲಾ ಬಹಳ ಕೊರಗುತ್ತಿದ್ದಾರೆ. ಆದುದರಿಂದ ತಾವು ಈ ಯೋಜನೆಯಲ್ಲಿ ಹೊಳಲ್ಕೆರೆಯ ಬಳೆ ಫಾಕ್ಟರಿಯನ್ನಾ ದರೂ ಅಭಿವೃದ್ಧಿಗೊಳಿಸಬೇಕೆಂದೂ ಮತ್ತು ಆ ಹರಿಹರದ ಬಳಿ ಯಾವುದಾದರೊಂದು ದೊಡ್ಡ ಕೈಗಾ ರಿಕೆಯನ್ನು ಸ್ಥಾಪಿಸಿದರೆ ಸಾಕೆಂದೂ ಅರಿಕೆ ಮಾಡಿ ಕೊಳ್ಳುತ್ತೇನೆ. ನಾವು ಇಲ್ಲಿಯತನಕ ಜನರಿಗೆ ಹೇಳಿ ರುವುದೇನು, ದೇಶಕ್ಕೆ ನಾವು ಇತ್ತಿರತಕ್ಕ ಆಶ್ವಾಸನ ವೇನೆಂಬುದನ್ನು ಚೆನ್ನಾಗಿ ಮನನ ಮಾಡಿಕೊಂಡು ಆ ಕಾರ್ಯಗಳನ್ನು ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡು ದೇಶದಲ್ಲಿರತಕ್ಕ ಜನಗಳಿ ಗೆಲ್ಲಾ ಅನ್ನ ಬಟ್ಟೆ ಸಿಕ್ಕುವಂತೆ ಮಾಡಬೇಕು. ಜೊತೆಗೆ ಜನರನ್ನು ವಿದ್ಯಾವಂತರನ್ನಾಗಿ ಬುದ್ಧಿವಂತರ ನ್ನಾಗಿ ಮಾಡಬೇಕು. ಈ ನಮ್ಮ ಆಶ್ವಾಸನದ ಜೊತೆಗೆ ಆ ನಿರುದ್ಯೋಗ ನಿವಾರಣೆಯನ್ನೂ ಕೂಡ ಗಮನದಲ್ಲಿಟ್ಟುಕೊಂಡು ನಾವು ಈ ಯೋಜನೆಯನ್ನು ಮುಂದುವರಿಸಬೇಕಾಗಿದೆ.

ಕೆರೆಗಳ ನಿರ್ಮಾಣ ಕಾರ್ಯ.—ನಮ್ಮ ತಾಲ್ಲೂಕಿ ನಲ್ಲಾಗಲಿ ಅಥವಾ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಾ ಗಲಿ ಒಂದಾದರೂ ದೊಡ್ಡ ಕೆರೆಯಿಲ್ಲ. ಬೇರೆ ಜಿಲ್ಲೆ ಗಳಲ್ಲಾದರೋ 10-15-20ರ ವರೆಗೂ ದೊಡ್ಡ ಕೆರೆ ಗಳಿರುತ್ತವೆ. ಇನ್ನು ನಮ್ಮ ಜಿಲ್ಲೆಯಲ್ಲಿ ಅಲ್ಲೊಂದು ಇಲ್ಲೊಂದು ಇರತಕ್ಕ ಆ ಸಣ್ಣ ಪುಟ್ಟ ಕೆರೆಗಳ ಜೀರ್ಣೋ ದ್ಧಾರ ಕಾರ್ಯ ಸಹ ನಡೆಸಿಲ್ಲ. ಆ ಜಿಲ್ಲೆಯಲ್ಲಿ ಯೋಗ್ಯ ಕಂಡ ಬಂದ ಕಡೆ ಸಣ್ಣ ಪುಟ್ಟ ಕೆರೆಗಳನ್ನಾದರೂ ಕಟ್ಟಿಸಿಕೊಡಿ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಇಷ್ಟನ್ನಾದರೂ ಆ ನಮ್ಮ ಜಿಲ್ಲೆಗೆ ಈ ದ್ವಿತೀಯ ಯೋಜನೆಯಲ್ಲಿ ತಾವು ಅನುಕೂಲಪಡಿಸಿಕೊಡಬೇಕೆಂದು ಪ್ರಾರ್ಥಿಸಿ ನಾನು ನನ್ನ ಮಾತುಗಳನ್ನು ಮುಗಿಸು ತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು—ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಸರ್ಕಾರದವರು ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಸಂಬಂಧ ವಾಗಿ ಮುಂದಿನ 5 ವರ್ಷಗಳ ಅವಧಿಯಲ್ಲಿ 85 ಚಿಲ್ಲರೆ ಕೋಟಿ ರೂಪಾಯಿಗಳನ್ನು ನಮ್ಮ ಸಂಸ್ಥಾನದಲ್ಲಿ ನಾನಾ ಅಭಿವೃದ್ಧಿಯ ಕಾರ್ಯಗಳ ಬಗ್ಗೆ ಖರ್ಚು ಮಾಡ ಬೇಕೆಂದಿದ್ದಾರೆ. ಅದರಲ್ಲೂ ನಮ್ಮ ದೇಶದಲ್ಲಿ ಈ ಜವಾಬ್ದಾರಿ ಸರ್ಕಾರ ಅಧಿಕಾರ ನಡೆಸುವುದಕ್ಕೆ ಪ್ರಾರಂಭವಾದ ಮೇಲೆ ದೇಶದಲ್ಲಿ ನೋಡಿದರೆ ಈಗಾ ಗಲೇ ಅನೇಕ ಅಭಿವೃದ್ಧಿ ಕೆಲಸಗಳು ಹೇರಳವಾಗಿ ನಡೆ ದಿರುತ್ತವೆ. ಇದಕ್ಕೆಲ್ಲಾ ಅನೇಕ ಕೋಟ್ಯಂತರ ರೂಪಾಯಿಗಳು ಖರ್ಚಾಗಿರುತ್ತವೆ. ಈಗಾಗಲೇ ಅನೇಕ ಜಿಲ್ಲೆಗಳಲ್ಲಿ ಅಗಾಧವಾಗಿ ಹಣವನ್ನು ವೆಚ್ಚ ಮಾಡಿ ಕೆರೆ, ಕಾಲುವೆ, ಅಣೆಕಟ್ಟೆಗಳು ಇತ್ಯಾದಿಗಳನ್ನು ಮಾಡಿಸಿದ್ದಾರೆ. ಹೀಗೆಲ್ಲಾ ಅಭಿವೃದ್ಧಿ ಕಾರ್ಯಗಳನ್ನು ನಮ್ಮ ಸರ್ಕಾರ ಕೈಗೊಂಡುದರ ಫಲವಾಗಿ ನಮ್ಮ ದೇಶದಲ್ಲಿ ಈ ಜನ ಜೀವನ ಸ್ವಲ್ಪಮಟ್ಟಿಗೆ ಉತ್ತಮ ಗೊಳ್ಳುತ್ತಾ ಬರುತ್ತಿದೆಯೆಂಬುದು ಎಲ್ಲರಿಗೂ ಕಂಡು ಬರುತ್ತಿದೆ. ಆದರೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ, ಸ್ವಾಮಿ, ತಾವು ಕೋಪ ಮಾಡಿ ಕೊಳ್ಳಬಾರದು,—ಏಕೆಂದರೆ ನಮ್ಮ ಹಾಸನ ಜಿಲ್ಲೆಗೆ ಸರ್ಕಾರದವರು ಮಾಡಿರತಕ್ಕ ಉಪಕಾರ ಸ್ವಲ್ಪಮಟ್ಟಿಗೆ ಕಡಮೆಯೆಂದೇ ಹೇಳಬೇಕಾಗಿದೆ. ಈ ಜಿಲ್ಲೆಯಲ್ಲಿ ಅನೇಕ ನದಿಗಳು ಎಂದರೆ ಹೇಮಾವತಿ, ಯಗಚಿ, ಓಟಿ ಹೊಳೆ ಇತ್ಯಾದಿ ಅನೇಕ ನದಿಗಳು ಹರಿಯುತ್ತವೆ. ನಾವು ನಮ್ಮ ಕ್ಷೇತ್ರದಿಂದ ಈ ಸಭೆಗೆ ಚುನಾಯಿತ ರಾಗಿ ಬಂದಲಾಗಾಯ್ತಿನಿಂದಲೂ ಆ ಪ್ರದೇಶದಲ್ಲಿ ಕೆಲವು ಹಳ್ಳಗಳಿಗೆ ಅಣೆಕಟ್ಟೆಗಳನ್ನು ಹಾಕಬೇಕೆಂದು ನಾವು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಲ್ಲೂ ಮತ್ತು ಸಂಬಂಧಪಟ್ಟ ಇತರ ಮಂತ್ರಿಗಳಲ್ಲೂ ಅರಿಕೆಮಾಡಿ ಕೊಳ್ಳುತ್ತಲೇ ಬಂದಿದ್ದೇವೆ. ಈ ಸಭೆಯಲ್ಲಿ ಕೇಳಿ ಕೊಂಡಿರುವುದೇ ಅಲ್ಲದೆ ಈ ಮಂತ್ರಿಗಳೆಲ್ಲಾ ಆ ನಮ್ಮ ಜಿಲ್ಲೆಗೆ ಸಂಚಾರಣೆ ಬಂದಿದ್ದಾಗ್ಗೆ ಅಲ್ಲಿ ಸಹ ಈ ವಿಚಾರಗಳನ್ನು ಅಲ್ಲಿಯ ಇತರ ಪುರನಿವಾಸಿಗಳ ಜೊತೆಯಲ್ಲಿ ಅರಿಕೆ ಮಾಡಿಕೊಂಡಾಗ ಮಾನ್ಯ ಮುಖ್ಯ ಮಂತ್ರಿಗಳು ಆ ಜನರ ಆಶೋತ್ತರಗಳನ್ನು ಈಡೇರಿಸಿ ಕೊಡುವುದಾಗಿ ಇಲ್ಲಿಗೆ 1-2 ವರ್ಷಗಳ ಹಿಂದೆ ಅಭಯ ವನ್ನು ಕೊಟ್ಟಿದ್ದರು. ಆದರೆ ಇಲ್ಲಿಯ ತನಕ ಆ ಕೆಲಸ ಗಳನ್ನೂ ಆಗಿಲ್ಲ. ನಾವು ಈ ದಿವಸ ಆ ನಮ್ಮ ಓಟರು ಗಳಿಗೆ ಮುಖ ತೋರಿಸದಂತಾಗಿದೆ. ಆದುದರಿಂದ ಮಾನ್ಯ ಮಂತ್ರಿಗಳು ಈ ಹಿಂದೆ ಅವರು ಕೊಟ್ಟಿರತಕ್ಕ ವಾಗ್ದಾನಕ್ಕೆ ಅನುಗುಣವಾಗಿ ಆ ಕೆಲಸಗಳನ್ನು ಜಾಗ್ರತೆಯಾಗಿ ಇನ್ನು ಈ ಸಭೆಯು ಪೂರೈಸಿದ 10-15 ದಿವಸಗಳಲ್ಲೇ ನಮ್ಮ ಸರ್ಕಾರದವರು ಕೈಗೊಳ್ಳು ತ್ತಾರೆಂಬ ನಂಬಿಕೆ ನನಗಿದೆ. ಆ ಕೆಲಸಗಳೂ ಕೂಡ ಬೇಗ ಕಾರ್ಯಗತವಾಗುತ್ತವೆ ಎಂದು ನಾನು ನಂಬಿ ಕೊಂಡಿದ್ದೇನೆ.

(ಎಚ್. ಕೆ. ಸಿದ್ದಯ್ಯ.)

ನಮ್ಮ ಮೈಸೂರು ಸಂಸ್ಥಾನದಲ್ಲಿ ಕೆರೆಗಳ ಆಶ್ರಯದಿಂದ ವ್ಯವಸಾಯಕ್ಕೆ ಯೋಗ್ಯವಾಗಿರತಕ್ಕ ಭೂಮಿ ಬೇಕಾದಷ್ಟಿದೆ. ಈಗಾಗಲೇ ಸರ್ಕಾರದವರು ಅನೇಕ ಕೆರೆಗಳನ್ನು ರೆಸ್ಟೋರ್ ಮಾಡಿದ್ದಾರೆ. ಮಲೆನಾಡಿನ ದೃಷ್ಟಿಯಿಂದ ಹೇಳುವುದಾದರೆ ಮಲೆನಾಡಿನಲ್ಲಿ ವಿಪರೀತವಾಗಿ ಮಳೆ ಬೀಳುತ್ತದೆ. ಅಲ್ಲಿ ಅನೇಕ ಕೆರೆಗಳನ್ನು ರೆಸ್ಟೋರ್ ಮಾಡದೇ ಹೂಳು ತುಂಬಿಕೊಂಡು ನೀರು ನಿಲ್ಲದಂತಾಗಿದೆ. ಅದನ್ನೆಲ್ಲಾ ರೆಸ್ಟೋರ್ ಮಾಡಿಸಬೇಕು. ಅಷ್ಟೇ ಅಲ್ಲದೆ ಹೊಸ ಕಾಂಗಾರಿಗಳು ಯಾವಯಾವುವನ್ನು ತೆಗೆದುಕೊಂಡಿದ್ದೀರೋ ಅವೆಲ್ಲವನ್ನೂ ಈ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ತಿ ಮಾಡಿಸ ಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಸ್ವಾಮಿ, ಹಳ್ಳಿಗಾಡಿನ ರಸ್ತೆಗಳು ಬಹಳ ಹೀನಸ್ಥಿತಿಯಲ್ಲಿವೆ. ತಾವು ಸಂಚಾರ ಮಾಡುವಾಗ ಸಣ್ಣ ಸಣ್ಣ ಹಳ್ಳಿಗಾಡಿನ ರಸ್ತೆಗಳಲ್ಲಿ ಹೋಗುವುದಕ್ಕೆ ಮನಸ್ಸು ಮಾಡುವುದಿಲ್ಲ. ಟಿ.ಬಿ ಯಲ್ಲೋ ಅಥವಾ ತಾಲ್ಲೂಕ್ ಹೆಡ್‌ಕ್ವಾರ್ಟರಿನಲ್ಲೋ ತಾವು ಇರುತ್ತೀರಿ. ತಾವು ಇನ್ನುಮುಂದೆ ಸಂಚಾರ ಹೋದಾಗ ಹಳ್ಳಿಗಾಡಿನಲ್ಲಿರತಕ್ಕ ಸಣ್ಣಪುಟ್ಟ ರಸ್ತೆಗಳ ಸ್ಥಿತಿ ಯಾವ ಶೋಚನೀಯವಾದ ರೀತಿಯಲ್ಲಿದೆ ಎಂಬುದನ್ನು ತಿಳಿದುಕೊಂಡು ಅದನ್ನು ಸರಿಪಡಿಸುವುದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೀರಿ ಎಂದು ನಂಬಿದ್ದೇನೆ. ಈಗಾಗಲೇ ನಮ್ಮ ಬಜೆಟ್‌ನಲ್ಲಿ ವಿಶೇಷವಾದ ಹಣವನ್ನು ಒದಗಿಸಿದ್ದೀರಿ. ಅದರ ಜೊತೆಗೆ ಈ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚುಮಾಡತಕ್ಕ ಹಣವೂ ಸೇರಿದರೆ ಈ ಐದು ವರ್ಷದಲ್ಲಿ ನಮ್ಮ ಸಂಸ್ಥಾನ ಮಾದರಿ ಸಂಸ್ಥಾನವಾಗುವಂತೆ ಮಾಡಲು ಯಾವ ಅಡಚಣೆಯೂ ಕಂಡುಬರುವುದಿಲ್ಲ. ಈ ಸಂದರ್ಭದಲ್ಲಿ ನನ್ನ ಒಂದು ಸಲಹೆ ಏನೆಂದರೆ, ಸರ್ಕಾರದವರು ಈ ಸಂಚಾರ ಮಾರ್ಗಗಳಿಗೆ ಟಾರ್ ಹಾಕುವುದು; ಸಿಮೆಂಟ್ ಮಾಡುವುದು ಈ ಕಾರ್ಯಗಳನ್ನು ಕೈಕೊಂಡಿದ್ದೀರಿ. ಈಗಾಗಲೇ ಈ ಕೆಲಸ ಅನೇಕ ಕಡೆಗಳಲ್ಲಿ ನಡೆಯುತ್ತಾ ಇದೆ. ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದ ಅನೇಕ ರಸ್ತೆಗಳು ಇವೆ. ಅದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರು ಸರಿಯಾದ ರೀತಿಯಲ್ಲಿ ಹಣವನ್ನು ಒದಗಿಸುವ ಸ್ಥಿತಿಯಲ್ಲಿ ಇಲ್ಲ. ಅದರಲ್ಲೂ ಕೆಲವು ರಸ್ತೆಗಳನ್ನು ಸರ್ಕಾರದವರೇ ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದೇನೆ. ಅನೇಕ ಗ್ರಾಮಗಳಿಗೆ ಹೋಗತಕ್ಕ ಈ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳು ಬಹಳ ಹೀನ ಸ್ಥಿತಿಯಲ್ಲಿರುವುದರಿಂದ ಸರ್ಕಾರದವರು ಈ ರಸ್ತೆಗಳಿಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ಅನುಕೂಲಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ನಮ್ಮ ಮೈಸೂರು ಸಂಸ್ಥಾನದಲ್ಲಿ ಅಮೃತ ಮಹಲ್ ಕಾವಲಿಗೆ ಸೇರಿದ ಭೂಮಿ ಬೇಕಾದಷ್ಟು ಇದೆ. ಇದರಿಂದ ಕೆಲವರಿಗೆ ಯಾರಿಗೋ ಅನುಕೂಲವಾಗಿದೆಯೇ ಹೊರತು. . .

ಅಧ್ಯಕ್ಷರು.—ಬಜೆಟ್ ಭಾಷಣದ ಹಾಗೆ ಎಲ್ಲ ವಿಷಯವನ್ನೂ ಈ ಪಂಚವಾರ್ಷಿಕ ಯೋಜನೆಗೆ ಸಂಬಂಧಪಟ್ಟಂತೆ ಹೇಳಲು ಅವಕಾಶವಿಲ್ಲ. ಪಂಚವಾರ್ಷಿಕ ಯೋಜನೆಯಲ್ಲಿ ಯಾವಯಾವುದಕ್ಕೆ ಎಷ್ಟೆಷ್ಟು ಹಣ ಒದಗಿಸಿದ್ದಾರೆ, ಎಷ್ಟು ಹಣ ಒದಗಿಸಬೇಕು, ಎಷ್ಟು ಸಾಲದು ಎಂಬ ವಿಷಯ ಹೇಳಿ.

ಶ್ರೀ ಎಚ್. ಕೆ. ಸಿದ್ದಯ್ಯ.—ಈಗ ಗ್ರಾಮಾಂತರಗಳಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಪ್ರೈಮರೀ ಸ್ಕೂಲುಗಳು ಬಹಳ ಕಡಿಮೆ ಇದೆ. ಆದ್ದರಿಂದ ಮೈಸೂರು ಸಂಸ್ಥಾನದ ಪ್ರತಿಯೊಂದು ಗ್ರಾಮದಲ್ಲೂ ಕೂಡ ಒಂದೊಂದು ಪ್ರೈಮರೀ ಸ್ಕೂಲು ಮತ್ತು ಅದಕ್ಕೆ ಬೇಕಾದ ಕಟ್ಟಡ ಈ ಪಂಚವಾರ್ಷಿಕ ಯೋಜನೆಯಲ್ಲಿ ಆಗುವಂತೆ ಏರ್ಪಾಡು ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಚಾರ, ತಾಲ್ಲೂಕು ಕಚೇರಿಗಳಲ್ಲಿ ಕೆಲಸಮಾಡತಕ್ಕ ಗುಮಾಸ್ತರುಗಳಿಗೆ ಕೆಲವು ತಾಲ್ಲೂಕುಗಳಲ್ಲಿ ಮನೆ ಸಿಕ್ಕುತ್ತಾ ಇಲ್ಲ. ಉದಾಹರಣೆಗೆ ಹಾಸನ ಡಿಸ್ಟ್ರಿಕ್ಟ್ ಬೇಲೂರು, ಆಲೂರು ಮತ್ತು ಸಕಲೇಶಪುರ ತಾಲ್ಲೂಕಿನಲ್ಲಿ ಅಲ್ಲಿ ಕಚೇರಿಗಳಲ್ಲಿ ಕೆಲಸ ಮಾಡತಕ್ಕ ಗುಮಾಸ್ತರುಗಳಿಗೆ ಮನೆ ಸಿಕ್ಕದೆ ಬಹಳವಾಗಿ ಪೇಚಾಡುತ್ತಾ ಇದ್ದಾರೆ. ಸಕಲೇಶಪುರದಲ್ಲಿ ಮಾತ್ರ ಸರ್ಕಾರದವರು ಆ ಮನೆಗಳನ್ನು ಕಟ್ಟಿದ್ದಾರೆ. ಕೆಲವರಿಗೆ ಅನುಕೂಲವಾಗಿದೆ. ಇತರರ ಕಷ್ಟ ಅಂತೂ ಹೇಳತೀರದು. ಆದ್ದರಿಂದ ಸರ್ಕಾರದವರು ಈ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲೆಲ್ಲಿ ತಾಲ್ಲೂಕು ಕಚೇರಿಗಳಲ್ಲಿ ಕೆಲಸಮಾಡತಕ್ಕ ಗುಮಾಸ್ತರುಗಳಿಗೆ ಮನೆಗಳ ತೊಂದರೆ ಇದೆಯೋ ಅಲ್ಲಿ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ. ಅಷ್ಟೇ ಅಲ್ಲದೆ ಆಸ್ಪತ್ರೆಯಲ್ಲಿ ಕೆಲಸ ಮಾಡತಕ್ಕ ಕಾಂಪೌಂಡರುಗಳಿಗೂ ಮತ್ತು ಇತರ ಅಧಿಕಾರಿಗಳಿಗೆ ಎಂದರೆ ಡಾಕ್ಟರುಗಳಿಗೂ ಕೂಡ ಒಂದು ಕಡೆ ಮನೆ ಇದ್ದರೆ, ಇನ್ನೊಂದು ಕಡೆ ಮನೆ ಇಲ್ಲದೆ ಬಹಳವಾಗಿ ಪೇಚಾಡುತ್ತಾ ಇದ್ದಾರೆ. ಅವರಿಗೆ ಕೊಡುವ ಸಂಬಳ ಬಹಳ ಕಡಿಮೆ. ಅಂಥಾದ್ದರಲ್ಲಿ ಅವರು ಬಾಡಿಗೆ ಕೊಟ್ಟುಕೊಂಡು ಬಾಡಿಗೆ ಮನೆಯಲ್ಲಿ ವಾಸಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದವರು ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಸಹ ಸೇರಿಸಿಕೊಂಡು ಅವರೆಲ್ಲರಿಗೂ ವಾಸಕ್ಕೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಈ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ಬಹಳ ಮುಖ್ಯವಾದ ವಿಚಾರ ಎಂದರೆ ಮೈಸೂರು ಸಂಸ್ಥಾನದಲ್ಲಿ ಸ್ಕ್ಯಾವೆಂಜರ್ಸ್ ಎಂದು ಹೇಳಿ ಕೆಲವರು ಕೆಲಸಮಾಡುತ್ತ ಇದ್ದಾರೆ. ಅವರು ಕೆಲಸಮಾಡದೇ ಹೋದರೆ ಗಲೀಜು ತೆಗೆಯುವ ಕೆಲಸ ನಿಂತುಹೋಗಿ ಬಹಳ ತೊಂದರೆಯಾಗುತ್ತದೆ. ಅವರೂ ಸಹ ಮನುಷ್ಯರೇ, ನಮ್ಮ ಅಣ್ಣತಮ್ಮಂದಿರು. ಅವರು ಕಡಿಮೆ ಸಂಬಳದಲ್ಲಿ ಎಂಥ ಕಷ್ಟವಾದ ಕೆಲಸವನ್ನಾದರೂ ಮಾಡಿ ಊರನ್ನು ಪಾಕೀಜು ಮಾಡುತ್ತಾರೆ. ಸರ್ಕಾರದವರು ಕೆಲವು ಕಡೆ ಹಣ ಒದಗಿಸಿ ಸ್ವಲ್ಪ ಜನಕ್ಕೆ ಮನೆ ಕಟ್ಟಿಸಿಕೊಟ್ಟಿದ್ದೀರಿ. ಇನ್ನು ಅನೇಕ ಕಡೆ ಅವರುಗಳಿಗೆ ಮನೆಗಳೇ ಇಲ್ಲ. ಮುನಿಸಿಪಾಲಿಟಿಯವರು ಅವರಿಗೆ 12 ಸಾವಿರ ರೂಪಾಯಿಗಳಷ್ಟು ಹಣ ಖರ್ಚುಮಾಡಿ ಮನೆ ಕಟ್ಟಿಸಿಕೊಡಬೇಕೆಂದು ನಿರ್ಣಯ ಮಾಡಿದ್ದರು. ಆ ನಿರ್ಣಯ ಪುಸ್ತಕದಲ್ಲಿ ಇರುತ್ತದೆಯೇ ಹೊರತು ಕಾರ್ಯತಃ ಅವರಿಗೆ ಮನೆಗಳು ನಿರ್ಮಾಣವಾಗುತ್ತಿಲ್ಲ. ಅದಕ್ಕೆ ಮುನಿಸಿಪಾಲಿಟಿಯವರನ್ನು ನೆಚ್ಚಿಕೊಂಡರೆ ಆಗುವುದಿಲ್ಲ. ಸರ್ಕಾರದವರು ಪೌರ ಸಭೆಗಳಿಗೆ ಗ್ರಾಂಟು ಕೊಡುವಾಗ ಯಾರು ನಮ್ಮ ಈ ದೇಶವನ್ನು ಪರಿಶುದ್ಧವಾಗಿಟ್ಟು ಕಾಪಾಡತಕ್ಕ ಜನ ಇದ್ದಾರೋ ಅವರಿಗೆ ಮನೆಗಳನ್ನು ಕಟ್ಟಿಕೊಡಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಸ್ವಾಮಿ, ವಿದ್ಯುಚ್ಛಕ್ತಿ ವಿಚಾರ ವಿದ್ಯುಚ್ಛಕ್ತಿ ಮಲೆನಾಡಿಗೆ ಬಹಳ ಮುಖ್ಯವಾಗಿ ಬೇಕಾಗಿದೆ. ನಮ್ಮ ಮೈಸೂರು ಸರ್ಕಾರದವರು ಈಗಾಗಲೇ ಅನೇಕ ಕಡೆಗಳಿಗೆ ವಿದ್ಯುಚ್ಛಕ್ತಿಯನ್ನು ಹೇರಳವಾಗಿ ಒದಗಿಸಿ

ದ್ದಾರೆ. ಆದರೆ ಮಲೆನಾಡಿನ ಜಿಲ್ಲೆಗಳಲ್ಲಿ ಒದಗಿಸಿರುವುದು ಬಹಳ ಕಡಿಮೆ ಆಗಿದೆ. ಆದ್ದರಿಂದ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಿ ಮಲೆನಾಡಿನಲ್ಲಿ ಪ್ರತಿಯೊಂದು ಹಳ್ಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾನು ಈ ಸಮಯದಲ್ಲಿ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನೊಂದು ವಿಚಾರ. ಹಾಸನದಲ್ಲಿ ಒಂದು ಕಚ್ಚಾ ಮಾಲುಗಳ ಕೈಗಾರಿಕಾ ಕೇಂದ್ರವನ್ನು ಸ್ಥಾಪನೆ ಮಾಡಬೇಕೆಂದು ಹೇಳಿ ನಮ್ಮ ಮುಖ್ಯ ಸಚಿವರನ್ನು ನಾನು ಹಿಂದೆ ಕೇಳಿಕೊಂಡಿದ್ದೆ. ಆ ರೀತಿ ಒಂದು ಕಚ್ಚಾಮಾಲುಗಳ ಕೈಗಾರಿಕಾ ಕೇಂದ್ರವನ್ನು ಹಾಸನ ಜಿಲ್ಲೆಯಲ್ಲಿ ಮಾಡಿಕೊಟ್ಟು ಬಡಜನರ ಕೈಗಾರಿಕಾಭಿವೃದ್ಧಿಯನ್ನು ಈ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಬೇಕೆಂದು ಈ ಸಮಯದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ಮಾತು ಹೇಳಿ ಮುಗಿಸುತ್ತೇನೆ. ದನಗಳ ಆಸ್ಪತ್ರೆ ಈ ಮಲೆನಾಡು ಪ್ರಾಂತ್ಯದಲ್ಲಿ ಬಹಳ ಕಡಿಮೆ ಇದೆ. ಹಾಸನ ಜಿಲ್ಲೆಯಲ್ಲಿಯೂ ತುಂಬ ಕಡಿಮೆ ಎಂದು ಹೇಳುತ್ತೇನೆ. ದನಗಳ ಆಸ್ಪತ್ರೆ ಬೇಕೆಂದು ಅನೇಕಕಡೆ ಕೇಳಿಕೊಳ್ಳುತ್ತ ಇದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಮುಖ್ಯವಾಗಿ ಈ ದನಗಳ ಆಸ್ಪತ್ರೆಗಳನ್ನು ಸಂಸ್ಥಾನಾವುಳೆ ಎಲ್ಲೆಲ್ಲಿ ಬೇಕೆಂದು ಕೇಳುತ್ತಾರೋ ಅಲ್ಲಿಗೆಲ್ಲಾ ಈ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ಈಗ ಇರತಕ್ಕ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲದೆ ಬಹಳ ತೊಂದರೆಯಾಗುತ್ತಾ ಇದೆ. ಇದನ್ನು ಕೂಡ ಸರಿಪಡಿಸಿ ಆದಷ್ಟು ಜಾಗ್ರತೆ ಎಲ್ಲೆಲ್ಲಿ ಡಾಕ್ಟರುಗಳಿಲ್ಲವೋ ಅಲ್ಲಿಗೆ ಡಾಕ್ಟರುಗಳನ್ನು ಕಳುಹಿಸಿಕೊಟ್ಟು ಆ ಸ್ಥಳದ ದನಗಳ ಆರೋಗ್ಯಕ್ಕೆ ಅನುಕೂಲಪಡಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಈಗ ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟುಮಟ್ಟಿಗೆ ಕೆಲಸ ನಡೆದಿದೆ, ಎಷ್ಟುಮಟ್ಟಿಗೆ ನಮ್ಮ ಮೈಸೂರು ದೇಶಕ್ಕೆ ಸಹಾಯವಾಗಿದೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ನಾನು ಹೇಳುವುದಾದರೆ ಖಂಡಿತವಾಗಿಯೂ ಮೊದಲನೆ ಪಂಚವಾರ್ಷಿಕ ಯೋಜನೆಯಿಂದ ನಮ್ಮ ರೈತಾಪಿ ಜನರಿಗೂ ಮತ್ತು ಹಳ್ಳಿಗಾಡಿನ ಜನರಿಗೂ ಬಹುಮಟ್ಟಿಗೆ ಕೆಲಸಕಾರ್ಯಗಳು ಆಗಿವೆ, ಅದರಿಂದ ಜನರಿಗೆ ಅನುಕೂಲವಾಗಿದೆ ಎಂದು ನಾನು ಹೇಳಬೇಕಾಗಿದೆ. ಈಗ ನಾವು ಎರಡನೆ ಪಂಚವಾರ್ಷಿಕ ಯೋಜನೆಗೆ ಹೊರಟಿದ್ದೇವೆ. ಈ ಯೋಜನೆಯ ಕೆಲಸ ಕಾರ್ಯಗಳು ಯಶಸ್ವಿಯಾಗಿ ಹೆಚ್ಚಿನ ಮಟ್ಟದಲ್ಲಿ ನಮ್ಮ ಗ್ರಾಮಾಂತರಗಳಿಗೆ ಅನುಕೂಲವಾಗಬೇಕಾಗಿದ್ದರೆ ನಾವು ಮುಖ್ಯವಾಗಿ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನಕೊಟ್ಟು ನೋಡಬೇಕಾದದ್ದು ನಮ್ಮ ಬಹುಮುಖ್ಯವಾದ ಕರ್ತವ್ಯವಾಗಿದೆ. ಏಕೆಂದರೆ ಈ ಪಂಚವಾರ್ಷಿಕ ಯೋಜನೆಯ ಕೆಲಸಕಾರ್ಯಗಳು ಬಹಳ ಯಶಸ್ವಿಯಾಗಿ ನೆರವೇರಬೇಕಾಗಿದ್ದರೆ ನಮ್ಮ ಜನಗಳಿಗೆ ಇರತಕ್ಕ ಅಜ್ಞಾನ ತೊಲಗಬೇಕು. ಇಲ್ಲದೇ ಇದ್ದರೆ ಖಂಡಿತವಾಗಿಯೂ ಅವರು ಈ ನಮ್ಮ ಪಂಚವಾರ್ಷಿಕ ಯೋಜನೆಯಿಂದ ಹೆಚ್ಚಿನ ಸಹಾಯವನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನಕೊಟ್ಟು ನಮ್ಮ ಗ್ರಾಮಾಂತರಗಳಲ್ಲಿ ಎಲ್ಲೇ ಆದರೂ ಕೂಡ ಪ್ರತಿಯೊಬ್ಬರೂ ಕಡೆಪಕ್ಷ ಶೇಕಡ 50 ರಷ್ಟಾದರೂ ವಿದ್ಯಾವಂತರ ಸಂಖ್ಯೆ ಹೆಚ್ಚುವಂತೆ ಮಾಡಬೇಕಾದ್ದು ಬಹುಮುಖ್ಯವಾದ ಕರ್ತವ್ಯ. ಈ ರೀತಿ ನಾವು ವಿದ್ಯಾವಂತರ ಸಂಖ್ಯೆಯನ್ನ ಜಾಸ್ತಿ ಮಾಡಿ ಪ್ರತಿಯೊಬ್ಬರೂ ಸಹಕಾರ ನೀಡಿದ್ದೇ ಆದರೆ ಈ ಯೋಜನೆಯ ಎಲ್ಲ ಕೆಲಸಕಾರ್ಯಗಳೂ ಬಹಳ ಚೆನ್ನಾಗಿ, ಬಹಳ ಯಶಸ್ವಿಯಾಗಿ ನಡೆಯುವುದಕ್ಕೆ ಸಹಕಾರಿಯಾಗುತ್ತದೆ. ಈಗ ತಮಗೆಲ್ಲಾ ಗೊತ್ತು ನಮ್ಮ ಮೈಸೂರು ದೇಶದಲ್ಲಿ 100ಕ್ಕೆ 80 ಜನ ವ್ಯವಸಾಯಗಾರರಿದ್ದೇವೆ. 100ಕ್ಕೆ 80 ಜನ ವ್ಯವಸಾಯಗಾರರಿರುವಾಗ ವ್ಯವಸಾಯಗಾರರ ಅಭಿವೃದ್ಧಿಗೆ ನಮ್ಮ ಸರ್ಕಾರದವರು ಅನೇಕ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಇನ್ನುಮುಂದೆ ಈ ವ್ಯವಸಾಯಗಾರರ, ರೈತಾಪಿಜನರ, ಗ್ರಾಮಾಂತರಗಳ ಜನರ ಅಭಿವೃದ್ಧಿಗೆ ಏನೇನು ಕೆಲಸ ಮಾಡಬೇಕು, ಯಾವರೀತಿ ಅವರ ವ್ಯವಸಾಯದ ಸೌಲಭ್ಯಗಳನ್ನು ಉತ್ತಮಪಡಿಸಬೇಕು ಮತ್ತು ವ್ಯವಸಾಯದ ಇಲಾಖೆಯನ್ನೂ ಕೂಡ ಯಾವರೀತಿ ಮಾರ್ಪಾಡು ಮಾಡಬೇಕು ಎಂಬುದನ್ನೆಲ್ಲಾ ಯೋಚನೆಮಾಡಿ ಯಾವರೀತಿ ವ್ಯವಸಾಯದ ಇಲಾಖೆಯಿಂದ ರೈತಬಾಂಧವರಿಗೆ ಹೆಚ್ಚಿನ ಅನುಕೂಲವಾಗಲು ಅವಕಾಶವಾಗುತ್ತದೆಯೋ ಆ ರೀತಿ ಮಾರ್ಪಾಡು ಮಾಡಬೇಕು. ಏಕೆಂದರೆ ವ್ಯವಸಾಯವೇ ನಮ್ಮ ಮುಖ್ಯವಾದ ಕಸಬಾಗಿದೆ. ಇದಕ್ಕೆ ಎಷ್ಟುಮಟ್ಟಿನ ಆಸಕ್ತಿ ವಹಿಸಬೇಕೋ ಅಷ್ಟುಮಟ್ಟಿನ ಆಸಕ್ತಿ ವಹಿಸಿಲ್ಲ. ಇನ್ನುಮುಂದಾದರೂ ವ್ಯವಸಾಯದ ಅಭಿವೃದ್ಧಿಯ ವಿಷಯದಲ್ಲಿ ಹೆಚ್ಚಿನ ಆಸಕ್ತಿವಹಿಸಿ ಈ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಾದದ್ದು ಬಹುಮುಖ್ಯವಾದ ಅಂಶವಾಗಿದೆ.

ವ್ಯವಸಾಯ ಹೇಗೆ ಮುಖ್ಯವೋ ಅದರಂತೆಯೇ ಕೈಗಾರಿಕೆಯೂ ಕೂಡ ಬಹಳ ಪ್ರಾಮುಖ್ಯವಾದದ್ದು. ಈಗ ನಮ್ಮ ದೇಶದಲ್ಲಿ ನಿರುದ್ಯೋಗ ತಾಂಡವವಾಡುತ್ತಿದೆ. ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕಾಗಿದ್ದರೆ ಈ ಕೈಗಾರಿಕೆಗಳನ್ನು ಗ್ರಾಮಾಂತರಗಳಲ್ಲಿ ಹೆಚ್ಚಾಗಿ ಸ್ಥಾಪಿಸಲು ಅವಕಾಶ ಕಲ್ಪಿಸಬೇಕೆಂಬುದು ತಮಗೆಲ್ಲಾ ಗೊತ್ತೇ ಇದೆ. ಈಗ ಪ್ರತಿಯೊಂದು ಕೈಗಾರಿಕೆಯೂ ಪಟ್ಟಣಗಳಲ್ಲಿ ಸ್ಥಾಪನೆ ಆಗಿ ಗ್ರಾಮಾಂತರದ ಜನರು ಪಟ್ಟಣಗಳಿಗೆ ಹೋಗಿ ಸೇರಲು ಅವಕಾಶವಾಗಿದೆ. ಗ್ರಾಮಾಂತರಗಳಲ್ಲಿ ಯಾವ ಕೈಗಾರಿಕೆಯನ್ನೂ ಸ್ಥಾಪನೆ ಮಾಡುವುದಕ್ಕೆ ಹೊರಟಿಲ್ಲ. ಆದ್ದರಿಂದ ಈ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಮುಖ್ಯವಾಗಿ ಗ್ರಾಮಾಂತರಗಳಲ್ಲಿ ಗೃಹಕೈಗಾರಿಕೆಗಳಾಗಲಿ, ದೊಡ್ಡದೊಡ್ಡ ಫ್ಯಾಕ್ಟರಿಗಳಾಗಲಿ ಸ್ಥಾಪನೆ ಆದರೆ ಹಳ್ಳಿಗಾಡಿನ ಜನರ ನಿರುದ್ಯೋಗ ಸಮಸ್ಯೆ ಖಂಡಿತವಾಗಿಯೂ ಬಗೆಹರಿಯುತ್ತದೆ.

ನಮ್ಮ ರೈತರಲ್ಲಿ ಅನೇಕ ಜನರಿಗೆ ಜಮೀನು ಇಲ್ಲ. ಆದ್ದರಿಂದ ಜಮೀನಿನಲ್ಲಿ ಕೆಲಸ ಮಾಡುವವರಿಗೆ ಕಡೆಪಕ್ಷ ಐದು ಎಕರೆ ಜಮೀನು ಕೊಡುವಂತೆ ಏರ್ಪಾಡು ಮಾಡಬೇಕಾದದ್ದು ಬಹಳ ಮುಖ್ಯವಾಗಿದೆ.

3 P.M.

ಅದರಂತೆ ನಮ್ಮ ಕಾರ್ಯಕ್ರಮಗಳು ಬಡವರಿಗೆ ಗೃಹಕೈಗಾರಿಕೆ ಮತ್ತು ಇತರ ಕೈಗಾರಿಕೆಗಳಲ್ಲಿ ಅನುಕೂಲವಾಗುವುದಕ್ಕೆ ಏನು ಮಾಡಬೇಕೋ, ಯಾವರೀತಿ ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆ ಅಭಿವೃದ್ಧಿಯಾಗುವುದಕ್ಕೆ ಏನು ಸಹಾಯಮಾಡಬೇಕೋ, ಯಾವ ಯಾವ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಕಚ್ಚಾ

(ಶ್ರೀ ಡಿ. ಎಂ. ಗೋವಿಂದರಾಜು.)

ಮಾಲು ಸಿಕ್ಕುತ್ತದೆಯೋ ಅಂಥ ಪ್ರದೇಶಗಳಲ್ಲಿ ಯಾವ ಕೈಗಾರಿಕೆಗಳನ್ನು ಸ್ಥಾಪನೆಮಾಡಬೇಕೋ, ಇವೆಲ್ಲವನ್ನೂ ಕೂಡ ಮಾಡಬೇಕಾದದ್ದು ಬಹಳ ಮುಖ್ಯ ವಾಗಿದೆ.

ಈ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರ ಅಭಿವೃದ್ಧಿಗೆ, ರೈತರ ವ್ಯವಸಾಯಕ್ಕೆ ನಾವು ಉತ್ತೇಜನ ಕೊಡಬೇಕು. ಇವಕ್ಕೆ ಅವರಿಗೆ ಹಣದ ಸಹಾಯವೂ ಕೂಡ ಮುಖ್ಯವಾಗಿದೆ. ಆದುದರಿಂದಲೇ ಅನೇಕರೀತಿ ರೈತ ಬಾಂಧವರಿಗೆ ಹಣ ಸಹಾಯವನ್ನು ಮಾಡುತ್ತಿದ್ದಾರೆ. ಈ ಸಹಾಯ ಯಾವರೀತಿಯಾಗಿ ಒದಗುತ್ತಿದೆ, ಅವರಿಗೆ ಯಾವರೀತಿ ಅನುಕೂಲವಾಗುತ್ತಿದೆ ಎಂಬ ವಿಷಯವನ್ನು ಕೂಡ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾದದ್ದು ಬಹಳ ಮುಖ್ಯವಾದದ್ದಾಗಿದೆ. ಇವೊತ್ತಿನ ದಿವಸ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಎಂಬ ಒಂದು ಬ್ಯಾಂಕ್ ಇದೆ. ಅದರಲ್ಲಿ ಒಬ್ಬ ರೈತ ಸಾಲಕ್ಕಾಗಿ ಅರ್ಜಿ ಹಾಕಿದರೆ ಮೂರು ವರ್ಷಗಳ ಮೇಲೆ ಅದು ಮಂಜೂರಾಗುತ್ತದೆ. ಸಾಲಕ್ಕೆ ಅರ್ಜಿಯನ್ನು ಹಾಕಿದರೆ, ಅವಕ್ಕೆ ಏನೇನು ಪ್ರೊಸೀಜರ್ ಇದೆಯೋ ಅದನ್ನೆಲ್ಲ ಒಂದೇ ಸಲ ಮಾಡಿ, ಅದರಬಗ್ಗೆ ಬೇಕಾದ ವಿವರಗಳನ್ನೆಲ್ಲ ಒಂದೇಸಲ ಪಡೆದು, ರೈತನ ಅರ್ಜಿಯನ್ನು ತೆಗೆದುಕೊಂಡು ಎರಡುಮೂರು ತಿಂಗಗಳಲ್ಲಿ ಅವನಿಗೆ ಸಾಲದೊರೆತರೆ ಅದರಿಂದ ಪ್ರಯೋಜನವಾಗುತ್ತದೆಯೇ ಹೊರತು ಮೂರುನಾಲ್ಕು ವರ್ಷಗಳ ಕಾಲವಾದರೂ ರೈತನಿಗೆ ಸಾಲ ಕೊಡದೆ ಇದ್ದರೆ ಅದರಿಂದ ಖಂಡಿತವಾಗಿಯೂ ಒಳ್ಳೆಯದಾಗುವುದಿಲ್ಲ; ಹಾನಿಯಾಗುತ್ತದೆ. ಆದುದರಿಂದ ಆದಷ್ಟು ಜಾಗ್ರತೆಯಾಗಿ ರೈತರಿಗೆ ಯಾವಯಾವ ಮೂಲಕ ಸಾಲಸಿಕ್ಕುತ್ತದೆಯೋ ಅದು ಜಾಗ್ರತೆ ಸಿಕ್ಕುವಂತೆ ಮಾಡಬೇಕಾದದ್ದು ಕೂಡ ಬಹಳ ಮುಖ್ಯವಾಗಿದೆ.

ಇವೊತ್ತಿನ ದಿವಸ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ನೀರಾವರಿ ಕೆಲಸಗಳನ್ನು ತೆಗೆದುಕೊಳ್ಳುವುದರಲ್ಲಿ ದೊಡ್ಡದೊಡ್ಡ ಪ್ರಾಜೆಕ್ಟ್‌ಗಳು, ದೊಡ್ಡದೊಡ್ಡ ಕೆರೆಗಳು ಈ ರೀತಿಯಾಗಿ ಕೋಟ್ಯಂತರ ರೂಪಾಯಿಗಳ ಕೆಲಸಗಳನ್ನು ಮೊದಲು ತೆಗೆದುಕೊಳ್ಳುತ್ತಿದ್ದೀರಿ. ಮುಖ್ಯವಾಗಿ ಸಣ್ಣಸಣ್ಣ ಕೆರೆಗಳ ಜೀರ್ಣೋದ್ಧಾರವಾಗಬೇಕು. ಸಣ್ಣಸಣ್ಣ ಕೆರೆಗಳಿಂದ ಜಾಗ್ರತೆ ನಮಗೆ ಫಲ ದೊರೆಯುತ್ತದೆ. ಇವೊತ್ತಿನ ದಿವಸ ದೊಡ್ಡದೊಡ್ಡ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡರೂ ಕೂಡ ಇನ್ನು ಐದುವರ್ಷಗಳಲ್ಲಿ ಫಲ ದೊರೆಯಬೇಕಾದರೆ ಬಹಳ ಕಷ್ಟವಾಗುತ್ತದೆ. ಅದಕ್ಕೋಸ್ಕರ ಈಗ minor irrigation works, ಸಣ್ಣಸಣ್ಣ ಕೆರೆಗಳ ರಿಪೇರಿ ಕೆಲಸವನ್ನು ಜೀರ್ಣೋದ್ಧಾರ ಕೆಲಸವನ್ನು ಈ ಯೋಜನೆಯಲ್ಲಿ ಹೆಚ್ಚಾಗಿ ಮಾಡಬೇಕು. ಇದರಿಂದ ನಮ್ಮ ರೈತರ ಆರ್ಥಿಕಸ್ಥಿತಿ ಮತ್ತು ಅವರ ಉತ್ಪಾದನಾಶಕ್ತಿ ಜಾಗ್ರತೆ ಹೆಚ್ಚುವುದಕ್ಕೆ ಸಹಾಯವಾಗುತ್ತದೆ.

ನಮ್ಮ ರೈತರ ಅಭಿವೃದ್ಧಿಗೆ ಗೋ ಸಂಪತ್ತು ಬಹಳ ಮುಖ್ಯವಾದದ್ದು. ಗೋ ಸಂಪತ್ತಿನ ಅಭಿವೃದ್ಧಿಗೆ ನಮ್ಮ ಸರ್ಕಾರದವರು ಅನೇಕ ಅನುಕೂಲಗಳನ್ನು ಮಾಡಿದ್ದಾರೆ. ಇನ್ನೂ ಬಹಳ ಅನುಕೂಲಗಳನ್ನು ಮಾಡಬೇಕಾಗಿದೆ. ಏಕೆಂದರೆ ಗೋ ಸಂಪತ್ತೇ ನಮ್ಮ ರೈತರ ಮುಖ್ಯಾಧಾರ. ಆದಕಾರಣ ತಳಿ ಅಭಿವೃದ್ಧಿ ವಿಷಯದಲ್ಲಿ, ಗೋ ಸಂಪತ್ತಿನ ಅಭಿವೃದ್ಧಿ ವಿಷಯದಲ್ಲಿ ನಮ್ಮ ಸರ್ಕಾರದವರೂ ಇನ್ನೂ ಹೆಚ್ಚು ಆಸಕ್ತಿ ವಹಿಸಬೇಕು. ಪಶುವೈದ್ಯ ಶಾಲೆಗಳು ನಮ್ಮ ಮೈಸೂರು ದೇಶದಲ್ಲಿ ಬಹಳ ಕಡಿಮೆ. ನಮ್ಮಲ್ಲಿ ದನಕರುಗಳಿಗೆ ಹೆಚ್ಚಾದ ರೋಗರುಜಿನಗಳು ಬಂದರೆ ಅವನ್ನು ನಿವಾರಣೆ ಮಾಡುವುದಕ್ಕೆ ಸೌಕರ್ಯಗಳು ಬೇಕು. ಆದುದರಿಂದ ಪಶುವೈದ್ಯಶಾಲೆಗಳನ್ನು ಸಂಸ್ಥಾನದಲ್ಲಿ ಹೆಚ್ಚಿಗೆ ಸ್ಥಾಪನೆ ಮಾಡಬೇಕಾದದ್ದು ಬಹಳ ಮುಖ್ಯವಾದದ್ದು. ಅದರಂತೆಯೇ ಆಸ್ಪತ್ರೆಗಳು ಮತ್ತು ಡಿಸ್ಪೆನ್ಸರಿಗಳೂ ಕೂಡ ಸ್ಥಾಪನೆಯಾಗಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆಗಳ ಸ್ಥಾಪನೆಗೆ ಹೆಚ್ಚು ಗಮನ ಕೊಡಬೇಕು. ಈ ಪ್ರದೇಶಗಳಲ್ಲಿ ಜನರಿಗೆ ಆಸ್ಪತ್ರೆ ಮತ್ತು ಔಷಧಿ ಸೌಕರ್ಯ ಸಿಕ್ಕುವುದು ಬಹಳ ಕಡಮೆ. ಹಳ್ಳಿಗಾಡಿನಲ್ಲಿ ಜನರು ಸುಮಾರು 10-12 ಮೈಲಿ ದೂರಹೋಗಿ ಔಷಧಿಗಳನ್ನು ಪಡೆಯಬೇಕಾಗಿದೆ. ಆದಕಾರಣ ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆ ಸೌಕರ್ಯ ಒದಗಿಸುವುದು ಮುಖ್ಯವಾದುದಾಗಿದೆ. ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಆಸ್ಪತ್ರೆಗಳನ್ನು ಕೂಡ ಹೆಚ್ಚಾಗಿ ಸ್ಥಾಪನೆಮಾಡಬೇಕಾದದ್ದು ಬಹಳ ಮುಖ್ಯವಾದುದು.

ಗ್ರಾಮಾಂತರ ಪ್ರದೇಶಗಳಲ್ಲಿ ಸ್ಕೂಲುಗಳು ಬಹಳ ಕಡಿಮೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಒಂದೊಂದು ಸ್ಕೂಲನ್ನು ಸ್ಥಾಪನೆಮಾಡಬೇಕು. ನಮ್ಮ ಸರ್ಕಾರದವರು ವಿದ್ಯಾಭ್ಯಾಸ ಸುಧಾರಣೆಗಳನ್ನು ಜಾರಿಗೆ ತಂದಿದ್ದಾರೆ. ಅದು ಬಹಳ ಸಂತೋಷದ ವಿಷಯ. ವಿದ್ಯಾಭ್ಯಾಸವನ್ನು ವ್ಯವಸಾಯದ ಮೂಲಕ ಮಾಡುವ ಹಾಗೆ ಶಿಕ್ಷಣ ಸುಧಾರಣೆಗಳನ್ನು ತಂದಿರುವುದು ಒಳ್ಳೆಯದು. ಈ ಮೂಲಕ ಪಾಠಗಳನ್ನು ಹೇಳಿದರೆ ಸ್ವಾವಲಂಬನೆ ಬರುತ್ತದೆ. ಪ್ರತಿಯೊಂದು ಗ್ರಾಮದಲ್ಲಿಯೂ ಒಂದೊಂದು ಸ್ಕೂಲು ಸ್ಥಾಪನೆಮಾಡಿ ಆದಷ್ಟು ಜಾಗ್ರತೆ ಬೇಸಿಕ್ ಸ್ಕೂಲುಗಳಾಗಿ ಪರಿವರ್ತನೆ ಮಾಡುವುದು ಬಹಳ ಮುಖ್ಯವಾದದ್ದು. ಆದುದರಿಂದ ನಮ್ಮ ಮೈಸೂರು ಸಂಸ್ಥಾನದ ಎಲ್ಲ ಸ್ಕೂಲುಗಳೂ ಆದಷ್ಟು ಜಾಗ್ರತೆ ಬೇಸಿಕ್ ಸ್ಕೂಲುಗಳಾಗಿ ಪರಿವರ್ತನೆಯಾಗುವುದರಿಂದ ಬಹಳ ಅನುಕೂಲವಾಗುತ್ತದೆ. ಈ ರೀತಿಯಾಗಿ ಮಾಡಬೇಕಾದದ್ದು ಮುಖ್ಯವಾದದ್ದು.

ಇನ್ನೊಂದು ವಿಷಯ. ಇವೊತ್ತಿನ ದಿವಸ ನಮ್ಮ ಹರಿಜನ ಬಾಂಧವರಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಒಂದು ಮನೆಗೆ 300 ರೂಪಾಯಿಗಳಂತೆ ಖರ್ಚು ಮಾಡುತ್ತಿದ್ದೀರಿ. ಅವರಿಗೆ ಒಂದು ಮನೆ ಕಟ್ಟಿಕೊಟ್ಟ ಮಾತ್ರಕ್ಕೆ, ಅವರ ಆರ್ಥಿಕಸ್ಥಿತಿ ಉತ್ತಮಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಮನೆಗಳನ್ನು ಕಟ್ಟಿಕೊಡುವುದಕ್ಕೆ ಬದಲಾಗಿ ಅವರಿಗೆ ಒಂದೊಂದು ಜೊತೆ ಎತ್ತುಗಳನ್ನು ಕೊಂಡು ಕೊಟ್ಟರೆ ಅದರಿಂದ ಜಮೀನನ್ನು ಸಾಗುವಳಿ ಮಾಡಿಕೊಂಡು ಅವರು ತಮ್ಮ ಸಂಪಾದನಾಶಕ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಹಾಯಮಾಡಿದಂತಾಗುತ್ತದೆ. ಹೀಗೆ ಸಹಾಯ ಮಾಡದೆ ಬರೀ ಮನೆಗಳನ್ನು ಕಟ್ಟಿಸಿಕೊಟ್ಟ ಮಾತ್ರಕ್ಕೆ ಅವರ ಆರ್ಥಿಕಸ್ಥಿತಿ ಉತ್ತಮವಾಗುವುದಿಲ್ಲ. ಆದುದರಿಂದ ಹರಿಜನರ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಯಾವರೀತಿ ಮಾಡಬೇಕೋ ಆ ರೀತಿ ಮಾಡಬೇಕಾದದ್ದು ಮುಖ್ಯವಾಗಿದೆ.

ಈ ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿರುವ ಕಾರ್ಯಗಳನ್ನು ಕಾರ್ಯಗತ ಮಾಡಬೇಕಾದದ್ದು ಕೂಡ ನಮ್ಮ ಕರ್ತವ್ಯವಾಗಿದೆ. ಅವು ಬಹಳ ಯಶಸ್ವಿಯಾಗಿ ನಡೆಯುವಂತೆ ಮಾಡಬೇಕು. ಪಾಂಚವಾರ್ಷಿಕ ಯೋಜನೆಗಳ ಮುಖ್ಯವಾದ ಗುರಿ

ಏನೆಂದರೆ ನಮ್ಮ ಬಡಜನರಿಗೆ ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ, ಇರುವುದಕ್ಕೆ ವಸತಿ ಇಷ್ಟು ದೊರೆಯಬೇಕೆಂಬುದು. ಈ ಯೋಜನೆಗಳನ್ನು ಯಶಸ್ವಿಯಾಗಿ ಮಾಡಿ, ಮೇಲ್ಕಂಡ ಅನುಕೂಲಗಳನ್ನೆಲ್ಲ ಜನರಿಗೆ ಒದಗಿಸಿದರೆ ಆಗ ನಾವು ಯಾವರೀತಿಯ ರಾಮರಾಜ್ಯವನ್ನು ಸ್ಥಾಪನೆಮಾಡಬೇಕೆಂದು ಹೋರಾಡುತ್ತಿದ್ದೇವೆಯೋ ಅದೂ ಕೂಡ ಸಾಧನೆಯಾಗುತ್ತದೆ. ಆದುದರಿಂದ ನಮ್ಮ ಸರ್ಕಾರದವರು ದೇಶದಲ್ಲಿರುವ ಪ್ರತಿಯೊಬ್ಬ ಬಡವನಿಗೂ ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ, ವಾಸಮಾಡುವುದಕ್ಕೆ ಮನೆ, ಇವಿಷ್ಟು ಸಿಕ್ಕುವುದಕ್ಕೆ ಏನೇನು ಕಾರ್ಯಗಳನ್ನು ಮಾಡಬೇಕೋ ಅದೆಲ್ಲವನ್ನೂ ಈ ಪಾಂಚವಾರ್ಷಿಕ ಯೋಜನೆಯಲ್ಲಿ ಅಗತ್ಯವಾಗಿ ಮಾಡುತ್ತಾರೆಂಬ ನಂಬಿಕೆ ನನಗಿದೆ. ಈ ಯೋಜನೆಯಲ್ಲಿ 85 ಕೋಟಿ ರೂಪಾಯಿಗಳು ಖರ್ಚಾಗಬೇಕಾಗಿದೆ. ಈ ಹಣವು ನ್ಯಾಯವಾದ ರೀತಿಯಲ್ಲಿ, ಪ್ರತಿಯೊಂದು ಕಾಸೂ ಕೂಡ ದುಂದು ವೆಚ್ಚವಾಗದಂತೆ ಜನರಿಗೆ ಸೌಕರ್ಯಗಳನ್ನು ಒದಗಿಸುವುದಕ್ಕೆ ಖರ್ಚುಮಾಡಿ ನಮ್ಮ ಜನಗಳೆಲ್ಲರೂ ಸುಖಸಂಪತ್ತುಗಳಿಂದ ಬಾಳುವುದಕ್ಕೆ ಸಹಾಯಮಾಡಬೇಕೆಂದು ಕೊನೆಯದಾಗಿ ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—The House will now rise for lunch and meet again at 3-40.

The House adjourned at Ten Minutes past Three of the Clock and reassembled at Forty Minutes past Three of the Clock.

[MR. SPEAKER in the Chair.]

***Sri B. T. KEMPARAJ** (Bangalore South-Scheduled Castes):—Mr. Speaker, we have completed the First Five Year Plan and the Second Five Year Plan is placed in our hands. The First Five-Year Plan was expected to remedy the shortage of food and cloth and other articles of necessity for human consumption.

Sir, the Second Five-Year Plan is meant to increase the industrial development in the country and to give impetus to starting new life in the villages. This Plan is estimated to cost, in the course of the next five years, a sum of about 84 crores. Several Schemes to improve the economic position of the people are included. Whatever plan we might think of, it should be for improving the standard of life of the common man. Sir, we always say that the common man must be helped, he should be taken care of, all assistance should be given to him. But, as far as my knowledge goes, I find that in no way this plan goes to give a helping hand to the common man.

Sir, there are so many developmental activities contemplated in this scheme. There are schemes for the improvement of agriculture, for starting research laboratories for agricultural operations. But, whatever might be the research or the discovery made by this Department of Agriculture, how far it will go to help the ordinary agriculturist is the criterion. If we think from this point of view, I must say that we may not expect more improvement in this respect.

Coming to industry, Hon'ble Member Sri Mascarenhas has said much on the subject. Sir, whenever we think of the Socialistic Pattern of Society, we should think of a plan as to how we could make the employee feel the same amount of responsibility as felt by the employer. Every employee will get his wages, bonus and other allowances. I suggest that we can bring in a scheme to say that a portion of the allowances of the employee be cut and that amount be invested in the capital of that industry. By this method the employee becomes a shareholder of that industry, as it were, and he will evince more interest and responsibility in the development of that industry. Sir, it is high time that the Government should nationlise the individual industries. To bring into existence the Socialistic Pattern of Society, it is necessary that the disparity between man and man is first removed.

Coming to rural industrialisation, Government have, no doubt, made provision for giving loans to villagers to start small industries. But, this loan only reaches such persons who are capable of furnishing security. Though a person is really in need of some monetary help and even though he possesses all the talents to start an industry, he will not be able to secure any benefit from the scheme because he is not in a position to furnish any security for the loan he desires to take.

(SRI B. T. KEMPARAJ)

Government should evolve a plan whereby persons who could not furnish any security may also get the loan and start industries in their villages; otherwise, the help will not reach the really deserving persons. Several schemes are contemplated here, all with a view to help the tiller of the soil. But, when we actually go through every suggestion made by the framers of these schemes, we find that the principle adumbrated in the schemes may not be in a position to help the tiller of the soil. Therefore I request Government to think seriously over this problem and to help the tiller of the soil as best as they could.

Sir, Government is very anxious to develop the forest wealth in the State. But, I have got my own doubts as to how Government would be able to carry out this afforestation programme. The amount that is proposed to be spent under the scheme for the improvement and development of forest is too much in my opinion. The schemes should be made practicable and not theoretical.

Sir, coming to the Labour Housing Corporation, I would like to say that the scheme is very good. But, so far as the working of the Corporation is concerned, we are experiencing many difficulties. The person who wants to get the help should invest the complete value of the site. Unless he possesses a site, he will not be getting any help from the Corporation. In addition to this, he should invest 20 per cent of the building value that has to be constructed. Sir, this is a very important question that we have got to consider. The income of the persons who apply for such loans would be very low. If such a person is expected to invest the full value of the site and 20 per cent of the building value, it would be practically impossible for anybody getting low income to own a house. I therefore appeal to the Government to make this scheme an easy scheme wherein the low income people may get the best use of the Corporation.

4 P.M.

So far as irrigation and other development works are concerned, the Government has got a very good plan to improve the irrigation scheme, but the Government should think of finding some new sources of irrigation work and water facilities in the maidan pradesh because it is very difficult to get water supply in the maidan pradesh. Wherever it is possible it is necessary that the Government should think of having pick-ups in maidan pradesh. One of my friends represented that more wells can be dug in the rural parts. We find water diminishing as the number of wells increase. Therefore, as an alternative it is necessary to think of pick-ups wherever it is convenient to store water. It will help the ryots to get water facility.

As far as supply of electricity is concerned, it is necessary that rural electrification should be taken as a necessary step because unless we see that current is supplied to the extent needed by the rural population, whatever new schemes we may adopt, it will not be possible to improve the condition of the villager. Often, for cottage industries, it will be necessary to use electricity. If electricity is supplied for flour mill, power loom and such other things, the village economy will be improved to a great extent.

As regards the Depressed Class Housing Scheme, the Government should think of a well chalked out plan. Now the Government is giving some grant for building materials—two windows and one door to a single family. So far as this plan goes, we have been experiencing a good deal of difficulty. Therefore, the Government has sanctioned a sum of Rs. 2 crores for the amelioration of the Depressed Classes. As an alternative, the Government may think of having co-operative systems of building houses for the Depressed Classes, because whatever amount the Government will give and whatever materials the Government will supply will be eaten away by white ants within a year or two, after which the amount that has been spent for the upliftment of the Depressed Classes will be

a waste. It is better for the Government to introduce a new scheme instead of giving this kind of grant scattered here and there, which would not satisfy any person or any villager in the State. Therefore, I suggest to the Government that it is better that they think of the co-operative system of improving the Depressed Class colony. Thank you.

Sri M. V. RAMA RAO (Tumkur).—Mr. Speaker, Sir, we have good reason to congratulate ourselves upon the successful completion of the First Five-Year Plan that we formulated for ourselves. The Government of India which first put before the country the idea of a planned economy in this part of the Asian continent is equally entitled to receive the congratulations of this House on this occasion when we have just passed on from the First Five-Year Plan into the Second Five-Year Plan stage. The main achievement, speaking particularly of the First Five-Year Plan, is firstly the attainment of self-sufficiency in the production of food and other essential things needed by the common man; and in regard to this we may well be proud of ourselves for having reached self-sufficiency and for having enabled ourselves to cease to look to other countries for the supply of foodgrains needed by the millions in this country. Secondly, the other thing that we have notably achieved during this First-Five Year Plan period is the establishment of Community Projects and National Extension Service Blocks in various parts of the country. The concept of these Community Projects and National Extension Service Blocks is to carry to the under-developed or undeveloped rural parts in the country those amenities which are being enjoyed at large by urban or semi-urban areas in the country and during the five years that have now passed, the several Community Projects that have been established in different parts of the country and the numerous National Extension Service Blocks that have studded the countryside are evidence of our seriousness and our earnestness to set up the pace as well as the standard of economic progress among the millions of our countrymen. It has been said by some of our critics that these Community Projects have not been doing anything worthwhile and that these National Extension Service Blocks have hardly commenced to function so as to make the difference obvious to those who are to be served by these Projects and Blocks. To snch criticism all that I say in answer is, let us not be impatient; let us give as much time as is necessary for administrative processes to fulfill themselves and translate ideas put down on paper into realities which people can see for themselves and judge for themselves.

The idea of a planned economy, as I observed at the outset, is somewhat new to this part of the Asian continent and so far as India itself is concerned, the idea of a planned economy is certainly new to us; and it has been said, probably because our plans extend for five years at a stretch, that our planning ideas have been borrowed from our communist neighbour Soviet Russia. In Soviet Russia this planning was done initially for a five-year period and then for successive five-year periods. Except that, I do not see that there is much in common between the economic structure of the plan in India and in Soviet Russia. As a matter of fact, during the period following the First World War even America planned her economy and President Roosevelt brought into existence what the world has come to recognise and to remember as the New Deal where technicians replaced in important and in key positions the civilians and the administrators. The Technocracy, as it was called, of Post-war America was in essence an attempt to plan the economy of the nation to suit the requirements of the Post-war world and for the improvement, if not the rehabilitation, of National economy after the destruction that the First World War brought in its wake. In India we have just entered the threshold of planned economy and though we have reason to congratulate ourselyes upon what we have acheived during the First Five-Year Plan period, this is the proper occasion on which we should take stock of our actual requirements and, if I

(SRI M. V. RAMA RAO.)

may use that expression, make a realistic as distinguished from an idealistc, estimate of what the country needs. To-day the country is self-sufficient in regard to food and also in regard to clothing, but this country is not yet self-sufficient in regard to many other needs of the millions of our countrymen. One such deficiency is the appalling deficiency in housing accommodation. Another such deficiency is the want of cultivable land for those who can do nothing except carry on agricultural operation. In this country the masses subsist mainly on agriculture and allied occupations and it is a matter of great anxiety and I may say alarm, considering the rate at which our population has been increasing, that we should be having so many millions of people depending entirely on land for their subsistance but who do not possess any land of their own for cultivation. In Mysore State we have quite a considerable number of persons who can do nothing except carry on agriculture but who possess no land of their own. It is true that Government have set before themselves a policy of granting land to all persons who qualify for the grants of such lands, but I must say that, judging from the number of people who are landless cultivators in this country, this policy needs to be seriously reconsidered and steps taken to see that persons who can subsist on agriculture are enabled to do so by devising suitable measures to fit into this Second Five-Year Plan at least. In my district, in Chiknaikanahalli Taluk, there is a Co-operative Farm which has been set up a few years ago and the colonists who have been persuaded to settle down there are all Harijans. The colony consists of between 25 to 30 Harijan families who have been persuaded to settle down there. A few hundreds of acres of cultivable land have been made available to them and agriculture is carried on there as a co-operative enterprise with some assistance furnished by Government in the shape of a qualified Agricultural Inspector who gives them some technical advice and the grant of land that has been placed at their disposal for cultivation. I have on a previous occasion mentioned this to my esteemed friend Dr. Nagan Gowda, the Minister for Agriculture, and he was interested in the thing and he has promised me that he would go and see the colony for himself. I would suggest to him that he should do so as early as possible, because that will show him what can be done by way of co-operative agricultural endeavour.

Now, it is common knowledge that perhaps a few lakhs of Harijan families in this country are almost entirely landless. They have nothing to subsist upon except their ability to perform unskilled labour. And it is also common knowledge that this unskilled labour is largely at the disposal of landed interests who claim to subsist on the land and who claim to be and describe themselves as agriculturists but perform no real agricultural operation themselves. This unskilled labour, useful as it is, is not made use of in the best manner and to the most advantageous extent because it is available on such terms and conditions as the landed interests choose to dictate. These people, if they are allowed to cultivate their own lands or persuaded to cultivate land on a co-operative basis, will not only be enabled to live as free citizens of a free country doing what they can to earn an honest living but will at the same time solve some of the difficulties which the Government seems to be faced with at present in regard to the Tenancy legislation and also in regard to grant of lands and various other matters. That is, Sir, so far as co-operative farming is concerned.

Then, Sir, in this country we are fond fond of nationalising things. I hold no brief for private vested interests. I do not claim to speak on behalf of capitalistic economy. I am interested as much in the public sector as in the private sector, such as it happens to be. Recently the Government of India has nationalised life insurance in this country. All life insurance companies doing business have now passed into the control of a department of the

(*d*) Preparation of up-to-date Gradation List for Graduates and non-Graduates will be taken up after Allocation Statements of all categories are sanctioned.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಪದವೀಧರರ ಸಂಬಳ ಎಷ್ಟರಿಂದ ಪ್ರಾರಂಭವಾಗುತ್ತದೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಯಾವ ಹುದ್ದೆಯಲ್ಲಿದ್ದಾರೆನ್ನುವುದರ ಮೇಲೆ ಅವಲಂಬಿಸುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—(ಬಿ) ಭಾಗಕ್ಕೆ ಉತ್ತರವಾಗಿ ಆಪರೇಟರುಗಳ 'ಅಲೋಕೇಷನ್ ಸ್ಟೇಟ್‌ಮೆಂಟ್' ಮಂಜೂರಾಗದೆ ಇರುವುದರಿಂದ ಇನ್‌ಕ್ರಿಮೆಂಟ್ ಕೊಟ್ಟಿಲ್ಲವೆಂದು ಹೇಳಿದ್ದೀರಿ. ಇದು ಮಂಜೂರಾಗುವುದಕ್ಕೆ ಎಷ್ಟು ಕಾಲ ಹಿಡಿಯುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—Assistant Superintendents, Junior Electrical Engineers ಇವರುಗಳ ಅಲೋಕೇಷನ್ ಮಂಜೂರಾಗಿದೆ. ಈಗ ಆಪರೇಟರುಗಳ ಅಲೋಕೇಷನ್ ಮಾತ್ರ ನಿಂತಿದೆ. ಅದು ಇವೊತ್ತು ಸರ್ಕಾರದ ಮುಂದೆ ಇದೆ. ಅದನ್ನು ಶೀಘ್ರದಲ್ಲಿಯೇ ಮಂಜೂರ್ಮಾಡಲಾಗುವುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹತ್ತು ಹನ್ನೆರಡು ವರ್ಷ ಸರ್ವಿಸ್ ಆಗಿರುವವರನ್ನು ಬಿಟ್ಟು ನಾಲ್ಕು ಐದು ವರ್ಷ ಸರ್ವಿಸ್ ಆಗಿರುವವರಿಗೆ ಇನ್‌ಕ್ರಿಮೆಂಟ್ ಕೊಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲೋಕೇಷನ್ ಮಾಡುವಾಗ ಎಲ್ಲ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ಮಾಡಬೇಕಾಗುತ್ತದೆ, ಅದಕ್ಕೆ ಪಬ್ಲಿಕ್ ಸರ್ವಿಸ್ ಕಮಿಷನರ ಅಂಗೀಕಾರ ದೊರೆತ ಮೇಲೆ ಜಾರಿಗೆ ಕೊಡಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ವಿಚಾರದಲ್ಲಿ ವಿದ್ಯುಚ್ಛಕ್ತಿ ಇಲಾಖೆಯ ಕೆಲವು ಅಧಿಕಾರಿಗಳಿಗೆ ಅನ್ಯಾಯಮಾಡಿ ಕೆಲವರನ್ನು ಮೇಲೆ ಹಾಕಿ ಇನ್‌ಕ್ರಿಮೆಂಟ್ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಮಾಡುವುದಕ್ಕಾಗುವುದಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನರ ಸ್ಕ್ರೂಟಿನಿಯಾಗುವುದರಿಂದ ಹಾಗಾಗಿದ್ದರೆ ಸರಿಪಡಿಸಲಾಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಗ್ರೇಡೇಷನ್ ಲಿಸ್ಟ್ ತಯಾರಾಗುವುದಕ್ಕೆ ಎಷ್ಟು ವರ್ಷ ಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೆಡಿಯಾಗಿದೆ, ಪಬ್ಲಿಕ್ ಸರ್ವಿಸ್ ಕಮಿಷನ್ ಅಲೋಕೇಷನ್ ಮಂಜೂರಾತಿ ಕೊಟ್ಟ ಕೂಡಲೆ ಆಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇದುವರೆಗೂ ತಯಾರಾಗದಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—1954ನೆಯ ಇಸವಿಯಲ್ಲಿ ಒಂದು ಆರ್ಡರಾಯಿತು. ಅದರ ಪ್ರಕಾರ ತಯಾರಾಗುತ್ತಿದೆ.

Cement Road (Grants).

Q.—585. Sri Y. M. CHANDRASEKHARIAH (Kadur).—

Will the Government be pleased to state :—

(*a*) the number of miles of cement road formed at present in the State (information to be given districtwar);

(*b*) the amount of annual maintenance grant being given for cement road per mile;

(*c*) the amount of maintenance grant that was being given per mile per year before being converted into cement road?

A.—Sri H. M. CHANNABASAPPA (Minister for Industries).—

(*a*) *Vide* Statement appended.

(*b*) and (*c*) No earmarked grant is allotted for the cement-concreted portions but a part of the mileage grant given for the entire roads in which the cement-concreted portions are situated is utilised for executing essential maintenance works on such portions of the roads. The expenditure per mile of the cement-concreted portion is necessarily smaller than that on the rest of the road. The mileage grant for I Class Roads varies from Rs. 750 to Rs. 1,000.

Sl. No.	No. of Division	No. of miles cement concreted	
		Miles	Furlongs
1	Sagar Division	Nil	...
2	Shimoga Division	27	3
3	Chickmagalur Division	12	3
4	Chitaldrug do	Nil	...
5	Davangere do	Nil	...
6	Mandya do	20	4
7	Malavalli do	Nil	...
8	Tumkur do	31	6
9	Nanjangud do	18	7
10	Bangalore do	30	7
11	Kolar do	Nil	...
12	Mysore do	33	...
13	Krishnarajanagar Division	Nil	..
14	Hassan Division	13	4
15	Bellary do	4	...
16	Materials do	0	5
	Total ...	192	7

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮೈಸೂರು ದೇಶದಲ್ಲಿ ಸಿಮೆಂಟ್ ಮತ್ತು ಟಾರ್ ಮಾಡಿರುವ ರಸ್ತೆ ಸುಮಾರು 300-400 ಮೈಲಿಗಳಷ್ಟಿರುವುದಕ್ಕೇಕೆ ಮೈಲೇಜ್ ಮೈಂಟೆನೆನ್ಸ್ ಗ್ರ್ಯಾಂಟ್ ಕೊಡುವುದು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸಿಮೆಂಟ್ ರಸ್ತೆಗೆ ಕೊಡುವುದಿಲ್ಲ. ದೊಡ್ಡ ರಸ್ತೆಗಳಲ್ಲಿ ಮಧ್ಯೆ 2—3 ಮೈಲಿ ಸಿಮೆಂಟ್ ಮಾಡದಿರುವುದಕ್ಕೆ ಕೊಡಲಾಗುತ್ತದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ದಾವಣಗೆರೆ ಮತ್ತು ಚಿತ್ರದುರ್ಗ ಡಿವಿಜನ್‌ನಲ್ಲಿ ಸಿಮೆಂಟ್ ರಸ್ತೆ ಯಾವುದೂ ಇಲ್ಲವೆಂದು ಹೇಳಿದೆ. ಅಲ್ಲಿ ಎಲ್ಲಾದರೂ ಸಿಮೆಂಟ್ ರಸ್ತೆ ಮಾಡಬೇಕೆಂದಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಮುಂದಾದರೂ ಅಲ್ಲಿ ಸಿಮೆಂಟ್ ರಸ್ತೆ ಮಾಡುವುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಭಸಪ್ಪ.—ಸಿಮೆಂಟ್ ರಸ್ತೆ ಾಡುವುದನ್ನು ನಿಲ್ಲಿಸಬೇಕೆಂದಿದ್ದೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಪೂರ್ಣವಾಗಿ ಸಿಮೆಂಟ್ ಕಾಙ್ಕ್ರೀಟ್ ಮಾಡಿರುವ ರಸ್ತೆಯಲ್ಲಿ ಕೆಲಸ ವೇನೂ ಇಲ್ಲದಿರುವಾಗ ಮೈಲಿಗೆ 750 ರಿಂದ 1,000 ರೂಪಾಯಿಗಳವರೆಗೆ ಖರ್ಚು ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಷ್ಟು ಹಣ ಕೊಡುವುದು ನಿಜ. ಹಣ ಇದೇ ರೀತಿ ಖರ್ಚು ಮಾಡಬೇಕೆಂದು ವಿಧಾಯಕವಾಗಿಲ್ಲ. ಎಲ್ಲಿ ಆವಶ್ಯಕವೋ ಅಲ್ಲಿ ಖರ್ಚು ಮಾಡಬಹುದು. ಸಿಮೆಂಟ್ ರಸ್ತೆಗಳಲ್ಲಿ ಅದರ ಎರಡು ಪಕ್ಕಗಳ ರಿಪೇರಿಯಾಗಬೇಕು, ಚೆಕ್ ಡ್ರೈನ್, ಸೈಡ್ ಡ್ರೈನ್ ರಿಪೇರಿಯಾಗಬೇಕು. ಅದಕ್ಕೆ ಹಣ ಕೊಡುತ್ತಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಒದಗಿಸುತ್ತಿರುವ ಮೈಲೇಜು ಗ್ರಾಂಟು ದುರುಪಯೋಗವಾಗುತ್ತಿದೆ. ಅದನ್ನು ಬೇರೆ ಮೈಲಿಗೆ ಕೊಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲೂ ಗ್ರಾಂಟನ್ನು ಇಂಥ ಮೈಲಿಗೇ ಖರ್ಚು ಮಾಡಬೇಕೆಂದು ವಿಧಾಯಕವಾಗಿಲ್ಲ. ಆವಶ್ಯಕತೆಯಿರುವ ಕಡೆ ಖರ್ಚು ಮಾಡಬೇಬೇಕೆಂದು ಹೇಳಿ ಅದನ್ನು ಆಫೀಸರ ವಿತರಣೆಗೆ ಬಿಟ್ಟಿದೆ.

Roads in Channapatna Taluk.

Q.—5. Sri S. KARIAPPA (Virupakshapura).—

Will the Government be pleased to state :—

(a) the number of roads in Channapatna Taluk that are proposed to be constructed out of (i) Development Funds (ii) District Board Funds and (iii) Central Government Grants ;

(b) the length and cost of each of these roads ;

(c) of these roads, those, the construction of which is already in progress ?

A.—Sri T. CHANNIAH (Minister for Public Health and Local Self-Government).—

(a)—

(i) *Roads formed out of Development Funds.*—

1. Mandya-Bommanaikanahalli road.
2. Volageredoddi—Mogenahalli road.

(ii) *Out of District Funds.*—

1. Akkur-Sogala road.
2. Kudlur-Mallurpatna road.
3. Lalaghatta—Thimmasandra road.
4. Allalsandra road.
5. Channapatna-Anajavadi road.
6. Devarahosahalli road.
7. Channapatna-Nidasale Road.

(iii) *Out of Central Funds.*—

No roads have been formed.

(b) *Vide* list appended.

(c) Roads formed under Serial No. (a) (i) are under progress and those under Serial No. (a) (ii) have been completed.

List of Roads in Channapatna Taluk.

Sl. No.	Name of road	Length M.F.		1954-55	1955-56
	Formed out of District Board Funds.			Rs	Rs
1	Akkur-Sogala ...	6	0	11,995	1,804
2	Kudlur-Mallurpatna road ...	4	0	400	Handed over to the P.W.D.
3	Lalaghatta-Thimmasandra road ...	2	4	2,251	1,235
4	Allalasandra road ...	1	2	...	1,000
5	Channapatna-Anjwadi road ...	6	0	9,762	5,142
6	Devarahosahalli road ...	2	4	2,549	3,541
7	Channapatna-Nidasale road ...	6	4	1,886	Handed over to the P.W.D.
	Formed out of Development Funds.				
8	Mandya-Bommanaikanahalli ...	1	4	3,740	...
9	Valageradoddi-Mogenahalli ...	1	4	3,730	...

ಶ್ರೀ ಎಸ್. ಕರಿಯಪ್ಪ.—ಉತ್ತರದಲ್ಲಿ ಒಂಬತ್ತು ರಸ್ತೆಗಳನ್ನು ಮಾಡುವುದಾಗಿ ಹೇಳಿದೆ. ಅದರಂತೆ ಬೇರೆ ರಸ್ತೆಗಳನ್ನು ಮಾಡುವ ಪ್ರಪೋಸಲ್ ಇದೆಯೆ?

ಶ್ರೀ ಟಿ. ಚನ್ನಯ್ಯ.—ಇನ್ನೂ ನಾಲ್ಕು ಮಾಡಬೇಕೆಂದು ಹಣ ಒದಗಿಸಿದೆ.

ಶ್ರೀ ಎಸ್. ಕರಿಯಪ್ಪ.—ಹಿಂದೆ ಮಂಜೂರು ಮಾಡಿದೆಯೆಂದು ಹೇಳಿದ್ದ ಕೆಲವು ರಸ್ತೆಗಳನ್ನು ಮುಂದುವರಿಸಲು ಎಸ್ಟಿಮೇಟ್ ವಗೈರೆ ಬಂದಿಲ್ಲವೆ?

ಶ್ರೀ ಟಿ. ಚನ್ನಯ್ಯ.—ತಿಳಿದು ಹೇಳುತ್ತೇನೆ.

ಶ್ರೀ ಎಸ್. ಕರಿಯಪ್ಪ.—ಈಗ ವಿಚಾರಿಸಿ ಆ ರಸ್ತೆಗಳನ್ನು ಮುಂದುವರಿಸಲು ಪ್ರಯತ್ನಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಸಾಧ್ಯವಾದರೆ ಮಾಡೋಣ.

Kadur-Maravanji Road.

Q.—583. Sri Y. M. CHANDRASEKHARIAH (Kadur).—

Will the Government be pleased to state :—

(*a*) the year in which the work of Kadur-Maravanji Road of Kadur Taluk was commenced ;

(*b*) the amount expended on this road till now (information to be given yearwar) ;

(*c*) the number of years and the amount required to complete the work and make it a pucca road ;

(*d*) the length of this road ?

A.—Sri T. CHANNIAH (Minister for Public Health and Local Self-Government).—

(*a*) 1941-42.

(*b*) Rs. 92,416-9-0

			Rs.	a.	p.
June	1942	...	5,867	14	0
,,	1943	...	2,192	8	0
,,	1944	...	768	15	0
,,	1945	...	188	2	0
,,	1946	...	1,358	9	0
,,	1947	...	2,151	8	0
,,	1948	...	6,588	12	0
,,	1949	...	11,405	12	0
,,	1950	...	17,471	8	0
March	1951	...	11,173	6	0
,,	1952	...	3,118	1	0
,,	1953	...	4,530	13	0
,,	1954	...	13,266	0	6
,,	1955	...	5,877	12	0
January	1956	...	1,400	10	0
Petty Works		...	1,363	5	0
Establishment, Tools and Plant Charges.			3,693	1	6
Total		...	92,416	9	0

(*c*) It may take about 2 years. An estimate for Rs. 1·3 lakhs is under scrutiny.

(*d*) 22½ miles.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಮರವಂಜಿ ರಸ್ತೆ 1941-42ನೆಯ ಸಾಲಿನಲ್ಲಿ ಪ್ರಾರಂಭವಾಗಿ ಈ ದಿವಸದವರೆಗೂ ಪೂರ್ಣವಾಗದಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಈಗಾಗಲೆ 92,416-9-0 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನೂ ಒಂದು ಲಕ್ಷ ಮೂರು ಸಾವಿರ ರೂಪಾಯಿಗಳಿಗೆ ಅಂದಾಜು ತಯಾರಾಗಿ ಸ್ಕ್ರೂಟಿನಿಗೆ ಹೋಗಿದೆ. ಈ ಹಣ ಮಂಜೂರು ಮಾಡಿದ ತಕ್ಷಣ ಬಾಕಿಯಿರುವ ರಸ್ತೆ ಪೂರ್ಣ ಮಾಡಲು ಸರ್ಕಾರ ಕ್ರಮ ಕೈಕೊಳ್ಳುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಪ್ರಾರಂಭವಾಗಿ 15 ವರ್ಷಗಳಾಗಿದ್ದರೂ ಇಲ್ಲಿನವರೆಗೂ ಆ ರಸ್ತೆಯನ್ನು ಪೂರ್ಣಮಾಡದಿರುವುದು ಸರಿಯಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚನ್ನಯ್ಯ.—ಬಹಳ ವರ್ಷವಾಗಿದೆಯೆಂಬುದು ಗಮನಕ್ಕೆ ಬಂದಿದೆ. ಏಕೆ ನಿಧಾನವಾಗಿದೆಯೆಂಬುದನ್ನು ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿಚಾರ ಮಾಡುತ್ತಿದ್ದೇವೆ. ಸಕಾರಣ ತಿಳಿದಮೇಲೆ ಸ್ಟ್ರಿಕ್ಟಾಗಿ ತಿಳಿವಳಿಕೆ ಕೊಟ್ಟು ಜಾಗ್ರತೆ ಕೆಲಸ ಮಾಡಲು ಏರ್ಪಾಡು ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಈ ಕೆಲಸವನ್ನು ಮಂಜೂರು ಮಾಡಿ ಜಾಗ್ರತೆ ಮಾಡಿಸುತ್ತೀರಾ?

ಶ್ರೀ ಟಿ. ಚನ್ನಯ್ಯ.—ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—92 ಸಾವಿರ ಚಿಲ್ಲರೆ ರೂಪಾಯಿಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಖರ್ಚುಮಾಡಿರುವರೆ ಅಥವಾ ಡಿಸ್ಟ್ರಿಕ್ಟ್ ಬೋರ್ಡಿನವರು ಖರ್ಚು ಮಾಡಿರುವರೆ?

ಶ್ರೀ ಟಿ. ಚನ್ನಯ್ಯ.—ಪಬ್ಲಿಕ್ ವರ್ಕ್ಸ್ ಇಲಾಖೆಯವರು ಖರ್ಚು ಮಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಈ 92 ಸಾವಿರ ಚಿಲ್ಲರೆಯಲ್ಲಿ ಒಂಭತ್ತು ಸಾವಿರ ರೂಪಾಯಿ ಕೆಲಸ ಕೂಡ ಆಗಿಲ್ಲವೆಂಬುದನ್ನು ವಿಚಾರ ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಖರ್ಚಾಗಿರುವುದಕ್ಕೇ ಕೊಟ್ಟಿರುವುದು. ತಾವು ಹೇಳಿದಂತೆ ಆಗಿಲ್ಲ.

District Board Roads, Chickmagalur District (Acquisition and compensation).

Q.—584. Sri Y. M. CHANDRASEKHARIAH (Kadur).—

Will the Government be pleased to state :—

(*a*) the length of District Board Roads at present in Chickmagalur District (information to be given talukwar) ;

(*b*) the District Board Roads in respect of which acquisition of lands has been completed in the district (information to be given talukwar) ;

(c) the roads in respect of which raiyats are given compensation after acquisition (information to be given talukwar);

(d) the roads in respect of which compensation is yet to be paid to the raiyats (information to be given talukwar) ?

A.—Sri T. CHANNIAH (Minister for Public Health and Local Self-Government).—

(a) 498 miles and 5 furlongs.

	Name of Taluk	Miles	Furlongs
1.	Chickmagalur ...	106	7
2.	Mudigere ...	95	1
3.	Koppa ...	127	6
4.	Narasimharajapura.	37	0
5.	Tarikere ...	68	2
6.	Kadur ...	63	5

(b) No acquisition of land was made during recent years except in the case of Ajjampura-Bukkambudi Road.

(c) Only in the case of Ajjampura-Bukkambudi Road acquisition of land was made and final award is not yet passed.

(d) Tarikere Taluk. Ajjampura-Bukkambudi Road.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಯಲ್ಲಿ ಸುಮಾರು 120 ಮೈಲಿಗಳಿಗೆ ಅಕ್ವಿಜಿಷನ್ ರಿಕಾರ್ಡ್ ನಡೆಸಿ ಪರಿಹಾರ ಕೊಟ್ಟಿಲ್ಲದಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಅಜ್ಜಂಪುರ—ಬುಕ್ಕಾಂಬುದಿ ರಸ್ತೆ ಬಗ್ಗೆ ಅಕ್ವಿಜಿಷನ್ ಆಗಿ ಹಣ ಕೊಡಲಾಗಿದೆ. ಕಾಂಪೆನ್‌ಸೇಷನ್ ಅವಾರ್ಡ್ ಮಾಡಿಲ್ಲ. ಜಾಗ್ರತೆ ಮಾಡಿ ಎಂದು ಹೇಳಿದೆ. ಬಾಕಿ ವಿಚಾರ ತಿಳಿದು ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕಡೂರು-ಮಂಗಳೂರು ರಸ್ತೆ 1941 ರಲ್ಲಿ ಪ್ರಾರಂಭವಾಗಿದ್ದರೂ ಈ ದಿವಸದವರೆಗೂ ಅಕ್ವಿಜಿಷನ್ ರಿಕಾರ್ಡ್ ನಡೆಯದಿರುವುದಕ್ಕೆ ಕಾರಣವೇನು? 27ನೆಯ ಮೈಲಿಯಲ್ಲಿ 15 ವರ್ಷಗಳಾದರೂ ಅಕ್ವಿಜಿಷನ್ ರಿಕಾರ್ಡ್ ಆಗಿಲ್ಲದಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಜಮೀನ್‌ದಾರರು ಅಕ್ವೈರ್ ಮಾಡಿಕೊಳ್ಳುವುದಕ್ಕೆ ತಕರಾರು ಹಾಕುವುದರಿಂದ ಸ್ವಲ್ಪ ನಿಧಾನವಾಗಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಜಮೀನುದಾರರು ತಕರಾರು ಮಾಡದೆ ಅವರೇ ಕೇಳುತ್ತಿದ್ದರೂ ಈ ದಿವಸದವರೆಗೂ ಅಕ್ವಿಜಿಷನ್ ಆಗದಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ರಿಕಾರ್ಡ್ ತರಿಸಿ ನೋಡಿ ಕಾರಣಗಳನ್ನು ಆಮೇಲೆ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ದಿವಸದವರೆಗೂ ಕಂದಾಯ ತೆಗೆದುಕೊಳ್ಳುತ್ತಿದ್ದಾರೆ, ಅಕ್ವಿಜಿಷನ್ ಆಗಿಲ್ಲ. ಕಂದಾಯ ಕೂಡ ಮಾಫಿ ಮಾಡದಿದ್ದರೆ ರೈತರ ಗತಿಯೇನು?

ಶ್ರೀ ಟಿ. ಚನ್ನಯ್ಯ.—ಸೂಕ್ತ ..ಕಾರ್ಯಕ್ರಮ ತೆಗೆದುಕೊಂಡು ಜಾಗ್ರತೆ ರೆಗ್ಯುಲರೈಸ್ ಮಾಡುತ್ತೇವೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಪೂರ್ಣವಾಗಿ ಅಕ್ವೈರ್ ಆಗಿಲ್ಲವೆಂದು ಹೇಳಿದರು. ಜಮೀನು ಕಂದಾಯ ವಸೂಲು ಮಾಡುತ್ತಿದ್ದೀರಾ?

ಶ್ರೀ ಟಿ. ಚನ್ನಯ್ಯ.—ನೋಟೀಸ್ ಬೇಕು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಅಕ್ವಿಜಿಷನ್ ರಿಕಾರ್ಡ್ ಮುಗಿದು ಹಣ ಪಾವತಿಯಾಗದಿದ್ದರೆ ಕಂದಾಯ ಕೊಡಬೇಕಲ್ಲವೆ?

ಶ್ರೀ ಟಿ. ಚನ್ನಯ್ಯ.—ಈಗ ಆ ವಿವರವಿಲ್ಲದ್ದರಿಂದ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಈಗ ದೇಶದಲ್ಲಿ ಲಕ್ಷಾಂತರ ಎಕರೆ ಜಮೀನಿನಲ್ಲಿ ರಸ್ತೆ ಮಾಡಿದ್ದಾರೆ. ಜಮೀನು ಅಕ್ವೈರ್ ಆಗದಿದ್ದರೆ ಜಮೀನು ಕಂದಾಯ ಸರ್ಕಾರ ಕೊಡಬೇಕೇ ಅಥವಾ ರೈತರು ಕೊಡಬೇಕೇ?

ಶ್ರೀ ಟಿ. ಚನ್ನಯ್ಯ.—ರೈತರೇ ಕೊಡಬೇಕು.

9 A.M.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಸರ್ಕಾರದವರು ಇವುಗಳ ಮೇಲೆ ಹಣ ಹಾಕಿ ಕೆಲಸ ಮಾಡಿಸಿದ ಮೇಲೆ ಈ ಭೂಮಿ ಕಂದಾಯವನ್ನು ಯಾರು ಕೊಡಬೇಕು?

Sri T. CHANNIAH.—I have not got the details with me now. If the Hon'ble Member wants them I will furnish later.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ತಮ್ಮಲ್ಲಿ ಈಗ ಆ ವಿವರಗಳಿಲ್ಲದಿದ್ದರೆ ತಾವು ತರಿಸಿಕೊಂಡು ಹೇಳಬೇಕು. ಈಗ ತಾವು ಆ ಭೂಮಿಗಳನ್ನು ತೆಗೆದುಕೊಂಡು ಅಲ್ಲಿ ರಸ್ತೆ ಮಾಡಿಸಿದನಂತರ ಆ ಭೂಮಿಯ ಕಂದಾಯವನ್ನು ಸರ್ಕಾರ ಕೊಡಬೇಕೇ ಅಥವಾ ಅದನ್ನು ಆ ಜಮೀನು ಕಳೆದುಕೊಂಡ ರೈತ ಕೊಡಬೇಕೇ? Correct information must be given by the Government.

Sri A. G. RAMACHANDRA RAO.—It will be examined.

ಶ್ರೀ ಎಸ್. ಸಿದ್ದಪ್ಪ.—ಈಗ ಸಂಸ್ಥಾನಾ ಮಳೆ ಮಾಡಿಸಿರತಕ್ಕ ಎಲ್ಲಾ ಜಿಲ್ಲಾ ಬೋರ್ಡ್ ರಸ್ತೆಗಳೂ ಹೀಗೆ ಆಗಿರುತ್ತವೆಯೇ?

ಅಧ್ಯಕ್ಷರು.—ಆ ವಿಚಾರ ಗೊತ್ತಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಈ ರಸ್ತೆ ಸೌಕರ್ಯವನ್ನು ಜನಗಳಿಗೆ ಒದಗಿಸುತ್ತಿರುವುದರಿಂದ ಜಿಲ್ಲಾ ಬೋರ್ಡ್‌ಗಳು ಅಕ್ವೈರ್ ಮಾಡಿಕೊಳ್ಳುವ ಯಾವ ರಸ್ತೆ ಜಮೀನಿಗೂ ಹೀಗೆ ದುಡ್ಡು ಕೊಟ್ಟು ಅಕ್ವೈರ್ ಮಾಡಿಕೊಂಡಿಲ್ಲವಲ್ಲವೇ?

ಶ್ರೀ ಟಿ. ಚನ್ನಯ್ಯ.—ಪರಿಹಾರ ಕೊಡದೆ ನಾವು ಯಾವ ಜಮೀನನ್ನೂ ಪಡೆದಿಲ್ಲ. ಆದರೆ ಕೊಂಚ ನಿಧಾನವಾಗಿರಬಹುದು. ಆ ಜನರಿಗೆಲ್ಲಾ ಬೇಗ ಪರಿಹಾರ ದ್ರವ್ಯವನ್ನು ಒದಗಿಸತಕ್ಕ ಏರ್ಪಾಡನ್ನು ಮಾಡುತ್ತೇವೆ.

Quarters provided for Doctors and Nurses (waiving of Rent and other charges.)

Q.—158. Sri SYDNEY A. THOMAS (Nominated).—

Will the Government be pleased to state:—

(*a*) whether charges on account of rental, repairs, renewals and white-washing, and electricity consumption, are recoverable from doctors and nurses in State service occupying Government quarters :

(*b*) whether there is a Government Order to this effect ; if so, a copy may be placed on the Table ;

(*c*) the amount of such recoveries (districtwar) for years 1953 and 1954 ;

(*d*) whether a similar practice exists in neighbouring States ?

A.—Sri T. CHANNIAH (Minister for Public Health and Local Self-Government).—

(*a*) and (*b*) Rent at 10 per cent of the pay or 7/12 per cent of the capital cost of the building per month whichever is less is being recovered from the salary of the doctors who are provided with quarters under Article 84 (*b*). Note 1 of the Mysore Public Works Code. Electric and Water charges are paid by the occupants.

In case of Nurses who are provided with quarters, 2½ per cent of their pay is being recovered towards water and lighting charges and the cost of repairs of buildings as per G.O. No. M. 24930-32/Med. 93-52-3, dated 9th March 1953 (copy enclosed).

(*c*)

District		*1953* Rs.	a.	p.
Bangalore	...	3,909	4	0
Hassan	...	774	3	0
Mandya	...	724	9	0
Tumkur	...	...		
Mysore	...	1,666	13	0
Chickmagalur	...	659	0	0
Shimoga	...	930	3	0
Kolar	...	...		
Chitaldrug	...	139	8	0
Bellary	...	...		

District		*1954* Rs.	a.	p.
Bangalore	...	4,629	12	0
Hassan	...	1,292	6	0
Mandya	...	620	11	0
Tumkur	...	...		
Mysore	...	2,265	12	0
Chickmagalur	...	917	4	0
Shimoga	...	1,676	10	0
Kolar	...	...		
Chitaldrug	...	...		
Bellary	...	224	8	0

(*d*) Information not available.

PROCEEDINGS OF THE GOVERNMENT OF MYSORE.

READ—

1. Letter No. M. 18782—Med. dated 13th December 1952, from the Secretary to Government, Revenue and Home Departments to the Senior Surgeon, requesting him to furnish his opinion on the following subjects.

(*a*) Regarding utilising elsewhere one of the ambulance vans belonging to the Victoria Hospital, Bangalore, and Vani Vilas Hospital, Bangalore.

(*b*) Regarding abolition of duty allowance of Rs. 10 per mensem now being drawn by each of the three Assistant Surgeons, Grade II, working in the Victoria Hospital, Bangalore.

(*c*) Regarding charging rent to the quarters occupied by the Assistant Surgeon, Grade II attached to the Victorial Hospital.

(*d*) Regarding allotting quarters of the Managers of the Victoria Hospital, Bangalore, and the Minto Ophthalmic Hospital, Bangalore, to the Secretary, Combined Hospitals, Bangalore and the Food Supervisor, Combined Hospitals, Bangalore.

(*e*) Regarding allotting the old canteen building to the Food Supervisor of the Combined Hospitals, Bangalore.

(*f*) Regarding charging rent to the quarters of the Nurses.

(SRI T. CHANNIAH.)

(g) Regarding appointment of two Secretaries to the Combined Hospitals, Bangalore.

2. Letter No. G.C. 456-1, dated 5th January 1953, from the Senior Surgeon stating that.—

(a) As regards ambulance vans of the Victoria and Vani Vilas Hospitals, Bangalore, the number of calls are very few per month and therefore one ambulance van of the Victoria Hospital with two drivers and one cleaner under the control of the Secretary, Combined Hospitals, Bangalore, will serve the purpose and the other van of the Vani Vilas Hospital with the staff may be sent to any other Hospital in Bangalore or any other District where it may be required.

(b) As regards duty allowance of Rs. 10 per mensem, now being drawn by each of the three Assistant Surgeons, Grade II, working in the Victoria Hospital, they are senior Assistant Surgeons, Grade II of the department who are posted to the Victoria Hopital, for post-graduate training and if they were in the districts they would have been provided with amenities such as free quarters and it is but fair that they should be adequately compensated when they are posted to the Victoria Hospital.

(c) As regards free quarters to the Assistant Surgeon, Grade II, in the hospital premises, the Assistant Surgeon, Grade II, looks after the statistical work of the institution in addition to his regular duties and besides, the Assistant Surgeon, Grade II, will assist the Resident Medical Officer during emergencies and therefore free quarters provided to him may be continued.

(d) As regards quarters to the Managers, although the Managers have been divested of the duties of the Secretaries and Food Supervisors, their work has nevertheless increased proportionate with the increase in the number of in-patients, opening of additional departments and also increase of the entire staff.

(e) As regards old canteen building the building may be placed at the disposal of the Superintendent, Vani Vilas Hospital for being allotted to the duty doctor who will help the Resident Medical Officer in emergencies.

(f) As regards free quarters to the Nursing staff, all the unmarried nurses and the probationary nurses may be pressed to stay in the Nurses' Home and that as regards married nurses who have been provided with separate free quarters, light and water, only a rent of 5 per cent of their salary may be levied and the free light and water continued as at present.

After consideration of all aspects of the case, it is directed that.—

1 The ambulance van attached to the Vani Vilas Hospital, Bangalore, may be spared temporarily for a period of three months to the Secretary, Indian Red Cross Society, Mysore State Branch.

2 The duty allowance of Rs. 10 per mensem now being drawn by each of the three Assistant Surgeons Grade II, working in the Victoria Hospital, Bangalore, is abolished with effect from 1st February 1953.

3 The Assistant Surgeon, Grade II, who is now provided with free quarters may continue to occupy the quarters. But he should pay rent.

4 There is no need to provide quarters to the Managers of the Victoria Hospital, Bangalore and Minto Ophthalmic Hospital, Bangalore. One of the quarters may be allotted to the Secretary, Combined Hospitals, Bangalore and the other to the Food Supervisor, Combined Hospitals, Bangalore. They must pay the usual rent. The house rent allowance now being drawn by the Food Supervisor is abolished.

5. The old canteen building may be placed at the disposal of the Superintendent, Vani Vilas Hospital, Bangalore, as suggested by the Senior Surgeon. Rent for the building should be charged.

6 Regarding free quarters to Nurses, *status quo* may continue. But nurses whether married or not must pay for water and lighting and cost of the repairs of the building which is fixed at 2½ per cent of their pay.

7 As regards appointment of an Assistant Commissioner to the Combined Hospitals, Bangalore, this question was once examined and dropped.

(ORDER NO. M. 24930 32—MED. 93-52-3, DATED 9TH MARCH 1953.)

Sri SYDNEY A. THOMAS.—As this levy does not exist in the neighbouring States, as he Pay Structure Committee has recommended that these categories of employees should be given rent free quarters and as the amount collected on this account in 1953 and 1954 is negligible, would the Government consider early and earnestly the abolition of this collection of rent ?

Sri T. CHANNIAH.—Those proposals are under the active consideration of the Government.

Tangadi Bark Industry (with reference to Harijans.)

Q.—309. Sri T. HANUMIAH (Hiriyur—Scheduled Castes).—

Will the Government be pleased to state :—

(*a*) whether it has come to their notice that tangadi bark industry is a very important industry for the Harijans living in certain parts of the State ;

(*b*) whether they are aware that the economic condition of the Harijans is deteriorating day by day since the tangadi bark industry is going into the hands of people other than Harjians ;

(*c*) whether it has come to their notice that it is very difficult for the Harijans to carry on the tangadi bark business by bidding in the public auction since the same old practice is being followed ;

(*d*) whether it has come to their notice that the economic conditions of the Harijans will doubtless be improved if the tangadi bark business is entrusted to them alone without holding public auction keeping in view the income they derive from this ?

A.—Dr. R. NAGAN GOWDA (Minister for Agriculture).—

(*a*) Yes.
(*b*) No.
(*c*) No.
(*d*) *Vide* reply to clause (*c*).

ಶ್ರೀ ಟಿ. ಹನುಮಯ್ಯ.—ತಾವು ಇಲ್ಲಿ (ಸಿ) ಮತ್ತು (ಬಿ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಈ ಉತ್ತರವನ್ನು ತಾವು ಯಾವ ಆಧಾರದಮೇಲೆ ಕೊಟ್ಟಿದ್ದೀರಿ?

*ಡಾ॥ ಆರ್. ನಾಗನ ಗೌಡ.—ನಮಗೆ ಯಾರಿಂದಲೂ ಈ ವಿಚಾರದಲ್ಲಿ ಈವರೆಗೆ ದೂರುಗಳು ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—(ಬಿ) ಪ್ರಶ್ನೆಗೆ—ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಯಾವ ಆಧಾರದ ಮೇಲೆ ಹೇಳಿದ್ದೀರಿ ?

ಡಾ॥ ಆರ್. ನಾಗನ ಗೌಡ.—ಬೇರೆ ಯಾರಿಗೂ ಇದನ್ನು ಮನಾಪಲಿ ಮಾಡಿಕೊಟ್ಟಿಲ್ಲ ಎಂದು ಹೇಳಿದ್ದೇವೆ.

ಶ್ರೀ ಟಿ. ಹನುಮಯ್ಯ.—ಈ ದಿವಸ ಎಷ್ಟು ಹರಿಜನರು ಈ ಕೈಗಾರಿಕೆಯಲ್ಲಿ ತೊಡಗಿದ್ದಾರೆ, ಇದು ಎಷ್ಟು ಜನರಿಗೆ ಜೀವನಾಧಾರವಾಗಿತ್ತು ಎಂಬ ಅಂಕಿ ಅಂಶಗಳನ್ನು ಶೇಖರಣೆ ಮಾಡಿದ್ದೀರಾ ?

ಡಾ॥ ಆರ್. ನಾಗನ ಗೌಡ.—ಆ ವಿವರಗಳನ್ನು ನಾವಿನ್ನೂ ಶೇಖರಣೆ ಮಾಡಿಲ್ಲ.

ಶ್ರೀ ಟಿ. ಹನುಮಯ್ಯ.—ಹರಿಜನರ ಕೆಲಸವೆಂದರೆ ತಮಗೆ ಅಷ್ಟು ತಾತ್ಸಾರ, ಅಧಕ್ಕಾಗಿ ನಿಮಗಿದೆಲ್ಲಾ ಬೇಕಾಗಿಲ್ಲ, ಅಲ್ಲವೇ ?

ಡಾ॥ ಆರ್. ನಾಗನ ಗೌಡ.—ಹಾಗೆ ಹೇಳುವುದಕ್ಕಾಗುವುದಿಲ್ಲ. It is an economic enquiry. That has not been done.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಇದನ್ನು ತಮ್ಮ ಉದಾಸೀನವೆಂದು ತಿಳಿಯೋಣವೇ ?

ಡಾ॥ ಆರ್. ನಾಗನ ಗೌಡ.—ಹಾಗೂ ಇಲ್ಲ.

ಶ್ರೀ ಟಿ. ಹನುಮಯ್ಯ.—ತಾವು ಈ ತಂಗಡಿ ಬಾರ್ಕನ್ನು ಬಹಿರಂಗ ಹರಾಜಿಗಿಟ್ಟಿದ್ದರಿಂದ ಲಕ್ಷಾಂತರ ರೂಪಾಯಿಗಳ ಕೈವಾಟದಾರರಿಗೇ ಇದರಿಂದ ಹೆಚ್ಚು ಆದಾಯ ದೊರೆತು ಹರಿಜನರ ಹೀನಸ್ಥಿತಿಗೆ ಇದು ಕಾರಣವಾಗಿಲ್ಲವೇ ?

ಡಾ॥ ಆರ್. ನಾಗನ ಗೌಡ.—ಈ ವಿಚಾರವನ್ನು ಯಾವ ರೀತಿ ಮಾಡಬೇಕೆಂಬುದನ್ನು ನಾವಿನ್ನು ಕೂಲಂಕಷವಾಗಿ ವಿಮರ್ಶೆ ಮಾಡುತ್ತಿದ್ದೇವೆ.

ಶ್ರೀ ಟಿ. ಹನುಮಯ್ಯ.—ಮೈಸೂರು ಸರ್ಕಾರ ಬದಲಾವಣೆಯಾದರೂ ತಮ್ಮ ಮನಸ್ಸು ಇನ್ನೂ ಬದಲಾವಣೆ ಆಗದಿರಲು ಕಾರಣವೇನು ?

ಡಾ॥ ಆರ್. ನಾಗನ ಗೌಡ.—ಈ ತಂಗಡಿ ಬಾರ್ಕ್ ಕೈಗಾರಿಕೆಯು ಯಾವಾಗಲೂ ಹರಿಜನರ ಕೈರೇ ಇರುವ ಹಾಗೆ ಮಾಡಬೇಕಾಗಿದ್ದರೆ ಯಾವ ರೀತಿ ವ್ಯವಸ್ಥೆ ನಡೆಸಬೇಕು, ಸಹಕಾರ ಸಂಘಗಳನ್ನು ಇದಕ್ಕೆ ಯಾವ ರೀತಿ ಏರ್ಪಾಡು ಮಾಡಬೇಕು ಎಂಬ ಅನೇಕ ವಿಚಾರಗಳನ್ನು ನಾನು ಈಗಾಗಲೇ ಮಾನ್ಯ ಸದಸ್ಯರೊಡನೆ ಚರ್ಚೆ ಮಾಡಿದ್ದೇನೆ. ಆದರೆ ಇದರ ಬಗ್ಗೆ ಹೇಗೆ ಮಾಡಬೇಕೆಂಬುದರ ಬಗ್ಗೆ ಮಾನ್ಯ ಸದಸ್ಯರೇ ಒಂದು ಯೋಜನೆಯನ್ನು ತಯಾರಿಸಿಕೊಟ್ಟರೆ ಸರ್ಕಾರದವರು ಅದನ್ನು ಪರಿಶೀಲಸಲು ಅಭ್ಯಂತರವಿಲ್ಲ.

ಶ್ರೀ ಟಿ. ಹನುಮಯ್ಯ.—ಹಾಗಿದ್ದರೆ ಇದಕ್ಕೊಂದು ಸಮಿತಿಯನ್ನಾದರೂ ಏರ್ಪಾಡು ಮಾಡಿ ಅನುಕೂಲ ಮಾಡುತ್ತೀರಾ ?

ಡಾ॥ ಆರ್. ನಾಗನ ಗೌಡ.—ಇದರ ವಿಷಯದಲ್ಲಿ ನೀವೇ ಒಂದು ಸ್ಕೀಂ ಬರೆದುಕೊಂಡು ಬಂದು ಕೊಡಿ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ. ಹನುಮಯ್ಯ,—ಇದರ ಬಗ್ಗೆ ತಾವು ಒಂದು ಸಮಿತಿ ನೇಮಕ ಮಾಡಿದಪಕ್ಷದಲ್ಲಿ 15 ದಿವಸದೊಳಗೇ ನಾವು ಒಂದು ಸಲಹೆಯನ್ನು ಸರ್ಕಾರಕ್ಕೆ ಒಪ್ಪಿಸುತ್ತೇವೆ. ಹಾಗೆ ಮಾಡುತ್ತೀರಾ ?

ಡಾ॥ ಆರ್. ನಾಗನ ಗೌಡ.—ಹಾಗೆ ತಾವು ಒಂದು ಸಮಿತಿ ನೇಮಿಸಬೇಕೆಂದು ಹೇಳಿರತಕ್ಕದ್ದನ್ನು ನಾನು ವಿಚಾರ ಮಾಡುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ.—ಈ ಹಿಂದೆ ಜನರಿಗೆ, ಅವರವರ ಖಾಸಗೀ ಜಮೀನಿನಲ್ಲಿ ಬೆಳೆದಿದ್ದ ತಂಗಡಿ ಗಿಡದ ಚೆಕ್ಕೆಯನ್ನು ತೆಗೆಯಲು ಉಚಿತವಾಗಿ ರಹದಾರಿ ಕೊಟ್ಟಿದ್ದರು. ಈಗ ಅದನ್ನು ಮನ್ನಾ ಮಾಡುತ್ತಾರೆ. ಇದನ್ನು ಪುನಃ ಜಾರಿಗೆ ಮೊದಲಿನ ಹಾಗೇ ಕೊಡಲು ಪ್ರಯತ್ನ ಮಾಡುತ್ತೀರಾ ?

ಡಾ॥ ಆರ್. ನಾಗನ ಗೌಡ.—ನೋಟೀಸ್!

Co-operative Societies in Hassan District (Misappropriation cases launched).

Q.—649. Sri B. N. BORANNA GOWDA (Belur).—

Will the Government be pleased to state :—

(*a*) the number of cases launched for misappropriation in various co-operative societies in Hassan District, since last one year ;

(*b*) the number of cases that were prosecuted ;

(*c*) the number of cases resulted in conviction ?

A.—Dr. R. NAGAN GOWDA (Minister for Agriculture).—

(*a*) Four.

(*b*) Two cases are on the file of the Magistrate's Court, Hassan.

Two are under police investigation.

(*c*) Nil so far.

Sri B. N. BORANNA GOWDA.—You have stated that four cases were under investigation. Since how long the four cases are pending ?

Dr. R. NAGAN GOWDA.—Two of them are on the file of the Magistrate's Court, and two are under investigation. I am afraid I will not be able to give dates as to when these cases were filed.

Sri B. N. BORANNA GOWDA.—Are you aware that these cases are pending for the last four years ?

Mr. SPEAKER.—The Hon'ble Member is better aware of these things.

Sri B. N. BORANNA GOWDA.—May I know the names of these offenders ?

Dr. R. NAGAN GOWDA.—One is the Sakalespur Multi-purpose Co-operative Society. A criminal complaint for the misuse of the funds has been filed before the Police against the Assistant Secretary of the Society. I do not know whether any purpose is served by giving the name of the individual. It is enough if I say the post he holds. In the Beekondu Circle Multi-purpose Co-operative Society also, a complaint was launched against the Honorary Secretary of the Society. I do not want to give the name of the Secretary. In the Hassan Town Co-operative Society the complaint is against the sales clerk of the Society. In regard to the Basavapatan Society, the complaint is against the Assistant Secretary of the Society.

New Type Middle School at Yeldur, Srinivasapur Taluk (construction of a building).

Q.—366. Sri G. NARAYANA GOWDA (Mulbagal-Srinivasapur).—

Will the Government be pleased to state :—

when the estimate for the building of the New Type Middle School at Yeldur, Srinivasapur Taluk was prepared and for what amount ?

A.—Sri A. G. RAMACHANDRA RAO (Minister for Law and Education).—

For Rs. 14,500 on 12th March 1955.

ಶ್ರೀ ಜಿ. ನಾರಾಯಣಗೌಡ.—ಈ ಅಂದಾಜು ಯಾವಾಗ ಮಂಜೂರಾಯಿತು ?

*ಶ್ರೀ ಎ. ಜಿ. ರಾಮಚಂದ್ರರಾವ್.—12ನೇ ತಾರೀಖು ಮಾರ್ಚ 1955ರಲ್ಲಿ.

ಶ್ರೀ ಜಿ. ನಾರಾಯಣಗೌಡ.—ಹಾಗಾದರೆ ಈಗ ಇದು ಮಂಜೂರಾಗಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಂಜೂರಾದ ತಾರೀಖಲ್ಲ. ಅಂದಾಜು ತಯಾರಾದದ್ದು 12ನೇ ತಾರೀಖು ಮಾರ್ಚ 1955. ಇದರ ಜೊತೆಗೆ ನಾನು ಮತ್ತೊಂದು ಅಂಶ ತಿಳಿಸಲು ಅಪೇಕ್ಷಿಸುತ್ತೇನೆ. ಶ್ರೀ ವೇದಾರಾಮಯ್ಯ ಸೆಟ್ಟರೆಂಬತಕ್ಕವರು ಈಗ ಎರಡು ರೂಮುಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಅವರೇ ಬಾಕಿ ರೂಮುಗಳನ್ನೂ ಕಟ್ಟಿಸಿಕೊಡುವುದಾಗಿ ತಿಳಿಸಿದ್ದಾರೆ.

ಶ್ರೀ ಜಿ. ನಾರಾಯಣಗೌಡ.—ಅವರೇ ಕಟ್ಟಿಸಿಕೊಡುವುದಾಗಿ ತಿಳಿಸಿದ್ದಾರೇನು ?

Sri A. G. RAMACHANDRA RAO.—Yes, that is my information.

High School at Midagesi (Construction of a building).

Q.—99. Sri C. T. HANUMANTHAIYA (Pavagada—Scheduled Castes).—

Will the Government be pleased to state :—

(*a*) when the representation from the raiyats was received requesting them to construct a building for the High School at Midagesi, Madhugiri Taluk ;

(*b*) whether funds have been got deposited by the people of Midagesi and the surrounding places towards the above ;

(*c*) if so, the amount deposited ;

(*d*) whether a site for the building has been allocated ;

(*e*) whether an estimate has been prepared by them ?

(*f*) if so, the amount of the estimate ?

A.—Sri A. G. RAMACHANDRA RAO (Minister for Law and Education).—

(*a*) No representation has been received from raiyats.

(*b*) Yes.

(*c*) Rs. 17,510.

(*d*) Yes.

(*e*) Estimate is under preparation.

(*f*) Does not arise.

ಶ್ರೀ ಸಿ. ಟಿ. ಹನುಮಂತಯ್ಯ.—ಮಧುಗಿರಿ ತಾಲ್ಲೂಕು ಮಿಡಿಗೇಸಿಗೆ ವಿದ್ಯಾ ಮಂತ್ರಿಗಳು ದಯಮಾಡಿಸಿದ್ದಾಗ ಅಲ್ಲಿ ರೈತರು ಈ ಹೈಸ್ಕೂಲಿಗಾಗಿ ಹಣವನ್ನು ಕೊಡುತ್ತೇವೆ ಎಂದು ಹೇಳಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ. 17,510 ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ಸಿ. ಟಿ. ಹನುಮಂತಯ್ಯ.—ಹೈಸ್ಕೂಲ್ ಕಮಿಟಿ ಇದೆ. ಆ ಕಮಿಟಿಯವರಿಗೇ ಈ ಕಟ್ಟಡ ಕಟ್ಟಿಸಲಿಕ್ಕೆ ಜವಾಬ್ದಾರಿ ವಹಿಸಿಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರು ಕಟ್ಟಿಸುತ್ತೇವೆ ಎಂದು ಮುಂದೆ ಬಂದರೆ ಆಗ ಪರಿಶೀಲನೆ ಮಾಡುತ್ತೇವೆ.

Samskriti Prachar.

Q.—420. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) the number of lectures delivered on Samskriti Prachar Scheme in the State from 1st January 1955 to 31st December 1955 (talukwar figures to be furnished) ;

(*b*) the qualifications and designation of each lecturer ;

(*c*) the amount paid to each of the lecturers ?

A.—Sri A. G. RAMACHANDRA RAO (Minister for Law and Education).—

(*a*) Information is being collected.

(*b*) No academical qualification is prescribed—but learned scholars and impressive speakers are generally invited to participate in cultural programmes.

(*c*) Rs. 20 per programme to a lecturer.

Sri M. CHIKKALINGIAH.—I have no supplementaries.

Samskriti Pracharaks.

Q.—615. Sri S. SIDDAPPA (Magadi).—

Will the Government be pleased to state :—

(*a*) the principles on which "Samskriti Pracharaks" are selected ;

(*b*) whether they are aware that a large amount of money will be saved if these pracharaks are appointed in the same districts where they are living ?

A.—Sri A. G. RAMACHANDRA RAO (Minister for Law and Education).—

(*a*) The principles on which "Pracharaks" are selected are that they generally should have deep knowledge in Indian Classics, heritage and culture, wide outlook on human relationship and sufficient experience in effective speaking and singing and not merely academic qualifications.

(*b*) It is a matter of opinion.

ಶ್ರೀ ಎಸ್. ಸಿದ್ದಪ್ಪ.—ಬೇರೆ ಉತ್ತರ ಕೊಟ್ಟರು ವುದರಿಂದ ಇದರಮೇಲೆ ಉಪಪ್ರಶ್ನೆಗಳನ್ನು ಕೇಳು ವುದಿಲ್ಲ.

Literary and Cultural Development Department (Amount Spent).

Q.—628. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) the total expenditure on the Literary and Cultural Development Department (ಸಂಸ್ಕೃತಿ ಪ್ರಸಾರ ಯೋಜನೆಯ ಇಲಾಖೆ) up-to-date;

(*b*) of that, how much is being spent annually on establishments?

A.—Sri A. G. RAMACHANDRA RAO (Minister for Law and Education).—

(*a*) Expenditure incurred as follows :—

Rs. 38,451 during 1953-54.

Rs. 1,33,870-14-0 during 1954-55.

Rs. 3,17,861-14-6 (up to end of February 1956)

(*b*) Rs. 1,524 P.A. on the menial establishment of the Director of Literary and Cultural Development.

ಶ್ರೀ ಕೆ. ಪ್ರಭಾಕರ್.—(ಬಿ) ಪ್ರಶ್ನೆಗೆ ಉತ್ತರವಾಗಿ "menial establishment of the Director of Literary and Cultural Development" ಎಂದು ಹಾಕಿದ್ದೀರಿ. ಇತರ ಎಲ್ಲಾ chargesಅನ್ನೂ ಬಿಟ್ಟು ಇದು ಒಂದನ್ನು ಮಾತ್ರ expenditure ಎಂದು consider ಮಾಡಿದ್ದೀರಾ ?

*ಶ್ರೀ ಎ. ಜಿ. ರಾಮಚಂದ್ರರಾವ್.—Establishment ಎಂದರೆ Head of the Department ಬಿಟ್ಟು ಬಾಕಿ ಎಲ್ಲಾ ಸೇರುತ್ತದೆ. ಇಲ್ಲಿ ಕೊಟ್ಟಿರು ವುದು menial establishmentಗೆ ಖರ್ಚಾಗಿರು ವುದು ಮಾತ್ರ.

ಶ್ರೀ ವಿ. ಆರ್. ನಾಯ್ಡು.—ಸಂಸ್ಕೃತಿ ಪ್ರಚಾರ ಪ್ರಾರಂಭವಾದ ಮೇಲೆ ಜನಗಳಲ್ಲಿ ದೈವಭಕ್ತಿ ಹೆಚ್ಚಾಗಿ ಇತ್ತೀಚೆಗೆ ದೇವಾಲಯಗಳಲ್ಲಿ ಸೇವೆ ಮಾಡತಕ್ಕ ಜನಗಳು ಕಮ್ಮಿ ಆಗುತ್ತಾ ಇರುವುದು ಗೊತ್ತೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥ ಅಭಾವ ಏನೂ ಕಾಣಲಿಲ್ಲ.

ಶ್ರೀ ವಿ. ಆರ್. ನಾಯ್ಡು.—ಸಂಸ್ಕೃತಿ ಇಲ್ಲದ ನಾಗರೀಕತೆ, ಪರಿಮಳವಿಲ್ಲದ ಪುಷ್ಪವಿದ್ದ ಹಾಗೆ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರಲ್ಲೇನೂ ಅನುಮಾನವಿಲ್ಲ. ಮಾನ್ಯ ಸದಸ್ಯರಲ್ಲಿ ದೈವಭಕ್ತಿ ಬಹಳ ಹೆಚ್ಚಾಗಿ ಅದು ಎಲ್ಲೆಲ್ಲೂ ಹರಡುತ್ತಾ ಇದೆ.

Primary Schools in Temples. Admission of Harijan Students.

Q.—98. Sri C. T. HANUMANTHAIYA (Pavagada—Scheduled Castes).—

Will the Government be pleased to state :—

(*a*) the number of places in the State where Government Primary Schools are being held in temples;

(*b*) whether it has come to their notice that Harijan boys and girls are not admitted into those schools and taught there;

(*c*) if so, the nature of action taken by them (talukwar and district-war information to be furnished)?

A.—Sri A. G. RAMACHANDRA RAO (Minister for Law and Education).—

(*a*) 861.

(*b*) No.

(*c*) Does not arise in view of reply to clause (*b*) above.

ಶ್ರೀ ಸಿ. ಟಿ. ಹನುಮಂತಯ್ಯ.—ಈಗ 861 ಗ್ರಾಮಗಳಲ್ಲಿ ದೇವಸ್ಥಾನದಲ್ಲಿ ಪ್ರೈಮರೀ ಸ್ಕೂಲು ಗಳನ್ನು ನಡೆಸುತ್ತಾ ಇದೆ ಎಂದು ಹೇಳಿದ್ದೀರಿ. 'ಆ ಗ್ರಾಮಗಳಲ್ಲೆಲ್ಲಾ ದೇವಸ್ಥಾನಗಳಲ್ಲಿ ಹರಿಜನರ ವಿದ್ಯಾರ್ಥಿಗಳನ್ನು ಸೇರಿಸುತ್ತ ಇಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ' ಎಂದು ಕೇಳಿದ್ದಕ್ಕೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಈಗ ನಾನು ಒಂದು ಉದಾಹರಣೆ ಹೇಳಬೇಕಾದರೆ, ಸೀರಾ ತಾಲ್ಲೂಕು ದ್ವಾರನಕುಂಟೆಯಲ್ಲಿ ಸೇರಿಸುತ್ತಾ ಇಲ್ಲ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ನೋಟ್‌ಮಾಡಿಕೊಂಡು ವಿಚಾರಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ.—ಅದೇ ರೀತಿ ಈ 861 ದೇವಸ್ಥಾನಗಳಲ್ಲೂ ಹರಿಜನರನ್ನು ಸೇರಿಸುತ್ತಾ ಇದ್ದಾರೆಯೋ ಇಲ್ಲವೇ ಎಂಬುದನ್ನು ವಿಚಾರ ಮಾಡಿ ಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವ ಕಡೆ ಯಿಂದಲೂ ಸೇರಿಸುತ್ತಾ ಇಲ್ಲ ಎಂದು ಹೇಳಿ ದೂರು ಬಂದಿಲ್ಲ. ಈಗ ತಾವು ಒಂದು ಸ್ಥಳ ಹೇಳಿದಿರಿ. ಅದೇರೀತಿ ಇತರ ಕಡೆಯೂ ಇದ್ದರೆ ಪರಿಶೀಲನೆಮಾಡಿ ಸರಿಯಾದ ಸೌಕರ್ಯ ಏರ್ಪಾಡು ಮಾಡುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ದೇವಸ್ಥಾನಗಳಲ್ಲಿ ಸ್ಕೂಲು ನಡೆಯುತ್ತ ಇರುವ ಕಡೆ ಹರಿಜನರ ಬಾಲಕರನ್ನು ಸೇರಿಸುತ್ತ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಅವರನ್ನು ಸೇರಿಸಲೇಬೇಕು. That question does not arise. ಮಾನ್ಯ ಸದಸ್ಯರು ಹೇಳಿರುವ ಒಂದು ಕಡೆ ಆ ರೀತಿ ಆಗಿರಬಹುದು. ಬಾಕಿ ಕಡೆ ಸರ್ಕಾರದವರಿಗೆ ಆ ರೀತಿ ಆಗಿರುವುದು ಗೊತ್ತಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಆರೀತಿ ಆಗುತ್ತ ಇದೆ ಎಂದು ಈ ಸಭೆಯ ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ತಂದರೆ ಇದಕ್ಕೆ ಸಂಬಂಧಪಟ್ಟಂಥ ಒಂದು ಸರ್ಕ್ಯುಲರ್ ಹೊರಡಿಸುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲ ದೇವಸ್ಥಾನಗಳಲ್ಲೂ ಸೇರಿಸಬೇಕೆಂದು ಆರ್ಡರ್ ಇದೆ. ಅನೇಕ ವರ್ಷಗಳಿಂದ ಸ್ಕೂಲುಗಳು ದೇವಸ್ಥಾನದಲ್ಲಿ ನಡೆಯುತ್ತಲೂ ಇವೆ. ಹಾಗಿರುವಾಗ ಈ 861ರ ಪೈಕಿ ಎಲ್ಲೋ ಒಂದು ಕಡೆ ದೂರು ಬಂದರೆ ಅದಕ್ಕೇ ಒಂದು ಜನರಲ್ ಸರ್ಕ್ಯುಲರ್ ಹೊರಡಿಸುವುದು ಸೂಕ್ತವಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ದೇವಸ್ಥಾನಗಳಲ್ಲಿ ಸ್ಕೂಲುಗಳನ್ನು ನಡೆಸುವುದನ್ನು ತಪ್ಪಿಸುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ಸ್ಕೂಲುಗಳಿಗೆ ಪ್ರತ್ಯೇಕವಾಗಿ ಸ್ವಂತ ಕಟ್ಟಡ ಇರುವುದು ಉತ್ತಮ. ಅದರ ಅಭಾವದಿಂದ ಈ ದೇವಸ್ಥಾನಗಳನ್ನು ಉಪಯೋಗಿಸಿಕೊಂಡು ಸಾರ್ವಜನಿಕ ಕಾರ್ಯ ಮುಂದುವರಿಯುತ್ತಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಇನ್ನು ಮುಂದಾದರೂ ದೇವಸ್ಥಾನಗಳಲ್ಲಿ ಸ್ಕೂಲುಗಳನ್ನು ನಡೆಸುವುದನ್ನು ಕಮ್ಮಿ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರಿ ಕಟ್ಟಡ ಇದ್ದರೆ ಆರೀತಿ ಮಾಡುವುದು ಒಳ್ಳೆಯದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹತ್ತು ಸಾವಿರ ಪ್ರೈಮರಿ ಸ್ಕೂಲುಗಳು ಸಂಸ್ಥಾನದಲ್ಲಿವೆ. ಅವುಗಳಲ್ಲಿ 861 ಸ್ಥಳಗಳಲ್ಲಿ ದೇವಸ್ಥಾನಗಳಲ್ಲಿ ಸ್ಕೂಲು ನಡೆದರೆ ಮಕ್ಕಳಿಗೆ ಪಾಠ ಹೇಳಿಕೊಡುವುದಕ್ಕೆ ತೊಂದರೆ ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ತೊಂದರೆ ಆಗುವುದಿಲ್ಲ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ 861 ಸ್ಥಳಗಳಲ್ಲಿ ಸರ್ಕಾರಿ ಕಟ್ಟಡಗಳನ್ನು ಕಟ್ಟಿಸಿಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲ ಪ್ರೈಮರಿ ಸ್ಕೂಲುಗಳೂ ಕೂಡ ಸರ್ಕಾರಿ ಕಟ್ಟಡಗಳಲ್ಲೇ ನಡೆಯಬೇಕೆಂಬುದು ಸರ್ಕಾರದ ನೀತಿ. ಆ ನಿಯಮವನ್ನು ಪಾಲಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಯಾರಾದರೂ ಖಾಸಗೀಯವರು ಸ್ಕೂಲು ಕಟ್ಟಡ ಕಟ್ಟಿಸಿಕೊಟ್ಟರೆ ಅದಕ್ಕೆ ಸರಿಯಾದ ಬಾಡಿಗೆ ಕೊಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೊಡಿಸುತ್ತೇವೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಹಳ್ಳಿಗಳ ಕಡೆ ಎರಡು-ಮೂರು ರೂಪಾಯಿ ಬಾಡಿಗೆ ಕೊಡುತ್ತೀರಿ. ಅದೇ ಪಟ್ಟಣಗಳಲ್ಲಿ ಆದರೆ 50-100 ರೂಪಾಯಿ ಕೊಡುತ್ತೀರಿ. ಆದ್ದರಿಂದ ಸರಿಯಾದ ಬಾಡಿಗೆ ಕೊಡಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ನ್ಯಾಯವಾದ ಬಾಡಿಗೆ ಕೊಡುವುದಕ್ಕೆ ಅಡ್ಡಿ ಇಲ್ಲ.

Depressed Class Scholarships (Middle Schools)

Q.—44. Sri B. RACHIAH (Yelandur—Scheduled Castes).—

Will the Government be pleased to state :—

(*a*) the total number of applications received from the students studying in Middle Schools for the award of Depressed Class scholarships during the current year (districtwise figures are requested) ;

(*b*) the number of scholarships awarded ;

(*c*) the additional amount required for the award of scholarships for all the applicants ?

A.—Sri A. G. RAMACHANDRA RAO (Minister for Law and Education).—

(*a*) and (*b*).—

Sl. No.	*Name of District*		*No. of applications received.*
1	Bangalore City District	...	613
2	Bangalore District	...	400
3	Mysore District	...	606
4	Shimoga District	...	161
5	Hassan District	...	174
6	Kolar District	...	887
7	Tumkur District	...	425
8	Mandya District	...	519
9	Chitaldrug District	...	202
10	Chickmagalur District	...	117
11	Bellary District	...	100

Sl. No.	*Name of District*		*No. of scholarships awarded.*
1	Bangalore City District	...	173
2	Bangalore District	...	81
3	Mysore District	...	132
4	Shimoga District	...	29
5	Hassan District	...	46
6	Kolar District	...	148
7	Tumkur District	...	98
8	Mandya District	...	100
9	Chitaldrug District	...	71
10	Chickmagalur District	...	20
11	Bellary District	...	65

(*c*) An additional sum of Rs. 2,03,130 is required for award of

(SRI A. G. RAMACHANDRA RAO.) scholarships to all applicants. (The additional amount required for awarding scholarships to all the applicants at Rs. 18-11-0 per annum will be Rs. 660 for Bellary District only).

ಶ್ರೀ ಬಿ. ರಾಚಯ್ಯ.—ಎರಡು ಲಕ್ಷ ಚಿಲ್ಲರೆ ರೂಪಾಯಿಗಳು ಬೇಕಾಗುತ್ತವೆ ಎಂದು ಹೇಳಿದ್ದೀರಿ. ಕಳೆದ ಮೂರು ವರ್ಷದಿಂದ ಏನಾದರೂ ವರ್ಷೇ ವರ್ಷೇ ಈ ಭಾಗದಲ್ಲಿ ಹೆಚ್ಚಿಗೆ ಗ್ರಾಂಟು ಕೊಟ್ಟಿದ್ದೀರಾ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಗ್ರಾಂಟನ್ನು ಹೆಚ್ಚಿಗೆ ಮಾಡಿದ್ದು ಜ್ಞಾಪಕ ಇಲ್ಲ. ಇರುವಷ್ಟೇ ಇದೆ.

ಶ್ರೀ ಬಿ. ರಾಚಯ್ಯ.—ಯೂನಿವರ್ಸಿಟಿಯಲ್ಲಿ ಓದುತ್ತಾ ಇರತಕ್ಕ ಡಿಪ್ರೆಸ್ಡ್ ಕ್ಲಾಸ್ ವಿದ್ಯಾರ್ಥಿಗಳಿಗೆ ಕೊಡುವ ಸ್ಕಾಲರ್‌ಷಿಪ್ ಕಡಿಮೆಮಾಡಿ, ಈ ಭಾಗಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ತಮ್ಮನ್ನು ಒತ್ತಾಯ ಈ ಮಾನ್ಯ ಸಭೆಯಲ್ಲಿ ಮಾಡುತ್ತಾ ಇಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತಾ ಇದ್ದಾರೆ.

ಶ್ರೀ ಬಿ. ರಾಚಯ್ಯ.—ಅದರ ಮೇಲೆ ಏಕೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ?

ಶ್ರೀ. ಎ. ಜಿ. ರಾಮಚಂದ್ರರಾವ್.—ಇಂಡಿಯಾ ಸರ್ಕಾರದ ಗ್ರಾಂಟು ಬಂದದ್ದರಿಂದ ಯೂನಿವರ್ಸಿಟಿಯಲ್ಲಿ ಆ ರೀತಿ ಸ್ಕಾಲರ್‌ಷಿಪ್ ಕೊಡಲಿಕ್ಕೆ ಅವಕಾಶವಿದೆ. ಅದು ಖಾಯಂ ಆಗಿ ಇರುತ್ತದೆಯೋ ಇಲ್ಲವೋ ಎಂಬ ವಿಷಯವನ್ನು ಪರಿಶೀಲನೆ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಅದನ್ನು ರೀ ಅಪ್ರೋಪ್ರಿಯೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ರೀ ಅಪ್ರೋಪ್ರಿಯೇಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಡಿಪ್ರೆಸ್ಡ್ ಕ್ಲಾಸ್ ಅಮಿಲಿಯೊರೇಷನ್ ಫಂಡ್‌ನಲ್ಲಿ ಸ್ವಲ್ಪ ಭಾಗದ ಹಣವನ್ನು ಇದಕ್ಕೆ ಕೊಡುವುದು ಉತ್ತಮವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಾದರೆ ಉತ್ತಮ.

ಶ್ರೀ ಜಿ. ಪುಟ್ಟಸ್ವಾಮಿ.—ನಿಮ್ಮ ವರ್ಗದವರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ನಿಮ್ಮ ವರ್ಗದವರಲ್ಲದ ಇತರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ಹೋಲಿಸಿದರೆ ಇವರಲ್ಲಿ ವಿದ್ಯಾವಂತರ ಸಂಖ್ಯೆ ಬಹಳ ಕಡಿಮೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಅದು ದೇಶಕ್ಕೆಲ್ಲಾ ಗೊತ್ತು. ಅದನ್ನೇನು ಕೇಳುತ್ತೀರಿ ?

ಶ್ರೀ ಜಿ. ಪುಟ್ಟಸ್ವಾಮಿ.—ಹಾಲಿ ವಿದ್ಯಾರ್ಥಿ ವೇತನ ಕೊಡುತ್ತಾ ಇರುವುದು ಬಹಳ ಕಡಿಮೆ ಎಂದು ನನ್ನ ಪ್ರಶ್ನೆ. ವಿದ್ಯಾರ್ಥಿವೇತನ ಹೆಚ್ಚಿಸುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಣದ ಅಭಾವದಿಂದ ಹೆಚ್ಚು ಮಾಡುವುದಕ್ಕೆ ಆಗಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ನಿಮ್ಮ ವರ್ಗದವರ ಅಮೀಲಿಯೊರೇಷನ್ ಫಂಡಿನಿಂದ ಕೊಡುವುದಕ್ಕೆ ಏನಾದರೂ ಯೋಚನೆ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪಾಲಿಸಿ ಕಮಿಟಿಯವರು ಒಪ್ಪಿಕೊಂಡರೆ ಅದನ್ನು ಪರಿಶೀಲನೆ ಮಾಡುತ್ತೇವೆ.

Thirupathi Choultry (Removal of caste distinction)

Q.—109. Sri G. A. THIMMAPPA GOWDA (Arkalgud).—

Will the Government be pleased to state :—

whether they will refer to my question No. 419 tabled during the last session relating to the removal of discrimination on caste basis regarding food, etc., in Thirupathi Choultry run by this Government and state the action taken by them to remove this discrimination that is being still practised in the Thirupathi Choultry ?

A.—Sri A. G. RAMACHANDRA RAO (Minister for Law and Education).—

The matter has been examined at Departmental level and the proposals are under active consideration of Government.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಪ್ರಶ್ನೆ ಬರುತ್ತಿರುವುದು ಮೂರನೆಯ ಸಲವಲ್ಲವೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಎಷ್ಟನೇ ಸಲವೆಂದು ಗೊತ್ತಿಲ್ಲ. ಪ್ರಪೋಸಲ್‌ಗಳು ಬಂದಿವೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸಂಬಂಧಪಟ್ಟ ಇಲಾಖೆಯವರು ಏನು ಪ್ರಪೋಸಲ್‌ಗಳನ್ನು ಹಾಕಿದ್ದಾರೆಂಬುದನ್ನು ತಿಳಿಸುತ್ತೀರಾ ?

Sri A. G. RAMACHANDRA RAO.—The matter has been examined at the Departmental level and the proposals are under the active consideration of the Government.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈಗಲೂ ಕೂಡ ತಿರುಪತಿ ಛತ್ರದಲ್ಲಿ ಜಾತಿ ಭೇದದ ಮೇಲೆ ಊಟೋಪಚಾರಗಳು ನಡೆಯುತ್ತಿವೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದುವರೆಗೂ ಹೇಗಿತ್ತೋ ಹಾಗೆಯೇ ನಡೆಯುತ್ತಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ರಾಜ್ಯಾಂಗದಲ್ಲಿಯೂ ಕೂಡ ಇದನ್ನು ನಿಷೇಧಿಸಿ ಜಾತಿಭೇದ ಇರಕೂಡದು ಎಂದು ತೀರ್ಮಾನ ಮಾಡಿರುವಾಗ ತಿರುಪತಿ ಛತ್ರದ ವ್ಯವಸ್ಥೆಯನ್ನು ಹಿಂದಿನಂತೆಯೇ ನಡೆಸಿಕೊಂಡು ಬಂದರೆ ಜನರ ಮೇಲೆ ದುಷ್ಪರಿಣಾಮವುಂಟಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದರಲ್ಲಿ ಕೆಲವು ಟ್ರಸ್ಟ್‌ಗಳಿವೆ. ಅವುಗಳು ಏತಕ್ಕೋಸ್ಕರವೆಂದು

ನಿಗದಿಯಾಗಿದೆ. That everybody is equal under the law is correct. But the distribution of the benefits as per the desires of the respective donors and trustees has to be examined.

ಶ್ರೀ ವಿ. ಆರ್. ನಾಯ್ಡು.—ಊಟದ ವ್ಯವಸ್ಥೆ ಎಷ್ಟು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ ಎನ್ನುವುದನ್ನು ಸರ್ಕಾರದವರು ತಿಳಿಸುತ್ತಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ.

ಶ್ರೀ ವಿ. ಆರ್. ನಾಯ್ಡು.—ಈ ವ್ಯವಸ್ಥೆಯನ್ನು ನಮ್ಮ ಸರ್ಕಾರದವರು ಮಾಡಿದ್ದೋ ಅಥವಾ ಶ್ರೀಮನ್ಮಹಾರಾಜರವರ ಮನೆತನದವರು ಮಾಡಿದ್ದೋ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಕೆಲವು ವರ್ಷಗಳಿಗಿಂತ ಮೊದಲು ಸರ್ಕಾರಕ್ಕೂ ಶ್ರೀಮನ್ಮಹಾರಾಜರಿಗೂ ಭಿನ್ನತೆಯೇ ಇರಲಿಲ್ಲ.

ಶ್ರೀ ವಿ. ಆರ್. ನಾಯ್ಡು.—ಸಾಧಾರಣವಾಗಿ ಒಂದು ವರ್ಷಕ್ಕೆ ಎಷ್ಟು ಜನರು ಈ ಛತ್ರದಲ್ಲಿ ಊಟ ಮಾಡುತ್ತಾರೆ ಎಂಬ ವಿಷಯ ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್ ಬೇಕು. ಆ ವಿಷಯ ತಮಗೆ ಚೆನ್ನಾಗಿ ಗೊತ್ತಿರಬೇಕು.

ಶ್ರೀ ವಿ. ಆರ್. ನಾಯ್ಡು.—ಒಂದು ದಿನಕ್ಕೆ ಸರಾಸರಿ 200 ಜನರಿಗೆ ಊಟ ಹಾಕುತ್ತಾರೆಂದು ನನಗೆ ಗೊತ್ತಿದೆ. ಈಗ ಸರ್ಕಾರದವರು ಊಟದ ವ್ಯವಸ್ಥೆಗೆ ಗ್ರಾಂಟ್ ಕಡಿಮೆ ಮಾಡಿದ್ದಾರೆ. ಈ ಹಣ ಸಾಲದೆ ಇರುವುದರಿಂದಲೂ ಖರ್ಚು ವಿಶೇಷವಾಗಿರುವುದರಿಂದಲೂ ಈ ಗ್ರಾಂಟ್ ಹೆಚ್ಚು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಸರ್ಕಾರದವರು ಇದನ್ನು ಪರಿಶೀಲನೆ ಮಾಡುತ್ತಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಬಂದಿರುವ ಪ್ರಶ್ನೆ ಏನೆಂದರೆ ಜಾತಿ ಭೇದವಿರಕೂಡದೆಂದು, ಗ್ರಾಂಟ್ ವಿಷಯ ಇದರಲ್ಲಿ ಬರುವುದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಸರ್ಕಾರದವರು ಛತ್ರಗಳಲ್ಲಿ ಈ ರೀತಿಯ ಭಿನ್ನಭಾವಗಳಿರುವುದನ್ನು ಆದಷ್ಟು ಜಾಗ್ರತೆ ಹೋಗಲಾಡಿಸುವುದು ಒಳ್ಳೆಯದಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಗಲೇ ಹೇಳಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಮುಸಲ್ಮಾನರಿಗೂ ಸಹ ಊಟ ಹಾಕಬೇಕಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರು ದೇವಸ್ಥಾನಕ್ಕೆ ಬಂದರೆ, ಊಟ ಹಾಕಬೇಕು ಎಂದು ಹೇಳುವವರಲ್ಲಿ ನಾನು ಮೊದಲನೆಯವನು.

ಶ್ರೀ ಬಿ. ಹುಚ್ಚೇಗೌಡ.—ಟ್ರಸ್ಟ್ ಫಂಡಿನಿಂದಲೇ ಕೊಡಲಿ, ಸರ್ಕಾರದವರೇ ಕೊಡಲಿ, ಈ ದುಡ್ಡನ್ನು ಎಲ್ಲರಿಗೂ ಭೇದಭಾವ ಮಾಡದೆ ಉಪಯೋಗಿಸುವುದು ಒಳ್ಳೆಯದೇ ಅಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದ್ದೇನೆ.

Compensation ordered by the District Court to be paid to Sri V. Nanjappa.

Q.—232. Sri V. VENKATAPPA (Channapatna).—

Will the Government be pleased to state :—

(*a*) what is the total amount of compensation ordered to be paid by the Land Acquisition Officer of Ramanagaram and that by the District Judge of Bangalore to Sri V. Nanjappa in respect of the lands situated near Mattedoddi (Achalu Forest area) of Ramanagaram taluk acquired by Government;

(*b*) what is the amount of compensation already paid to Sri Nanjappa ;

(*c*) whether the claim of Sri Nanjappa was resisted by the Government before the Land Acquisition Officer and the District Judge ; whether the Government propose to appeal against the decision of the District Judge.

A.—Sri A. G. RAMACHANDRA RAO (Minister for Law and Education).—

(*a*) Land Acquisition Officer awarded a compensation of Rs. 37,492.

The District Judge, Bangalore, enhanced the compensation amount to Rs. 84,600 and further ordered the payment of statutory allowance of 15 per cent on the amount of compensation and interest at 6 per cent from the date of taking possession of the land till the date of settlement of claim.

(*b*) Rs. 37,492.

(*c*) The question of resisting the claim for compensation before the Land Acquisition Officer does not arise.

The Government Pleader appeared for the Land Acquisition Officer in the Court of the District Judge. The question of preferring an appeal to the High Court against the order of the District Judge is under the consideration of the Government.

Amount of Grants to Sri V. Nanjappa for his Land in Achala Forest.

Q.—254. **Sri N. C. NAGIAH REDDY** (Gauribidanur).—

Will the Government be pleased to state :—

(*a*) the total amount of upset price paid by Sri V. Nanjappa, brother of Sri K. Hanumanthaiya for 50 acres of land granted to him in Achala Forest and when ;

(*b*) what is the amount granted to him by the Land Acquisition Officer, Ramanagaram, for the acquisition of those lands and when was the award passed and when was the money drawn by Sri V. Nanjappa ;

(*c*) what is the amount granted to Sri V. Nanjappa by the Principal District Judge, Bangalore, as enhanced compensation ?

A.—**Sri A. G. RAMACHANDRA RAO** (Minister for Law and Education).—

(*a*) Rs. 1,156 including cesses, on 7th May 1952.

(*b*) The Land Acquisition Officer awarded a compensation of Rs. 37,492 on 18th March 1955. Rs. 25,000 was drawn on 30th March 1955 and Rs. 12,492 on 10th May 1955.

(*c*) The District Judge, Bangalore enhanced the compensation amount to Rs. 84,600 and further ordered the payment of statutory allowance at 15 per cent on the compensation amount and interest at 6 per cent from the date of taking possession of the land till the date of settlement of the claim.

Sri A. G. RAMACHANDRA RAO.—Sir, before supplementary questions are put, I may bring to the notice of the House that an appeal has been filed in this case and the matter is therefore *sub judice*.

Sri N. C. NAGAIAH REDDY.—We are not discussing the merit of the case. We want only some information.

Mr. SPEAKER.—The Hon'ble Members must know that the cases pertaining to this subject are in the courts. Questions which are concerned with the merits of the case may not be asked.

ಶ್ರೀ ವಿ. ವೆಂಕಟಪ್ಪ.—ಫಾರೆಸ್ಟ್‌ನಿಂದ ರೆವೆನ್ಯೂ ಇಲಾಖೆಗೆ ಸರೆಂಡರ್ ಆದದ್ದು ಎಷ್ಟು ಎಕರೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಇವರಿಗೆ ಕೊಟ್ಟಿರುವುದು ಗೊತ್ತಿದೆ. ಎಷ್ಟು ಎಕರೆ ಸರೆಂಡರ್ ಆಯಿತೆಂಬುದು ಗೊತ್ತಿಲ್ಲ.

ಶ್ರೀ ವಿ. ವೆಂಕಟಪ್ಪ.—600 ಚಿಲ್ಲರೆ ಎಕರೆಯಲ್ಲವೆ?

Sri A. G. RAMACHANDRA RAO.—I have to enquire and find out, Sir. Personally I do not know.

ಶ್ರೀ ವಿ. ವೆಂಕಟಪ್ಪ.—ಆ ಪೈಕಿ ತಾನೆ 50 ಎಕರೆ ಜಮೀನನ್ನು ಶ್ರೀಮಾನ್ ನಂಜಪ್ಪನವರಿಗೆ ಕೊಟ್ಟದ್ದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ವಿ. ವೆಂಕಟಪ್ಪ.—ಇವರಿಗೆ ಜಮೀನು ಕೊಟ್ಟಾಗ ಇಂಥ ಬ್ಲಾಕ್ ಎಂದು ಸರ್ಕಾರಿ ಆರ್ಡರಿನಲ್ಲಿ ನಮೂದು ಮಾಡಿರಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—Demarcate ಮಾಡಿ, ಸಾಗುವಳಿ ಚೀಟಿ ಕೊಟ್ಟು ಅವರ ಸ್ವಾಧೀನದಲ್ಲಿದೆ.

ಶ್ರೀ ವಿ. ವೆಂಕಟಪ್ಪ.—ಸರ್ಕಾರಿ ಆರ್ಡರಿನಲ್ಲಿ ಇಂಥ ಜಾಗದಲ್ಲಿ ಇಷ್ಟು ಎಕರೆ ಕೊಡಬೇಕೆಂದು ನಮೂದು ಮಾಡಿರಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾನು ವಿಚಾರ ಮಾಡಬೇಕು. ಗೊತ್ತಿಲ್ಲ.

ಶ್ರೀ ವಿ. ವೆಂಕಟಪ್ಪ.—ಅವರು ಯಾವ ಉದ್ದೇಶಕ್ಕಾಗಿ ಈ ಜಮೀನು ಕೊಡಬೇಕೆಂದು ಕೇಳಿದ್ದರು ?

ಶ್ರೀ ಎ. ಜಿ. ರಾಮಚಂದ್ರರಾವ್.—"ನನ್ನ ಜೀವನೋಪಾಯ ನಡೆಸುವುದಕ್ಕೆ ವ್ಯವಸಾಯ ಮುಖ್ಯವಾದ ವೃತ್ತಿ. ಆದುದರಿಂದ ಜೀವನೋಪಾಯ ನಡೆಸುವುದಕ್ಕೆ ವ್ಯವಸಾಯ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು" ಎಂದು ಕೇಳಿದ್ದರು.

ಶ್ರೀ ವಿ. ವೆಂಕಟಪ್ಪ.—ವ್ಯವಸಾಯದಲ್ಲಿ ಲೈಸೆನ್ಸಿಯೇಟ್ ತೆಗೆದುಕೊಂಡಿದ್ದೇನೆ, ಆದುದರಿಂದ ಒಂದು ಮಾಡಲ್ ಫಾರಂ ಮಾಡಬೇಕಾದ್ದರಿಂದ ಜಮೀನು ಕೊಡಬೇಕೆಂದು ಕೇಳಿದ್ದರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ವಿ. ವೆಂಕಟಪ್ಪ.—ಅದರಂತೆ ಮಾಡಿದರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುವುದಕ್ಕೆ ಪ್ರಯತ್ನಪಟ್ಟರು.

ಶ್ರೀ ವಿ. ವೆಂಕಟಪ್ಪ.—ಟೆನೆಂಟ್‌ಗಳಿಗೆ ಗುತ್ತಿಗೆಗೆ ಕೊಟ್ಟಿದ್ದರಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಭಾಗ ಕೊಟ್ಟಿದ್ದು ನಿಜ.

ಶ್ರೀ ವಿ. ವೆಂಕಟಪ್ಪ.—ಆದುದರಿಂದ ಅವರು ಏನು ಮಾಡುತ್ತೇವೆಂದು ಹೇಳಿದ್ದರೋ ಆ ರೀತಿ ಮಾಡಿರಲಿಲ್ಲವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡಲ್ ಫಾರಂ ಮಾಡುವುದಕ್ಕೂ, ಕೆಲವು ಭಾಗ ಗುತ್ತಿಗೆಗೆ ಕೊಡುವುದಕ್ಕೂ ಏನೂ conflict ಇಲ್ಲ.

ಶ್ರೀ ವಿ. ವೆಂಕಟಪ್ಪ.—ಅವರು ಗುತ್ತಿಗೆಗೆ ಕೊಟ್ಟ ಮೇಲೆ, ಕೆಲವು ರೈತರು ಹಿಂದೆ ತಮ್ಮ ಸ್ವಾಧೀನದಲ್ಲಿತ್ತೆಂದು ತಕರಾರುಮಾಡಿ ಅವರಮೇಲೆ ಕೇಸುಗಳು ನಡೆದದ್ದುಂಟೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಡೆದುವು.

ಶ್ರೀ ವಿ. ವೆಂಕಟಪ್ಪ.—ಅವರು trespassers ಎಂದು ಕೇಸು ಹಾಕಿದ ಸಂಬಂಧದಲ್ಲಿ ಹೈಕೋರ್ಟಿನವರು ಇವರು trespassers ಅಲ್ಲ, ಇವರ ಸ್ವಾಧೀ

ನದಲ್ಲಿ ಜಮೀನಿದೆ ಎಂದು ತೀರ್ಮಾನ ಮಾಡಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಟ್ರೆಸ್ ಪಾಸಿಂಗ್ ಕೇಸು ವಜಾ ಆದದ್ದು ಗೊತ್ತಿದೆ. ಅದರ ವಿವರ ಜ್ಞಾಪಕವಿಲ್ಲ.

ಶ್ರೀ ವಿ. ವೆಂಕಟಪ್ಪ.—ಜಮೀನು ಅಕ್ವೈರ್‌ಮಾಡಿ ಕೊಳ್ಳಬೇಕೆಂದು ಆಜ್ಞೆಮಾಡಿದಾಗ ಜಡ್ಜ್‌ಮೆಂಟ್ ಕಾಪಿಯನ್ನು ನೀವು ತರಿಸಿಕೊಳ್ಳಲಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನಗೆ ಜ್ಞಾಪಕವಿಲ್ಲ.

ಶ್ರೀ ವಿ. ವೆಂಕಟಪ್ಪ.—ಅಕ್ವಿಜಿಷನ್ ಕೆಲಸ ನಡೆಯುತ್ತಿದ್ದಾಗ ಅಕ್ವಿಜಿಷನ್ ಆಫೀಸರ ಮುಂದೆ ಅದನ್ನು ಹಾಜರ್‌ಮಾಡಿದ್ದರಲ್ಲವೆ ?

Sri A. G. RAMACHANDRA RAO.—This is a matter of evidence about which there is an appeal. ಆ ವಿಚಾರ ತರಿಸಿಕೊಂಡರೇ ಇಲ್ಲವೇ ಎಂದು ನನಗೆ ಗೊತ್ತಿಲ್ಲ. ಹೈಕೋರ್ಟಿನಲ್ಲಿ ಅಪೀಲು ಇರುವುದರಿಂದ ಫೈಲ್ ಅವರ ಹತ್ತಿರವಿದೆ. ನಮ್ಮಲ್ಲಿಲ್ಲ.

ಶ್ರೀ ವಿ. ವೆಂಕಟಪ್ಪ.—ಹೈಕೋರ್ಟಿನಲ್ಲಿ ಅಪೀಲಿದೆ ಎಂದು ಹೇಳುತ್ತೀರಿ. 'The question of preferring an appeal to the High Court against the order of the District Judge is under the consideration of the Government' ಎಂದು ಉತ್ತರದಲ್ಲಿ ಹೇಳಿದ್ದೀರಿ. ಇದರಲ್ಲಿ ಯಾವುದು ಸರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಉತ್ತರವನ್ನು ಕಳುಹಿಸಿದಾಗ, it was under consideration. ಉತ್ತರ ಕಳುಹಿಸಿದಮೇಲೆ ಅಪೀಲ್ ಫೈಲ್‌ಮಾಡಿದ್ದಾರೆಂದು ತಿಳಿಯ ಬಂತು.

ಶ್ರೀ ವಿ. ವೆಂಕಟಪ್ಪ.—ಯಾವಾಗ ಫೈಲ್‌ಮಾಡಿದರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ದಿವಸಗಳಾಗಿರಬಹುದು.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಯಾವ ಪಬ್ಲಿಕ್ ಪರ್ಪಸಸ್‌ಗಾಗಿ ಇದನ್ನು ಅಕ್ವೈರ್ ಮಾಡಿಕೊಳ್ಳಬೇಕೆಂದು, ಯಾರ್‍ಯಾದರೂ ತಮಗೆ ಮನವಿ ಮಾಡಿಕೊಂಡಿದ್ದರೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿ ಅದನ್ನು ಅನೇಕರು ಕೇಳುತ್ತಿದ್ದುದು ಒಂದು ಭಾಗ. ಮತ್ತು ಅನೇಕರು ಇದನ್ನು ಫಾರೆಸ್ಟಾಗಿ ಮಾಡಬೇಕೆಂದು ಕೇಳುತ್ತಿದ್ದುದು ಇನ್ನೊಂದು ಭಾಗ. ಇವೆರಡೂ ಪಬ್ಲಿಕ್ ಪರ್ಪಸಸ್ ಆಗುತ್ತದೆಂದು ಸರ್ಕಾರದವರು ಅಕ್ವೈರ್ ಮಾಡಿಕೊಂಡರು.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ನಂಜಪ್ಪನವರ ಜಮೀನನ್ನು ಯಾವ ಪಬ್ಲಿಕ್ ಪರ್ಪಸಸ್‌ಗಾಗಿ ಅಕ್ವೈರ್ ಮಾಡಿಕೊಳ್ಳಿ ಎಂದು ಯಾರಾದರೂ ಕೇಳಿದ್ದರೇ ಎಂದು ಕೇಳಿದರೆ ತಾವು ಏನೋ ಹೇಳುತ್ತಿದ್ದೀರಿ. ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಕೊಡುತ್ತೀರಾ ?

Sri A. G. RAMACHANDRA RAO.—I have answered that question. If you ask for the property it becomes a public question.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಆ ಪಬ್ಲಿಕ್ ಪರ್ಪಸ್, ಮುಖ್ಯ ಮಂತ್ರಿಗಳ ತಮ್ಮಂದಿರಾದ ನಂಜಪ್ಪನವರನ್ನು ಧನವಂತರನ್ನಾಗಿ ಮಾಡಬೇಕು ಎಂಬುದೆಂದು ನಾವು ತಿಳಿಯೋಣವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ತಿಳಿದರೆ ಅದು ತಪ್ಪು.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ.—ಪಬ್ಲಿಕ್ ಪರ್ಪಸ್‌ಗಾಗಿ ಜಮೀನು ಅಕ್ವೈರ್ ಮಾಡಿಕೊಳ್ಳುತ್ತೇವೆಂದು ಹೇಳುತ್ತೀರಿ. ಪಬ್ಲಿಕ್ ಪರ್ಪಸ್ ಎಂಬುದನ್ನು ಕಾನೂನಿನಲ್ಲಿ ನಿಯಾಮಕ ಮಾಡಿಲ್ಲವೆ ?

Sri A. G. RAMACHANDRA RAO.—I have answered that.

ಅಧ್ಯಕ್ಷರು.—ಪಬ್ಲಿಕ್ ಪರ್ಪಸಸ್‌ಗೆ ಅಕ್ವೈರ್ ಮಾಡುತ್ತೇವೆಂದು ತಿಳಿಸಿದ್ದಾರೆ.

One more point about the industries in Bellary. All the while, we were agitating for starting a textile mill or some other industry—paper industry, cotton industry, some such thing out of the raw material that is available in the District, so that they could provide some sort of labour for our people and just to improve the condition of our labourers. All these matters are to be considered by our Government and they must see that these industries are scattered all over the State so that needful upliftment of all the areas would take place and help the ordinary masses of the country, and also the national wealth is increased thereby. I welcome such schemes and I would like to thank our Government for taking

(SRI SIRASAPPA Ijari.)

pains in preparing such schemes for the improvement of the general masses of our country.

*Sri B. NARAYANASWAMY.—While according my support to this special resolution that has been tabled by the Industries Minister, I wish to point out that the Industries Minister was very particular in including a request for special allotment from the Government of India to certain industries that belong to the Bhadravathi Iron and Steel Works. Under the Plan I see that the Central Government are helping the Bhadravathi Iron and Steel Works outside the State Plan and at the same time they have also provided allotment for rural and urban water supply and sanitary works and also for local development works. I do not know why the Home Minister forgot about his other department, namely, transport and communications. Though the major communication, namely, railways come under the Central sector, still we the Mysore State people are very much interested to see that Railway communications are developed in our State also. In the First Five-Year Plan period and even before that, we had in view the Chamarajanagar-Satyamangalam Railway. To-day it has been given a go-by. I wish that the Industries Minister had included that also in the special resolution and had urged the Central Government to take up Chamarajnagar-Satyamangala Railway. By that, Mysore State would have been helped to a great extent and this has been the urge of the Mysore State people from a very long time. Very lately, Bangalore-Salem railway connection has been taken up and Chamarajnagar-Satyamangalam line has been given up. I am afraid our Government have not put enough pressure on the Central Government in this matter. Whatever physical targets we fix under the Plan, it has to adjust itself to the financial resources that we have at our command. That may include also the Central assistance that we get. All these are meant to improve the living standard of the people and for the equitable distribution of wealth. We are told that under the First Plan our national income has been raised to 18 per cent. But it is to be seen in its concrete shape, if not it will be merely on paper. I would like to know, by the Second Plan how much unemployment problem could be relieved. To this end, the Second Plan does not envisage the starting of any heavy industries in the State. We have been requesting the Central Government to start some basic and heavy industries in the Mysore State, but we are now told that basic industries will be started only in the North. As a matter of fact, we see the same cry being made even by the Madras Assembly. We are in a desparate condition.

The small scale and cottage industries require a good deal of development. We see that under the Plan private small-scale industries and cottage industries are made to become satisfied by saying that a lumpsum grant of Rs. 50 lakhs is made towards loans. It all depends on how the sum of Rs. 50 lakhs is being distributed among private and small-scale industries that are now progressing in the Mysore State. We have been urging upon the Government to salvage some of the industries that are dying in the State. Some of the industries have been started with the sole idea of improving the economic condition of the rural and urban population. Very many Hon'ble Members are often bringing to the notice of the Government that the sericultural industries are dying to-day. For instance in Mysore District and towards the south of Bangalore, from Channapatna onwards we have sericultural industries which are dying to-day. It is high time that the Government of Mysore come to the rescue of the industry. Thereby we will be creating employment to those unemployed and to-day if unemployment is not solved, that will be a very big problem that Government have to consider and in case the unemployment problem is not solved, any amount spent under the Second Plan would be a waste. As such, I request the Government, while they have discussion with the Central

Government, to see that some heavy and basic industries are started in the Mysore State and that Chamarajnagar-Satyamangalam Railway communication is taken up immediately. Thank you.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).- ಮಾನ್ಯ ಸಭಾಪತಿಗಳೇ ನಾನು ಈ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿರತಕ್ಕ ವಿಷಯಗಳನ್ನು ಅನುಮೋದಿಸುತ್ತ ಒಂದೆರಡು ಮಾತುಗಳನ್ನು ಮಾತ್ರ ಹೇಳಬಯಸುತ್ತೇನೆ.

ಎನ್. ಇ. ಎಸ್. ಬ್ಲಾಕುಗಳು—ನ್ಯಾಷನಲ್ ಎಕ್ಸ್‌ಟೆನ್ಷನ್ ಸರ್ವಿಸ್ ಬ್ಲಾಕುಗಳನ್ನು ಈ ದ್ವಿತೀಯ ಯೋಜನೆಯಲ್ಲಿ ನಮ್ಮ ಸಂಸ್ಥಾನದಲ್ಲಿ 98 ತೆರೆಯಲು ತೀರ್ಮಾನ ಮಾಡಿರುತ್ತಾರೆ. ಈ ಪೈಕಿ ಈ ಪ್ಲಾನ್ ಪೀರಿಯೆಡ್ಡಿನಲ್ಲಿ 44 ಇಂಟೆನ್‌ಸೀವ್ ಬ್ಲಾಕುಗಳನ್ನು ಜಾರಿಗೆ ತರಬೇಕೆಂದು ತಿಳಿಸಿದೆ. ಇನ್ನು 1956-57ನೆಯ ಸಾಲಿನಲ್ಲಿ 13 N. E. S. Blocksನ್ನು ತೆರೆಯುವುದಾಗಿ ಹೇಳಿದ್ದಾರೆ. ಆದರೆ ಈ ಹಿಂದೆ ಕೆಲವು ಪ್ರಶ್ನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಈ ವಿಚಾರದಲ್ಲಿ ಉತ್ತರಗಳನ್ನೊದಗಿಸುತ್ತಾ 1956-57ನೆಯ ಏಪ್ರಿಲ್ ಒಂದರಿಂದ ನಮ್ಮ ಸಂಸ್ಥಾನದಲ್ಲಿ ಐದು ಈ N.E.S. Blockಗಳನ್ನು ಮಾತ್ರ ತೆರೆದಿರುತ್ತೇವೆ, ಇನ್ನು ಇದಕ್ಕೆ ಮೇಲ್ಪಟ್ಟು ಬೇರೆ ಎಲ್ಲಿಯೂ ಸದ್ಯಕ್ಕೆ ಈ ಬ್ಲಾಕುಗಳನ್ನು ತೆರೆಯುವುದಿಲ್ಲ ಎಂದು ಉತ್ತರಕೊಟ್ಟಿದ್ದಾರೆ. ಆದರೆ ನಾವು ಈ ಸಂಬಂಧದಲ್ಲಿ ಯಾವ ಒಂದು ಸದುದ್ದೇಶವನ್ನಿಟ್ಟುಕೊಂಡು ಈ ಯೋಜನೆಗಳನ್ನೆಲ್ಲಾ ಸಂಪೂರ್ಣವಾಗಿ ಕಾರ್ಯಗತ ಮಾಡಬೇಕೆಂದು ಆಲೋಚನೆಯಲ್ಲಿಟ್ಟುಕೊಂಡಿದ್ದೆವೋ ಅಂಥ ಉದ್ದೇಶಕ್ಕೆ ಈಗಲೇ ಇನ್ನೂ ಪ್ರಾರಂಭದಲ್ಲೇ ಕೆಲವು ಲೋಪದೋಷಗಳಿರುವುದು ಕಂಡುಬರುತ್ತಿದೆ. ಮಂತ್ರಿಗಳು ಪ್ರಶ್ನೋತ್ತರಗಳ ಕಾಲದಲ್ಲಿ ಈ ಐದು ಬ್ಲಾಕುಗಳ ಹೊರತಾಗಿ ಇನ್ನು ಜಾಸ್ತಿ ಸಿಗುವುದಿಲ್ಲವೆಂದು ಹೇಳಿ—ಆ ಐದು ಬ್ಲಾಕುಗಳನ್ನೂ ಆಗಲೇ ಪ್ರಾರಂಭಿಸಿರುವುದಾಗಿ ಹೇಳಿದರು.

Dr. R. NAGAN GOWDA (Minister for Agriculture).—I may correct the wrong impression that the Hon'ble Member has. The proposal for 1956-57 is 13 blocks. Only five have been started now. It does not mean that we are going to stop there. The balance of them might be started some time during the course of the year.

Sri A. V. NARASIMHA REDDY.—I wish the Minister would look into the the answer given during the interpellation hour.

Mr. SPEAKER.—You can take it as an amendment.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅನಂತರ ಈಗ ತಾವು ಇಲ್ಲಿ ತಿಳಿಸಿರತಕ್ಕಂಥ 98 ಬ್ಲಾಕುಗಳನ್ನು ಐದು ವರ್ಷಗಳಲ್ಲಿ ತೆರೆಯಬೇಕೆಂದು ಹೇಳಿದ್ದೀರಿ. ಎಂದರೆ ಅಲ್ಲಿಗೆ ವರ್ಷಕ್ಕೆ ಸರಾಸರಿ 19ರ ಪ್ರಕಾರ ಪ್ರಾರಂಭಿಸಬೇಕಾಗುತ್ತದೆಂದು ಈ ಯೋಜನೆಯಲ್ಲೇ ತಿಳಿಸಿದ್ದಾರೆ. ತಾವು ಈ ಹಿಂದೆ ಪ್ರಥಮ ಪಾಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಂಸ್ಥಾನದ ಮೂರನೇ ಒಂದು ಭಾಗಕ್ಕೆ ಈ N.E.S. ಬ್ಲಾಕುಗಳನ್ನು ಹರಡಿ ಅನಂತರ ಈ ದ್ವಿತೀಯ ಪ್ಲಾನ್ ಅವಧಿಯಲ್ಲಿ ಇನ್ನುಳಿದ ಇಡೀ ಸಂಸ್ಥಾನಕ್ಕೆಲ್ಲಾ ಸಂಪೂರ್ಣವಾಗಿ ಈ ಬ್ಲಾಕುಗಳನ್ನು ವಿಸ್ತರಿಸುತ್ತೇವೆಂದು ತಿಳಿಸೋಣವಾಗಿತ್ತು. ಆದರೆ ಇತ್ತೀಚೆಗೆ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರದಿಂದ ಕೊಂಚ ಅನುಮಾನಕ್ಕೆ ಅವಕಾಶವಾಗಿದೆ. ಆ ರೀತಿ ಅನುಮಾನಗಳು ಯಾವುವಕ್ಕೂ ಅವಕಾಶಕೊಡದ ಹಾಗೆ ಇದನ್ನು ಸರಿಪಡಿಸಬೇಕು.

ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆ.

ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸತಕ್ಕ ವಿಚಾರವಾಗಿ ಈ ಸಭೆಯಲ್ಲೇ ಅನೇಕವೇಳೆ ವಿಪುಲವಾದ ಚರ್ಚೆಗಳು ನಡೆದಿರುತ್ತವೆ. ತಾವು ಈ ಹಿಂದೆಯೇ ಇನ್ನು ಎರಡು ವರ್ಷಗಳ ಅವಧಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಿಯೂ ಕುಡಿಯುವ ನೀರಿಗೆ ಅಭಾವವಿಲ್ಲದ ರೀತಿಯಲ್ಲಿ ಒಂದು ಸುವ್ಯವಸ್ಥೆಯನ್ನು ಏರ್ಪಾಡು ಮಾಡುತ್ತೇವೆಂದು ತಿಳಿಸಿದ್ದಿರಿ. ಆದರೆ ತಮಗೆ ಇಲ್ಲಿನವರೆಗೂ ಈ ಕಾರ್ಯವನ್ನು ನೆರವೇರಿಸುವುದಕ್ಕೆ ಸಾಧ್ಯವಾಗಿಲ್ಲ. ತಾವು ಏತಕ್ಕಾಗಿ ಈ ಕಾರ್ಯ ಮಾಡಲಿಲ್ಲ ಎಂದು ಕೇಳಿದರೆ ಹಣವಿಲ್ಲ, ಅದಕ್ಕಾಗಿ ಮಾಡಲು ಸಾಧ್ಯವಾಗಲಿಲ್ಲ ಎಂದು ಹೇಳುತ್ತಿದ್ದೀರಿ. ಆದರೆ ಈಗ ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರ್ಕಾರದವರೇ ಈ ಯೋಜನೆಗೆ ಒದಗಿಸಿರುವ ಮೊಬಲಗಲ್ಲದೆ ಅಲಾಯಿದ 400 ಲಕ್ಷ ರೂಪಾಯಿಗಳನ್ನು ಒದಗಿಸಿರುವುದಾಗಿ ಈ ಯೋಜನೆಯಲ್ಲೇ ತಿಳಿಸಿದ್ದಾರೆ. ಆದರೆ ಈ ದಿವಸ ಗ್ರಾಮಾಂತರ ಪ್ರದೇಶಗಳಿಗೆ ಈ ಬಾವಿಗಳನ್ನು ಒದಗಿಸತಕ್ಕ ವ್ಯವಸ್ಥೆಯಲ್ಲಿ ಸಂಬಂಧಪಟ್ಟ ಗ್ರಾಮದವರು ಕೊಂಚ ಭಾಗದ ಹಣವನ್ನು ಕಾಂಟ್ರಿಬ್ಯೂಟ್ ಮಾಡಿದರೆ ಉಳಿದ ಹಣವನ್ನು ಸರ್ಕಾರದವರು ಹಾಕುವುದಾಗಿ ಹೇಳುತ್ತಿದ್ದಾರೆ. ಈ ರೀತಿ ವ್ಯವಸ್ಥೆ ಮಾಡಿರುವುದರಿಂದ ಅನೇಕ ಗ್ರಾಮಗಳಿಗೆ ಅವರ ಭಾಗದ ಕಾಂಟ್ರಿಬ್ಯೂಷನ್ ಮೊಬಲಗನ್ನು ಕೊಡಲು ಈ ಹೊತ್ತು ಶಕ್ತಿಯಿಲ್ಲ. ಇದು ಹಾಗಿರಲಿ. ಇನ್ನು ಕೆಲವು ಜೋಡಿ ಮತ್ತು ಇನಾಂ ಗ್ರಾಮಗಳು ಎಂದು ಬೇರೆ ಇವೆ. ಈ ಗ್ರಾಮಗಳು ಸರ್ಕಾರಿ ಆಡಳಿತಕ್ಕೊಳಪಟ್ಟಿರುವುದಿಲ್ಲ. ಈ ಗ್ರಾಮಗಳಲ್ಲಿರತಕ್ಕಂಥ ಜನರ ಗೋಳು ಹೇಳತೀರದಾಗಿದೆ. ಅಂಥ ಗ್ರಾಮಗಳಿಗೆ ಗ್ರಾಮ ಪಂಚಾಯಿತಿಗಳೊಂದೂ ಇರುವುದಿಲ್ಲ. ಒಂದುವೇಳೆ ಕೆಲವು ಗ್ರಾಮಗಳಲ್ಲಿ ಆ ಪಂಚಾಯಿತಿಗಳಿದ್ದರೂ ಹಣವಿಲ್ಲ. ಹೀಗಾಗಿ ಅವರ ಕಷ್ಟನಿವಾರಣೆಗೆ ಇಲ್ಲಿಯವರೆಗೂ ಯಾವ ಒಂದು ಮಾರ್ಗವೂ ಗೊತ್ತಾಗುತ್ತಿಲ್ಲ. ಈ ದಿವಸ ಸರ್ಕಾರದವರು ಈ ಸಣ್ಣ ಪುಟ್ಟ ಗ್ರಾಮಪಂಚಾಯಿತಿಗಳವರಿಗೂ ಕೂಡ ಬಾವಿಯ ಖರ್ಚಿನಲ್ಲಿ ನಾಲ್ಕನೆ ಒಂದು ಭಾಗದ ಹಣವನ್ನು ಕೊಡಬೇಕೆಂತಲೋ ಅಥವಾ ಮೂರನೇ ಒಂದು ಭಾಗದ ಹಣವನ್ನು ಕೊಡಬೇಕೆಂತಲೋ ಒಂದು ಷರತ್ತನ್ನು ಹಾಕಿದ್ದಾರೆ, ಆದರಿಂದ ಈ ಯೋಜನೆ ಅಷ್ಟಾಗಿ ಕಾರ್ಯರೂಪಕ್ಕೆ ಬರಲು ಸಾಧ್ಯವಾಗಿಲ್ಲ. ಈ ಬಾಬಿನಲ್ಲಿ ಆ ಕಾಂಟ್ರಿಬ್ಯೂಷನ್ ಮೊಬಲಗನ್ನು ವಸೂಲ್ಮಾಡದೆ ಹಾಗೆಯೇ ಸರ್ಕಾರದವರು ಈ ಯೋಜನೆಯನ್ನು ಮುಂದುವರಿಸಲು ಸಾಧ್ಯವಿಲ್ಲವೇ ಎಂಬುದನ್ನು ಪರಿಶೀಲಿಸಲು ಇಲ್ಲಿಯವರೆಗೂ ಇವರು ಇದಕ್ಕೆ ತಮ್ಮ ಗಮನವನ್ನೇ ಕೊಟ್ಟಿಲ್ಲ.

(ಶ್ರೀ ಎ. ವಿ. ನರಸಿಂಹರೆಡ್ಡಿ)

ವಿದ್ಯುಚ್ಛಕ್ತಿ ವಿಚಾರ.—ಇನ್ನು ಮೂರನೆಯದಾಗಿ ವಿದ್ಯುಚ್ಛಕ್ತಿ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗ ಶರಾವತಿ ವ್ಯಾಲಿಯ ಕಾರ್ಯವನ್ನು ಈ ದ್ವಿತೀಯ ಯೋಜನೆಯಲ್ಲಿ ಅಳವಡಿಸಿರುತ್ತಾರೆ. ಇನ್ನು ಭದ್ರಾವತಿ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಯಲ್ಲಿ ಸ್ಟೈನ್‌ಲೆಸ್ ಸ್ಟೀಲ್ ಪ್ಲಾಂಟ್, ಫೆರೋ ಅಲಾಯ್ ಪ್ಲಾಂಟ್ ಇತ್ಯಾದಿ ಐದಾರು ರೀತಿಯ ಹೊಸ ಉದ್ಯಮಗಳನ್ನು ಬಡಾವಣೆ ಮಾಡಲು ಇದಕ್ಕೆ ಬೇಕಾದ ಹಣವನ್ನು ಕೇಂದ್ರ ಸರ್ಕಾರದವರೇ ಪ್ರತ್ಯೇಕವಾಗಿ ಒದಗಿಸುವುದಾಗಿ ಒಪ್ಪಿಕೊಂಡಿದ್ದಾರೆ. ಈ ದಿವಸ ನಮ್ಮ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಅಭಾವವಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಇದನ್ನು ನಾನು ಒಪ್ಪಲಾರೆ. ನಮ್ಮ ಸಂಸ್ಥಾನದಲ್ಲಿ ಇನ್ನೂ ಅನೇಕ ದೊಡ್ಡ ಕೈಗಾರಿಕೆಗಳು ಪ್ರಾರಂಭವಾಗಲಿರುತ್ತವೆ. ಇದಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ನಮಗೆ ಬೇಕಾಗುತ್ತದೆ. ಆದರೆ ಈ ದಿವಸ ನಮ್ಮ ಸಂಸ್ಥಾನದಲ್ಲಿ ಅನೇಕ ಗ್ರಾಮಾಂತರ ಪ್ರದೇಶಗಳಿಗೆ ವ್ಯವಸಾಯೋದ್ಯಮಗಳಿಗೂ ಮತ್ತು ದೀಪಕ್ಕೂ ಈ ವಿದ್ಯುಚ್ಛಕ್ತಿಯನ್ನು ಒದಗಿಸಲು ಸಾಧ್ಯವಾಗಿಲ್ಲವೆಂದು ಹೇಳುತ್ತಿರುವಾಗ ಈ ವಿದ್ಯುಚ್ಛಕ್ತಿಗೆ ಈ ಹೊತ್ತು ಕೂಡ ನಮಗೆ ಅಭಾವವಿದ್ದೇ ಇದೆ ಎಂಬುದನ್ನು ಸರ್ಕಾರದವರೂ ಕೂಡ ಒಪ್ಪಿಕೊಂಡ ಹಾಗೆಯೇ ಆಯಿತು. ನಮ್ಮಲ್ಲಿ ಈ ಕೈಗಾರಿಕೆಗಳನ್ನು ತೆರೆಯುವುದರಲ್ಲಿ ಒಂದು ಯೋಜನೆಯಿಲ್ಲ. ಎಲ್ಲಾ ಕೈಗಾರಿಕೆಗಳನ್ನೂ ಒಂದೇ ಕಡೆ ಕೇಂದ್ರಿಕೃತ ಮಾಡುತ್ತಿದ್ದಾರೆ. ಈ ಪಾಲಿಸಿ ಸಾಧುವಾದದ್ದಲ್ಲ ಎಂಬುದಾಗಿ ನಾವು ಅನೇಕಾವರ್ತಿ ಚರ್ಚೆ ಮಾಡಿದ್ದೇವೆ. ಆದರೆ ಈ ದಿವಸ ಸರ್ಕಾರದರಿಗೆ ಈ ಹೊಸ ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸತಕ್ಕ ಭರದಲ್ಲಿ ಹಳೆ ಕೈಗಾರಿಕೆಗಳ ಕಡೆಗೆ ಅಲಕ್ಷ್ಯ ಉಂಟಾಗಿ ಅವುಗಳ ಅಭಿವೃದ್ಧಿ ಮೊಟಕಾಗುತ್ತಿದೆ. ಅದಕ್ಕೆ ಅವಕಾಶವಿಲ್ಲದಂತೆ ಈ ಹಳೆ ಕೈಗಾರಿಕೆಗಳಲ್ಲಿ ಯಾವುದು ಹೀನಸ್ಥಿತಿಯಲ್ಲಿದೆಯೋ ಅಂಥಾದ್ದಕ್ಕೆ ಮೊದಲು ಹೆಚ್ಚಿನ ಸಿಗಾ ಕೊಟ್ಟು ಅದನ್ನು ಉತ್ತಮಗೊಳಿಸತಕ್ಕದ್ದು ಅತಿಮುಖ್ಯವಾದುದೆಂಬ ಅಂಶವನ್ನು ಈ ಮಾನ್ಯ ಸಭೆಯು ಈಗಾಗಲೇ ವ್ಯಕ್ತಪಡಿಸಿದೆ. ಆದುದರಿಂದ ಸರ್ಕಾರದವರು ಈ ದ್ವಿತೀಯ ಪ್ಲಾನಿನಲ್ಲಿ ಮೊಟ್ಟಮೊದಲು ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸುವ ಮುನ್ನ ಗ್ರಾಮಾಂತರ ಪ್ರದೇಶಗಳ ಕಡೆಗೆ ತಮ್ಮ ಗಮನವನ್ನು ನೀಡಿ ಅಲ್ಲಿ ಜನರಿಗೆ ಬೆಳಕು ಮತ್ತು ವ್ಯವಸಾಯದ ಕೆಲಸಕಾರ್ಯಗಳಿಗೆ ಬೇಕಾದಂಥ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. ಈಗ ತಾವು ತಯಾರಿಸಿರತಕ್ಕಂಥ ಯೋಜನೆಯಲ್ಲಿ ಪ್ರತಿಯೊಂದು ಅಂದಾಜಿನ ಆದಾಯ ಮತ್ತು ವೆಚ್ಚ ಬಹಳ ಎಲಾಸ್ಟಿಕ್ ಆಗಿರುತ್ತದೆ. ಈ ಉದ್ಯಮಗಳನ್ನು ಕೈಗೊಂಡು ಅವುಗಳನ್ನು ಕಾರ್ಯರೂಪಕ್ಕೆ ತರುವಂಥ ಕಾಲದಲ್ಲಿ ಮಧ್ಯೆ ಹೆಸರೇ ಇಲ್ಲದಂಥ ಅನೇಕ ಹೊಸ ಹೊಸ ಬಾಬುಗಳು ಹೊರಗೆ ಬಂದುಬಿಡುತ್ತವೆ. ಉದಾಹರಣೆಗಾಗಿ ಹೇಳುವುದಾದರೆ ವಿಧಾನಸೌಧ, ವಿಧಾನವೀಧಿ ಇತ್ಯಾದಿಗಳೆಲ್ಲಾ ಬಂದ ಹಾಗೆ, ಅವಶ್ಯಕವಾಗಿ ಬೇಕಾಗಿರತಕ್ಕದ್ದು ಆಗದೆ ಅನಾವಶ್ಯಕವಾದಂಥ ಬಾಬುಗಳಿಗೆ ಹೆಚ್ಚಿನ ಸೌಲಭ್ಯ ದೊರೆಯುತ್ತಿದೆ. ಆದುದರಿಂದ ಇಂಥ ಹೆಚ್ಚು ಕಡಮೆಗಳಿಗೆ ಅವಕಾಶಕೊಡದಂತೆ ಯಾವುದು ನಮಗೆ ತೀರ ಅತ್ಯಾವಶ್ಯಕವೋ ಅಂಥದಕ್ಕೆ ಮಾತ್ರ ಮೊದಲು ಈ ಹಣದ ಸೌಲಭ್ಯ ಒದಗುವಂತೆ ಮಾಡಲು ಸರ್ಕಾರದವರು ತಮ್ಮ ಗಮನ ಕೊಡಬೇಕೆಂದು ಹೇಳುತ್ತೇನೆ.

12-30 P.M.

ಆಯುವ್ಯಯ ಅಂದಾಜುಗಳಲ್ಲಿ ಈ ಹಣವನ್ನು ಸೇರಿಸಿ ಖರ್ಚು ಮಾಡುವಾಗ ಆ ಒಂದು ದೃಷ್ಟಿಯನ್ನು ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಳ್ಳಬೇಕು ಮತ್ತು ಪ್ರಯಾರಿಟಿ ಗೊತ್ತುಮಾಡಿಕೊಳ್ಳಬೇಕು. ಕುಡಿಯುವ ನೀರಿನ ಅವಶ್ಯಕತೆ ಬಹಳವಾಗಿದೆ. ಅದನ್ನು ಒದಗಿಸುವುದು ತಮ್ಮ ಮೊದಲನೆಯ ಕರ್ತವ್ಯ. ಎರಡನೆಯದು ವಿದ್ಯಾಭ್ಯಾಸದ ಸೌಲಭ್ಯ. ಈ ರೀತಿಯಾಗಿ ಪ್ರಯಾರಿಟಿ ಲಿಸ್ಟ್ ಯಾವುದು ಇದೆಯೋ ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸಮಾಡುವುದು ಉತ್ತಮ. ವಿದ್ಯುಚ್ಛಕ್ತಿ ಎಷ್ಟೇ ಉತ್ಪನ್ನವಾದರೂ ಅದನ್ನೆಲ್ಲಾ ಗ್ರಾಮಾಂತರಗಳಲ್ಲಿ ದೊಡ್ಡ ಕೈಗಾರಿಕೆಗಳನ್ನು ಪ್ರಾರಂಭ ಮಾಡಲಿಕ್ಕೋ ಅಥವಾ ಇನ್ನಾವುದಾದರೂ ಒಂದು ಉದ್ಯಮಕ್ಕೋ ಉಪಯೋಗಿಸಿಕೊಳ್ಳಲಿಕ್ಕೆ ಒಂದು ಪ್ರಯಾರಿಟಿ ಇಟ್ಟುಕೊಂಡು ಆಯಾ ಕೆಲಸಗಳನ್ನು ನೆರವೇರಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳಿ ನಾನು ಈ ಎರಡನೆಯ ಪಾಂಚವಾರ್ಷಿಕ ಯೋಜನೆಯ ವಿಶೇಷ ನಿರ್ಣಯವನ್ನು ಅನುಮೋದಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ ಅಧ್ಯಕ್ಷರೇ, ಈ ಶಾಸನ ಸಭೆಯ ಮೂಲಕ ತಮ್ಮಲ್ಲಿ ಮತ್ತು ಸರ್ಕಾರದವರಲ್ಲಿ ಒಂದು ವಿಷಯವನ್ನು ತಿಳಿಸಬೇಕಾಗಿದೆ. ಮೈಸೂರು ಸಂಸ್ಥಾನದಲ್ಲಿ 1952ನೇ ಇಸವಿಯಲ್ಲಿ ಈಗಿನ ಸರ್ಕಾರ ಅಧಿಕಾರಕ್ಕೆ ಬಂತು. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮೊದಲನೆ ಪಾಂಚವಾರ್ಷಿಕ ಯೋಜನೆ ಪ್ರಾರಂಭವಾಗಿ ಅನೇಕ ಉಪಯುಕ್ತವಾದ ಕೆಲಸಕಾರ್ಯಗಳು ನಡೆದಿವೆ ಎಂದು ನಾನು ತಿಳಿಸಬೇಕಾಗಿದೆ. ಶ್ರೀ ನರಸಿಂಹರೆಡ್ಡಿಯವರು ವಿಧಾನಸೌಧ ವಗೈರೆ ಕಟ್ಟಡಗಳ ಅವಶ್ಯಕತೆ ಈಗ ಏನಿದೆ ಎಂದು ಪ್ರಶ್ನಿಸಿದರು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗೆ ನಾನು ಹೇಳಲಿಲ್ಲ. ನಾನು ಹೇಳಿದ್ದು ಪ್ರಯಾರಿಟಿ ಮೇಲೆ ಯಾವುದು ಮೊದಲು ಮಾಡಬೇಕೋ ಅದನ್ನು ಮಾಡಿ ಅನಂತರ ಮಿಕ್ಕದ್ದನ್ನು ಮಾಡಿ ಎಂದು ಹೇಳಿದೆ. ವಿಧಾನಸೌಧ ಕಟ್ಟಕೂಡದು ಎಂದು ಹೇಳಲಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಮೈಸೂರು ಸಂಸ್ಥಾನದಲ್ಲಿ ಪ್ರತಿಯೊಂದು ಇಲಾಖೆಯಲ್ಲೂ ಕೂಡ ಒಂದಕ್ಕೆ ಮೂರರಷ್ಟು ದಕ್ಷತೆ ಹೆಚ್ಚಿದೆ. ಅಷ್ಟೇ ಅಲ್ಲದೆ ದಕ್ಷರಾಗಿರತಕ್ಕ ಈ ಮಂತ್ರಿಮಂಡಲದ ನೇತೃತ್ವದಲ್ಲಿ ಅನೇಕ ಕೆಲಸ ಕಾರ್ಯಗಳು ನಡೆದಿವೆ. ಮಾನ್ಯ ರೆವಿನ್ಯೂ ಮಿನಿಸ್ಟರ್‌ಅವರು ಜೋಡಿ ಮತ್ತು ಇನಾಂ ಗ್ರಾಮಗಳ ವಿಚಾರದಲ್ಲಿ ಬಹಳ ದಕ್ಷತೆಯಿಂದ ಕೆಲಸ ಮಾಡಿ ಅವುಗಳನ್ನು ರದ್ದು ಮಾಡುವುದಕ್ಕಾಗಿ ಒಂದು ಮಸೂದೆಯನ್ನು ಈಗಾಗಲೇ ಅಂಗೀಕಾರ ಮಾಡಿಸಿ ಜಾರಿಗೆ ತರುವವರಾಗಿದ್ದಾರೆ. ಮಾನ್ಯ ಕೈಗಾರಿಕಾ ಮಂತ್ರಿಗಳವರು ಎಂದರೆ ಹೋಂ ಮಿನಿಸ್ಟರ್‌ಅವರು ನನಗೆ ಗೊತ್ತಿರುವಹಾಗೆ ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ಸಂಬಂಧಪಟ್ಟಂತೆ. . . .

ಅಧ್ಯಕ್ಷರು.—ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಏನೇನು ಬದಲಾವಣೆ ಮಾಡಬೇಕು ಎನ್ನುವುದನ್ನು ಹೇಳಿ.

ಶ್ರೀ ಎಸ್. ಸಿದ್ದಪ್ಪ.—ಶ್ರೀ ನರಸಿಂಹರೆಡ್ಡಿಯವರು ಕುಡಿಯುವನೀರಿಗೆ ಅಭಾವವಾಗಿದೆ ಎಂದು ಹೇಳಿದರು. ಅದೇನೋ ನಿಜ. ಮಾನ್ಯ ರೆವಿನ್ಯೂ ಸಚಿವರಿಗೆ ಈಗ

ಎರಡು ವರ್ಷಗಳಿಂದಲೂ ಯಾವ ಹಳ್ಳಿಯಲ್ಲಿ ಕುಡಿಯುವ ನೀರಿಗೆ ಅಭಾವವಾಗಿದೆಯೋ ಅಲ್ಲಿ ಬಾವಿಗಳನ್ನು ತೋಡಿಸಿ ಅನುಕೂಲ ಮಾಡಿಸಿ ಕೊಡಬೇಕು ಅದನ್ನು ಮಾಡಿಕೊಡಬೇಕಾದ್ದು ಅತ್ಯಗತ್ಯ ಎಂದು ಹೇಳುತ್ತಲೇ ಇದ್ದೇವೆ. ಮೊದಲನೇ ಪಾಂಚವಾರ್ಷಿಕ ಯೋಜನೆಯಲ್ಲಿ ಏನೋ ಹಣ ಒದಗಿಸಿದ್ದಿರಿ, ಅದರಿಂದ ರೈತರಿಗೆ ಉಪಯುಕ್ತವಾದ ಕೆಲಸಗಳು ಆಗಿವೆ. ಆದರೆ ಊರಿಂದ ಊರಿಗೆ ಹೋಗತಕ್ಕ ಸಂಚಾರ ಸೌಕರ್ಯ, ಕುಡಿಯುವ ನೀರಿನ ಬಾವಿಗಳ ಅನುಕೂಲತೆ ಮತ್ತು ಮೈನರ್ ಮತ್ತು ಮೇಜರ್ ಕೆರೆಗಳ ಜೀರ್ಣೋದ್ಧಾರ ಈ ಕೆಲಸ ಕಾರ್ಯಗಳು ಇನ್ನೂ ಆಗಬೇಕಾಗಿವೆ ಎಂದು ಹೇಳಿ ಆ ವಿಷಯದಲ್ಲಿ ಹೆಚ್ಚಿಗೆ ಹೇಳಬೇಕಾಗಿಲ್ಲವೆಂದು ತಿಳಿದುಕೊಂಡಿದ್ದೇನೆ.

ವಿದ್ಯಾ ಇಲಾಖೆಯಲ್ಲಿ ಮೊದಲಿನಿಂದಲೂ ಹೆಚ್ಚು ಹಣ ಖರ್ಚು ಮಾಡುತ್ತಾ ಇದ್ದೀರಿ. ಅದನ್ನು ಉಪಯುಕ್ತವಾದ ರೀತಿಯಲ್ಲಿ ವಿನಿಯೋಗಮಾಡಲು ತಕ್ಕ ಯೋಜನೆ ಯಾವುದನ್ನು ಮಾಡಿದ್ದೀರೋ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ವಿದ್ಯುಚ್ಛಕ್ತಿ ಇಲಾಖೆಯ ಮಂತ್ರಿಗಳ ಕಾಲದಲ್ಲಿ ಅನೇಕ ವಿದ್ಯುಚ್ಛಕ್ತಿ ಯೋಜನೆಗಳು ನಡೆದಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಪಂಪುಗಳನ್ನು ಹಾಕಿಕೊಳ್ಳಲು ಜನ ಏರ್ಪಾಡು ಮಾಡಿದ್ದಾರೋ ಅಲ್ಲಿಗೆಲ್ಲಾ ಜಾಗ್ರತೆ ಈ ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಹೇಳುತ್ತೇನೆ. ಮೈಸೂರು ಸಂಸ್ಥಾನದ ಮೊದಲನೆ ಪಾಂಚವಾರ್ಷಿಕ ಯೋಜನೆಗೆ 48 ಕೋಟಿ ರೂಪಾಯಿಗಳ ಅಂದಾಜು ಆಗಿದ್ದುದು ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ 86 ಕೋಟಿ ರೂಪಾಯಿಗಳಿಗೆ ಬಂದಿದೆ. ಮುಂದೆ ಮೈಸೂರು ಸಂಸ್ಥಾನಕ್ಕೆ ಇನ್ನೂ ಅನೇಕ ಹೊರಗಿನ ಪ್ರದೇಶಗಳು ಸೇರುವುದರಿಂದ ಅಲ್ಲಿ ಆಗಬೇಕಾಗಿರತಕ್ಕ ಯೋಜನೆಗಳಿಗೂ ಕೂಡ ಮೊಬಲಗನ್ನು ಒದಗಿಸಿಕೊಂಡು ದೇಶಕ್ಕೆ ಅತ್ಯುನ್ನತವಾದ ಅನೇಕ ಅನುಕೂಲಗಳನ್ನು ಮಾಡಿಕೊಡಬೇಕಾಗಿದೆ.

ಮೈಸೂರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಜನರಲ್ ಹಾಸ್ಟೆಲುಗಳ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಅವುಗಳನ್ನು ಏರ್ಪಡಿಸಿ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಸೌಲಭ್ಯವನ್ನು ಕಲ್ಪಿಸಿಕೊಡಬೇಕಾದದ್ದು ಅತ್ಯಗತ್ಯ ಎಂದು ಹೇಳುತ್ತೇನೆ.

ಮೈಸೂರು ಸರ್ಕಾರದ ಅಧಿಕಾರಿಗಳು ಮತ್ತು ಮಾನ್ಯ ಮಂತ್ರಿಗಳೂ ಸಹ ಬಹಳ ದಕ್ಷತೆಯಿಂದ ಕೆಲಸ ಮಾಡಿ ನಮಗೆಲ್ಲಾ ಬಹಳ ಉಪಕಾರ ಮಾಡಿದ್ದಾರೆ. ಇನ್ನೂ ಮಾಡಬೇಕಾದ ಕೆಲಸ ಅವರ ಮೇಲೆ ಬಾಕಿ ಉಳಿದಿದೆ. ಆ ರೀತಿ ಉಳಿದಿರತಕ್ಕ ಎಲ್ಲ ಕೆಲಸಗಳ ಒಂದು ಪಟ್ಟಿ ಹಾಕಿಕೊಂಡು ಅವುಗಳನ್ನೆಲ್ಲಾ ಕಾರ್ಯಗತ ಮಾಡಿ ದೇಶದ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಲು ಪ್ರಯತ್ನಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri G. A. THIMMAPPA GOWDA (Arkalgud).—I move for closure, Sir.

Mr. SPEAKER.—I will put it to vote after Sri Prabhaker finishes his speech.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ).—ಸ್ವಾಮಿ, ಈಗ ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಇದ್ದಂಥ ಧ್ಯೇಯಗಳನ್ನು ಸಾಧಿಸಿರತಕ್ಕದ್ದು ಸರ್ವರಿಗೂ ವಿದಿತವಾಗಿದೆ. ಸರ್ಕಾರದ ಬೇರೆ ಬೇರೆ ಇಲಾಖೆಗಳು ಎಷ್ಟರಮಟ್ಟಿಗೆ ದಕ್ಷತೆಯಿಂದ ಕೆಲಸ ಮಾಡಿ ಸಾರ್ವಜನಿಕರ ಸಹಕಾರವನ್ನು ಪಡೆದು ದೇಶದ ದುಸ್ಥಿತಿಯನ್ನು ಹೋಗಲಾಡಿಸಿವೆ ಎಂಬುದನ್ನು ನೋಡಿದರೆ ಅದು ಒಂದು ಸಂತೋಷಕರವಾದ ವಿಚಾರ. ಈ ಎರಡನೆ ಪಾಂಚವಾರ್ಷಿಕ ಯೋಜನೆ ನಮ್ಮ ಮುಂದೆ ಇರುವಾಗ ನಮಗೆ ಮುಖ್ಯವಾಗಿ ಕಂಡುಬರುವುದು ಹೊಟ್ಟೆಗೆ ಆದ ಮೇಲೆ ಬಟ್ಟೆಗೆ ವ್ಯವಸ್ಥೆ ಆಗಬೇಕು ಎನ್ನುವುದು ಜನರ ಆಕಾಂಕ್ಷೆಯಾಗಿದೆ. ಇದನ್ನು ಈಡೇರಿಸುವುದಕ್ಕೆ ಸರ್ಕಾರದವರು ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾ ಬೆಳವಣಿಗೆಗೆ ಅವಕಾಶ ಮಾಡಿರತಕ್ಕದ್ದು ಸಂತೋಷದ ವಿಚಾರ. ಅದೇ ರೀತಿ ಈ ಯೋಜನೆಯಲ್ಲಿ ದೇಶಕ್ಕೆ ಅವಶ್ಯಕವಾದ ಏನೇನು ಏರ್ಪಾಡುಗಳನ್ನು ಮಾಡಬೇಕೆಂದಿದ್ದಾರೆ ಎಂಬುದನ್ನು ನೋಡಿದರೆ ನಮ್ಮ ದೇಶದ ಪ್ರಗತಿ ಎಷ್ಟರಮಟ್ಟಿಗೆ ಆಗುತ್ತದೆ ಎಂಬುದು ವೇದ್ಯವಾಗುತ್ತದೆ. ಈಗ ಈ ಯೋಜನೆಯ ಪುಸ್ತಕದಲ್ಲಿರತಕ್ಕ ಎಲ್ಲಾ ಚಾಪ್ಟರ್‌ಗಳ ಮೇಲೂ ಎಲ್ಲ ಸದಸ್ಯರೂ ಮಾತನಾಡಿದ್ದಾರೆ. ಈಗ ನಾವು the land marks of the second Five-Year Plan ಏನು ಎಂಬುದನ್ನು ನೋಡಬೇಕಾಗಿದೆ. ಇದರಲ್ಲಿ ಇಷ್ಟು ಹಣ ಸಾಲ ಎತ್ತುವುದು, ಇಷ್ಟು ಹಣ ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳುವುದು ಎಂದು ಹೇಳಿ ತಿಳಿಸಿದ್ದೀರಿ. ಕಂದಾಯ ಹಾಕಿ ಎಷ್ಟು ದುಡ್ಡು ಒದಗಿಸುತ್ತೀರಿ ಎಂಬುದನ್ನು ಇದರಲ್ಲಿ ತಿಳಿಸಿಲ್ಲ. ಈ ಐದು ವರ್ಷ ಕಾಲದಲ್ಲಿ ಯಾವಾಗಲಾದರೂ ಬಹುಶಃ ಕಂದಾಯ ಹಾಕಿ ಹಣ ಬರಮಾಡಿಕೊಳ್ಳಬೇಕಾದ ಪರಿಸ್ಥಿತಿ ಒದಗಬಹುದು. ಏಕೆಂದರೆ ಈಗಿರುವ ರೀತಿಯಲ್ಲಿ ಈ ಯೋಜನೆಗಳಿಗೆ ಹಣ ಸಾಕಾಗುವುದಿಲ್ಲ. ಈಗ ಮೈನರ್ ಇರಿಗೇಷನ್ ವರ್ಕ್ಸ್ ಎಂದಿದೆ. ಇದಕ್ಕೆ ಹೆಚ್ಚು ನಿಗಾ ಕೊಡಬೇಕೆಂದು ಅನೇಕರು ಬಡ್ಜೆಟ್ ಭಾಷಣ ಮಾಡುವಾಗ ಹೇಳಿದ್ದಾರೆ. ಪಿ. ಡಬ್ಲ್ಯೂ.ಡಿ. ಸ್ಕೀಮಿಗೆ 10-15 ವರ್ಷಗಳ ಕಾಲದಲ್ಲಿ ತಾವು ಒದಗಿಸಿರುವಷ್ಟು ಹಣವನ್ನು ಈ ಐದು ವರ್ಷದ ಯೋಜನೆಯಲ್ಲಿ ಒದಗಿಸಿದ್ದೀರಿ. ಈ ರೀತಿ ಕಾರ್ಯಕ್ರಮಗಳನ್ನು ಕೈಕೊಂಡು ಮೈನರ್ ಇರಿಗೇಷನ್ ವರ್ಕ್ಸನ್ನು ಜಾಗ್ರತೆ ಮಾಡಿಕೊಡಬೇಕೆಂದು ಹೇಳುತ್ತೇನೆ.

ಮಾರ್ಕೆಟಿಂಗ್ ವಿಷಯ ತೆಗೆದುಕೊಂಡರೆ ವೇರ್ ಹೌಸ್ ಮತ್ತು ಗೋಡೌನ್‌ಗಳನ್ನು ಕಟ್ಟುವುದಕ್ಕೆ ಈಗಾಗಲೇ ಸರ್ಕಾರದವರು ಕಾರ್ಯಕ್ರಮ ಕೈಕೊಂಡಿದ್ದಾರೆ. ಈಗ ಕಟ್ಟಿರುವಷ್ಟು ವೇರ್‌ಹೌಸ್ ಮತ್ತು ಗೋಡೌನ್‌ಗಳು ಸಾಲದು ಅವುಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ಅದರಲ್ಲೂ ಗ್ರಾಮಾಂತರಗಳಲ್ಲಿ ಅವುಗಳನ್ನು ಹೆಚ್ಚಾಗಿ ಏರ್ಪಡಿಸಬೇಕೆಂದು ಹೇಳುತ್ತೇನೆ.

ಸರ್ಕಾರದವರು ಕೆಲವು ಸಂದರ್ಭಗಳಲ್ಲಿ ಪ್ರೈವೇಟ್ ಸೆಕ್ಟರ್‌ಗೆ ಉತ್ತೇಜನ ಕೊಡುತ್ತೇವೆ ಎಂದು ಹೇಳುತ್ತಾ ಇರುವುದರಲ್ಲಿ, ಒಂದು ಭಾಗವನ್ನು ಮರೆತಿದ್ದಾರೆ.

> "Government must take initiative and move in certain direction of starting, owning and managing industry for some time to come."

(ಶ್ರೀ ಕೆ. ಪ್ರಭಾಕರ್).

ಎನ್ನುವುದನ್ನು ಖಚಿತವಾಗಿ ಪಾಲಿಸಿಕೊಂಡು ಬರಬೇಕು. ಖಾದಿ ಅಭಿವೃದ್ಧಿ ಕೇಂದ್ರಗಳನ್ನು ಸರ್ಕಾರದವರೇ ನಡೆಸಿ ಅವುಗಳಲ್ಲಿ ಒಂದು ತರಹ ಸ್ಥಿರತೆ ಬಂದ ಮೇಲೆ ಅದನ್ನು ಖಾಸಗೀಯವರಿಗೆ ಬೇಕಾದರೆ ಕೊಡಬಹುದು ಎಂದು ಹೇಳುತ್ತೇನೆ.

ಡಿಪ್ರೆಸ್ಡ್ ಕ್ಲಾಸಿನವರ ಅಭಿವೃದ್ಧಿಯ ವಿಚಾರದಲ್ಲಿ ಏನು ಮಾಡಿದ್ದೀರಿ ಎಂದರೆ ಮನೆಗಳನ್ನು ಕಟ್ಟುವುದಕ್ಕೆ ಒಂದು ಯೋಜನೆ ಹಾಕಿದ್ದೀರಿ. ಯಾವುದೋ ಒಂದು ಸಂದರ್ಭದಲ್ಲಿ ಇದ್ದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದೀರೇ ವಿನಾ ಐದು ವರ್ಷ ಕಳೆದ ಮೇಲೆ ಯಾವ ಮಟ್ಟಕ್ಕೆ ಬಂದಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಸರಿಯಾದ ಕಾರ್ಯ ನಡೆಸುತ್ತಾ ಇಲ್ಲ, ಇದು ಶೋಚನೀಯ ಎಂದು ಹೇಳಬೇಕಾಗಿದೆ. ಈಗ ಮಾಡಿರತಕ್ಕ ಏರ್ಪಾಡಿನಿಂದ ಎಷ್ಟೇ ವರ್ಷಗಳಾದರೂ ಕೂಡ ಇವರು ಗುಡಿಸಿಲಿನಲ್ಲಿ ವಾಸ ಮಾಡತಕ್ಕ ಪರಿಸ್ಥಿತಿ ತಪ್ಪುವುದಿಲ್ಲ. ಆದ್ದರಿಂದ ಇವರ ಅರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಎಷ್ಟು ಕುಟುಂಬಗಳಿವೆ, ಎಷ್ಟು ಮನೆಗಳಾಗಬೇಕು ಎಂಬುದನ್ನು ಸರ್ವೆ ಮಾಡಿ, ಅದಕ್ಕೆ ತಕ್ಕ ಯೋಜನೆ ಹಾಕಬೇಕೆಂದು ಹೇಳುತ್ತೇನೆ.

ಮೇಜರ್ ಇಂಡಸ್ಟ್ರೀಸ್ ಯಾವುದನ್ನು ಮೈಸೂರು ಸಂಸ್ಥಾನದಲ್ಲಿ ಪ್ರಾರಂಭಿಸಬೇಕೆಂದು ಈ ಯೋಜನೆಯಲ್ಲಿ ಹಾಕಿಕೊಂಡಿಲ್ಲ. ಮೈಸೂರು ಬಹಳ ಮುಂದುವರಿದ ದೇಶ, ಮಾದರೀ ಮೈಸೂರು ಎಂದೆಲ್ಲಾ ಹೇಳುತ್ತಿದ್ದರೂ ಕೂಡ ಇಲ್ಲಿ ಮೇಜರ್ ಇಂಡಸ್ಟ್ರೀಸ್ ಪ್ರಾರಂಭ ಮಾಡಲು ಮನಸ್ಸು ಮಾಡದೇ ಇರುವುದು ಶೋಚನೀಯ. ಮಾನ್ಯ ಕೈಗಾರಿಕಾ ಮಂತ್ರಿಗಳು ಕೆಲವು ಮೇಜರ್ ಇಂಡಸ್ಟ್ರೀಸನ್ನು ಇಲ್ಲಿ ಪ್ರಾರಂಭಿಸಬೇಕೆಂದು ಇಂಡಿಯಾ ಸರ್ಕಾರದವರಿಗೆ ತಿಳಿಸಿದ್ದೇನೆ ಎಂದು ಹೇಳಿದರು—ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ಊರ ಬಾಗಿಲು ಮುಚ್ಚಿದರು ಎನ್ನುವ ಹಾಗೆ. ಆದರೂ ಕೂಡ ಈಗಲಾದರೂ ಆ ರೀತಿ ತಿಳಿಸಿದರಲ್ಲಾ ಎಂದು ಅದನ್ನು ನಾನು ಪುಷ್ಟೀಕರಿಸುತ್ತೇನೆ.

ನಮ್ಮ ಸಂಸ್ಥಾನದಲ್ಲಿ ಫ್ಲೇಯಿಂಗ್ ಇಂಡಸ್ಟ್ರೀಸ್ (flaying) ಪ್ರಾರಂಭಮಾಡಬೇಕಾದ ಅಗತ್ಯ ಬಹಳವಾಗಿದೆ. ಬೊಂಬಾಯಿ ಮತ್ತು ಉತ್ತರ ಹಿಂದೂಸ್ಥಾನದಲ್ಲಿ ಈಗಾಗಲೇ ಇದನ್ನು ಪ್ರಾರಂಭಿಸಿದ್ದಾರೆ. ಸತ್ತ ದನಗಳನ್ನು ಹಾಗೆಯೇ ಹೂಳಿದರೆ ಏನೂ ಪ್ರಯೋಜನವಾಗುವುದಿಲ್ಲ, ನಷ್ಟವಾಗುತ್ತದೆ. ಅವುಗಳ ಚರ್ಮ ತೆಗೆದು ಹದ ಮಾಡಿದರೆ ಅದನ್ನು ಅನೇಕ ಕೆಲಸಗಳಿಗೆ ಉಪಯೋಗಿಸಿಕೊಳ್ಳಬಹುದು. ಆದರಿಂದ ಬೇಕಾದಷ್ಟು ಉತ್ಪತ್ತಿಯೂ ಕೂಡ ಆಗುತ್ತದೆ. ಅಂಥ ಒಂದು ಕೈಗಾರಿಕೆಯನ್ನು ನಮ್ಮ ಸಂಸ್ಥಾನದಲ್ಲಿ ಪ್ರಾರಂಭಿಸುವುದರಿಂದ ಹೆಚ್ಚು ಪ್ರಯೋಜನವಾಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ವ್ಯವಸಾಯದ ಇಲಾಖೆಯಲ್ಲಿ ರಿಸರ್ಚ್ ಬ್ರಾಂಚ್ ವಿಸ್ತರಿಸಬೇಕು, ಟೆಕ್ನಿಕಲ್ ಸೈಡ್ ಹೆಚ್ಚಿಸಬೇಕೆಂದು ಹೇಳಿದ್ದಾರೆ: Expansion of Economic Botany, Agricultural Chemistry, Entomology and Plant Pathology Sections ಗಾಗಿ ಕೆಲವು ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಬೇಕೆಂದು ಅಂದಾಜು ಮಾಡಲಾಗಿದೆ. ಅರ್ಬನ್ ಏರಿಯಾದಲ್ಲಿ ಕಂಪೋಸ್ಟ್ ಗೊಬ್ಬರದ ತಯಾರಿಕೆಗಾಗಿ ಬೈಯೋ ಕೆಮಿಸ್ಟ್ ಸೆಕ್ಷನ್ನನ್ನು ಹೆಡ್ ಕ್ವಾರ್ಟರ್‌ನಲ್ಲೂ ಮತ್ತು ಡಿಸ್ಟ್ರಿಕ್ಟ್ ಲೆವಲ್‌ನಲ್ಲೂ expand ಮಾಡುವುದಕ್ಕಾಗಿ ಎರಡನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಆಲೋಚನೆಮಾಡಲಾಗಿದೆ. ಈ ಐದು ವರ್ಷಗಳನಂತರ ಪರಿಸ್ಥಿತಿ ಏನಾಗುತ್ತದೆ ಎಂಬ ಶಂಕೆ ಬರುತ್ತಿದೆ. ಆದ್ದರಿಂದ ರೈತರು ತಮ್ಮ ಸ್ವಶಕ್ತಿಯಿಂದ ಕಂಪೋಸ್ಟ್ ಗೊಬ್ಬರ ತಯಾರು ಮಾಡುವ ವಿಧಾನವನ್ನು ಪ್ರಚಾರ ಮಾಡಲು ಹೆಚ್ಚು ನಿಗಾ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಎನ್. ಇ. ಎಸ್. ಪ್ರಾಜೆಕ್ಟ್ ಇರುವ ಕಡೆಗಳಲ್ಲಿ ಬಡವರಿಗೆ ನೇರವಾಗಿ ಆರ್ಥಿಕ ಸ್ಥಿತಿ ಜಾಸ್ತಿ ಮಾಡಿರುವುದಿಲ್ಲ. ಸರ್ಕಾರದವರು ಈ ಬಗ್ಗೆ ಏನು ಮಾಡಬೇಕೆಂಬುದನ್ನು ಹೇಳುತ್ತೇನೆ. ಈ. ಎನ್. ಇ. ಎಸ್. ಪ್ರಾಜೆಕ್ಟುಗಳಿರುವ ಕಡೆ ಕರೆಯುವ ಹಸುಗಳನ್ನು ಕಂತು ಸಾಲದ (hire purchase) ರೂಪದಲ್ಲಿ ಬಡ ಜನರಿಗೆ ಹಂಚಬೇಕು. ಇದರಿಂದ ಡೈರಿ ಅಭಿವೃದ್ಧಿಯಾಗುತ್ತದೆ ಮತ್ತು ಬಡವರ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಳ್ಳುತ್ತವೆಂದು ಹೇಳುತ್ತೇನೆ.

ವಿದ್ಯಾಭ್ಯಾಸದ ವಿಚಾರದಲ್ಲಿ decentralisation of education ಸಂಬಂಧದಲ್ಲಿ ಜಾಸ್ತಿ ನಿಗಾ ಕೊಡಬೇಕು. ಪ್ರಾಥಮಿಕ ಶಾಲೆಗಳನ್ನು ಜಾಸ್ತಿ ಮಾಡಬೇಕು. ಈ ಯೋಜನೆಯಲ್ಲಿ pre-primary schools ಎಂದು ಹಾಕಿದ್ದಾರೆ. ಅದಕ್ಕೆ ನರ್ಸರಿ ಸ್ಕೂಲುಗಳೆಂದು ಹೆಸರು. ಶಾಲೆಗಳಿಗೆ ಹೋಗತಕ್ಕ ವಯಸ್ಸು (school-going age) ಬರುವವರೆಗೂ ಮಕ್ಕಳನ್ನು ಸರಿಯಾಗಿ ಬೆಳೆಸುವುದಕ್ಕೆ ನರ್ಸರಿ ಶಾಲೆಗಳು ಅಗತ್ಯ. ಗ್ರಾಮಾಂತರ ಪ್ರದೇಶಗಳಲ್ಲಿ ಇಂಥ ಶಾಲೆಗಳನ್ನು ಹೆಚ್ಚು ಮಾಡಿ ಹಳ್ಳಿಯ ಮಕ್ಕಳಿಗೆ ಅನುಕೂಲಮಾಡಿಕೊಡಬೇಕೆಂದು ಹೇಳುತ್ತೇನೆ.

ಡಿಪ್ರೆಸ್ಡ್ ಕ್ಲಾಸ್ ಅಮಿಲಿಯೊರೇಷನ್ ಫಂಡ್ ವಿಚಾರದಲ್ಲಿ ಸುಮಾರು ಆರು ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿದೆ ಎಂದು ತಿಳಿದುಕೊಂಡಿದ್ದೇನೆ.

Mr. SPEAKER.—How is it relevant to the subject ?

ಶ್ರೀ ಕೆ. ಪ್ರಭಾಕರ್.—ರೆಲೆವೆನ್ಸಿ ಏನೆಂದರೆ ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಹಾಕಿಕೊಂಡಿರುವ ಹಣ ಸಾಲದೆಂದು ಹೇಳುವಾಗ ಒದಗಿಸಿರುವ ಹಣವನ್ನು ಲ್ಯಾಪ್ಸ್ ಮಾಡುವುದು ಸಾಧುವಾದದ್ದಲ್ಲವೆಂದು ಹೇಳುತ್ತೇನೆ. ಒಂದು ವೇಳೆ ಆ ರೀತಿ ದುಡ್ಡು ಲ್ಯಾಪ್ಸ್ ಆಗಿದ್ದರೆ ಅದನ್ನು ಬೇರೆ ಒಂದು fund head ಗೆ ಹಾಕಿ ಮುಂದಿನ ವರ್ಷ ಅದರಿಂದ ಖರ್ಚು ಮಾಡುವ ಹಾಗೆ ಅವಕಾಶವಿರಬೇಕೆಂದು ತಿಳಿಸುತ್ತೇನೆ. ಎರಡನೆಯ ಪಾಂಚವಾರ್ಷಿಕ ಯೋಜನೆಯ ಸಂಬಂಧದಲ್ಲಿ ಮುಖ್ಯವಾಗಿ ಗ್ರಾಮಾಂತರ ಕೈಗಾರಿಕೆಗಳನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರದವರು ನಿಗಾ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ದ್ವಿತೀಯ ಪಾಂಚವಾರ್ಷಿಕ ಯೋಜನೆಯನ್ನು ಕುರಿತು ಚರ್ಚಿಸುವಾಗ ಈ ಯೋಜನೆಯಲ್ಲಿ ಕೆಲವು ಮುಖ್ಯವಾದ ವಿಷಯಗಳು ಅಡಕವಾಗಿರದೆ ಇರುವುದನ್ನೂ ನಾನು ಕಂಡೆ. ಒಂದನೆಯದಾಗಿ ಕೊಳಕು ಪ್ರದೇಶಗಳನ್ನು ನಿರ್ಮೂಲಗೊಳಿಸುವ ಕಾರ್ಯಕ್ಕಾಗಿ ಹಣವನ್ನು ಮೀಸಲಾಗಿಟ್ಟಿಲ್ಲ. ಬೆಳೆಯುತ್ತಿರತಕ್ಕ ಕೆಲವು ನಗರಗಳಲ್ಲಿ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ ಬಂದು ನೆಲೆಸತಕ್ಕ ಜನವಸತಿಯ ಪ್ರಮಾಣಕ್ಕನುಗುಣವಾಗಿ ಕಟ್ಟಡಗಳು ಇಲ್ಲದಿರುವುದರಿಂದ ಕೊಳಕುಪ್ರದೇಶಗಳು (slum areas)

ಉಂಟಾಗಿ ಅಂಥ ಕಡೆಗಳಲ್ಲಿ ಕ್ಷಯ ಮೊದಲಾದ ರೋಗಗಳು ಹುಟ್ಟುವುದಕ್ಕೆ ಕಾರಣವಾಗಿದೆ. ಭದ್ರಾವತಿ ಮುಂತಾದ ಊರುಗಳನ್ನು ತೆಗೆದುಕೊಂಡರೆ ಸಣ್ಣಸಣ್ಣ ಗುಡಿಸಲುಗಳಲ್ಲಿ ವಾಸಿಸತಕ್ಕ ಜನಗಳ ಆರೋಗ್ಯ ಕೆಡುತ್ತಿದೆ. ಇದು ಒಂದು ರಾಷ್ಟ್ರೀಯ ಸಮಸ್ಯೆಯಾಗಿದೆ. Slum clearance ಕಾರ್ಯಕ್ಕೋಸ್ಕರ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಯಾವ ಅವಕಾಶವನ್ನೂ ಸಹ ಕಲ್ಪಿಸದಿರುವುದನ್ನು ನಾನು ಮೊದಲನೆಯದಾಗಿ ಗಮನಿಸಿದ್ದೇನೆ. ಇದನ್ನು ಯಾವುದಾದರೂ ರೂಪದಲ್ಲಿ ಈ ಯೋಜನೆಯಲ್ಲಿ ಪುನಃ ಸೇರಿಸುವುದಕ್ಕೆ ಅವಕಾಶ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಭಿಕ್ಷಾಟನೆ ನಿರೋಧ ಕಾರ್ಯವೂ ಸಹ ಒಂದು ರಾಷ್ಟ್ರೀಯ ಸಮಸ್ಯೆಯಾಗಿದೆ. ನಾವು ಸಮತಾವಾದದ ಸಮಾಜವನ್ನು ನಿರ್ಮಾಣ ಮಾಡುವಾಗ ಯಾರಾದರೂ ಹೊಟ್ಟೆಗಿಲ್ಲದೆ ಅಥವಾ ಜೀವನಕ್ಕೆ ನಡೆಯದೆ ಭಿಕ್ಷಾಟನೆ ಎಂಬ ಅವಮಾನಕಾರಿ ವೃತ್ತಿಯಲ್ಲಿರುವುದನ್ನು ಕಂಡು ಸಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದೂ ಕೂಡ social service ಗೆ ಸಂಬಂಧಪಡುತ್ತದೆ. ಇದನ್ನೂ ಸಹ ಈ ಯೋಜನೆಯಲ್ಲಿ ಸೇರಿಸಬೇಕೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಭದ್ರ, ಹೊನ್ನೆಮರಡು ಮೊದಲಾದ ಪ್ರಾಜೆಕ್ಟುಗಳನ್ನು ಸರ್ಕಾರದವರು ಕೈಗೊಳ್ಳುತ್ತಿದ್ದಾರೆ. ಅದು ಅಗತ್ಯ ಮತ್ತು ಉಚಿತ. ಆದರೆ ಅಲ್ಲಿ ಮಾಡತಕ್ಕ ಕೆಲಸಗಳಲ್ಲಿ ಬಹು ಭಾಗದ ಕೆಲಸಗಳು ಟೆಂಡರ್, ಎಸ್ಟಿಮೇಟ್ ಮೊದಲಾದವು ಇಲ್ಲದೇ ಅಧಿಕಾರಿಗಳೇ ಸ್ವೇಚ್ಛೆಯಾಗಿ ಮಾಡಿಸತಕ್ಕವುಗಳಾಗಿರುತ್ತವೆ. ಇಂತಹ ಕೆಲಸಗಳು ಶೇಕಡ 75 ಭಾಗದಷ್ಟು ಇರುತ್ತವೆ. ಇವುಗಳನ್ನು piece-work ರೂಪದಲ್ಲಿ ನಡೆಸುತ್ತಾರೆ. ಈ ಪ್ರಾಜೆಕ್ಟುಗಳನ್ನು ನಿರ್ಮಿಸುತ್ತಿರುವ ಪ್ರದೇಶದ ಸುತ್ತ ಮುತ್ತಲೂ ವಾಸಿಸತಕ್ಕ ಜನರಿಗೆ, ಅಥವಾ ಸಂಸ್ಥಾನದ ಬೊಕ್ಕಸಕ್ಕೆ ಕಂದಾಯ ಕೊಳೆಗೆಯನ್ನು ಕೊಡತಕ್ಕ ಜನರಿಗೆ ಇಂಥ ಉದ್ಯಮಗಳನ್ನು ಕೈಗೊಳ್ಳಲು ಅವಕಾಶ ದೊರೆಯಬೇಕೇ ವಿನಾ ಎಲ್ಲೋ ಇಲಾಖೆಯೊಳಗೆ ಹಿಂದಿನಿಂದ ಸಂಪರ್ಕವಿಟ್ಟುಕೊಂಡಿದ್ದ ಜನರು ಬಂದು ಇಂಥ ಸ್ಥಳಗಳಲ್ಲಿ ನೆರೆಸಿ ಈ ಕಾರ್ಯಗಳನ್ನು ಪಡೆಯುವುದಕ್ಕೆ ಅವಕಾಶವಿರಕೂಡದು. ಆದರೆ ಎಷ್ಟೋ ಕಡೆ ಹೊರಗಿನಿಂದ ಬಂದು ನೆರೆಸಿರುವ ಜನರಿಗೆ ಕೆಲಸಗಳನ್ನು ಕೊಡುತ್ತಿದ್ದಾರೆಂದೂ, ಅಲ್ಲಿಯೇ ವಾಸಮಾಡತಕ್ಕ, ಕಂಟ್ರಿಬ್ಯೂಷನ್ ವಗೈರೆ ಕೊಡತಕ್ಕ ಜನಗಳು ಈ ಸಂಬಂಧದಲ್ಲಿ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿದ್ದಾರೆಂದೂ ಈಗಾಗಲೇ ನನಗೆ ವರ್ತಮಾನ ಬಂದಿದೆ. ಆದುದರಿಂದ ಸರ್ಕಾರದವರು ಈ ಕಾರ್ಯಕ್ರಮಗಳನ್ನು ನಡಸುವಾಗ ಬರೀ ಸ್ಥಳದ ಅಧಿಕಾರಿಗಳಿಗೇ ಬಿಡದೆ, ಮಂತ್ರಿಗಳು ಮತ್ತು ಮೇಲ್ಪಟ್ಟ ಅಧಿಕಾರಿಗಳೂ ಆಗಿಂದಾಗ್ಗೆ ಸ್ಥಳಗಳಿಗೆ ಹೋಗಿಬಂದು ಅಲ್ಲಿ ನಡೆಯುವ ವ್ಯವಹಾರಗಳಲ್ಲಿ ಇರಬಹುದಾದ ಲೋಪಗಳನ್ನು ತಪ್ಪಿಸಿ, ನಮ್ಮ ಸಂಸ್ಥಾನದ ಜನತೆಗೆ ಹೆಚ್ಚು ಪ್ರಯೋಜನವಾಗತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಮೂರನೆಯ ಸಲಹೆಯನ್ನು ಕೊಡುತ್ತೇನೆ.

ಐದು ಕೋಟಿ ರೂಪಾಯಿಗಳನ್ನು ರಸ್ತೆಗಳ ನಿರ್ಮಾಣಕ್ಕಾಗಿ ಒದಗಿಸಿದ್ದಾರೆ. ಇದರಲ್ಲಿ 60 ಮೈಲಿಗಳ ಉದ್ದದ ರಸ್ತೆಯನ್ನು ಸಿಮೆಂಟ್ ಕಾಂಕ್ರೀಟ್ ರಸ್ತೆಯನ್ನಾಗಿ ಮಾಡಬೇಕೆಂದು ಯೋಜನೆಯಲ್ಲಿ ತಿಳಿಸಿದ್ದಾರೆ. ಕಾಂಕ್ರೀಟ್ ರಸ್ತೆಗಳ ಕೆಲಸವನ್ನು ಆದಷ್ಟು ಕಡಿಮೆಮಾಡಿ, ಈ ರಸ್ತೆಗಳ ನಿರ್ಮಾಣಕ್ಕಾಗಿ ಒದಗಿಸಿರುವ ಹಣವನ್ನು ಉಳಿತಾಯಮಾಡಿ ಗ್ರಾಮಾಂತರ ರಸ್ತೆಗಳಿಗೆ ಕೊಡಬೇಕಾದದ್ದು ಅತ್ಯಗತ್ಯ. ನಾಲ್ಕೈದು ವರ್ಷಗಳಿಂದ ಗ್ರಾಮಾಂತರ ರಸ್ತೆಗಳ ಕಾರ್ಯ ತೃಪ್ತಿಕರವಾಗಿ ನಡೆದಿಲ್ಲವೆಂದು ನಿಸ್ಸಂಕೋಚವಾಗಿ ನುಡಿಯಬಹುದಾಗಿದೆ. ಬೇರೆ ಪ್ರದೇಶದ ರಸ್ತೆಗಳನ್ನೂ, ನಮ್ಮ ಸಂಸ್ಥಾನದ ರಸ್ತೆಗಳನ್ನೂ ನೋಡಿದರೆ ಈ ಕಾರ್ಯದಲ್ಲಿ ಬಹಳ ಹಿಂದೆ ಬಿದ್ದಿದ್ದೇವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಇನ್ನೂ 800 ಮೈಲಿ ಟಾರ್ ರಸ್ತೆಗಳಿಗೆ ಅವಕಾಶಮಾಡಿಕೊಂಡಿದ್ದಾರೆ. ಇದೂ ಅಲ್ಲದೆ ಅಂತರ ಪ್ರಾಂತೀಯ ರಸ್ತೆಗಳು (national highways) ಬಡ್ಜೆಟ್ಟಿನಲ್ಲಿ ಇದನ್ನು ಸೇರಿಸುವುದಕ್ಕೆ ವಿಶೇಷವಾದ ಪ್ರಯತ್ನ ಮಾಡಬೇಕಾಗಿದೆ. ಅನೇಕ ರಸ್ತೆಗಳು ಬೆಂಗಳೂರಿನಿಂದ ಹೊರಟು ಇತರ ಪ್ರಾಂತಗಳ ಪ್ರಮುಖ ಪಟ್ಟಣಗಳೊಡನೆ ಸಂಪರ್ಕ ಬೆಳೆಸತಕ್ಕ ರಸ್ತೆಗಳಾಗಿವೆ. ಇವುಗಳನ್ನು national highways ಎಂದು ಪರಿಗಣಿಸಿ ಕೇಂದ್ರ ಸರ್ಕಾರಕ್ಕೆ ಸೇರಿಸುವುದಕ್ಕೆ ಪ್ರಯತ್ನ ಪಡಬೇಕಾಗಿದೆ.

ಇನ್ನೂ ಒಂದು ವಿಚಾರ. ಪ್ರವಾಸಿಗರ ಸೌಕರ್ಯಕ್ಕಾಗಿ ಸರ್ಕಾರದವರು ನಾಲ್ಕುವರೆ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದ ಬಡ್ಜೆಟ್ಟಿನಲ್ಲಿಟ್ಟುಕೊಂಡಿದ್ದಾರೆ. ಇದರಲ್ಲಿ ಸುಮಾರು 40 ಲಕ್ಷ ರೂಪಾಯಿಗಳು ಮೈಸೂರು ಸಂಸ್ಥಾನಕ್ಕೆ ಬರುವುದಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮೈಸೂರು ಸಂಸ್ಥಾನದಲ್ಲಿರುವ ಕೆಲವು ರಸ್ತೆಗಳನ್ನು ಈ ಬಾಬಿನಿಂದ ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಕಡೆಯದಾಗಿ ಸರ್ಕಾರದವರು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ತರೀಕೆರೆ-ಭದ್ರಾವತಿ ಪ್ರದೇಶದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಮಾಡಬೇಕೆಂದು ಸೇರಿಸಿದ್ದಾರೆ. ಸಾಧ್ಯವಾದಷ್ಟೂ ಖಾಸಗಿ ವಲಯಗಳಿಗೋಸ್ಕರ ಕೇಂದ್ರ ಸರ್ಕಾರದವರು ಕೆಲವು ಕೈಗಾರಿಕೆಗಳನ್ನು ಮೀಸಲಾಗಿಟ್ಟಿದ್ದಾರೆ. ಸಕ್ಕರೆ ಅದೇ ಕ್ಷೇತ್ರದೊಳಗೆ ಬರುವುದಾದುದರಿಂದ ಈ ಸಕ್ಕರೆ ಕಾರ್ಖಾನೆಗೆ ಖಾಸಗಿ ವಲಯಗಳಿಂದ ಬಂಡವಾಳ ಒದಗುವ ಮಟ್ಟಿಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಸಕ್ಕರೆ ಕಾರ್ಖಾನೆಗಳ ಬಗ್ಗೆ ಆಗಲೇ ಪೈಪೋಟಿ ಹೆಚ್ಚುತ್ತಿದೆ. ಲೈಸೆನ್ಸ್‌ಗಳನ್ನು ಕೊಡಬಾರದು ಎಂಬ ಮಾತನ್ನಾಡುವುದು ಪತ್ರಿಕೆಗಳಲ್ಲಿ ಕಾಣುತ್ತಿದೆ. ಕೇಂದ್ರ ಸರ್ಕಾರದವರು ಇಂಥ ನಿರ್ಧಾರವನ್ನು ಮಾಡಿದರೆ ಈ ಪ್ರದೇಶದ ರೈತರಿಗೂ ಮತ್ತು ಇತರ ಅನೇಕ ಜನರಿಗೂ ತೊಂದರೆಯಾಗುತ್ತದೆ. ಆದುದರಿಂದ ಈ ಕಾರ್ಖಾನೆಗಳನ್ನು ಸಾಧ್ಯವಾದಷ್ಟು ಜಾಗ್ರತೆ ಪ್ರಾರಂಭ ಮಾಡುವುದು ಒಳ್ಳೆಯದೆಂಬ ಅಂಶವನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕೆ ಅಪೇಕ್ಷೆಪಡುತ್ತೇನೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—ಸ್ವಾಮಿ, ಮೊದಲನೆಯ ಪಾಂಚವಾರ್ಷಿಕ ಯೋಜನೆಯಿಂದ ದೇಶ ಯಾವ ಮಟ್ಟದಲ್ಲಿ ಅಭಿವೃದ್ಧಿಗೆ ಬಂದಿದೆ ಎನ್ನುವುದನ್ನು ಮಾನ್ಯ ಸದಸ್ಯರು ವಿವರವಾಗಿ ತಿಳಿಸಿದ್ದಾರೆ. ನಾವೀಗ ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಕಾಲಿಡುತ್ತಿದ್ದೇನೆ. ಎಲ್ಲಕ್ಕಿಂತ ಮುಂಚಿತವಾಗಿ ಎರಡು ಮೂಲಭೂತವಾದ ಬದಲಾವಣೆಗಳಾಗಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಮೊದಲನೆಯದಾಗಿ ಈ ಯೋಜನೆಯನ್ನು ನಡೆಸತಕ್ಕ ಅಧಿಕಾರವರ್ಗದವರೂ ಮತ್ತು ಮಂತ್ರಿಮಂಡಳದಲ್ಲಿರುವವರೂ ನಿಜವಾಗಿ ಪ್ರೇಮ, ನಿರಾಡಂಬರ ಮತ್ತು ನಿಸ್ವಾರ್ಥದಿಂದ ಈ ಯೋಜನೆಯನ್ನು ಅಪೇಕ್ಷಿಸ

(ಶ್ರೀ ಕೆ. ವಿ. ಬೈರೇಗೌಡ)

ಮಾಡಬೇಕೇ ಹೊರತು ಆಡಂಬರ ಜೀವನದ ಹೆಗ್ಗುರು ತನ್ನು ಕಂಡರೆ ಜನತೆಗೆ ಇದರಲ್ಲಿ ನಂಬಿಕೆ ಬರುವುದಿಲ್ಲ. ನಿರಾಡಂಬರ ಜೀವನವನ್ನು ಮಂತ್ರಿಗಳು ಮೊದಲು ನಡೆಸಿದರೆ, ಅದನ್ನು ಅಧಿಕಾರಿಗಳು ಪರಿಪಾಲಿಸುತ್ತ ಹೋದರೆ ಖಂಡಿತವಾಗಿಯೂ ಈ ಯೋಜನೆಯು ಯಶಸ್ವಿಯಾಗುತ್ತದೆಂದು ನನ್ನ ನಂಬಿಕೆ. ಮತ್ತು ಅಧಿಕಾರ ವರ್ಗದ ಕಡೆ ತೆಗೆದುಕೊಂಡರೆ ಇವರು ಅಧಿಕಾರಕ್ಕೆ ಬಂದಮೇಲೆ 30-35 ವರ್ಷಗಳ ಕಾಲದ ಒಳ್ಳೆಯ ಕೆಲಸ ಮಾಡ ವವರನ್ನು ನಂಬಿಕೆ (confidence)ಗೆ ತೆಗೆದುಕೊಂಡು ಅವರಲ್ಲಿ ದೇಶ ಪ್ರೇಮವನ್ನು ಹುರಿದುಂಬಿಸಿ ಈ ಕಾರ್ಯವನ್ನು ಕಾರ್ಯಗತ ಮಾಡಬೇಕು. ಮಾನ್ಯ ಸದಸ್ಯರಿಗಾಗಲಿ, ಮಂತ್ರಿಗಳಿಗಾಗಲಿ ಇಂಥ ಅವಕಾಶವಿರುವುದಿಲ್ಲ. ಇಂಥ ಅವಕಾಶವಿರತಕ್ಕ ಅಧಿಕಾರ ವರ್ಗದವರು ನಿಜವಾದ ದೇಶಪ್ರೇಮದಿಂದ ಈ ಕಾರ್ಯವನ್ನು ಮಾಡುವುದಕ್ಕೆ ಖಚಿತವಾದ ಪ್ರಯತ್ನವನ್ನು ಮಾಡಿ ಅದನ್ನು ಕಾರ್ಯಗತಮಾಡಬೇಕು.

ಗ್ರಾಮಾಂತರ ಪ್ರದೇಶಗಳ ವಿಷಯದಲ್ಲಿ ಇದುವರೆಗೂ ಮೊದಲನೆ ಪಾಂಚವಾರ್ಷಿಕ ಯೋಜನೆಯಲ್ಲಿ ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡಿ ನೀರಾವರಿ ಕೆಲಸಗಳನ್ನು ವಿಶೇಷವಾಗಿ ಮಾಡಿದ್ದಾರೆ. ಅದರಿಂದ ಒಂದು ತರಹ ಸೌಲಭ್ಯ ದೊರಕಿದೆ. ಇದರಲ್ಲಿ ವ್ಯವಸಾಯಕ್ಕೆ ಮೂಲಭೂತವಾಗಿ ಬೇಕಾದ ನೀರನ್ನು ಒದಗಿಸಲು ಖರ್ಚುಮಾಡಬೇಕಾಗಿ ಬಂತು. ಈ ಎರಡನೆಯ ಯೋಜನೆಯಲ್ಲಿ ಗ್ರಾಮಸ್ಥರ ಮತ್ತು ಪ್ರತಿಯೊಬ್ಬ ಸಾಮಾನ್ಯ ಜನತೆಯ ಮಾನಸಿಕ ಬದಲಾವಣೆಯನ್ನು ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ನಿಜವಾಗಿಯೂ ಈ ಕಾರ್ಯವನ್ನು ಸರ್ಕಾರದ ಮಟ್ಟದಲ್ಲಿ ಮಾಡುವುದಕ್ಕಿಂತ ಮುಂಚೆ ಹೆಚ್ಚಿಗೆ ಜನರನ್ನು ಈ ವಿಷಯದಲ್ಲಿ educate ಮಾಡಬೇಕು; ನಿಜವಾದ ಪ್ರೇಮ ಈ ಯೋಜನೆಯಲ್ಲಿ ಬರುವಂತೆ ಮಾಡಬೇಕು. ಇವೊತ್ತಿನವರೆಗೂ ದೇಶದಲ್ಲಿ ಇಂಥ ಒಂದು ದೊಡ್ಡ ಯೋಜನೆಯನ್ನು ಹಾಕಿಕೊಂಡಿರಲಿಲ್ಲ. ನಮ್ಮ ಜನಸಾಮಾನ್ಯರಿಗೆ ಎಷ್ಟೊಂದು ಅನುಕೂಲತೆಗಳು ಪ್ರಥಮ ಪಾಂಚವಾರ್ಷಿಕ ಯೋಜನೆ, ದ್ವಿತೀಯ ಪಾಂಚವಾರ್ಷಿಕ ಯೋಜನೆ ಇವುಗಳಿಂದ ಆಗುವುದಾಗಿದೆ ಎನ್ನುವುದನ್ನು ಅಧಿಕಾರ ವರ್ಗದವರು ಆಗಾಗ್ಗೆ ಎಲ್ಲ ವಲಯಗಳಲ್ಲಿಯೂ ತಿಳಿಸುತ್ತ ಬರಬೇಕು. ರಾಜಕೀಯ ಪಕ್ಷಗಳವರೂ ಸಹ ಜನಗಳಿಗೆ ಈ ಯೋಜನೆಗಳಲ್ಲಿ ವಿಶ್ವಾಸ ಬರುವಂತೆ ಮಾಡಬೇಕು. ಮೊನ್ನೆ ಎನ್. ಇ. ಎಸ್. ಬ್ಲಾಕುಗಳ ಅಡ್ಮಿನಿಸ್ಟ್ರೇಟರ್ ಅವರು, ಇದರಲ್ಲಿ ಜನರ ಮನೋಭಾವ ಬದಲಾವಣೆಯಾಗದೆ ಇದ್ದು, ಹಳ್ಳಿಗಾಡಿನ ಜನರಿಗೆ ಇದರಲ್ಲಿ ನಂಬಿಕೆ ಬರದೆ ಇದ್ದರೆ, ಅವರ ಸಹಕಾರ ದೊರೆಯದೆ ಇದ್ದರೆ ಈ ಯೋಜನೆಗಳು ಯಶಸ್ವಿಯಾಗುವುದು ಕಷ್ಟವೆಂದು ಹೇಳಿದ್ದಾರೆ. ಇದನ್ನು ಯಶಸ್ವಿಯಾಗಿ ಮಾಡಬೇಕಾದರೆ ಜನರ ಮನಸ್ಸು ಬದಲಾವಣೆಯಾಗುವಂಥ ರೀತಿಯಲ್ಲಿ ನಡೆದುಕೊಳ್ಳಬೇಕಾಗಿದೆ. ಆ ರೀತಿ ಮಾಡುವುದಕ್ಕೆ ತೀವ್ರವಾದ ಪ್ರಚಾರ ಕಾರ್ಯವನ್ನು ನಡೆಸಬೇಕಾಗಿದೆ. ಒಬ್ಬರು ಹಾಕತಕ್ಕ ಯೋಜನೆಗಳನ್ನು ಮತ್ತೊಬ್ಬರು ಬದಲಾವಣೆ ಮಾಡುತ್ತ ಹೋಗಬಾರದು. ನಮ್ಮ ಮಂತ್ರಿಮಂಡಳಕ್ಕೆ ಹೆಸರು ಬರಬೇಕು, ನಮಗೆ ಹೆಸರು ಬರಬೇಕು ಎಂಬ ಮನೋಭಾವನೆಯನ್ನು ಬಿಡಬೇಕು. ಬದಲಾವಣೆಗಳನ್ನು ಮಾಡಬೇಕಾದರೆ ಅಭಿವೃದ್ಧಿ ಮಾಡುವುದಕ್ಕೋಸ್ಕರ ಮಾತ್ರಮಾಡಿ ದೂರದೃಷ್ಟಿಯಿಂದ ಕೆಲಸಮಾಡಬೇಕೇ ಹೊರತು ನನ್ನ regime ನಲ್ಲಿ ಇಂಥ ಕೆಲಸ ಮಾಡಿದೆ ಎಂದು ಹೊಗಳಿಕೆಗೋಸ್ಕರ ಮಾಡುವುದಾದರೆ ದೇಶದ ದುಡ್ಡನ್ನು ಅನ್ಯಾಯಮಾಡಿದ ಹಾಗಾಗುತ್ತದೆ. ಈ ರೀತಿಯಾಗಿ ಮಾಡಬಾರದೆಂದು ಸೂಚಿಸುತ್ತೇನೆ.

ಕೈಗಾರಿಕೆ ವಿಷಯಕ್ಕೆ ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಬಹಳ ಹೆಚ್ಚಿನ ಪ್ರಗತಿ ಕೊಡಬೇಕೆಂದು ಮಾಡಿದ್ದಾರೆ. ಕೈಗಾರಿಕೆಗೆ ಮೂಲಭೂತವಾದದ್ದು ವಿದ್ಯುಚ್ಛಕ್ತಿ. ವಿದ್ಯುಚ್ಛಕ್ತಿಯನ್ನು ಸರ್ಕಾರ ಉತ್ಪತ್ತಿ ಮಾಡದೆ ಬಹಳ ಲೋಪ ಮಾಡಿದೆ ಎಂದು ಇದೇ ಮಾನ್ಯ ಸಭೆಯಲ್ಲಿ ಹೇಳಿದ್ದಾರೆ. ಮೊದಲನೆಯ ವರ್ಷದಿಂದ ನುಗು, ಹೊನ್ನೆಮರಡು ಇತ್ಯಾದಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ಒತ್ತಿಒತ್ತಿ ಹೇಳುತ್ತಿದ್ದರೂ ಸಹ ಸಾಕಾದಷ್ಟು ನಿಗಾಕೊಟ್ಟಿಲ್ಲ. ಇವೊತ್ತಿನ ದಿವಸ ಹಾಕಿರತಕ್ಕ ಕೈಗಾರಿಕಾ ಉದ್ಯಮಗಳು ಅಭಿವೃದ್ಧಿಯಾಗಬೇಕಾದರೆ ಅದಕ್ಕೆ ಮೂಲಭೂತವಾದ ವಿದ್ಯುಚ್ಛಕ್ತಿ ಬೇಕು. ಆದರೆ ವಿದ್ಯುಚ್ಛಕ್ತಿಯನ್ನು ಇನ್ನು ಐದುವರ್ಷಗಳ ಕಾಲ ಒದಗಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ಹೇಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು? ಇಂಥ ಅನ್ಯಾಯವನ್ನು ಸರ್ಕಾರ ಮಾಡಬಾರದು. ಆದುದರಿಂದ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ priority ಕೊಟ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅನುಕೂಲಮಾಡಬೇಕು. ಕೈಗಾರಿಕೆಗಳ ಸ್ಥಾಪನೆಗೆ ವಿದ್ಯುಚ್ಛಕ್ತಿ ಮೂಲಭೂತವಾದದ್ದೆಂಬ ದೂರದೃಷ್ಟಿಯಿಂದ ಕೆಲಸ ಮಾಡಿದರೆ ಜನರಿಗೆ ಅನುಕೂಲವಾಗಿ ಅದರ ಸುಖ ದೊರೆಯುತ್ತದೆಂದು ಹೇಳುತ್ತೇನೆ.

ಗ್ರಾಮಾಂತರಗಳಲ್ಲಿ ತಯಾರಾಗತಕ್ಕ ಪದಾರ್ಥಗಳಿಗೆ ಸರಿಯಾದ ಬೆಲೆ ದೊರೆಯುತ್ತಿಲ್ಲ. ಹಳ್ಳಿಯಲ್ಲಿ ತಯಾರಾದ ಪದಾರ್ಥಕ್ಕೆ ನಿಜವಾದ ಬೆಲೆ, ಹೆಚ್ಚಿನ ಲಾಭವಿಲ್ಲದೆ ಇದ್ದರೂ ಚಿಂತೆಯಿಲ್ಲ, production cost ಏನಿದೆಯೋ ಅಷ್ಟಾದರೂ ಬರುವ ರೀತಿಯಲ್ಲಿ ಮಾಡಬೇಕಾಗಿದೆ. ಇದಕ್ಕೆ ಸರ್ಕಾರದವರು ಗಮನ ಕೊಡುತ್ತಿಲ್ಲ. ಹಳ್ಳಿಗಳಲ್ಲಿ ತಯಾರಾದ ಪದಾರ್ಥಗಳಿಗೆ ಸರಿಯಾದ ಬೆಲೆ ಬಂದು ಅವರ ಕಷ್ಟಕ್ಕೆ ತಕ್ಕ ಪ್ರತಿಫಲ ಬಂದರೆ ಆಗ ಸರ್ಕಾರದವರು ಏನೂ ಮಾಡಬೇಕಾಗಿಲ್ಲ. ಆದರೆ ಹಳ್ಳಿ ಕಸಬು ಮಾಡುವ ಜನರಿಗೆ ಅವರಿಗೆ ಸರಿಯಾದ ಪ್ರತಿಫಲ ದೊರೆಯದೆ ಇರುವುದರಿಂದ ಬಹಳ ತೊಂದರೆಯಾಗಿದೆ. ಹಳ್ಳಿಗಳಲ್ಲಿ ಈ ಕಸಬುಗಳನ್ನು ತಲೆ ತಲಾಂತರಗಳಿಂದ ಮಾಡುತ್ತಿದ್ದಾರೆ. ಸಮಾಜದ ವ್ಯವಸ್ಥೆಯಲ್ಲಿ ಎಲ್ಲ ಜನರ ಕಸಬು, ಕೈಗಾರಿಕೆಗಳಿಗೆ ಮಾನ್ಯತೆ ದೊರೆಯತಕ್ಕ, ಪ್ರೋತ್ಸಾಹ ಬರತಕ್ಕ ರೀತಿಯಲ್ಲಿ ಈ ಯೋಜನೆಯಲ್ಲಿ ಅಳವಡಿಸಿಕೊಂಡು ಕೆಲಸ ಮಾಡಬೇಕು. ಹೀಗೆ ಗ್ರಾಮಾಂತರಗಳಲ್ಲಿ ಕಸಬು, ಕೈಗಾರಿಕೆಗಳಲ್ಲಿ ನಿರತರಾಗಿರುವವರಿಗೆ ಅವರ ಕೆಲಸಕ್ಕೆ ತಕ್ಕ ಪ್ರತಿಫಲ ದೊರೆಯುವಂತೆ ಮಾಡಬೇಕೆಂದು ಸೂಚನೆ ಮಾಡುತ್ತೇನೆ.

1 P.M.

*Sri H. C. LINGA REDDY (Malur).—Sir, I rise to support the resolution moved by the Home Minister. We are at the end of the First Five-Year Plan and the beginning of the Second Five-Year Plan. The launching of these Plans is a great landmark, an epoch

making event in the matter of reconstruction of our country. But, I am afraid, the Plan is not planned from the bottom. At the time when statistics were collected and data were called for from each village, it appeared as though a plan for the village people was being prepared. Now we are told by the Government that the original plan was to the tune of 250 crores but the Planning Commission has, unfortunately cut it down to 84 crores only.

Sir, while planning, the most important aspect that should be borne in mind is about the development of the villages. Any plan should first provide for the schools in the villages, roads in the villages, drinking water facility, improvement of village forest, the village layout, co-operative societies for the villages, good compost pits and so on and so forth. No doubt there are the Development Committees of an advisory nature. We had such Development Committees formerly also to look after all these works in the villages. But, unless all these works are carried practically in the villages I do not think that these schemes would be successfully implemented. Again, Sir, I wish the framers of this plan had given us all the datas and statistics. For example, we wanted to know the extent of rural indebtedness. We wanted to know the extent of illiteracy in the country and so on. To eradicate these things, I do not know how many more Five-Year Plans will have to be prepared. I do not know how many years it will take for this country to reach the level of western countries. So, Sir, this plan is started neither from the bottom nor from the top but from the middle because District would be taken as the structure of economy. It is very necessary that we have to get our minds to the village needs and provide them all the amenities.

Regarding Land Reforms, no doubt, the Revenue Minister and the Government have passed certain land reforms into Acts. But, unfortunately, no provision is made for giving effect to these Acts. The Inam Abolition and the Religious Inam Abolition Acts have not seen the light of the day. We must bring out radical land reforms in the country, especially, when we are trying to establish a Socialistic Pattern of Society in the country and when we are trying to remove the disparity between the rich and the poor, the rich landlord and the poor raiyat. The Government of India have been writing to our Government that a ceiling should be fixed on land holdings. That matter has not at all been looked into.

Sir, with regard to education, a Committee was set up and they gave an elaborate report. Sir, time and again it has been urged on the floor of this House and also elsewhere that more and more attention should be given to technical education hereafter rather than the academic sort of education which has resulted in a good deal of unemployment. Our Government have planned to open only two Occupational Institutes. It is a happy feature to see that there is the proposal to have an addition of 80 seats every year in the Agricultural College. But such provision has not been made in respect of Engineering College or the Medical College or other technical courses. It is very necessary to increase the number of seats in these Colleges also. It is high time that we cut down the number of admissions in the academic colleges and increase the number of seats in the technical courses. This will give a new orientation to our students and they will be able to secure good appointments. With these words, I welcome the resolution.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರವರಲ್ಲಿ ವಿಜ್ಞಾಪನೆ. ಎರಡನೆಯ ಪಂಚ ವಾರ್ಷಿಕ ಯೋಜನೆಯನ್ನು ಸ್ವಾಗತಿಸಿ ಪವರ್ ವಿಚಾರ ದಲ್ಲಿ ಒಂದೆರಡು ವಿಷಯಗಳನ್ನು ಗಮನಕ್ಕೆ ತರ್‍ತೇನೆ. ನಮ್ಮ ದೇಶದಲ್ಲಿ ಉತ್ಪತ್ತಿಯಾದ ಕರೆಂಟು ನಮ್ಮ ದೇಶದಲ್ಲಿರುವ ಜನ ಸಾಮಾನ್ಯಕ್ಕೆ ಸಿಕ್ಕುವುದೇ ದುರ್ಲ ಭವಾಗಿದೆ. ಬೆಂಗಳೂರು ಮತ್ತು ದೊಡ್ಡಬಳ್ಳಾಪುರ ದಲ್ಲಿ ಸುಮಾರು ಐದು ಸಾವಿರ ಪವರ್ ಲೂಮುಗಳಿವೆ. ಅವುಗಳಿಂದ ಸುಮಾರು ಒಂದು ಲಕ್ಷ ಜನರಿಗೆ ಅನ್ನ ಆಹಾರ ಸಿಕ್ಕುತ್ತಿದೆ. ಈ ತಿಂಗಳು 15ನೆಯ ತಾರೀಖು ಸುಮಾರು 4,300 ಪವರ್ ಲೂಮುಗಳು ಮುಚ್ಚುವ ಪರಿಸ್ಥಿತಿಯಿದೆ. ಅವನ್ನು ಮುಚ್ಚದ ಹಾಗೆ ಕಾರ್ಯಕ್ರಮ ತೆಗೆದುಕೊಂಡು ಈ ಯೋಜನೆಯಲ್ಲಿ ತಕ್ಕ ಅವಕಾಶ ಮಾಡಬೇಕು. ಈ ಯೋಜನೆಯಲ್ಲಿ ಸರ್ಕಾರ ಅನುಸರಿಸಿರುವ ನೀತಿಯ ಬಗ್ಗೆ ಶ್ರೀಯುತ ರುಗಳಾದ ನಾಗಯ್ಯರೆಡ್ಡಿಯವರು, ವೆಂಕಟಪ್ಪನವರು, ಮರಿಯಪ್ಪನವರು ಮುಂತಾದವರು ತಮ್ಮ ಅಭಿಪ್ರಾ

(ಶ್ರೀ ವಿ. ಆರ್. ನಾಯ್ಡು.)

ಯಗಳನ್ನು ಆಗಲೇ ಸೂಚಿಸಿದ್ದಾರೆ. ಯಾವುದನ್ನೂ ಟೀಕೆ ಮಾಡಬೇಕಾಗಿಲ್ಲ. ಅಶೋಕ, ಬುದ್ಧ ಇವರುಗಳ ಕಾಲದಲ್ಲೂ ನಡೆಯುದಿರುವ ಕೆಲಸ ಈಗ ನಡೆಯುತ್ತಿರುವುದಕ್ಕೆ ತುಂಬ ಕೃತಜ್ಞನಾಗಿರುತ್ತೇನೆ. ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು).—ಇದುವರೆಗೆ ಈ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಹಲವರು ವಿವರಿಸಿದ್ದಾರೆ. ನಾನೂ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ನೀಡುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಮೊನ್ನೆ ತಾನೆ ಕೆಂಗೇರಿ ಗುರುಕುಲದಲ್ಲಿ ದೊಡ್ಡ ಪ್ರಾಜ್ಞರು ಸೇರಿ ಹರಿಜನರ ನೈತಿಕಮಟ್ಟ, ಆರ್ಥಿಕಮಟ್ಟ, ಸಾಮಾಜಿಕಮಟ್ಟ ಇದನ್ನು ಉತ್ತಮ ಪಡಿಸಲು ಕೆಲವು ಉಪಯುಕ್ತವಾದ ಸಲಹೆಗಳನ್ನು ನೀಡಿದ್ದಾರೆ. ಅವನ್ನು ಈ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಬೇಕೆಂದು ಸಲಹೆ ಮಾಡುತ್ತೇನೆ.

ಪಾವಗಡ ತಾಲ್ಲೂಕು ಬಹಳ ಕಡೆಯ ತಾಲ್ಲೂಕಾಗಿದೆ. ಅಲ್ಲಿ ಬಹಳ ಯೋಗ್ಯರಾದ ಜನರಿದ್ದಾರೆ, ಬಾವಿಯ ಜಲವನ್ನು ಮೇಲಕ್ಕೆ ಚೆಲ್ಲಿ ಜೀವನ ಮಾಡುವವರಿದ್ದಾರೆ. ಈ ಕಡೆ ಗಮನ ಕೊಟ್ಟು ಅಲ್ಲಿನವರಿಗೆ ವಿದ್ಯುಚ್ಛಕ್ತಿಯನ್ನೊದಗಿಸಬೇಕು, ತಿಮ್ಮಮ್ಮನಹಳ್ಳಿಯ ಬಳಿಯಿರುವ ಉತ್ತರ ಪಿನಾಕಿನಿ ನದಿಯಿಂದ ಅಲ್ಲಿನ ಜನತೆಗೆ ಉಪಯೋಗವಾಗುವಂಥ ಯೋಜನೆಯನ್ನು ಈ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕು.

ಅನೇಕ ಕಡೆ ಹರಿಜನರಿಗೆ ಕುಡಿಯುವ ನೀರಿನ ಬಾವಿಗಳಿಲ್ಲ, ಅಂಥ ಕಡೆಗಳಿಗೆ ನೀರಿನ ಸೌಕರ್ಯವನ್ನು ಜಾಗ್ರತೆ ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

* ಶ್ರೀ ಎಚ್. ಸಿ. ನಾಗಯ್ಯರೆಡ್ಡಿ (ಗೌರಿಬಿದನೂರು).—ಸ್ವಾಮಿ, ಈ ಪಂಚವಾರ್ಷಿಕ ಯೋಜನೆ ವಿಷಯವನ್ನು ಮಾನ್ಯಸದಸ್ಯರುಗಳು ಬಹಳವಾಗಿ ಹೇಳಿದ್ದಾರೆ, ಆದರೆ ಹಣವೇನಾದರೂ ಇದೆಯೆ ಎಂದರೆ ಒಂದು ಕಾಸೂ ಸಹ ಇಲ್ಲ. ನಮ್ಮ ಮಟ್ಟಿಗೆ ಹೇಳುವುದಾದರೆ ಮೈಸೂರು ಸೀಮೆಗೆ ದ್ವಿತೀಯ ಪಂಚವಾರ್ಷಿಕ ಯೋಜನೆ ಶೂನ್ಯ ಎಂದು ಹೇಳಬೇಕಾಗಿದೆ. ಕ್ಯಾಪಿಟಲ್ ಅಕೌಂಟಿನಲ್ಲಿ ಹಣವಿಲ್ಲ, ರೆವೆನ್ಯೂ ಅಕೌಂಟಿನಲ್ಲಿ ಹಣವಿಲ್ಲ. ಇಂಡಿಯಾ ಸರ್ಕಾರದವರು ಕೊಟ್ಟಿದ್ದನ್ನು ಕಿತ್ತುಕೊಂಡಿರುವ ಹಾಗೆ ರೆಸಲ್ಯೂಷನ್ ಮಾಡಿರುವುದಾಗಿ ತಿಳಿದು ಬಂದಿದೆ. ಭದ್ರಾವತಿ ಎಕ್ಸ್‌ಪ್ಯಾನ್ಷನ್ ಸ್ಕೀಂಗೆ ಔಟ್‌ರೈಟ್ ಗ್ರ್ಯಾಂಟ್ 11 ಕೋಟಿ ರೂಪಾಯಿಗಳಿದ್ದುದನ್ನು ಏಳು ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆಂದು ಕೇಳಿದೆ. ಇಂಡಿಯಾ ಸರ್ಕಾರ ಹಣ ಕೊಡದಿದ್ದರೆ ಮೈಸೂರಿನಲ್ಲಿ ಒಂದೂ ಕಾಸೂ ಇರುವುದಿಲ್ಲ. ಸೀರಿಯಸ್ಸಾಗಿ ಮಾತನಾಡುವುದಾಗಿ ಹೇಳಿದವರು ಮಾತನಾಡಿದ್ದರಲ್ಲಿ ಅರ್ಥವಿಲ್ಲ; 'ಗಾಳಿಯಲ್ಲಿ ಗೋಪುರ ಕಟ್ಟಿದಹಾಗಿದೆ. ಇಂಡಿಯಾ ಸರ್ಕಾರ ಹಣ ಕೊಡದಿದ್ದರೆ ಮೈಸೂರಿನವರು ಒಂದಾಣೆ ಕೆಲಸ ಮಾಡುವುದಕ್ಕೂ ಖಂಡಿತ ಆಗುವುದಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆ ನಮ್ಮ ಭಾಗಕ್ಕೆ ಶೂನ್ಯ, ಸೊನ್ನೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಲ್ಲ. ಹಿಂದೆ 250 ಕೋಟಿಗಳಿಗೆ ತಯಾರಾಗಿದ್ದ ಯೋಜನೆ 80 ಕೋಟಿಗೆ ಇಳಿದಿದೆ. ಖಂಡಿತವಾಗಿ ಹೇಳುವುದಾದರೆ ನಮಗೇನಾದರೂ ಬೇಕಾದರೆ ಇಂಡಿಯಾ ಸರ್ಕಾರದವರನ್ನು ಕೊಡಿ ಎಂದು ಕೇಳಬೇಕಾದ ಪರಿಸ್ಥಿತಿಯಿದೆ. ಲಕ್ಕವಳ್ಳಿ ಪ್ರಾಜೆಕ್ಟಿಗೆ ಮತ್ತು, ಐರನ್‌ವರ್ಕ್ಸ್‌ಗೆ ಔಟ್‌ರೈಟ್ ಗ್ರ್ಯಾಂಟು ಕೊಡಬಹುದು. ಅದನ್ನು ಬಿಟ್ಟು ಬೇರೆಯುದಕ್ಕೆ ಹಣ ಕೊಡದಿದ್ದರೆ ಏನು ಮಾಡುವುದು? ವಿದ್ಯಾಸುಧಾರಣೆಗೆ ಐದು ಕೋಟಿ ರೂಪಾಯಿಗಳನ್ನು ಕೊಟ್ಟರೂ ಜನವರಿಯಲ್ಲಿ ತೇರ್ಗಡೆಯಾದವರು ಆಗಸ್ಟ್‌ವರೆಗೆ ಕಾಯಬೇಕು. ಅಲ್ಲಿಯವರೆಗೆ ಆರು ತಿಂಗಳು ರಜದಲ್ಲೇ ಕಳೆದು ಹೋಗುತ್ತದೆ. ಆಗಸ್ಟಿನಲ್ಲಿ ಸ್ಕೂಲು ಸೇರುವುದು. ಇದಕ್ಕಾಗಿ ದೊಡ್ಡ ಸಮಿತಿ ಮಾಡಿದರೂ ಪರಿಸ್ಥಿತಿ ಹೀಗಿದೆ. ಇದೆಲ್ಲಾ ನೋಡಿದರೆ ಯಾವ ಯೋಜನೆ ಮಾಡಿದರೂ ಯಾವ ಸುಧಾರಣೆ ಮಾಡಿದರೂ ಕೇಂದ್ರದವರು ಹಣ ಕೊಡಬೇಕು, ನಾವು ಜಾರಿಗೆ ತರಬೇಕು. ಸಂದರ್ಭ ಹೀಗಿದೆ. ಆದ್ದರಿಂದ ಪಂಚವಾರ್ಷಿಕ ಯೋಜನೆ ನಮ್ಮ ಮೈಸೂರು ಭಾಗಕ್ಕೆ ಈಗ ನಮ್ಮ ಸರ್ಕಾರವಿರುವ ಸ್ಥಿತಿಯಲ್ಲಿ ಶೂನ್ಯವೆಂದು ಧಾರಾಳವಾಗಿ ಹೇಳಬಹುದು.

* **Sri T. MARIAPPA** (Mysore City North).—Sir, I am grateful to you for having given me an opportunity though it is already late. Unfortunately, I was not present when the Hon'ble Minister moved this resolution. But, subsequently I came to know that the Government of India have been contemplating to reduce—I advisedly use the word contemplating because I do not know whether they have already finally decided—the allotment to the Bhadravathi Iron and Steel Works. They had held out a hope that they would help us to the maximum to develop the Iron Works. It is true that the Mysore Iron Works is handicapped in several directions. But, nevertheless, for the last four years, they have been giving us very handsome assistance for its development. Sir, all of us had the fond hope that Government of India would allot more than 11 crores for the development of Bhadravathi Iron Works in several directions such as the manufacture of tool alloy and stainless steel. We thought that they would give us very generous grants in the Second Five-Year Plan.

Again, Sir, we had pinned our hopes that the Government of India would locate very heavy electrical equipment industry in Mysore, because Mysore was the pioneer in the production of electricity. For the manufacture of heavy electrical equipments Mysore or Madras would be eminently suited. Mysore had already had a trained technical personnel. You will remember, Sir, when Sivasamudram went out of order, it was Mysore

Engineers that set right the whole plant in the shortest possible time.

Therefore it is but meet that the Government of India should consider the available technical personnel purely of Indian origin to locate the industry and try to help not merely the Mysore State by starting industries but South India as a whole. I am not one of those prepared to pick up a quarrel with the Centre for not locating industries. The Centre has generously located many industries in the South and many industries in Mysore State in particular. For example, we have the Machine Tools Factory, we have got Hindustan Aircraft, Telephone Industries and Bharat Electronics. Nevertheless what I feel is, the Bhadravathi Iron and Steel Works has to expand in several directions with a view to make it more economical. Unless we take up the other steels and products of steel, it would not be very economical. Therefore, for the Iron and Steel Works of Mysore to hold its own as against the Bhilai Steel Plant and the Rourkela Plant, it is but right that the Government should come to our aid and the Iron and Steel Works expands in all directions. We have already a nucleus of the staff, people who are trained, whereas in other Centres they have to send men to foreign countries to get them trained. There are many advantages in developing our iron works. There is also another aspect. For more grants, I agree with my friend when he says that we have to depend entirely on the Centre. It is not Mysore alone that has to depend on the Centre but several other States perhaps except Bombay. Therefore we have to depend entirely on the Centre for the proper execution of all the Five-Year Plans. Therefore, all of us with one voice must urge for the grant of more money, but at the same time we must assure them that the money so generously granted is not wasted here. My friend perhaps wanted us to be very economical in our expenditure. Money must be spent for a project or for a thing for which it must be earmarked. I believe all the members will assure the Government that the money will be most economically spent for the Second Plan, and with this urge the Government of India would see its way to fulfil the expectations of the people, particularly in the Second Plan.

MR. SPEAKER.—The Minister will reply. You need not give a detailed reply, but only the main outlines of the scheme.

*DR. R. NAGAN GOWDA.—I will confine myself only to some of the pointed remarks that were made. The Hon'ble Member from Malur was saying about the rural indebtedness. Now through the co-operative movement the outlay during the next five years will be of the order of Rs. 2,135 lakhs and that I am sure will go to some extent to solve the problem of indebtedness in the State. It will not completely solve it, but I think to some extent it will do it. There was a remark made by Sri Prabhakar that in the co-operative movement we are not doing much for the villagers. I would just like to mention here that we will have 300 godowns dispersed all over the State in connection with the 400 large size co-operative societies we are organising; along with these there will be 80 godowns connected with the marketing co-operative societies. I think this will go to some extent to help the cultivators to stock their grains when the prices are low and sell them when they are high.

SRI A. BHEEMAPPA NAIK (Molakalmuru).—You say there will be 80 godowns. Will that be sufficient to stock grains ?

DR. R. NAGAN GOWDA.—We are going to add 380 godowns throughout the State. That is a beginning. In the Third Five-Year Plan we will certainly have a few more.

Sri L. Siddappa was asking me about a Farm for the new irrigated area. Under the project scheme, there is provision for a Farm and along with the development of the atchkat this will be taken up.

Sri Siddappa was wondering whether we are really sincere about the distribution of 250 breeding bulls. This year we have distributed about 30 and we have sold about 190 bulls

(DR. R. NAGAN GOWDA.)

and bullocks. We are trying to increase the number of bulls that will be available for sale and also on premium basis.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ನಾವು ಒಬ್ಬೊಬ್ಬರು ಒಂದೊಂದು ರೀತಿಯಾಗಿ ತಮ್ಮ ತಮ್ಮ ಪ್ರದೇಶಗಳ ಅನುಕೂಲತೆಗಾಗಿ ಬಾವಿ, ಕೆರೆ, ಕಾಲುವೆ, ಕಟ್ಟೆ ಇತ್ಯಾದಿಗಳನ್ನು ಮಾಡಿಸಿಕೊಡಬೇಕೆಂದು ಕೇಳಿಕೊಂಡಿದ್ದೇವೆ. ಅದಕ್ಕಾಗಿ ತಾವು ಯಾರಯಾರ ಬೇಡಿಕೆಗಳಿಗೆ ಯಾವ ರೀತಿ ಮನ್ನಣೆ ಕೊಡುತ್ತೀರೆಂಬ ಬಗ್ಗೆ ಪ್ರತಿಯೊಬ್ಬರ ಪಾಯಿಂಟ್ಸ್‌ಗಳಿಗೂ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಮಾರಿಯಪ್ಪ.—ಈಗ ಮಾನ್ಯಮಂತ್ರಿಗಳು ವಿವರಗಳನ್ನೆಲ್ಲಾ ತಿಳಿಸುವುದಕ್ಕೆ ಪ್ರಾರಂಭಿಸಿದ್ದಾರೆ. ಆದರೆ ಆ ವಿಚಾರಗಳೆಲ್ಲಾ ಈ ಪ್ಲಾನಿನಲ್ಲೇ ಅಡಕವಾಗಿವೆ. ಆಧಕಾರಣ ಈಗ ಅವರು ಈ ವಿವರಗಳನ್ನೇ ಮತ್ತೆ ಹೇಳುವುದಕ್ಕೆ ಬದಲಾಗಿ ಆ ಯೋಜನೆಗಳನ್ನೆಲ್ಲಾ ಕಾರ್ಯಗತ ಮಾಡಲು ಹಣವನ್ನು ಹೇಗೆ ಒದಗಿಸಿಕೊಳ್ಳಬೇಕೆಂದು ಆಲೋಚನೆ ಮಾಡಿದ್ದಾರೆಂಬುದನ್ನು ತಿಳಿಸಿದರೆ ಸಾಕೆಂದು ಹೇಳುತ್ತೇನೆ.

Dr. R. NAGAN GOWDA.—As a matter of fact we have provided for agricultural production about Rs. 421 lakhs and for animal husbandry Rs. 87 lakhs; for forests and soil conservation alone we have provided Rs. 126 lakhs. That was a point about which a number of Hon'ble Members spoke. . .

Sri A. BHEEMAPPA NAIK.—On a point of order. The Plan indicates all that. What you have provided is stated in the book. Everyone knows that. Please tell us whether we have money enongh to do all these things.

Sri L. SIDDAPPA.—The Planning Commission has approved of it. It is their business.

Sri K. PATTABHIRAMAN (Kolar).—The Plan itself contains all these points. I think the resolution may now be put to vote.

Dr. R. NAGAN GOWDA.—The other points that have been mentioned by Hon'ble Members have been carefully noted and the Government will see that the suggestions are implemented as far as possible.

Mr. SPEAKER.—I will put the resolution to vote. The question is:

"This House while approving the Draft Second Five-Year Plan for Mysore is of the view that the present allotment of Rs. 80·49 crores is inadequate to meet the several developmental schemes and resolves to request the Government of India to allot more funds as each of these schemes progresses. The House wishes to take this opportunity to urge upon the Government of India to locate in the State some of the Heavy Industries undertaken by the Central Government in the Public Sector in view of the several natural and other facilities that the State at present commands.

The House further resolves to request the Government of India to assist the Mysore Iron and Steel Works, Bhadravathi, to manufacture Special Steels for which the said Works are eminently suited."

The motion was adopted.

Mr. SPEAKER.—The House will now adjourn *sine die*.

The House adjourned sine die at Twenty-Five Minutes past One of the Clock.

WD 2896—GPB—550—16-8-56

MYSORE LEGISLATIVE ASSEMBLY

THIRTY-THIRD DAY.

Thursday, 20th September 1956.

The House met in the Legislative Assembly Hall, Atara Kacheri, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

MR. SPEAKER.—Now new members will please take Oath of Allegiance.

(*The name of Sri H. M. Channabasappa was called.*)

SRI J. MOHAMED IMAM (Jagalur).—Before Sri H. M. Channabasappa takes the Oath, I want some clarification. Can an Hon'ble Minister who has been elected be appointed as a Minister unless he takes the Oath of allegiance to the Constitution? Can he hold an office under the Government, much less can he become the Minister?

MR. SPEAKER.—Now he is taking the Oath. The point referred to by you does not arise.

SRI J. MOHAMED IMAM.—A technical objection.

MR. SPEAKER.—That is not a point. You can raise it afterwards.

Members Sworn.

1. Sri H. M. Channabasappa (Periyapatna).
2. Sri T. C. Shanthappa (Tarikere).
3. Sri H. Sannabasavana Gowda (Bellary).

Appointment of Leader of the House.

SECRETARY.—The following communication has been received from the Government.—

"Sir,

I am directed to state that Government have decided that Sri Kadidal Manjappa, B.A., LL.B., Chief Minister, will be the Leader of the Mysore Legislative Assembly."

CONDOLENCE RESOLUTION

Re. Demise of Sri K. T. Bhashyam, Chairman, Legislative Council

*ಶ್ರೀ ಕಡಿದಾಳ್ ಮಂಜಪ್ಪ (ಸಭಾ ನಾಯಕರು ಮತ್ತು ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯಿಂದ ಈ ಮಾನ್ಯ ಸಭೆಯ ಮುಂದೆ ಒಂದು ದುಃಖಕರವಾದ ಸೂಚನೆಯನ್ನೊಳಗೊಂಡ ಒಂದು ನಿರ್ಣಯವನ್ನು ಇಡಬೇಕೆಂದು ತೀರ್ಮಾನ ಮಾಡಿಕೊಂಡು ಕೆಲವು ಮಾತುಗಳನ್ನಾಡಲು ನಾನೀಗ ನಿಂತಿದ್ದೇನೆ. ನನ್ನ ನಿರ್ಣಯವು ಈ ರೀತಿಯಾಗಿದೆ :

"This House do stand adjourned as a mark of respect to the memory of Shri K. T. Bhashyam, Chairman, Legislative Council, who passed away on the 24th May 1956. This House requests the Speaker to convey to the members of the bereaved family its sincere condolences."

ಸ್ವಾಮಿ, ದಿವಂಗತ ಶ್ರೀ ಭಾಷ್ಯಂ ಅವರು ಈ ಮಾನ್ಯ ಸಭೆಯ ಸದಸ್ಯರೆಲ್ಲರಿಗೂ ಸ್ನೇಹಿತರಾಗಿದ್ದವರು ಮತ್ತು ನಮ್ಮೆಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದವರು. ಅವರ ನಿಧನದಿಂದ ನಮ್ಮೆಲ್ಲರಿಗೂ ಬಹಳ ದುಃಖವುಂಟಾಗಿದೆ. ಮೈಸೂರಿನ ರಾಜಕೀಯ ಜೀವನದಲ್ಲಿ ಶ್ರೀ ಭಾಷ್ಯಂಅವರ ಪಾತ್ರ ಬಹಳ ಅಮೋಘವಾದದ್ದು. ಅವರು ಮಹಾತ್ಮ ಗಾಂಧೀಜಿಯವರ ಸಮಕಾಲೀನರಾಗಿದ್ದುದು ಅವರ ಒಂದು ಪುಣ್ಯವೆಂತಲೇ ಹೇಳಬಹುದು. ಅದರಲ್ಲೂ ಅವರು ಗಾಂಧೀಜಿಯವರ ಸಂಗಾತಿಗಳಾಗಿದ್ದುಕೊಂಡು, ಅವರ ಶಿಷ್ಯರಾಗಿ, ಅವರ ಆಜ್ಞೆಯ ಮೇರೆಗೆ ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಕೆಲಸ ಮಾಡಿದುದು ಅವರ

*Asterisk indicates that the speech has not been revised by the Member concerned.

(ಶ್ರೀ ಕಡಿದಾಳ್ ಮಂಜಪ್ಪ.)

ಜೀವನದಲ್ಲಿ ಒಂದು ಅತ್ಯಂತ ಪುಣ್ಯಕರವಾದ ಸಂಗತಿಯೆಂದು ಹೇಳಬಹುದು. ಶ್ರೀ ಭಾಷ್ಯಂ ಅವರದು ಅಂಥ ಒಂದು ಪುಣ್ಯದ ಜೀವನ. ಯಾವೊಂದು ಕಾಲದಲ್ಲಿ ಹಿಂದೆ ಸ್ವದೇಶ-ಸ್ವದೇಶೀ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದು ಒಂದು ದೊಡ್ಡ ಅಪರಾಧವಾಗಿತ್ತೋ ಅಂಥ ಕಾಲದಲ್ಲಿ ಕ್ರಾಂಗ್ರೆಸ್ ಸಂದೇಶಗಳನ್ನು ಮೈಸೂರು ದೇಶದಲ್ಲಿ ಸಾರಲು ಶ್ರೀ ಭಾಷ್ಯಂ ಅವರು ಬಹಳ ಪ್ರಭಾವವನ್ನು ಬೀರಿದ್ದರು ಅವರಲ್ಲಿ ನಾಯಕರಿಗಿರುವಂಥ ಅನೇಕ ಸದ್ಗುಣಗಳಿದ್ದವು. ಅವರು ಜನರನ್ನು ದೇಶದ ಸ್ವಾತಂತ್ರ್ಯಕ್ಕಾಗಿ ಹೊಡೆದೆಬ್ಬಿಸುವ, ಹುರಿದುಂಬಿಸುವ ಚಮತ್ಕಾರವುಳ್ಳಂಥ ವಾಗ್ಮಿಗಳಾಗಿದ್ದರು. ಅವರ ದೇಶಸೇವೆಯು ನಾನಾ ಮುಖವಾಗಿತ್ತು, ಇಷ್ಟೇ ಅಲ್ಲದೆ ಅವರು ಒಬ್ಬ ದೊಡ್ಡ ನ್ಯಾಯವಾದಿಗಳೆಂಬ ಹೆಸರನ್ನೂ ಗಳಿಸಿದ್ದರು. ಅವರು ಕಾರ್ಮಿಕರ ಹಿತಸಾಧನೆಗಾಗಿ ಬಹಳವಾಗಿ ದುಡಿದಿದ್ದಾರೆ. ಶಾಸನ ಸಭೆಗಳ ಸದಸ್ಯರಾಗಿ ಹನ್ನೆರಡು ವರ್ಷಗಳ ಕಾಲ ಸತತವಾಗಿ ದುಡಿದಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ ತರುವಾಯ ನ್ಯಾಯಾಂಗ ಮತ್ತು ಕಾರ್ಮಿಕ ಕ್ಷೇತ್ರಗಳ ಮಂತ್ರಿಗಳಾಗಿದ್ದುಕೊಂಡು ಸಂಸ್ಥಾನಕ್ಕೆ ಬಹಳ ಸೇವೆ ಸಲ್ಲಿಸಿದ್ದಾರೆ. ಮೈಸೂರು ದೇಶದ ಕಾರ್ಮಿಕರು ಶ್ರೀ ಭಾಷ್ಯಂ ಅವರಿಗೆ ಚಿರಋಣಿಗಳಾಗಿರಬೇಕು. ಶ್ರೀ ಭಾಷ್ಯಂ ಅವರ ಮಂತ್ರಿತ್ವದ ಅವಧಿಯಲ್ಲಿ ಕಾರ್ಮಿಕವರ್ಗಕ್ಕೆ ಅನುಕೂಲವಾದಂಥ ಅನೇಕ ಕಾನೂನುಗಳು ಜಾರಿಗೆ ಬಂದವು. ಅವರು ಬಹಳ ಕಾಲ ಕಾರ್ಮಿಕವರ್ಗದ ಮುಖಂಡರಾಗಿದ್ದುಕೊಂಡು ಅವರ ಏಳಿಗೆಗಾಗಿ ಬಹಳ ತೃಪ್ತಿಕರವಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

1940ನೆ ಇಸವಿಯಲ್ಲಿ ನಾನಿನ್ನೂ ಹುಡುಗ. ಆಗ ತಾನೇ ವಕೀಲಿವೃತ್ತಿಯನ್ನು ಆರಂಭಿಸಿದ್ದೆ. ಆಗತಾನೇ ರಾಜಕೀಯ ಜೀವನವನ್ನು ಕೂಡ ಪ್ರಾರಂಭಿಸಿದ್ದೆ. ಶ್ರೀಯುತ ಕೆ. ಟಿ. ಭಾಷ್ಯಂ ಅವರು ಶಿವಮೊಗ್ಗ ಕಾಂಗ್ರೆಸ್ ಅಧಿವೇಶನದಲ್ಲಿ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿತರಾದರು. ಅವರನ್ನು ಮೆರವಣಿಗೆಯಲ್ಲಿ, ಶಿವಮೊಗ್ಗ ನಗರದಲ್ಲಿ ಕರೆದುಕೊಂಡು ಹೋಗಲಾಯಿತು. ಅವರಿಗೆ ದೊರೆತ ಸ್ವಾಗತ ಶಿವಮೊಗ್ಗೆಯಲ್ಲಿ ಯಾವ ವೈಸ್‌ರಾಯ್ ಅಥವಾ ಮಹಾರಾಜರಿಗೂ ಆಗ ದೊರೆತಿರಲಿಲ್ಲ. ಅವರದು ಧೀರವಾಣಿ. ಅವರು ಮಾತನಾಡುತ್ತಿದ್ದ ಕೆಲವು ಶಬ್ದಗಳು ಈಗಲೂ ಕಿವಿಯಲ್ಲಿ ಕೇಳುವಂತೆ ನನಗೆ ತೋರುತ್ತಿದೆ. ಅವರು ಜನರನ್ನು ಬಹಳ ಮುಗುಳ್ನಗೆಯಿಂದ ಮಾತನಾಡಿಸಿ, ಮನಸ್ಸಿಗೆ ನೋವಾಗದಂತೆ ವರ್ತಿಸುತ್ತಿದ್ದರು. ಅವರ ಹತ್ತಿರ ಮನಸ್ಸಿನಲ್ಲಿ ಒಂದು, ಬಾಯಲ್ಲಿ ಇನ್ನೊಂದು, ಕಾರ್ಯತಃ ಮತ್ತೊಂದು, ಈ ರೀತಿಯ ಸ್ವಭಾವವಿರಲಿಲ್ಲ. ಸಿಟ್ಟು ಬಂಧರೆ ಯಾವಾಗಲಾದರೂ ರೇಗಿಕೊಳ್ಳುತ್ತಿದ್ದರು. ಆದರೆ ತಕ್ಷಣವೇ ಮರೆತುಬಿಡುತ್ತಿದ್ದರು. ಪುನಃ ಬಹಳ ಸ್ನೇಹದಿಂದ ಮಾತನಾಡಿಸುತ್ತಿದ್ದರು. ಇಂಥ ಮಧುರ ಸ್ವಭಾವ ಅವರದು. ಅವರು ನಾನಾ ಕ್ಷೇತ್ರಗಳಲ್ಲಿ ದುಡಿದು ಹೆಚ್ಚಿನ ಜ್ಞಾನ ಮತ್ತು ಅನುಭವವನ್ನು ಸಂಪಾದಿಸಿದ್ದರು. ಅದರಲ್ಲೂ ಆಗಿನ ಕಾಲದಲ್ಲಿ ರಾಜಕೀಯದಲ್ಲಿ ದುಡಿಯುವುದು ಸುಲಭವಾದ ಕೆಲಸವಾಗಿರಲಿಲ್ಲ. ಈಗ ಯಾವ ಪಾರ್ಟಿಗೆ ಯಾರು ಬೇಕಾದರೂ ಸುಲಭವಾಗಿ ಸದಸ್ಯರಾಗಬಹುದು; ಮಾತನಾಡಬಹುದು; ಇತರ ಕಾರು ಬಾರುಗಳನ್ನು ಮಾಡಬಹುದು. ಆಗಿನ ಕಾಲದಲ್ಲಿ ಕಾಂಗ್ರೆಸ್ ಸದಸ್ಯನಾಗಿ, ಕಾಂಗ್ರೆಸ್ ಪಕ್ಷಕ್ಕೆ ಸೇರುವುದೆಂದರೆ ತ್ಯಾಗವನ್ನು ಸ್ವೀಕಾರ ಮಾಡುವುದು, ತ್ಯಾಗ ಜೀವನಕ್ಕೆ ಸಿದ್ಧನಾಗುವುದು ಎಂದು ಅರ್ಥ. ಆಗಿನ ಕಾಲದಲ್ಲಿ ಹಳೆಯ ಕಾಂಗ್ರೆಸ್ಸಿನವರು ಯಾವ ಪ್ರತಿಫಲದ ಅಪೇಕ್ಷೆಯೂ ಇಲ್ಲದೆ ಕಾಂಗ್ರೆಸ್ ಸಂಸ್ಥೆಗೆ ಸೇರಿ ದೇಶದ ಸ್ವಾತಂತ್ರ್ಯಕ್ಕೋಸ್ಕರ ದುಡಿದರು. ಆ ವ್ಯಕ್ತಿಗಳಲ್ಲಿ ಶ್ರೀಯುತ ಭಾಷ್ಯಂ ಅವರು ಒಬ್ಬರು. ಅಂಥವರ ಅನುಭವ ಮತ್ತು ಅವರ ಜ್ಞಾನ ನಮ್ಮೆಲ್ಲರಿಗೂ ವಿಶೇಷವಾಗಿ ಬೇಕಾಗಿದೆ. ಇಂಥ ಕಾಲದಲ್ಲಿ ಅವರು ನಮ್ಮನ್ನಗಲಿ ಹೋಗಿರುವುದು ನಮ್ಮ ದುರ್ದೈವ. ಅವರ ಆತ್ಮಕ್ಕೆ ಜಗದೀಶ್ವರನು ಶಾಂತಿಯನ್ನೀಯಲಿ, ಮತ್ತು ಅವರ ನಿಧನದಿಂದ ಉಂಟಾದ ವ್ಯಥೆಯನ್ನು ಸಹಿಸಿಕೊಳ್ಳಲು ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ನೀಡಲಿ ಎಂದು ಹಾರೈಸಿ ಈ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Motion moved:

"That this House do stand adjourned as a mark of respect to the memory of Shri K. T. Bhashyam, Chairman, Legislative Council, who passed away on the 24th May 1956. This House requests the Speaker to convey to the Members of the bereaved family its sincere condolences."

*Sri J. MOHAMED IMAM (Jagalur).—Sir, it is with great sorrow that I support the condolence resolution moved by the Leader of the House and I associate myself with the sentiments expressed by my Hon'ble friend regarding the services rendered by the late Sri K. T. Bhashyam, who, alas, is no more with us. Sir, I had the privilege of working with him and being his colleague in various legislatures since 1930 when I first entered the Representative Assembly. Since then, though we were in the opposite camps, I had various occasions to be associated with him and to study his character and appreciate the various services he rendered to the State. Sir, I need not take much time. All of us here recall his great personality, his oratorical powers, his fund of wit and wisdom and, what is more, his sportsmanship. He had a charming personality and whoever went to him always returned with a smiling face. His courtesy and manners are always worthy of emulation by others. Sir, he was a great patriot who made many sacrifices to serve the interests of the State and the people. The entire labour population of the State has reason to be grateful to him. He was a Minister of the

State and during this period, I must acknowledge the valuable part he played in spreading power and light throughout the State and we, on this side of the House, had every reason to appreciate the great services he rendered to the State. A major portion of his life was devoted in the cause of the country. Sir, his loss is irreparable. A great Mysorean has passed away and I know it will be very difficult to replace him. I am one of those who had personal relationship with him and though we belonged to the opposite camps, we were very good friends, and we were on very familiar terms. Whenever he met me alone, he always cut jokes with me and I was always doing the same with him.

It is therefore my sad duty to associate myself with the sentiments expressed by the Hon'ble Leader of the House and I pray : May his soul rest in peace !

I request the Hon'ble Leader of the House to convey our great sorrow at the loss we have sustained, to the members of the bereaved family.

With these words, I support the resolution.

*SRI K. HANUMANTHAIYA (Ramanagaram).—Sir, during the course of the life of this Assembly, we had to witness the sad demise of two of our greatest leaders. One was Sri H. Siddaiya who was the Speaker of this Assembly. The other was Sri K. T. Bhashyam who was the Chairman of the Legislative Council, who, in passing away, has plunged all of us and the country in deep sorrow.

To think of Sri K. T. Bhashyam is to think of a very important chapter in the history of Mysore. Sir, I happened to be his colleague in various fields of political activity and I must say that I was one of those youngmen who derived a great deal of inspiration from his speeches and from his patriotic activities. Even when some of us were students, he was the leader of the country. It was true in those days, more than a quarter of a century ago, the Congress movement was not as strong as it is today. In those early days he was one of the great pioneers who did his very best to make the freedom movement take root in this State. It was an uphill task to start the Congress movement in a native State, it was a very uphill task to fight bureaucracy and imperialism at the same time. That was this double handicap under which the State of Mysore was suffering. Sri K. T. Bhashyam rose to the occasion and asserted the rights of the people and laid solid foundation for subsequent superstructure.

To begin with, Sir, he became an active member of the Congress. He was the President of the then Congress Committee. The first governmental body into which he got elected in order to serve the people was the Bangalore City Municipality. There, he organised the Congress party: He carried on the Congress ideology and made, if I may say so, the Bangalore City Municipality Congress-minded. Subsequently, he was elected to the old Representative Assembly and soon after he was elected the leader of the Congress party. He was the Leader of the Opposition and carried on his leadership with force and pursuasiveness. May be, his voice was not heard physically by the minds and ears of the rulers that were. But, he touched their conscience and everyone knew that what Sri Bhashyam put forward was right and what Sri Bhashyam was doing was correct. He led, as it were, everyone in the State, whether in Government or in Opposition, on the right line to freedom and democracy. In the old days the Representative Assembly used to elect some members to the Legislative Council. He was one of those few leaders who were elected from that Assembly to the Legislative Council. His performance was very brilliant, to say the least. He may be counted as the very best Parliamentarian that Mysore has so far produced. When the Congress movement, under the inspiring leadership of Sri T. Siddalingiah, took to direct method of fighting the Government, Sri Bhashyam followed his leadership and sacrificed everything in order to strengthen that movement. Today, people who have rendered 25 years and 30 years service to the country are, in the natural course, being

(SRI K. HANUMANTHAIYA.)

forgotten. But the tremendous amount of sacrifice they did will remain evergreen in the memory of the people and in history.

Sir, after the Mysore Congress—as it was then called was organised, he became, I think, the third President. It was then that he toured the country and whipped up the enthusiasm of the people towards the Congress to such an extent that in the elections that followed he brought into the Legislature a great number of Congressmen. His Presidentship was during one of the most historic periods of the Congress. He was a great speaker; he was a great friend. He was a generous man to the extent that sometimes his very generosity was misunderstood as his fault. When we had to launch direct action in Mysore State, whether it was K.G.F. Satyagraha or Forest Satyagraha of 1937 or the Palace Satyagraha of 1947, he was always in the forefront. He would always inspire the people and his co-workers. His brilliant service is, to a great extent, responsible for all the offices we today occupy. In 1947, when we secured the modified form of Responsible Government, he became one of our Ministers. He did his work with great enthusiasm. I have seen him; I have seen his work and I have seen the files in which he has written his notes and orders. I found always in him a man who discouraged red-tapism in favour of expeditious work. His one motive was to see that things were done and done quickly so that the people concerned might derive the maximum benefit at the earlient opportunity. His work as Minister has been testifieds by my friend the Leader of the Opposition and no more recognition and appreciation could be accorded than that.

Sir, during the last general elections he was in two minds—whether to stand for the Assembly or for some other body. He was so good as to consult me. I was then the President of the Mysore Congress. Somehow, I thought and I tendered to him the advice that as an elder statesman he should choose to go to the Legislative Council. Any other individual would have gone on attributing motives for that. Any other smaller man would have misunderstood the suggestion that I made. All honour to him, he accepted the advice in the spirit in which it was tendered to him and as a sportsman he said he would withdraw his candidature from the constituency for which he was thought of. Sure and certain there was no other personality of that stature for Chairmanship of the Legislative Council and everyone of us, with one voice, elected him as the Chairman of the first Legislative Council. These two personalities—Sri H. Siddaiya and Sri K.T. Bhashyam—not only by virtue of the great services that they rendered to the country for a quarter of a century but also from the point of view of seniority, experience and wisdom, became the first Speaker and the first Chairman of these two august Bodies. Their memory would live evergreen in the annals of the history of the Assembly and the Council. I may make a humble suggestion that their portraits may be, one of these days, unveiled—one here and the other in the Council Hall. This is the fitting tribute, the minimum tribute that we would be paying to these great personalities.

12-30 P.M.

Sir, from what is called the common-sense point of view we have to mourn the loss of our leaders, the loss of our relatives, the loss of our friends. But from another point of view if we closely examine the life of each one of them, the question arises whether during the course of their life they have done well in the work entrusted to them. Sri Bhashyam is one who has completed the mission entrusted to him by the Divine Being. He was one of those who came for a purpose and fulfilled that purpose. He has gone out of this world to a surer place of existence, and as we believe, with satisfaction to himself for having done the work, and satisfaction to the people for having served them for such a long time and with such noble spirit. I pray that his soul may rest in peace and let us all convey through you, Sir,

our heartfelt condolences to the bereaved family and friends.

Sri S. SRINIVASA IYENGAR (T.-Narasipur).—Mr. Speaker, I hasten to associate myself with the feelings expressed by the Leader of the House while moving the condolence resolution. Sri Bhashyam was a man of sound head and strong heart. He possessed, as has already been observed, a charming personality, a unique power of speech, a sense of humour and judicial outlook.

Sir, during his Chairmanship of the Legislative Council he has very ably discharged all the three duties of a Chairman or a Speaker, the duties being, (1) to demand and maintain privileges, (2) to have a judicial outlook and interpretative character and (3) to maintain order. I crave the indulgence of this House to place before this House a few instances which enable us to remember the late Sri Bhashyam as Chairman for ever. In respect of the first duty, he is to be remembered for the privilege motion arising out of the question of R.M.D.C. and the second privilege motion was this; The Chairman observed one day that many questions had not been answered by the Government, rather answers were not furnished by the Government in the Upper House including supplementaries. The Chairman made a statement. Then came the retort from the Government side to the effect that the Chairman should not have made the statement without consulting the Leader of the House or even the Leader of the Opposition. The Chairman then quickly stated that he would give a ruling and the ruling was that the Chair does not wish to share with anybody the right and responsibility of making statements. This is a very important ruling, thereby asserting the right of the Chair to speak on behalf of the House, as its Spokesman.

The second duty was to have judicial outlook and interpretative character. While the Police Amendment Bill was under way in the House, the whole House suggested an amendment. Even the Chairman thought that the amendment was just. The Government would not accept that amendment. I remember he remarked that the responsible Government is not responsive. How judicial minded the Chairman was can certainly be judged by that incident.

Lastly, in respect of the duty of maintenance of order, his action in adjourning the whole House is to be remembered for ever. The movement the Opposition drew the attention of the Chairman about the complete absence of Ministers from treasury Benches in the Upper House, the Chair at once adjourned the House. He is to be remembered along with eminent Speakers of the House of Commons like Sir Arthur Onslow, Shaw Leafrey and Speaker Brand. Sir Arthur Onslow gave up a Government job just to ensure impartial treatment. Prior to Sir Arthur Onslow, the Speaker's job was a Government job. He gave it up. We have the other instance of Shaw Leafrey. The House of Commons wanted a non-party man. Mr. Manners Sutton was an active politician. He was a very good Speaker and yet the House of Commons rejected him in favour of Mr. Shaw Leafrey because the House wanted to ensure the non-party character of the chair.

I believe we can associate the name of Sri K. T. Bhashyam with those Speakers. May his soul rest in peace.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಹಿಂದೆ ನಡೆದ ಬಡ್ಜೆಟ್ ಅಧಿವೇಶನವನ್ನು ಮುಗಿಸಿಕೊಂಡು ಹೋಗುವಾಗ ನಾವು ಇಂದು ಈ ಅಧಿವೇಶನದಲ್ಲಿ ಇಂಥ ಒಂದು ದುಃಖಕರವಾದ ನಿರ್ಣಯದ ಮೇಲೆ ಮಾತನಾಡಬೇಕಾದ ಆವಶ್ಯಕತೆ ಬರುತ್ತದೆಂದು ಯಾರೂ ಅಂದುಕೊಂಡಿರಲಿಲ್ಲ! ಆದರೆ ಇದೆಲ್ಲ ದೈವೇಚ್ಛೆ. ನನ್ನ ಪರಮ ಸ್ನೇಹಿತರಾಗಿದ್ದ ಶ್ರೀ ಭಾಷ್ಯಂ ಅವರು ದಿವಂಗತರಾಗಿ ಇಲ್ಲಿಗೆ ನಾಲ್ಕು ತಿಂಗಳಾದವು. ಅವರು ದಿವಂಗತರಾದ ತರುವಾಯ ನಡೆಯುತ್ತಿರುವುದು ಇದೇ ಮೊದಲನೆಯ ಸಭೆಯಾದುದರಿಂದ ನಾವೀಗ ಅವರ ನಿಧನದ ಬಗ್ಗೆ ನಮ್ಮ ದುಃಖವನ್ನು ಹೊರಪಡಿಸುತ್ತಿದ್ದೇವೆ. ಶ್ರೀಯುತ ಭಾಷ್ಯಂ ಅವರಿಗೆ ನಾನೊಬ್ಬ ಆಪ್ತ ಸ್ನೇಹಿತನಾಗಿದ್ದುಕೊಂಡು ಒಂದಲ್ಲ ಒಂದು ರೀತಿಯಲ್ಲಿ ಮೂವತ್ತು ವರ್ಷಗಳ ಕಾಲ ಅವರ ಜೊತೆಯಲ್ಲಿ ಸೇವೆ ಸಲ್ಲಿಸುವಂಥ ಒಂದು ಸದವಕಾಶ ನನ್ನ ಪಾಲಿಗೆ ಬಂದಿತ್ತು. ಅವರು ಬಹಳ ಕಾಲಕ್ಕೆ ಹಿಂದೆಯೇ ಈ ಮೈಸೂರಿನ ಬಗ್ಗೆ ಯಾವ ಯಾವ ಸದಾಶಯಗಳನ್ನಿಟ್ಟುಕೊಂಡಿದ್ದರು, ಆ ಪೈಕಿ ಯಾವ ಯಾವ ಕಾರ್ಯಗಳನ್ನು ಅವರು ಸಾಧಿಸಿಕೊಂಡು ಬಂದಿದ್ದಾರೆ ಎನ್ನತಕ್ಕ ಬಗ್ಗೆ ಇಂದು ಅನೇಕ ವಿಷಯಗಳು ನನ್ನ ಜ್ಞಾಪಕಕ್ಕೆ ಬರುತ್ತಿವೆ. ಆ ಪೈಕಿ ಒಂದು ವಿಷಯ ಅಂದರೆ 1927 ರಲ್ಲಿ ನಾನು 'ಒಕ್ಕಲಗ' ಪತ್ರಿಕೆಯ ಸಂಪಾದಕನಾಗಿದ್ದೆ. ಆಗ ಒಂದು ದಿವಸ

(ಶ್ರೀ ಎಚ್. ಕೆ. ವೀರಣ್ಣಗೌಡ.)

ಶ್ರೀಯುತರು ನನ್ನಲ್ಲಿಗೆ ಬಂದು "ವೀರಣ್ಣಗೌಡ" ನಮ್ಮ ದೇಶಕ್ಕೆ ಸ್ವಾತಂತ್ರ್ಯ ಒಂದಲ್ಲ ಒಂದು ದಿನ ಬರಲೇ ಬೇಕು, ಬಂದೇ ಬರುತ್ತದೆ. ಆಗ ದೇಶದ ಆಡಳಿತವನ್ನು ನಡೆಸಲು ನಮ್ಮ ಜನರು ಶಕ್ತರಾಗಿರ ಬೇಕು. ಈ ದಿವಸ ನ್ಯಾಯವಿಧಾಯಕಸಭೆ ಮತ್ತು ಪ್ರಜಾಪ್ರತಿನಿಧಿಸಭೆಗಳಿಗೆ ಸದಸ್ಯರಾಗಿರುವವರ ಪೈಕಿ ಅನೇಕರು ಅಲ್ಲಿ ಏನು ಮಾತನಾಡಬೇಕು, ಯಾವುದನ್ನು ಮಾತನಾಡಬಾರದು ಎಂಬ ವಿವೇಚನೆಯಿಲ್ಲದೆ ಮನಸ್ಸಿಗೆ ಬಂದಹಾಗೆ ಮಾತನಾಡುತ್ತಿದ್ದಾರೆ. ಆದ್ದರಿಂದ ನಾವು ದೇಶಕ್ಕೆ ಸ್ವಾತಂತ್ರ್ಯಗಳಿಸಿಕೊಂಡ ನಂತರ ನಮ್ಮ ಜವಾಬ್ದಾರಿ ಸರ್ಕಾರ ಪದ್ಧತಿಯಲ್ಲಿ ಪ್ರಜಾಪ್ರತಿನಿಧಿಗಳಾಗಿ ಬರತಕ್ಕ ನಮ್ಮ ಜನರು ಶಾಸನಸಭೆಗಳಲ್ಲಿ ಹೇಗೆ ಚರ್ಚೆಮಾಡಬೇಕೆಂಬುದನ್ನು ಅವರಿಗೆ ತಿಳಿವಳಿಕೆಕೊಡಲು ಒಂದು ರಾಜಕೀಯ ಚರ್ಚಾಕೂಟವನ್ನು ಏರ್ಪಾಡು ಮಾಡುವುದು ಅತ್ಯಗತ್ಯ ಎಂದು ಹೇಳಿ ಅದರಂತೆ "ಮೈಸೂರು ಪಾರ್ಲಿಮೆಂಟ್" ಎಂಬ ಒಂದು ಚರ್ಚಾಕೂಟವನ್ನು ಅವರು ಸ್ಥಾಪಿಸಿದರು. ಅದಕ್ಕೆ ಅವರು ಅಧ್ಯಕ್ಷರು, ನಾನು ಕಾರ್ಯದರ್ಶಿ. ಇಂಥ ಘಿರಿಯಾಸೆಗಳನ್ನಿಟ್ಟುಕೊಂಡಿದ್ದವರು ಶ್ರೀ ಭಾಷ್ಯಂ ಅವರು. ಹೀಗೆ ಅವರು ನಮ್ಮ ದೇಶದ ಕೂಲಿಗಾರರ ಬಗ್ಗೆಯೂ ಮುಂದಾಲೋಚನೆಯ ಅಭಿಪ್ರಾಯಗಳನ್ನಿಟ್ಟುಕೊಂಡಿದ್ದರು. ಈ ಕಾರ್ಮಿಕರ ಸಮಸ್ಯೆಯನ್ನು ನಾವು ಒಂದಲ್ಲ ಒಂದು ದಿನ ಎದುರಿಸಲೇ ಬೇಕಾಗಿ ಬರುತ್ತದೆ. ಆದರ ಅವರನ್ನು ಎದುರು ಹಾಕಿಕೊಳ್ಳುವುದಕ್ಕಿಂತ ಅವರ ಸಹಕಾರವನ್ನು ಪಡೆದುಕೊಂಡರ ಅವರಿಂದ ಒಂದು ಹೆಚ್ಚಿನ ದೇಶಹಿತಸಾಧನೆಯಾಗಬಹುದು ಎಂದು ಅಂದೇ ಕಂಡುಕೊಂಡಿದ್ದರು. ಆ ದೃಷ್ಟಿಯಿಂದ ಆ ಕಾಲಕ್ಕೆ ಶ್ರೀ ಭಾಷ್ಯಂ ಅವರು ಬಿನ್ನಿಮಿಲ್ ಕಾರ್ಮಿಕರ ಸಂಘವನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿದ್ದರು. ಕೆಲವು ಕಾಲ ನಾನು ಆ ಸಂಸ್ಥೆಗೆ ಉಪಾಧ್ಯಕ್ಷನಾಗಿ ಕೆಲಸಮಾಡುವಂಥ ಒಂದು ಸನ್ನಿವೇಶ ದೊರೆತಿತ್ತು. ಆಗಿಂದಾಗ್ಗೆ ಬಂಡವಾಳಗಾರರ ಮತ್ತು ಕಾರ್ಮಿಕರ ಮಧ್ಯೆ ಸಂಭವಿಸುತ್ತಿದ್ದ ಬಿಕ್ಕಟ್ಟುಗಳ ಬಗ್ಗೆ ಶ್ರೀ ಭಾಷ್ಯಂ ಅವರು ಬಹಳ ಚಾಕಚಕ್ಯತೆಯಿಂದ ವರ್ತಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅವರು ಬಂಡವಾಳಗಾರರ ಪರವಾಗಿಯೇ ಮಾತನಾಡುತ್ತಿದ್ದಾರೇನೋ ಎಂಬ ಅನುಮಾನ ಉಂಟಾಗುವ ರೀತಿಯಲ್ಲಿ ವರ್ತಿಸುತ್ತಿರುವಂತೆ ತೋರಿಬಂದರೂ ಅವರು ಕಾರ್ಮಿಕರ ಹಿತವನ್ನು ಮಾತ್ರ ಎಂದಿಗೂ ಮರೆಯುತ್ತಿದ್ದವರಲ್ಲ. ಆದರೆ ಶಾಂತವಾಂಶವೇನೆಂದರೆ ಯಾವುದೇ ಪ್ರಶ್ನೆ ಆಗಲಿ, ಎಷ್ಟೇ ಪಾದ ವಿವಾದಗಳಾಗಿರಲಿ ಅದನ್ನು ಸುಲಭವಾಗಿ ಪರಿಹಾರ ಮಾಡುವ ಶಕ್ತಿ ಅವರಿಗಿತ್ತು. ಎರಡು ಪಕ್ಷಗಳವರಿಗೆ ಜಗಳವಿದ್ದರೆ ಅವರಲ್ಲಿ ಒಬ್ಬರು ಮಾತ್ರ ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ಇಬ್ಬರ ಮಧ್ಯೆ ಸಮರಸವನ್ನುಂಟುಮಾಡಬೇಕೆಂಬ ಧ್ಯೇಯದಿಂದ ಅವರು ಕೆಲಸ ಮಾಡುತ್ತಿದ್ದರು. ಶ್ರೀಮಾನ್ ಭಾಷ್ಯಂ ಅವರು ಮಹಾ ಮೇಧಾವಿಗಳು. ಅವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರಾಗಿದ್ದಾಗ ಕಾಂಗ್ರೆಸ್ ಪಕ್ಷ ಆಗತಾನೇ ಎಂದರೆ 1936ನೇ ಇಸವಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಹೊಸದಾಗಿ ಸ್ಥಾಪನೆಯಾಯಿತು. ಆ ಕಾಂಗ್ರೆಸ್ ಪಕ್ಷಕ್ಕೆ ಅವರೇ ನಾಯಕರಾಗಿದ್ದರು. ನಾನು ಅದರ ಕಾರ್ಯದರ್ಶಿಯಾಗಿದ್ದೆ. ಆಗಿನ ಕಾಲದಲ್ಲಿ ಜನಗಳ ಪ್ರತಿನಿಧಿಗಳು ಸರ್ಕಾರ ನಡೆಸುವುದೆಂದರೆ ಸಾಧ್ಯವೇ, ಅದು ಕಾರ್ಯಗತವಾಗತಕ್ಕ ಮಾತೇ ಎನ್ನುವ ಭಾವನೆ ಇತ್ತು. ಸರ್ಕಾರದ ಅಧಿಕಾರ ನಡೆಸಿ ಮೇಲ್ಮಟ್ಟಕ್ಕೆ ಬಂದು ಕೌನ್ಸಿಲರ್, ದಿವಾನ್, ಆಗುತ್ತಿದ್ದವರು ಆ ಮಾತನ್ನು ಕೇಳಿ ನಗುತ್ತಿದ್ದರು. ಆದರೆ ಶ್ರೀ ಭಾಷ್ಯಂ ಅವರು ಆಗಲೂ ಸಹ "ನಿಮಗೆ ಗಾದಿ ಹೋಗಿ ಕಾಲ ಬದಲಾಯಿಸುವುದು ಗೊತ್ತಾಗುವುದಿಲ್ಲ, ಜನರ ಪ್ರತಿನಿಧಿಗಳು, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ರಾಜ್ಯವಾಳುತ್ತಿರುವಂತೆ ಇಲ್ಲಿಯೂ ರಾಜ್ಯವಾಳಲು ಸಾಧ್ಯವಿದೆ. ಆ ರೀತಿ ನಡೆಯುತ್ತದೆ" ಎಂದು ಮುಂತಾಗಿ ತಕ್ಷಣ ಹೇಳುತ್ತಿದ್ದರು. ಒಂದು ಸಾರಿ ಈ ರೀತಿ ಚರ್ಚೆ ಪ್ರಜಾಪ್ರತಿನಿಧಿಸಭೆಯಲ್ಲಿ ನಡೆಯುತ್ತಿದ್ದಾಗ ಆಗ ಕೌನ್ಸಿಲರ್ ಆಗಿದ್ದ ದಿವಂಗತ ಶ್ರೀ ಕೆ. ಮ್ಯಾಥ್ಯೂ ಅವರು ಅದೆಲ್ಲ ನಮ್ಮ ದೇಶದಲ್ಲಿ ಸಾಧ್ಯವಿಲ್ಲ ಎಂದರು. ಶ್ರೀ ಭಾಷ್ಯಂ ಅವರು ಏಕೆ ಎಂದು ಪ್ರಶ್ನಿಸಿದರು 'ಏಕೆಂದರೆ' it is a matter of common-sense ಎಂದು ಶ್ರೀ ಮ್ಯಾಥ್ಯೂಅವರು ನುಡಿದರು. ಕೂಡಲೆ ಶ್ರೀ ಭಾಷ್ಯಂ ಅವರು Sir, common-sense is very uncommon nowadays and it is being amply demonstrated on the dias, ಎಂದು ಹೇಳಿದರು. ಆಗ ಗದ್ದುಗೆ ಮೇಲೆ ಕುಳಿತಿದ್ದವರಿಗೆ ಬಹಳ ಅಸಮಾಧಾನವಾಯಿತೆಂಬುದನ್ನು ಅವರ ಮುಖಚರ್ಯೆಯಿಂದ ಹೊರಪಡುತ್ತಿತ್ತು. ಹೀಗೆ ಅವರು ತಕ್ಷಣವೇ ಮಾರುತ್ತರಕೊಟ್ಟು ಪ್ರಜಾಪ್ರತಿನಿಧಿಗಳಿಗೆ ಅಂಥ ಶಕ್ತಿ ಇದೆ ಎನ್ನುವುದನ್ನು ಪ್ರತಿಭಟನಾರೂಪದಲ್ಲಿ ಅನೇಕಸಲ ತೋರಿಸಿದ್ದಾರೆ. ಅವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರಾಗಿದ್ದಾಗ ಪ್ರತಿನಿಧಿಗಳ ಮಾನ್ಯತೆ ಎಷ್ಟರಮಟ್ಟಿಗೆ ಪಡೆದಿದ್ದರು ಎನ್ನುವುದಕ್ಕೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ. 1937 ನೆಯ ಇಸವಿಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನ ನಡೆಯುತ್ತಿತ್ತು. ಶ್ರೀ ಭಾಷ್ಯಂ ಅವರ ದಸ್ತಗಿರಿ ಅರ್ಧ ರಾತ್ರಿಯಲ್ಲಿ ಆಯಿತು. ಅದರ ಮಾರನೆ ದಿನವೇ ಪ್ರಜಾಪಕ್ಷ ಮತ್ತು ಇತರ ರಾಜಕೀಯ ಪಕ್ಷಗಳು ಸಭೆ ಸೇರಿ "ಎಲ್ಲರೂ ಕಾಂಗ್ರೆಸ್ಸಿಗೆ ಸೇರಬೇಕು; ಸರ್ಕಾರದ ಇಂಥ ದಬ್ಬಾಳಿಕೆಗಳನ್ನು ಕೊನೆಗಾಣಿಸಬೇಕು; ಪ್ರಜಾಪ್ರಭುತ್ವ ಸರ್ಕಾರವನ್ನು ಏರ್ಪಾಡು ಮಾಡಬೇಕು; ಅದಕ್ಕೆ ಬೇರೆ ಬೇರೆ ಧ್ಯೇಯವುಳ್ಳ ಬೇರೆ ಬೇರೆ ರಾಜಕೀಯ ಪಕ್ಷಗಳನ್ನು ನಡೆಸಿಕೊಂಡುಹೋಗುವುದು ಸೂಕ್ತವಲ್ಲ!" ಎಂದು ತೀರ್ಮಾನವನ್ನು ತೆಗೆದುಕೊಂಡವು. ಶ್ರೀ ಭಾಷ್ಯಂ ಅವರ ದಸ್ತಗಿರಿಯಿಂದ ಎಲ್ಲ ರಾಜಕೀಯ ಪಕ್ಷಗಳೂ ಕಾಂಗ್ರೆಸ್ಸಿನಲ್ಲಿ ಸೇರಿ ಅಲ್ಲಿಂದೀಚೆಗೆ ಕಾಂಗ್ರೆಸ್ ಕಾರ್ಯಕಲಾಪಗಳು ಬಹಳ ಹುರುಪಿನಿಂದ ನಡೆಯುವುದಕ್ಕೆ ಅವಕಾಶವಾಯಿತು ಮತ್ತು ಕಾಂಗ್ರೆಸ್ ಸಂಸ್ಥೆ ಬೆಳೆಯುವುದಕ್ಕೆ ಅವಕಾಶವಾಯಿತು. ಹೀಗೆ ಭಾಷ್ಯಂ ಅವರ ದಸ್ತಗಿರಿಯಿಂದ ಎಲ್ಲರಿಗೂ ಒಂದು ರೀತಿಯ ಪ್ರಚೋದನೆಯಾಗಿ ಕಾಂಗ್ರೆಸ್ ಸಂಸ್ಥೆ ಬೆಳೆಯುವುದಕ್ಕೆ ಅವಕಾಶವಾಯಿತು. ಶ್ರೀ ಭಾಷ್ಯಂಅವರಲ್ಲಿ ವಾಕ್ಚತುರತೆ ಎಷ್ಟರಮಟ್ಟಿಗಿತ್ತು ಎನ್ನುವುದನ್ನು ಅನೇಕ ಸಲ ಮನಗಂಡಿದ್ದೇನೆ. ಕಾಂಗ್ರೆಸ್ ಸಂಸ್ಥೆಯಲ್ಲಿ ಎಷ್ಟೋ ಸಲ ತತ್ವಗಳ ವಿಚಾರದಲ್ಲಿ ಭಿನ್ನಾಭಿಪ್ರಾಯ ಬಂದು ಬಹಳ ಬಿಕ್ಕಟ್ಟಿನ ಪರಿಸ್ಥಿತಿಯುಂಟಾಗುತ್ತಿತ್ತು. ಕಾಂಗ್ರೆಸ್ ಸಂಸ್ಥೆ ಸ್ಥಾಪನೆಯಾದಲಾಗಾಯ್ತು ಪರಸ್ಪರ ಭಿನ್ನಾಭಿಪ್ರಾಯದ ದೆಸೆಯಿಂದ ಕಾಂಗ್ರೆಸ್‌ನವರು ಬೇರೆಬೇರೆಯಾಗುತ್ತಾರೆನ್ನುವ ಸಂದರ್ಭದಲ್ಲಿ ನಮ್ಮ ಅದೃಷ್ಟವಶಾತ್ ಎಂಥ ಬಿಕ್ಕಟ್ಟಿನ ಪ್ರಸಂಗವನ್ನೂ

ಸುಲಲಿತವಾಗಿ ಪರಿಹಾರ ಮಾಡುವ ಶಕ್ತಿಯುಳ್ಳ ಕೆಲವರು ನಾಯಕರಿದ್ದಾರೆ. ಅವರಲ್ಲಿ ಶ್ರೀ ಭಾಷ್ಯಂ ಅವರೂ ಒಬ್ಬರು. ಭಾಷ್ಯಂಅವರು ಕೆಲವಾರು ನಿಮಿಷಗಳು ಮಾತನಾಡುವುದರೊಳಗಾಗಿ ಸದಸ್ಯರು ತಮ್ಮ ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಅವರೆಲ್ಲ ಒಗ್ಗಟ್ಟಾಗುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಅಂಥ ಫಲಿತಾಂಶವನ್ನು ಶ್ರೀ ಭಾಷ್ಯಂರವರು ಅನೇಕ ಸಲ ಸಾಧಿಸಿದ್ದಾರೆ. ಕಾಂಗ್ರೆಸ್ ಸಂಸ್ಥೆಯಲ್ಲಿ ಭಿನ್ನಾಭಿಪ್ರಾಯಗಳು ಬಂದು ಜಗಳವಾಗಿ ಬಿಸಿಬಿಸಿ ಚರ್ಚೆ ನಡೆಯುವಾಗ ಶ್ರೀ ಭಾಷ್ಯಂಅವರು ಎದ್ದುನಿಂತ ಕೂಡಲೇ ಎಲ್ಲರೂ ಸುಮ್ಮನಾಗುತ್ತಿದ್ದರು. ಶ್ರೀ ಭಾಷ್ಯಂಅವರು ಮಾತಾಡಿದ ಮೇಲೆ ಎಲ್ಲ ಚರ್ಚೆಯೂ ತಣ್ಣಗಾಗುತ್ತಿತ್ತು. ಬಹಿರಂಗ ಸಭೆಗಳಲ್ಲಿ ಕೂಡ ಅಷ್ಟೇ. ಅವರ ಭಾಷಣವನ್ನು ಕೇಳಿದವರು ತಲೆದೂಗಿ ಅವರ ಮಾತಿನಲ್ಲೇ ತಲ್ಲೀನರಾಗುತ್ತಿದ್ದರು ಎಂದರೆ ಉತ್ಪ್ರೇಕ್ಷೆಯಲ್ಲ.

ಸ್ವಾಮಿ, ಶ್ರೀಮಾನ್ ಭಾಷ್ಯಂಅವರ ಖಾಸಗಿ ಜೀವಮಾನದಲ್ಲಿ ನನಗೆ ತಿಳಿದಮಟ್ಟಿಗೆ ಅನೇಕ ಸಂದರ್ಭಗಳಲ್ಲಿ ಅವರು ಬಹಳ ಕಷ್ಟವನ್ನನುಭವಿಸಿದರು. ಅವರು ದೊಡ್ಡ ಲಾಯರಾಗಿದ್ದರು. ಬೇಕಾದಷ್ಟು ಅದ್ಧೂರಿಯಿಂದ ಸಂಪಾದನೆ ಮಾಡಿದರು. ಟೈಪಿಸ್ಟ್, ಕ್ಲಾರ್ಕ್, ಅಡಿಗೆಯವರು, ಸೈಕಲ್ ಆರ್ಡರ್ಲಿ ಹೀಗೆ ಅವರು ಎಲ್ಲವನ್ನೂ ಸುವ್ಯವಸ್ಥಿತವಾಗಿಟ್ಟುಕೊಂಡಿದ್ದ ಕಾಲವನ್ನೂ ನೋಡಿದ್ದೇನೆ. ಅವರು ರಾಜಕೀಯಕ್ಕೆ ಧುಮುಕಿದ ಮೇಲೆ ತಮ್ಮಲ್ಲಿದ್ದ ಸಿಬ್ಬಂದಿಯನ್ನೆಲ್ಲ ಅನಿವಾರ್ಯವಾಗಿ ತೆಗೆಯಬೇಕಾಯಿತು. ಕೋರ್ಟು ಕೆಲಸ, ಲಾಯರ್ ಕೆಲಸ ಬಿಟ್ಟ ಮೇಲೆ ಕೆಲವು ಸಂದರ್ಭಗಳಲ್ಲಿ ಜೀವನಕ್ಕೆ ತೊಂದರೆಯಾಗುತ್ತಿತ್ತು. ಅಂಥ ಸಂದರ್ಭಗಳಲ್ಲೂ ಸಹ ನಾನು ಅವರನ್ನು ನೋಡಿದ್ದೇನೆ. ಅಂಥ ಒಂದು ಸಂದರ್ಭದಲ್ಲಿ ಒಬ್ಬರು ಇವರ ಬಳಿ ಬಂದು ಮನೆಯಲ್ಲಿ ಮುಂಜಿ ಮಾಡಬೇಕಾಗಿದೆ; ತಮ್ಮನ್ನು ನೋಡಿಕೊಂಡು ಹೋಗೋಣವೆಂದು ಬಂದೆ ಎಂದರು. ಶ್ರೀ ಭಾಷ್ಯಂರವರ ಮನೆಯಲ್ಲಿ ಅವರ ಸಿಬ್ಬಂದಿ ಇರಲಿಲ್ಲ. ಅಡಿಗೆಯವನನ್ನು ಇಟ್ಟುಕೊಳ್ಳುವುದಕ್ಕೂ ಸಾಧ್ಯವಿಲ್ಲದೆ ಹೋಟಲಿನಿಂದ ಊಟ ತರಿಸಿಕೊಳ್ಳುತ್ತಿದ್ದರು. ಅಂಥ ಸ್ಥಿತಿಯಲ್ಲೂ ಅವರು ಒಳಕ್ಕೆ ಹೋಗಿ ಹತ್ತು ರೂಪಾಯಿನ ಒಂದು ನೋಟನ್ನು ಒಂದು ಲಕೋಟೆಯಲ್ಲಿ ಹಾಕಿ ಬಂದಿದ್ದವರಿಗೆ ಕೊಟ್ಟು ತೆಗೆದುಕೊಳ್ಳಿ ಎಂದು ಬಹಳ ವಿನಯದಿಂದ ಹೇಳಿದರು. ಮನೆಯಲ್ಲಿ ಆಳನ್ನಿಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲದ ಕಾಲದಲ್ಲಿಯೂ 'ದೇಹಿ' ಎಂದು ಬಂದವರಿಗೆ 'ನಾಸ್ತಿ' ಎಂದು ಹೇಳಿ ವಾಪಸು ಕಳುಹಿಸುತ್ತಿರಲಿಲ್ಲ. ಅವರು ಬಹಳ ಉದಾರಿಗಳು. ಬಹಳ ಕಷ್ಟದಲ್ಲಿದ್ದವರನ್ನು ಕಂಡು ಮರುಗುತ್ತಿದ್ದರು. ಆ ದೃಷ್ಟಿಯಿಂದ ಕೂಲಿಗಾರರ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದು ಬಹಳ ಕಷ್ಟಪಟ್ಟಿದ್ದಾರೆ. ಶ್ರೀ ಭಾಷ್ಯಂ ಐಯ್ಯಂಗಾರ್‌ರವರಿಗೆ ಈ ಜಾತಿಯವರು, ಆ ಜಾತಿಯವರು, ಕೂಲಿಯವರು, ರೈತರು ಎಂಬ ಭೇದಭಾವವಿರಲಿಲ್ಲ. ಜನತೆಯ ಕಷ್ಟ ಪರಿಹಾರ ಮಾಡುವುದೇ ಅವರ ಧ್ಯೇಯವಾಗಿತ್ತು. ಕೆಲವು ತಿಂಗಳ ಹಿಂದೆ ನಾವೆಲ್ಲ 2500 ನೆ ಬುದ್ಧಜಯಂತಿಯನ್ನು ನೆರವೇರಿಸಿದೆವು. ಬುದ್ಧನು ತನ್ನ ಹಿಂದಿನ ಜನ್ಮ ಒಂದರಲ್ಲಿ ಬೋಧಿಸತ್ತ್ವನಾಗಿದ್ದಾಗ ತನ್ನ ಒಳ್ಳೆಯ ಜೀವನದಿಂದ ಸ್ವರ್ಗ ಪ್ರಾಪ್ತಿಯಾಯಿತು. ಅವರು ಸ್ವರ್ಗದ ಬಾಗಿಲಿಗೆ ಹೋದಾಗ ಯಾರೋ ರೋದನ ಮಾಡುವ ಶಬ್ದ ಕಿವಿಗೆ ಬತ್ತು. ಆ ಶಬ್ದವೇನೆಂದು ಕೇಳಲು ಭೂಲೋಕದಲ್ಲಿ ಯಾರೋ ರೋದನ ಮಾಡುತ್ತಿದ್ದಾರೆಂದು ತಿಳಿಯಿತು. ಕೂಡಲೇ ಅವನು 'ಭೂಲೋಕದಲ್ಲಿ ರೋದನ ಮಾಡುತ್ತಿದ್ದ ಮೇಲೆ, ಅವರ ಕಷ್ಟಗಳನ್ನು ಪರಿಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಸ್ವರ್ಗಕ್ಕೆ ಹೋಗದೆ ಭೂಲೋಕದಲ್ಲಿ ಜನ್ಮತಾಳಿದರು ಎಂದು ಹೇಳುತ್ತಾರೆ. ಹಾಗೆಯೇ ಶ್ರೀಮಾನ್ ಭಾಷ್ಯಂ ಅಯ್ಯಂಗಾರ್ಯರೂ ಸಹ ತಮ್ಮ ಸುಖಸಂತೋಷವನ್ನು ಬಿಟ್ಟು ಕಷ್ಟದಲ್ಲಿದ್ದವರನ್ನು ಆದರದಿಂದ ಪಾರು ಮಾಡಬೇಕು ಎನ್ನುವ ಸ್ವಭಾವದವರು.

ಶ್ರೀಮಾನ್ ಭಾಷ್ಯಂ ಐಯಂಗಾರ್ ಅವರನ್ನು ಬಂಡವಾಳಗಾರರು ತಮ್ಮ ಬುಟ್ಟಿಗೆ ಹಾಕಿಕೊಳ್ಳುವುದಕ್ಕೆ ಅನೇಕಸಾರಿ ಪ್ರಯತ್ನಸಿದ್ದಾರೆಂಬುದು ಕೆಲವರಿಗಾದರೂ ಗೊತ್ತಿರುವ ವಿಷಯ. ಸ್ವಲ್ಪ ಮನಸ್ಸು ಮಾಡಿದ್ದರೆ ಅವರು ಬಡತನದಲ್ಲಿರಬೇಕಾಗಿರಲಿಲ್ಲ. ಅದೇರೀತಿ ಸರ್ಕಾರದವರೂ ಸಹ ಕೆಲವುವೇಳೆ ಪ್ರಯತ್ನಗಳನ್ನು ಮಾಡಿದರು. ಶ್ರೀಮಾನ್ ಭಾಷ್ಯಂರವರು ಸ್ವಲ್ಪ ಮನಸ್ಸೋತಿದ್ದರೆ ಹೇಳದೆ ಕೇಳದೆ ಅವರಿಗೆ ಹೈಕೋರ್ಟ್ ನ್ಯಾಯಾಧೀಶರ ಪದವಿ ಸಿಕ್ಕುತ್ತಿತ್ತು. ನಾವುಗಳೆಲ್ಲರೂ ಅವರು ಈ ಪದವಿಯನ್ನು ಒಪ್ಪಿಕೊಳ್ಳುತ್ತಾರೆಯೋ ಏನೋ ಎಂಬ ಅನುಮಾನಪಡುತ್ತಿದ್ದ ಕಾಲವು ಇತ್ತು. ಆದರೆ ಭಾಷ್ಯಂರವರು "ಇಲ್ಲ, ನಾನು ಜನಗಳ ಪರವಾಗಿರುತ್ತೇನೆ. ಕಷ್ಟವನ್ನನುಭವಿಸುತ್ತೇನೆ. ಸಂಸ್ಥಾನದಲ್ಲಿ ಜನಗಳ ಸರ್ಕಾರವೇರ್ಪಾಡು ಮಾಡುತ್ತೇನೆ. ಅದಕ್ಕೋಸ್ಕರ ಎಂಥ ತ್ಯಾಗಬೇಕಾದರೂ ಮಾಡಬಲ್ಲೆ, ಎಂಥ ಕಷ್ಟ ಬೇಕಾದರೂ ಸಹಿಸಬಲ್ಲೆ" ಎಂದು ಹೇಳುತ್ತಿದ್ದರು.

ಶ್ರೀಮಾನ್ ಭಾಷ್ಯಂ ಅವರು ಮನೆಯನ್ನು ಬಿಟ್ಟು ರಾತ್ರಿವೇಳೆಯಲ್ಲಿ ಬೇರೆ ಕಡೆ ಇರುತ್ತಿರಲಿಲ್ಲ. ಅವರು ಎಲ್ಲಿದ್ದರೂಸಹ ರಾತ್ರಿವೇಳೆಗೆ ವಾಪಸಾಗುತ್ತಿದ್ದರು. ಗೌರಿಬಿದನೂರಿನಲ್ಲಿ ಕಾಂಗ್ರೆಸ್ ಅಧಿವೇಶನ ನಡೆದಾಗ ರಾತ್ರಿ 11—12 ಘಂಟೆಯಾದರೂ ಬೆಂಗಳೂರಿಗೆ ರಾತ್ರಿ ಪ್ರಯಾಣಮಾಡಿ ಪುನಃ ಮಾರನೆಯ ದಿನ ಬೆಳಿಗ್ಗೆ ಎಂಟು ಘಂಟೆಗೆ ಅಧಿವೇಶನಕ್ಕೆ ಬರುತ್ತಿದ್ದರು. ಹೀಗಿದ್ದವರು ಜೈಲಿನಿಂದ ಕರೆಬಂದಾಗ ದೇಶಕ್ಕೋಸ್ಕರ ಏನುತ್ಯಾಗಬೇಕಾದರೂ ಮಾಡುತ್ತೇನೆಂದು ಜೈಲಿಗೆ ಹೋಗುತ್ತಿದ್ದರು ಮತ್ತು ತಿಂಗಳುಗಟ್ಟಲೆ ಜೈಲಿನಲ್ಲಿರುತ್ತಿದ್ದರು. ಹೀಗೆ ಅವರು ಅನುಭವಿಸಿರತಕ್ಕ ಕಷ್ಟ, ಮಾಡಿರತಕ್ಕ ತ್ಯಾಗ, ದೇಶಕ್ಕೆ ಸಲ್ಲಿಸಿರತಕ್ಕ ಸೇವೆ ಮಹತ್ತರವಾದುವುಗಳು. ಅಂಥವರನ್ನು ಈ ದಿನ ನಾವು ನಮ್ಮ ಮಧ್ಯೆ ಇಟ್ಟುಕೊಳ್ಳುವಂಥ ಭಾಗ್ಯವನ್ನು ಪಡೆದುಕೊಂಡು ಬರಲಿಲ್ಲ. ಇದು ನಮ್ಮ ದುರಾದೃಷ್ಟವೆಂದುಕೊಳ್ಳಬೇಕು. ಭಗವಂತನು ಅವರ ಆತ್ಮಕ್ಕೆ ನೆಮ್ಮದಿಯನ್ನುಂಟುಮಾಡಲ, ಅವರ ಪತ್ನಿ ಶ್ರೀಮತಿ ಕಲ್ಯಾಣಮ್ಮನವರಿಗೆ ಉಂಟಾಗಿರುವ ದುಃಖವನ್ನು ಸಹಿಸುವ ಶಕ್ತಿಯನ್ನು ಕೊಡಲಿ. ಅವರ ಕುಟುಂಬವರ್ಗದವರಿಗೆ ಮತ್ತು ಅವರನ್ನು ಆಶ್ರಯಿಸಿದ್ದವರಿಗೆ ಸಮಾಧಾನವಾಗುವಂಥ ಮನಸ್ಸನ್ನು ಕೊಡಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri MULKA GOVINDA REDDY (Chitaldrug).—Mr. Speaker, Sir, I associate myself with the feelings and sentiments expressed by the Leader of the House and the Leader of the Opposition, about the loss that we have suffered in the death of Sri K. T. Bhashyam. Late Sri K. T. Bhashyam

(SRI MULKA GOVINDA REDDY.)

was a stalwart among patriots. He was not merely a labour leader but he was the leader of the people. For nearly a quarter of a century he suffered in the cause of freedom. He underwent trials and tribulations of which we should all be proud.

Sir, when he was a Minister, after 1947, he did yeoman service to the country. He was always a plain and outspoken man. He was a democrat to the core. He never had any pretensions. Whenever the Opposition made any criticism, he would take them sportingly and reply to such criticisms as a sportsman would. During his term of office as Chairman of the Legislative Council, he created a good number of healthy precedents. He always exercised judicious mind in giving rulings or making statements. Formerly, in the Legislative Council of India when late Sri Vittal Bhai Patel was the President of the Council, he was known for his independent rulings and judgment. After him, in Mysore, we had the good fortune of having a person of that type in Sri Bhashyam. Sir, the country has suffered an irrepairable loss in the death of Sri K. T. Bhashyam. I wholeheartedly welcome the suggestion made by Sri K. Hanumanthaiya that in memory of the services rendered by those two great men, their portraits might be unveiled—portrait of Sri K. T. Bhashyam in the Council Hall and that of Sri H. Siddaiya in the Assembly Hall. It would be a fitting tribute that the people of Mysore and especially the Legislature should pay to the memory of the departed souls. Thank you.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಸಭಾಪತಿಗಳೆ, ಇದುವರೆಗೆ ಮಾತನಾಡಿದಂಥ ಮಾನ್ಯ ಸದಸ್ಯರು ಶ್ರೀ ಕೆ. ಟಿ. ಭಾಷ್ಯಂ ಅವರ ಗುಣಗಾನ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಎರಡು ಮಾತಗಳನ್ನಾಡದೇ ಹೋದರೆ ಕರ್ತವ್ಯಲೋಪ ಮಾಡಿದಂತಾಗುತ್ತದೆ. ಏಕೆಂದರೆ ಶ್ರೀ ಭಾಷ್ಯಂ ಅವರಂತೆ ನಾನೂ ಸಹ ಬಹಳ ಕಾಲದಿಂದ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ ಮತ್ತು ಬೆಂಗಳೂರು ನಗರ ಜೀವನದಲ್ಲಿ ಹೊಂದಿಕೊಂಡು ನಾವು ಜೀವನ ನಡೆಸಿದ್ದೇವೆ. ಅಲ್ಲದೆ ನಾನು ಬೆಂಗಳೂರು ನಗರದಿಂದ ಚುನಾಯಿತನಾಗಿರುವುದರಿಂದ ಈಗ ಎರಡು ವಿಷಯಗಳನ್ನು ಹೇಳಬೇಕಾದದ್ದು ನನ್ನ ಕರ್ತವ್ಯವಾಗಿದೆ. ನಾನು ಮೊದಲು ಅವರನ್ನು ಸಂಧಿಸಿದ್ದು ಇಂಟರ್ಮೀಡಿಯೆಟ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ. ಅವರು 1937 ರಿಂದ 1940ನೆಯ ಇಸವಿಯವರೆಗೂ ಕಾಂಗ್ರೆಸ್ಸಿನಲ್ಲಿ ಉತ್ತಮ ಸೇವೆ ಗೈದಿದ್ದಾರೆ. ಅಂಥ ಕಷ್ಟ ಕಾಲದಲ್ಲಿ ಅವರು ಸಭೆಗಳಲ್ಲಿ ಭಾಗವಹಿಸಿ ಕಾಂಗ್ರೆಸ್ಸಿನ ಪ್ರತಿಭೆಯನ್ನು ಬೀರುತ್ತಿದ್ದರು ; ಎಷ್ಟೋ ಸಾರಿ ಅನೇಕ ಚರ್ಚಾಕೂಟಗಳಲ್ಲಿ ಭಾಗವಹಿಸಿದ್ದಾರೆ. ಉತ್ತಮ ರೀತಿಯಲ್ಲಿ ಕೆಲಸಮಾಡಿ ಉಜ್ವಲವಾದ ಭಾಷಣಮಾಡಿ ವಿದ್ಯಾರ್ಥಿ ವೃಂದವನ್ನು ತಮ್ಮ ಕಡೆಗೆ ಎಳೆದುಕೊಂಡು ಸರಿಯಾದ ಮಾರ್ಗದಲ್ಲಿ ಅವರು ಹೋಗುವಂತೆ ಮಾಡುತ್ತಿದ್ದರು. ಅಲ್ಲದೆ, ಶ್ರೀ ವೀರಣ್ಣ ಗೌಡರು ಹೇಳಿದಹಾಗೆ, ಕಾರ್ಮಿಕರಿಗೆ ಒಳ್ಳೆಯ ಸೇವೆ ಸಲ್ಲಿಸಿದ್ದಾರೆ. ಸುಮಾರು 25 ವರ್ಷಗಳ ಹಿಂದೆ ಕಾರ್ಮಿಕರಿಗೆ ನೆರವಾಗಿ ನಿಂತು ಅವರಿಗೆ ಬೆಂಬಲ ಕೊಟ್ಟು ಅವರ ಸಂಘಗಳ ಅಧ್ಯಕ್ಷತೆ ವಹಿಸಿ ಬಂಡವಾಳಗಾರರಿಗೂ ಕಾರ್ಮಿಕರಿಗೂ ಇರುವ ವಿವಾದಗಳನ್ನು ಹೋಗಲಾಡಿಸಿ ಅವರಲ್ಲಿ ಮಧುರ ಬಾಂಧವ್ಯವನ್ನುಂಟುಮಾಡಿ ಕಾರ್ಮಿಕರಿಗೆ ವಿಶೇಷ ಸಹಾಯ ಮಾಡಿದ್ದಾರೆ. ಬೆಂಗಳೂರು ನಗರದ ಕಾರ್ಮಿಕರಿಗೆ ವಿಶೇಷ ಬೆಂಬಲ ನೀಡಿದ್ದಾರೆಂದು ಹೇಳಬೇಕಾಗಿದೆ. ಈ ಸೇವೆಗಾಗಿ ಮುಖ್ಯವಾಗಿ ಬೆಂಗಳೂರು ಮತ್ತು ಕೆ. ಜಿ. ಎಫ್. ಕಾರ್ಮಿಕರು ಅವರಿಗೆ ಎಷ್ಟು ಕೃತಜ್ಞತೆ ಸೂಚಿಸಿದರೂ ಸಾಲದು, ಅವರು ಮನೆಯಲ್ಲೇ ಇರಲಿ, ಅಥವಾ ಆಫೀಸಿನಲ್ಲೇ ಇರಲಿ, ಅವರನ್ನು ಕಾಣಲು ಹೋಗುತ್ತಿದ್ದವರು ನಗುತ್ತಾ ಬರುತ್ತಿದ್ದರು ; ಯಾರು ಏನೇ ಕೇಳಲಿ ಆಗಲಿ, ಮಾಡುತ್ತೇನೆ ಎಂದು ಹೇಳುತ್ತಿದ್ದರು. ಅವರು ಮಾಡದಿದ್ದರೂ ಚಿಂತೆಯಿಲ್ಲ, ಬಂದವರನ್ನು ಗೌರವಿಸಿ ಕಾಫಿ ಕೊಟ್ಟು ಒಳ್ಳೆಯ ಮಾತುಗಳಿಂದ ಸಮಾಧಾನ ಪಡಿಸುತ್ತಿದ್ದುದರಿಂದ ಅವರನ್ನು ನೋಡಲು ಬಂದವರಿಗೆ ಬಹಳ ಸಂತೋಷವಾಗುತ್ತಿತ್ತು. ಅವರ ನಡೆನುಡಿ ಆದರ್ಶಪ್ರಾಯವಾಗಿತ್ತು. ಅವರು ಕಾಂಗ್ರೆಸ್ಸಿನ ಸೇವೆಯನ್ನು ಬಹಳವಾಗಿ ಮಾಡಿದ್ದಾರೆ. ಶ್ರೀ ವೀರಣ್ಣ ಗೌಡರು ಹೇಳಿದಹಾಗೆ, ಅವರು ದೊಡ್ಡ ಜಡ್ಜಿಗಳಾಗಬಹುದಾಗಿತ್ತು, ದೊಡ್ಡ ನೌಕರಿ ಮಾಡಬಹುದಾಗಿತ್ತು. ಅದಕ್ಕೆ ತಕ್ಕ ದಕ್ಷತೆ, ಯೋಗ್ಯತೆ ಅವರಲ್ಲಿದ್ದರೂ ಸಹ ಆ ಕಡೆಗೆ ಮನಸ್ಸು ಕೊಡದೆ ಪ್ರಜಾಸೇವೆ ಮಾಡಬೇಕೆಂಬ ಆಸೆಯಿಂದ ಆ ಕೆಲಸಮಾಡಿ ಭೂಷಣಪ್ರಾಯರಾಗಿದ್ದಾರೆ. ಅವರು ಗಣ್ಯರಾದ ವಕೀಲರಾಗಿ ವಕೀಲರ ಇಡೀ ಗುಂಪಿಗೇ ಮಾನ್ಯರಾಗಿದ್ದರು. ಅವರು ಕೇಸನ್ನು ನಡೆಸುವಾಗ ಯಾವ ರೀತಿಯಲ್ಲಿ ವಾದಮಾಡುತ್ತಾರೆಂಬುದನ್ನು ನೋಡಲು ಎಷ್ಟೋ ಜನ ಲಾಯರುಗಳು ತವಕಪಡುತ್ತಿದ್ದರು. ಆದರೆ ಕಾಂಗ್ರೆಸ್ ಚಳವಳಿಯಲ್ಲಿ ಭಾಗವಹಿಸಿದ್ದರಿಂದ ಸರ್ಕಾರದವರು ವಕೀಲವೃತ್ತಿ ನಡೆಸದಂತೆ ಸನ್ನದನ್ನು ಕಿತ್ತುಕೊಂಡರು. ಸ್ವರಾಜ್ಯ ಬಂದಮೇಲೆ ಸಹ ವಕೀಲವೃತ್ತಿಯನ್ನು ಮುಂದುವರಿಸಲು ಅವರು ಸನ್ನದನ್ನು ಕೊಡಿರೆಂದು ಕೇಳಿಕೊಳ್ಳಲಲ್ಲ, ಬೆಂಗಳೂರು ನಗರದಲ್ಲಿ ಅವರು ಗಣ್ಯವ್ಯಕ್ತಿಗಳಾಗಿದ್ದರು. ಕಾಂಗ್ರೆಸ್ ಅಧ್ಯಕ್ಷರಾಗಿ ಬಹಳ ವರ್ಷ ಸೇವೆಸಲ್ಲಿಸಿ ದೊಡ್ಡ ಚಳವಳಿ ನಡೆಸಿದಾಗ ಸಹಕಾರ ಮತ್ತು ಬೆಂಬಲ ನೀಡಿದರು. ಎಷ್ಟೋಸಲ ಜೈಲಿಗೆ ಹೋದರು. ಸ್ವಲ್ಪ ದಿವಸ ಅವರ ಜೊತೆಯಲ್ಲಿ ಜೈಲಿನಲ್ಲಿರುವುದಕ್ಕೆ ನನಗೂ ಸಹ ಅವಕಾಶ ಸಿಕ್ಕಿತ್ತು. ಅವರು ಮಾಡಿದ ತ್ಯಾಗ ಮತ್ತು ದೇಶಸೇವೆ ಎಷ್ಟು ಹೇಳಿದರೂ ತೀರದು. ಅವರು ನಾಗರಿಕರಿಗೆ, ಕಾರ್ಮಿಕರಿಗೆ ಮತ್ತು ಜನತೆಗೆ ಮಾಡಿರುವ ಅಪಾರಸೇವೆ ಒಂದು ಶತಮಾನವಾದರೂ ಕೂಡ ಮರೆಯುವ ಹಾಗಿಲ್ಲ. ಶ್ರೀ ಮುಲ್ಕಗೋವಿಂದರೆಡ್ಡಿಯವರು ಹೇಳಿದ ಹಾಗೆ

ಮತ್ತು ಶ್ರೀ ಕೆ. ಹನುಮಂತಯ್ಯನವರು ಹೇಳಿದಹಾಗೆ, ಶ್ರೀ ಎಚ್. ಸಿದ್ದಯ್ಯನವರ ಫೋಟೋವನ್ನು ಇಲ್ಲಿ ಅಸೆಂಬ್ಲಿ ಹಾಲಿನಲ್ಲಿಡುವುದೂ ಮತ್ತು ಶ್ರೀ ಭಾಷ್ಯಂ ಅವರ ಫೋಟೋವನ್ನು ಕೌನ್ಸಿಲ್ ಹಾಲಿನಲ್ಲಿಡುವುದೂ ಬಹಳ ಒಳ್ಳೆಯ ಕೆಲಸ, ಅದು ಸಾಧುವಾಗಿದೆ ಎಂದು ಹೇಳಿ, ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಸಭಾಪತಿಗಳಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri M. PALANIYAPPAN (Ulsoor).—Sir, I rise to associate myself with the sentiments expressed by the Leader of the House as well as with the sentiments expressed by other members of this House.

Sir, my association with Sri Bhashyam was though very short, even as a student I had connections with him. Many a time when the students took part in the freedom movement of our country, we used to go to his house and consult him on very many points. He used to talk to us kindly and greet us with smile and give us correct advice and wisdom. As a statesman he was a proper guide to us and he led us in the correct path. After he became the Minister and then as the Chairman of the Council he has displayed his wisdom and talent which the country knows.

He was a born leader and everybody would admire his leadership and would yield to his arguments if only they had occasion to listen to him. I was his great admirer and many a time I was afraid to go to him when there were some differences of opinion in the local politics. I think most of my friends would agree if I say that anybody who went to him and listened to him for five minutes, would be convinced by him and there would be no argument left to oppose him. That was a great quality in him. He had that excellent eloquence which had won him many friends in this country.

When we just turn the pages of his life, during the Mysore freedom struggle we find he has fought for the country and sacrificed for the ocuntry and lived and did his best for the country. In a fitting manner, as Sri K. Hanumanthaiya and other friends have suggested, it is necessary that we should unveil the portraits of these two great men-Sri Siddaiya and Sri K. T. Bhashyam of our country. The Bangalore Corporation District Committee is constructing a Memorial in honour of Sri K. T. Bhashyam, in Bangalore. Through you, Sir, I request the Government to contribute their mite by just granting a site or a piece of land anywhere in Bangalore to erect this Memorial as a token of remembrance for this great soul.

I once again express my deep sorrow and through you, I request the Leader to convey our sympathies to the bereaved family of Sri Bhashyam.

ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ದಿವಂಗತ ಶ್ರೀ ಕೆ. ಟಿ. ಭಾಷ್ಯಂ ಅವರು ಮೈಸೂರಿನಲ್ಲಿ ಜವಾಭ್ದಾರಿ ಸರ್ಕಾರ ಸ್ಥಾಪನೆಗೆ ಕಾರಣ ಕರ್ತರಾದಂಥ ಹಿರಿಯ ನಾಯಕರುಗಳಲ್ಲೊಬ್ಬರು. ಆದರೆ ಅವರ ಸೇವೆ ಕೇವಲ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಲ್ಲೇ ಕೊನೆಗೊಳ್ಳದೆ ಇಡೀ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದ ಬ್ರಿಟಿಷ್ ಭಾರತ ಪ್ರದೇಶದ ಜನತೆಯ ಸಂಪರ್ಕವನ್ನೂ ಹೊಂದಿತ್ತು. ಆದರೆ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಹೋರಾಟ ಹೂಡಲು ಕಾಲ ಒದಗಿದ್ದಾಗ ದೇಶದಲ್ಲಿ ಜನ ಜಾಗ್ರತಿಯನ್ನುಂಟು ಮಾಡತಕ್ಕ ಕಾರ್ಯಾಚರಣೆಯ ಹೊರೆಯು ಮೊಟ್ಟ ಮೊದಲನೆಯದಾಗಿ ಶ್ರೀ ಟಿ. ಸಿದ್ದಲಿಂಗಯ್ಯ, ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿ ಮತ್ತು ಶ್ರೀ ಕೆ. ಟಿ. ಭಾಷ್ಯಂ ಅವರಮೇಲೆ ಬಿತ್ತು. ಆಗ ಇವರು 'ಕೌನ್ಸಿಲ್ ಆಫ್ ಆಕ್ಷನ್' ಎಂಬ ಒಂದು ಸಭೆಯನ್ನು ಪ್ರಾರಂಭಮಾಡಿದರು. ನಮ್ಮ ದೇಶಕ್ಕೆ ಅಂದು ಈ ಪ್ರಜಾಪ್ರಭುತ್ವವೆನ್ನುವುದು ಇನ್ನೂ ಹೊಸದಾಗಿತ್ತು. ಅದಕ್ಕಾಗಿ ನಮ್ಮ ದೇಶದ ಜನರಲ್ಲಿ ರಾಜಕೀಯ ಜಾಗೃತಿ ಇನ್ನೂ ಬೆಳೆಯಬೇಕಾಗಿತ್ತು. ಅಂಥ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಶ್ರೀಯುತರು ಜನರಲ್ಲಿ ರಾಷ್ಟ್ರಪ್ರೇಮವನ್ನುಂಟುಮಾಡಿ, ಅವರನ್ನು ಸ್ವಾತಂತ್ರ ಚಳವಳಿಗಿಳಿಯಲು ಹುರಿದುಂಬಿಸುವ ಕಾರ್ಯದಲ್ಲಿ ಬಹಳವಾಗಿ ದುಡಿದಂಥವರಾಗಿದ್ದಾರೆ. ಅಂದು ದೇಶದಲ್ಲಿ ಜನ ಜಾಗೃತಿಯಿಲ್ಲದೆ ಇದ್ದುದರಿಂದ ಜನರಿಗೆ ಕವಿದಿದ್ದ ಅಂಧಕಾರವನ್ನು ಹೋಗಲಾಡಿಸಿ ಅವರಲ್ಲಿ ಹೊಸ ಕಳೆಯನ್ನು ತುಂಬತಕ್ಕಂಥದಿಟ್ಟನಾಯಕರುಗಳ ಅಗತ್ಯ ಬಹಳವಾಗಿತ್ತು.

ಹಾಗೆ ಅಂದು ನಾಯಕರಗಿದ್ದಂಥ ಕೊರತೆಯನ್ನು ಹೋಗಲಾಡಿಸಿದವರು ಶ್ರೀ ಕೆ. ಟಿ. ಭಾಷ್ಯಂ ಅವರು. ಅವರು ದೇಶದ ಸ್ವಾತಂತ್ರ್ಯ ಸಾಧನೆಗೆ ಸಲ್ಲಿಸಿದ ಸೇವೆ ಬಹಳ ಅಮೋಘವಾದುದು. ಕಾರ್ಮಿಕರು ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವಂತೆ ಮಾಡಿ ಕಾರ್ಮಿಕ ಚಳವಳಿಯ ಆಚಾರ್ಯರೆನಿಸಿಕೊಂಡರು. ಇವರು ಹೀಗೆ ದೇಶಕ್ಕೂ ಮತ್ತು ಕಾರ್ಮಿಕವರ್ಗಕ್ಕೂ ಸಲ್ಲಿಸಿದ ಸೇವೆಯ ಬಗ್ಗೆ ಒಂದೆರಡು ಮಾತುಗಳನ್ನಾಡುವುದು ನನ್ನ ಕರ್ತವ್ಯ. ಅದಕ್ಕಾಗಿ ನಾನೀಗ ಎರಡು ಮಾತುಗಳನ್ನಾಡ ಬಯಸುತ್ತೇನೆ.

ಆಗಿನ ಸನ್ನಿವೇಶದಲ್ಲಿ ಕಾರ್ಮಿಕರು ಕೆಲಸ ಮಾಡುವುದು ಬಹಳ ಕಠಿಣ ಪ್ರಸಂಗದಲ್ಲಿತ್ತು. ಅದೊಂದು ಕಾರ್ಮಿಕರ ಸುಲಿಗೆಯ ಕಾಲವೆಂದೇ ಹೇಳಬಹುದು. ಆಗ ಕಾರ್ಮಿಕ ವರ್ಗ

(ಶ್ರೀ ಬಿ. ಮಾಧವಾಚಾರ್).

ದಲ್ಲಿ ಸಂಘಟನಾ ಶಕ್ತಿಯಿರಲಿಲ್ಲ; ರಾಷ್ಟ್ರ ಪ್ರೇಮ ವಿರಲಿಲ್ಲ. ಅಂಥ ಕಠಿಣ ಸನ್ನಿವೇಶದಲ್ಲಿ ಶ್ರೀಯುತ ಭಾಷ್ಯಂ ಅವರು ಅವರಲ್ಲಿ ಸಂಘಟನಾ ಶಕ್ತಿ ಮತ್ತು ರಾಷ್ಟ್ರ ಪ್ರೇಮವನ್ನು ತುಂಬತಕ್ಕ ಮಹತ್ಕಾರ್ಯವನ್ನು ಕೈಗೊಂಡರು. ಕಾರ್ಮಿಕರ ಸಂಘಟನೆಯಲ್ಲಿ ಎಂಥ ಮಹತ್ವವಿದೆಯೆಂಬುದನ್ನು ಇವರು ಮೊದಲೇ ಕಂಡುಕೊಂಡಿದ್ದರು. 1947 ಮತ್ತು ಅದರ ಹಿಂದೆ 1942ರ ಚಳವಳಿಯಲ್ಲಿ ದೇಶದ ಸ್ವಾತಂತ್ರ್ಯದ ಬಗ್ಗೆ ಕಾರ್ಮಿಕರು ಭಾಗವಹಿಸುವಂತೆ ಶ್ರಮಿಸಿದ ಕೀರ್ತಿ ಭಾಷ್ಯಂ ಅವರಿಗೆ ಸೇರಿದ್ದು. ಅವರು ಕಾರ್ಮಿಕರ ಹಿತರಕ್ಷಣೆಗಳ ಬಗ್ಗೆ ಎಷ್ಟೋ ಸಾರಿ ಆಡಳಿತ ವರ್ಗದೊಡನೆ ಹೋರಾಟಗಳನ್ನು ಮಾಡಿದ್ದಾರೆ, ಸಂಧಾನಗಳನ್ನೂ ನಡೆಸಿದ್ದಾರೆ, ಆಡಳಿತವರ್ಗದವರೊಡನೆ ಎಷ್ಟು ವಿತರಣೆಯಿಂದ ವರ್ತಿಸುತ್ತಿದ್ದರೋ ಅಷ್ಟೇ ವಿತರಣೆಯಿಂದ ಈ ಬಡಕಾರ್ಮಿಕರ ಬಗ್ಗೆಯೂ ವರ್ತಿಸುತ್ತಿದ್ದರು. ಈ ದಿವಸ ನಾವುಗಳು ಆ ಪಾರ್ಲಿಯಮೆಂಟಿನಲ್ಲಿ ಈ ಕಾರ್ಮಿಕರ ಹಿತರಕ್ಷಣೆಯ ಬಗ್ಗೆ ಏನೊಂದು ಶಾಸನ ರಚಿತವಾಗುತ್ತಿದೆಯೆಂದು ಕೇಳುತ್ತಿದ್ದೇವೆಯೋ ಅದನ್ನು ಇವರೇ ಮೊದಲೇ ಪ್ರಚಾರಕ್ಕೆ ತಂದಿದ್ದರು. ಜನರಲ್ಲಿ ಅನ್ಯಥಾ ಉದ್ರೇಕವನ್ನು ಹುರಿದುಂಬಿಸಿ ಅವರನ್ನು ಕಾರ್ಯರಂಗಕ್ಕಿಳಿಯಬೇಕೆಂಬ ಭಾವನೆ ಇವರಲ್ಲಿರಲಿಲ್ಲ. ಆದರೆ ಆ ಜನರಿಗೆಲ್ಲ ನೈಜವಾದ ರೀತಿಯಲ್ಲೇ ದೇಶಪ್ರೇಮ ಉಂಟಾಗುವಂತೆ ಇವರು ಕೈಗೊಂಡ ಪಾತ್ರ ಮತ್ತು ಹೊಣೆಗಾರಿಕೆ ಚಿರಸ್ಮರಣೀಯವಾದವುಗಳು. ಆ ಕಾರ್ಮಿಕರ ಪ್ರೇಮ-ಪ್ರೀತಿ ಸದಾ ಇವರ ಮೇಲೆ ಇರುವ ಹಾಗೆ ಇವರೊಂದು ಆದರ್ಶ ಜೀವನ ನಡೆಸಿರುತ್ತಾರೆ. ಇವರ ಮಾತುಗಳಲ್ಲಿ ಕಾರ್ಮಿಕ ವರ್ಗಕ್ಕೆ ಬಹಳ ಅಭಿಮಾನವಿತ್ತು; ಪ್ರೇಮವಿತ್ತು. ಇವರು ಬಿನ್ನಿ ಕಂಪೆನಿಯ ಕೆಲಸಗಾರರ ಸಂಘಕ್ಕೆ ಅಧ್ಯಕ್ಷರಾಗಿದ್ದರೂ ಸಹ ಇವರು ಭದ್ರಾವತಿ ಕಾರ್ಖಾನೆಯ ಕೆಲಸಗಾರರ ಸಂಪರ್ಕವನ್ನೂ ಕೂಡ ಇಟ್ಟುಕೊಂಡಿದ್ದರು. ಆ ಭದ್ರಾವತಿ ಕಾರ್ಮಿಕರ ವಿಚಾರದಲ್ಲಿ ಇವರಿಗೆ ತಿಳಿದಿದ್ದ ವಿಷಯಗಳನ್ನು ಹೇಳಲು ಅವರ ಬಗ್ಗೆ ಸಾಕ್ಷ್ಯವನ್ನು ನುಡಿಯುವುದಕ್ಕೂ ಕೂಡ ಅನೇಕ ಸಾರಿ ಬಂದಿದ್ದಾರೆ. ಕಾರ್ಮಿಕರಿಗೆ ನೆರವನ್ನು ನೀಡಬೇಕೆಂಬ ಭಾವನೆ ಅವರಲ್ಲಿ ಬಹಳವಾಗಿತ್ತು. ದಲಿತ-ವರ್ಗದ ದುಡಿಮೆಗಾರರ ಬಗ್ಗೆ ಅವರಿಗೆ ಅಪಾರ ಕರುಣೆಯಿತ್ತು; ದಯೆಯಿತ್ತು. ಅವರ ಏಳಿಗೆಗಾಗಿ ತುಂಬ ಸಾಧನೆ ಮಾಡಿರುತ್ತಾರೆ. ಮಹಾತ್ಮಗಾಂಧಿಯವರ ಅಹಿಂಸೆ ಮತ್ತು ಪ್ರೀತಿಗಳನ್ನೊಳಗೊಂಡ ತತ್ವ ಮತ್ತು ಸಿದ್ಧಾಂತಗಳೇನಿದ್ದವೋ ಅವುಗಳ ತಳಹದಿಯ ಮೇಲೆ ಇವರು ತಮ್ಮ ಪಾತ್ರವನ್ನು ನಡೆಸಿಕೊಂಡು ಬಂದಿದ್ದಾರೆ. ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಿ ಇವರು ಆಡಳಿತಕ್ಕೆ ಬಂದಮೇಲೆ ಈ ಕಾರ್ಮಿಕರಿಗೆ ಅನೇಕ ಸೌಲಭ್ಯಗಳು ದೊರೆತವು. ಕಾರ್ಮಿಕರ ವ್ಯವಹಾರಗಳ ಬಗ್ಗೆ ಬೇಗ ತೀರ್ಮಾನ ಕೊಡಲು ಅನುಕೂಲವಾಗುವಂತೆ ಪಂಚಾಯಿತರು ಸೇರಿ ತೀರ್ಮಾನ ಮಾಡುವಂಥ ಒಂದು ಹೊಸ ವಿಧಾನವನ್ನು ಜಾರಿಗೆ ತಂದರು. ಎಂಥ ಭಿನ್ನಾಭಿಪ್ರಾಯಗಳು ಬಂದರೂ ಅವು ಶ್ರೀ ಕೆ. ಟಿ. ಭಾಷ್ಯಂಅವರ ಸಮ್ಮುಖದಲ್ಲಿ ಶೀಘ್ರವಾಗಿ ತೀರ್ಮಾನವಾಗುತ್ತವೆಂಬ ಭರವಸೆ ಆ ಜನರೆಲ್ಲರಲ್ಲೂ ಇತ್ತು. ಇನ್ನಿಂಥ ಮುಖಂಡರನ್ನು ದೇಶ ಪಡೆಯಬೇಕಾದರೆ ಬಹಳ ಕಷ್ಟ. ಶ್ರೀ ಭಾಷ್ಯಂಅವರ ನಿಧನದಿಂದ ಸಂಸ್ಥಾನದ ಇಡೀ ಕಾರ್ಮಿಕ ವರ್ಗಕ್ಕೆ ತುಂಬ ಹಿಡಿಸಲಾರದಷ್ಟು ದುಃಖ ಉಂಟಾಗಿದೆ. ಇಂಥ ನಷ್ಟವನ್ನು ಸರಿಗಟ್ಟಿಕೊಳ್ಳಲು ಇಂಥ ಮತ್ತೊಬ್ಬ ನಾಯಕರ ಬರವಿಗಾಗಿ ಅನೇಕ ವರ್ಷಗಳ ಕಾಲ ಕಾಯಬೇಕಾದಂಥ ಪರಿಸ್ಥಿತಿ ಉಂಟಾಗಿದೆ. ಭಗವಂತನು ಇವರ ಆತ್ಮಕ್ಕೆ ಸದ್ಗತಿಯನ್ನುಂಟುಮಾಡಲಿ. ಇವರ ಭಾವಚಿತ್ರ ಸದಾ ನಮ್ಮ ಮುಂದಿರುವಂತೆ ಮಾಡೋಣ. ಮಹಾತ್ಮ ಗಾಂಧಿಯವರು ಹಾಕಿಕೊಟ್ಟಿರುವ ಅಹಿಂಸೆ, ದಯೆ, ಕರುಣೆ ಮತ್ತು ಸಂಘಟನೆ ಈ ಸಿದ್ಧಾಂತಗಳ ತಳಹದಿಯ ಮೇಲೆ ನಮ್ಮೆಲ್ಲರಿಗೂ ಒಂದು ಸ್ಫೂರ್ತಿಯನ್ನುಂಟುಮಾಡಲು ಅವರ ಭಾವಚಿತ್ರ ನಮ್ಮ ಎದುರಿಗಿದ್ದರೆ ಬಹಳ ಒಳ್ಳೆಯದಾಗುತ್ತದೆಂದು ಇಷ್ಟು ಮಾತುಗಳನ್ನು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು)—ಸ್ವಾಮಿ, ದಿವಂಗತ ಶ್ರೀ ಭಾಷ್ಯಂಅವರು ನಮ್ಮ ಮೈಸೂರು ಸಂಸ್ಥಾನ ಒಂದೇ ಏಕೆ ಅವರು ಇಡೀ ಇಂಡಿಯಾ ದೇಶಕ್ಕೇ ಒಬ್ಬ ದೊಡ್ಡ ವ್ಯಕ್ತಿಯಾಗಿದ್ದರು. ಅವರು ಅಷ್ಟು ಬುದ್ಧಿವಂತರೂ ಮತ್ತು ಚತುರರೂ ಆಗಿದ್ದರು. ದಿವಂಗತರಾಗಿರುವ ಶ್ರೀ ಭಾಷ್ಯಂ ಅವರು ನಮ್ಮ ದೇಶಕ್ಕೇ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. 1939ನೆಯ ಇಸವಿಯಲ್ಲಿ ನನಗೆ ಅವರ ಪರಿಚಯವಾಯಿತು. ನಾನು ಆಗಿನಿಂದಲೂ ಬೆಂಗಳೂರಿಗೆ ಆಗಾಗ್ಗೆ ಬಂದು ಹೋಗುತ್ತಿದ್ದಾಗಲೆಲ್ಲಾ ಅವರನ್ನು ಕಂಡು ಮಾತನಾಡಿಸದೆ ಎಂದೂ ಹಾಗೇಯೇ ಹೋಗುತ್ತಿರಲಿಲ್ಲ. ನನ್ನದೊಂದು ಪದ್ಧತಿ ಇದು. ಅವರ ಮಾತಿನಲ್ಲಿ ಅಂಥ ನಯ, ಮಧುರ ಇತ್ತು. ಅವರು ಗುಣಶಾಲಿಗಳಾಗಿಯೂ ಇದ್ದರು. 1948 ರಲ್ಲಿ ನಾನೂ ಮತ್ತು ನನ್ನ ಸ್ನೇಹಿತರೂ ಜೈಲಿಗೆ ಬಂದಾಗ ಜೈಲು ಒಳಗಡೆ ನಮ್ಮನ್ನು ಶ್ರೀ ಭಾಷ್ಯಂ ಅವರ ಮತ್ತು ದಿವಂಗತ ಶ್ರೀಯುತ ಸಿದ್ದಯ್ಯನವರ ಭೇಟಿ ಬೆಳಿಗ್ಗೆ 9-30 ಘಂಟೆಗೆ ಜೈಲಿನ ಬಾಗಿಲನಲ್ಲಿ ಆಗುತ್ತಿತ್ತು. ಆಗ ನನ್ನನ್ನು ಪೋಲೀಸರು ಜೈಲಿನಲ್ಲಿದ್ದ ಹದಿನಾಲ್ಕನೆಯ ನಂಬರು ಕೋಣೆಯಲ್ಲಿಟ್ಟಿದ್ದರು. ಒಂದು ದಿವಸ ಸುಮಾರು ಹತ್ತು ಗಂಟೆಯ ಹೊತ್ತಿಗೆ ಸರಿಯಾಗಿ ಊಟಕ್ಕೆ ತಂದರು. ನಮಗೆ ಊಟ ಮಾಡಲು ಆಗ ಕೊಡುತ್ತಿದ್ದುದು ಮಣ್ಣಿನ ಪಾತ್ರೆ. ಅದನ್ನು ನೋಡಿದ ಕೂಡಲೇ ಶ್ರೀ ದಿವಂಗತ ಭಾಷ್ಯಂಅವರೂ ಶ್ರೀ ದಿವಂಗತ ಸಿದ್ದಯ್ಯನವರೂ "ಶ್ರೀ ಚಂದ್ರಶೇಖರಯ್ಯನವರಿಗೆ ಊಟ ಮಾಡಲು ಸುವರ್ಣ ಪಾತ್ರೆಯನ್ನು ಕೊಟ್ಟಿದ್ದಾರೆ" ಎಂದು ಹಾಸ್ಯಮಾಡಿ ಹೇಳಿದ್ದರು. ಆ ವಿಚಾರ ಈಗಲೂ ನನಗೆ ಜ್ಞಾಪಕದಲ್ಲಿದ್ದೇ ಇದೆ. ಯಾವಾಗ್ಲೂ ಅವರದು ನಗು ಮುಖ. ಸ್ವಾತಂತ್ರ ಚಳವಳಿಯ ಬಗ್ಗೆ ಹಿಂದಿದ್ದ ಸರ್ಕಾರದ ಆಕ್ಷೇಪಣೆ ಬಲವಾಗಿತ್ತು. ಅಂಥ ಕಾಲದಲ್ಲಿ ನಮ್ಮ ಅಜ್ಜಂಪುರದಲ್ಲಿ ಎಂ. ಪಿ. ಸಿ. ಸಿ. ಕಾಂಗ್ರೆಸ್ ಅಧಿವೇಶನ ಜರುಗಿತು. ಅಂದಿನ ಸಭೆಗೆ ಶ್ರೀಯುತ ಭಾಷ್ಯಂಅವರೇ ಅಧ್ಯಕ್ಷರು. ಅದೇ ಕಾಲಕ್ಕೆ ಸರಿಯಾಗಿ ಸರ್ ಮಿರ್ಜಾರವರು ತಮ್ಮ ಉತ್ತರ ದೇಶದ ಪ್ರವಾಸವನ್ನು ಮುಗಿಸಿಕೊಂಡು ಆ ಮಾರ್ಗದಲ್ಲಿ ಬರತಕ್ಕವರಾಗಿದ್ದರು. ಆ ದಿವಸ ಅಲ್ಲಿ ಮಾಡಿದ್ದಂಥ ವಿಜ್ರಂಭಣೆ ಮತ್ತು ವೈಭವಗಳನ್ನು ಮೈಸೂರು ದೇಶದಲ್ಲಿ ಮತ್ತೆಲ್ಲಿಯೂ ಮಾಡಿರಲಿಲ್ಲ. ಅಷ್ಟು ಚೆನ್ನಾಗಿ ಅಲಂಕಾರ ಮಾಡಿದ್ದರು. ಕಡೂರು ಜಿಲ್ಲೆಗೆ ಮಾರನೆ ದಿವಸ ಬೆಳಿಗ್ಗೆ ಅಧ್ಯಕ್ಷರು ದಯಮಾಡಿಸಬೇಕಾಗಿತ್ತು. ಅಲ್ಲಿನ ವೈಭವವನ್ನೂ ದೀಪಾಲಂಕಾರವನ್ನೂ ನೋಡಿ ಮಿರ್ಜಾ ಸಾಹೇಬರು ಬೆಂಗಳೂರಿಗೆ ಬಂದ ತಕ್ಷಣ ಒಂದು ಪ್ರತಿಬಂಧಕಾಜ್ಞೆಯನ್ನು ಹಾಕಿಸಿದರು. ಶ್ರೀಮಾನ್ ಇಸ್ಮಾಯಿಲ್ ಷರೀಫ್

ಅವರು ಜಿಲ್ಲಾಧಿಕಾರಿಗಳಾಗಿದ್ದರು. ಅಲ್ಲಿ ನಡೆಯಬೇಕಾಗಿದ್ದ ಸಮಾರಂಭಕ್ಕಾಗಿ ಸುಮಾರು 20-25 ಸಹಸ್ರ ಜನ ಸೇರಿದ್ದರು. ಅಧ್ಯಕ್ಷರು ಮೆರವಣಿಗೆ ಹೊರಡಬೇಕಾಗಿದ್ದ ಕಾಲದಲ್ಲಿ ಸರ್ಕಾರದವರು ಕಳುಹಿಸಿದ್ದ ಹುಕುಮನ್ನು ಒಬ್ಬರು ಪೋಲೀಸ್ ಇನ್ಸ್‌ಪೆಕ್ಟರು ಜಾರಿ ಮಾಡಲು ತಂದರು. ಅಧ್ಯಕ್ಷರು ರಥವನ್ನು ಹತ್ತಲು ಬಂದಾಗ ಅದನ್ನು ಅವರು ಜಾರಿಮಾಡಿ ಮೆರವಣಿಗೆಯಾಗಕೂಡದು, ಮೀಟಿಂಗ್ ನಡೆಯಕೂಡದು ಎಂದು ತಿಳಿಸಿದರು. ಆಗ ಅಲ್ಲಿ ನೆರೆದಿದ್ದ 20-25 ಸಾವಿರ ಜನರೂ ಉದ್ರಿಕ್ತರಾಗಿ ಸರ್ಕಾರದ ಅಧಿಕಾರಿಗಳ ಮೇಲೆ ಬೀಳತಕ್ಕ ಪರಿಸ್ಥಿತಿಯಲ್ಲಿ ಚತುರತೆಯಿಂದ ಮತ್ತು ಬುದ್ಧಿವಂತಿಕೆಯಿಂದ ಶ್ರೀಮಾನ್ ಭಾಷ್ಯಂ ಅವರು ಅವರನ್ನೆಲ್ಲ ಪೆಂಡಾಲಿಗೆ ಕರೆದುಕೊಂಡು ಬಂದರು. ಅಜ್ಜಂಪುರ ಮತ್ತು ಅದರ ಮೂರು ಮೈಲಿ ಸುತ್ತಳತೆಯಲ್ಲಿ ಎಲ್ಲಿಯೂ ಕೂಡ ಮೆರವಣಿಗೆ ಮತ್ತು ಸಭೆಗಳನ್ನು ನಡೆಸಕೂಡದೆಂದು ಆಜ್ಞೆಯನ್ನು ಜಾರಿ ಮಾಡಿದ್ದರು. ಅಲ್ಲದೆ ಆಗ ಗೌರಿಪುರ ಎಂಬ ಗ್ರಾಮದಲ್ಲಿ ಇಲಿ ಬಿದ್ದಿದೆ ಎಂದೂ ಆ ಪ್ರದೇಶದಲ್ಲಿ ಪ್ಲೇಗು ಜಾಡ್ಯವಿದೆ ಎಂದೂ ಪೋಲೀಸು ಇನ್ಸ್‌ಪೆಕ್ಟರು ವರದಿ ಮಾಡಿದರು. ಆ ಗ್ರಾಮದಲ್ಲಿ ಈ ರೀತಿ ಇಲ್ಲದೆ ಇದ್ದರೂ ಸಹ ಪೋಲೀಸ್ ಅಧಿಕಾರಿಗಳು ಒಂದು ಸತ್ತ ಇಲಿಯನ್ನೂ ಅಲ್ಲಿ ಹಾಕಿ ಒಂದು ವರದಿಯನ್ನೂ ಕಳುಹಿಸಿದರು. ಆ ರಿಕಾರ್ಡು ಸರ್ಕಾರದಲ್ಲಿರಬಹುದು. ಈ ರೀತಿ ಆಜ್ಞೆ ಜಾರಿಯಲ್ಲಿದ್ದಾಗ ಶ್ರೀಮಾನ್ ಭಾಷ್ಯಂ ಅವರು ಎಲ್ಲ ಕಾಂಗ್ರೆಸ್ ನಾಯಕರನ್ನೂ—ಈಗಿರತಕ್ಕ ಎಲ್ಲ ನಾಯಕರೂ ಇದ್ದರು—ಸೇರಿಸಿ ಸಮಾಲೋಚನೆ ನಡೆಸಿ ರಾತ್ರಿ 12 ಘಂಟೆಯಲ್ಲಿ ಅಜ್ಜಂಪುರದಿಂದ ಮೂರನೆಯ ಮೈಲಿಯ ಪಕ್ಕದಲ್ಲಿರುವ ಒಂದು ಗ್ರಾಮಕ್ಕೆ ಹೋಗಿ ಅಲ್ಲಿ ಒಬ್ಬರ ಜಮೀನನ್ನು ತಮ್ಮ ಸ್ವಾಧೀನಕ್ಕೆ ಬರೆಸಿಕೊಂಡು ಅಲ್ಲಿ ಸಭೆಯನ್ನು ನಡೆಸಲು ಏರ್ಪಾಡು ಮಾಡಿದರು. ಆ ಸ್ಥಳದಲ್ಲಿ ಹಿಂದೆಂದೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸೇರದೆ ಇದ್ದಷ್ಟು ಜನ ಸೇರಿದ್ದರು. 25 ಸಹಸ್ರಕ್ಕೆ ಮೇಲ್ಪಟ್ಟು ಜನ ಸೇರಿದ್ದರು. ದಿವಂಗತ ಭಾಷ್ಯಂ ಐಯ್ಯಂಗಾರ್ಯರೂ ಮತ್ತು ಸಿದ್ದಯ್ಯನವರೂ ಆಗಿನ ಸರ್ಕಾರದವರು ಹಾಕಿದ್ದ ಪ್ರತಿಬಂಧಕಾಜ್ಞೆಯನ್ನು ಬಹಳ ಯುಕ್ತಿಯಿಂದ ಎದುರಿಸಿದರು. ಸಭೆ ನಡೆದ ಸ್ಥಳಕ್ಕೆ ವಿಜಯ ಮೈತ್ರಿದಾನವೆಂದು ಹೆಸರು ಕರೆದು, ನಮ್ಮ ಜಿಲ್ಲೆಗೆ ಒಂದು ಕೀರ್ತಿಯನ್ನೂ ತಂದು ಕೊಟ್ಟಿದ್ದಾರೆ. ಮತ್ತೊಂದು ವಿಷಯ ಜ್ಞಾಪಕ್ಕೆ ಬರುತ್ತದೆ. ಏನೆಂದರೆ ಶ್ರೀಮಾನ್ ಭಾಷ್ಯಂ ಐಯ್ಯಂಗಾರ್ ಅವರು ಕಾಂಗ್ರೆಸ್ ಮಂತ್ರಿಗಳಾದ ಮೇಲೆ ಪ್ರಥಮತಃ ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ, ಈಗಲೂ ಜ್ಞಾಪಕ ಬರುವಂಥ ಒಂದು ಕಾರ್ಯವನ್ನೂ ಮಾಡಿದರು. ಏನೆಂದರೆ ಒಂದು ಕಡೂರ್ ತಾಲ್ಲೂಕು ನಿಡಘಟ್ಟ ಎಂಬ ಗ್ರಾಮದಲ್ಲಿ ಆ ಗ್ರಾಮಸ್ಥರು ಕಟ್ಟಿಸಿದ ಹೊಸ ದೇವಸ್ಥಾನದ ಕಟ್ಟಡದಲ್ಲಿ ಮಹಾತ್ಮಾ ಗಾಂಧಿಯವರ ಪ್ರತಿಮೆಯೊಂದನ್ನು ಪ್ರತಿಷ್ಠೆ ಮಾಡಿದರು. ಈಗಲೂ ಸಹ ಅಲ್ಲಿ ಆ ಪ್ರತಿಮೆಗೆ ಪೂಜೆ ವಗೈರೆಗಳು ನಡೆಯುತ್ತಿವೆ. ನಮ್ಮ ತಾಲ್ಲೂಕು ಜನ ಅದರಲ್ಲಿಯೂ ನಮ್ಮ ಅಕ್ಕಪಕ್ಕದ ಜನ ಶ್ರೀ ಭಾಷ್ಯಂ ಐಯ್ಯಂಗಾರ್ ರವರನ್ನೂ ಯಾವಾಗಲೂ ಮರೆಯುವ ಹಾಗಿಲ್ಲ. ಅಂಥ ಕಾರ್ಯವನ್ನು ಅವರು ನಮ್ಮಲ್ಲಿ ಮಾಡಿದ್ದಾರೆ.

ಇನ್ನೊಂದು ಉದಾಹರಣೆ ಕೊಡುತ್ತೇನೆ. ನಮ್ಮ ಕಾಂಗ್ರೆಸ್ ಮುಖಂಡರಾಗಿದ್ದವರ ಲಾಯರ್ ಸನ್ನದುಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಸರ್ಕಾರದವರು ಒಂದುಸಲ ತೀರ್ಮಾನ ಮಾಡಿದ ಸಂದರ್ಭದಲ್ಲಿ, ಕಾಂಗ್ರೆಸ್ ಮುಖಂಡರು ತಾನೇ ಸನ್ನದುಗಳನ್ನು ವಾಪಸು ಕೊಡುತ್ತೇವೆಂದರು. ಶ್ರೀಮಾನ್ ಸಿದ್ದಯ್ಯನವರೂ ಮತ್ತು ಭಾಷ್ಯಂ ಐಯ್ಯಂಗಾರ್ಯರೂ ಸೇರಿದ್ದು ಒಂದು ದಿವಸ ರಾತ್ರಿ ಕೋಲಾರಕ್ಕೆ ಹೋಗಿ ಶ್ರೀಮಾನ್ ಪಟ್ಟಾಭಿರಾಮನ್‌ರವರನ್ನೂ ಕರೆದುಕೊಂಡು ಬರುವಂತೆ ಹೇಳಿ ನನ್ನನ್ನು ಕೋಲಾರಕ್ಕೆ ಕಳುಹಿಸಿದರು. ನಾನು ಹೋಗಿ ಶ್ರೀ ಪಟ್ಟಾಭಿರಾಮನ್ ಅವರನ್ನೂ ಇಲ್ಲಿಗೆ ಅಂದರೆ ಬೆಂಗಳೂರಿಗೆ ಕರೆದುಕೊಂಡು ಬಂದೆ. ಶ್ರೀಮಾನ್ ಭಾಷ್ಯಂ ಐಯ್ಯಂಗಾರ್ ಅವರೂ ಮತ್ತು ಸಿದ್ದಯ್ಯನವರೂ ಒಳ್ಳೆಯ ದೇಶಸೇವಕರಾಗಿದ್ದರು. ಅಂಥ ಸೇವೆ ಮಾಡಿರತಕ್ಕ ಉನ್ನತ ಧ್ಯೇಯವಿರತಕ್ಕ ಮತ್ತು ನಮ್ಮ ಸಂಸ್ಥಾನಕ್ಕೆ ಜವಾಬ್ದಾರಿ ಸರ್ಕಾರವನ್ನು ಎಂದರೆ 21 ವರ್ಷ ವಯಸ್ಸಾದವರಿಗೆಲ್ಲ ಮತದಾನ ಕೊಡತಕ್ಕ ಹಕ್ಕನ್ನು ಒದಗಿಸಿಕೊಟ್ಟು ಪ್ರಜಾ ಸರ್ಕಾರವನ್ನು ಸ್ಥಾಪನೆ ಮಾಡಿದವರ ಪೈಕಿ ಈ ಮಹನೀಯರಿಬ್ಬರೂ ದಿವಂಗತರಾದುದರಿಂದ ದೇಶಕ್ಕೆ ಅಪಾರವಾದ ನಷ್ಟವುಂಟಾಗಿದೆ. ಇಷ್ಟರಲ್ಲಿಯೇ ಕನ್ನಡ ಪ್ರಾಂತಗಳೆಲ್ಲ ಒಂದಾಗಿ ವಿಶಾಲ ಮೈಸೂರಿಗೆ ಬೆಂಗಳೂರು ನಗರವೇ ಮುಖ್ಯ ಪಟ್ಟಣ ಮತ್ತು ರಾಜಧಾನಿಯಾಗಿರುತ್ತದೆ. ಆದುದರಿಂದ ಈ ಪಟ್ಟಣದ ಮುಖ್ಯವಾದ ಪ್ರದೇಶದಲ್ಲಿ ದಿವಂಗತರಾದ ಸಿದ್ದಯ್ಯನವರ ಮತ್ತು ಭಾಷ್ಯಂ ಐಯ್ಯಂಗಾರ್ ಅವರ ಪ್ರತಿಮೆಗಳನ್ನು ಸ್ಥಾಪನೆ ಮಾಡುವುದು ಸೂಕ್ತವೆನ್ನುವುದು ನನ್ನ ಅಭಿಪ್ರಾಯ. ಪರಮಾತ್ಮನು ದಿವಂಗತ ಭಾಷ್ಯಂ ಐಯ್ಯಂಗಾರ್ ರವರ ಕುಟುಂಬವರ್ಗದವರಿಗೆ ಅವರ ವಿಯೋಗದಿಂದ ಉಂಟಾಗಿರುವ ದುಃಖವನ್ನು ಸಹಿಸುವುದಕ್ಕೆ ಶಕ್ತಿಯನ್ನು ಕೊಡಲಿ, ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—I wish to associate myself with the feelings of sorrow expressed by the Leader of the House and other members who have spoken on the resolution. Shri Bhashyam has been so much and so long associated with the affairs of the State in one capacity or the other that it is unnecessary to detail the several activities with which he was associated. He was one of the earliest among the leaders in Mysore who fought for the rights of the people and for a democratic set up of administration. At a time when even indirect association meant imprisonment and an almost ostracism, he was one of the first to enter into the fray. When the party to which he belonged entered the Legislature, Shri Bhashyam was one of the earliest to be elected and he became an acknowledged leader of the party. He was arrested a number of times and as a result of this he underwent great hardship and suffering.

In 1940 he was elected as the President of the Mysore Congress and

(MR. SPEAKER.)

when the first Popular Ministry was established in Mysore in 1947, he was an automatic choice as Minister. But his association with politics was not the only phase of his varied activities. He was connected with the labour movement from its inception and was the President of the Mysore State Labour Association for a long time. His first love, *viz.*, law, continued to occupy his interest till the very last; and his book on Women in Hindu Law published in 1928 marked a very great advance on the then existing notions about Women's rights and resulted in the setting up of a Committee which recommended enlarged rights to women, subsequently implemented by legislation. Latterly, his main interest was with Parliamentary practices and traditions. His choice as the first Chairman of the Legislative Council established under the Constitution was an unanimous one. During the four-and-a-half years that he guided the deliberations of the other House, various points arose for decisions which were the first of their kind in Mysore because it was for the first time that the Legislatures in India worked on lines analogous to the Parliament of England. His rulings during this period are marked by erudition and a deep insight into the working of Parliamentary practices. He was guided not merely by the letter of the law but always by the spirit underlying it. Often he believed that rules were not masters but servants, and it was the duty of the Presiding Officer to control the deliberations in the best interests of the House and the members who composed it. I think, his successor, however eminent he may be, will find it a difficult task to emulate or come up to his level.

Speaking personally, my acquaintance with him began even while I was a student. Then my relationship with him was in the nature of a client and a lawyer. Some persons scolded me for having entrusted a case to him because he had joined the Congress Party which opposed the then existing Government. But he won the case. Whenever I used to meet him he used to advise me that I should love my country more than other things in the world.

After I became the Speaker, my association with him has been extremely cordial. Since we have a common Secretariat, the Chairman and the Speaker form a Board and I may state that there has not been a single instance where differing views have been expressed as between us. In his death, I have lost a friend and a colleague.

I will now put the resolution to vote and request Hon'ble Members to pass it after standing in silence for two minutes.

The question is:

"That this House do stand adjourned as a mark of respect to the memory of Shri K. T. Bhashyam, Chairman, Legislative Council who passed away on the 24th May 1956. This House request the Speaker to convey to the members of the bereaved family its sincere condolences."

The Motion was adopted, all the members standing in silence for two minutes.

MR. SPEAKER.—The House will now stand adjourned and will meet at 12 of the Clock tomorrow.

The House adjourned at Thirty Minutes past One of the Clock to meet again at Twelve of the Clock the next day, Friday, the 21st September 1956.

WD 834—GPB—550—11-10-56

MYSORE LEGISLATIVE ASSEMBLY

THIRTY-FOURTH DAY

Friday, 21st September 1956.

The House met in the Assembly Hall, Atara Kacheri, Bangalore, at Twelve of the clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Hakkipikkis and other Depressed Classes (steps for upliftment)

Q.—62. Sri H. K. SIDDAIYA (Belur—Scheduled Castes).—

Will the Government be pleased to state:—

(*a*) the population of Hakkipikkis' Gosaies, Sudugadusiddas, Havadigas' Maripujaris, Budubudikes and Burudebestas in the State ;

(*b*) whether they have taken any steps for the upliftment of these people ?

A.—Sri H. M. CHANNABASAPPA (Minister for Revenue and Agriculture).—

(*a*)	Hakkipikkis	...	140
	Gosaies	...	855
	Sudugadusiddas	...	270

(the figure represents the population,, in Mandya, Bellary, Chitaldrug, Kolar Hassan, Tumkur, Chickmagalur and Bangalore Districts only).

Havadigas	...	32
Maripujaris	...	152
Budubudikes	...	1,272
Burudebestas	...	101

(*b*) Yes.

ಶ್ರೀ ಎಚ್. ಕೆ. ಸಿದ್ದಯ್ಯ.—ನನ್ನ ಪ್ರಶ್ನೆಯ (ಬಿ) ಭಾಗಕ್ಕೆ ಉತ್ತವಾಗಿ 'ಹೌದು' ಎಂದು ತಿಳಿಸಿದ್ದೀರಿ. ಈ ಜನರ ಅಭಿವೃದ್ಧಿಗಾಗಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಬುಡ ಬುಡಿಕೆಯವರು ಡಿಪ್ರೆಸ್ಡ್ ಕ್ಲಾಸಿನಲ್ಲಿ ಸೇರಿದ್ದಾರೆ. ಡಿಪ್ರೆಸ್ಡ್ ಕ್ಲಾಸಿನವರಿಗೆ ಏನೇನು ಸಹಾಯ ಸೌಲಭ್ಯಗಳು ದೊರಕುತ್ತವೆಯೋ ಅವೆಲ್ಲಾ ಇವರಿಗೂ ದೊರೆಯುತ್ತವೆ. ಸುಡುಗಾಡುಸಿದ್ದರು ಇವರನ್ನು ಷೆಡ್ಯೂಲ್ಡ್ ಪಂಗಡಗಳಲ್ಲಿ ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದೇವೆ. ನಾವು ಕಳುಹಿಸಿರುವ ಶಿಫಾರ್ಸು ಅಂಗೀಕಾರವಾದ ಕೂಡಲೇ ಷೆಡ್ಯೂಲ್ಡ್ ಪಂಗಡಗಳವರಿಗೆ ದೊರೆಯುತಕ್ಕ ಅನುಕೂಲಗಳೆಲ್ಲ ಇವರಿಗೂ ದೊರೆಯುತ್ತವೆ. ಉಳಿದವರೆಲ್ಲ ಹಿಂದುಳಿದ ಪಂಗಡದಲ್ಲಿ ಸೇರಿದ್ದಾರೆ. ಅವರಿಗೆ, ಹಿಂದುಳಿದ ಪಂಗಡಗಳವರಿಗೆ ದೊರೆಯುವ ಸಹಾಯ ಸೌಲಭ್ಯಗಳೆಲ್ಲ ದೊರೆಯುತ್ತವೆ.

ಶ್ರೀ ಯು. ಎಂ. ಮಾದಪ್ಪ.—ಇವರೆಲ್ಲ ಒಂದುಕಡೆ ಖಾಯಂಆಗಿ ವಾಸಿಸುವುದಿಲ್ಲವಾಗಿ ಇವರ ಬಗ್ಗೆ ಅಂಕಿಅಂಶಗಳನ್ನು ಹೇಗೆ ಸಂಗ್ರಹಿಸಿದ್ದಿರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಧ್ಯವಾದಷ್ಟು ಪತ್ತೆಹಚ್ಚಿ ಒಂದು ಲೆಕ್ಕ ಹಾಕಿ ಒದಗಿಸಲಾಗಿದೆ.

Harijans (First Five-Year Plan)

Q.—308. Sri T. HANUMIAH (Hiriyur—Scheduled Castes).—

Will the Government be pleased to state:—

(*a*) the several programmes relating to economic and social development of Harijans included and carried out successfully under the First Five-Year Plan in the State ;

